# ಬುಡಕಟ್ಟು ಮಹಿಳಾ ಸಬಲೀಕರಣ

## (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್. ಡಿ. (ಸಮಾಜಶಾಸ್ತ್ರ) ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ



ಸಂಶೋಧಕರು
ಗುಡಿಮುಂದಲ ಗೋಣಿಬಸಪ್ಪ

ಮಾರ್ಗದರ್ಶಕರು
ಡಾ. ತಾರಿಹಳ್ಳಿ ಹನುಮಂತಪ್ಪ
ಸಹ ಪ್ರಾಧ್ಯಾಪಕರು

ಸಹ ಮಾರ್ಗದರ್ಶಕರು
ಡಾ. ಕೆ ಎಂ ಮೇತ್ರಿ
ಪ್ರಾಧ್ಯಾಪಕರು

ಮಾನವಶಾಸ್ತ್ರ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬



೨೦೧೪

# ಬುಡಕಟ್ಟು ಮಹಿಳಾ ಸಬಲೀಕರಣ

## (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್ ಡಿ(ಸಮಾಜಶಾಸ್ತ್ರ) ಪದವಿಗಾಗಿ ಸಲ್ಲಿಸಿದ
ಮಹಾಪ್ರಬಂಧ


ಸಂಶೋಧಕರು

**ಗುಡಿಮುಂದಲ ಗೋಣೆಬಸಪ್ಪ**

ಮಾರ್ಗದರ್ಶಕರು

**ಡಾ. ತಾರಿಹಳ್ಳಿ ಹನುಮಂತಪ್ಪ**

ಸಹ ಪ್ರಾಧ್ಯಾಪಕರು

ಸಹ ಮಾರ್ಗದರ್ಶಕರು

**ಡಾ. ಕೆ ಎಂ ಮೇತ್ರಿ**

ಪ್ರಾಧ್ಯಾಪಕರು

ಮಾನವಶಾಸ್ತ್ರ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬



೨೦೧೯

# ಸಂಶೋಧಕರ ಪ್ರಮಾಣ ಪತ್ರ

"ಬುಡಕಟ್ಟು ಮಹಿಳಾ ಸಬಲೀಕರಣ"(ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯಲ್ಲಿ ಪಿಎಚ್.ಡಿ ಮಹಾಪ್ರಬಂಧವನ್ನು **ಡಾ ತಾರಿಹಳ್ಳಿ ಹನುಮಂತಪ್ಪ** ಮಾರ್ಗದರ್ಶನ ಮತ್ತು **ಪ್ರೊ ಕೆ ಎಂ ಮೇತ್ರಿ** ಅವರ ಸಹ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ. ಈ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ.

ದಿನಾಂಕ: 9.10.2019

ಸ್ಥಳ : ವಿದ್ಯಾರಣ್ಯ

**ಗುಡಿಮುಂದಲ ಗೋಣಿಬಸಪ್ಪ**
ಸಂಶೋಧನ ವಿದ್ಯಾರ್ಥಿ
ಮಾನವಶಾಸ್ತ್ರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

# ಮಾರ್ಗದರ್ಶಕರ ದೃಢೀಕರಣ ಪತ್ರ

**ಗುಡಿಮುಂದಲ ಗೋಣಿಬಸಪ್ಪ** ಅವರು **"ಬುಡಕಟ್ಟು ಮಹಿಳಾ ಸಬಲೀಕರಣ"** (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯಲ್ಲಿ ಪಿಎಚ್.ಡಿ ಮಹಾಪ್ರಬಂಧವನ್ನು ಡಾ ತಾರಿಹಳ್ಳಿ ಹನುಮಂತಪ್ಪ ಅವರ ಮಾರ್ಗದರ್ಶನದಲ್ಲಿ ಮತ್ತು ಡಾ ಕೆ ಎಂ ಮೇತ್ರಿ ಸಹ ಮಾರ್ಗದರ್ಶಕರು ಅವರ ಸಹ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಈ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸಲಾಗಿದೆ.

ದಿನಾಂಕ: 9.10.2019.

ಸ್ಥಳ : ವಿದ್ಯಾರಣ್ಯ

**ಡಾ. ತಾರಿಹಳ್ಳಿ ಹನುಮಂತಪ್ಪ**
ಸಹ ಪ್ರಾಧ್ಯಾಪಕರು
ಮಾನವಶಾಸ್ತ್ರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

# ಸಹ ಮಾರ್ಗದರ್ಶಕರ ದೃಢೀಕರಣ ಪತ್ರ

**ಗುಡಿಮುಂದಲ ಗೋಣಿಬಸಪ್ಪ** ಅವರು **"ಬುಡಕಟ್ಟು ಮಹಿಳಾ ಸಬಲೀಕರಣ"** (**ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ**) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಸಹ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್ ಡಿ(ಸಮಾಜಶಾಸ್ತ್ರ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ ಮಾನವಶಾಸ್ತ್ರ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢಿಕರಿಸಲಾಗಿದೆ.

ದಿನಾಂಕ: 09.10.2019
ಸ್ಥಳ : ವಿದ್ಯಾರಣ್ಯ

**ಪ್ರೊ ಕೆ ಎಂ ಮೇತ್ರಿ**
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

# ಪರಿವಿಡಿ

**ಅಧ್ಯಾಯ : ಮೂರು**



**ಅಧ್ಯಾಯ : ನಾಲ್ಕು**

## ಕೋಷ್ಟಕಗಳು

# ಅಧ್ಯಾಯ : ಒಂದು

# ಅಧ್ಯಯದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧ ಪೀಠಿಕೆ

೧.೨ ಅಧ್ಯಯನದ ಉದ್ದೇಶ

೧.೩ ಅಧ್ಯಯನದ ವ್ಯಾಪ್ತಿ

೧.೪ ಅಧ್ಯಯನದ ಸ್ವರೂಪ

೧.೫ ಅಧ್ಯಯನದ ವಿಧಾನಗಳು

೧.೬ ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆಗಳು

೧.೭ ಅಧ್ಯಯನದ ಮಹತ್ವ

# ಅಧ್ಯಾಯ: ಒಂದು
# ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

## ೧.೧. ಪೀಠಿಕೆ

ಭೂಮಿಯ ಹುಟ್ಟು ಆಗಿ ಎಷ್ಟೋ ಮಿಲಿಯನ್ ವರ್ಷಗಳ ತರುವಾಯ ಭೂಮಿಯ ಮೇಲೆ ಜೀವಿಗಳು ಜನ್ಮತಾಳಿದವು ಎಂದು ವಿಕಾಸವಾದ ತಜ್ಞರು ತಿಳಿಸುವರು. ಅಮೀಬಾದಿಂದ ಪ್ರಾರಂಭವಾದ ಜೀವಸಂಕುಲ ಇಂದು ಭೂಮಿಯ ಮೇಲೆ ಸಾವಿರಾರು ವೈವಿಧ್ಯಮಯ ಜೀವಿಗಳಾಗಿ ಉತ್ಪಾದನೆಗೊಂಡಿವೆ, ಜೀವಸಂಕುಲ ಹುಟ್ಟಿ ಎಷ್ಟೋ ಕಾಲಾನಂತರ ಮಾನವ ಜನ್ಮ ತಾಳಿದ ಎಂದು ಹೇಳಲಾಗುವುದು. ಮಾನವನ ಪ್ರಾರಂಭದ ಬದುಕು ಈಗಿನಂತಿರಲಿಲ್ಲ. ಅಲ್ಲಿ ಗಂಡು ಹೆಣ್ಣು ಎಂಬ ಭೇದಗಳಿರಲಿಲ್ಲ. ಎಲ್ಲರೂ ಬೇಟೆಯಾಡಬೇಕು, ಎಲ್ಲರೂ ಹಂಚಿಕೊಂಡು ತಿನ್ನಬೇಕು ಎಂಬ ನಿಯಮದಲ್ಲಿಯೇ ಹಳೆಯ ಶಿಲಾಯುಗದ ಮಾನವನಿದ್ದನು ಎಂದು ಪ್ರಾಕ್ತನಶಾಸ್ತ್ರಜ್ಞರು ತಿಳಿಸುವರು. ತರುವಾಯ ನಿಧಾನಕ್ಕೆ ಮಾನವನು ನಾಗರೀಕತೆಯತ್ತ ಹೆಜ್ಜೆ ಇಡತೊಡಗಿದಂತೆಲ್ಲಾ ಗಂಡು ಹೆಣ್ಣುಗಳ ಮಧ್ಯ ಭೇದಗಳು ಪ್ರಾರಂಭಗೊಂಡವು. ಮೂಲತಃ ಜೀವಜಗತ್ತಿನಲ್ಲಿರುವುದು ಎರಡೇ ಜಾತಿಗಳು. ಅವುಗಳ ಜೈವಿಕ ಕ್ರಿಯೆಯ ಸ್ವಭಾವದ ಮೇಲೆ ಅವನ್ನು ಗಂಡು, ಹೆಣ್ಣು ಎಂದು ಹೇಳಲಾಗುತ್ತದೆ. ಆದರೆ ಪ್ರಪಂಚದಾದ್ಯಂತ ವರ್ಗ, ವರ್ಣ, ಭಾಷೆ, ಸಂಸ್ಕೃತಿಯನ್ನನುಸರಿಸಿ ಬೇರೆ ಬೇರೆ ಜಾತಿ ವರ್ಗಗಳೆಂದು ಗುರುತಿಸಲಾಗುವುದು. ಈ ಗುರುತಿಸುವಿಕೆ ಮತ್ತು ಪ್ರತಿಯೊಂದು ವರ್ಗಗಳ ನಡುವೆ ನಾನು, ತಾನು ಎನ್ನುವ ಭೇದಭಾವಗಳನ್ನು ಹೆಚ್ಚಾಗಿ ಕಾಣುವುದೇ ನಾಗರೀಕರೆಂದು ಕರೆಸಿಕೊಳ್ಳುವ ಆಧುನಿಕ ಜನರಲ್ಲಿ, ಭಾರತೀಯ ಸಂದರ್ಭದಲ್ಲಿ, ಮಹಿಳೆಯನ್ನು ಕೇವಲ ಒಂದು ಭೋಗದ ವಸ್ತುವಾಗಿ ಪರಿಗಣಿಸುವುದೇ ಹೆಚ್ಚು. ಮಹಿಳೆಯನ್ನು ಕೇವಲ ತನ್ನ ಅಡಿಯಾಳಾಗಿ ನೋಡುವ ಪರಿಪಾಠವನ್ನು ಪುರುಷ ವರ್ಗ ಅನುಸರಿಸುತ್ತ ಬಂದಿರುವುದನ್ನು ಚರಿತ್ರೆಯ ಕಾಲದಿಂದ ಪ್ರಸ್ತುತ ಕಾಲದವರೆಗಿನ ಸಮಾಜದ ಮೂಲಕ ತಿಳಿದುಬರುತ್ತದೆ. ಹೆಣ್ಣು ಕೇವಲ ಪುರುಷನ ಉಪಭೋಗಕ್ಕೆ ಸೀಮಿತವಾದವಳು, ಆಕೆಗೆ ಯಾವುದೇ ಪವಿತ್ರ ಕಾರ್ಯಗಳಲ್ಲಿ ಸ್ಥಾನವಿಲ್ಲ ಎಂದು ಮನು ಸ್ಮೃತಿಯ ಮೂಲಕ ತಿಳಿದುಬರುತ್ತದೆ. "ತತ್ವಜ್ಞಾನಿ ಪ್ಲೇಟೋನು ತನ್ನ ಕೃತಿಗಳಲ್ಲಿ (ರೂಲ್ ಆಫ್ ಫಿಲಾಸಫರ್ ಕಿಂಗ್) ಪುರುಷನಿಗಿರುವಷ್ಟೇ

ಸ್ವಾತಂತ್ರ್ಯ ಹಾಗೂ ಶಿಕ್ಷಣದ ಅವಕಾಶಗಳು ಮಹಿಳೆಯರಿಗೂ ಸಮಾನವಾಗಿವೆ ಎಂದು ತಿಳಿಸುತ್ತಾನೆ." (ಮೀನಾಕ್ಷಿ ಬಿ:೨೦೦೯:೦೨). "ಅರಿಸ್ಟಾಟಲನು ಪೊಲಿಟಿಕ್ಸ್ ಕೃತಿಯಲ್ಲಿ ನಾಗರೀಕತ್ವದ ಸಿದ್ಧಾಂತಗಳನ್ನು ತಿಳಿಸುತ್ತ ಮಹಿಳೆಯರಿಗೆ ಆಲೋಚಿಸುವ ಶಕ್ತಿ ಇರದೇ ಇರುವುದರಿಂದ ಅವರಿಗೆ ನಾಗರೀಕತ್ವದ ಅವಕಾಶ ನೀಡಬಾರದು ಎಂದು ತಿಳಿಸುತ್ತಾನೆ."(ಮೀನಾಕ್ಷಿ ಬಿ:೨೦೦೯:೦೨,೦೩). ಹೆಣ್ಣು ಕೇವಲ ರಾಜಕೀಯ ದಾಳವಾಗಿ ಉಪಯೋಗಕ್ಕೆ ಬರುತ್ತಾಳೆ ಎಂದು ಕೌಟಿಲ್ಯ ತಿಳಿಸುತ್ತಾನೆ. "ಗಾಂಧಿಯವರು ಹೆಣ್ಣು ತನ್ನ ಕೌಟಂಬಿಕ ವ್ಯವಸ್ಥೆಗೆ ದಕ್ಕೆ ಬಾರದಂಥ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕು ಎನ್ನುತ್ತಾರೆ."(ಗೋರೂರು ರಾಮಸ್ವಾಮಿ ಅಯ್ಯಂಗಾರ್:೧೯೯೮:೧೫೬). ಪ್ರಾಯಶಃ ಈ ರೀತಿಯ ಆಲೋಚನಾ ಕ್ರಮದ ಹಿಂದೆ ಪುರುಷಶಾಹಿಯ ಮನಸ್ಸು ಕೆಲಸ ಮಾಡಿದೆಯೆಂಬುದು ಮಾತ್ರ ಸತ್ಯ. ಚರಿತ್ರೆ ಕಾಲದಿಂದ ಪ್ರಸ್ತುತ ಸಂದರ್ಭದಲ್ಲಿ ನಿಂತು ನೋಡಿದರೂ ಸಹ ಲಿಂಗ ತಾರತಮ್ಯವೆಂಬುದು ಸಮಾಜದಲ್ಲಿ ಅಗಾಧವಾದ ಬಿರುಕನ್ನು ಸೃಷ್ಟಿ ಮಾಡಿರುವುದನ್ನು ಕಾಣಬಹುದಾಗಿದೆ. ಹಿಂದೆ ಕಿತ್ತೂರಿನ ರಾಣಿ ಬೆಳವಡಿ ಮಲ್ಲಮ್ಮ, ಅಬ್ಬಕ್ಕದೇವಿ, ಝಾನ್ಸಿರಾಣಿಯವರಂಥ ಮಹಿಳೆಯರು ನೇರವಾಗಿ ರಾಜ್ಯಾಡಳಿತವನ್ನು ಮಾಡಿರುವ ಉದಾಹರಣೆಗಳು ಇವೆಯಾದರೂ ಅವು ಕೆಲವೇ ಕೆಲವು ಅಪವಾದಗಳೆಂದು ಪರಿಗಣಿಸಬೇಕಾಗುತ್ತದೆ. ಹಿಂದೆ ರಾಜಕೀಯ ಕ್ಷೇತ್ರದಲ್ಲಿ ಮಹಿಳೆ ನೇರವಾಗಿ ಭಾಗವಹಿಸುತ್ತಿದ್ದುದು ಕೆಲವು ಅನಿವಾರ್ಯತೆಗಳಿದ್ದಾಗ ಮಾತ್ರವಾಗಿದೆ. ಎಲ್ಲರಿಗೂ ಸಮಾನ ಹಕ್ಕು ಇದೆ ಎಂದು ಹೇಳುವ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿಯೂ ಹೆಣ್ಣು ಗಂಡೆಂಬ ತಾರತಮ್ಯಗಳಿರುವುದನ್ನು ನೋಡಿದರೆ ಪುರುಷಶಾಹಿ ವ್ಯವಸ್ಥೆ ತನ್ನ ಕಬಂಧಬಾಹುವಿನಲ್ಲಿ ಇಡೀ ವ್ಯವಸ್ಥೆಯನ್ನು ಹಿಡಿದಿಟ್ಟುಕೊಂಡಿರುವುದು ಗೋಚರಿಸುತ್ತದೆ. ಸಂವಿಧಾನದ ಬಹುಮುಖ್ಯ ಆಶಯವು ಮೂಲಭೂತ ಹಕ್ಕುಗಳು ಪ್ರತಿಯೊಬ್ಬ ಭಾರತೀಯನಿಗೆ ತಲುಪಬೇಕೆಂಬುದೇ ಆಗಿದೆ. ಆದರೆ ಈ ಆಶಯವು ಈಡೇರುವಲ್ಲಿ ಸೋತಿದೆಯಂದೇ ಹೇಳಬಹುದು. ಪುರುಷನಿಗೆ ಅರ್ಧದಷ್ಟು ಸಂಖ್ಯೆಯಲ್ಲಿರುವ ಮಹಿಳೆಗೆ ಯಾವುದೇ ರಂಗದಲ್ಲಿಯೂ ಪುರುಷ ಸಮಾನ ಸ್ಥಾನಮಾನಗಳಿರದೇ ಇರುವುದು ಕಾಣುತ್ತದೆ. ಉದ್ಯೋಗ, ರಾಜಕೀಯ ಇತ್ಯಾದಿ ಸ್ಥಾನಗಳಲ್ಲಿ ಪುರುಷನಿಗಿರುವಷ್ಟು ಅವಕಾಶಗಳು ಮಹಿಳೆಯರಿಗಿರದೇ ಇರುವುದು ನಿಚ್ಚಳವಾಗಿ ಕಾಣುತ್ತಿದೆ.

### ೧.೨. ಅಧ್ಯಯನದ ಉದ್ದೇಶ

ಪುರುಷ ಹಾಗೂ ಮಹಿಳೆಯರ ಮಧ್ಯದ ಸಾಮಾಜಿಕ ಸಮಾನತೆಯ ನೆಲೆಗಳನ್ನು ಅಂತರ್ಗತಗೊಳಿಸುವ ಮೂಲಕ ಮಹಿಳೆಯರಿಗೆ ಒಂದು ಹೊಸ ದಿಗಂತವನ್ನು ತೆರೆದಿಡಲಾಯಿತು. ಜೊತೆಗೆ ಸಂವಿಧಾನವು ಮೂರು ಮುಖ್ಯ ತೀರ್ಮಾನಗಳನ್ನು ತೆಗೆದುಕೊಂಡಿತು. ಮೊದಲನೆಯದಾಗಿ ಲಿಂಗಾಧಾರಿತವಾದ ತಾರತಮ್ಯಗಳ ನಿಷೇಧ, ಎರಡನೇದಾಗಿ ಮಹಿಳೆಯರ ಜೈವಿಕ, ಮಾನಸಿಕ, ಸಾಮಾಜಿಕ ಪರಿಸ್ಥಿತಿಗಳನ್ನು ಅನುಲಕ್ಷಿಸಿ ಅವರಿಗೆ ರಾಜ್ಯವು ವಿಶೇಷ ಕಾಳಜಿ ವಹಿಸುವಂತಹ ಉಪಬಂಧಗಳನ್ನು ನೀಡುವ ನಿರ್ದೇಶಕ ತತ್ವಗಳನ್ನು ಸಂರಚಿಸುವುದು. ಹೀಗೆ ಮಹಿಳೆ ಮತ್ತು ಪುರುಷರನ್ನು ಸಮಾನವಾಗಿ

ಪರಿಗಣಿಸುವುದು ಸಂವಿಧಾನದ ಮುಖ್ಯ ಉದ್ದೇಶಗಳಲ್ಲೊಂದು. ಮುಖ್ಯವಾಗಿ ಮಹಿಳೆಯರಿಗೆ ಸಂಬಂಧಿಸಿದಂತೆ "೧೪ ರಿಂದ ೧೮ರವರೆಗಿನ ವಿಧಿಗಳ ಪ್ರಕಾರ ನೀಡಿದ ಸಮಾನತೆಯ ಹಕ್ಕು, ೨೩, ೨೪ರ ವಿಧಿಗಳ ಪ್ರಕಾರ ನೀಡಿದ ಶೋಷಣೆಯ ವಿರುದ್ಧದ ಹಕ್ಕು, ಅನುಚ್ಛೇಧ ೩೯ (ಎ) (ಡಿ) (ಇ), ೪೨ರ ವಿಧಿಯ ಪ್ರಕಾರ ನಿರ್ದೇಶನ ತತ್ವಗಳು, ಅನುಚ್ಛೇಧ ೫೧ (ಎ) (ಇ) ಯ ಪ್ರಕಾರ ಮೂಲಭೂತ ಕರ್ತವ್ಯಗಳು, ಅನುಚ್ಛೇಧ ೩೨೫, ೩೨೬ ರ ವಿಧಿಯನ್ವಯ ನೀಡಿದ ಮತದಾನದ ಹಕ್ಕು"(ಮಹೇಶ್ ಸಿ.ಕೆ:೨೦೦೦:೧೩೨), ಮುಂತಾದವುಗಳನ್ನು ಗಮನಿಸಿದರೆ ಮಹಿಳಾ ಪ್ರಗತಿಗೆ ಸಂಬಂಧಿಸಿದಂತೆ ಬಹುಮುಖ್ಯ ನಿಲುವುಗಳನ್ನು ಸಂವಿಧಾನವು ತಳೆದಿರುವುದು ಸೂಚಿಸುತ್ತದೆ. ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ ಮಹಿಳಾ ಹಕ್ಕುಗಳೊಂದಿಗೆ ಅವುಗಳು ದುರುಪಯೋಗವಾಗದಂತೆ ರಕ್ಷಣೆಗಳನ್ನೂ ನೀಡಲಾಗಿದೆ. ಮಹಿಳೆಗೆ ಮಾನಸಿಕ ಹಾಗೂ ದೈಹಿಕವಾಗಿ ಹಿಂಸಿಸುವುದು, ದುರುಪಯೋಗಪಡಿಸಿಕೊಳ್ಳುವುದು, ಕೀಳಾಗಿ ಕಾಣುವುದು ಮಾಡಿದಲ್ಲಿ ಆ ರೀತಿ ಮಾಡಿದವರಿಗೆ ಶಿಕ್ಷೆ ವಿಧಿಸುವ ಕುರಿತು ಸಂವಿಧಾನದಲ್ಲಿ ತಿಳಿಸಲಾಗಿದೆ. ಅದೇ ರೀತಿ ಜಾತಿ, ವಂಶ, ಲಿಂಗ, ಜನ್ಮಸ್ಥಳ ಮುಂತಾದವುಗಳ ಆಧಾರದ ಮೇಲೆ ನಡೆಯುವ ಅಸಮಾನತೆಯನ್ನು ನಿಷೇಧಿಸಲಾಗಿದೆ. ಮಹಿಳೆ ಮತ್ತು ಮಕ್ಕಳ ಕುರಿತು ನಿರ್ಧಿಷ್ಟವಾದ ಉಪಬಂಧಗಳನ್ನು ಜಾರಿ ಮಾಡಲು ರಾಜ್ಯಗಳಿಗೆ ಅಧಿಕಾರ ನೀಡಲಾಗಿದೆ. ಇವೆಲ್ಲವೂ ಮಹಿಳಾ ಸಬಲೀಕರಣಕ್ಕೆ ಪೂರಕವಾದ ಸಂವಿಧಾನಿಕವಾದ ಹಕ್ಕುಗಳೆಂದು ಹೇಳಲಾಗುವುದಾದರೂ  ಪುರುಷಶಾಹಿ ತನ್ನ ಇಚ್ಛೆಯಂತೆಯೇ ವ್ಯವಸ್ಥೆಯನ್ನು ನಡೆಸಿಕೊಳ್ಳುವುದೂ ಕಂಡುಬರುತ್ತಿದೆ. ನಾಗರೀಕ ಸಮಾಜಕ್ಕಿಂತ ಭಿನ್ನವಾದ ವ್ಯವಸ್ಥೆಯನ್ನು ಬುಡಕಟ್ಟುಗಳು ರೂಪಿಸಿಕೊಂಡಿವೆ. ಇಲ್ಲಿ ದೈಹಿಕ ಕಾರಣಗಳಿಗಾಗಿ ಗಂಡು ಹೆಣ್ಣೆಂಬ ವಿಭಾಗಗಳಿವೆಯಾದರೂ ಅವೆರಡೂ ಸಮಾನ ಎನ್ನುವ ಭಾವನೆಯೂ ಬುಡಕಟ್ಟುಗಳಲ್ಲಿದೆ. ಪುರುಷನು ಹೊರ ಪ್ರಪಂಚದಲ್ಲಿ ಓಡಾಡಿ ಕುಟುಂಬಕ್ಕೆ ಅವಶ್ಯವಾದ ಆಹಾರ ಸಂಗ್ರಹಣೆಯನ್ನು ಮಾಡಿದರೆ ಮಹಿಳೆಯು ಕುಟುಂಬದ ಒಳಾಡಳಿತವನ್ನು ಅಚ್ಚುಕಟ್ಟಾಗಿ ನಿರ್ವಹಿಸುವಳು. ಮನೆಯ ಹೊರಗೆ ನಿರ್ಣಯಗಳನ್ನು ತೆಗೆದುಕೊಳ್ಳಲು ಪುರುಷನು ಮುಂದಿರುವನಾದರೂ ಮನೆಯೊಳಗಿನ ನಿರ್ಣಯಗಳು ಸಂಪೂರ್ಣವಾಗಿ ಮಹಿಳೆಯ ಹಿಡಿತದಲ್ಲಿಯೇ ಇರುತ್ತವೆ. ಹೀಗಾಗಿಯೇ ಬುಡಕಟ್ಟುಗಳು ಹೆಣ್ಣನ್ನು ದೈವವಾಗಿ ನೋಡುವುದು. ಬುಡಕಟ್ಟುಗಳು ಸಚೇತನವಾದಿಗಳು ಮಾತ್ರವಾಗಿರದೆ ಮಾತೃದೇವೋಪಾಸಕರೂ ಆಗಿರುವರು. ಸಮಾನತೆಯ ನಿಟ್ಟಿನಲ್ಲಿ ಇತ್ತೀಚೆಗೆ ಹೆಚ್ಚು ವ್ಯಾಪಕವಾಗಿ ಬಳಕೆಯಲ್ಲಿರುವ ಪರಿಕಲ್ಪನೆಯೆಂದರೆ ಮಹಿಳಾ ಸಬಲೀಕರಣ. ಸಬಲೀಕರಣವೆನ್ನುವ ಪದವು ಮಾನವಾಭಿವೃದ್ಧಿಯ ಮಹಿಳಾಪರ ಶಕ್ತಿಯ ಪರ್ಯಾಯ ಪದವಾಗಿ ಮಾರ್ಪಟ್ಟಿದೆ. ಶಕ್ತಿ ಹೀನರಾದ ಮಹಿಳೆಯರಿಗೆ ಶಕ್ತಿಯನ್ನು ನೀಡುವುದೇ ಮಹಿಳಾ ಸಬಲೀಕರಣ ಎಂದು ಹೇಳಬಹುದು.

**ಬುಡಕಟ್ಟುಗಳು**

ಬೆಟ್ಟ ಗುಡ್ಡ, ಕಣಿವೆ, ಕಾಡು, ಹಟ್ಟಿ, ದೊಡ್ಡಿ, ಹಾಡಿ ಹೀಗೆ ಅರಣ್ಯ ಪ್ರದೇಶಗಳಲ್ಲಿ ಚಿಕ್ಕ ಚಿಕ್ಕ ಗುಂಪುಗಳಾಗಿ ನೆಲೆಸಿರುವ ತಮ್ಮದೇ ವಿಶಿಷ್ಟ ಭಾಷೆಯನ್ನು ಹೊಂದಿರುವ ಅರಣ್ಯ ಮೂಲದ

ಉತ್ಪನ್ನಗಳನ್ನೇ ಜೀವನಾಧಾರಕ್ಕೆ ಬಳಕೆ ಮಾಡಿಕೊಳ್ಳುವ, ಪ್ರತ್ಯೇಕ ನೆಲೆಗಳಲ್ಲಿ ಒಟ್ಟಾಗಿ ವಾಸಿಸುವ ಸಮುದಾಯಗಳೇ ಬುಡಕಟ್ಟುಗಳು. ಇವರನ್ನು ವನವಾಸಿ, ಗಿರಿಜನ, ಅರಣ್ಯವಾಸಿ, ಆದಿವಾಸಿ ಮುಂತಾದ ಹಲವಾರು ಹೆಸರುಗಳಿಂದ ಕರೆಯುತ್ತಾರೆ. ಇವರ ಸಾಮಾಜಿಕ ಬದುಕು ರಕ್ತ ಸಂಬಂಧದ ಮೇಲೆ ನಿಂತಿದೆ. ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದ ಎಲ್ಲರನ್ನೂ ತಿಳಿದಿರುತ್ತಾನೆ. ಸಚೇತನವಾದಿಗಳಾದ ಇವರು ತಮ್ಮ ರೂಢಿ ಸಂಪ್ರದಾಯಗಳನ್ನು ಚಾಚೂ ತಪ್ಪದೆ ಪಾಲಿಸುತ್ತಾರೆ. ಸಂವಿಧಾನದಲ್ಲಿ ೩೪೨ನೇ ಅನುಚ್ಛೇದದಲ್ಲಿ ಪರಿಶಿಷ್ಟ ಪಂಗಡಗಳ ಕುರಿತು ವಿವರಣೆ ನೀಡಲಾಗಿದೆ. ಇದರ ಪ್ರಕಾರ ಬುಡಕಟ್ಟು ಸಮುದಾಯಗಳು ಅಥವಾ ಗುಂಪುಗಳನ್ನು ರಾಷ್ಟ್ರಪತಿಗಳು ಪರಿಶಿಷ್ಟ ಪಂಗಡಗಳ ಅನುಚ್ಛೇದದಲ್ಲಿ ಸೇರಿಸಲು ಅವಕಾಶವಿದೆ. ಜಗತ್ತಿನಾದ್ಯಂತ ಇಂತಹ ಸಹಸ್ರಾರು ಬುಡಕಟ್ಟುಗಳನ್ನು ಕಾಣಬಹುದಾಗಿದೆ. ಪೆಸಿಫಿಕ್ ಸಾಗರದ ಮಲೇಷಿಯಾ, ಮೈಕ್ರೋನೇಷಿಯ, ಪಾಲಿನೇಷಿಯ ಮುಂತಾದ ಬುಡಕಟ್ಟುಗಳನ್ನು ನಿದರ್ಶನವಾಗಿ ಕೊಡಬಹುದಾಗಿದೆ.

ಭಾರತ ದೇಶವು ಬುಡಕಟ್ಟುಗಳ ತವರು ಮನೆಯಾಗಿದೆ. ಆಫ್ರಿಕಾ ಖಂಡ ಬಿಟ್ಟರೆ ಭಾರತದಲ್ಲಿ ಹೆಚ್ಚು ಬುಡಕಟ್ಟು ಜನರಿದ್ದಾರೆ. "೨೦೧೧ರ ಜನಗಣತಿಯ ಪ್ರಕಾರ ಭಾರತದ ಆದಿವಾಸಿ ಬುಡಕಟ್ಟುಗಳ ಒಟ್ಟು ಜನಸಂಖ್ಯೆಯು ೪೨,೪೮,೯೮೭ ಇರುವುದಾಗಿ ದಾಖಲಾಗಿದೆ."(ಜನಗಣತಿವರದಿ:೨೦೧೧). ನಾಗರಿಕ ಸಮಾಜಕ್ಕೂ ಬುಡಕಟ್ಟು ಸಮಾಜಕ್ಕೂ ಅಜಗಜಾಂತರ ಅಂತರವಿದೆಯೆಂದು ಮಾನವ ಶಾಸ್ತ್ರಜ್ಞರು ಗುರುತಿಸಿರುವರು. ಕರ್ನಾಟಕದಲ್ಲಿ ಸುಮಾರು ೫೦ ಅಧಿಕೃತ ಬುಡಕಟ್ಟು ಸಮುದಾಯಗಳನ್ನು ಕಾಣುತ್ತೇವೆ. ಇವುಗಳಲ್ಲಿ "ಆದಿವಾಸಿ ಕುಟುಂಬಗಳಿಗೆ ಸೇರಿದ ಎರಡು ಲಕ್ಷಕ್ಕೂ ಅಧಿಕ ಸಂಖ್ಯೆಯ ಆದಿವಾಸಿ ಜನರಿದ್ದಾರೆ. ಒಂದು ಸಾವಿರಕ್ಕೂ ಹೆಚ್ಚು ಆದಿವಾಸಿ ಹಳ್ಳಿಗಳಿವೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ.೭೫ ರಷ್ಟು ಬುಡಕಟ್ಟು ಸಮುದಾಯದ ಜನರಿದ್ದಾರೆ."(ಪುರುಷೋತ್ತಮ ಬಿಳಿಮಲೆ :೧೯೧೬). ಕರ್ನಾಟಕದಲ್ಲಿ ಜೇನು ಕುರುಬ ಹಾಗೂ ಕೊರಗ ಎನ್ನುವ ಆದಿಮ ಬುಡಕಟ್ಟುಗಳೊಂದಿಗೆ ಡುಂಗ್ರಿ ಗರಾಸಿಯ, ಪಾರ್ಧಿ/ಹಕ್ಕಿಪಿಕ್ಕಿ/ಹರಣಶಿಕಾರಿ, ರಾಜಗೊಂಡ, ಗೊಂಡ, ಕಾತಕರಿ, ಹಸಲರು, ಕಮ್ಮಾರ, ಕಣಿಯನ್, ಯರವ, ಸಿದ್ದಿ, ಮರಾಠ, ಮೇಧ ಇತ್ಯಾದಿ ಆದಿವಾಸಿಗಳಿರುವರು. ಮಹಿಳೆಯರನ್ನು ಸಶಕ್ತೀಕರಣಗೊಳಿಸುವುದರ ನಿಜವಾದ ಅರ್ಥ ಮಹಿಳೆಗೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ರಾಜಕೀಯವಾಗಿ ಸಬಲೀಕರಿಸುವುದಾಗಿದೆ. ಸಂವಿಧಾನದ ನಿರ್ದೇಶಕತತ್ವದಲ್ಲಿ ರಾಜ್ಯವು ಮಹಿಳೆ ಮತ್ತು ಪುರುಷರ ನಡುವೆ ಲಿಂಗ, ಜಾತಿ, ಧರ್ಮ. ಜನ್ಮಸ್ಥಳ ಇವುಗಳ ಆಧಾರದ ಮೇಲೆ ಯಾವುದೇ ರೀತಿಯ ತಾರತಮ್ಯ ತೋರಬಾರದೆಂದು ಅನುಚ್ಛೇದ ೧೫ರಲ್ಲಿ ನಿರೂಪಿಸಲಾಗಿದೆ. ಸಂವಿಧಾನದ ಮೂಲಭೂತ ಹಕ್ಕುಗಳು ಮತ್ತು ರಾಜ್ಯದ ನೀತಿ ನಿರ್ದೇಶನಗಳ ತತ್ವಗಳು ಎಂಬ ವಿಭಾಗದಲ್ಲಿ ಸಮಾನತೆಗಾಗಿ ಅನುಸರಿಸಬೇಕಾದ ತತ್ವಗಳನ್ನು ಅಳವಡಿಸಲಾಗಿದೆ. ಸಂವಿಧಾನ ಶಿಲ್ಪಿಗಳು ರಾಜಕೀಯ ಕ್ಷೇತ್ರ ಒಳಗೊಂಡಂತೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸ್ತ್ರೀ, ಪುರುಷರಿಗೆ ಸಮಾನ ಅವಕಾಶ ಕಲ್ಪಿಸಿಕೊಟ್ಟಿದೆ. ಅಂದರೆ ಮಹಿಳೆಯರನ್ನು ಪುರುಷರಿಗೆ ಸಮಾನವಾಗಿ ಸಬಲೀಕರಿಸುವುದೇ ಸಂವಿಧಾನದ ಆಶಯವೂ ಆಗಿದೆ. ಗ್ರಾಮೀಣ ಪರಿಸರದಲ್ಲಿ ಮಹಿಳೆಯ ಸ್ಥಿತಿ ತುಂಬಾ ಚಿಂತಾಜನಕವಾಗಿದೆ.

ಭಾರತದ ಬಹುತೇಕ ಮಹಿಳೆಯರು ಗ್ರಾಮೀಣ ಪ್ರದೇಶಗಳಲ್ಲಿಯೇ ವಾಸಿಸುತ್ತಿದ್ದಾರೆ. ಇದರಲ್ಲು ಬಹುಪಾಲು ಮಹಿಳೆಯರು ಕೃಷಿ ಕೂಲಿ, ಅಸಂಘಟಿತ ವಲಯದ ಕೂಲಿಯನ್ನೇ ಅವಲಂಬಿಸಿದ್ದಾರೆ. ಅರ್ಧಕ್ಕಿಂತ ಹೆಚ್ಚು ಮಹಿಳೆಯರು ಗೃಹಕೃತ್ಯಗಳಲ್ಲಿಯೇ ತೊಡಗುವ ಮತ್ತು ಅವರ ಕಾರ್ಯವನ್ನು ಯಾವುದೇ ವೃತ್ತಿಯೆಂದು ಪರಿಗಣಿಸದ ಸ್ಥಿತಿಯಲ್ಲಿದ್ದಾರೆ ಹಾಗೂ ಇಂತಹ ಮಹಿಳೆಯರು ಪ್ರಾಥಮಿಕ ಸೌಲಭ್ಯಗಳಿಂದಲೂ ವಂಚಿತರಾಗಿದ್ದಾರೆ. ಕೃಷಿ ಮತ್ತು ಇತರ ಕಷ್ಟಕರ ಕೆಲಸಗಳಲ್ಲಿ ಮಹಿಳೆಯರ ಪಾಲು ಶೇ ೫೦ ಕ್ಕಿಂತ ಹೆಚ್ಚಿದ್ದರೂ ಸಹಿತ ಆರ್ಥಿಕ ಸ್ವಾವಲಂಬನೆಯಿಂದ ಅವಳು ವಂಚಿತಳಾಗಿದ್ದಾಳೆ. ಅಷ್ಟೇ ಅಲ್ಲ ಮಹಿಳೆ ಸಾಮಾಜಿಕ ಹಾಗೂ ರಾಜಕೀಯ ಸಮಾನತೆಗಳಿಂದಲೂ ದೂರ ಉಳಿಯಬೇಕಾದ ಅನಿವಾರ್ಯ ಸ್ಥಿತಿಗೆ ನೂಕಲ್ಪಟ್ಟಿದ್ದಾಳೆ. ಭಾರತದ ಅನಿಷ್ಟವೆಂದೇ ಪರಿಗಣಿಸಿರುವ ಜಾತಿ ವ್ಯವಸ್ಥೆಯಲ್ಲಿ ಹಂಚಿ ಹೋಗಿರುವ ಮಹಿಳೆ, ವರ್ಗ, ಜಾತಿ ಸಮೂಹಗಳ ಹಿನ್ನೆಲೆಯಲ್ಲಿ ಎದುರಿಸಬೇಕಾಗಿರುವ ಸಮಸ್ಯೆಗಳು ಭಿನ್ನವಾಗಿರುವಂಥವುಗಳಾಗಿವೆ. ಮುಖ್ಯವಾಗಿ ಅನುಸೂಚಿತ ಬುಡಕಟ್ಟುಗಳಲ್ಲಿ ಮಹಿಳಾ ಸಬಲೀಕರಣ ಹೇಗಿರಬಲ್ಲದು, ಇತರೆ ಸಾಮಾನ್ಯ ಜಾತಿ ವರ್ಗಗಳ ಮಹಿಳೆಯರಿಗಿಂತ ಬುಡಕಟ್ಟು ಸಮುದಾಯಗಳ ಮಹಿಳೆಯರು ಹೇಗೆ ಭಿನ್ನವಾಗಿರುವರು ಹಾಗೂ ಅವರು ಎದುರಿಸುತ್ತಿರುವ ಸಮಸ್ಯೆಗಳೇನು ಎಂಬುದನ್ನು ಅರಿಯಬೇಕಾದ ಅನಿವಾರ್ಯತೆ ಇದೆ. ಈ ಹಿನ್ನೆಲೆಯಲ್ಲಿ ಬುಡಕಟ್ಟು ಮಹಿಳೆಯರ ಸ್ಥಿತಿಗತಿಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ.

ಬುಡಕಟ್ಟು ಮಹಿಳೆಯರು ಇತರ ಮೇಲ್ಜಾತಿ ವರ್ಗಗಳ ಮಹಿಳೆಯರಿಂತ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಸವಾಲುಗಳೇನು ಎಂಬುದನ್ನು ನೋಡುವುದರೊಂದಿಗೆ ಬುಡಕಟ್ಟು ಮಹಿಳೆಯು ಬಾಹ್ಯ ಪ್ರಪಂಚದಲ್ಲಿ ಹೇಗೆ ಗುರುತಿಸಲ್ಪಡುತ್ತಿರುವಳು ಹಾಗೂ ಅವಳು ಹೇಗೆ ಸಬಲೀಕರಣಗೊಂಡಿರುವಳು ಎಂಬುದನ್ನು ನೋಡುವುದು ಈ ಅಧ್ಯಯನದ ಉದ್ದೇಶವಾಗಿದೆ.

೧. ಬಳ್ಳಾರಿ ಜಿಲ್ಲೆಯ ಬುಡಕಟ್ಟು ಸಮುದಾಯಗಳಾದ ಬೇಡ, ಪಾರ್ಧಿ, ಮೇಧ, ಡುಂಗ್ರಿ ಗರಾಸಿಯ ಮಹಿಳೆಯರಲ್ಲಿನ ಬದಲಾಗುತ್ತಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಯನ್ನು ಪರಿಶೀಲಿಸುವುದು.

೨. ಬುಡಕಟ್ಟು ಮಹಿಳೆಯರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಸ್ಥಿತಿಗತಿಗಳು ಹಾಗೂ ನಿರ್ಧಾರ ತೆಗೆದುಕೊಳ್ಳುವಲ್ಲಿ ಸಬಲೀಕರಣಕ್ಕಿರುವ ಅಡ್ಡಿಗಳೇನು ಎಂಬುದನ್ನು ಪತ್ತೆಹಚ್ಚುವುದು.

೩. ಆಧುನಿಕರಣ ಪ್ರಭಾವದಿಂದ ಬುಡಕಟ್ಟು ಮಹಿಳೆಯರಲ್ಲಿನ ಬದಲಾವಣೆಗಳು ಮತ್ತು ಸಬಲೀಕರಣದ ಪ್ರಕ್ರಿಯೆಯನ್ನು ಗುರುತಿಸುವುದು.

೪. ಬುಡಕಟ್ಟು ಮಹಿಳೆಯರಿಗಾಗಿಯೇ ಮೀಸಲಿರುವ ರಾಷ್ಟ್ರ ಹಾಗೂ ರಾಜ್ಯದ ವಿವಿಧ ಯೋಜನೆ, ಕಾರ್ಯಕ್ರಮಗಳನ್ನು ಅವಲೋಕಿಸುವುದು.

೫. ಬುಡಕಟ್ಟು ಮಹಿಳೆಯರಿಗೆ ಮೀಸಲಿರುವ ರಾಜ್ಯ ಮತ್ತು ರಾಷ್ಟ್ರಮಟ್ಟದ ಯೋಜನೆಗಳು ಫಲಾನುಭವಿಗಳಿಗೆ ಎಷ್ಟರ ಮಟ್ಟಿಗೆ ತಲುಪಿವೆ ಮತ್ತು ಅಡ್ಡಿಪಡಿಸುವ ಅಂಶಗಳನ್ನು ಪತ್ತೆ ಹಚ್ಚುವುದು ಈ ಪ್ರೌಢ ಪ್ರಬಂಧದ ಉದ್ದೇಶವಾಗಿದೆ.

### ೧.೩ ಅಧ್ಯಯನದ ವ್ಯಾಪ್ತಿ

ಸಮಾಜವೆಂಬುದು ಒಂದು ಬೃಹದಾಕಾರದ ಆಲದ ಮರವಿದ್ದಂತೆ. ಇಂದು ಜಾತಿ ವರ್ಗಗಳಿಂದ ಕಿಕ್ಕಿರಿದ ಈ ಸಮಾಜದಲ್ಲಿ ಬುಡಕಟ್ಟುಗಳಿಗೇ ವಿಶಿಷ್ಟ ಸ್ಥಾನವಿದೆ. ಅಂತಹ ಬುಡಕಟ್ಟುಗಳಾದ ಬೇಡ, ಪಾರ್ಧಿ, ಮೇಧ, ಡುಂಗ್ರಿ ಗರಾಸಿಯ ಬುಡಕಟ್ಟುಗಳು ಬಳ್ಳಾರಿ ಜಿಲ್ಲೆಯಲ್ಲಿ ಕಂಡುಬರುವವು. ಈ ಬುಡಕಟ್ಟು ಸಮುದಾಯದೊಳಗಿನ ಮಹಿಳೆಯರನ್ನು ಸಬಲೀಕರಣದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಇಡೀ ರಾಜ್ಯ ಅಥವಾ ರಾಷ್ಟ್ರವೊಂದನ್ನು ಅಧ್ಯಯನಕ್ಕೆ ಅಳವಡಿಸುವುದು ಅಧ್ಯಯನದ ಕಾಲಮಿತಿಯ ದೃಷ್ಟಿಯಿಂದ ಕಷ್ಟಕರವಾದ ಕೆಲಸವೆಂದು ಭಾವಿಸಿ ಕೇವಲ ಬಳ್ಳಾರಿ ಜಿಲ್ಲೆಯಲ್ಲಿ ನೆಲೆಸಿರುವ ಬೇಡ, ಪಾರ್ಧಿ, ಮೇದ, ಡುಂಗ್ರಿ ಗರಾಸಿಯ ಬುಡಕಟ್ಟುಗಳ ಮಹಿಳೆಯರನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಪ್ರಸ್ತುತ ಹನ್ನೊಂದು ತಾಲೂಕುಗಳಿವೆ. ಈ ಹನ್ನೊಂದು ತಾಲೂಕುಗಳಲ್ಲಿ ಬಹುತೇಕ ಎಲ್ಲಾ ತಾಲೂಕುಗಳಲ್ಲಿಯೂ ಬೇಡ ಹಾಗೂ ಮೇದ ಬುಡಕಟ್ಟಿನ ಜನಸಂಖ್ಯೆ ಇದೆ. ಆದರೆ ಪಾರ್ಧಿ, ಡುಂಗ್ರಿ ಗರಾಸಿಯ ಸಮುದಾಯಗಳು ಅಲೆಮಾರಿ ಬುಡಕಟ್ಟುಗಳಾಗಿವೆ. ಈ ಎರಡು ಬುಡಕಟ್ಟುಗಳು ತಮಗೆ ಅನುಕೂಲವಾದ ಸ್ಥಳದಲ್ಲಿ ಬೀಡುಬಿಟ್ಟು ತರುವಾಯ ಮತ್ತೊಂದು ಊರಿಗೆ ನೆಲೆ ಬದಲಿಸಿಕೊಳ್ಳುವ ವಿಶಿಷ್ಟ ಮನೋಭಾವದ ಬುಡಕಟ್ಟುಗಳಾಗಿವೆ. ಬೇಡ ಹಾಗೂ ಮೇದ ಜನಾಂಗ ನಿರ್ಧಿಷ್ಟವಾದ ಸ್ಥಳದಲ್ಲಿ ನೆಲೆಸಿರುವರು. ಹೀಗಾಗಿ ಎಲ್ಲಾ ಕಡೆಯೂ ಇವರ ಕುಟುಂಬಗಳು ಕಂಡುಬರುವವು. ಆದರೆ ಪಾರ್ಧಿ ಹಾಗೂ ಡುಂಗ್ರಿ ಗರಾಸಿಯಾ ಸಮುದಾಯಗಳು ಅಲೆಮಾರಿಗಳಾಗಿರುವುದರಿಂದ ಒಂದುಕಡೆ ನಿರ್ಧಿಷ್ಟವಾಗಿ ನೆಲೆಸಿರುವುದಿಲ್ಲ. ಹೀಗಾಗಿ ಬಳ್ಳಾರಿ ಜಿಲ್ಲೆಯಲ್ಲಿ ನಿರ್ಧಿಷ್ಟವಾಗಿ ನೆಲೆಸಿದ ಎರಡು ಬುಡಕಟ್ಟುಗಳು ಹಾಗೂ ಅಲೆಮಾರಿಗಳಾಗಿ ಜೀವನ ನಡೆಸುವ ಪಾರ್ಧಿ ಹಾಗೂ ಡುಂಗ್ರಿ ಗರಾಸಿಯಾ ಸಮುದಾಯಗಳನ್ನು ಮಾತ್ರ ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಅಧ್ಯಯನ ವ್ಯಾಪ್ತಿಯು ಕೇವಲ ಬಳ್ಳಾರಿ ಜಿಲ್ಲೆಗೆ ಮಾತ್ರ ಸೀಮಿತಗೊಳಿಸಲಾಗಿದೆ. ಪ್ರತಿ ಸಮುದಾಯದಿಂದ ಒಂದು ನೂರು ಕುಟುಂಬಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದ್ದು ನಾಲ್ಕು ಬುಡಕಟ್ಟು ಸಮುದಾಯಗಳಿಂದ ಒಟ್ಟು ೪೦೦ ಕುಟುಂಬಗಳ ಮಹಿಳೆಯರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

### ೧.೪ ಅಧ್ಯಯನದ ಸ್ವರೂಪ

ಮೊದಲ ಅಧ್ಯಾಯವು ಪ್ರಸ್ತಾವನೆಯಾಗಿದ್ದು ಇದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ಅಧ್ಯಯನ ವಿಧಾನ, ಅಧ್ಯಾಯಗಳ ವಿನ್ಯಾಸ ಹಾಗೂ ಇಲ್ಲಿಯವರೆಗೂ ನಡೆದ ಅಧ್ಯಯನಗಳ ಸಮೀಕ್ಷೆಯನ್ನು ಮಾಡಲಾಗಿದೆ. ಎರಡನೇ ಅಧ್ಯಾಯದಲ್ಲಿ ಅಧ್ಯಯನದ ವ್ಯಾಪ್ತಿಯನ್ನು ಹೊಂದಿದ

ಬಳ್ಳಾರಿ ಜಿಲ್ಲೆಯ ಸಂಕ್ಷಿಪ್ತ ಪರಿಚಯ ಮಾಡಿಕೊಡಲಾಗಿದೆ. ಇದರಲ್ಲಿ ಜಿಲ್ಲೆಯ ಭೌಗೋಳಿಕತೆ, ಜನಸಂಖ್ಯೆ, ಲಿಂಗಾನುಪಾತ, ಸಾಕ್ಷರತೆ, ಜಿಲ್ಲೆಯ ಕಾರ್ಮಿಕರು, ಸಂಪನ್ಮೂಲ ಇತ್ಯಾದಿ ವಿವರಗಳನ್ನು ನೋಡಲಾಗಿದೆ. ಅಧ್ಯಾಯ ಮೂರರಲ್ಲಿ ಬುಡಕಟ್ಟು ಮಹಿಳಾ ಸಬಲೀಕರಣ ಹಾಗೂ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದಂತೆ ಕೇಂದ್ರದ ಯೋಜನೆಗಳು ಯಾವ್ಯಾವಿವೆ ಎಂಬುದರ ಕುರಿತು ಗಮನಿಸಲಾಗಿದೆ. ಅಧ್ಯಾಯ ನಾಲ್ಕರಲ್ಲಿ ಕರ್ನಾಟಕ ಸರ್ಕಾರವು ಬುಡಕಟ್ಟು ಮಹಿಳಾ ಸಬಲೀಕರಣಕ್ಕಾಗಿ ಹಮ್ಮಿಕೊಂಡ ಯೋಜನೆಗಳ ಪರಿಶೀಲನೆ ಇದೆ. ಅಧ್ಯಾಯ ಐದರಲ್ಲಿ ಅಧ್ಯಯನಕ್ಕೆ ಆಯ್ದುಕೊಂಡ, ಬಳ್ಳಾರಿ ಜಿಲ್ಲೆಯಲ್ಲಿ ಪ್ರಮುಖವಾಗಿ ಕಂಡುಬರುವ ಬೇಡ, ಮೇದ, ಡುಂಗ್ರಿಗರಾಸಿಯಾ, ಪಾರ್ಧಿ ಬುಡಕಟ್ಟುಗಳ ಸಂಕ್ಷಿಪ್ತ ಪರಿಚಯವಿದೆ. ಅಧ್ಯಾಯ ಆರರಲ್ಲಿ ಬುಡಕಟ್ಟು ಮಹಿಳೆಯರ ಸಬಲೀಕರಣದ ವಿವಿಧ ಆಯಾಮಗಳನ್ನು ನೋಡಲಾಗಿದ್ದು ಇದರಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯ, ರಾಜಕೀಯ ಸಬಲೀಕರಣಗಳನ್ನು ಬುಡಕಟ್ಟು ಮಹಿಳೆಯರ ಸಬಲೀಕರಣದ ಹಿನ್ನೆಲೆಯಲ್ಲಿ ನೋಡಲಾಗಿದೆ. ಅಧ್ಯಾಯ ಏಳರಲ್ಲಿ ಆಯ್ದ ಬುಡಕಟ್ಟು ಮಹಿಳೆಯರ ಬದುಕಿನ ಚಿತ್ರಣವನ್ನು ವಿಶ್ಲೇಷಿಸಲಾಗಿದೆ. ಕೊನೆಯಲ್ಲಿ ಸಮಾರೋಪವಿದ್ದು ಇದರಲ್ಲಿ ಅಧ್ಯಯನದ ಫಲಿತಗಳು ಹಾಗೂ ಸಲಹೆ ಸೂಚನೆಗಳನ್ನು ನೀಡಲಾಗಿದೆ. ಕೊನೆಯಲ್ಲಿ ಪರಾಮರ್ಶನ ಗ್ರಂಥಗಳನ್ನು ನೀಡಲಾಗಿದೆ. ಅನುಬಂಧದಲ್ಲಿ ಮಾಹಿತಿದಾರರ ವಿವರ, ಕೋಷ್ಟಕಗಳು, ನಕ್ಷೆಗಳು, ಹಾಗೂ ಬಳ್ಳಾರಿ ಜಿಲ್ಲೆಯ ಬುಡಕಟ್ಟು ಮಹಿಳೆಯರ ಅಧ್ಯಯನಕ್ಕೆ ಸಂಬಂಧಿಸಿದಂತೆ ಛಾಯಚಿತ್ರಗಳನ್ನು ಒದಗಿಸಲಾಗಿದೆ.

**೧.೫ ಅಧ್ಯಯನ ವಿಧಾನಗಳು**

ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ವಿಧಾನ (ರ‍್ಯಾಂಡಮ್)ನ್ನು ಬಳಸಲಾಗಿದೆ. ಮುಖ್ಯವಾಗಿ ಈ ಅಧ್ಯಯನ ನಡೆಸಲು ಚಾರಿತ್ರಿಕ ವಿಧಾನ, ಸಂಖ್ಯಾಶಾಸ್ತ್ರೀಯ ವಿಧಾನ, ಸಂದರ್ಶನ ವಿಧಾನ, ಸಹಭಾಗಿತ್ವ ವಿಧಾನಗಳನ್ನು ಹಾಗೂ ಪ್ರಶ್ನಾವಳಿ ವಿಧಾನಗಳನ್ನು ಬಳಸಲಾಗಿದೆ. ಹಾಗೆಯೇ ನಕ್ಷೆಗಳು, ಕೋಷ್ಟಕಗಳು ಮುಂತಾದವುಗಳನ್ನು ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

**ಚಾರಿತ್ರಿಕ ವಿಧಾನ:** ಯಾವುದೇ ಒಂದು ಜಾತಿ, ಬುಡಕಟ್ಟಿಗೆ ಅದರದೇ ಆದ ಇತಿಹಾಸವಿರುತ್ತದೆ. ಆ ಬುಡಕಟ್ಟಿನ ಹಿನ್ನೆಲೆಯನ್ನು ಅರಿಯಲು ಚಾರಿತ್ರಿಕ ವಿಧಾನದಿಂದ ನೋಡಿದಾಗ ಮಾತ್ರ ಬುಡಕಟ್ಟಿನ ಹಿನ್ನೆಲೆಯನ್ನು ಅರಿಯಲು ಸಾಧ್ಯವಾಗುತ್ತದೆಂಬುದರಿಂದ ಚಾರಿತ್ರಿಕ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

**ಸಂಖ್ಯಾಶಾಸ್ತ್ರೀಯ ವಿಧಾನ:** ಬುಡಕಟ್ಟು ಸಮುದಾಯಗಳ ಜನಸಂಖ್ಯೆ, ಆರ್ಥಿಕ, ರಾಜಕೀಯ ಇತ್ಯಾದಿ ಸ್ಥಿತಿಗತಿಗಳನ್ನರಿಯಲು ಕೋಷ್ಟಕ, ಪೈಚಾರ್ಟ್ ಇತ್ಯಾದಿಗಳನ್ನು ರಚಿಸಿಕೊಳ್ಳಲು ಸಂಖ್ಯಾಶಾಸ್ತ್ರದ ನೆರವನ್ನು ಪಡೆಯಲಾಗಿದೆ.

**ಸಂದರ್ಶನ ವಿಧಾನ:** ಮಾಹಿತಿದಾರರನ್ನು ನೇರವಾಗಿ ಸಂದರ್ಶಿಸುವ ಮೂಲಕ ಆ ಬುಡಕಟ್ಟಿನ ಆಚಾರ ವಿಚಾರಗಳಲ್ಲದೆ ಅವರಲ್ಲಿ ಪುರುಷ ಹಾಗೂ ಮಹಿಳೆಯರ ಸ್ಥಾನಮಾನದ ಸ್ವರೂಪಗಳೂ

ತಿಳಿಯುವವು. ಈ ಕಾರಣಕ್ಕಾಗಿ ಸಂದರ್ಶನದ ಮೂಲಕ ಕಲೆಹಾಕಿದ ಮಾಹಿತಿಯನ್ನು ಕ್ರೋಢಿಕರಿಸಿ ಅಧ್ಯಯನದಲ್ಲಿ ಆ ಮಾಹಿತಿಯನ್ನು ಉಪಯೋಗಿಸಿಕೊಳ್ಳಲಾಗಿದೆ.

**ಸಹಭಾಗಿತ್ವ ವಿಧಾನ:** ಬುಡಕಟ್ಟುಗಳ ಹಬ್ಬ ಆಚರಣೆಗಳಲ್ಲದೆ ಅವರ ಜೀವನ ಶೈಲಿಯನ್ನು ಅರಿತುಕೊಳ್ಳಲು ಸಹಭಾಗಿತ್ವ ಅವಶ್ಯವಾಗಿದೆ. ಹೀಗಾಗಿ ಅವರ ಕುಲಪಂಚಾಯತಿ, ಹಬ್ಬ ಹರಿದಿನಗಳಲ್ಲಿ ನಡೆಸುವ ಆಚರಣೆಗಳನ್ನು ಅರಿಯಲು ಅವರೊಂದಿಗೆ ಸಹಭಾಗಿಯಾಗಿ ಮಾಹಿತಿಯನ್ನು ಕ್ರೋಢಿಕರಿಸಿ ಅಧ್ಯಯನದಲ್ಲಿ ಪೂರಕವಾಗಿ ಬಳಸಿಕೊಳ್ಳಲಾಗಿದೆ.

**ಪ್ರಶ್ನಾವಳಿಯ ವಿಧಾನ:** ಬುಡಕಟ್ಟು ಕುಟುಂಬಗಳ ಮಾಹಿತಿಯನ್ನರಿಯಲು ಅಧ್ಯಯನಕ್ಕೆ ಒಳಪಡಿಸಿದ ಪ್ರತಿಯೊಂದು ಕುಟುಂಬದ ಮಾಹಿತಿಯನ್ನು ಪಡೆಯಲು ಪ್ರಶ್ನಾವಳಿಯ ಮಾದರಿಗಳನ್ನು ಬಳಸಲಾಗಿದೆ. ಒಂದು ಪ್ರಾ್ನವಳಿಯು ಸಾಮಾನ್ಯವಾದ ಮಾಹಿತಿ ಪಡೆಯಲು ಬಳಸಿದರೆ ಮತ್ತೊಂದು ಪ್ರಶ್ನಾವಳಿಯು ವಿಶೇಷವಾಗಿದ್ದು ಮಾದರಿ ಪ್ರಶ್ನಾವಳಿಯಾಗಿದೆ. ಮಾಹಿತಿದಾರರಿಂದ ವಿಸ್ತೃತವಾದ ಮಾಹಿತಿಯನ್ನು ಪಡೆಯಲು ಈ ಪ್ರಶ್ನಾವಳಿಯನ್ನು ಬಳಸಲಾಗಿದೆ. ಪ್ರಶ್ನಾವಳಿಗಳ ಮಾಹಿತಿಯನ್ನು ಕ್ರೋಢಿಕರಿಸಿ ಅಧ್ಯಯನದಲ್ಲಿ ಅವಶ್ಯಕವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಲಾಗಿದೆ. ಹಾಗೆಯೇ ಈ ಅಧ್ಯಯನದಲ್ಲಿ ಸಬಲೀಕರಣದ ಕುರಿತು ಇಲ್ಲಿಯವರೆಗೆ ಬಂದಿರುವ ಕೃತಿಗಳು, ಗೆಜೆಟಿಯರ್‌ಗಳು, ಪತ್ರಿಕೆಗಳು, ಬಿಡಿ ಲೇಖನಗಳು, ಜನಗಣತಿ ವರದಿಗಳು, ಮಾನವಾಭಿವೃದ್ಧಿ ವರದಿ, ಪರಿಶಿಷ್ಟ ಪಂಗಡಗಳ ಕುರಿತಾಗಿ ಬಂದಿರುವ ವರದಿಗಳು, ಆಯೋಗಗಳ ವರದಿಗಳು ಹಾಗೂ ಇತರ ಮೂಲಗಳಿಂದ ಮಾಹಿತಿಗಳನ್ನು ಪಡೆಯಲಾಗಿದೆ. ಹಾಗೆ ಬಳ್ಳಾರಿಯಲ್ಲಿ ನೆಲೆಸಿರುವ ಬೇಡ, ಮೇಧ, ಪಾರ್ಧಿ, ಡುಂಗ್ರಿ ಗರಾಸಿಯ ಬುಡಕಟ್ಟಿನ ಮಹಿಳೆಯರನ್ನು ನೇರವಾಗಿ ಸಮೀಕ್ಷಿಸಿ ಸಂದರ್ಶನ ನಡೆಸಲಾಗಿದೆ. ಈ ರೀತಿ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯ ಚಾರಿತ್ರಿಕ ವಿಧಾನ, ಸಂಖ್ಯಾ ಶಾಸ್ತ್ರೀಯ ವಿಧಾನ, ಸಹಭಾಗಿತ್ವ ವಿಧಾನಗಳಿಂದ ಕ್ರೋಢಿಕರಿಸಿದ ಅಂಶಗಳನ್ನು ತುಲನಾತ್ಮಕವಾಗಿ ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

## ಪ್ರಾಕಲ್ಪನೆ

- ಒಂದು ಸ್ಥಳದಲ್ಲಿ ನೆಲೆಸಿದ ಬುಡಕಟ್ಟು ಸಮುದಾಯಗಳಿಗಿಂತ ಅಲೆಮಾರಿ ಬುಡಕಟ್ಟುಗಳು ಭಿನ್ನವಾಗಿವೆ.
- ಬುಡಕಟ್ಟು ಸಮುದಾಯಗಳು ಜಾಗತಿಕ ಒತ್ತಡಗಳಿಗೆ ಒಳಗಾಗಿರುವವಾದರೂ ತಮ್ಮ ಮೂಲ ಸಂಸ್ಕೃತಿಗೆ ಅಂಟಿಕೊಂಡಿವೆ.
- ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಬುಡಕಟ್ಟು ಮಹಿಳೆಯರು ಸ್ವಾತಂತ್ರ್ಯವಾಗಿಲ್ಲ.
- ಬುಡಕಟ್ಟು ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿದ್ದಾರೆ.
- ಬುಡಕಟ್ಟು ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯವಿಲ್ಲ.
- ಬುಡಕಟ್ಟು ಸಮುದಾಯಗಳಲ್ಲಿ ಮಹಿಳೆಯರು ಅತಂತ್ರವಾದ ಜೀವನ ಸಾಗಿಸುತ್ತಿರುವರು.

## ೧.೬ ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆಗಳು

ಈ ಹಿಂದೆ ಭಾರತಕ್ಕೆ ನಾನಾ ಉದ್ದೇಶಗಳಿಗಾಗಿ ಬಂದ ವಿದೇಶಿಯರು ಇಲ್ಲಿಯ ಜನಜೀವನ, ಬದುಕಿನ ವೈವಿಧ್ಯತೆಯ ಕುರಿತು ಕುತೂಹಲಿಗಳಾಗಿದ್ದರು. ಅದರಲ್ಲೂ ಬುಡಕಟ್ಟು ಸಮುದಾಯಗಳ ಕುರಿತು ಮಾಹಿತಿ ಕ್ರೋಢಿಕರಿಸಿ ಕೃತಿಯ ರೂಪದಲ್ಲಿ ದಾಖಲೀಕರಿಸುವ ಪ್ರಯತ್ನಗಳು ನಡೆದವು. ಅಂತಹ ಪ್ರಯತ್ನಗಳಲ್ಲಿ ದಕ್ಷಿಣ ಭಾರತದ ಜಾತಿ ಬುಡಕಟ್ಟುಗಳ ಕುರಿತು ವಿಸ್ತೃತ ಮಾಹಿತಿಯನ್ನು ಸ್ಥಳೀಯರ ಸಹಾಯದಿಂದ ಕ್ರೋಢಿಕರಿಸಿದ ಮಹನೀಯರಲ್ಲಿ ಎಡ್ಗರ್ ಥರ್ಸ್ಟನ್ ಮೊದಲಿಗರೆಂದರೆ ತಪ್ಪಾಗಲಾರದು. ಅವರ ಕಾಸ್ಟ್ ಅಂಡ್ ಟ್ರೈಬ್ಸ್ ಇನ್ ಸದರ್ನ್ ಇಂಡಿಯಾ ೧೯೦೯, ಜಾತಿ, ಬುಡಕಟ್ಟುಗಳ ಕುರಿತು ಮಾಹಿತಿ ನೀಡುವ ಪ್ರಮುಖ ಕೃತಿಯಾಗಿದೆ. ಸುಮಾರು ೮ ಸಂಪುಟಗಳಲ್ಲಿ ಈ ಕೃತಿಯು ಬೆಳಕು ಕಂಡಿತು. ಇಂದಿಗೂ ಕುಲಶಾಸ್ತ್ರೀಯ ಅಧ್ಯಯನಕಾರರು ಥರ್ಸ್ಟನ್ ಅವರ ಕೃತಿಯನ್ನು ನೋಡಿಯೇ ಮುಂದಿನ ಅಧ್ಯಯನಕ್ಕೆ ಹೆಜ್ಜೆ ಇಡುವ ಸ್ಥಿತಿ ಇದೆ. ನಂಜುಂಡಚಾರ್ ಹಾಗೂ ಅನಂತಕೃಷ್ಣ ಅಯ್ಯರ್ (೧೯೪೫) ಅವರ ಕಾಸ್ಟ್ ಅಂಡ್ ಟ್ರೈಬ್ಸ್ ಇನ್ ಮೈಸೂರು ಸ್ಟೇಟ್ ಎಂಬ ಕೃತಿಯಲ್ಲಿ ಅಂದಿನ ಮೈಸೂರು ರಾಜ್ಯದೊಳಗಿರುವ ಜಾತಿ, ಬುಡಕಟ್ಟು ಸಮುದಾಯಗಳ ಕುರಿತು ಎಡ್ಗರ್ ಥರ್ಸ್ಟನ್ ಮಾದರಿಯಲ್ಲಿಯೇ ಕೃತಿಯನ್ನು ರಚಿಸಿರುವರು. ಕೆ ಎಸ್ ಸಿಂಗ್, ೨೦೦೩, ಕರ್ನಾಟಕ ಸ್ಟೇಟ್ ಗೆಜೆಟೆಯರ್ ಪಾರ್ಟ್-೨, ದ ಶೆಡ್ಯುಲ್ಡ್ ಟ್ರೈಬ್ಸ್ ಬಾಂಬೆ ದ ಎಥ್ನೋಗ್ರಾಫಿಕಲ್ ಸರ್ವೆ ಆಫ್ ಮೈಸೂರು, ವರದಿಗಳಲ್ಲಿ ಹಾಗೂ ಗೆಜೆಟೆಯರ್‌ಗಳಲ್ಲಿ ಮೇಧ ಮತ್ತು ಸಮಾನವಾದ ಇತರೆ ಹೆಸರುಗಳನ್ನು ನಮೂದಿಸಿ ಪರಿಚಯಿಸಲಾಗಿದೆ. ಹೈದರಬಾದ್ ಕರ್ನಾಟಕದ ಮೂರು ಜಿಲ್ಲೆಗಳಾದ ಬೀದರ್, ಕಲ್ಬುರ್ಗಿ ಮತ್ತು ರಾಯಚೂರುಗಳಲ್ಲಿರುವವರ ಬಗ್ಗೆ ಹಸನ್ ಎಂಬುವವರು ಬರೆದಿರುವರು. ಲೂಯಿಸ್ (೧೯೬೩) ಅವರ ಟ್ರೈಬ್ಸ್ ಇನ್ ಮೈಸೂರು ಸ್ಟೇಟ್ ಹಿಂದಿನ ಮೈಸೂರು ಪ್ರಾಂತ್ಯದಲ್ಲಿರುವ ಅನೇಕ ಬುಡಕಟ್ಟುಗಳ ಬಗ್ಗೆ ಮಾಹಿತಿ ನೀಡಿರುವರು. ಇವರ ಕೃತಿಯು ಬಹುತೇಕ ಈ ಹಿಂದೆ ಬಂದಿರುವ ಕೃತಿಗಳನ್ನು ಆಧರಿಸಿಯೇ ರಚನೆಗೊಂಡಿದೆ.

ಪ್ರಕಾಶ್ ಚಂದ್ರ ಮೆಹ್ತಾ, ೨೦೦೬, "ಡೆವಲಪ್ ಮೆಂಟ್ ಆಫ್ ಇಂಡಿಯನ್ ಟ್ರೈಬ್ಸ್" ಎಂಬ ತಮ್ಮ ಅಧ್ಯಯನದಲ್ಲಿ ಬುಡಕಟ್ಟು ಅಭಿವೃದ್ಧಿಯ ವಿವಿಧ ಆಯಾಮಗಳನ್ನು ವಿಶ್ಲೇಷಿಸಿದ್ದಾರೆ. ಆದಿವಾಸಿ ಕಲ್ಯಾಣಕ್ಕಿರುವ ವಿವಿಧ ನಿಲುವುಗಳಾದ ರಾಜಕೀಯ, ಆಡಳಿತಾತ್ಮಕ, ಧಾರ್ಮಿಕ, ಸರ್ಕಾರೇತರ ಸಂಘ-ಸಂಸ್ಥೆಗಳ ಮತ್ತು ಮಾನವಶಾಸ್ತ್ರೀಯ ವಿಶ್ಲೇಷಣೆಯನ್ನು ಅಧ್ಯಯನದಲ್ಲಿ ಕಾಣಬಹುದು. ಇದುವರೆಗೆ ಭಾರತ ಸರ್ಕಾರ ಕೈಗೊಂಡ ವಿವಿಧ ಯೋಜನೆಗಳು, ಸದ್ಯದ ಬುಡಕಟ್ಟು ಸಮುದಾಯದ ಪರಿಸ್ಥಿತಿ ಮತ್ತು ಮುಂದಿನ ಯೋಜನೆಗಳ ಕುರಿತು ವಿವರಿಸಿದ್ದಾರೆ.

ಮಧುಮಾಲ ಕೆ, ೨೦೦೪, 'ದಕ್ಷಿಣ ಕನ್ನಡದ ಬುಡಕಟ್ಟು ಮಹಿಳೆಯರ ಸಾಮಾಜಿಕ ಆರ್ಥಿಕಸ್ಥಿತಿ ಮತ್ತು ಸಶಕ್ತೀಕರಣ ಪ್ರಕ್ರಿಯೆ' : ಒಂದು ಅಧ್ಯಯನ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾ ಪ್ರಬಂಧದಲ್ಲಿ ಬುಡಕಟ್ಟು ಮಹಿಳೆಯರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳು ಹೇಗೆ

ಸಶಕ್ತೀಕರಣದ ಪ್ರಕ್ರಿಯೆಗೆ ಹೇಗೆ ಒಳಗೊಳ್ಳುತ್ತವೆ ಎಂಬುದನ್ನು ವಿವರಿಸಿದ್ದಾರೆ. ಅಲ್ಲದೇ ಬುಡಕಟ್ಟು ಮಹಿಳೆಯರು ಸಂಸಾರ ನಿರ್ವಹಣೆಗೆ ಸತತ ದುಡಿಯುತ್ತಿದ್ದು ದುಡಿಮೆಯ ಹಣದಲ್ಲಿ ಎಷ್ಟರ ಮಟ್ಟಿನ ಆರ್ಥಿಕ ಸ್ವಾತಂತ್ರ ಪಡೆದುಕೊಂಡಿದ್ದಾರೆ ಎಂಬುದನ್ನು ವಿವರಿಸಿದ್ದಾರೆ. ಜೊತೆಗೆ ಸಾಮಾಜಿಕ ಸಾಂಸ್ಕೃತಿಕ ಸ್ಥಿತಿಗತಿಯ ಅಂಶಗಳು ಮಂದಗತಿಯಲ್ಲಿ ಪರಿವರ್ತನೆಯಾಗುವ ಅಂಶಗಳನ್ನು ನಿರೂಪಿಸಿದ್ದಾರೆ.

ಕಲ್ಲಬಾಳು ಪನ್ನಂಗಧರ, ೨೦೦೯, ಅವರ 'ಮೇದರ ಸಂಸ್ಕೃತಿ ಹಾಗೂ ವಾಣಿಜ್ಯ' ಎನ್ನುವ ಪಿಹೆಚ್ ಡಿ ಅಧ್ಯಯನದಲ್ಲಿ ಮೇದ ಬುಡಕಟ್ಟು ಸಮುದಾಯದ ಸಂಸ್ಕೃತಿ ಮತ್ತು ಅವರ ಆರ್ಥಿಕ ಜೀವನ ನಿರ್ವಹಿಸುವ ವೃತ್ತಿ ಮತ್ತು ವಾಣಿಜ್ಯದ ಪ್ರಮುಖ ಅಂಶಗಳಿಗೆ ಗಮನ ಹರಿಸಿದ್ದಾರೆ. ಮೇದರ ಕುಲಕಸುಬು, ಬಿದಿರಿನ ವಸ್ತುಗಳ ತಯಾರಿಕೆ, ಅವುಗಳ ಮಾರಾಟದ ಪ್ರಕ್ರಿಯೆಗಳನ್ನು ಹೇಗೆ ನಿರ್ವಹಿಸುತ್ತಾರೆ ಎಂಬುದನ್ನು ತಿಳಿಸಿದ್ದಾರೆ. ಇದರಿಂದ ಮೇದ ಬುಡಕಟ್ಟು ಸಮುದಾಯದ ಪರಿಚಯ ಹಾಗೂ ಅವರಲ್ಲಾದ ಬದಲಾವಣೆಗಳನ್ನು ತಿಳಿದುಕೊಳ್ಳಲು ಸಾಧ್ಯವಾಗಿದೆ.

ಶ್ರೀನಿವಾಸ ಎಂ ಸಿ, ೨೦೦೪, ಗಿರಿಜನ ಉಪಯೋಜನೆಯಡಿಯಲ್ಲಿ ಬಳ್ಳಾರಿ ಜಿಲ್ಲೆಯ ಬುಡಕಟ್ಟು ಅಭಿವೃದ್ಧಿ ಅಧ್ಯಯನ, ಕನ್ನಡ ವಿಶ್ವ ವಿದ್ಯಾಲಯಕ್ಕೆ ಸಲ್ಲಿಸಿದ ಮಹಾ ಪ್ರಬಂಧದಲ್ಲಿ ಬಳ್ಳಾರಿ ಜಿಲ್ಲೆಯ ಪರಿಚಯ, ಬುಡಕಟ್ಟು ಸಮುದಾಯಗಳ ಪರಿಚಯ, ಗಿರಿಜನ ಉಪಯೋಜನೆಯಡಿಯಲ್ಲಿ ಬರುವ ಕಾರ್ಯಕ್ರಮಗಳ ಪರಿಚಯ ಹಾಗೂ ಅವುಗಳನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಯಾವ ಯಾವ ಯೋಜನೆಗಳು ಕಂಡು ಬರುತ್ತವೆ. ಅವುಗಳ ಸಾಧಕ ಭಾದಕಗಳ ಕುರಿತು ವಿಶ್ಲೇಷಿಸಿದ್ದಾರೆ. ಗಿರಿಜನ ಉಪಯೋಜನೆಯಡಿಯಲ್ಲಿ ಬುಡಕಟ್ಟು ಸಮುದಾಯಗಳ ಜನರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹೇಗೆ ಅಭಿವೃದ್ಧಿಗೊಳ್ಳಬೇಕು ಎಂಬುದನ್ನು ತಿಳಿಸಿದ್ದಾರೆ. ಹಾಗೂ ಯೋಜನೆಗಳ ಮಾಹಿತಿಯನ್ನು ಕಾಣಬಹುದು.

ಮೋಹನ್ ಕುಮಾರ್, ೨೦೦೯, 'ಬುಡಕಟ್ಟು ಸಮುದಾಯಗಳ ಸಂಘಟನೆ ಹಾಗೂ ಸಹಬಾಳ್ವೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧದಲ್ಲಿ ಬುಡಕಟ್ಟು ಸಮುದಾಯಗಳ ಸಂಘಟನೆ ಹಾಗೂ ಸಹಬಾಳ್ವೆ ಕುರಿತು ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹೇಗೆ ಯಾವೆಲ್ಲಾ ವಿಷಯಗಳೊಂದಿಗೆ ಸಂಘಟಿತ ಸಹಬಾಳ್ವೆಯೊಂದಿಗೆ ಜೀವನ ನಡೆಸುತ್ತಾರೆ ಎಂಬುದನ್ನು ವಿವರಿಸಿದ್ದಾರೆ.

ತಿಮ್ಮಾರೆಡ್ಡಿ ಎಸ್.ವೈ, ೨೦೧೨, ಅವರ "ಕುಲಕಸುಬುಗಳು ಮತ್ತು ಆಧುನಿಕತೆ" (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ) ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವ ವಿದ್ಯಾಲಯಕ್ಕೆ ಸಲ್ಲಿಸಿರುವ ಪ್ರಬಂದದಲ್ಲಿ ಮೇದಾರಿಕೆಗೆ ಸಂಬಂಧಿಸಿದಂತೆ ಸ್ಥೂಲ ವಿವರಣೆ ನೀಡಿದ್ದಾರೆ.

ಕಿಚಡಿ ಚನ್ನಪ್ಪ, ೨೦೧೪, 'ಗ್ರಾಮ ಪಂಚಾಯಿತಿ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ' ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿ.ಹೆಚ್.ಡಿ. ಪ್ರಬಂಧದಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಮಹಿಳೆಯರಿಗೆ

ಯಾವ ರೀತಿ ಪ್ರಾತಿನಿಧ್ಯ ದೊರೆಯುತ್ತಿದೆ ಎಂಬುದರ ಕುರಿತು ವಿವಿಧ ಆಯಾಮಗಳನ್ನು ಗುರುತಿಸಿದ್ದಾರೆ. ಅಂದರೆ ಪರಿಶಿಷ್ಠ ಪಂಗಡದ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದಂತೆ ಸೂಕ್ತ ಪ್ರಾತಿನಿಧ್ಯ ನೀಡುವುದು, ಉದ್ದೇಶಿತ ವರ್ಗ ಮತ್ತು ಮಹಿಳೆಯರನ್ನು ಸಬಲೀಕರಣಗೊಳಿಸುವುದು. ಇಲ್ಲಿ ಮೊದಲನೇ ಉದ್ದೇಶ ಈಡೇರಿದರೆ ಎರಡನೇ ಉದ್ದೇಶ ಈಡೇರುತ್ತದೆ ಎನ್ನುವ ನೀತಿ ಇದರ ಹಿಂದೆ ಇದೆ. ಇಂದು ಗ್ರಾಮೀಣ ಮಹಿಳೆಯರಿಗೆ ಸಮಾನ ಪ್ರಾತಿನಿಧ್ಯ ಸಿಕ್ಕಿದೆ. ಆದರೆ ಸಬಲೀಕರಣಕ್ಕೆ ಮುಖ್ಯವಾಗಿ 'ಸ್ವ' ನಿರ್ಧಾರದ ಕೊರತೆ ಕಂಡು ಬರುತ್ತಿದೆ. ಮಹಿಳೆಯರು ಸ್ವಾವಲಂಬನೆ ಮತ್ತು 'ಸ್ವ' ನಿರ್ಧಾರವನ್ನು ಹೊಂದಿದರೆ ಅಥವಾ ಹೊಂದಲು ಶಕ್ತರಾದರೆ ಅವರು ಸಬಲೀಕರಣಗೊಳ್ಳುವರು ಎಂಬ ನಿಯಮವಿದೆ. ಈ ನಿಯಮಕ್ಕೆ ಬದ್ಧವಾದ ಗ್ರಾಮ ಪಂಚಾಯತಿಯು ಪ್ರಾಥಮಿಕ ಮಹಿಳೆಯರಿಗೆ ಪ್ರಾತಿನಿಧ್ಯವನ್ನು ನೀಡುವಲ್ಲಿ ತನ್ನ ಜವಬ್ದಾರಿಯನ್ನು ಸಮರ್ಪಕವಾಗಿ ನಿಭಾಯಿಸಿದೆ. ಆದರೆ ಪ್ರಾತಿನಿತ್ಯದ ಜವಬ್ದಾರಿಯನ್ನು ನಿರ್ಧರಿಸುವಲ್ಲಿ ಮಹಿಳೆಯರ ಸ್ವ-ನಿರ್ಧಾರದ ಪ್ರಮಾಣವನ್ನು ವಿಶ್ಲೇಷಿಸುವ ಅಂಶಗಳನ್ನು ಪ್ರಬಂಧದಲ್ಲಿ ವಿವರಿಸಿದ್ದಾರೆ.

ಕೊತ್ಲಮ್ಮ ಟಿ, ೨೦೦೭, "ಬಳ್ಳಾರಿ ಜಿಲ್ಲೆಯ ಬುಡಕಟ್ಟು ದೇವದಾಸಿಯರ ಅಧ್ಯಯನ" ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿ.ಹೆಚ್.ಡಿ. ಪ್ರಬಂಧದಲ್ಲಿ ಬುಡಕಟ್ಟು ದೇವದಾಸಿಯರ ಸ್ಥಿತಿಗತಿ'ಯ ಕುರಿತು ವಿವರಿಸುವ ಮೂಲಕ ಅವರ ನೈಜ ಪರಿಸ್ಥಿತಿಯನ್ನು ಹೊರ ಜಗತ್ತಿಗೆ ಅನಾವರಣಗೊಳಿಸಿದ್ದು, ಅವರು ಹೇಗೆ ಸರಕಾರಿ ಸೌಲಭ್ಯಗಳು, ಯೋಜನೆಗಳನ್ನು ಬಳಸಿಕೊಳ್ಳಬೇಕು, ಎಂಬುದರ ಕುರಿತು ಮಾಹಿತಿಗಳನ್ನು ಪ್ರಬಂಧದಲ್ಲಿ ದಾಖಲಿಸಿದ್ದಾರೆ. ಅಲ್ಲದೇ ಇಲ್ಲಿ ಮುಖ್ಯವಾಗಿ, 'ಬಳ್ಳಾರಿ ಜಿಲ್ಲೆಯ ಸಮಗ್ರ ಭೌಗೋಳಿಕ ಹಿನ್ನೆಲೆ, ಚರಿತ್ರೆಯನ್ನು ದಾಖಲಿಸಿ, ಬಳ್ಳಾರಿ ಜಿಲ್ಲೆಯಲ್ಲಿ ಕಂಡು ಬರುವ ಬುಡಕಟ್ಟು ಸಮುದಾಯಗಳು ಹಾಗೂ ಬುಡಕಟ್ಟು ಮಹಿಳೆಯರ ಸ್ಥಿತಿಗತಿಯ ಅಂಶಗಳು ಹೇಗಿವೆ ಎಂಬುದನ್ನು ವಿವರಿಸುವುದರಿಂದ ಅಧ್ಯಯನಕ್ಕೆ ನೆರವಾಗಬಲ್ಲ ಅನೇಕ ಮಹಿಳಾ ವಿಷಯಗಳು ಸಹಕಾರಿಯಾಗಿವೆ.

ನಾಗೇಶ್ ಎಂ, ೨೦೦೭, 'ಹಕ್ಕಿ-ಪಿಕ್ಕಿಯರ ಸಾಮಾಜಿಕ ಬದಲಾವಣೆ' (ಕಂಪ್ಲಿ ಪಟ್ಟಣ ಅನುಲಕ್ಷಿಸಿ) ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್ ನಿಬಂಧದಲ್ಲಿ ಬುಡಕಟ್ಟು ಸಮುದಾಯದಲ್ಲೊಂದಾದ 'ಹಕ್ಕಿ-ಪಿಕ್ಕಿ'ಯರ 'ಸಾಮಾಜಿಕ ಬದಲಾವಣೆಯ ಕುರಿತು ವಿವರಿಸಿದ್ದಾರೆ. ಕಂಪ್ಲಿ ಪಟ್ಟಣದಲ್ಲಿ ಹೆಚ್ಚಾಗಿ ಹಕ್ಕಿ-ಪಿಕ್ಕಿ ಸಮುದಾಯವು ನೆಲೆಯೂರಿದ್ದು, ಅವರು ಹೇಗೆ ಸಮಾಜದೊಂದಿಗೆ ಮುಖಾ-ಮುಖಿಯಾಗಿದ್ದಾರೆ ಎಂಬುದರ ಮಾಹಿತಿಯನ್ನು ವಿವರಿಸಿದ್ದಾರೆ. ಇಲ್ಲಿ ಮುಖ್ಯವಾಗಿ ಈ ಸಮುದಾಯದಲ್ಲಿ ಮಹಿಳೆಯರ ಪರಿಸ್ಥಿತಿ ಹೇಗಿದೆ. ಅವರು ಹೇಗೆ ಸಾಮಾಜಿಕವಾಗಿ ಬದಲಾಗುವ ಪ್ರಯತ್ನದಲ್ಲಿ ದಾಪುಗಾಲು ಇಟ್ಟಿದ್ದಾರೆ ಎಂಬುದನ್ನು ವಿವರಿಸಿದ್ದಾರೆ.

ದೊಡ್ಡಬಸಮ್ಮ, ೨೦೦೮, 'ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಬುಡಕಟ್ಟುಗಳ ರಾಜಕೀಯ ಸ್ಥಿತಿಗತಿಗಳು' ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್ ನಿಬಂಧದಲ್ಲಿ ಬುಡಕಟ್ಟು ಸಮುದಾಯಗಳು ಚುನಾವಣೆಗಳಲ್ಲಿ ಪಾಲ್ಗೊಳ್ಳುವಿಕೆಯ ಕುರಿತು ವಿಶ್ಲೇಷಿಸಿದ್ದಾರೆ.

ಶ್ರೀನಿವಾಸ ಎನ್, ೨೦೦೧, ಅವರು ಮೇದರು ಮತ್ತು ಕೊರಚರು ವೃತ್ತಿ ಪದಕೋಶ ಎಂಬ ತಮ್ಮ ನಿಬಂಧದಲ್ಲಿ ಮೇದರು ತಯಾರಿಸಿರುವ ಕೆಲುವು ವಸ್ತುಗಳ ವಿವರಣೆಯನ್ನು ನೀಡಿರುವರು.

ಈರಪ್ಪ ಅಂಬ್ಲಯ್ಯ, ೨೦೧೫, ಅವರು 'ಜಾಗತೀಕರಣ ಸಂದರ್ಭದಲ್ಲಿ ಬುಡಕಟ್ಟುಗಳ ಸಮಾಜೋ–ಆರ್ಥಿಕ ಸ್ಥಿತಿಗತಿಗಳು' ಎಂಬ ನಿಬಂಧದಲ್ಲಿ ಮೇದ ಸಮುದಾಯ ಆಧುನಿಕದಲ್ಲಿ ಮುಖಾಮುಖಿಯಾಗಿ ಬುಡಕಟ್ಟು ಲಕ್ಷಣಗಳು ಕರಗುತ್ತಾ ಜಾತಿ ಪದರಗಳು ಹೇಗೆ ಬಿಂಬಿತವಾಗುತ್ತಿವೆ ಎಂಬ ಅಂಶಗಳನ್ನು ವಿವರಿಸಿದ್ದಾರೆ.

ಶಿವಕುಮಾರ್, ೧೯೯೪, ಅವರ 'ಮಹಿಳಾ ಸಬಲೀಕರಣ' ಎನ್ನುವ ಕೃತಿಯಲ್ಲಿ ಮಹಿಳೆಯರ ಸಬಲೀಕರಣವನ್ನು ಬಲಿಷ್ಟಗೊಳಿಸಲು ಮಹಿಳಾ ಸಾಕ್ಷರತೆಯನ್ನು ಉತ್ತೇಜಿಸಬೇಕಾಗಿದೆ. ಶಿಕ್ಷಣವು ವಿವಿಧ ಜನವರ್ಗಗಳು ಸಮಾನ ಅವಕಾಶಗಳನ್ನು ಪಡೆಯಲು ಅವರ ಸ್ಥಿತಿಯನ್ನು ಸುಧಾರಿಸುವ ಪ್ರಮುಖ ಅಂಶವಾಗಿದೆ. ಸಬಲೀಕರಣಕ್ಕೆ ಆರ್ಥಿಕ ಸ್ವಾತಂತ್ರ್ಯವು ಬೆಂಬಲವಾಗಬಹುದಾಗಿದೆ. ಆರ್ಥಿಕ ಸ್ವಾತಂತ್ರ್ಯದ ಸಾಧನೆಗೆ ಉತ್ಪಾದಕ ಸಂಪನ್ಮೂಲಗಳ ಮೇಲೆ ಹತೋಟಿ (ಮುಖ್ಯ ಭೂಮಿ) ಅಂಶವು ಅತ್ಯವಶ್ಯಕವಾದುದಾಗಿದೆ. ಇವರು ಅಭಿಪ್ರಾಯ ಪಡುವಂತೆ, ಸರಕಾರ ಸರಕಾರೇತರ ಸಂಸ್ಥೆಗಳು ಮತ್ತು ಜನರು ಎಲ್ಲಿಯವರೆಗೂ ಪಂಚಾಯತರಾಜ್ ವ್ಯವಸ್ಥೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಪಂಚಾಯತರಾಜ್ ಸಂಸ್ಥೆಗಳು ಸಾಮಾಜಿಕ ಪರಿವರ್ತನೆಯ ನಿಯೋಗಿಗಳಾಗಿ ಕಾರ್ಯನಿರ್ವಹಿಸಲಾರವು ಎನ್ನುತ್ತಾರೆ.

ಗೀತಾ ಮೆನನ್ ೧೯೮೮, "ಟ್ರೈಬಲ್ ವುಮೆನ್ ವಿಕ್ಟಿಮಾ ಅಫ್ ಡೆವಲಪ್‌ಮೆಂಟ್ ಪ್ರೊಸೆಸ್"ಎಂಬ ತಮ್ಮ ಸಂಶೋಧನಾ ಪ್ರಬಂಧದಲ್ಲಿ ಅವರು ಸಾಮಾನ್ಯ ಆಸ್ತಿ, ಸಂಪನ್ಮೂಲಗಳ ನಷ್ಟ ಮತ್ತು ಪರಿಣಾಮಗಳು ಬುಡಕಟ್ಟು ಮಹಿಳೆಯರ ಕಷ್ಟಗಳು ಹೆಚ್ಚಾಗುತ್ತಿವೆ. ಹಾಗೂ ಸಾಮಾನ್ಯ ಆಸ್ತಿ ಮತ್ತು ಸಂಪನ್ಮೂಲಗಳಲ್ಲಿನ ಬುಡಕಟ್ಟುಗಳ ಸಾಂಪ್ರದಾಯಿಕ ಹಕ್ಕುಗಳನ್ನು ಕಸಿದುಕೊಳ್ಳುತ್ತಿರುವುದರಿಂದ ಬಹು ಸಂಖ್ಯಾತ ಬುಡಕಟ್ಟು ಮಹಿಳೆಯರು ಅಭಿವೃದ್ಧಿ ಪ್ರಕ್ರಿಯೆಯ ಬಲಿಪಶುಗಳಾಗುತ್ತಿದ್ದಾರೆ ಎನ್ನುವ ಸತ್ಯವನ್ನು ಹೊರಗೆಡವಿದ್ದಾರೆ. ಆದರೆ ಈ ಅಧ್ಯಯನದಲ್ಲಿ ಬುಡಕಟ್ಟು ಮಹಿಳೆಯರು ಕುಟುಂಬ ಮತ್ತು ಸಾಂಸ್ಕೃತಿಕ ಮಟ್ಟದಲ್ಲಿ ಎಂತಹ ಸ್ಥಾನ ಮಾನ ಹೊಂದಿದ್ದಾರೆ ಎನ್ನುವುದರ ಬಗ್ಗೆ ಗಮನ ಹರಿಸದಿರುವುದು ಕಂಡು ಬಂದಿದೆ.

ಶ್ರೀನಿವಾಸ್ ಎಲ್ (ಸಂ), ೨೦೧೧, ಡುಂಗ್ರಿ ಗರಾಸಿಯ ಬುಡಕಟ್ಟು "ಪರಿವರ್ತನೆಯ ಹಾದಿಯಲ್ಲಿ ಬುಡಕಟ್ಟು ಸಮಾಜಗಳು" ಮೇತ್ರಿ ಕೆ. ಎಂ, ಅವರು ಬರೆದ (ಲೇ) ಬುಡಕಟ್ಟುಗಳು ಕೇವಲ ಔಪಚಾರಿಕ ಶಿಕ್ಷಣದಿಂದ ಮಾತ್ರ ಪರಿವರ್ತನೆ ಹೊಂದುವುದಿಲ್ಲ ಅವರ ಅವಶ್ಯಕತೆಗಳು ಅನಿವಾರ್ಯತೆಗಳು ಮತ್ತು ಅನಿರಿಕ್ಷಿತವಾಗಿ ಬರುವ ಅವಕಾಶಗಳನ್ನು ಉಪಯೋಗಿಸಿಕೊಂಡು ಬದುಕನ್ನು ಕಟ್ಟಿಕೊಳ್ಳುತ್ತವೆ. ಎಂದಿದ್ದಾರೆ.

ಲಕ್ಕಪ್ಪಗೌಡ ಎಚ್ ಜಿ, (ಸಂ), ೨೦೦೦, ಕರ್ನಾಟಕ ಬುಡಕಟ್ಟುಗಳು ಸಂಪುಟ ಎರಡರಲ್ಲಿ ಡಾ. ಡಿ. ಆರ್. ಪಾಂಡುರಂಗ ಅವರು ಬರೆದ "ಮೇದರು" ಎಂಬ ದೀರ್ಘ (ಲೇ) ಮೇದಾರ ಸೃಷ್ಟಿ ಪುರಾಣ ಬುಡಕಟ್ಟಿನ ಮೂಲ ಪ್ರಸರಣ ನಲೆಗಳು, ಕುಲ, ಚಿಹ್ನೆಗಳು, ವಿವಾಹ, ಆರಾಧನೆ, ಆಚರಣೆ, ನಂಬಿಕೆ, ಧಾರ್ಮಿಕ ವಿಧಿ ವಿಧಾನಗಳು ಸೇರಿದಂತೆ ಮೇದರ ಸಂಸ್ಕೃತಿಯನ್ನು ಕುರಿತಂತೆ ಪರಿಚಯಿಸಿದ್ದಾರೆ.

ಮೇತ್ರಿ ಕೆ ಎಂ, ೨೦೦೨, ಅವರು ಬುಡಕಟ್ಟು ಕುಲ ಕಸುಬುಗಳು ಕೃತಿಯಲ್ಲಿ ಮೇದರ ಸಮಾನಾರ್ಥಕ ಪದಗಳು, ಮೀಸಲಾತಿ, ಕುಲ ಕಸುಬು, ಸಾಕ್ಷರತೆ ಇತ್ಯಾದಿಗಳ ಪರಿಚಯಾತ್ಮಕ ಅಂಶಗಳನ್ನು ವಿವರಿಸಿದ್ದಾರೆ.

ಹೇಮಲತಾ ಹೆಚ್.ಎಂ, ೨೦೧೨, ಮಹಿಳಾ ಸಶಕ್ತೀಕರಣ ಕೃತಿಯಲ್ಲಿ ಸಶಕ್ತೀಕರಣದ ಹುಟ್ಟು ಮತ್ತು ಅದರ ಬೆಳವಣಿಗೆಯ ಕುರಿತು ಮಾಹಿತಿ ನೀಡಿದ್ದಾರೆ. ಅಲ್ಲದೇ ಮಹಿಳಾ ಸಶಕ್ತೀಕರಣದ ವಿವಿಧ ಮಜಲುಗಳು, ಸಶಕ್ತೀಕರಣದ ತಂತ್ರಗಳು, ಪ್ರಕ್ರಿಯೆ, ಸಶಕ್ತೀಕರಣದ ಮಟ್ಟಗಳು, ತತ್ವಗಳು ಹಾಗೂ ಸಶಕ್ತೀಕರಣದ ಸೂಚಿಗಳ ಬಗ್ಗೆಯೂ ಬೆಳಕು ಚೆಲ್ಲುತ್ತದೆ. ಒಟ್ಟನಲ್ಲಿ ಮಹಿಳಾ ಸಶಕ್ತೀಕರಣದ ಪೂರ್ಣ ಪರಿಕಲ್ಪನೆ ಮತ್ತು ಸಶಕ್ತೀಕರಣವು ಬಡ ಮಧ್ಯಮ, ಮತ್ತು ಶ್ರೀಮಂತ ಮಹಿಳೆಯರೊಂದಿಗೆ ತೊಡಗಿಸಿಕೊಳ್ಳಬೇಕಾದ ವಿವಿಧ ತಂತ್ರಗಳ ಕುರಿತು ವಿಶ್ಲೇಷಣೆ ಇರುವುದು ಅಧ್ಯಯನಕ್ಕೆ ಪೂರಕವಾಗಿದೆ.

ಗುರುಲಿಂಗಯ್ಯ ಎಂ, ೨೦೦೪, 'ಬುಡಕಟ್ಟುಗಳು ಮತ್ತು ಅಭಿವೃದ್ಧಿ' ಕೃತಿಯಲ್ಲಿ ಭಾರತದ ಬುಡಕಟ್ಟುಗಳ ಪರಿಚಯ ಹಾಗೂ ಅವರ ಅಭಿವೃದ್ಧಿಗೆ ಸಂಬಂಧಿಸಿದ ಸಾಮಾಜಿಕ ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನಕ್ಕೆ ಸಂಬಂಧಿಸಿದ ಅಂಶಗಳ ಕುರಿತು ವಿವರವಾದ ವಿಶ್ಲೇಷಣೆ ಮಾಡಿದ್ದು ಜೊತೆಗೆ ಅವರ ನೈಜ ಸಮಸ್ಯೆಗಳ ಕುರಿತು ಬೆಳಕು ಚೆಲ್ಲಿರುವುದನ್ನು ಕಾಣಬಹುದು ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಅನೇಕ ಅಂಶಗಳ ಮೇಲೆ ವಿಶ್ಲೇಷಿಸಿರುವುದನ್ನು ನೋಡಬಹುದು.

ತಾರಿಹಳ್ಳಿ ಹನುಮಂತಪ್ಪ (ಸಂ), ೨೦೧೦, 'ಕರ್ನಾಟಕದ ಬುಡಕಟ್ಟು ಸಮುದಾಯಗಳು' ಕೃತಿಯಲ್ಲಿ ಡಾ. ಡಿ. ಮೀನಾಕ್ಷಿ (ಲೇ) 'ಕರ್ನಾಟಕ ಬುಡಕಟ್ಟು ಮಹಿಳೆಯರ ರಾಜಕೀಯ ಭಾಗವಹಿಸುವಿಕೆ' ಲೇಖನದಲ್ಲಿ ಬುಡಕಟ್ಟು ಮಹಿಳೆಯರು ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಸಾಮಾನ್ಯ ಮಹಿಳೆಯರಿಗಿಂತಲೂ ಹಿಂದುಳಿದಿದ್ದಾರೆ. ಸರಕಾರವು ಸಾಮಾನ್ಯ ಮಹಿಳೆಯರು ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ಮಹಿಳೆಯರಿಗಾಗಿ ಅನೇಕ ಯೋಜನೆಗಳನ್ನು ರೂಪಿಸುವ ಅಗತ್ಯವಿದೆ. ಹಾಗೆಯೇ ಕರ್ನಾಟಕದ ಬುಡಕಟ್ಟಿನ ಮಹಿಳೆಯರು ಸಹ ಸರ್ವತೋಮುಖ ಅಭಿವೃದ್ಧಿಯಿಂದ ದೂರವೇ ಉಳಿದಿದ್ದಾರೆ ಎಂದು ತಿಳಿಸಿದ್ದಾರೆ. ಕೆಲವು ಬುಡಕಟ್ಟು ಸಮುದಾಯಗಳ ಮಹಿಳೆಯರು ತಳಮಟ್ಟದ ರಾಜಕೀಯದಲ್ಲಿ ಪಾಲ್ಗೊಳ್ಳುತ್ತಿದ್ದಾರೆ ಎಂದಿದ್ದಾರೆ. ಚುನಾಯಿತ ಮಹಿಳೆಯರಿಗೆ ರಾಜಕೀಯ ಸಶಕ್ತಿಕರಣ, ಸಬಲೀಕರಣ ಗ್ರಹಿಕೆಗೆ ಭಾರದ ಪದಗಳಾಗಿರುವುದರಲ್ಲಿ ಆಚ್ಚರಿಪಡುವಂತಿಲ್ಲ. ಬುಡಕಟ್ಟು ಮಹಿಳೆಯರಿಗೆ ರಾಜಕೀಯ ತರಬೇತಿ ದೊರೆಯಬೇಕು ಇದರಿಂದ ಅವರಲ್ಲಿ ರಾಜಕೀಯ ಪ್ರಜ್ಞೆ ಬೆಳೆಯಲು

ಸಾಧ್ಯವಾಗಬಹುದು. ಪ್ರಜಾಪ್ರಭುತ್ವದ ತಿಳುವಳಿಕೆ ರಾಜಕೀಯವಾಗಿ ಭಾಗವಹಿಸುವುದು ನಿರ್ಧಾರಗಳನ್ನು ತೆಗೆದುಕೊಳ್ಳುವುದು ಮತ ಚಲಾಯಿಸುವುದರ ಪ್ರಾಮುಖ್ಯತೆಯನ್ನು ಗ್ರಹಿಸುವುದರ ಮೂಲಕ ರಾಜಕೀಯವಾಗಿ ಬುಡಕಟ್ಟು ಮಹಿಳೆಯರು ಸಶಕ್ತರಾಗಲು ಪ್ರಯತ್ನಿಸಬಹುದಾಗಿದೆ ಎಂದಿದ್ದಾರೆ.

'ಯೋಜನಾ' ೨೦೧೬. ಅಭಿವೃದ್ಧಿ ಮಾಸಪತ್ರಿಕೆಯಲ್ಲಿ 'ಸಬಲೀಕರಣದ ದಿಟ್ಟ ಹೆಜ್ಜೆ 'ಸ್ತ್ರೀಶಕ್ತಿ' ಶಶಿಕಲಾ ಯು.ಶೆಟ್ಟಿ (ಲೇ) ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯು ಮಹಿಳೆಯರನ್ನು ಹೇಗೆ ಸ್ವಾವಲಂಬನೆಯನ್ನಾಗಿಸುತ್ತದೆ ಎಂಬುದನ್ನು ಸ್ತ್ರೀಶಕ್ತಿ ಸ್ವ-ಸಹಾಯ ಗುಂಪುಗಳ ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಅಲ್ಲದೇ ಮಹಿಳೆಯರಲ್ಲಿ ನಾಯಕತ್ವ, ಸ್ವಾಭಿಮಾನ, ಸ್ವಾವಲಂಬನೆಯ ಬದುಕನ್ನು ರೂಪಿಸಲು ಈ ರೀತಿಯ ಯೋಜನೆಗಳು ಫಲಪ್ರದವಾಗುತ್ತವೆ ಎಂಬುದನ್ನು ತಿಳಿಸಿದ್ದಾರೆ. ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ಮಹಿಳೆಯನ್ನು ತೊಡಗಿಸುವುದರ ಮೂಲಕ ಬಡತನ ನಿವಾರಣೆ ಮಾಡುವುದರ ಜೊತೆಗೆ ಅವರಲ್ಲಿ ಆತ್ಮವಿಶ್ವಾಸದ ಸ್ವಾಭಿಮಾನದ ಬೆಳಕನ್ನು ಮೂಡಿಸುವಂತ ಜಾಗೃತ ಕಾರ್ಯಕ್ರಮಗಳನ್ನು ಹಾಕಿಕೊಂಡಾಗ ಮಾತ್ರ ಮಹಿಳೆಯರು ಸ್ವಾವಲಂಭಿಗಳಾಗುತ್ತಾರೆ ಎಂದು ವಿವರಿಸಿದ್ದಾರೆ.

ನಾಗರಾಜ ಎಂ, (ಸಂ) ೨೦೧೩, 'ಮಹಿಳಾ ವಿಮರ್ಶೆ' ಕೃತಿಯಲ್ಲಿ ಶ್ರೀನಿವಾಸ ವಾಡಪ್ಪಿರವರು ಬರೆದ 'ಮಹಿಳಾ ಸಬಲೀಕರಣಕ್ಕೊಂದು ಪ್ರಭಲಾಸ್ತ್ರ ಸ್ವಸಹಾಯ ಸಂಘಗಳು'(ಲೇ), ಒಂದೊಮ್ಮೆ ಸಬಲೆಯಾಗಿದ್ದ ಮಹಿಳೆ ಕಾರಣಾಂತರಗಳಿಂದ ಅಬಲೆಯಾಗಿ ಪ್ರಮುಖ ಸ್ಥಾನದಲ್ಲಿರಬೇಕಾದ ಮಹಿಳೆ ಹೀನಾಯ ಪರಿಸ್ಥಿತಿಗೆ ಬಂದು ಮಹಿಳೆ ಎರಡನೇಯ ದರ್ಜೆಯ ಸ್ಥಾನಮಾನಕ್ಕೆ ನೆಲೆಗೊಂಡಳು. ಈ ರೀತಿಯ ದೀರ್ಘವಾದ ವಿವರಣೆಯ ಹಿಂದಿರುವ ಉದ್ದೇಶ ಮಹಿಳಾ ಸಬಲೀಕರಣಕ್ಕಾಗಿ ಏನೆಲ್ಲಾ ಮಾಡಬಹುದು ಎಂಬುದನ್ನು ಸ್ವ ಸಹಾಯ ಸಂಘಗಳ ಪ್ರಾರಂಭಿಸುವ ನಿಟ್ಟಿನಲ್ಲಿ ಎದುರಾದಂತಹ ಸಮಸ್ಯೆಗಳ ನೆಲೆಗಳಲ್ಲಿ ವಿವರಿಸಿದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಮಹಿಳೆಯರು ಸಬಲೀಕರಣಗೊಳ್ಳಲು ಅಸ್ತ್ರವನ್ನಾಗಿ ಸ್ವ ಸಹಾಯಗಳನ್ನು ರಚಿಸಿಕೊಳ್ಳುವುದು ಇದು ಬದುಕಿಗೆ ಹೊಸ ಆಯಾಮ ಕೊಡುವ ಅಸ್ತ್ರವಾಗಿದೆ. ಇದನ್ನು ಕಾರ್ಯರೂಪಗೊಳ್ಳಬೇಕಾದರೆ ಮೊದಲು ನಾವು ಸಂಘಟಿತರಾಗಬೇಕು ಎಂಬುದನ್ನು ಒತ್ತಿ ಹೇಳಲಾಗುತ್ತಿದೆ. ಅಲ್ಲದೇ ಸಂಘಟಿತರಾಗುವುದರಿಂದ ಅದು ಸ್ವ-ನಿಯಂತ್ರಣಕ್ಕೆ ದಾರಿ ಮಾಡಿಕೊಡುತ್ತದೆ. ಇದರಿಂದ ಸ್ವ ನಿರ್ವಹಣೆಯ ಮುಂದಿನ ಹಂತವೇ ಸ್ವ ಪ್ರೇರಣೆ ತಾವಾಗಿಯೇ ಏನಾದರೂ ಸಾಧಿಸಬೇಕೆಂಬ ಛಲ, ಇದುವೆ ಸ್ವ-ಪ್ರಭುತ್ವದ ಬುನಾದಿಗೆ ನಾಂದಿ ಹಾಡುತ್ತದೆ. ಈ ಭದ್ರ ಬುನಾದಿಯ ಮೇಲೆ ಸಬಲೀಕರಣ ಸಾಧ್ಯವಾಗುತ್ತದೆ. ಹೀಗಾಗಿ ಮಹಿಳೆ ಅಭಿವೃದ್ಧಿಯಲ್ಲಿ ಮುಖ್ಯ ಭೂಮಿಕೆ ನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ವಿಶ್ಲೇಷಿಸಿದ್ದಾರೆ.

ಪ್ರಶಾಂತ್ ಎಚ್.ಡಿ (ಸಂ), ೨೦೧೭, ಮಹಿಳಾ ಸಬಲೀಕರಣವೆಂಬುದೆ ರಾಜಕಾರಣ ಎಂಬ ಕೃತಿಯಲ್ಲಿ ಎಚ್.ಡಿ ಪ್ರಶಾಂತ್ ಅವರು ಬರೆದ ಮಹಿಳಾ ಅಭಿವೃದ್ಧಿ ಮತ್ತು ಸಬಲೀಕರಣದ ಪ್ರಶ್ನೆಗಳು (ಲೇ) 'ಮಹಿಳೆಯರ ಅಭಿವೃದ್ಧಿ ದೃಷ್ಟಿಕೋನದಲ್ಲಿ ನೋಡುತ್ತಿರುವ ಕ್ರಮಗಳನ್ನು ಅರ್ಥಮಾಡಿಕೊಳ್ಳುವ ಬಗೆಯನ್ನು ತಿಳಿಸಿಕೊಡುತ್ತದೆ. ಅಲ್ಲದೇ ಅಭಿವೃದ್ಧಿ ಪ್ರಕ್ರಿಯೆಗಳು ಯಾರ

ಪರವಾಗಿವೆ? ಎಂಬುದನ್ನು ವಿಶ್ಲೇಷಿಸುವ ಜೊತೆಗೆ ಆರ್ಥಿಕ ಸಾಮಾಜಿಕ ಹಾಗೂ ಲಿಂಗ ಅಸಮಾನತೆಯು ಸೇರಿದಂತೆ ಇನ್ನೂ ಹಲವು ಸಾಮಾಜಿಕ ಬಿಕ್ಕಟ್ಟುಗಳಿಗೆ ಯಾವ ರೀತಿಯ ಪರಿಹಾರ ಕಂಡುಕೊಳ್ಳಬೇಕಿದೆ ಎಂಬುದನ್ನು ಅಭಿವೃದ್ಧಿಯಾತ್ಮಕ ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಕೃಷಿ ಭೂಮಿಯನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ಹೀಗೆ ಅದನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಹೇಗೆ ಹೋರಾಟ ಮಾಡಿದರು ಎಂಬುದನ್ನು ಮಹಿಳೆಯರ ಪಾಲ್ಗೊಳ್ಳುವಿಕೆಯ ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಇಲ್ಲಿ ಮುಖ್ಯ ಅಂಶವೇನೆಂದರೆ ರಾಜಕಾರಣವೆಂಬುದು ಹೇಗೆ ಸಮುದಾಯಗಳನ್ನು ಒಕ್ಕಲೆಬ್ಬಿಸುವುದು ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವಾಗಿದೆ.

ಮಂಜುನಾಥ ಬೇವಿನಕಟ್ಟಿ, ೨೦೧೬, 'ತಳಾದಿ' ಎಂಬ ಕೃತಿಯಲ್ಲಿ ಬುಡಕಟ್ಟು ಸಮುದಾಯಗಳಿಗೆ ಸಂಬಂಧಿಸಿದಂತೆ ವಿವಿಧ ಆಯಾಮಗಳನ್ನು ವಿವಿಧ ನೆಲೆಗಳಲ್ಲಿ ಚರ್ಚಿಸಿರುವುದನ್ನು ಕಾಣಬಹುದಾಗಿದೆ. ತಳಾದಿ ಸಮುದಾಯಗಳ ಸಾಂಸ್ಕೃತಿಕ ಮತ್ತು ದೈನಿಕ ಜೀವನದ ಎಲ್ಲೆಗಳನ್ನು ಗುರುತಿಸಿಕೊಡುತ್ತದೆ.

ರಾಚಪ್ಪಾಜಿ ಎಂ, ೨೦೧೧, 'ಮಹಿಳಾ ಸಬಲೀಕರಣ ಮತ್ತು ರಾಜಕೀಯ ಪ್ರಾತಿನಿಧಿತ್ವ' ಎಂಬ ಕೃತಿಯಲ್ಲಿ ಮಹಿಳೆಯರನ್ನು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಒಳಗೊಳ್ಳುವ ಪ್ರಕ್ರಿಯೆ ಇದಾಗಿರುತ್ತದೆ. ಪಂಚಾಯತ್ ರಾಜ್ ವ್ಯವಸ್ಥೆಯ ಮುಖಾಂತರ ಮಹಿಳೆಯರ ಸಬಲೀಕರಣ ಸಾಧ್ಯ. ಹಾಗೆಯೇ ಮಹಿಳಾ ಚಳುವಳಿಗಳಿಂದ ರಾಜಕೀಯ ಸ್ಥಿತಿಗತಿಗಳನ್ನು ಬದಲಾಯಿಸಲು ಕಾರಣವಾಗಿರುತ್ತದೆ. ಇಲ್ಲಿ ಮುಖ್ಯವಾಗಿ ಎಲ್ಲಾ ವರ್ಗದ ಮಹಿಳೆಯರು ರಾಜಕೀಯ ಕ್ಷೇತ್ರಗಳಲ್ಲಿ ಪಾಲ್ಗೊಂಡು ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಹೋರಾಟ ಅಥವಾ ಚಳುವಳಿ ಮಾಡಬೇಕಾಗಿರುತ್ತದೆ. ಮಹಿಳೆಯರ ಸಬಲೀಕರಣ ಹಾಗೂ ರಾಜಕೀಯ ಪ್ರಾತಿನಿಧಿತ್ವವನ್ನು ಪ್ರಧಾನವಾಗಿ ಕೇಂದ್ರಿಕರಿಸಲಾಗಿದೆ. ಇಲ್ಲಿ ರಾಜಕೀಯ ವ್ಯವಸ್ಥೆಯಲ್ಲಿ ಭಾಗವಹಿಸುವ ಹಾಗೂ ಪ್ರಾತಿನಿಧ್ಯವನ್ನು ಪಡೆದು ಸಬಲೀಕರಣ ಹೊಂದುವಂತಹ ಮಹಿಳೆಯ ಪಾತ್ರ ಬಹು ಪ್ರಮುಖವಾದುದಾಗಿರುತ್ತದೆ. ಆದ್ದರಿಂದಲೇ ಮಹಿಳೆಯರು ಕೂಡ ಪುರುಷರಷ್ಟೇ ಆಡಳಿತವನ್ನು ನಿರ್ವಹಿಸುತ್ತಿದ್ದಾರೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಭವ್ಯ ಹೆಚ್ ಪಿ, ೨೦೧೩, 'ಮಹಿಳಾ ಸ್ವ-ಸಹಾಯ ಸಂಘಗಳು ಮತ್ತು ಆರ್ಥಿಕ ಸಬಲೀಕರಣ' ಕೃತಿಯಲ್ಲಿ ಮಹಿಳೆಯರ ಸ್ವಯಂ ನಿರ್ಧಾರಕ್ಕೆ ಸಂಬಂಧಿಸಿದಂತೆ ವಿವಿಧ ಆಯಾಮಗಳೊಂದಿಗೆ ವಿವರಿಸಲಾಗಿದ್ದು, ಮಹಿಳೆಯರು ಸ್ವಯಂ ಪ್ರೇರಿತವಾಗಿ ಕೂಡಿಕೊಂಡು ಗುಂಪುಗಳನ್ನು ರಚಿಸಿ ತಾವೇ ಸಬಲೀಕರಣಗೊಳ್ಳುವ ಮೂಲಕ ತಮ್ಮ ಅಸ್ತಿತ್ವವನ್ನು ಭದ್ರಗೊಳಿಸಿಕೊಳ್ಳಬೇಕು ಎಂಬುದನ್ನು ತಿಳಿಸಿಕೊಡುತ್ತದೆ. ಅಲ್ಲದೇ ಮಹಿಳೆಯರು ಸ್ವಯಂ ಆಗಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಮತ್ತು ರಾಜಕೀಯವಾಗಿ ಸಮರ್ಥವಾಗಿ ಪಾಲ್ಗೊಂಡು ನಿರ್ಧಾರ ನಿರ್ಣಯ ತೆಗೆದುಕೊಳ್ಳುವಂತಹ ಹಂತ ತಲುಪಿದಾಗ ಮಾತ್ರ ಮಹಿಳೆಯರು ಅಭಿವೃದ್ಧಿ, ಸಬಲೀಕರಣ ಹೊಂದಲು ಸಾಧ್ಯ. ಹೀಗೆ ಇನ್ನೂ ಅನೇಕ ಮಹಿಳಾ ಸಬಲೀಕರಣದ ವಿವಿಧ ಮಜಲುಗಳನ್ನು ತಿಳಿಸಿಕೊಟ್ಟಿದ್ದಾರೆ.

ಶಿವಚಿತ್ತಪ್ಪ ಕೆ, ೨೦೧೦, 'ಮಹಿಳಾ ಸಬಲೀಕರಣ' ಎಂಬ ಕೃತಿಯಲ್ಲಿ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸದಂತೆ ವಿವಿಧ ಆಯಾಮಗಳನ್ನು ವಿವರಿಸಿದ್ದಾರೆ. ಅಲ್ಲದೇ ಮಹಿಳೆಯರ ಸ್ಥಿತಿಗತಿಗಳು

ಅಂದು-ಇಂದು ಹೇಗಿವೆ? ಎಂಬುದನ್ನು ವಿಶ್ಲೇಷಿಸುವ ಮೂಲಕ ಮಹಿಳೆಯರಿಗೆ ಇರುವ ಎಲ್ಲಾ ಅವಕಾಶ, ಯೋಜನೆಗಳನ್ನು ಈ ಕೃತಿಯಲ್ಲಿ ವಿವರಿಸಿದ್ದಾರೆ.

ನಾಗರಾಜ ಎಸ್, ರಾಚಪ್ಪಾಜಿ ಎಂ. (ಸಂ). ೨೦೧೦. 'ಮಹಿಳಾ ಸಬಲೀಕರಣದ ವಿವಿಧ ಹೆಜ್ಜೆಗಳು' ಕೃತಿಯಲ್ಲಿ ಇಡಿ ಆದಿವಾಸಿ ಸಮುದಾಯಗಳನ್ನು ಒಳಗೊಂಡಂತೆ ಎಲ್ಲಾ ವರ್ಗದ ಮಹಿಳೆಯರ ಸಬಲೀಕರಣದ ದೃಷ್ಟಿಕೋನದಲ್ಲಿ ವ್ಯಕ್ತವಾಗಿರುವ ವಿವಿಧ ಲೇಖನಗಳಲ್ಲಿ ಮೂಡಿ ಬಂದಿರುವ ವಿಷಯಗಳು ಅಧ್ಯಯನಕ್ಕೆ ನೆರವಾಗಿರುತ್ತವೆ. ಅಲ್ಲದೇ ಸಬಲೀಕರಣಕ್ಕೆ ಪುಷ್ಠಿ ನೀಡುವಲ್ಲಿ ಸಹಕಾರಿಯಾಗಿವೆ. ಇದರಲ್ಲಿ ಮುಖ್ಯವಾಗಿ ಆದಿವಾಸಿ ಸಮುದಾಯದ ಮಹಿಳೆಯರು ದುಃಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಇದರಿಂದ ಅವರು ಹೊರ ಬಂದು ಆಧುನಿಕ ಪ್ರಪಂಚಕ್ಕೆ ಅಣಿಯಾಗುವ ಪ್ರಯತ್ನ ಮಾಡಬೇಕಾಗುತ್ತದೆ. ಅಂದರೆ 'ಬುಡಕಟ್ಟು ಸಮುದಾಯದ ಮಹಿಳೆಯರು ಸಬಲೀಕರಣ'ದ ಅವಕಾಶಗಳನ್ನು ಬಳಸಿಕೊಳ್ಳುವ ಮೂಲಕ ಅಭಿವೃದ್ದಿ ಹೊಂದಬೇಕಾಗಿದೆ ಎಂದು ತಿಳಿಸಿದ್ದಾರೆ.

ರಾಜಶೇಖರ ಹತಗುಂದಿ, (ಸಂ), ೨೦೧೧, "ಸಂಸ್ಕೃತಿ ಮಹಿಳಾ ಮಾಲಿಕೆ" ಕೃತಿಯಲ್ಲಿ ವಿವಿಧ ಬುಡಕಟ್ಟು ಸಮುದಾಯಗಳನ್ನು ಪರಿಚಯಿಸುವುದರ ಜೊತೆಯಲ್ಲಿಯೇ 'ಬುಡಕಟ್ಟು ಮಹಿಳೆಯರ ಸಾಂಸ್ಕೃತಿಕ ಹಾಗೂ ಸಾಮಾಜಿಕ ಸ್ಥಾನಮಾನವನ್ನು ಕುರಿತಂತೆ ವಿವಿಧ ದೃಷ್ಟಿಕೋನಗಳ ಮೂಲಕ ವಿವರಿಸಿದ್ದಾರೆ. ಅಲ್ಲದೇ ಮಹಿಳೆಯರ ಕೌಟುಂಬಿಕ ಸ್ಥಾನಮಾನ, ಅವರ ಸ್ಥಿತಿಗತಿಗೆ ಸಂಬಂಧಿಸಿದಂತೆ ವಿವರಿಸಿದ್ದು, ಸಮುದಾಯದ ಮಹಿಳೆಯರ ಸ್ಥಾನಮಾನಗಳನ್ನು ಇತರೇ ಬುಡಕಟ್ಟು ಮಹಿಳೆಯರ ಸ್ಥಾನಮಾನಗಳಿಗೆ ಇರುವ ಹೋಲಿಕಾತ್ಮಕ ಅಂಶಗಳನ್ನು ಪತ್ತೆ ಹಚ್ಚಲು ಸಹಕಾರಿಯಾಗಿದೆ. ಇಲ್ಲಿ ಗಮನಿಸಬೇಕಾದ ಅಂಶ ಏನೆಂದರೆ, ಈ ಪುಸ್ತಕದಲ್ಲಿ ನೋಡಲಾಗಿರುವ ಬುಡಕಟ್ಟು ಸಮುದಾಯದ ಎಲ್ಲಾ ಕುಟುಂಬದಲ್ಲಿ ಮಹಿಳೆ ಪ್ರಮುಖ ಜವಬ್ದಾರಿಗಳನ್ನು ಹೊರುವುಳಾದರೂ ಅವಳ ಸ್ಥಾನವೇನು ಗಂಡಿಗೆ ಸಮನಾಗಿಲ್ಲ ಎಂಬುದು ವಿವಿಧ ಚಿಂತಕರುಗಳ ಲೇಖನಗಳ ಮೂಲಕ ತಿಳಿಯಲಾಗಿದೆ.

ವೆಂಕಟಗಿರಿ ದಳವಾಯಿ(ಸಂ), ೨೦೦೮, 'ಸಂಸ್ಕೃತಿ ಮಹಿಳಾ ಮಾಲಿಕೆ' ಕೃತಿಯಲ್ಲಿ ಡಾ. ಸಿದ್ದಪ್ಪ ಬೆಳಗಟ್ಟಿ ಅವರು ಬರೆದ ಬೇಡ ಸಮುದಾಯ: ಸಂಸ್ಕೃತಿ ಮಹಿಳೆ ಶ್ರಮಜೀವಿ, ಕೌಟುಂಬಿಕ ಜೀವನದಲ್ಲಿ ಸಂಸಾರವನ್ನು ಜವಬ್ದಾರಿಯಿಂದ ನೋಡಿಕೊಳ್ಳುವುದಲ್ಲದೇ, ಕುಟುಂಬದ ಬೇಕು-ಬೇಡಗಳ ಬಗ್ಗೆ ಅವಳಿಗೆ ಸರಿಯಾದ ಪ್ರಜ್ಞೆ ಇರುವುದಲ್ಲದೇ ಮನೆಯ ಒಡೆತನವನ್ನು ಮಹಿಳೆ ವಹಿಸಿಕೊಂಡು ತಾನೇ ಮನೆ ಜವಬ್ದಾರಿ ನಿಭಾಯಿಸುತ್ತಾಳೆ. ಇದು ಇತ್ತೀಚಿನ ಬೆಳವಣಿಗೆ ಆಗಿದೆ ಎಂದರೆ ತಪ್ಪಾಗಲಾರದು.

ವಾಸುದೇವ ಬಡಿಗೇರ, ೨೦೦೭, "ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ" ಎಂಬ ಕೃತಿಯಲ್ಲಿ ಬಳ್ಳಾರಿ ಪರಿಸರದ ಭೌಗೋಳಿಕತೆ, ಪೌರಾಣಿಕ ಹಿನ್ನೆಲೆ, ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಹಿನ್ನೆಲೆಗಳನ್ನು ವಿವರಿಸಿದ್ದಾರೆ.

ಒಡೆಯರ್ ಡಿ. ಹೆಗ್ಗಡೆ, ಅನ್ನಪೂರ್ಣೇಶ್ವರಿ ಎನ್. ೨೦೦೩, "ಮಹಿಳಾ ಅಧ್ಯಯನಗಳು ಆರ್ಥಿಕ ನೆಲೆಗಳು ಮತ್ತು ಆಯಾಮಗಳು"ಎಂಬ ಕೃತಿಯಲ್ಲಿ ಮಹಿಳೆಯರ ಬದುಕಿನ ಕ್ರಮದ ಕುರಿತು

ವಿಶ್ಲೇಷಿಸಿರುವುದಲ್ಲದೇ ಆಧುನಿಕ ವಿದ್ಯಮಾನಗಳು ಹೇಗೆ ಮಹಿಳೆಗೆ ಅತ್ಯಾಧುನಿಕ ಸಮಸ್ಯೆಗಳನ್ನು ತಂದೊಡ್ಡಿವೆ ಎಂಬುದರ ಕುರಿತು ಮಾಹಿತಿ ನೀಡುತ್ತದೆ. ಮಹಿಳೆಯರನ್ನು ಇದೀಗ ಸಾಮಾಜಿಕ ಹೊಣೆಗಾರಿಕೆಗೂ ತರಲಾಗಿದೆ. ಆಕೆಗೆ ವಿದ್ಯೆ ನೀಡಲಾಗುತ್ತಿದೆ. ವಿದ್ಯೆ ಕಲಿತದ್ದರ ಪರಿಣಾಮ ಎಂದರೆ ಸ್ತ್ರೀ ಎರಡೂ ಕಡೆ ದುಡಿಯುವಂತಾಗಿದೆ ಮೊದಲು ಬದುಕಿನ ಬಂಡಿಯ ಒಂದುಕಡೆಯ ನೊಗವನ್ನು ಹೋರಬೇಕಾಗಿದ್ದ ಮಹಿಳೆ ಈಗ ಅದೇ ಬಂಡಿಯ ನೊಗದ ಎರಡು ಭಾಗಗಳನ್ನು ಹೋರುವ ದುಸ್ಥಿತಿ ಬಂದು ಆಕೆಗೆ ಇನ್ನು ಭಾರವಾದಂತಿದೆ. ಇಂತಹ ಇಕ್ಕಟ್ಟಿನ ಸಂಗತಿಗಳ ಹಿನ್ನೆಲೆಯಲ್ಲಿ ಸಿಲುಕಿರುವ ಮಹಿಳೆಯರ ಬದುಕಿನ ನಾನಾ ಆಯಾಮಗಳನ್ನು ಈ ಕೃತಿಯಲ್ಲಿ ವಿವರಿಸಿದ್ದಾರೆ.

ವಿರುಪಾಕ್ಷಿ ಪೂಜಾರಹಳ್ಳಿ, ೨೦೦೭, ಸಂಪಾದಕತ್ವದ "ಪೆರಿಯಾರರ ವಿಚಾರಧಾರೆ" ಕೃತಿಯಲ್ಲಿ ಸ್ತ್ರೀಯರಿಗೆ ಎಷ್ಟು ಸ್ವಾತಂತ್ರ್ಯವನ್ನು ಕೊಟ್ಟಿದ್ದೇವೆ ಎಂಬ ಲೇಖನದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯದ ಬಗ್ಗೆ ಸಾಕಷ್ಟು ತಿಲುವಳಿಕೆ ಸಿಕ್ಕಿಲ್ಲ. ಸ್ವಾತಂತ್ರ್ಯದಲ್ಲಿ ಅಭಿಮಾನವಾಗಲಿ, ನಂಬಿಕೆಯಾಗಲಿ ಬರುವಂತೆ ಈ ವರೆಗೆ ಯಾವ ಬಗೆಯ ಪ್ರಯತ್ನವೂ ನಡೆದಿಲ್ಲವೆಂದರೆ ತಪ್ಪಾಗಲಾರದು ಅದಿರಲಿ ಚಿಂತನೆಯಲ್ಲಾದರೂ ಸ್ವತಂತ್ರಳೆಂದು ನಿರಂಕುಶಮತಿಯಿಂದ ಯೋಚಿಸುವ ಅವಕಾಶವನ್ನಾದರು ಕಲ್ಪಿಸಲಾಗಿದೆಯೇ ? ಹೀಗೆ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಅನೇಕ ಪ್ರಶ್ನೆಗಳನ್ನು ವಾಸ್ತವದ ನೆಲೆಯುಲ್ಲಿ ಪ್ರತಿಬಿಂಬಿಸುವಂತವುಗಳಾಗಿವೆ. ಅಲ್ಲದೇ ಪೆರಿಯಾರರ ದೃಷ್ಟಿಯಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಅನೇಕ ಲೇಖನಗಳನ್ನು ಈ ಪುಸ್ತಕದಲ್ಲಿ ಕಾಣಬಹುದಾಗಿದ್ದು ಮುಖ್ಯವಾಗಿ ಹೆಂಗಸರಿಗೆ ಸಮಾನಹಕ್ಕು ನೀಡಬಹುದೇ? ಹಿಂದೂ ಧರ್ಮದಲ್ಲಿ ಮಹಿಳೆಯರ ಸ್ಥಾನಮಾನ, ಹೆಂಗಸರನ್ನು ಹೀಗೆಳೆಯುವ, ಮೂಲಕ ಲೇಖನಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿದ ವಿಚಾರಧಾರೆಗಳನ್ನು ವಿಶ್ಲೇಷಿಸಿದ್ದಾರೆ.

ಸರೋಜ ಕೆ, ೨೦೦೧, "ಮಹಿಳೆ ಮತ್ತು ಆರೋಗ್ಯ" ಕೃತಿಯಲ್ಲಿ ಮಹಿಳೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ವಿಷಯುಗಳ ಬಗ್ಗೆ ಹೇಗೆ ಪುರುಷರನ್ನು ಅವಲಂಭಿಸಿದ್ದಾರೆ ಜೊತೆಗೆ ನಿರ್ಣಯತೆಗೆದುಕೊಳ್ಳುವಲ್ಲಿನ ವಿಚಾರಗಳನ್ನು ಹೇಳಿದ್ದಾರೆ. ಅಂದರೆ ನಮ್ಮ ಸಮಾಜದಲ್ಲಿ ಹಾಗೂ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿರುವ ಲಿಂಗ ಸಮಾನತೆಯಿಂದಾಗಿ ಮತ್ತು ಸ್ತ್ರೀ ಜೀವನ ವಿರೋಧಿಯಾದ ಧಮನಕಾರಿ ಮೌಲ್ಯಗಳಿಂದಾಗಿ ಮಹಿಳೆಯರಿಗೆ ಮತ್ತು ಆರೋಗ್ಯಕ್ಕೆ ಸಂತಾನೋತ್ಪತ್ತಿಗೆ ತಮ್ಮ ಸ್ವಂತ ದೇಹಕ್ಕೆ ಸಂಬಂಧಿಸಿದ ಅನೇಕ ವಿಷಯಗಳಲ್ಲಿ ನಿರ್ಧಾರತೆಗೆದುಕೊಳ್ಳುವ ಸರಿಯಾದ ಸಂಪೂರ್ಣ ಹಕ್ಕು ಹಾಗೂ ಆಯ್ಕೆಗಳಿಲ್ಲ ಜೊತೆಗೆ ಸ್ತ್ರೀಯರ ಮೂಲಭೂತ ಅಗತ್ಯಗಳನ್ನು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನಿರ್ಲಕ್ಷಿಸಲಾಗಿದೆ. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ, ಹಾಗೂ ಕೌಟುಂಬಿಕ ಲಿಂಗ ಅಸಮಾನತೆಯ ಸ್ತ್ರೀಯರ ಸಾಮಾಜಿಕ ಮತ್ತು ವಸ್ತು ಸ್ಥಿತಿಗಳನ್ನು ಮಹಿಳೆಯರ ಅನುಭವಾತ್ಮಕ ನೆಲೆಯಿಂದ ಪರಿಶೀಲಿಸಿದ್ದಾರೆ.

ಮಂಜುನಾಥ ಬೇವಿನಕಟ್ಟಿ, ೨೦೦೯, ಸಂಪಾದಕತ್ವದ "ವಾಲ್ಮೀಕಿ ಸಮುದಾಯ" ಕೃತಿಯಲ್ಲಿ ಉಳ್ಳೇಶ್ವರಪ್ಪ ಎಂ. ಅವರು ಬರೆದ 'ಹೊಸಪೇಟೆ ತಾಲೂಕಿನ ಬೇಡ ಸಮುದಾಯದ ಮಹಿಳೆ" ಎಂಬ ಲೇಖನದಲ್ಲಿ

ಬೇಡ ಸಮುದಾಯದ ಮಹಿಳೆಯರು ಸಂಸಾರದ ಆರ್ಥಿಕ ಸಾಮಾಜಿಕ ಜೀವನದಲ್ಲಿ ನಿರ್ಣಾಯಕ ಸಂದರ್ಭದಲೆಲ್ಲಾ ಗಂಡಸರಿಗಿಂತ ಮಹಿಳೆಯರ ಪಾತ್ರ ಮುಖ್ಯ ಎಂದಿದ್ದಾರೆ ಅಲ್ಲದೇ ಅವರು ಮುಖ್ಯವಾಗಿ ತರಕಾರಿ ಮಾರುವ, ಗಣಿಗಾರಿಕೆ, ಕೃಷಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾ ಇಡಿ ಸಾಂಸಾರಿಕ ಜೀವನವನ್ನು ನಡೆಸುತ್ತಾಳೆ ಎಂಬ ಅಂಶಗಳನ್ನು ಉಲ್ಲೇಖಿಸಿದ್ದಾರೆ. ಈ ನಿಟ್ಟಿನಲ್ಲಿ ಬೇಡ ಮಹಿಳೆಯರ ಸ್ಥಾನಮಾನ ಹೇಗಿದೆ ಮತ್ತು ಈ ಸಮುದಾಯದ ಮಹಿಳೆ ಸ್ವತಂತ್ರವಾಗಿ ಸಮರ್ಥವಾಗಿ ಬೆಳೆಯಲು ಕಾರಣವಾದ ಅಂಶಗಳನ್ನು ಪತ್ತೆಹಚ್ಚಲು ಪೂರಕವಾಗಿದೆ.

ಅನಸೂಯ ಕದಂ, ೨೦೧೧, "ಮಹಿಳಾ ಶೋಷಣೆಯ ನೆಲೆಗಳು" ಕೃತಿಯಲ್ಲಿ ಸ್ತ್ರೀ ಪುರುಷರ ನಡುವಿನ ಅಸಮಾನತೆಗಳನ್ನು ಸಾಮಾಜಿಕ ನಂಬಿಕೆಗಳು ಮತ್ತು ಸಾಮಾಜಿಕ ನಿಯಮಗಳು ಎಂಬುದಾಗಿ ಪುರುಷ ಪ್ರಧಾನವ್ಯವಸ್ಥೆ ನಿರ್ಧರಿಸಿದೆ. ಇದನ್ನು ಮಹಿಳೆಯ ಮೇಲೆ ಅಧಿಕಾರ, ದಮನ, ದಬ್ಬಾಳಿಕೆ ಬಳಸಿಕೊಂಡಿದೆ ಈ ರೀತಿ ಎಲ್ಲಾ ಅಂಶಗಳನ್ನು ಈ ಕೃತಿಯಲ್ಲಿ ಕಾಣಬಹುದು ಅಲ್ಲದೇ ಇವುಗಳಿಂದ ಹೊರಬರಲು ಮಹಿಳೆಯರಿಗೆ ಸಾಕಷ್ಟು ಪ್ರಮಾಣದ ಸಮಾನ ಉದ್ಯೋಗವಕಾಶಗಳನ್ನು ಕಲ್ಪಿಸುವಂತಹ ಮತ್ತು ಮಹಿಳೆಯರ ಸ್ಥಾನಮಾನಗಳನ್ನು ಉನ್ನತೀಕರಿಸುವಂತಹ ಪ್ರಯತ್ನಗಳು ನಡೆದಿವೆ ಎಂಬುದರ ಕುರಿತು ಮಹಿಳೆಯರಿಗೆ ಸಂಬಂಧಿಸಿದ ಅನೇಕ ಕಾರ್ಯಕ್ರಮಗಳ ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ.

ಜಯರಾಮ ಕೆ. (ಸಂ), ೨೦೧೫, ಜೆನಿಗೆ ತ್ರೈಮಾಸಿಕ ಪತ್ರಿಕೆಯಲ್ಲಿ ಮೇತ್ರಿ ಕೆ.ಎಂ, ಅವರು ಬರೆದ "ಕರ್ನಾಟಕದ ಏಕೀಕರಣ ಮತ್ತು ಬುಡಕಟ್ಟುಗಳು' ಎಂಬ ಲೇಖನದಲ್ಲಿ ಬುಡಕಟ್ಟುಗಳಿಗೆ ಸಂಬಂಧಿಸಿದಂತೆ ಅನೇಕ ವಿಷಯಗಳನ್ನು ದಾಖಲೆ ಸಮೇತ ಉಲ್ಲೇಖಿಸಿದ್ದು ಮುಖ್ಯವಾಗಿ ಬುಡಕಟ್ಟುಗಳು ಯಾರು ಎಂಬುವುದರಿಂದಿಡಿದು ಕರ್ನಾಟಕದ ಒಟ್ಟು ಬುಡಕಟ್ಟುಗಳ ಜನಸಂಖ್ಯೆಯನ್ನು ೨೦೧೧ರ ಜನಗಣತಿಯ ಪ್ರಕಾರ ದಾಖಲಿಸಿದ್ದಾರೆ.

ಯರಿಸ್ವಾಮಿ ಈ (ಸಂ), ೨೦೧೫, 'ಅಚಲ' ಮಹಿಳಾ ಅಧ್ಯಯನ ತ್ರೈಮಾಸಿಕ ಪತ್ರಿಕೆಯಲ್ಲಿ ಸುರೇಖಾ ರಾಥೋಡ್ ಅವರು ಬರೆದ ಅಂಗ ವೈಕಲ್ಯವನ್ನು ಮೆಟ್ಟಿಬೆಳೆದ ಗಂಗಮ್ಮ (ಸಂದರ್ಶನ) ಎಂಬ ಲೇಖನದಲ್ಲಿ ಗಂಗಮ್ಮಳು ಅಂಗವೈಕಲ್ಯವನ್ನು ಹೊಂದಿದ್ದರೂ ಎಲ್ಲರಿಗೆ ಉದಾಹರಣೆಯಾಗುವಂತೆ ಬೆಳೆದು ನಿಂತ ಬುಡಕಟ್ಟು ಮಹಿಳೆ. ಗಂಗಮ್ಮಳು ಮೂಲತಹ ಹೊಸಪೇಟೆಯ ಬಾಣದಕೇರಿಯಯವರು ಕೊನೆಯ ಮಗಳಾದ ಗಂಗಮ್ಮ ಪೋಲಿಯೋದಿಂದ ಎರಡು ಕಾಲುಗಳನ್ನು ಕಳೆದುಕೊಂಡರು ಹೀಗಿದ್ದರೂ ಗಂಗಮ್ಮಳು ತಾಯಿಗೆ ಭಾರವಾಗದೇ ತಾನು ಕೂಡ ಸಮರ್ಥಳಾಗಿ ದುಡಿಯಬಲ್ಲೆ ತನ್ನನ್ನು ತಾನು ನೋಡಿಕೊಳ್ಳುವುದಲ್ಲದೇ ಕುಟುಂಬಕ್ಕೂ ನೆರವಾಗಬಲ್ಲೆ ಎಂದು ಸಮರ್ಥಿಸಿದ್ದಾಳೆ. ಅಲ್ಲದೇ ಇವರ ತಾಯಿಯೂ ಸಹ ಮಕ್ಕಳಿಗೆ ಉನ್ನತ ಶಿಕ್ಷಣವನ್ನು ಕೊಡಿಸಿ ತಾವು ಸಹ ಕೃಷಿಯಲ್ಲಿ ನಿರತರಾಗಿ ಆರ್ಥಿಕವಾಗಿ ಸಬಲರಾಗುವತ್ತ ಸಾಗುತ್ತಿರುವುದು ಇತರ ಮಹಿಳೆಯರಿಗೆ ಮಾದರಿಯಾಗಿದ್ದಾರೆ. ನಮ್ಮ ಸಮಾಜದಲ್ಲಿ ಸಧೃಡ ದೇಹವನ್ನು ಹೊಂದಿದ್ದ ಮಹಿಳೆಯು ಪುರುಷ ಪ್ರಧಾನ ಸಂಕೋಲೆಗಳಿಂದ ಪೂರ್ತಿಯಾಗಿ ಬಿಡುಗಡೆಗೊಳ್ಳದೆ ಅದರಲ್ಲಿಯೇ ಹಿಂಸೆಯನ್ನು

ಅನುಭವಿಸುತ್ತಾ ಜೀವನವನ್ನು ಸಾಗಿಸುತ್ತಿದ್ದಾಳೆ. ಇಂತಹ ಪಿತೃ ಪ್ರಧಾನ ಸಮಾಜದಲ್ಲಿ ಅಂಗವಿಕಲೆಯನ್ನು ಹೊಂದಿದ ಮಹಿಳೆ ಬದುಕುವುದು ಕಷ್ಟಕರ ಅಂಗವೈಕಲ್ಯವನ್ನು ವೈಕಲ್ಯವೆನ್ನದೆ ಅದನ್ನೇ ಒಂದೇ ಸಾಧನ ಮಾರ್ಗ ಮಾಡಿಕೊಂಡು ಜೀವನವನ್ನು ಹೇಗೆ ನಿರ್ವಹಿಸಬೇಕು ಎಂಬುದಕ್ಕೆ ಇತರರಿಗೆ ಮಾದರಿ ಎನ್ನಬಹುದು.

ಉಮೇಶ ಎಚ್ ಎಸ್, (ಸಂ), ೨೦೧೪, 'ಅರುಹು ಕುರುಹು' ಕನ್ನಡ ತ್ರೈಮಾಸಿಕ ಪತ್ರಿಕೆಯಲ್ಲಿ ರಾಧಮಣಿ ಟಿ ಆರ್ ಅವರು ಬರೆದ "ಡುಂಗ್ರಿಗರಾಸಿಯಾ ಬುಡಕಟ್ಟಿನ ಸಾಂಸ್ಕೃತಿಕ ಆಸ್ಮಿತೆ" ಎಂಬ ಲೇಖನದಲ್ಲಿ ಈ ಬುಡಕಟ್ಟಿನ ಮಹಿಳೆಯು ತನ್ನ ಸ್ಥಾನಮಾನ ಉತ್ತಮಪಡಿಸಿಕೊಳ್ಳಲು ತನ್ನ ನಿರಂತರ ಬದುಕಿನ ಜಂಜಾಟದಲ್ಲಿ ಆಕೆ ಇನ್ನೂ ಅಸಾಯಕಳಾಗಿಯೇ ಉಳಿದಿರುವುದು ವಿಪರ್ಯಾಸವೇ ಸರಿ. ಇಂದಿಗೂ ಈ ಬುಡಕಟ್ಟು ಸಮುದಾಯದಲ್ಲಿ ತಾನು ಗಂಡಿಗಿಂತ ಕಡಿಮೆ ಏನು ಇಲ್ಲ ಎಂದು ಸಾಬೀತುಪಡಿಸುವ  ನಿರಂತರತೆಯಲ್ಲಿ ಇಂದಿಗೂ ಹೆಣಗಾಡುತ್ತಿರುವುದನ್ನು ಕಾಣಬಹುದಾಗಿದ್ದು ಈ ನಿಟ್ಟಿನಲ್ಲಿ ಸಮುದಾಯದ ಮಹಿಳೆಯರ ಸ್ಥಾನಮಾನ ತಿಳಿದುಕೊಳ್ಳಲು ಸಹಾಯಕವಾಗುವುದಲ್ಲದೇ ಮಹಿಳೆಯರ ಅಭಿವೃದ್ಧಿಗಾಗಿ ಏನೆಲ್ಲಾ ಕಾರ್ಯಕ್ರಮಗಳನ್ನು ಕೊಡಬಹುದು ಎಂಬ ಅಂಶಗಳನ್ನು ತಿಳಿಸಿದ್ದಾರೆ.

ಚೆನ್ನಮ್ಮ ಕೆ.ಸಿ, ೨೦೧೦, 'ಮಹಿಳೆಯ ದುಡಿಮೆ ಏಕರೂಪತೆಯ ಪ್ರಶ್ನೆ' ಎಂಬ ಕಿರುಹೊತ್ತಿಗೆಯಲ್ಲಿ ಮಹಿಳೆಯರ ಆರ್ಥಿಕತೆಗೆ ಸಂಬಂಧಿಸಿದ ನೆಲೆಯಲ್ಲಿ ಬುಡಕಟ್ಟು ಮಹಿಳೆಯರನ್ನು ಕೇಂದ್ರಿಕರಿಸಿಕೊಂಡು ಅವರ ದುಡಿಮೆಯ ವಿವಿಧ ಅಂಶಗಳನ್ನು ನೀಡಿದ್ದಾರೆ. ತರಕಾರಿ ಮಾರುವ ಮಹಿಳೆಯ ಜೀವನವನ್ನು ಉತ್ತಮಗೊಳಿಸುವ ಮತ್ತು ಆರ್ಥಿಕ ಅವಕಾಶಗಳು ಸ್ವಾತಂತ್ರ್ಯಗಳು ಯಾವುವು? ಯಾವ ವಿಷಯ ಅವರ ಸಾಮಾರ್ಥ್ಯವನ್ನು ಹೆಚ್ಚಿಸುವಂಥದ್ದಾಗಿದೆ. ಯಾವುದು ಅವರಿಗೆ ಪ್ರತಿಕೂಲವಾಗಿದೆ ಅದನ್ನು ಪರಿಹರಿಸಿಕೊಳ್ಳಲು ಅವರು ಕಂಡುಕೊಂಡ ಉಪಾಯ ಯಾವುದು ? ಈ ಸ್ಥಿತಿಯಲ್ಲಿ ಅವರ ಮಾರುಕಟ್ಟೆಯ ಸವಾಲುಗಳು ಯಾವುವು? ಎಂಬ ಪ್ರಶ್ನೆಗಳನ್ನು ಇಟ್ಟುಕೊಂಡು ಅವುಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ಒಟ್ಟಿನಲ್ಲಿ ತರಕಾರಿ ಮಾರುವ ಕೆಲಸದಲ್ಲಿ ತೊಡಗಿರುವ ಮಹಿಳೆಯರು ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ.

ಹೇಮಲತಾ ಎಚ್ ಎಂ, ೨೦೦೩ 'ಮಹಿಳಾ ಸಶಕ್ತೀಕರಣ' ಕೃತಿಯಲ್ಲಿ ಸಶಕ್ತೀಕರಣದ ಹುಟ್ಟು ಮತ್ತು ಬೆಳವಣಿಗೆಯ ಕುರಿತು ವಿವರಿಸಿದ್ದಾರೆ. ಅಲ್ಲದೇ ಮಹಿಳಾ ಸಶಕ್ತೀಕರಣದ ವಿವಿಧ ಮಜಲುಗಳು, ತಂತ್ರಗಳು, ಪ್ರಕ್ರಿಯೇ, ಸಶಕ್ತೀಕರಣದ ಮಟ್ಟ, ತತ್ವಗಳು, ಹಾಗೂ ಸಶಕ್ತೀಕರಣದ ಸೂಚಿಗಳ ಬಗ್ಗೆ ತಿಳಿಸಿದ್ದಾರೆ.

ಪ್ರಿಯಾಭರತ್ ಕರ್ಮಾಕರ್, (ಸಂ) (೨೦೧೩) 'ಗ್ಲೋಬಲ್ ರಿಸರ್ಚ್ ಜರ್ನಲ್, ಮಾಸ ಪತ್ರಿಕೆಯಲ್ಲಿ "Socio-economic status of Tribal Women: a case study in Karanataka"

ನಾಗರಾಜ, ಪಲ್ಲವಿ ಅವರ (ಲೇ), ಸಾಮಾಜಿಕ ಆರ್ಥಿಕ ಸ್ಥಾನಮಾನಗಳನ್ನು ಪಡೆದುಕೊಳ್ಳುವಲ್ಲಿ ಬುಡಕಟ್ಟು ಮಹಿಳೆಯರ ಪಾತ್ರ ಹೇಗಿದೆ. ಜೊತೆಗೆ ಮುಖ್ಯವಾಹಿನಿಗೆ ಬುಡಕಟ್ಟು ಮಹಿಳೆಯರು ಬರಲು ಸಾಮಾಜಿಕ ಆರ್ಥಿಕ ಪರಿಣಾಮಗಳು ಹೇಗೆ ಕಾರಣವಾಗುತ್ತವೆ ಎನ್ನುವ ಅಂಶಗಳನ್ನು ಚಿತ್ರದುರ್ಗ ಜಿಲ್ಲೆಯಲ್ಲಿನ ಬುಡಕಟ್ಟು ಮಹಿಳೆಯರನ್ನು ಕೇಂದ್ರಿಕರಿಸಿಕೊಂಡಿದ್ದಾರೆ.

**೧.೭. ಅಧ್ಯಯನದ ಮಹತ್ವ**

ಸರ್ವರಲ್ಲಿಯೂ ಸಮಾನತೆ ಇರಬೇಕು. ಆದರೆ ಸಮಾಜದಲ್ಲಿ ಸಮಾನತೆಯಿರದೆ ಏಣಿಶ್ರೇಣಿಗಳಿಂದ ಕೂಡಿದೆ. ವಿಶೇಷವಾಗಿ ಲಿಂಗತ್ವದಲ್ಲಿ ಸಮಾನತೆಯನ್ನು ತರಬೇಕು. ಪುರುಷ ಮಹಿಳೆಯರೆನ್ನುವ ತಾರತಮ್ಯಗಳಿರಬಾರದು. ಲಿಂಗತ್ವದಲ್ಲಿ ಈ ರೀತಿಯ ತಾರತಮ್ಯಕ್ಕೆ ಕಾರಣಗಳು ಹಲವಿವೆ. ದೈಹಿಕ ರಚನೆಯೊಂದನ್ನೇ ಕಾರಣವಾಗಿರಿಸಿಕೊಂಡು ಹೆಣ್ಣನ್ನು 'ಅಬಲೆ' ಎಂದು ಪುರುಷಶಾಹಿಯು ಗುರುತಿಸುವುದು. ದೈಹಿಕ ಅಬಲತೆಯನ್ನೇ ಕಾರಣವಾಗಿರಿಸಿಕೊಂಡು ಏಣಿಶ್ರೇಣಿಗಳನ್ನು ಸೃಷ್ಟಿಸುವ ಈ ಸಮಾಜವು ಸಮಾನತೆಯುಂಟಾಗಬೇಕೆಂದರೆ ಮಹಿಳಾ ಸಬಲೀಕರಣ ಅತ್ಯಂತ ಅವಶ್ಯವೆಂದು ಮಹಿಳಾ ಚಿಂತಕರೂ, ಸಮಾಜಶಾಸ್ತ್ರಜ್ಞರೂ ಅಭಿಪ್ರಾಯಪಡುವರು. ಸಬಲೀಕರಣದ ಕುರಿತು ಮಹಿಳಾಪರ ಚಿಂತಕರು, ವಿದ್ವಾಂಸರೂ ಅಲ್ಪಮಟ್ಟಿಗೆ ಅಧ್ಯಯನಗಳನ್ನು ಮಾಡಿರುವರಾದರೂ, ಇಲ್ಲಿಯವರೆಗೆ ಬುಡಕಟ್ಟು ಮಹಿಳೆಯರ ಸಬಲೀಕರಣದ ಕುರಿತು ಕನ್ನಡದಲ್ಲಿ ಯಾವುದೇ ತರಹದ ಅಧ್ಯಯನಗಳು ನಡೆದಿರುವುದಿಲ್ಲ. ಬುಡಕಟ್ಟು ಮಹಿಳೆಯರ ಸಬಲೀಕರಣದ ಕುರಿತು ನಡೆದಿರುವ ಅಧ್ಯಯನಗಳಲ್ಲಿ ಈ ಅಧ್ಯಯನ ಮೊದಲ ಪ್ರಯತ್ನವಾಗಿದೆ. ಸಬಲೀಕರಣದ ಹಿನ್ನೆಲೆಯಲ್ಲಿ ಬುಡಕಟ್ಟು ಮಹಿಳೆಯರ ಸ್ಥಿತಿಗತಿಗಳನ್ನು ಅರಿಯುವ ದೃಷ್ಟಿಯಿಂದ ಈ ಅಧ್ಯಯನವು ಒಂದು ಮಹತ್ವದ ಹೆಜ್ಜೆಯಾಗಿದೆ.

**ಸಮಸ್ಯೀಕರಣ**

ಈ ನೆಲದಲ್ಲಿ ಶತಮಾನಗಳಿಂದ ತಮ್ಮದೇ ಆದ ಸಂಸ್ಕೃತಿಯೊಂದಿಗೆ ರಕ್ತ ಸಂಬಂಧಕ್ಕೆ ಮಹತ್ವ ನೀಡುತ್ತಾ ಆಧುನಿಕ ಸಂಸ್ಕೃತಿಗೆ ಮತ್ತು ಅದರ ಪ್ರಭಾವಕ್ಕೆ ಒಳಗಾಗದೇ ತಮ್ಮದೇ ಆದ ಸಾಮಾಜಿಕ ಕಟ್ಟುಪಾಡುಗಳೊಂದಿಗೆ ತಮ್ಮದೇ ಆದ ನ್ಯಾಯ ಪದ್ಧತಿಯನ್ನು ಗೌರವಿಸುತ್ತಾ ತಮ್ಮದೇ ಗುಂಪಿನ ಬೇರೆ ಬೇರೆ ಕುಟುಂಬಗಳೊಂದಿಗೆ ಪರಸ್ಪರ ಅನ್ಯೋನ್ಯವಾಗಿ ಜೀವಿಸುವ ಸಮುದಾಯವೇ ಆದಿವಾಸಿ ಸಮುದಾಯಗಳು. ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮುನ್ನಡೆಯಲು ಶ್ರಮಿಸುತ್ತಿರುವ ಬುಡಕಟ್ಟುಗಳು ತಮ್ಮ ದೈನಂದಿನ ಜೀವನಕ್ಕಾಗಿ ಇಂದಿನ ನಾಗರಿಕ ಬದುಕಿನೊಂದಿಗೆ ಗುರುತಿಸಿಕೊಂಡರೂ ತಮ್ಮ ಹಿಂದಿನ ಸಂಸ್ಕೃತಿಯನ್ನು ಆಚರಣೆಗಳಲ್ಲಿ ಉಳಿಸಿಕೊಂಡಿರುವುದು ಗಮನಾರ್ಹವಾಗಿದೆ. ಬುಡಕಟ್ಟು ಮಹಿಳೆಯರ ಅನೇಕ ಸಮಸ್ಯೆಗಳು ಇತ್ತೀಚೆಗೆ ಹೆಚ್ಚುತ್ತಿರುವ ವಿಚಾರ ಅಧ್ಯಯನಗಳಿಂದ ತಿಳಿದು ಬರುತ್ತವೆ. ಭೌಗೋಳಿಕವಾಗಿ ಅವರು ನಾಗರಿಕ ಸಮಾಜದಿಂದ ದೂರವಿರುವುದರಿಂದ ಸಂಪರ್ಕ ಕಷ್ಟವಾಗಿದೆ. ಅವರ ವಿಶಿಷ್ಟ ಭಾಷೆ, ಜೀವನ ಪದ್ಧತಿಯಿಂದಾಗಿ

ನಾಗರಿಕ ಜನರೊಂದಿಗೆ ಸಾಮರಸ್ಯತೆಯನ್ನು ಹೊಂದಲಾಗದ ಸಾಂಸ್ಕೃತಿಕ ಅಂತರ ನಿರ್ಮಾಣವಾಗಿದೆ. ಅಂಧಶ್ರದ್ಧೆ ಮಂತ್ರ ತಂತ್ರಗಳಲ್ಲಿ ಇನ್ನೂ ನಂಬಿಕೆಯಿಟ್ಟಿರುವ ಮತ್ತು ಆಧುನಿಕ ವೈದ್ಯಕೀಯ ಸೌಲಭ್ಯಗಳ ಬಗ್ಗೆಯೂ ಅಪನಂಬಿಕೆ ಇರುವುದರಿಂದ ರೋಗರುಜಿನಗಳಿಗೆ ಅವರು ಬಹು ದೊಡ್ಡ ಬೆಲೆಯನ್ನು ತೆರಬೇಕಾಗುತ್ತದೆ. ಆರ್ಥಿಕವಾಗಿ ಅವರು ಸಂಪೂರ್ಣವಾಗಿ ಸ್ವಾವಲಂಭಿಗಳಾಗಿದ್ದ ಕಾಲ ಮುಗಿದಿದ್ದು ನಾಗರಿಕ ಸಮಾಜದತ್ತ ತಮ್ಮ ಆರ್ಥಿಕ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು  ಕೈಚಾಚಬೇಕಾಗಿದೆ. ಮಹಿಳೆ ಕುಟುಂಬದ ಕೇಂದ್ರ ಬಿಂದು ಆಗಿರುವುದರಿಂದ ಈ ಮೇಲೆ ಪ್ರಸ್ತುತ ಪಡಿಸಿದ ವಿಚಾರಗಳು, ಮಹಿಳೆ ಮತ್ತು ಮಕ್ಕಳಿಗೆ ಒಂದಲ್ಲ  ಒಂದು ರೀತಿಯಲ್ಲಿ ಪ್ರಭಾವ ಬೀರುತ್ತದೆ. ಈ ದೃಷ್ಟಿಯಲ್ಲಿ ಪ್ರಸ್ತುತ ಸಮಾಜದಲ್ಲಿ ಬುಡಕಟ್ಟು ಮಹಿಳಾ ಸಬಲೀಕರಣದ ವಿವಿಧ ಆಯಾಮಗಳ ನೆಲೆಯಲ್ಲಿ ಬುಡಕಟ್ಟು ಮಹಿಳೆಯರ ಸಬಲೀಕರಣದ ಪ್ರಕ್ರಿಯೆಯನ್ನು ಪರಿಶೀಲಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಬುಡಕಟ್ಟು ಸಮುದಾಯಗಳಲ್ಲಿ ಮಹಿಳೆ ಮನೆಯೊಳಗೆ ಸುರಕ್ಷಿತಳು ಹಾಗೂ ಪುರುಷ ಪ್ರಧಾನ ವ್ಯವಸ್ಥೆಯ ಮೌಲ್ಯಗಳು ಅವಳ ಮೇಲೆ ಬಹುತೇಕ ಪ್ರಭಾವ ಬೀರಿಲ್ಲವಾದರೂ ಮುಖ್ಯವಾಹಿನಿಗೆ ಹೋಲಿಸಿದಾಗ ಬುಡಕಟ್ಟು ಮಹಿಳೆಯರಲ್ಲಿ ಅನೇಕ ಸಮಸ್ಯೆಗಳಿವೆ. ಅನಕ್ಷರತೆ ಬಡತನ, ಕೌಶಲ್ಯಗಳ ಕೊರತೆ, ಮೂಡನಂಬಿಕೆಗಳು, ಬಿಡುವಿಲ್ಲದ ಶ್ರಮದ ಕೆಲಸ, ಕೂಲಿ, ದುಡಿಮೆಯಲ್ಲಿ ತಾರತಮ್ಯತೆ, ಉದ್ಯೋಗದ ಅಭದ್ರತೆ, ಆರೋಗ್ಯ ಸಮಸ್ಯೆ ಮತ್ತು ಮಾಹಿತಿಯ ಕೊರತೆಯಿಂದಾಗಿ ಬುಡಕಟ್ಟು ಮಹಿಳೆಯರನ್ನು ಸಂಕಷ್ಟಕ್ಕೀಡು ಮಾಡಿವೆ.

ದೇಶದ ಸಮಗ್ರ ಪ್ರಗತಿಯು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿನ ಕೌಶಲ್ಯತೆ, ಸಾಮಾರ್ಥ್ಯಗಳ ಸಮರ್ಪಕ ಬಳಕೆ ಮತ್ತು ರೂಪಿಸುವಿಕೆಯನ್ನು ಅವಲಂಭಿಸಿದೆ. ಸಮಾಜದ ಯಾವುದೇ ಭಾಗದ ಹಿಂದುಳಿಯುವಿಕೆಯನ್ನು ಅವಲಂಭಿಸಿದೆ. ಸಮಾಜದ ಯಾವುದೇ ಭಾಗದ ಹಿಂದುಳಿಯುವಿಕೆಯು ಆ ಸಮುದಾಯದ ಮೇಲೆ ಮಾತ್ರ ಪರಿಣಾಮ ಬೀರದೆ ಅದು ದೇಶದ ಒಟ್ಟಾರೆ ಅಭಿವೃದ್ಧಿಯನ್ನು ಭಾಧಿಸುತ್ತದೆ. ಸ್ವಾತಂತ್ರ್ಯ ನಂತರ ಬುಡಕಟ್ಟು ಅಭಿವೃದ್ಧಿಗೆ ಸರಕಾರ ಅನೇಕ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಿದೆ. ಪ್ರಸ್ತುತ ಅಧ್ಯಯನವು ಬುಡಕಟ್ಟು ಸಮುದಾಯದ ಮುಖ್ಯವಾಗಿ ಮಹಿಳೆಯರಲ್ಲಿನ ಬದಲಾವಣೆಯ ದಿಕ್ಕು ಹಾಗೂ ಗತಿಯನ್ನು ಮೌಲ್ಯೀಕರಿಸಲು ಸಹಾಯಕವಾಗುತ್ತದೆ. ಸಮಾಜವಿಜ್ಞಾನ ಕ್ಷೇತ್ರ, ಸಮಾಜಶಾಸ್ತ್ರ, ಸಾಮಾಜಿಕ ಮಾನವಶಾಸ್ತ್ರ ಹಾಗೂ ಅಭಿವೃದ್ಧಿ ಅಧ್ಯಯನ ಕ್ಷೇತ್ರಗಳಿಗೂ ಈ ಅಧ್ಯಯನವು ಕೊಡುಗೆ ನೀಡಬಲ್ಲದು. ಹಾಗೆಯೇ ಬುಡಕಟ್ಟು ಸಮುದಾಯಗಳ ಬಗ್ಗೆ ಅನೇಕ ಅಧ್ಯಯನಗಳಿದ್ದರೂ ಬಳ್ಳಾರಿ ಜಿಲ್ಲೆಯಲ್ಲಿನ ಬುಡಕಟ್ಟು ಮಹಿಳಾ ಸಬಲೀಕರಣಕ್ಕೆ ಸಿಮೀತವಾಗಿರುವ ಅಧ್ಯಯನಗಳು ಇದುವರೆಗೆ ಆಗಿಲ್ಲ. ಬಳ್ಳಾರಿ ಜಿಲ್ಲೆಯ ಬುಡಕಟ್ಟುಗಳಾದ ಬೇಡ, ಮೇದ, ಡುಂಗ್ರಿಗರಾಸಿಯಾ, ಹಾಗೂ ಪಾರ್ಧಿ ಬುಡಕಟ್ಟುಗಳ ಕುರಿತಂತೆ ಅವರ ಹಿನ್ನಲೆ ಭೌಗೋಳಿಕ ನೆಲೆ, ವಲಸೆ, ವಿವಿಧ ಬುಡಕಟ್ಟುಗಳ ಉಗಮದ ಬಗ್ಗೆ ಸಮುದಾಯದ ಹಿನ್ನೆಲೆ ಕುರಿತು ಬೇರೆ ಬೇರೆ ವಿದ್ವಾಂಸರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕರ್ನಾಟಕದ ಹಾಗೂ ಬಳ್ಳಾರಿ ಜಿಲ್ಲೆಯ ಬುಡಕಟ್ಟುಗಳ ಸಾಮಾಜಿಕ ಜೀವನ, ಸಾಂಸ್ಕೃತಿಕ ಜೀವನ, ಧಾರ್ಮಿಕ ಆಚರಣೆಗಳು ಕುರಿತು ಅನೇಕ ತಜ್ಞರು ತಮ್ಮ

ಅಧ್ಯಯನದಲ್ಲಿ ವಿಷಯಗಳನ್ನು ಮಂಡಿಸಿದ್ದಾರೆ. ಇನ್ನೂ ಕೆಲವು ಸಂಶೋಧನಾಕಾರರು ಬುಡಕಟ್ಟು ಜನಾಂಗದ ಕುಲಕಸುಬುಗಳ ಕುರಿತು ಆಹಾರ ಪದ್ಧತಿ ಸಮುದಾಯಗಳ ಸ್ಥಿತ್ಯಂತರಗಳು, ಅಭಿವೃದ್ಧಿಯಲ್ಲಿನ ತೊಡಕುಗಳ ಕುರಿತು ಬುಡಕಟ್ಟು ಸಮುದಾಯದ ಶಿಕ್ಷಣ ಮತ್ತು ಆರೋಗ್ಯದ ಕುರಿತು ಗಿರಿಜನ ಉಪಯೋಜನೆಯಡಿಯಲ್ಲಿ ಬಳ್ಳಾರಿ ಜಿಲ್ಲೆಯ ಬುಡಕಟ್ಟುಗಳ ಅಭಿವೃದ್ಧಿ ಹಾಗೂ ಮುಂತಾದವುಗಳ ಕುರಿತು ಅನೇಕ ತಜ್ಞರು ತಮ್ಮ ಅಧ್ಯಯನಗಳಲ್ಲಿ ವಿಷಯಗಳನ್ನು ಮಂಡಿಸಿದ್ದಾರೆ. ಒಟ್ಟಿನಲ್ಲಿ ಭಾರತದ ಆದಿವಾಸಿ ಸಮುದಾಯಗಳಲ್ಲಿ ಮಹಿಳೆಯರ ಸಾಮಾಜಿಕ ಸ್ಥಿತಿಗತಿ, ಸಬಲೀಕರಣ, ರಾಜಕೀಯ ಭಾಗವಹಿಸುವಿಕೆ ಮತ್ತು ಶಿಕ್ಷಣದ ಕುರಿತು ಅನೇಕ ಅಧ್ಯಯನಗಳು ಆಗಿರುವುದನ್ನು ಗಮನಿಸಬಹುದು. ಆದರೆ ಬಳ್ಳಾರಿ ಜಿಲ್ಲೆಯ ಬುಡಕಟ್ಟು ಮಹಿಳೆಯರ ಸಬಲೀಕರಣದ ಕುರಿತಂತೆ ಅಧ್ಯಯನಗಳು ಆಗಿಲ್ಲ. ಆದ್ದರಿಂದ ಬಳ್ಳಾರಿ ಜಿಲ್ಲೆಯ ಬುಡಕಟ್ಟು ಮಹಿಳೆಯರ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಹಾಗೂ ನಿರ್ಧಾರತೆಗೆದುಕೊಳ್ಳುವಲ್ಲಿ ಸಬಲೀಕರಣದ ಪ್ರಕ್ರಿಯೆಯನ್ನ ಅರ್ಥಮಾಡಿಕೊಳ್ಳಲು ಈ ಅಧ್ಯಯನವು ಸಹಕಾರಿಯಾಗಬಲ್ಲದು. ಹಾಗೆಯೇ ಬುಡಕಟ್ಟು ಮಹಿಳೆಯರ ಸಾಮಾಜಿಕ ಆರ್ಥಿಕ ತೊಂದರೆಗಳು ಹಾಗೂ ಅಭಿವೃದ್ಧಿಯಲ್ಲಿನ ತೊಡಕುಗಳನ್ನು ಮೌಲ್ಯೀಕರಿಸಿ ಪರಿಶೀಲಿಸುವ ಪ್ರಯತ್ನವೂ ಇದಾಗಿದೆ.

**ಆಧಾರಗಳು**


ಅನಸೂಯ ಕದಂ, ೨೦೦೫, ಮಹಿಳಾ ಶೋಷಣೆಯ ನೆಲೆಗಳು, (ಅಪ್ರಕಟಿತ ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಈರಪ್ಪ ಅಂಬ್ಲಯ್ಯ, ೨೦೧೫ ಜಾಗತೀಕರಣ ಸಂದರ್ಭದಲ್ಲಿ ಬುಡಕಟ್ಟುಗಳ ಸಮೋಜೋ-ಆರ್ಥಿಕ ಸ್ಥಿತಿಗತಿಗಳು, (ಅಪ್ರಕಟಿತ ಎಂ ಫಿಲ್ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಉಮೇಶ ಎಚ್ ಎಸ್, (ಸಂ), ೨೦೧೪, 'ಅರುಹು ಕುರುಹು' ಕನ್ನಡ ತ್ರೈಮಾಸಿಕ ಪತ್ರಿಕೆ, ಮೌನಪ್ರಕಾಶನ, ಏಪ್ರೀಲ್-ಜೂನ್, ಮೈಸೂರು

Edger Thurston,1909, Caste and Tribes in Southern India, Oxford University Press, London

ಒಡೆಯರ್ ಡಿ. ಹೆಗ್ಗಡೆ, ಅನ್ನಪೂರ್ಣೆಶ್ವರಿ ಎನ್, ೨೦೦೩ ಮಹಿಳಾ ಅಧ್ಯಯನಗಳು ಆರ್ಥಿಕ ನೆಲೆಗಳು ಮತ್ತು ಆಯಾಮಗಳು, ಸುಚಿತ್ರ ಪ್ರಕಾಶನ, ಮೈಸೂರು

ಕಡ್ಲಬಾಳ್ ಪನ್ನಂಗಧರ, ೨೦೧೨, ಮೇಧ ಸಮುದಾಯದ ವಾಣಿಜ್ಯ ವ್ಯವಹಾರಗಳು, (ಅಪ್ರಕಟಿತ ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕಿಚಡಿ ಚನ್ನಪ್ಪ, ೨೦೧೪, ಗ್ರಾಮ ಪಂಚಾಯಿತಿ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ

ಕೆ ಎಸ್ ಸಿಂಗ್, ೨೦೦೩, ಕರ್ನಾಟಕ ಸ್ಟೇಟ್ ಗೆಜೆಟೆಯರ್ ಪಾರ್ಟ್-೨, ದ ಶೆಡ್ಯುಲ್ಡ್ ಟ್ರೈಬ್ಸ್ ಬಾಂಬೆ ದ ಎಥ್ನೋಗ್ರಾಫಿಕಲ್ ಸರ್ವೆ ಆಫ್ ಮೈಸೂರು,

ಕೊಟ್ಲಮ್ಮ, ೨೦೧೨, ಬಳ್ಳಾರಿ ಜಿಲ್ಲೆಯ ದೇವದಾಸಿಯರು, (ಅಪ್ರಕಟಿತ ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

Geetha Menon,1984, Tribal Women Victim of Development Process, Saga Publication , New Delhi

ಗುರುಲಿಂಗಯ್ಯ ಎಂ, ೨೦೦೪, ಬುಡಕಟ್ಟುಗಳು ಮತ್ತು ಅಭಿವೃದ್ಧಿ, ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾನಿಲಯ,

ಗೊರೂರು ರಾಮಸ್ವಾಮಿ ಅಯ್ಯಂಗಾರ್, ೧೯೯೮, ಗಾಂಧಿ ಚಿಂತನೆಗಳು, ೧೫೬

ಚೆನ್ನಮ್ಮ ಕೆ.ಸಿ, ೨೦೧೦, ಮಹಿಳೆಯ ದುಡಿಮೆ ಏಕರೂಪತೆಯ ಪ್ರಶ್ನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜನಗಣತಿ ವರದಿ ೨೦೧೧, ಕರ್ನಾಟಕ ಸರ್ಕಾರ, ಬೆಂಗಳೂರು

ಜಯರಾಂ ಕೆ, (ಸಂ), ೨೦೧೫, ಜೆನಿಗೆ, ತ್ರೈಮಾಸಿಕ ಪತ್ರಿಕೆ, ಗಣೆಪ್ರಕಾಶನ, ಜೂನ್-ಆಗಸ್ಟ್, ಬೆಂಗಳೂರು

ತಾರಿಹಳ್ಳಿ ಹನುಮಂತಪ್ಪ (ಸಂ), ೨೦೧೦, ಕರ್ನಾಟಕದ ಬುಡಕಟ್ಟು ಸಮುದಾಯಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ತಿಮ್ಮಾರೆಡ್ಡಿ ಎಸ್.ವೈ, ೨೦೧೨, ಕುಲಕಸುಬುಗಳು ಮತ್ತು ಆಧುನಿಕತೆ, (ಅಪ್ರಕಟಿತ ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ದೊಡ್ಡಬಸಮ್ಮ, ೨೦೦೮, ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಬುಡಕಟ್ಟುಗಳ ರಾಜಕೀಯ ಸ್ಥಿತಿಗತಿಗಳು, (ಅಪ್ರಕಟಿತ ಎಂ ಫಿಲ್ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

Nanjundachar and Ananthakrishna Iyar, 1945, Caste and Tribes in Mysore State, Madras University Press, Madras

ನಾಗರಾಜ ಎಂ (ಸಂ), ೨೦೧೩, ಮಹಿಳಾ ವಿಮರ್ಶೆ, ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

ನಾಗರಾಜು ಎಸ್, ರಾಚಪ್ಪಾಜಿ ಎಂ, (ಸಂ), ೨೦೧೦, ಮಹಿಳಾ ಸಬಲೀಕರಣದ ವಿವಿಧ ಹೆಜ್ಜೆಗಳು, ಸಂದೀಪ್ ಪ್ರಕಾಶನ, ಚಾಮರಾಜ ನಗರ

ನಾಗೇಶ್ ಎಂ, ೨೦೦೭, ಹಕ್ಕಿ-ಪಕ್ಕಿಯರ ಸಾಮಾಜಿಕ ಬದಲಾವಣೆ, (ಅಪ್ರಕಟಿತ ಎಂ ಫಿಲ್ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪುರುಷೋತ್ತಮ ಬಿಳಿಮಲೆ, ಆಧುನಿಕ ಜಗತ್ತು ಮತ್ತು ಬುಡಕಟ್ಟುಗಳು, ಪ್ರಜಾವಾಣಿ ಲೇಖನ, ದಿನಾಂಕ ೧೦.೦೫.೧೯೧೬

ಪ್ರಕಾಶ್ ಚಂದ್ರ ಮೆಹ್ತಾ, ೨೦೦೬, "ಡೆವಲಪ್ ಮೆಂಟ್ ಆಫ್ ಇಂಡಿಯನ್ ಟ್ರೈಬ್ಸ್"

ಪ್ರಶಾಂತ್ ಎಚ್ ಡಿ, (ಸಂ), ೨೦೧೭, ಮಹಿಳಾ ಸಬಲೀಕರಣವೆಂಬುದೆ ರಾಜಕಾರಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ

Priya Bharth Karmakar (ed) Global Research Journal,Bombay 13 EPW, Mumbay

ಭವ್ಯ ಹೆಚ್ ಪಿ, ೨೦೧೩, ಮಹಿಳಾ ಸ್ವ-ಸಹಾಯ ಸಂಘಗಳು ಮತ್ತು ಆರ್ಥಿಕ ಸಬಲೀಕರಣ, ತಾರಾ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು

ಮಧುಮಾಲಾ ಕೆ, ೨೦೧೬, ದಕ್ಷಿಣ ಕನ್ನಡದ ಬುಡಕಟ್ಟು ಮಹಿಳೆಯರ ಸಾಮಾಜಿಕ-ಆರ್ಥಿಕ ಸ್ಥಿತಿ ಮತ್ತು ಸಶಕ್ತೀಕರಣ ಪ್ರಕ್ರಿಯೆ, (ಅಪ್ರಕಟಿತ ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಹೇಶ್ ಸಿ.ಕೆ, ೨೦೦೦, ಅಂಬೇಡ್ಕರ್ ಮತ್ತು ಮೀಸಲಾತಿ ವರ್ಗೀಕರಣ, ಅಂಬೇಡ್ಕರ್ ಅಧ್ಯಯನ ಸಂಸ್ಥೆ, ಬೆಂಗಳೂರು

ಮಂಜುನಾಥ ಬೇವಿನಕಟ್ಟಿ, ೨೦೧೬, ತಳಾದಿ, ಅರುಣ್ ಪ್ರಕಾಶನ, ಬೆಂಗಳೂರು

ಮೀನಾಕ್ಷಿ ಬಿ, ೨೦೦೯, ಸ್ಥಳೀಯ ಸಂಸ್ಥೆಗಳು ಮತ್ತು ಮಹಿಳೆಯರು, (ಅಪ್ರಕಟಿತ ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅದೇ, ೨೦೦೯:೨-೩

ಮೇತ್ರಿ ಕೆ ಎಂ, ೨೦೦೭, ಬುಡಕಟ್ಟು ಕುಲಕಸುಬುಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮೋಹನ್ ಕುಮಾರ್, ೨೦೦೯, ಬುಡಕಟ್ಟು ಸಮುದಾಯಗಳ ಸಂಘಟನೆ ಹಾಗೂ ಸಹಬಾಳ್ವೆ, (ಅಪ್ರಕಟಿತ ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಯರಿಸ್ವಾಮಿ ಈ (ಸಂ) ೨೦೧೫ 'ಅಚಲ' ತ್ರೈಮಾಸಿಕ ಪತ್ರಿಕೆ, ಮಹಿಳಾ ಅಧ್ಯಯನ ಮಂಡಲ, ಮೈಸೂರು

ಶಶಿಕಲಾ ಯು.ಶೆಟ್ಟಿ, (ಲೇ) ೨೦೧೬, ಸಬಲೀಕರಣದ ದಿಟ್ಟ ಹೆಜ್ಜೆ 'ಸ್ತ್ರೀಶಕ್ತಿ, 'ಯೋಜನಾ' ಮಾಸಪತ್ರಿಕೆ

ರಾಚಪ್ಪಾಜಿ ಎಂ, ೨೦೧೧, ಮಹಿಳಾ ಸಬಲೀಕರಣ ಮತ್ತು ರಾಜಕೀಯ ಪ್ರಾತಿನಿಧಿತ್ವ, ವಾಣಿ ಪ್ರಕಾಶನ ಮೈಸೂರು

ರಾಜಶೇಖರ ಹತಗುಂದಿ, (ಸಂ) "ಸಂಸ್ಕೃತಿ ಮಹಿಳಾ ಮಾಲಿಕೆ, ಬಸವೇಶ್ವರ ಪ್ರಕಾಶನ, ಕಲಬುರ್ಗಿ

ಲಕ್ಕಪ್ಪಗೌಡ ಎಚ್ ಜೆ, ೨೦೦೦, ಕರ್ನಾಟಕ ಬುಡಕಟ್ಟುಗಳು: ಸಂಪು:೨, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು,

Luies, 1963, Tribes in Mysore State, Oxford University Press, Bombay

ವಾಸುದೇವ ಬಡಿಗೇರ, ೨೦೦೭, ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿರುಪಾಕ್ಷಿ ಪೂಜಾರಹಳ್ಳಿ, (ಸಂ) ೨೦೦೭, ಪೆರಿಯಾರರ ವಿಚಾರಧಾರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವೆಂಕಟಗಿರಿ ದಳವಾಯಿ(ಸಂ), ೨೦೦೮, ಸಂಸ್ಕೃತಿ ಮಹಿಳಾ ಮಾಲಿಕೆ, ಧಾರವಾಡ

ಶಿವಚಿತ್ತಪ್ಪ ಕೆ, ೨೦೧೦, ಮಹಿಳಾ ಸಬಲೀಕರಣ, (ಅಪ್ರಕಟಿತ, ಪಿಎಚ್ ಡಿ ಪ್ರಬಂಧ) ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಶ್ರೀನಿವಾಸ ಎನ್, ೨೦೦೧, ಮೇದರು ಮತ್ತು ಕೊರಚರು ವೃತ್ತಿ ಪದಕೋಶ, (ಅಪ್ರಕಟಿತ ಎಂ ಫಿಲ್ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶ್ರೀನಿವಾಸ್ ಎಲ್, ೨೦೧೧, "ಪರಿವರ್ತನೆಯ ಹಾದಿಯಲ್ಲಿ ಬುಡಕಟ್ಟು ಸಮಾಜಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶ್ರೀನಿವಾಸ ಎಂ ಸಿ, ೨೦೦೪, ಗಿರಿಜನ ಉಪಯೋಜನೆಯಡಿಯಲ್ಲಿ ಬಳ್ಳಾರಿ ಜಿಲ್ಲೆಯ ಬುಡಕಟ್ಟು ಅಭಿವೃದ್ಧಿ ಅಧ್ಯಯನ, (ಅಪ್ರಕಟಿತ, ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸರೋಜ ಕೆ, ೨೦೦೧, ಮಹಿಳೆ ಮತ್ತು ಆರೋಗ್ಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಹೇಮಲತಾ ಎಚ್ ಎಂ, ೨೦೦೩, ಮಹಿಳಾ ಸಶಕ್ತೀಕರಣ, ಪ್ರಣವ ಪ್ರಕಾಶನ, ಬೆಂಗಳೂರು

ಹೇಮಲತಾ ಎಚ್ ಎಂ, ೨೦೧೨, ಮಹಿಳಾ ಸಶಕ್ತೀಕರಣ, ಪ್ರಣವ ಪ್ರಕಾಶನ, ಬೆಂಗಳೂರು

# ಅಧ್ಯಾಯ : ಎರಡು

# ಬಳ್ಳಾರಿ ಜಿಲ್ಲೆಯ : ಕ್ಷೇತ್ರ ಪರಿಚಯ

ಬಳ್ಳಾರಿ ಜಿಲ್ಲೆಯು ಕರ್ನಾಟಕ ರಾಜ್ಯದ ಪೂರ್ವದ ಅಂಚಿನ ಮಧ್ಯಭಾಗದಲ್ಲಿದೆ. ಇದರ ಪೂರ್ವಕ್ಕೆ ಆಂದ್ರಪ್ರದೇಶ, ಪಶ್ಚಿಮಕ್ಕೆ ಕೊಪ್ಪಳ, ಉತ್ತರಕ್ಕೆ ರಾಯಚೂರು ಮತ್ತು ದಕ್ಷಿಣಕ್ಕೆ ಚಿತ್ರದುರ್ಗ ಜಿಲ್ಲೆಗಳಿವೆ. ಈ ಜಿಲ್ಲೆಯ ಪಶ್ಚಿಮ ಮತ್ತು ಉತ್ತರಕ್ಕೆ ತುಂಗಾಭದ್ರಾ ನದಿಯೇ ಸ್ವಾಭಾವಿಕ ಮೇರೆಯಾಗಿದೆ. ಈ ನದಿಯು ಜಿಲ್ಲೆಯ ಎಲ್ಲಾ ತರಹದ ಪ್ರಗತಿಗೆ ಕಾರಣವಾಗಿದ್ದು ದಕ್ಷಿಣದ ಭಾರತದ ಗಂಗೆ ಎಂದು ಹೆಸರು ಪಡೆದಿದೆ. ಕರ್ನಾಟಕದ ಸಾಂಸ್ಕೃತಿಕ ಮತ್ತು ಆರ್ಥಿಕ ಪ್ರಗತಿಗೆ ಈ ಜಿಲ್ಲೆಯು ಸಾಕಷ್ಟು ಕೊಡುಗೆಗಳನ್ನು ನೀಡಿದೆ. ಇದು ಪ್ರಸ್ತುತ ಸಿರುಗುಪ್ಪ, ಬಳ್ಳಾರಿ, ಕೂಡ್ಲಿಗಿ, ಸಂಡೂರು, ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಹೂವಿನ ಹಡಗಲಿ, ಹರಪ್ಪನಹಳ್ಳಿ, ಕೊಟ್ಟೂರು, ಕಂಪ್ಲಿ ಹಾಗೂ ಕುರುಗೋಡು ಒಟ್ಟು ಹನ್ನೊಂದು ತಾಲೂಕುಗಳನ್ನು ಒಳಗೊಂಡಿದೆ.

### ೨.೧ ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೂ ಪೂರ್ವದಲ್ಲಿ ಕಲ್ಯಾಣ ಚಾಲುಕ್ಯರು, ತಲಕಾಡಿನ ಗಂಗರು, ಕಂಪಿಲರಾಯ ಕುಮಾರರಾಯರ ಸಿಂಘೇಯ ವಂಶಗಳ ಆಡಳಿತಕ್ಕೆ ಒಳಪಟ್ಟ ಪ್ರದೇಶ ಬಳ್ಳಾರಿಯಾಗಿತ್ತು. ಅಶೋಕನ ಶಿಲಾಶಾಸನಗಳು ಈ ಜಿಲ್ಲೆಯ ಸಿರುಗುಪ್ಪ ತಾಲೂಕಿನ ನಿಟ್ಟೂರು ಗ್ರಾಮದ ಹೊರವಲಯದಲ್ಲಿ ಕಂಡು ಬರುತ್ತವೆ. ಅದಕ್ಕೂ ಪೂರ್ವದಲ್ಲಿ ಮಾನವನು ನೆಲೆ ನಿಂತಿರುವ ಕುರಿತು ಮಾಹಿತಿ ನೀಡುವ ಪ್ರಾಗೈತಿಹಾಸಿಕ ಕಾಲದ ಮಾನವನ ನೆಲೆಗಳು ಈ ಜಿಲ್ಲೆಯಲ್ಲಿ ಕಂಡು ಬರುತ್ತವೆ ಸಂಗನಕಲ್ಲು, ತೆಕ್ಕಲಕೋಟೆ, ದರೋಜಿ ಕರಡಿಧಾಮ ವಲಯ, ಹಂಪಿ, ತಿಮ್ಮಾಲಾಪುರ, ರಾಮಸಾಗರ, ವೆಂಕಟಾಪುರ, ಬುಕ್ಕಸಾಗರ, ಗುಡೆಕೋಟೆ ಸುತ್ತಮುತ್ತಲಿನ ಬೆಟ್ಟಗಳಲ್ಲಿ ಹಳೇಶಿಲಾಯುಗ ಮತ್ತು ನೂತನ ಶಿಲಾಯುಗದ ಕುರುಹುಗಳು, ಕೆಮ್ಮಣ್ಣು ಮತ್ತು ಸುಣ್ಣದ ರೇಖಾ ಚಿತ್ರಗಳು ಹಾಗೂ ಬಂಡೆಗಳಲ್ಲಿ ಕೊರೆದ ಚಿತ್ರಗಳು ಕಂಡು ಬರುತ್ತವೆ. ಕಲ್ಯಾಣಿ ಚಾಲುಕ್ಯರು ಕ್ರಿ. ಶ ೯೭೩ ರಲ್ಲಿ ಆಳ್ವಿಕೆಯನ್ನು ಪ್ರಾರಂಭಿಸಿ ಬಳ್ಳಾರಿ ಪ್ರಾಂತ್ಯವನ್ನು ತಮ್ಮ ವಶಕ್ಕೆ ತೆಗೆದುಕೊಂಡ ವಿಚಾರವನ್ನು ತಿಳಿಸುವ ಶಿಲಾ ಶಾಸನಗಳು ಬಳ್ಳಾರಿ ಜಿಲ್ಲೆಯಲ್ಲಿ ಹೇರಳವಾಗಿ ದೊರೆಯುತ್ತವೆ. ಈ ಶಾಸನಗಳನ್ನು ಆಧಾರಿಸಿ ಹೇಳಬಹುದಾದರೆ ಕ್ರಿ.ಶ. ೧೦೧೪ ರ ಗೋಣಿಹಾಳಿನ (ಗೋನಾಳ್) ಶಾಸನವು ಶ್ರೀಮಂತನಾದ ಇರಿವ ನೊಳಂಬವಾಡಿ

ರಾಜನು ಕಂಪಲಿಯನ್ನು ಕೇಂದ್ರವಾಗಿರಿಸಿಕೊಂಡು ಈ ಪ್ರದೇಶದ ಆಳ್ವಿಕೆಯನ್ನು ನಡೆಸುತ್ತಿದ್ದನು. ಮುಂದೆ ಕಲ್ಯಾಣಿ ಚಾಲುಕ್ಯರ ದೊರೆ ಜಗದೇಕಮಲ್ಲ ಜಯಸಿಂಹದೇವನ ಸಾಮಂತನಾದ ನೊಳಂಬ ಪಲ್ಲವ ಪೆರ್ಮಾಡಿ ಎಂಬುವವನು ಈ ಪ್ರದೇಶವನ್ನು ಆಳಿದ ಕುರಿತು ಕ್ರಿ. ಶ ೧೦೧೮ ರ ಶಾಸನದ ಮೂಲಕ ತಿಳಿಯುತ್ತದೆ.

ಕ್ರಿ.ಶ ೧೦೪೫ರ ಸುಮಾರಿಗೆ ಚಾಲುಕ್ಯರ ಒಂದನೇ ಸೋಮೇಶ್ವರನು ಹಡಗಲಿಯನ್ನು ತನ್ನ ನೆಲೆಯಾಗಿಸಿಕೊಂಡಿದ್ದನು ಅವನು ಚೋಳರ ರಾಜಧಾನಿಯಾದ ನೊಳಂಬವಾಡಿ ಮೇಲೆ ದಾಳಿ ನಡೆಸಿದನು ಹಾಗೂ ಕಂಪಲಿಯನ್ನು ತನ್ನ ವಶಕ್ಕೆ ತೆಗೆದುಕೊಂಡನೆಂದು ತಿಳಿದುಬರುತ್ತದೆ. "ಕ್ರಿ. ಶ. ೧೦೫೪ ರ ಸುಮಾರಿಗೆ ಕಲ್ಯಾಣ ಚಾಲುಕ್ಯರ ಅರಸ ಒಂದನೇ ಸೋಮೇಶ್ವರ ಬಳ್ಳಾರಿ ಪ್ರದೇಶವನ್ನು ಆಳಿದನೆಂದು ತಿಳಿದುಬರುತ್ತದೆ (ಎಫಿಗ್ರಾಫಿಕಾ ಕರ್ನಾಟಕ ೧೨) ಇವರ ತರವಾಯ ಕೆಲವು ಕಾಲ ಕುಮ್ಮಟ ದುರ್ಗವನ್ನು ರಾಜಧಾನಿಯಾಗಿಸಿಕೊಂಡು ಹೊಯ್ಸಳ ಅರಸರು ರಾಜ್ಯಭಾರ ಮಾಡಿದುದಾಗಿ ತಿಳಿದು ಬರುತ್ತದೆ"(ಸಾವಿತ್ರಿ:೨೦೦೨:೦೫) ಕ್ರಿ.ಶ ೧೨೮೦ ರಿಂದ ೧೩೦೦ ರವರೆಗೆ ಕಮ್ಮಟವನ್ನು ರಾಜಧಾನಿಯಾಗಿಸಿಕೊಂಡು ಮುಮ್ಮಡಿ ಸಿಂಘೇಯನು ಕಂಪಲಿ ಮತ್ತು ಅದರ ಸುತ್ತ ಮುತ್ತಲಿನ ಪ್ರದೇಶಗಳನ್ನು ಆಳಿದನು. ಮುಮ್ಮಡಿ ಸಿಂಘೇಯನ ಮಗ ಕಂಪಿಲ ಹಾಗೂ ಅವನ ಮಗ ಕುಮಾರರಾಮರು ಈ ಪ್ರದೇಶಗಳನ್ನು ಆಳಿದ ಕುರಿತು ಶಾಸನಾಧಾರಗಳು ದೊರೆಯುತ್ತವೆ. ಕಂಪಿಲ ಮತ್ತು ಕುಮಾರರಾಮರು ನಾಯಕ ಸಮುದಾಯದವರಾಗಿದ್ದು ಉತ್ತರ ಪ್ರದೇಶದಿಂದ ದಕ್ಷಿಣ ರಾಜ್ಯಗಳ ಮೇಲೆ ನಿರಂತರವಾಗಿ ದಂಡೆತ್ತಿ ಬರುತ್ತಿದ್ದ ಇಸ್ಲಾಂ ಅರಸರನ್ನು ಎದುರಿಸಿ ಹಿಮ್ಮೆಟ್ಟಿಸಿದ ಕೀರ್ತಿ ಕಂಪಿಲ ಹಾಗೂ ಕುಮಾರರಾಮರಿಗೆ ಸಲ್ಲುತ್ತದೆ. ಆದರೆ ಕೊನೆಗೆ ದೆಹಲಿ ಸುಲ್ತಾನರಿಂದಾಗಿ ಪರಾಭವಗೊಂಡು ಅವರ ಸೈನ್ಯದ ಕೈಯ್ಯಲ್ಲಿ ಈ ತಂದೆ ಮಕ್ಕಳು ಅವಸಾನಗೊಳ್ಳುತ್ತಾರೆ. ಈ ಪ್ರದೇಶದಲ್ಲಿ ಕಂಪಿಲನ ಆಡಳಿತದ ತರುವಾಯ ವಿಜಯನಗರದ ಸ್ಥಾಪನೆಯಾಗುತ್ತದೆ ಕಂಪಿಲನ ಹತ್ತಿರದ ಸಂಬಂಧಿಗಳಾದ ಹರಿಹರ ಮತ್ತು ಬುಕ್ಕ ಸಹೋದರರು ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ವಿಜಯನಗರವನ್ನು ಸ್ಥಾಪಿಸುತ್ತಾರೆ. ವಿಜಯನಗರ ಸ್ಥಾಪನೆಯ ತರುವಾಯ ದಕ್ಷಿಣ ಪ್ರಾಂತ್ಯದ ಎಲ್ಲಾ ಪ್ರದೇಶಗಳಿಗೆ ಒಂದು ರೀತಿಯ ರಕ್ಷಣೆ ದೊರೆಯುತ್ತದೆ. ವಿಜಯನಗರದ ಅರಸರು ತಮ್ಮ ಸುತ್ತಮುತ್ತಲಿದ್ದ ಚಿಕ್ಕ ಪುಟ್ಟ ಸಂಸ್ಥಾನಗಳು ಮತ್ತು ಪಾಳಯಪಟ್ಟುಗಳನ್ನು ತಮ್ಮ ರಾಜ್ಯದಲ್ಲಿ ವಿಲೀನಗೊಳಿಸಿಕೊಂಡು ಅವುಗಳಿಗೆ ರಕ್ಷಣೆ ಕೊಡುವುದರೊಂದಿಗೆ ತಮ್ಮ ಸಾಮ್ರಾಜ್ಯ ವ್ಯಾಪಕವಾಗಿ ವಿಸ್ತರಿಸುತ್ತಾ ಸಾಗುತ್ತಾರೆ. ತುಳು, ಸಾಳವ, ಅರವೀಡು, ಸಂಗಮ ವಂಶಗಳು ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯನ್ನು ಮಾಡುತ್ತವೆ. ವಿಜಯನಗರದ ಕೊನೆಯ ಪ್ರಭಲ ಅರಸನಾದ ಅಳಿಯರಾಮರಾಯನು ರಕ್ಕಸ ತಂಗಡಗಿ ಯುದ್ಧದಲ್ಲಿ ಬಿಜಾಪುರ ಸುಲ್ತಾನರಿಂದ ಹತನಾದ ತರುವಾಯ ವಿಜಯನಗರ ಸಾಮ್ರಾಜ್ಯವು ಅವನತಿಯ ಹಾದಿ ಹಿಡಿಯುತ್ತದೆ. "ಅಳಿಯ ರಾಮರಾಯನ ಅವನತಿಯ ತರುವಾಯ ಪಟ್ಟಕ್ಕೆ ಬಂದ ವಿಜಯನಗರ ಅರಸ ವೆಂಕಟಪತಿದೇವನು ಬಳ್ಳಾರಿ ಪ್ರಾಂತ್ಯವನ್ನು ತ್ಯಜಿಸಿ ಪೆನುಗೊಂಡೆ

(೧೫೮೬–೧೬೧೪) ಗೆ ಸೇರಿದ ತರುವಾಯ ಬಳ್ಳಾರಿ ಪ್ರಾಂತ್ಯವನ್ನು ಹರಪನಹಳ್ಳಿಯ ಪಾಳೆಗಾರರು ತಮ್ಮ ವಶಕ್ಕೆ ತೆಗೆದುಕೊಂಡರು. ವಿಜಯನಗರ ಪತನಾನಂತರ ಜರಿಮಲೆ, ಉಚ್ಚಂಗಿದುರ್ಗ, ಹರಪನಹಳ್ಳಿ, ತಿಮ್ಮಲಾಪುರ ಮುಂತಾದ ಪಾಳಯಪಟ್ಟುಗಳು ಸ್ವತಂತ್ರವಾದವು ಮತ್ತು ಈ ಪಾಳಯಪಟ್ಟುಗಳ ಅಧಿಕಾರವನ್ನು ಬಹುತೇಕ ನಾಯಕ ಸಮುದಾಯದವರೇ ವಹಿಸಿಕೊಂಡರು. ನಾಯಕ ಸಮುದಾಯದ ಹರಪನಹಳ್ಳಿ ಪಾಳೆಯಗಾರರಿಂದ ಕ್ರಿಶ ೧೬೭೭–೭೮ ರ ಸುಮಾರಿಗೆ ಮರಾಠರ ಅರಸು ಶಿವಾಜಿಯು ಬಳ್ಳಾರಿ ಪ್ರಾಂತ್ಯವನ್ನು ವಶಪಡಿಸಿಕೊಂಡನು. ತರುವಾಯ ಔರಂಗಜೇಬನು (೧೬೮೦) ಬಳ್ಳಾರಿ ಪ್ರಾಂತವನ್ನು ಮರಾಠರ ಹಿಡಿತವನ್ನು ತಪ್ಪಿಸಿ ತನ್ನ ಹಿಡಿತದಲ್ಲಿರಿಸಿಕೊಂಡನು. "೧೭೦೭ ರಲ್ಲಿ ಹೈದರಾಬಾದಿನ ನಿಜಾಮನು ಬಳ್ಳಾರಿ ಪ್ರಾಂತ್ಯವನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಪಟ್ಟನಾದರೂ ಅದು ಸಾಧ್ಯವಾಗದೆ ಅವನಿಗೆ ತುಂಗಾಭದ್ರಾ ನದಿಯಾಚೆಗಿನ ಪ್ರದೇಶದ ಮೇಲೆ ಮಾತ್ರ ಹಕ್ಕು ಸ್ಥಾಪನೆ ಮಾಡಲು ಸಾಧ್ಯವಾಯಿತು. ೧೭೬೧ ರ ಸುಮಾರಿಗೆ ಹೈದರಾಲಿಯು ಹರಪನಹಳ್ಳಿ ಹಾಗೂ ರಾಯದುರ್ಗ ಸಂಸ್ಥಾನಗಳಿಗೆ ದಂಡೆತ್ತಿ ಬಂದು ಅಲ್ಲಿಯ ಸ್ಥಳೀಯ ಪಾಳೆಯಗಾರರಿಂದ ಕಪ್ಪ-ಕಾಣಿಕೆ ಪಡೆದುಕೊಳ್ಳುತ್ತಾನೆ".(ಬಳ್ಳಾರಿ ಜಿಲ್ಲಾ ಗೆಜಿಟಿಯರ್:೧೯೦೪:೪೫). ೧೭೬೨ ಸುಮಾರಿಗೆ ಈ ಪ್ರದೇಶ ಸಂಪೂರ್ಣವಾಗಿ ಹೈದರನ ವಶವಾಗಿ ಅವನ ಆಳ್ವಿಕೆ ಪ್ರಾರಂಭಗೊಂಡಿತು. ಬಳ್ಳಾರಿ ನಗರದಲ್ಲಿರುವ ಕೋಟೆಯನ್ನು ಹೈದರನೇ ನಿರ್ಮಿಸಿದ ಕುರಿತು ದಾಖಲೆಗಳು ದೊರೆಯುತ್ತವೆ. ಹೈದರನ ತರುವಾಯ ಅವನ ಮಗ ಟಿಪ್ಪುಸುಲ್ತಾನನು ತನ್ನ ಕೊನೆಗಾಲದವರೆಗೂ ಬಳ್ಳಾರಿ ಪ್ರಾಂತ್ಯದ ಮೇಲೆ ಹಿಡಿತವನ್ನು ಹೊಂದಿದ್ದನು. "೧೭೯೯ರಲ್ಲಿ ನಡೆದ ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಸೋಲುತ್ತಾನೆ. ಅವನ ತರವಾಯ ಮೈಸೂರು ಪ್ರದೇಶ ಹಾಗೂ ಬಳ್ಳಾರಿ, ಉತ್ತರ ಕನ್ನಡ, ದಕ್ಷಿಣಕನ್ನಡ ಜಿಲ್ಲೆಗಳು ಇಂಗ್ಲೀಷ್‌ರಿಗೆ ವಶವಾಗುತ್ತವೆ. ಆಗಿನ ಗವರ್ನರ್ ಆಗಿದ್ದ ಲಾರ್ಡ್ ಆರ್ಥರ್ ವೆಲ್ಲೆಸ್ಸಿಯ ಸಹಾಯಕ ಸೈನ್ಯ ಪದ್ದತಿಗೆ ಸಮ್ಮತಿಸಿ ಕ್ರಿ.ಶ. ೧೮೦೦ರಲ್ಲಿ ಹೈದರಾಬಾದಿನ ನಿಜಾಮನು ಬ್ರಿಟೀಷರ ಮಾಂಡಲಿಕನಾಗುತ್ತಾನೆ. ಹೀಗಾಗಿ ನಿಜಾಮರ ವಶದಲ್ಲಿದ್ದ ಕನ್ನಡ ಜಿಲ್ಲೆಗಳು ಬ್ರಿಟೀಷರ ಅಧೀನಕ್ಕೆ ಸುಲಭವಾಗಿ ಒಳಪಡುವಂತಾಯಿತು. ಕ್ರಿ.ಶ. ೧೮೦೦ ಡಿಸೆಂಬರನಲ್ಲಿ ನಿಜಾಮನು ತನ್ನ ಆಡಳಿತಕ್ಕೆ ಒಳಪಟ್ಟಿದ್ದ ಬಳ್ಳಾರಿ ಪ್ರದೇಶವನ್ನು ಬ್ರಿಟೀಷರಿಗೆ ದತ್ತಿಯಾಗಿ ಬಿಟ್ಟುಕೊಟ್ಟನು. ಆಗಿನಿಂದ ಈ ಪ್ರದೇಶವನ್ನು ದತ್ತಿಮಂಡಲ (ಬಳ್ಳಾರಿ, ಕಡಪ, ಕರ್ನೂಲು) ವೆಂದು ಕರೆಯಲಾಯಿತು. ಕ್ರಿ.ಶ ೧೮೦೦ ರಲ್ಲಿ ನಿಜಾಮನಿಂದ ದೊರೆತ ಬಳ್ಳಾರಿ ಪ್ರಾಂತ್ಯವು ನೇರವಾಗಿ ಬ್ರಿಟೀಷರ ಆಡಳಿತಕ್ಕೆ ಒಳಪಟ್ಟಿತು".(ವಿರೂಪಾಕ್ಷಿ ಪೂಜಾರಹಳ್ಳಿ:೨೦೦೯:೪೫), ನಂತರ ಈ ಪ್ರದೇಶ ಮುಂಬೈ ಪ್ರಾಂತ್ಯಾಡಳಿತಕ್ಕೆ ಒಳಪಟ್ಟು ಮುಂಬೈ ಕರ್ನಾಟಕವೆಂಬ ಹೆಸರಿಗೆ ಒಳಗಾಯಿತು. ಕ್ರಿ.ಶ ೧೮೧೮ ಸುಮಾರಿಗೆ ಈ ಪ್ರದೇಶವು ಕೆಲವು ಕಾಲ ಮರಾಠ ಪೇಶ್ವೆಗಳ ವಶದಲ್ಲಿಯೂ ಇದ್ದುದಾಗಿ ತಿಳಿದುಬರುತ್ತದೆ.

"ಬಳ್ಳಾರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಕೊಳ್ಳೆಗಾಲ ಮುಂತಾದ ಕೆಲವು ಕನ್ನಡ ಪ್ರದೇಶಗಳು ಬ್ರಿಟೀಷರ ನೇರ ಆಡಳಿತಕ್ಕೆ ಒಳಪಟ್ಟು ಮದ್ರಾಸ್ ಪ್ರಾಂತಕ್ಕೆ ಸೇರಿಸಲ್ಪಟ್ಟವು. ಬೆಳಗಾವಿ, ಬಿಜಾಪುರ, ಕೊಡಗು, ಉತ್ತರ ಕನ್ನಡದ ಕೆಲವು ಭಾಗಗಳು ಹಾಗೂ ಧಾರವಾಡ ಜಿಲ್ಲೆ ಮುಂಬೈ ಪ್ರಾಂತ್ಯಾಕ್ಕೆ

ಸೇರಿಸಲ್ಪಟ್ಟವು"(ಸೂರ್ಯನಾಥ ಕಾಮತ್:೧೯೯೮:೯೫), ಭಾರತದಾದ್ಯಂತ ವ್ಯಾಪಿಸಿದ್ದ ಸ್ವಾತಂತ್ರ್ಯ ಹೋರಾಟದ ಕಾವು ಬಳ್ಳಾರಿಯ ಮೇಲೂ ಪರಿಣಾಮ ಉಂಟುಮಾಡಿತು. ಆದರೆ ಬಳ್ಳಾರಿ ಪ್ರದೇಶದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟ ಚಳುವಳಿಯಲ್ಲಿ ಕೇವಲ ಮೇಲ್ವರ್ಗದವರೇ ಪಾಲ್ಗೊಂಡಂತೆ ಕಂಡು ಬರುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರು ಕೋಲಾಚಲಂ ವೆಂಕಟರಾವ್, ಕಲ್ಲೂರು ಸುಬ್ಬಾರಾವ್, ನೇತ್ರಹಳ್ಳಿ ಸಂಜೀವರಾವ್, ವೆಂಕಟರಮಣಾಚಾರ್ಯ, ಬಾದನಹಟ್ಟಿ ವೆಂಕೋಬರಾಯರು, ಟೀಕೂರು ನಾರಾಯಣ ಶಾಸ್ತ್ರಿಗಳು, ವ್ಯಾಂಗ್ಲಿ ಭಿಮಸೇನರಾವ್, ಬಳ್ಳಾರಿ ರಾಘವ, ಪಂಡಿತ ತಾರನಾಥ ಮುಂತಾದ ಮೇಲ್ವರ್ಗದವರಾಗಿದ್ದರು.

### ೨.೨ ಬಳ್ಳಾರಿ ಜಿಲ್ಲೆ-ಭೌಗೋಳಿಕ ಹಿನ್ನೆಲೆ

ಕರ್ನಾಟಕದ ಒಟ್ಟು ಮೂವತ್ತು ಜಿಲ್ಲೆಗಳಲ್ಲಿ ಬಳ್ಳಾರಿ ಜಿಲ್ಲೆಯೂ ಒಂದು. ಐತಿಹಾಸಿಕವಾಗಿ ತುಂಬಾ ಪ್ರಸಿದ್ಧಿಯನ್ನು ಪಡೆದ ವಿಜಯನಗರ ಸಾಮ್ರಾಜ್ಯದ ಕೇಂದ್ರ ಸ್ಥಾನವನ್ನು ಹೊಂದಿದ್ದ ಬಳ್ಳಾರಿ ಜಿಲ್ಲೆಯು ಕರ್ನಾಟಕದ ಮಧ್ಯ ಭಾಗದಲ್ಲಿದೆ. ಈ ಜಿಲ್ಲೆಯು ನೈರುತ್ಯ ಈಶಾನ್ಯ ದಿಕ್ಕುಗಳ ನಡುವೆ ಚಾಚಿಕೊಂಡಿದೆ. ಪ್ರಸ್ತುತ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯನ್ನು ಗಮನಿಸಿದಾಗ ನೈರುತ್ಯ ದಿಕ್ಕಿನ ಹರಪನಹಳ್ಳಿ ತಾಲೂಕಿನ ತೆಲಗಿ ಗ್ರಾಮದಿಂದ ಈಶಾನ್ಯ ದಿಕ್ಕಿನಲ್ಲಿರುವ ಸಿರುಗುಪ್ಪ ತಾಲೂಕಿನ ಸಂತೆಕೂಡ್ಲೂರು ಗ್ರಾಮದವರೆಗೆ ಹಾಗೂ ಪೂರ್ವ ದಿಕ್ಕಿನಿಂದ ಪಶ್ಚಿಮಕ್ಕೆ ಬಳ್ಳಾರಿ ತಾಲೂಕಿನ ಕಾರೇಕಲ್ ವೀರಾಪುರ ಗ್ರಾಮದಿಂದ ಹಡಗಲಿ ತಾಲೂಕಿನ ಹಿರೇಬನ್ನಟ್ಟಿ ಗ್ರಾಮದವರೆಗೆ ವ್ಯಾಪಿಸಿಕೊಂಡಿದೆ. ೧೯೯೭ರಲ್ಲಿ ಕರ್ನಾಟಕ ರಾಜ್ಯವು ಜಿಲ್ಲೆಗಳನ್ನು ಮರುವಿಂಗಡಿಸಿದಾಗ ಹರಪನಹಳ್ಳಿಯು ದಾವಣಗೆರೆ ಜಿಲ್ಲೆಯ ಪಾಲಾಯಿತು. ಹೀಗಾಗಿ ಪ್ರಸ್ತುತ ಬಳ್ಳಾರಿ ಜಿಲ್ಲೆಗೆ ಏಳು ತಾಲೂಕುಗಳು ಮಾತ್ರ ಉಳಿದವು. ೨೦೧೮ರಲ್ಲಿ ಏಳು ತಾಲೂಕುಗಳಲ್ಲಿ ಹೊಸಪೇಟೆ, ಕೂಡ್ಲಿಗಿ, ಬಳ್ಳಾರಿ ತಾಲೂಕುಗಳನ್ನು ವಿಂಗಡಿಸುವ ಮೂಲಕ ಹತ್ತು ತಾಲೂಕುಗಳ ರಚನೆಯಾಯಿತು. ಬಳ್ಳಾರಿಯಿಂದ ಸಿಡಿದು ದಾವಣಗೆರೆಗೆ ಸೇರಿದ್ದ ಹರಪನಹಳ್ಳಿಯು ಕೆಲವು ಸೌಲಭ್ಯಗಳನ್ನು ಪಡೆಯಬೇಕೆಂಬ ಆಶೋತ್ತರದ ಒತ್ತಡದ ಮೇರೆಗೆ ಬಳ್ಳಾರಿ ಜಿಲ್ಲೆಗೆ (ಆದೇಶ ಸಂಖ್ಯೆ: ಆರ್ ಡಿ ೧೩೯/ಬಿಎಚ್‌ಯುಡಿಎಪಿಯು/೨೦೧೩, ಬೆಂಗಳೂರು ದಿನಾಂಕ:೨೧.೦೭.೨೦೧೮) ಮರು ಸೇರ್ಪಡೆಗೊಳಿಸಲು ಆದೇಶ ಹೊರಡಿಸಲಾಯಿತು. ಹೀಗಾಗಿ ಬಳ್ಳಾರಿ ಜಿಲ್ಲೆಯು ಪ್ರಸ್ತುತ ಹನ್ನೊಂದು ತಾಲೂಕುಗಳನ್ನು ಹೊಂದಿದ ದೊಡ್ಡ ಜಿಲ್ಲೆಗಳಲ್ಲಿ ಒಂದೆಂದು ಗುರುತಿಸುವಂತಾಗಿದೆ. ಜಿಲ್ಲೆಯ ಭೌಗೋಳಿಕ ವಿಸ್ತೀರ್ಣವು ೮೪೪೭.೦೦ ಚ.ಕಿ. ಮೀಟರ್‌ಗಳಷ್ಟಿತ್ತು. ಆದರೆ ಹರಪನಹಳ್ಳಿ ತಾಲೂಕಿನ ಸೇರ್ಪಡೆಯಿಂದಾಗಿ ಪ್ರಸ್ತುತ ಭೌಗೋಳಿಕ ವಿಸ್ತೀರ್ಣವು ೯೮೭೭.೨೪ ಚ.ಕಿ.ಮೀಗಳಷ್ಟಾಗಿದೆ. ಇದು ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಶೇ. ೪.೪೦ ರಷ್ಟು ಪಾಲನ್ನು ಹೊಂದಿದೆ. ಅಂದರೆ ರಾಜ್ಯದ ಒಟ್ಟು ಜಿಲ್ಲೆಗಳಿಗೆ ಹೋಲಿಸಿದರೆ ಇದು ವಿಸ್ತೀರ್ಣದಲ್ಲಿ ಆರನೇ ಸ್ಥಾನದಲ್ಲಿದೆ.

ಉತ್ತರಕ್ಕೆ ಕೊಪ್ಪಳ ಜಿಲ್ಲೆ, ದಕ್ಷಿಣಕ್ಕೆ ದಾವಣಗೆರೆ, ಚಿತ್ರದುರ್ಗ ಜಿಲ್ಲೆ, ಪಶ್ಚಿಮಕ್ಕೆ ಗದಗ ಜಿಲ್ಲೆ, ಪೂರ್ವಕ್ಕೆ ಆಂದ್ರ ಪ್ರದೇಶಗಳಿಂದ ಬಳ್ಳಾರಿ ಜಿಲ್ಲೆಯು ಸುತ್ತುವರೆದಿದೆ. ಈ ಜಿಲ್ಲೆಯ ಪೂರ್ವಭಾಗವು ಸಮತಟ್ಟಾದ ಭೂಮಿಯನ್ನು ಹೊಂದಿದ್ದು ಕೃಷಿಗೆ ಅನುಕೂಲಕರವಾಗಿದೆ. ಜಿಲ್ಲೆಯು ಉಷ್ಣ ಹವಾಮಾನದಿಂದ

ಕೂಡಿದೆ. ಈ ಜಿಲ್ಲೆಯಲ್ಲಿ ಮಳೆ ಪ್ರಮಾಣ ಕಡಿಮೆಯಂದೇ ಹೇಳಬಹುದು. ಶುಷ್ಕ ವಾತಾವರಣದಿಂದ ಕೂಡಿದ ಪೂರ್ವಭಾಗದಲ್ಲಿ ಹೆಚ್ಚು ಅರಣ್ಯ ಪ್ರದೇಶವಿದೆ. ಈ ಭಾಗದಲ್ಲಿ ತುಂಗಾಭದ್ರ ನದಿಯಿಂದಾಗಿ ಪೂರ್ವ ತಾಲೂಕುಗಳಿಗೆ ನೀರಾವರಿ ಸೌಲಭ್ಯ ದೊರೆತಿದೆ. ಜಿಲ್ಲೆಯ ಹಡಗಲಿ ತಾಲೂಕನ್ನು ಪ್ರವೇಶಿಸುವ ತುಂಗಾಭದ್ರಾ ನದಿಯು ಮುಂದೆ ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಸಿರುಗುಪ್ಪ ತಾಲೂಕುಗಳನ್ನು ಹಾದು ಆಂಧ್ರ ಪ್ರದೇಶದ ಮೂಲಕ ಮುಂದೆ ಹೋಗಿ ಸಮುದ್ರ ಸೇರುತ್ತದೆ. ತುಂಗಾಭದ್ರಾ ನದಿಯು ಒಟ್ಟು ಮೂರು ನೂರ ಇಪ್ಪತ್ತು ಕಿ.ಮೀ ದೂರ ಹರಿಯುತ್ತದೆ. ತುಂಗಾಭದ್ರಾ ನದಿಯ ಹೊರತಾಗಿ ಹಗರಿ(ವೇದಾವತಿ) ಎಂಬ ಚಿಕ್ಕ ನದಿಯೊಂದು ಈ ಜಿಲ್ಲೆಯಲ್ಲಿ ಹರಿಯುತ್ತದೆ. ಇವುಗಳ ಹೊರತಾಗಿ ನಾರಿ ಹಳ್ಳದಂತಹ ಚಿಕ್ಕ ಪುಟ್ಟ ಹಳ್ಳಗಳು ಈ ಜಿಲ್ಲೆಯಲ್ಲಿ ಕಂಡುಬರುತ್ತವೆ. ಇವುಗಳಲ್ಲದೆ ಕೆರೆ ಕುಂಟೆಗಳೂ ಸಹ ಜಿಲ್ಲೆಯಾದ್ಯಂತ ಕಂಡುಬರುತ್ತವೆ. ಅತ್ಯುತ್ತಮ ಗುಣಮಟ್ಟದ ಕಬ್ಬಿಣ ಮತ್ತು ಮ್ಯಾಂಗನೀಸ್ ನಿಕ್ಷೇಪವು ಸಂಡೂರು, ಹೊಸಪೇಟೆ, ಬಳ್ಳಾರಿ ತಾಲೂಕುಗಳ ಗುಡ್ಡಗಳಲ್ಲಿ ಇದೆ. ಕಬ್ಬಿಣ ನಿಕ್ಷೇಪದ ಪ್ರಮಾಣ ೧೦೩೨.೪೦ ದಶಲಕ್ಷ ಟನ್‌ಗಳಿಷ್ಟಿದೆ ಎಂದು ಭೂಗರ್ಭಶಾಸ್ತ್ರಜ್ಞರು ಅಂದಾಜಿಸಿದ್ದಾರೆ ಹಾಗೇ ಮ್ಯಾಂಗನೀಸ್ ಪ್ರಮಾಣವು ೧೮.೮೧ ದಶಲಕ್ಷ ಟನ್‌ಗಳಿಷ್ಟಿದೆ ಎಂದು ಗುರುತಿಸಲಾಗಿದೆ. "ಆಂಗ್ಲರು ಭಾರತಕ್ಕೆ ಬಂದು ಗಣಿಗಾರಿಕೆಯ ಉದ್ದಿಮೆ ಸ್ಥಾಪಿಸುವುದಕ್ಕೂ ಮೊದಲು ಸ್ಥಳೀಯ ಕುಶಲಕರ್ಮಿ ಮುದ್ದೆಕಮ್ಮಾರರು ಕಬ್ಬಿಣ ತಯಾರಿಕೆಯಲ್ಲಿ ತೊಡಗಿದ್ದರು. ಕಬ್ಬಿಣ ಕಾರ್ಖಾನೆಗಳ ಪ್ರವೇಶದಿಂದ ಈ ಸಮುದಾಯವು ನಿರ್ಗತಿಕ ಸ್ಥಿತಿಗೆ ತಲುಪಿತು" ಗ್ರಾನೇಟ್ ಕಲ್ಲುಗಳನ್ನು ಹೊಂದಿದ ಕಣಶಿಲೆಯ ಗುಡ್ಡಗಳು ಬಳ್ಳಾರಿ ಜಿಲ್ಲೆಯಲ್ಲಿ ವ್ಯಾಪಕವಾಗಿ ಹರಡಿಕೊಂಡಿದೆ. ಗ್ರಾನೇಟ್ ಗಣಿಗಾರಿಕೆಯು ಇಲ್ಲಿ ವ್ಯಾಪಕವಾಗಿ ಹರಡಿರುವುದನ್ನು ಕಾಣುತ್ತೇವೆ. ೧೯೯೧ರ ಮಧ್ಯ ಭಾಗದಲ್ಲಿ ಜಾರಿಗೆ ಬಂದ ಹೊಸ ಆರ್ಥಿಕ ನೀತಿಯ ಪರಿಣಾಮವಾಗಿ ಜಿಲ್ಲೆಯಲ್ಲಿ ಸರ್ಕಾರಿ ಹಾಗೂ ಖಾಸಗಿ ಕಂಪನಿಗಳು ಬೃಹತ್ ಪ್ರಮಾಣದ ಕಬ್ಬಿಣ ಮತ್ತು ಉಕ್ಕು ಉದ್ದಿಮೆಗಳ ಮೇಲೆ ಬಂಡವಾಳ ತೊಡಗಿಸಿವೆ. ಜೊತೆಗೆ ಸ್ಪಾಂಜ್ ಐರನ್ ತಯಾರಿಸುವ ಚಿಕ್ಕ ಕಾರ್ಖಾನೆಗಳೂ ತಲೆಯತ್ತಿವೆ.

**ಉಷ್ಣ ವಿದ್ಯುತ್ ತಯಾರಿಕಾ ಘಟಕ**

ಕುಡಿತಿನಿ ಮತ್ತು ತೋರಣಗಲ್ಲಿನಲ್ಲಿ ಎರಡು ಉಷ್ಣವಿದ್ಯುತ್ ತಯಾರಿಕಾ ಘಟಕಗಳು ತಲೆಯತ್ತಿವೆ. ಕುಡಿತಿನಿಯ ಉಷ್ಣ ವಿದ್ಯುತ್ ಸ್ಥಾವರವನ್ನು ಕರ್ನಾಟಕ ವಿದ್ಯುತ್ ನಿಗಮ ನಿರ್ವಹಿಸಿದರೆ ತೋರಣಗಲ್ಲಿನ ಉಷ್ಣ ವಿದ್ಯುತ್ ಸ್ಥಾವರವನ್ನು ಜಿಂದಾಲ್ ಕಂಪನಿಯು ನಿರ್ವಹಿಸುತ್ತಿದೆ. ಜಿಲ್ಲೆಯಲ್ಲಿ ಜರುಗುತ್ತಿರುವ ಔದ್ಯೋಗಿಕರಣ ಪ್ರಕ್ರಿಯೆ ಜಿಲ್ಲೆಯ ಕೆಲವೇ ಪ್ರದೇಶಗಳಿಗೆ ಸೀಮಿತಗೊಂಡಿವೆ. ಪ್ರಾದೇಶಿಕವಾಗಿ ಈ ಜಿಲ್ಲೆಯನ್ನು ಮೂರು ಭಾಗಗಳಾಗಿ ವಿಂಗಡಿಸಿದ್ದು ಅವನ್ನು ಕ್ರಮವಾಗಿ ಪೂರ್ವ, ಪಶ್ಚಿಮಗಳೆಂದಿದ್ದವು. ಹರಪನಹಳ್ಳಿ ಸೇರ್ಪಡೆಯ ತರುವಾಯ ಉತ್ತರ ಭಾಗವನ್ನು ಸೃಷ್ಟಿಸಲಾಗಿದೆ.

ಪೂರ್ವ ಭಾಗದಲ್ಲಿ ಬಳ್ಳಾರಿ, ಸಿರುಗುಪ್ಪ, ಸಂಡೂರು, ಕುರುಗೋಡು

ಪಶ್ಚಿಮ ಭಾಗದಲ್ಲಿ ಹೊಸಪೇಟೆ, ಕಂಪ್ಲಿ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ ಸೇರಿವೆ.

ಉತ್ತರ ಭಾಗದಲ್ಲಿ ಹರಪನಹಳ್ಳಿ, ಹಡಗಲಿ, ಕೊಟ್ಟೂರು ತಾಲೂಕುಗಳನ್ನು ಗುರುತಿಸಲಾಗಿದೆ. ಪಶ್ಚಿಮ ಭಾಗದ ಈ ಮೂರು ತಾಲೂಕುಗಳು ಔದ್ಯಮಿಕ ಚಟುವಟಿಕೆಗಳಿಂದ ದೂರವೇ ಉಳಿದಿವೆ. ಸಿಂಗಟಾಲೂರು ಮತ್ತು ಇತರೆ ಚಿಕ್ಕ ಏತ ನೀರಾವರಿ ಯೋಜನೆಗಳಿಂದಾಗಿ ಹಗರಿಬೊಮ್ಮನಹಳ್ಳಿ ಮತ್ತು ಹಡಗಲಿಯ ಅರ್ಧದಷ್ಟು ಪ್ರದೇಶವು ಕೃಷಿಗೆ ನೀರಾವರಿ ಸೌಲಭ್ಯ ಪಡೆಯುವಂತಾಗಿದೆಯಾದರೂ ಆ ಭಾಗ್ಯ ಕೂಡ್ಲಿಗಿ ಮತ್ತು ಕೊಟ್ಟೂರು, ಸಂಡೂರು ತಾಲೂಕುಗಳಿಗೆ ಇಲ್ಲವಾಗಿದೆ. ಆರ್ಥಿಕವಾಗಿ ತುಂಬಾ ಹಿಂದುಳಿದ ತಾಲೂಕೆಂದು ಕೂಡ್ಲಿಗಿ, ಕೊಟ್ಟೂರುಗಳನ್ನು ಗುರುತಿಸಲಾಗಿದೆ.

**ಬಳ್ಳಾರಿ ಜಿಲ್ಲೆಯ ಕುಟುಂಬಗಳು**

೨೦೧೧ರ ಜನಗಣತಿ ಪ್ರಕಾರ ಕರ್ನಾಟಕದ ಒಟ್ಟು ಕುಟುಂಬಗಳು ೧,೦೨,೩೨,೧೩೩ ಎಂದು ಗುರುತಿಸಲಾಗಿದೆ. ಇದರಲ್ಲಿ ಬಳ್ಳಾರಿ ಜಿಲ್ಲೆಯ ಒಟ್ಟು ಕುಟುಂಬಗಳ ಸಂಖ್ಯೆಯು ೩,೭೩,೦೩೪ ರಷ್ಟಿದೆ ಅಂದರೆ ಕರ್ನಾಟಕ ರಾಜ್ಯದ ಒಟ್ಟು ಕುಟುಂಬಗಳಿಗೆ ಹೋಲಿಸಿದರೆ ಬಳ್ಳಾರಿ ಜಿಲ್ಲೆಯು ಶೇ.೩.೬೫ ರಷ್ಟು ಕುಟುಂಬಗಳನ್ನು ಒಳಗೊಂಡಿದೆ. ಇದರಲ್ಲಿ ಜಿಲ್ಲೆಯ ತಾಲೂಕುವಾರು ಕುಟುಂಬಗಳ ಸಂಖ್ಯೆಯನ್ನು ನೋಡಿದರೆ ಹಡಗಲಿಯು ಒಟ್ಟು ೩೧.೦೮೪ ಕುಟುಂಬಗಳನ್ನು ಒಳಗೊಂಡಿದ್ದರೆ ಹಗರಿಬೊಮ್ಮನಹಳ್ಳಿಯು ೨೮,೮೭೧ ಕುಟುಂಬಗಳನ್ನು, ಹೊಸಪೇಟೆಯು ೭೦,೭೧೯ ಕುಟುಂಬಗಳನ್ನು, ಸಿರಗುಪ್ಪ ೪೨,೯೮ ಕುಟುಂಬಗಳನ್ನು, ಬಳ್ಳಾರಿಯು ೧,೧೭,೨೩೩ ಕುಟುಂಬಗಳನ್ನು, ಸಂಡೂರು ೩೫,೨೧೮ ಕುಟುಂಬಗಳನ್ನು ಹಾಗೂ ಕೂಡ್ಲಿಗಿ ೪೭,೮೧೧ ಕುಟುಂಬಗಳನ್ನು ಹೊಂದಿರುವುದು ಕಂಡುಬರುತ್ತಿದೆ. ಇನ್ನುಳಿದ ಕಂಪ್ಲಿ, ಕೊಟ್ಟೂರು, ಕುರುಗೋಡು, ಹರಪನಹಳ್ಳಿ ತಾಲೂಕುಗಳು ಹೊಸದಾಗಿ ಸೇರ್ಪಡೆಗೊಂಡಿದ್ದು ಅವುಗಳ ಅಂಕೆಸಂಖ್ಯೆಗಳು ನಿರ್ಧಿಷ್ಟವಾಗಿ ದೊರೆಯದೇ ಇರುವುದರಿಂದ ಅವುಗಳ ಅಂಕೆಸಂಖ್ಯೆಗಳನ್ನು ನೀಡಲು ಸಾಧ್ಯವಾಗಿರುವುದಿಲ್ಲ

**೨.೩ ಬಳ್ಳಾರಿ ಜಿಲ್ಲೆ ಹುಟ್ಟು ಮತ್ತು ಮಹತ್ವ**

ಈ ಹಿಂದೆ ನೋಡಿದಂತೆ ಬಳ್ಳಾರಿಗೆ ತುಂಬಾ ಪ್ರಾಚೀನ ಇತಿಹಾಸವಿದೆ ಪ್ರಾಗೈತಿಹಾಸಿಕ ನೆಲೆಗಳು ಇಲ್ಲಿ ಕಂಡುಬರುತ್ತವೆ. ಬಳ್ಳಾರಿಯ ಸಂಗನಕಲ್ಲಿನಲ್ಲಿ ಪ್ರಾಗೈತಿಹಾಸಿಕ ಕಾಲದ ಶಿಲಾ ಆಯುಧಗಳ ಕಾರ್ಯಗಾರವಿತ್ತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ ಬಳ್ಳಾರಿಗೆ ಬಳ್ಳಾರಿ ಎಂದು ಹೆಸರು ಬರಲು ಆ ಊರಿನ ಆದಿದೈವ ಬಳ್ಳಾರಿ ದುರ್ಗಮ್ಮನೇ ಕಾರಣವೆಂಬ ವಾದವೂ ಇದೆ. ಕ್ರಿ.ಶ ೧೨ ನೇ ಶತಮಾನದಲ್ಲಿ ರಚಿತಗೊಂಡ ಯಶೋಧರ ಚರಿತೆಯಲ್ಲಿ ಬಳರಿ ಎಂಬ ಪದ ಪ್ರಯೋಗಗೊಂಡಿದೆ ಬಳರಿ ಎಂದರೆ ದೇವತೆ, ಸ್ತ್ರೀದೈವ ಎಂಬ ಅರ್ಥಗಳಿವೆ. ಬಳ್ಳಾರಿಯ ಆದಿ ದೈವ ಬಳರಿ (ದುರ್ಗಮ್ಮ)ಯಿಂದಾಗಿಯೇ ಆ ಊರಿಗೆ ಬಳ್ಳಾರಿ ಎಂಬ ಹೆಸರು ಬಂದಿದೆ ಎಂಬ ವಾದವೂ ಇದೆ. "ಈ ನಗರ ಕ್ರಿ.ಶ ೧೨ನೇ ಶತಮಾನಕ್ಕಾಗಲೇ ಅಸ್ತಿತ್ವದಲ್ಲಿತ್ತೆಂಬ ವಾದವಿದೆ. ಬೈಲೂರಿನಲ್ಲಿ ಸಿಕ್ಕ

ಶಾಸನ ಕ್ರಿ.ಶ.೧೧೩೧ರದಾಗಿದ್ದು ಆ ಶಾಸನದಲ್ಲಿ ಬಳ್ಳಾರಿ ಪ್ರದೇಶ ಉಲ್ಲೇಖ ಗೊಂಡಿರುವುದನ್ನು ಕಾಣಬಹುದಾಗಿದೆ. ನಂತರ ಸಿಂಧೀಗೇರಿ, ಕೋಳೂರು, ಕುರುಗೋಡುಗಳಲ್ಲಿ ದೊರತ ಶಾಸನಗಳಲ್ಲಿ ಬಳ್ಳಾರಿ ಎಂಬ ಪದ ಬಳಕೆಗೊಂಡಿರುವುದನ್ನು ಕಾಣಬಹುದಾಗಿದೆ. ಹೊಯ್ಸಳರ ಮೂರು ಶಾಸನಗಳು (ಕ್ರಿ.ಶ.೧೧೯೧ ಬೇಲೂರು ಶಾಸನ ೧೯೩) ಕ್ರಿಶ ೧೧೭೮ ರ ನಾಗಮಂಗಲ ಶಾಸನ, ಕ್ರಿ.ಶ.೧೧೮೩ ರ ಬೇಲೂರು ಶಾಸನ ೧೩೭) ಶಾಸನಗಳಲ್ಲಿ ಬಳ್ಳಾರಿ ಪದ ಬಳಕೆಗೊಂಡಿರುವುದನ್ನು ಕಾಣಬಹುದಾಗಿದೆ"(ಗೆಜಿಟೆಡ್ ಆಫ್ ಇಂಡಿಯಾ:೧೯೭೨) ಬ್ರಿಟೀಷ್ ಭಾರತದ ಕಾಲದಲ್ಲಿ ಆಗಿನ ಹಳೇ ಮದ್ರಾಸ್ ಪ್ರಾಂತ್ಯಕ್ಕೆ ಬಳ್ಳಾರಿ ಸೇರ್ಪಡೆಗೊಂಡಿತ್ತು ಕ್ರಿಶ ೧೮೦೦ರಲ್ಲಿ ನಿಜಾಮರಿಂದ ಬ್ರಿಟೀಷರಿಗೆ ಕಡಪ ಕರ್ನೂಲು ಅನಂತಪುರ ಜಿಲ್ಲೆ ಬಳ್ಳಾರಿಯನ್ನೊಳಗೊಂಡು ಮದ್ರಾಸ್ ಪ್ರೆಸಿಡೆನ್ಸಿಯ ದತ್ತಿ ಮಂಡಲವೆಂದು ಘೋಷಣೆಗೊಂಡಿದ್ದವು. ಕ್ರಿಶ ೧೮೦೦ರಲ್ಲಿ ಬಳ್ಳಾರಿ ಜಿಲ್ಲೆಗೆ ಪ್ರಪ್ರಥಮ ಕಲೆಕ್ಟರಾಗಿ ಥಾಮಸ್ ಮುನ್ರೊ ನೇಮಕ ಗೊಂಡಿದ್ದರು. ಭಾಷಾವಾರು ಪ್ರಾಂತಗಳಾಗಿ ವಿಂಗಡಣೆಗೊಳ್ಳುವವರೆಗೂ ಬಳ್ಳಾರಿಯು ಮದ್ರಾಸ್ ಪ್ರೆಸಿಡೆನ್ಸಿಯಲ್ಲಿಯೇ ಇದ್ದಿತು. ಸ್ವಾತಂತ್ರ್ಯಾ ನಂತರ ಅಕ್ಟೋಬರ್ ೧, ೧೯೫೩ರಲ್ಲಿ ಭಾಷಾವಾರು ಪ್ರಾಂತ್ಯಗಳು ವಿಂಗಡಣೆಯಾದ ತರುವಾಯ ಬಳ್ಳಾರಿಯು ಮೈಸೂರು ರಾಜ್ಯಕ್ಕೆ ಸೇರಿಸಲ್ಪಟ್ಟಿತು. ಬ್ರಿಟೀಷರು ಬಳ್ಳಾರಿಯನ್ನು ಸುಮಾರು ಒಂದುನೂರ ನಲವತ್ತೇಳು ವರ್ಷಗಳಷ್ಟು ದೀರ್ಘವಾಗಿ ಆಳಿದರು. ಭಾರತ ಸ್ವತಂತ್ರವಾಗಿ ಹಲವು ವರ್ಷಗಳು ಕಳೆದರೂ ಭಾರತದಲ್ಲಿ ಇನ್ನೂ ಮಹಿಳೆಯರಿಗೆ ಪರಿಪೂರ್ಣವಾದ ಸ್ವಾತಂತ್ರ್ಯ ಸಿಕ್ಕಿರಲಿಲ್ಲ. ಅಷ್ಟೇಕೆ ಮಹಿಳಾ ಮೀಸಲಾತಿ ಕಾನೂನು ಜಾರಿಗೆ ಬಂದಿರಲಿಲ್ಲ. ಅಂತಹ ಕಾಲದಲ್ಲಿ ಮಹಿಳೆಯೊಬ್ಬರು ಬಳ್ಳಾರಿ ಪ್ರಾಂತದಿಂದ ಚುನಾವಣೆಯಲ್ಲಿ ಗೆದ್ದು ಮದ್ರಾಸ್ ಶಾಸನ ಸಭೆಯ ಸದಸ್ಯರಾದುದು ಒಂದು ವಿಶೇಷವೆಂದೇ ಹೇಳಬಹುದು

"ಗೊರ್ಲೆ ಮನೆತನದ ಗೊರ್ಲೆ ರುದ್ರಮ್ಮನವರನ್ನು ಚುನಾವಣೆಗೆ ನಿಲ್ಲಿಸಲು ಈ ಪ್ರಾಂತ್ಯದ ಬ್ರಾಹ್ಮಣೇತರ ಮುಖ್ಯ ಜಾತಿಯಾದ ಲಿಂಗಾಯಿತ ಸಮುದಾಯ ಆಪೇಕ್ಷಿಪಟ್ಟಿತು. ಆದರೆ ಗೊರ್ಲೆ ರುದ್ರಮ್ಮ ಚುನಾವಣೆಗೆ ನಿಲ್ಲಲು ಹಿಂಜರಿದುದರಿಂದ ಆಗ ಜಿಲ್ಲಾ ಕಾಂಗ್ರೇಸ್ ಅಧ್ಯಕ್ಷರಾದ ವಿ.ಬಿ. ಕೇಶವರಾವ್ ರವರ ಪತ್ನಿ ಜಯಲಕ್ಷ್ಮಿಯವರ ವಿರುದ್ಧ ಅಲ್ಲಂ ಸುಮಂಗಳಮ್ಮನವರನ್ನು ಪ್ರತಿಸ್ಪರ್ಧಿಯಾಗಿ ನಿಲ್ಲಿಸಲಾಯಿತು. ಬ್ರಾಹ್ಮಣ ವರ್ಗದ ಜಯಲಕ್ಷ್ಮಿಯವರನ್ನು ಹಿಂದೆ ಹಾಕಿ ಅಲ್ಲಂ ಸುಮಂಗಳಮ್ಮನವರು ಜಯಶಾಲಿಗಳಾದರು. ಕಾಂಗ್ರೇಸ್ ಅಭ್ಯರ್ಥಿಯನ್ನೇ ಸೋಲಿಸಿದ ಅಲ್ಲಂ ಸುಮಂಗಳಮ್ಮನವರನ್ನು ನೋಡಲು ಆಗಿನ ಪ್ರಧಾನಿಯಾಗಿದ್ದ ಜವಹಾರ್‌ಲಾಲ್ ನೆಹರೂರವರೇ ಸ್ವತಃ ಬಳ್ಳಾರಿಗೆ ಬಂದಿದ್ದರಂತೆ. ಮದ್ರಾಸ್ ಶಾಸನ ಸಭೆಗೆ ಮಹಿಳಾ ಅಭ್ಯರ್ಥಿಯಾಗಿ ಅಲ್ಲಂ ಸುಮಂಗಳಮ್ಮನವರು ಕುರುಗೋಡು ಕ್ಷೇತ್ರದಿಂದ ಆಯ್ಕೆಯಾದುದು ತಿಳಿದು ಬರುತ್ತದೆ"(ಮೃತ್ಯುಂಜಯ ರುಮಾಲೆ:೧೯೯:೪೯) ಆದರೆ ಮೀಸಲಾತಿ ಕಾಯ್ದೆ ಜಾರಿಗೆ ಬರುವ ಪೂರ್ವದಲ್ಲಿ ಯಾವುದೇ ಕೆಳವರ್ಗ ಹಾಗೂ ಅಲ್ಪ ಸಂಖ್ಯಾತ ವರ್ಗದ ಮಹಿಳೆಯರಲ್ಲಿ ಒಬ್ಬೇ ಒಬ್ಬ ಮಹಿಳೆಯೂ ಯಾವುದೇ ರಾಜಕೀಯ ಸ್ಥಾನಗಳಿಗೆ ಸ್ಪರ್ಧಿಸಲು ಸಾಧ್ಯವಾಗದೇ ಹೋದುದು ದುರಂತವೆಂದೇ ಹೇಳಬಹುದು.

## ೨.೪ ಧಾರ್ಮಿಕ ಹಿನ್ನೆಲೆ

ಬಳ್ಳಾರಿ ಜಿಲ್ಲೆಯು ವಿವಿಧ ಜಾತಿ ಪಂಗಡಗಳನ್ನು ಒಳಗೊಂಡಿದೆ ಈ ಜಿಲ್ಲೆಯಲ್ಲಿ ಮುಖ್ಯವಾಗಿ ಲಿಂಗಾಯಿತ, ಕುರುಬ, ಮುಸ್ಲಿಂ, ಬೇಡ, ಮಾದಿಗ, ಚಲುವಾದಿ, ದೊಂಬ, ಕಮ್ಮಾರ, ಕುಂಬಾರ, ಅಗಸ, ಬಡಿಗ, ಕ್ಷೌರಿಕ, ಕಮ್ಮಾ, ಡುಂಗ್ರಿ–ಗರಾಸಿಯ, ಪಾರ್ಧಿ/ಹಕ್ಕಿ–ಪಿಕ್ಕಿ, ಮುಂತಾದ ಜಾತಿ, ಬುಡಕಟ್ಟುಗಳನ್ನು ಒಳಗೊಂಡಿದೆ. ಆದರೆ ಪ್ರಭಲ ಜಾತಿಯಾಗಿ ಲಿಂಗಾಯಿತ, ಕುರುಬ ಜಾತಿಗಳು ಕಂಡು ಬರುತ್ತವೆ. ವಾಲ್ಮೀಕಿ, ಮಾದಿಗ, ಚಲುವಾದಿ ಜಾತಿಗಳು ಪ್ರಮಾಣದಲ್ಲಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದರೂ ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಜಾತಿಗಳಾಗಿ ಕಂಡುಬರುತ್ತವೆ. ಅಲ್ಪ ಸಂಖ್ಯಾತ ಧರ್ಮಿಯರಾದ ಮುಸ್ಲಿಂ, ಕ್ರೈಸ್ತ, ಜೈನ ಧರ್ಮೀಯರೂ ಇಲ್ಲಿರುವರು. ಇನ್ನುಳಿದಂತೆ ಮೇದ ಡುಂಗ್ರಿ–ಗರಾಸಿಯ, ಪಾರ್ಧಿ/ಹಕ್ಕಿಪಿಕ್ಕಿ, ಅಗಸ, ಕ್ಷೌರಿಕ, ಕಮ್ಮಾರ, ಕುಂಬಾರ ಮುಂತಾದ ಕೆಳ ಹಂತದ ಜಾತಿಗಳೂ ಜನಸಂಖ್ಯಾ ಪ್ರಮಾಣದಲ್ಲಿ ಅಲ್ಪಸಂಖ್ಯಾತವಾಗಿದ್ದು ಆರ್ಥಿಕವಾಗಿ ಸಾಮಾಜಿಕವಾಗಿ ತುಂಬಾ ಹಿಂದುಳಿದಿವೆ. ಕೇವಲ ವೋಟ್ ಬ್ಯಾಂಕ್‌ನ್ನು ದೃಷ್ಟಿಯಲ್ಲಿರಿಸಿಕೊಂಡು ರಾಜಕಾರಣ ಮಾಡುವುದರಿಂದ ಇಂತಹ ಕೆಳಗೆ ನೂಕಲ್ಪಟ್ಟ ಸಮುದಾಯಗಳು ಯಾವುದೇ ರೀತಿಯಲ್ಲಿ ರಾಜಕೀಯ ಸ್ಥಾನ ಗಳಿಸುವಲ್ಲಿ ಸೋಲನ್ನು ಅನುಭವಿಸಲೇಬೇಕಾಗುತ್ತವೆ.

## ೨.೫ ಬಳ್ಳಾರಿ ಜಿಲ್ಲೆಯ ಸಾಕ್ಷರತೆಯ ಪ್ರಮಾಣ

೨೦೧೧ರ ಜನಗಣತಿ ಪ್ರಕಾರ ಜಿಲ್ಲೆಯ ಸಾಕ್ಷರರ ಸಂಖ್ಯೆ ೧೪,೨೧,೬೨೧(ಶೇಕಡ ೬೭.೪೩) ರಷ್ಟಿದೆ. ರಾಜ್ಯದ ಒಟ್ಟು ಸಾಕ್ಷರತೆಗೆ ಹೋಲಿಸಿದರೆ ಜಿಲ್ಲೆಯ ಸಾಕ್ಷರತೆಯ ಪ್ರಮಾಣ ಶೇಕಡ ೭.೯೩ ಕಡಿಮೆ ಇದೆ. ಹೀಗಾಗಿ ಸಾಕ್ಷರತೆಯಲ್ಲಿ ಹಿಂದುಳಿದ ಜಿಲ್ಲೆಗಳಲ್ಲಿ ಇದೂ ಒಂದಾಗಿದೆ. ಇತ್ತೀಚೆಗೆ ಮಧ್ಯಾಹ್ನದ ಬಿಸಿಯೂಟ, ಸರ್ವಶಿಕ್ಷಾ ಅಭಿಯಾನ, ಕಡ್ಡಾಯ ಶಿಕ್ಷಣ ಮುಂತಾದ ಯೋಜನೆಗಳಿಂದ ಶಾಲೆಗೆ ಹೋಗುವ ಮಕ್ಕಳ ಪ್ರಮಾಣ ಅಲ್ಪಮಟ್ಟಿಗೆ ಹೆಚ್ಚಾಗಿದೆಯೆಂದು ತೋರಿಬಂದರೂ ಜಿಲ್ಲೆಯಲ್ಲಿ ನಡೆಯುವ ಗಣಿಗಾರಿಕೆ, ಕೃಷಿ ಕೂಲಿ ಮುಂತಾದ ಚಟುವಟಿಕೆಗಳ ಕಾರಣಗಳಿಗಾಗಿ ಬಹುತೇಕ ಕೆಳವರ್ಗದ ಮಕ್ಕಳು ಶಾಲೆಯಿಂದ ವಂಚಿತವಾಗಿ ಶಾಲೆಯ ಹೊರಗೆ ಉಳಿಯುವುದೇ ಹೆಚ್ಚಾಗಿ ಕಂಡುಬರುತ್ತದೆ. ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಾಗೂ ನಿರ್ಲಕ್ಷಿತ ಅಲ್ಪಸಂಖ್ಯಾತ ಕೆಳಜಾತಿ ವರ್ಗಗಳ ಮಕ್ಕಳು ನಾನಾ ಕಾರಣಗಳಿಗಾಗಿ ಶಾಲೆಯಿಂದ ಹೊರಗುಳಿಯುವುದೇ ಹೆಚ್ಚು, ಅದರಲ್ಲೂ ಶಾಲೆಯಿಂದ ಹೊರಗುಳಿಯುವವರಲ್ಲಿ ಹೆಣ್ಣುಮಕ್ಕಳ ಪ್ರಮಾಣವೇ ಹೆಚ್ಚಾಗಿ ಕಂಡುಬರುತ್ತದೆ.

## ೨.೬ ಆರ್ಥಿಕ ಚಟುವಟಿಕೆಗಳು

ಜಿಲ್ಲೆಯಲ್ಲಿ ನಡೆಯುವ ಕಬ್ಬಿಣ ಮತ್ತು ಮ್ಯಾಂಗನೀಸ್ ಗಣಿಗಾರಿಕೆಯಿಂದ ಔದ್ಯೋಗಿಕ ಚಟುವಟಿಕೆಗಳು ಹೆಚ್ಚಾಗಿ ಜರುಗುತ್ತಿದೆ, ಆದರೆ ವಿಪರ್ಯಾಸವೆಂದರೆ ತಾಂತ್ರಿಕ ಶಿಕ್ಷಣದ ಕೊರತೆ, ವೃತ್ತಿ ಪ್ರಾವಿಣ್ಯತೆಯ

ಕೊರತೆ ಇತ್ಯಾದಿ ಕಾರಣಗಳಿಗಾಗಿ ಜಿಲ್ಲೆಯ ಬಹುತೇಕ ಯುವ ಶಕ್ತಿ ಔದ್ಯೋಗಿಕ ಚಟುಚಟಿಕೆಗಳಲ್ಲಿ ಪಾಲ್ಗೊಳ್ಳದೆ ಹೊರಗುಳಿಯಬೇಕಾಗಿದೆ. ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸಲು ಉತ್ತರ ಪ್ರದೇಶ, ರಾಜಸ್ಥಾನ ಮುಂತಾದ ಕಡೆಯಿಂದ ಜನ ಬರುವುದರಿಂದ ಸ್ಥಳೀಯ ಜನರು ಕೇವಲ ಕೂಲಿ ಕೆಲಸಕ್ಕೆ ಮಾತ್ರ ಸೀಮಿತ ಎನ್ನುವ ಮಟ್ಟದ ವಾತಾವರಣ ಸೃಷ್ಟಿಗೊಂಡಿದೆ. ಅದರಲ್ಲೂ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಯುವಕರು ಉನ್ನತ ಉದ್ಯೋಗ ಅವಕಾಶಗಳಿಂದ ಹೆಚ್ಚು ವಂಚಿತರಾಗಿರುವುದು ಕಂಡುಬರುತ್ತದೆ. ಬಳ್ಳಾರಿ ಜಿಲ್ಲೆಯನ್ನು ಪ್ರಾದೇಶಿಕವಾಗಿ ಪೂರ್ವಭಾಗ ಮತ್ತು ಪಶ್ಚಿಮ ಭಾಗ, ಉತ್ತರ ಭಾಗಗಳೆಂದು ವಿಂಗಡಿಸಲಾಗಿದೆ. ಆದರೆ ಉತ್ತರ ಭಾಗ ಹೊಸದಾಗಿ ಸೇರ್ಪಡೆಗೊಳಿಸಿರುವುದರಿಂದ ಆಡಳಿತಾತ್ಮಕವಾಗಿ ಇನ್ನೂ ಆ ಭಾಗವು ಚಟುವಟಿಕೆ ಆರಂಭಿಸಿರುವುದಿಲ್ಲ. ಹೀಗಾಗಿ ಪ್ರಸ್ತುತ ಇಲ್ಲಿ ಹಳೆಯ ರೀತಿಯಲ್ಲಿಯೇ ಪೂರ್ವ ಹಾಗೂ ಪಶ್ಚಿಮ ಭಾಗಗಳನ್ನು ಮಾತ್ರ ಪರಿಗಣಿಸಲಾಗಿದೆ ಮುಖ್ಯವಾಗಿ ಪಶ್ಚಿಮ ಭಾಗದವೆಂದು ಗುರುತಿಸಲಾಗುವ ಕೂಡ್ಲಿಗಿ, ಕೊಟ್ಟೂರು, ಹಗರಿಬೊಮ್ಮನಹಳ್ಳಿ, ಹಡಗಲಿ ತಾಲೂಕುಗಳು ಔದ್ಯೋಗಿಕ ಚಟುವಟಿಕೆಗಳಿಂದ ದೂರವುಳಿದಿವೆ. ಈ ಪ್ರದೇಶಗಳು ಹೆಚ್ಚಾಗಿ ಲಾಭಕರವಲ್ಲದ ಕೃಷಿ ಚಟುಚಟಿಕೆಗಳಲ್ಲಿ ತೊಡಗಿರುವುದನ್ನು ನೋಡಬಹುದು. ಜಿಲ್ಲೆಯ ಪೂರ್ವ ಭಾಗದಲ್ಲಿ ಔದ್ಯೋಗಿಕ ಚಟುವಟಿಕೆ, ಗಣಿಗಾರಿಕೆ ಇತ್ಯಾದಿ ಚಟುವಟಿಕೆಗಳು ತೀವ್ರಗತಿಯಲ್ಲಿ ಸಾಗಿವೆ. ಆದರೆ ಈ ಔದ್ಯೋಗಿಕ ಚಟುವಟಿಕೆ ಮತ್ತು ಗಣಿಗಾರಿಕೆಗಳ ಲಾಭ ಮಾತ್ರ ಕೆಲವೇ ಕೆಲವು ಬಂಡವಾಳಶಾಹಿಗಳಿಗೆ ಸೀಮಿತವಾಗಿ ಉಳಿದಿರುವುದು ಕಂಡುಬರುತ್ತದೆ. ಆ ಎಲ್ಲಾ ಚಟುವಟಿಕೆಗಳಿಂದ ಸಾಮಾನ್ಯ ಜನರಿಗೆ ಯಾವುದೇ ರೀತಿಯ ಲಾಭ ಕಂಡು ಬರುವುದಿಲ್ಲ. ಅಂದರೆ ಸಾಮಾನ್ಯ ಜನರು ಆ ಎಲ್ಲಾ ಚಟುವಟಿಕೆಗಳಿಂದ ದೂರವುಳಿದಿದ್ದಾರೆ. ಹೀಗಾಗಿ ಜಿಲ್ಲೆಯು ಮುಖ್ಯವಾಗಿ ಕೃಷಿಯನ್ನು ಅವಲಂಬಿಸಿರುವುದು ಕಂಡುಬರುತ್ತಿವೆ.

ಇತ್ತೀಚೆಗೆ ಬಂಡವಾಳಶಾಹಿಗಳು ಹೆಚ್ಚಿನ ಲಾಭ ಕೊಡುವ ಆಮಿಷ ಒಡ್ಡಿ ಕೃಷಿಕರಿಂದ ಕೃಷಿ ಭೂಮಿಗಳನ್ನು ತಮ್ಮದಾಗಿಸಿಕೊಳ್ಳುತಿದ್ದಾರೆ. ತರುವಾಯ ಅವರು ಕೃಷಿಯೇತರ ಚಟುವಟಿಕೆಗಳಿಗೆ ಆ ಭೂಮಿಗಳನ್ನು ಬಳಸಿಕೊಳ್ಳುತ್ತಾರೆ. ಕೃಷಿ ಭೂಮಿಯನ್ನು ಮಾರಿಕೊಂಡು, ಇಲ್ಲವೆ ಕಳೆದುಕೊಂಡ ಕೃಷಿಕನು ಕೃಷಿ ಚಟುವಟಿಕೆಯಿಂದ ದೂರವುಳಿಯಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಅತ್ತ ಕೃಷಿಭೂಮಿ ಇಲ್ಲ ಇತ್ತ ಉದ್ಯೋಗವಿಲ್ಲದಂತಹ ಸ್ಥಿತಿಯಲ್ಲಿರುವ ಜಿಲ್ಲೆಯ ರೈತ ಜೀವನ ನಿರ್ವಹಣೆಗಾಗಿ ಗುಳೆ ಹೋಗಬೇಕಾದ ಸ್ಥಿತಿ ನಿರ್ಮಾಣವಾಗಲು ಹೆಚ್ಚು ದೂರ ಉಳಿದಿಲ್ಲ. ವಲಯವಾರು ದುಡಿಮೆಗಾರರ ವರ್ಗವನ್ನು ನೋಡಿದಾಗ ಪ್ರಾಥಮಿಕ ವಲಯ ಶೇಕಡ ೭೬.೧೮ರಷ್ಟು ದ್ವಿತೀಯ ವಲಯ ಶೇಕಡ ೭.೪೩ರಷ್ಟು ತೃತೀಯ ವಲಯ ಶೇಕಡ ೧೬.೯ರಷ್ಟಿದೆ. ರಾಜ್ಯಕ್ಕೆ ಹೋಲಿಸಿದರೆ ಈ ಪ್ರಮಾಣ ಕ್ರಮವಾಗಿ ಶೇಕಡ ೧೬.೯ರಷ್ಟಿದೆ. ಜಿಲ್ಲೆಯ ಒಟ್ಟು ಶ್ರಮ ಶಕ್ತಿಯ ವಲಯವಾರು ವಿತರಣೆ ಹಾಗೂ ಆ ವಿತರಣೆಯಲ್ಲಿ ೧೯೮೧ರಿಂದ ೧೯೯೧ರಲ್ಲಿ ಉಂಟಾದ ಬದಲಾವಣೆ ಅಭಿವೃದ್ಧಿಯ ದೃಷ್ಟಿಯಿಂದ ಅಷ್ಟೇನೂ ಅನುಕೂಲಕರವಾಗಿಲ್ಲ ಪ್ರಾಥಮಿಕ ವಲಯವೆಂದರೆ ಕೃಷಿ, ಗಣಿಗಾರಿಕೆ, ಮೀನುಗಾರಿಕೆ ಮುಂತಾದ ಕಸುಬುಗಳನ್ನು ಅವಲಂಬಿಸಿರುವವರ ಪ್ರಮಾಣ ಶೇಕಡ ೮೭.೦೧ರಿಂದ ಶೇಕಡ ೮೭.೮೭ರಷ್ಟು

ಏರಿಕೆಯಾಗಿದೆ ಇದನ್ನು ಅಭಿವೃದ್ಧಿಯ ವಿಮುಖ ಚಲನೆ ಎಂದು ಹೇಳಲಾಗುತ್ತದೆ. ತುಂಗಾಭದ್ರಾ ನದಿ ಜಿಲ್ಲೆಯೊಳಗೆ ಹಾದು ಹೋದರೂ ಜಿಲ್ಲೆಯ ಪಶ್ಚಿಮವಲಯದ ತಾಲೂಕುಗಳಾದ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹಡಗಲಿಗಳು ಕೃಷಿಗಾಗಿ ನೀರಾವರಿ ಸೌಲಭ್ಯ ಪಡೆಯಲು ಸಾಧ್ಯವಾಗಿಲ್ಲ. ನದಿಯ ದಂಡೆಯ ಮೇಲಿನ ಭಾಗದಲ್ಲಿರುವ ಕೆಲವೇ ಕೆಲವು ರೈತರು ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಂಡು ನೀರಾವರಿ ಮಾಡಿಕೊಳ್ಳುವವರಾದರೂ ರಾಜ್ಯದ ವಿದ್ಯುತ್ ಅಭಾವದಿಂದಾಗಿ ಪಂಪಸೆಟ್‌ಗಳು ಸಹ ಸರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲ, ಸಂಡೂರು, ಬಳ್ಳಾರಿ ತಾಲೂಕುಗಳು ಸಹ ಇದರಿಂದ ಹೊರತಾಗಿಲ್ಲ. ಬಳ್ಳಾರಿಯ ಕೆಲವು ಭಾಗಗಳು ಮಾತ್ರ ಎಲ್.ಎಲ್.ಸಿ ಕಾಲುವೆ ಮತ್ತು ಹೆಚ್.ಎಲ್.ಸಿ ಕಾಲುವೆಯ ಸೋರಿಕೆ ನೀರು ಬಳಸಿ ಇಲ್ಲವೆ ಅಲ್ಪಾವಧಿ (೬ ತಿಂಗಳು) ನೀರು ಬಳಸಿ ಒಂದು ಬೆಳೆಯನ್ನು ಪಡೆಯಲು ಸಾಧ್ಯವಾಗಿದೆ. ಆದರೆ ಆ ನೀರಾವರಿ ಸೌಲಭ್ಯ ಅಷ್ಟೇನೂ ತೃಪ್ತಿಕರವಾಗಿಲ್ಲ ಎಂಬ ಅಳಲು ರೈತರಿಂದ ಕೇಳಿಬರುತ್ತದೆ. ಹಡಗಲಿ ಹಗರಿಬೊಮ್ಮನಹಳ್ಳಿಯ ರೈತರಿಗೆ ಪೂರ್ಣವಾಗಿಯಲ್ಲದಿದ್ದರೂ ಅನುಕೂಲಕರವಾದ ನೀರಾವರಿ ಸೌಲಭ್ಯವನ್ನು ಸಿಂಗಟಾಲೂರು ಏತ ನೀರಾವರಿ ಯೋಜನೆಯಿಂದ ದೊರೆಯುತ್ತಿದೆ. ಇಷ್ಟೆಲ್ಲ ಸೌಲಭ್ಯಗಳಿವೆಯಂದೆನಿಸಿದರೂ ಜಿಲ್ಲೆಯು ಒಟ್ಟಾರೆಯಾಗಿ ಹಿಂದುಳಿದಿದೆ ಎಂಬುದನ್ನು ಸೂಚ್ಯಾಂಕಗಳು ಸೂಚಿಸುತ್ತವೆ. ಯಾವ ಪ್ರದೇಶವು ಕೇವಲ ಪ್ರಾಥಮಿಕ ವಲಯವನ್ನು ಹೆಚ್ಚು ಅವಲಂಬಿಸಿರುತ್ತದೆಯೋ ಆ ಪ್ರದೇಶವನ್ನು ಹಿಂದುಳಿದ ಪ್ರದೇಶವೆಂದು ಗ್ರಹಿಸಲಾಗಿದೆ. ಆರ್ಥಿಕವಾಗಿ ಜಿಲ್ಲೆಯ ವರಮಾನವು ೧೯೯೫-೯೬ರ ಅವಧಿಯಲ್ಲಿ ಶೇ.೮೫೪೪ ರೂಪಾಯಿಗಳಿದ್ದು ರಾಜ್ಯದ ಸರಾಸರಿಗಿಂತ ರೂ ೮೪೦ ಕಡಿಮೆ ಇದೆ. ವರಮಾನದಲ್ಲಿ ಜಿಲ್ಲೆಯು ರಾಜ್ಯದಲ್ಲಿ ೮ನೇ ಸ್ಥಾನವನ್ನೂ ಹೊಂದಿದೆ. ಜಿಲ್ಲೆಯಲ್ಲಿ ಗಣಿಗಾರಿಕೆ ಔದ್ಯೋಗಿಕ ವಲಯದ ಪ್ರಗತಿ ಕಂಡು ಬರುತ್ತಿದ್ದರೂ ಅದು ಕೇವಲ ಕೆಲವೇ ಕೆಲವು ಬಂಡವಾಳಶಾಹಿಗಳ ಹಿಡಿತದಲ್ಲಿರುವುದರಿಂದ ಜಿಲ್ಲೆಯ ಜನಸಾಮಾನ್ಯರ ವರಮಾನ ಅತ್ಯಂತ ಕಡಿಮೆಯಿರುವುದನ್ನು ಕಾಣಬಹುದಾಗಿದೆ. ಇತ್ತೀಚೆಗೆ ಸರ್ಕಾರವು ಅಕ್ರಮ ಗಣಿಗಾರಿಕೆಯ ಮೇಲೆ ಪ್ರತಿಬಂಧನವೇರಿರುವುದರಿಂದ ಗಣಿಗಾರಿಕೆಯ ಪ್ರಮಾಣವೂ ಕಡಿಮೆಯಾಗಿದೆ. ಜಿಲ್ಲೆಯನ್ನು ಆಡಳಿತಾತ್ಮಕವಾಗಿ ಎರಡು ಉಪವಿಭಾಗಗಳಾಗಿ ವಿಂಗಡಿಸಲಾಗಿದೆ ಒಂದು ಬಳ್ಳಾರಿ ಮತ್ತೊಂದು ಹೊಸಪೇಟೆ ಬಳ್ಳಾರಿ ಉಪವಿಭಾಗದಲ್ಲಿ ಐದು ತಾಲೂಕುಗಳಿದ್ದರೆ ಹೊಸಪೇಟೆ ಉಪವಿಭಾಗದಲ್ಲಿ ಆರು ತಾಲೂಕುಗಳು ಇವೆ. ಪ್ರಸ್ತುತ ಹೊಸ ತಾಲೂಕುಗಳ ಅಂಕಿ ಅಂಶಗಳು ಇನ್ನೂ ಪ್ರತ್ಯೇಕಗೊಳಿಸದ ಕಾರಣ ಅವಿಭಜಿತ ಹಳೆ ತಾಲೂಕುಗಳ ವಿವರಗಳನ್ನು ಮಾತ್ರ ಇಲ್ಲಿ ನೀಡಲಾಗಿದೆ.

**ಕೂಡ್ಲಿಗಿ ತಾಲೂಕು**

ಬಳ್ಳಾರಿ ಜಿಲ್ಲೆಯಲ್ಲಿಯೇ ಆರ್ಥಿಕವಾಗಿ ತುಂಬಾ ಹಿಂದುಳಿದ ತಾಲೂಕೆಂದು ಗುರುತಿಸಲ್ಪಟ್ಟ ತಾಲೂಕು ಕೂಡ್ಲಿಗಿಯಾಗಿದೆ. ಜಿಲ್ಲಾ ಕೇಂದ್ರದಿಂದ ಸುಮಾರು ೧೦೦ ಕಿ.ಮೀ ಗಳಷ್ಟು ಅಂತರದಲ್ಲಿ ತಾಲೂಕು ಕೇಂದ್ರವಿದೆ. ಹೊಸಪೇಟೆ, ಹಗರಿಬೊಮ್ಮನಹಳ್ಳಿ ತಾಲೂಕುಗಳು ಹಾಗೂ ಚಿತ್ರದುರ್ಗ ಜಿಲ್ಲೆಯಿಂದ

ಸುತ್ತುವರೆದಿರುವ ಈ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದವರು ಶೇಕಡ ೨೭.೧ ರಷ್ಟಿದ್ದಾರೆ. ಸಾಂಸ್ಕೃತಿಕವಾಗಿ ಸಮೃದ್ಧವಾಗಿರುವ ಈ ತಾಲೂಕು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದೆ. ಬಳ್ಳಾರಿ ತಾಲೂಕಿನ ನಂತರ ಅತೀ ವಿಸ್ತಾರವಾದ ಭೂ ವಿಸ್ತೀರ್ಣವನ್ನು ಹೊಂದಿರುವ ತಾಲೂಕು ಇದಾಗಿದೆ. ಇದರ ಒಟ್ಟು ವಿಸ್ತೀರ್ಣವು ೧.೬೧೮.೮೭ ಚ.ಕಿ.ಮೀಟರ್‌ಗಳಷ್ಟಿದೆ ಹಾಗೇ ಜಿಲ್ಲೆಯಲ್ಲಿಯೇ ಅತೀಹೆಚ್ಚು ಗ್ರಾಮಗಳನ್ನು ಹೊಂದಿರುವ ಈ ತಾಲೂಕಿನಲ್ಲಿ ಒಟ್ಟು ೯೧ ಗ್ರಾಮಗಳಿವೆ. ತಾಲೂಕಿನಲ್ಲಿ ಕೂಡ್ಲಿಗಿಯ ನಂತರ ಕೊಟ್ಟೂರು ಪಟ್ಟಣ ಪ್ರದೇಶವಾಗಿದೆ. ಅವೆರಡರ ಹೊರತಾಗಿ ಇನ್ನುಳಿದವುಗಳೆಲ್ಲಾ ಹಳ್ಳಿಗಳೇ ಆಗಿವೆ. ಇಲ್ಲಿಯ ಬಹುತೇಕ ಗ್ರಾಮಗಳಿಗೆ ಇಂದಿಗೂ ಸಮರ್ಪಕವಾದ ಬಸ್ಸಿನ ಸೌಲಭ್ಯ ಅಥವಾ ಸಾರಿಗೆ ಸಂಪರ್ಕವಿಲ್ಲವಾಗಿದೆ. ಒಟ್ಟು ೪೭,೮೧೧ ಕುಟುಂಬಗಳನ್ನು ಈ ತಾಲೂಕು ಹೊಂದಿದೆ. ಮಳೆಯಾಶ್ರಿತ ಚಿಕ್ಕ ಪುಟ್ಟ ಕೆರೆಗಳ ಹೊರತಾಗಿ ಇಲ್ಲಿಯ ಜನರಿಗೆ ಸಮರ್ಪಕವಾದ ನೀರಾವರಿ ಸೌಲಭ್ಯವಿಲ್ಲ. ಇಂದಿಗೂ ಮಳೆಯಾಶ್ರಿತ ಒಣಬೇಸಾಯ ಕ್ರಮವನ್ನೇ ರೈತರು ಅನುಸರಿಸುತ್ತಿರುವುದನ್ನು ತಾಲೂಕಿನಾದ್ಯಂತ ಕಾಣಬಹುದು. ಈ ತಾಲೂಕಿನ ಜನಸಾಂದ್ರತೆಯು ೧೬.೮ರಷ್ಟಿದೆ. ಈ ತಾಲೂಕು ಒಟ್ಟು ೪೭.೮೧೧ ಕುಟುಂಬಗಳನ್ನು ಹೊಂದಿರುವುದನ್ನು ಕಾಣಬಹುದು.

೨೦೦೧ರ ಜನಗಣತಿ ಪ್ರಕಾರ ಈ ತಾಲೂಕಿನ ಒಟ್ಟು ಜನಸಂಖ್ಯೆ ೨,೭೨,೧೮೩ ಇದ್ದು ಇದರಲ್ಲಿ ಪುರುಷರು ೧,೩೯,೨೦೨ ಹಾಗೂ ಮಹಿಳೆಯರು ೧,೩೨,೯೮೧ ರಷ್ಟಿದ್ದಾರೆ. ಈ ತಾಲೂಕಿನ ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆ ೫೨,೨೧೨ ಇದ್ದು ಪುರುಷರು ೨೬,೫೪೦ ಹಾಗೂ ಮಹಿಳೆಯರು ೨೫,೬೭೨ ರಷ್ಟಿದ್ದಾರೆ. ಹಾಗೇ ಪರಿಶಿಷ್ಟ ಪಂಗಡದಲ್ಲಿ ಒಟ್ಟು ಜನಸಂಖ್ಯೆ ೭೩,೬೫೦ ಇದ್ದು ಇದರಲ್ಲಿ ಪುರುಷರು ೩೭,೨೯೮ ಹಾಗೂ ಮಹಿಳೆಯರು ೩೬,೩೫೨ ರಷ್ಟು ಕಂಡುಬರುತ್ತಾರೆ. ಜಿಲ್ಲೆಯಲ್ಲಿ ಡುಂಗ್ರಿಗರಾಸಿಯ, ಹಕ್ಕಿಪಿಕ್ಕಿ, ಮೇಧ ಮುಂತಾದ ಪರಿಶಿಷ್ಟ ಪಂಗಡದ ಸಮುದಾಯಗಳು ಕಂಡು ಬರುತ್ತವೆಯಾದರೂ ಕೂಡ್ಲಿಗಿ ತಾಲೂಕಿನಲ್ಲಿ ಪರಿಶಿಷ್ಟ ಪಂಗಡಗಳಲ್ಲಿ ವಾಲ್ಮೀಕಿ ಸಮುದಾಯದವರೇ ಶೇಕಡ ೯೯ ರಷ್ಟು ಕಂಡು ಬರುತ್ತಾರೆ. ತಾಲೂಕಿನ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯವರ ಪ್ರಮಾಣವು ಶೇಕಡ ೧೯.೨ ರಷ್ಟಿದ್ದರೆ ಪರಿಶಿಷ್ಟ ಪಂಗಡದವರ ಪ್ರಮಾಣವು ಶೇಕಡ ೨೭.೧ರಷ್ಟಿದೆ. ತಾಲೂಕಿನ ರಾಜಕೀಯ ಹಿಡಿತ ಮೇಲ್ವರ್ಗಗಳದ್ದಾದರೂ ಅದರ ನಿರ್ಣಾಯಕ ಶಕ್ತಿಯಿರುವುದು ಪರಿಶಿಷ್ಟ ಪಂಗಡದಲ್ಲಿದೆ ಎಂಬ ನಂಬುಗೆಯನ್ನು ಈ ತಾಲೂಕು ಉಳಿಸಿಕೊಂಡಿದೆ. ಪ್ರಸ್ತುತ ಕೂಡ್ಲಿಗಿಯು ವಿಧಾನ ಸಭಾ ಸದಸ್ಯರ ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರವಾಗಿದೆ. ಜಿಲ್ಲೆಯ ಸಾಕ್ಷರರಿಗೆ ಹೋಲಿಸಿದರೆ ಈ ತಾಲೂಕಿನ ಒಟ್ಟು ಸಾಕ್ಷರತೆಯ ಪ್ರಮಾಣವು ಶೇಕಡ ೬೦ರಷ್ಟಿದೆ. ಇದರಲ್ಲಿ ಪುರುಷರು ಶೇಕಡ ೬೦ ರಷ್ಟು ಸಾಕ್ಷರರಿದ್ದರೆ ಮಹಿಳೆಯರು ಶೇಕಡ ೪೦ರಷ್ಟು ಸಾಕ್ಷರರಾಗಿದ್ದಾರೆ. ಈ ಜಿಲ್ಲೆಯ ಇತರ ತಾಲೂಕುಗಳಿಗೆ ಹೋಲಿಸಿದರೆ ಸಾಕ್ಷರತೆಯ ಪ್ರಮಾಣದಲ್ಲಿ ಹೊಸಪೇಟೆ (ಶೇ೬೦.೯)ಯ ನಂತರದ ಸ್ಥಾನ ಕೂಡ್ಲಿಗಿಗೇ ಸಲ್ಲುತ್ತದೆ.

**ಹೊಸಪೇಟೆ ತಾಲೂಕು**

ಹೊಸಪೇಟೆಯು ಬಳ್ಳಾರಿ ಜಿಲ್ಲೆಯ ಪ್ರಮುಖ ತಾಲೂಕುಗಳಲ್ಲಿ ಒಂದು. ತುಂಗಾಭದ್ರಾ ನದಿಗೆ ಹೊಸಪೇಟೆ ನಗರದ ಬಳಿಯೇ ಆಣೆಕಟ್ಟು ಕಟ್ಟಲಾಗಿದೆ. ಹೀಗಾಗಿ ಈ ತಾಲೂಕಿನಲ್ಲಿ ಹೊಸಪೇಟೆ ನಗರದಿಂದ ಕೆಳಭಾಗಕ್ಕೆ ಕೃಷಿಗೆ ನೀರಾವರಿ ಸೌಲಭ್ಯ ಸುಲಭವಾಗಿ ಸಿಗುತ್ತದೆ. ಆದರೆ ಹೊಸಪೇಟೆಯ ಮೇಲ್ಭಾಗಕ್ಕೆ ನೀರಾವರಿ ಸೌಲಭ್ಯ ಇರುವುದಿಲ್ಲ. ಹೀಗಾಗಿ ಹೊಸಪೇಟೆಯಿಂದ ಮೇಲ್ಭಾಗದ ಜನರು ಕೇವಲ ಮಳೆಯಾಧಾರಿತ ಒಣ ಬೇಸಾಯವನ್ನೇ ಅವಲಂಬಿಸಬೇಕಾಗಿದೆ. ಈ ತಾಲೂಕಿನಲ್ಲಿ ಮಧ್ಯಮ ಗಾತ್ರದ ಕಬ್ಬಿಣ ಮತ್ತು ಉಕ್ಕು ಉಧ್ಯಮವನ್ನು ಹಾಗೂ ಗಣಿಗಾರಿಕೆಯನ್ನು ಕಾಣಬಹುದು. ೨೦೦೧ರ ಈಚೆಗೆ ಹೊಸಪೇಟೆಯ ಮೇಲ್ಭಾಗಕ್ಕೆ ಸ್ಪಾಂಜ್ ಐರನ್ ಉತ್ಪಾದಿಸುವ ಕಾರ್ಖಾನೆಗಳು ಹೆಚ್ಚಾಗಿ ಹುಟ್ಟಿಕೊಂಡಿವೆ. ಕೇವಲ ಇಪ್ಪತ್ತೈದು ಕಿಲೋ ಮೀಟರ್ ವ್ಯಾಪ್ತಿಯೊಳಗೆ ಸುಮಾರು ಏಳೆಂಟು ಸ್ಪಾಂಜ್ ಐರನ್ ಕಾರ್ಖಾನೆಗಳನ್ನು ಕಾಣಬಹುದು. ಇದಲ್ಲದೆ ಖಾಧ್ಯ ಎಣ್ಣೆ ಉತ್ಪಾದನಾ ಘಟಕ, ಬಿಸ್ಕಿಟ್ ಕಾರ್ಖಾನೆ ಇತ್ಯಾದಿ ಇತರೆ ಕಾರ್ಖಾನೆಗಳನ್ನು ಹೊಸಪೇಟೆ ನಗರದ ಸುತ್ತ ಮುತ್ತಲೂ ಕಾಣಬಹುದು. ಹೊಸಪೇಟೆ ತಾಲೂಕು ೯೦೪.೧೭ ಚ.ಕಿ.ಮೀ ವ್ಯಾಪ್ತಿಯಲ್ಲಿ ಹರಡಿಕೊಂಡಿದೆ. ಬಳ್ಳಾರಿ ಜಿಲ್ಲೆಯ ಇನ್ನುಳಿದ ಆರು ತಾಲೂಕುಗಳಿಗಿಂತ ಕಡಿಮೆ ವಿಸ್ತೀರ್ಣ(ಶೇ. ೧೦.೭೦)ವನ್ನು ಹೊಂದಿರುವ ಈ ತಾಲೂಕು ಜಿಲ್ಲೆಯ ಇತರೆ ತಾಲೂಕುಗಳಿಗಿಂತ ಹೆಚ್ಚಿನ ಜನ ಸಾಂದ್ರತೆ ಹೊಂದಿದೆ. ಈ ತಾಲೂಕಿನ ಜನ ಸಾಂದ್ರತೆಯು ೪೧೫ ರಷ್ಟಿದೆ ಒಟ್ಟು ೭೪ ಗ್ರಾಮಗಳನ್ನು ಒಳಗೊಂಡಿರುವ ಈ ತಾಲೂಕು ಕಂಪ್ಲಿ, ಕಮಲಾಪುರ ಎಂಬ ಎರಡು ಹೋಬಳಿ ಪ್ರದೇಶಗಳನ್ನು ಒಳಗೊಂಡಿದೆ. ಈ ತಾಲೂಕಿನಲ್ಲಿ ೨೦೦೧ರ ಜನಗಣತಿ ಪ್ರಕಾರ ಒಟ್ಟು ೭೦.೭೮೯ ಕುಟುಂಬಗಳು ನೆಲೆನಿಂತಿದ್ದು ಕಂಡುಬರುತ್ತದೆ. ಹಾಗೇ ಒಟ್ಟು ೨೦೦೧ ರ ಪ್ರಕಾರ ಜನಸಂಖ್ಯೆಯು ೩,೭೪,೯೪೯ ರಷ್ಟಿದೆ. ಇದರಲ್ಲಿ ಪುರುಷರು ೧,೮೯,೬೭೪ರಷ್ಟಿದ್ದರೆ, ಮಹಿಳೆಯರು ೧,೮೫,೨೭೫ರಷ್ಟಿದ್ದಾರೆ. ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ ಒಟ್ಟು ೭೫,೭೮೦ರಷ್ಟಿದೆ. ಇದರಲ್ಲಿ ಪರಿಶಿಷ್ಟ ಜಾತಿಯ ಪುರುಷರು ೩೮,೦೪೩ರಷ್ಟಿದ್ದಾರೆ ಹಾಗೂ ಮಹಿಳೆಯರು ೩೭,೭೩೭ರಷ್ಟಿದ್ದಾರೆ. ಹೊಸಪೇಟೆ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದವರ ಒಟ್ಟು ಜನಸಂಖ್ಯೆ ೬೦,೯೯೧ರಷ್ಟಿದೆ. ಇದರಲ್ಲಿ ಪರುಷರು ೨೯,೯೫೨ ಹಾಗೂ ಮಹಿಳೆಯರು ೩೦,೫೩೮ರಷ್ಟಿದ್ದಾರೆ. ಈ ತಾಲೂಕಿನ ಒಟ್ಟು ಸಾಕ್ಷರತೆಯ ಪ್ರಮಾಣ ಶೇಕಡ ೬೦ರಷ್ಟಿದೆ. ಇದರಲ್ಲಿ ಪುರುಷರ ಸಾಕ್ಷರತೆ ಪ್ರಮಾಣ ಶೇಕಡ ೭೧.೬ ರಷ್ಟಿದ್ದರೆ ಮಹಿಳೆಯರ ಸಾಕ್ಷರತೆ ಪ್ರಮಾಣ ಕೇವಲ ಶೇಕಡ ೫೦ ರಷ್ಟು ಮಾತ್ರವಿದೆ. ಅದರಲ್ಲೂ ಮೇಲ್ವರ್ಗದ ಮಹಿಳೆಯರೇ ಹೆಚ್ಚಿನ ಮಟ್ಟದಲ್ಲಿ ಶಿಕ್ಷಣ ಪಡೆಯುತ್ತಿದ್ದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಾಗೂ ಇತರೆ ಹಿಂದುಳಿದ ವರ್ಗಗಳು ಬಹುತೇಕ ಶಿಕ್ಷಣದಿಂದ ವಂಚಿತಗೊಂಡಿವೆ. ಅದರಲ್ಲೂ ಮಹಿಳೆಯರು ಶಿಕ್ಷಣದಿಂದ ಹೆಚ್ಚು ವಂಚಿತರಾಗಿರುವುದು (ಶೇ.೫೦) ಕಂಡುಬರುತ್ತದೆ.

**ಸಂಡೂರು ತಾಲೂಕು**

ಬಿಸಿಲುನಾಡು ಬಳ್ಳಾರಿ ಜಿಲ್ಲೆಗೆ ಸಂಡೂರು ಮಲೆನಾಡಿದ್ದಂತೆ. ನಿತ್ಯ ಹರಿದ್ವರ್ಣ ಕಾಡುಗಳು, ಸಂಪದ್ಭರಿತವಾದ ಕಬ್ಬಿಣ, ಮ್ಯಾಂಗನೀಸ ನಿಕ್ಷೇಪವನ್ನು ಒಳಗೊಂಡ ಬೆಟ್ಟಸಾಲುಗಳು, ನಾರಿಹಳ್ಳ,

ಕೆರೆ ಕುಂಟೆಗಳು ಹೀಗೆ ನಾನಾ ವೈವಿಧ್ಯದಿಂದ ಕೂಡಿದ ಈ ತಾಲೂಕು ಪ್ರಾಚೀನ ಗ್ರಾಮೀಣ ಸೊಗಡನ್ನು ಇಂದಿಗೂ ಉಳಿಸಿಕೊಂಡು ಬಂದಿರುವ ತಾಲೂಕಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದರೂ ಘೋರ್ಪಡೆ ವಂಶಸ್ಥರಿಂದ ಆಳಿಕೆಗೆ ಒಳಗಾಗಿದ್ದ ಸಂಡೂರಿಗೆ ಸ್ವಾತಂತ್ರ್ಯ ದೊರೆತಿರಲಿಲ್ಲ. ಭಾರತದ ಒಕ್ಕೂಟದೊಳಗೆ ಸೇರುವುದಿಲ್ಲ ಎಂದು ಹಟ ಮಾಡುತ್ತಿದ್ದ. ಸಂಡೂರಿನ ಸಂಸ್ಥಾನಿಕರು ೧೯೪೮ರಲ್ಲಿ ಭಾರತ ಒಕ್ಕೂಟದೊಳಗೆ ವಿಲೀನವಾದರು. ತನ್ನ ಒಡಲಲ್ಲಿರಿಸಿಕೊಂಡಿರುವ ಕಬ್ಬಿಣ ಮ್ಯಾಂಗನೀಸ್ ಗಣಿಯಿಂದಾಗಿಯೇ ಜಗತ್ತಿನಾದ್ಯಂತ ಈ ತಾಲೂಕು ಪ್ರಸಿದ್ಧಿಗೊಂಡಿದೆ. ಇಲ್ಲಿಯ ನಿಕ್ಷೇಪವನ್ನು ಬೇನಾಮಿಯಾಗಿ, ಬೇಕಾಬಿಟ್ಟಿಯಾಗಿ ಕೀಳಿದ ಕೀರ್ತಿಯೂ ಗಣಿಗಳ್ಳರಿಗೆ ಸೇರುತ್ತದೆ. ಸಂಡೂರು ತಾಲೂಕು ೧,೨೩೪.೩೫ ಚದರ ಕಿಲೋಮೀಟರ್ ವಿಸ್ತಾರತೆಯನ್ನು ಹೊಂದಿದೆ. ೨೦೧೧ರ ಜನಗಣತಿ ಪ್ರಕಾರ ಈ ತಾಲೂಕಿನಲ್ಲಿ ಒಟ್ಟು ೪೪,೫೦೫ ಕುಟುಂಬಗಳು ನೆಲೆಸಿವೆ. ಒಟ್ಟು ಜನಸಂಖ್ಯೆಯು ೨,೨೨,೭೮೨ ಇದೆ. ಇದರಲ್ಲಿ ೧,೧೪,೮೮೭ ಪುರುಷರು ಹಾಗೂ ೧,೦೭,೯೫ ಮಹಿಳೆಯರು ಇರುವರು. ೦-೬ ವಯೋಮಾನದ ಒಟ್ಟು ೩೫,೫೫೭ ಮಕ್ಕಳಿರುವರು. ಇದರಲ್ಲಿ ೧೮,೧೫೫ ಗಂಡು ಹಾಗೂ ೧೭,೪೦೨ ಹೆಣ್ಣು ಮಕ್ಕಳಿರುವರು. ಪರಿಶಿಷ್ಟ ಜಾತಿಯವರು ೪೦,೬೨೩ ಜನರಿದ್ದಾರೆ. ಇದರಲ್ಲಿ ೨೦,೩೪೭ ಪುರುಷರು ಹಾಗೂ ೨೦,೨೭೬ ಮಹಿಳೆಯರಿರುವರು. ಪರಿಶಿಷ್ಟ ಪಂಗಡದವರು ಒಟ್ಟು ೬೨,೧೭೭ ಜನರಿದ್ದಾರೆ. ಇದರಲ್ಲಿ ೩೧,೩೬೦ ಪುರುಷರು ಹಾಗೂ ೩೦,೮೧೭ ಮಹಿಳೆಯರಿರುವರು. ಒಟ್ಟು ಸಾಕ್ಷರರು ೧,೨೧,೪೮೭ ಇರುವರು. ಇದರಲ್ಲಿ ೭೨,೬೩೧ ಪುರುಷರು ಹಾಗೂ ೪೮,೮೫೬ ಮಹಿಳೆಯರಿರುವರು.

**ಬಳ್ಳಾರಿ ತಾಲೂಕು**

ಬಳ್ಳಾರಿಯು ತಾಲೂಕು ಕೇಂದ್ರಗಳಲ್ಲೊಂದು ಜಿಲ್ಲೆಯಲ್ಲಿಯೇ ವಿಸ್ತಾರವಾದ ತಾಲೂಕು ಇದಾಗಿದೆ. ತುಂಗಾಭದ್ರಾ ಬಲದಂಡೆಯ ಕಾಲುವೆಗಳಿಂದಾಗಿ ಜಿಲ್ಲೆಯ ಅರ್ಧದಷ್ಟು ಭಾಗವು ಕೃಷಿಗೆ ನೀರನ್ನ ಪಡೆದರೆ ಇನ್ನೂ ಅರ್ಧದಷ್ಟು ಕೃಷಿ ಭೂಮಿಯು ಮಳೆ ನೀರನ್ನೇ ಆಶ್ರಯಿಸಬೇಕಾಗಿದೆ. ಬೆಟ್ಟಗುಡ್ಡಗಳು ಈ ತಾಲೂಕಿನಲ್ಲಿವೆ ಅಷ್ಟೇ ಅಲ್ಲದೆ ಪ್ರಾಗೈತಿಹಾಸಿಕ ನೆಲೆಗಳೂ ಇಲ್ಲಿವೆ. ಈ ತಾಲೂಕು ಭೌಗೋಳಿಕವಾಗಿ ೧,೬೦೯.೬೮ ಚದರ ಕಿಲೋಮೀಟರ್ ವಿಸ್ತಾರವಾಗಿದೆ. ೨೦೧೧ರ ಜನಗಣತಿ ಪ್ರಕಾರ ತಾಲೂಕಿನಲ್ಲಿ ೬೯,೫೮೮ ಕುಟುಂಬಗಳು ನೆಲೆಗೊಂಡಿವೆ. ಒಟ್ಟು ಜನಸಂಖ್ಯೆ ೩,೬೦,೪೮೪ ಇದೆ. ಇದರಲ್ಲಿ ಪುರುಷರು ೧,೮೧,೪೯೫ ಹಾಗೂ ಮಹಿಳೆಯರು ೧,೭೮,೮೯ ಇರುವರು. ೦-೬ ವಯೋಮಾನದ ಮಕ್ಕಳು ಒಟ್ಟು ೫೨,೩೦೩ ಇರುವರು. ಇವರಲ್ಲಿ ೨೬,೫೮೦ ಗಂಡು ಹಾಗೂ ೨೫,೭೨೩ ಹೆಣ್ಣುಮಕ್ಕಳಿವೆ. ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ ೭೫,೮೭೮ ಇದೆ. ಇದರಲ್ಲಿ ೩೭,೯೫೨ ಪುರುಷರು ಹಾಗೂ ೩೭,೯೨೬ ಮಹಿಳೆಯರಿರುವರು ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೮೮,೫೪೧ ಇದೆ. ಇದರಲ್ಲಿ ೪೪,೧೮೦ ಪುರುಷರು ಹಾಗೂ ೪೪,೩೬೧ ಮಹಿಳೆಯರಿರುವರು. ಒಟ್ಟು ೧,೭೬,೫೧೨ ಸಾಕ್ಷರರಿರುವರು. ಇದರಲ್ಲಿ ೧,೦೬,೫೧೪ ಪುರುಷರು ಹಾಗೂ ೬೯,೯೮ ಮಹಿಳೆಯರಿರುವರು.

## ಸಿರುಗುಪ್ಪ ತಾಲೂಕು

ಸಿರುಗುಪ್ಪ ತಾಲೂಕು ಹೊಸಪೇಟೆ, ಬಳ್ಳಾರಿ, ಸಿಂಧನೂರು ತಾಲೂಕುಗಳನ್ನು ಹಾಗೂ ಆಂಧ್ರದ ಗಡಿಯನ್ನು ಹೊಂದಿದೆ. ಆಂದ್ರದ ಗಡಿಗೆ ಹೊಂದಿಕೊಂಡೇ ಇರುವ ಈ ತಾಲೂಕಿನಲ್ಲಿ ತುಂಗಾಭದ್ರಾ ನದಿಯಿಂದಾಗಿ ನೀರಾವರಿ ಕಂಡುಬರುತ್ತದೆ. ಭತ್ತ, ಕಬ್ಬು ಮೆಕ್ಕೆಜೋಳ, ಜೋಳ, ಹತ್ತಿ ಮುಂತಾಗಿ ಬೆಳೆಯಲಾಗುತ್ತದೆ. ಈ ತಾಲೂಕಿನ ಪ್ರಮುಖ ಬೆಳೆಗಳೆಂದರೆ ಕಬ್ಬು ಮತ್ತು ಭತ್ತವಾಗಿವೆ. ಭೌಗೋಳಿಕವಾಗಿ ಬಳ್ಳಾರಿ ಜಿಲ್ಲೆಯಲ್ಲಿಯೇ ವಿಸ್ತಾರದಲ್ಲಿ ಈ ತಾಲೂಕು ನಾಲ್ಕನೇ ಸ್ಥಾನವನ್ನು ಪಡೆದಿದೆ. ಈ ತಾಲೂಕಿನ ಒಟ್ಟು ವಿಸ್ತೀರ್ಣವು ೧,೦೩೬.೧೭ ಚ.ಕಿ.ಮೀಗಳಷ್ಟಿದೆ. ಪ್ರಾಗೈತಿಹಾಸಿಕ ಕುರುಹುಗಳನ್ನು ಅಡಗಿಸಿಟ್ಟುಕೊಂಡಿರುವ ಗುಡ್ಡಗಳು ಈ ತಾಲೂಕಿನಲ್ಲಿ ಕಂಡುಬರುತ್ತವೆ. ಕೃಷಿಯನ್ನು ಆಧರಿಸಿದ ಪ್ರಮುಖ ತಾಲೂಕು ಇದಾಗಿದೆ. ಈ ತಾಲೂಕು ಆರ್ಥಿಕವಾಗಿ ಮುಂದಿದ್ದರೂ ಜಿಲ್ಲೆಯಲ್ಲಿಯೇ ಶೈಕ್ಷಣಿಕವಾಗಿ ಹಿಂದುಳಿದ ತಾಲೂಕೆಂದು ಗುರುತಿಸಲ್ಪಟ್ಟಿದೆ. ಒಟ್ಟು ೮೪ ಗ್ರಾಮಗಳನ್ನು ಹೊಂದಿರುವ ಈ ತಾಲೂಕಿನಲ್ಲಿ ೪,೨೯೮ ಕುಟುಂಬಗಳು ನೆಲೆನಿಂತಿವೆ. ಆಂಧ್ರದ ಗಡಿಯಾಗಿರುವುದರಿಂದ ಆಂಧ್ರದಿಂದ ವಲಸೆ ಬಂದ ಕೃಷಿಕರು ಅಲ್ಲಲ್ಲಿ ಚಿಕ್ಕ ಚಿಕ್ಕ ಕ್ಯಾಂಪ್‌ಗಳನ್ನು ನಿರ್ಮಿಸಿಕೊಂಡು ಕೃಷಿ ಚಟುವಟಿಕೆಯಲ್ಲಿ ತೊಡಗಿರುವುದು ಕಂಡು ಬರುತ್ತದೆ. ಒಟ್ಟಾರೆಯಾಗಿ ೨೨೭ರಷ್ಟು ಜನ ಸಾಂದ್ರತೆಯನ್ನು ಈ ತಾಲೂಕು ಹೊಂದಿದೆ.

೨೦೦೧ರ ಜನಗಣತಿ ಪ್ರಕಾರ ಈ ತಾಲೂಕಿನ ಜನಸಂಖ್ಯೆ ಒಟ್ಟು ೨,೩೫,೩೪೪ ರಷ್ಟಿದೆ. ಇದರಲ್ಲಿ ಪುರುಷರು ೧,೧೭,೭೩೧ ಹಾಗೂ ಮಹಿಳೆಯರು ೧,೧೭,೬೧೩ ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಪ್ರಮಾಣವು ೪೫,೫೧೧ ರಷ್ಟಿದೆ. ಪರಿಶಿಷ್ಟ ಜಾತಿಯವರಲ್ಲಿ ಪುರುಷರು ೨೨.೬೦೫ ಹಾಗೂ ಮಹಿಳೆಯರು ೨೨.೯೦೬ರಷ್ಟಿದ್ದಾರೆ. ಹಾಗೇ ಪರಿಶಿಷ್ಟ ಪಂಗಡದ ಜನಸಂಖ್ಯೆ ೪೨,೦೦೯ರಷ್ಟಿದೆ. ಇದರಲ್ಲಿ ಪುರುಷರು ೨೦.೯೫೦ ಹಾಗೂ ಮಹಿಳೆಯರು ೨೧.೦೫೯ರಷ್ಟಿದ್ದಾರೆ. ಅಂದರೆ ತಾಲೂಕಿನಲ್ಲಿ ಪರಿಶಿಷ್ಟ ಜಾತಿಯವರ ಪ್ರಮಾಣವು ಶೇಕಡ ೧೯.೩ರಷ್ಟಿದ್ದರೆ ಪರಿಶಿಷ್ಟ ಪಂಗಡದವರ ಪ್ರಮಾಣ ಶೇಕಡ ೧೭.೯ ರಷ್ಟಿದೆ. ಈ ತಾಲೂಕಿನಲ್ಲಿ ಪುರುಷರ ಸಾಕ್ಷರತೆಯ ಪ್ರಮಾಣಕ್ಕಿಂತ ಮಹಿಳೆಯರ ಸಾಕ್ಷರತೆಯ ಪ್ರಮಾಣ ಅತೀ ಕಡಿಮೆಯಾಗಿರುವುದನ್ನು ಕಾಣಬಹುದಾಗಿದೆ. ಈ ತಾಲೂಕಿನ ಸಾಕ್ಷರತೆಯ ಪ್ರಮಾಣ ಕೇವಲ ಶೇಕಡ ೪೩.೬ ರಷ್ಟಿದೆ. ಇದರಲ್ಲಿ ಪುರುಷರು ಶೇಕಡ ೫೬.೯ ರಷ್ಟಿದ್ದರೆ ಮಹಿಳೆಯರ ಸಾಕ್ಷರತೆಯ ಶೇಕಡ ೩೦.೩ ರಷ್ಟಿದೆ. ಈ ಜಿಲ್ಲೆಯ ಇತರೆ ತಾಲೂಕುಗಳಿಗೆ ಹೋಲಿಸಿದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಈ ತಾಲೂಕು ತುಂಬಾ ಹಿಂದುಳಿದಿದೆ.

## ಹಡಗಲಿ ತಾಲೂಕು

ಹಡಗಲಿಯು ಬಳ್ಳಾರಿ ಜಿಲ್ಲೆಯ ತಾಲೂಕುಗಳಲ್ಲೊಂದು. ಈ ತಾಲೂಕಿನ ಒಂದು ಭಾಗಕ್ಕೆ ತುಂಗಾಭದ್ರಾ ನದಿಯು, ಮತ್ತೊಂದು ಭಾಗಕ್ಕೆ ಹರಪನಹಳ್ಳಿ, ಇನ್ನೊಂದು ಕಡೆ ಹಗರಿಬೊಮ್ಮನಹಳ್ಳಿಯ ಗಡಿಗಳನ್ನು ಹೊಂದಿದೆ. ಚಿಕ್ಕಪುಟ್ಟ ಮಣ್ಣಿನ ಗುಡ್ಡಗಳನ್ನು ಹೊಂದಿರುವ ಈ ತಾಲೂಕು ಕೆಂಪು ಹಾಗೂ ಕಪ್ಪು

ಬಣ್ಣದ ಮೇಲ್ಮೈ ಮಣ್ಣನ್ನು ಹೊಂದಿದೆ. ತುಂಗಾಭದ್ರಾ ನದಿಯು ಈ ತಾಲೂಕಿನಲ್ಲಿ ಹರಿದುಹೋಗುತ್ತಿದ್ದರೂ ಈ ತಾಲೂಕು ನೀರಾವರಿಯ ಸೌಲಭ್ಯವನ್ನು ಕಾಣಲು ಸಾಧ್ಯವಾಗಿರಲಿಲ್ಲ. ಇತ್ತೀಚೆಗೆ ಸಿಂಗಟಾಲೂರು ಏತ ನೀರಾವರಿ ಯೋಜನೆಯಿಂದಾಗಿ ಶೇಕಡ ೩೦ರಷ್ಟು ಭೂಮಿಯು ಕೃಷಿಗಾಗಿ ನೀರಾವರಿ ಸೌಲಭ್ಯವನ್ನು ಪಡೆಯುವಂತಾಗಿದೆ. ಅದರಾಚೆಗೆ ನದಿ ದಂಡೆಯ ಮೇಲಿರುವ ಕೃಷಿ ಭೂಮಿಗಳಿಗೆ ನೇರವಾಗಿ ನದಿಗೆ ಪಂಪುಗಳನ್ನು ಅಳವಡಿಸಿಕೊಂಡು ನೀರಾವರಿ ಸೌಲಭ್ಯವನ್ನು ಕಲ್ಪಿಸಿಕೊಂಡ ಉದಾಹರಣೆಯೂ ಇದೆ. ದೇಶದಾದ್ಯಂತ ಜನಪದ ಆಚರಣೆ ಹಾಗೂ ಪಶುಪಾಲಕರ ದೈವವಾದ ಮೈಲಾರ ಕ್ಷೇತ್ರವು ಈ ತಾಲೂಕಿನಲ್ಲಿಯೇ ಇದೆ. ಹಡಗಲಿ ತಾಲೂಕು ೯೨೮.೧೨ ಚ.ಕಿಲೋಮೀಟರ್ ವಿಸ್ತೀರ್ಣವನ್ನು ಹೊಂದಿದೆ. ೨೦೧೧ರ ಜನಗಣತಿ ಪ್ರಕಾರ ಈ ತಾಲೂಕಿನಲ್ಲಿ ಒಟ್ಟು ೩೩,೦೦೮ ಕುಟುಂಬಗಳು ನೆಲೆಸಿವೆ. ಒಟ್ಟು ಜನಸಂಖ್ಯೆಯು ೧,೬೭,೨೫೨ ಇದೆ. ಇದರಲ್ಲಿ ೮೪,೮೧೯ ಪುರುಷರು ಹಾಗೂ ೮೨,೪೩೩ ಮಹಿಳೆಯರು ನೆಲೆಸಿರುವರು. ೦-೬ ವಯೋಮಾನದ ಒಟ್ಟು ಮಕ್ಕಳು ೨೨,೪೦೮ ಇವೆ. ಇದರಲ್ಲಿ ೧೧,೪೭೧ ಗಂಡು ಹಾಗೂ ೧೦,೯೩೭ ಹೆಣ್ಣುಮಕ್ಕಳಿವೆ. ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೪೯,೯೨೫ ಇದೆ. ಇದರಲ್ಲಿ ೨೫,೨೩೫ ಪುರುಷರು ಹಾಗೂ ೨೪,೬೯೦ ಮಹಿಳೆಯರಿರುವರು. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೧೨,೯೧೭ ಇದೆ. ಇದರಲ್ಲಿ ೬,೫೦೫ ಪುರುಷರು ಹಾಗೂ ೬,೪೧೨ ಮಹಿಳೆಯರು ಇರುವರು. ಒಟ್ಟು ಸಾಕ್ಷರರು ೧,೦೧,೭೦೮ ಇರುವರು. ಇದರಲ್ಲಿ ೫೮,೬೮೯ ಪುರುಷರು ಹಾಗೂ ೪೩,೦೧೯ ಮಹಿಳೆಯರು ಇರುವರು.

**ಹಗರಿಬೊಮ್ಮನಹಳ್ಳಿ ತಾಲೂಕು**

ಬಳ್ಳಾರಿ ಜಿಲ್ಲೆಯಲ್ಲಿ ಎಣ್ಣೆಕಾಳು ಬೀಜೋತ್ಪಾದನೆಗೆ ಹೆಸರುವಾಸಿಯಾದ ತಾಲೂಕು ಹಗರಿಬೊಮ್ಮನಹಳ್ಳಿ, ಹಡಗಲಿ, ಹೊಸಪೇಟೆ, ಕೂಡ್ಲಿಗಿ, ಹರಪನಹಳ್ಳಿ ತಾಲೂಕುಗಳಿಂದ ಸುತ್ತುವರೆದಿರುವ ಈ ತಾಲೂಕನ್ನು ಹಾಯ್ದು ತುಂಗಾಭದ್ರ ನದಿ ಮುಂದೆ ಬರುವುದಾದರೂ ಆ ತಾಲೂಕಿಗೆ ನದಿಯಿಂದಾದ ಉಪಯೋಗ ಅತ್ಯಲ್ಪ ಎಂದೇ ಹೇಳಬಹುದು. ತುಂಗಾಭದ್ರ ನದಿ ದಂಡೆಯಲ್ಲಿನ ಭೂಮಿಗಳಿಗೆ ಪಂಪ್‌ಸೆಟ್‌ಗಳ ಮೂಲಕ ನದಿ ನೀರನ್ನು ಹರಿಸಲಾಗುವುದಾದರೂ ತಾಲೂಕಿನ ಎಲ್ಲಾ ಭೂಮಿಗಳಿಗೆ ನೀರನ್ನು ಹಾಯಿಸಲು ಸಾಧ್ಯವಾಗಿಲ್ಲದಿರುವುದು ಕಂಡುಬರುತ್ತದೆ.ಈ ತಾಲೂಕಿನ ಮಾಲವಿ ಎಂಬ ಗ್ರಾಮದಲ್ಲಿ ಹಗರಿಗೆ ಆಣೆಕಟ್ಟನ್ನು ಕಟ್ಟಲಾಗಿದೆಯಾದರೂ ಮಳೆ ಪ್ರಮಾಣ ಅತ್ಯಲ್ಪವಾಗಿರುವ ಪ್ರದೇಶ ಇದಾಗಿರುವುದರಿಂದ ಮಾಲವಿ ಆಣೆಕಟ್ಟಿನಲ್ಲಿ ಮಳೆಯಾದ ವರ್ಷ ಮಾತ್ರ ನೀರನ್ನು ಕಾಣಬಹುದು. ಬಳ್ಳಾರಿ ಜಿಲ್ಲೆಯಲ್ಲಿ ಮೊದಲಿಗೆ ಈ ತಾಲೂಕಿಗೆ ಮಲ್ಲಾಪುರ ತಾಲೂಕು ಎಂದು ಕರೆಯಲಾಗುತ್ತಿತ್ತಾದರೂ ದಶಕಗಳ ಹಿಂದೆ ಮಲ್ಲಾಪುರ ಹೆಸರನ್ನು ತೆಗೆದು ಹಾಕಿ ಹಗರಿಬೊಮ್ಮನಹಳ್ಳಿ ತಾಲೂಕೆಂದು ಮರುನಾಮಕರಣ ಮಾಡಲಾಯಿತು. ಬಹುತೇಕ ಮಳೆಯಾಶ್ರಿತ ಭೂಮಿಯನ್ನು ಹೊಂದಿರುವ ಈ ತಾಲೂಕಿನ ಒಟ್ಟು ವಿಸ್ತೀರ್ಣವು ೯೭೩.೯೫ ಚ.ಕಿ.ಮೀ ಗಳು. ಇಡೀ ತಾಲೂಕಿನಲ್ಲಿ

ಹಗರಿಬೊಮ್ಮನಹಳ್ಳಿಯಂತಹ ಚಿಕ್ಕ ಪಟ್ಟಣದಾಚೆ ಒಂದೇ ಒಂದು ನಗರ ಪ್ರದೇಶವನ್ನು ಕಾಣಲು ಸಾಧ್ಯವಾಗುವುದಿಲ್ಲ. ಇಡೀ ತಾಲೂಕಿನಲ್ಲಿ ನೆಲೆನಿಂತಿರುವ ಒಟ್ಟು ಕುಟುಂಬಗಳು ೨೮,೮೭೧ರಷ್ಟು, ಈ ತಾಲೂಕಿನ ಒಟ್ಟು ಜನ ಸಾಂದ್ರತೆಯು ೧೬೪ರಷ್ಟಿದೆ. ೨೦೧೧ರ ಜನಗಣತಿ ಪ್ರಕಾರ ತಾಲೂಕಿನ ಒಟ್ಟು ಜನಸಂಖ್ಯೆಯು ೧,೫೯,೮೮೬ ರಷ್ಟಿದೆ. ಇದರಲ್ಲಿ ಪುರುಷರು ೮೦,೭೭೦ ಹಾಗೂ ಮಹಿಳೆಯರು ೭೯,೧೧೬ ರಷ್ಟು ಕಂಡು ಬರುತ್ತಾರೆ. ಪರಿಶಿಷ್ಟ ಜಾತಿಯವರ ಜನಸಂಖ್ಯೆ ಒಟ್ಟು ೨೯,೯೪೧ ಇದ್ದು ಪುರುಷರು ೧೫,೦೬೮ ಹಾಗೂ ಮಹಿಳೆಯರು ೧೪,೮೭೩ರಷ್ಟು ಕಂಡು ಬರುತ್ತಾರೆ. ಈ ತಾಲೂಕಿನ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೨೧,೭೧೬ ಇದ್ದು ಇದರಲ್ಲಿ ಪುರುಷರು ೧೦,೯೨೪ ಹಾಗೂ ಮಹಿಳೆಯರು ೧೦,೭೯೨ರಷ್ಟು ಕಂಡುಬರುತ್ತಾರೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯವರ ಪ್ರಮಾಣ ಶೇಕಡ ೧೮.೭ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದವರ ಪ್ರಮಾಣ ಶೇಕಡ ೧೩.೬ ರಷ್ಟಿದೆ. ಈ ತಾಲೂಕಿನ ಒಟ್ಟು ಸಾಕ್ಷರತೆಯ ಪ್ರಮಾಣ ಶೇಕಡ ೫೮.೧ ರಷ್ಟು ಇರುವುದು ತಿಳಿದು ಬರುತ್ತದೆ.

### ೨.೭. ಬಳ್ಳಾರಿ ಜಿಲ್ಲೆಯ ಜನಸಂಖ್ಯೆ


"೨೦೧೧ರ ಜನಗಣತಿ ಪ್ರಕಾರ ಕರ್ನಾಟಕವು ಒಟ್ಟು ೧,೩೩,೦೦,೭೯೦ ಕುಟುಂಬಗಳನ್ನು ಹೊಂದಿದೆ. ಒಟ್ಟು ಜನಸಂಖ್ಯೆಯು ೬,೧೦,೯೫,೨೯೭ ಜನಸಂಖ್ಯೆಯನ್ನು ಹೊಂದಿದೆ ಇದರಲ್ಲಿ ಪುರುಷರು ೬,೧೦,೯೫,೨೯೭ ರಷ್ಟಿದ್ದರೆ ಮಹಿಳೆಯರು ೩,೦೧,೨೮,೬೪೦ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರು ಒಟ್ಟು ೧,೦೪,೭೪,೯೯೨ ಜನರಿರುವರು. ಇದರಲ್ಲಿ ೫೨,೬೪,೫೪೫ ಪುರುಷರು ಹಾಗೂ ೫೨,೧೦,೪೪೭ ಮಹಿಳೆಯರಿರುವರು. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೪೨,೪೮,೯೮೭ ಇದೆ. ಇದರಲ್ಲಿ ೨೧,೩೪,೭೫೪ ಪುರುಷರು ಹಾಗೂ ೨೧,೧೪,೨೩೩ ಮಹಿಳೆಯರು ನೆಲೆಸಿರುವರು".(ಜನಗಣತಿವರದಿ:೨೦೧೧) ಕರ್ನಾಟಕದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ರಾಜ್ಯದ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯಾ ಪ್ರಮಾಣವು ಕೇವಲ ಶೇ. ೬.೯೫ರಷ್ಟಿದೆ. ಜನಸಾಂದ್ರತೆಯು ಪ್ರತಿ ಚದರ ಕಿಲೊಮೀಟರಿಗೆ ೩೧೯ರಷ್ಟಿದೆ. ಲಿಂಗಾನುಪಾತವು ಒಟ್ಟು ೧೦೦೦ ಪುರುಷರಿಗೆ ೯೭೩ ಮಹಿಳೆಯರಿರುವರು. ೨೦೧೧ರ ಜನಗಣತಿ ಪ್ರಕಾರ ಬಳ್ಳಾರಿ ಜಿಲ್ಲೆಯಲ್ಲಿರುವ ಒಟ್ಟು ಕುಟುಂಬಗಳು ೩,೭೩,೦೩೪, ಒಟ್ಟು ಜನಸಂಖ್ಯೆಯು ೨೪,೫೨,೫೯೫ರಷ್ಟಿದ್ದು ಇದರಲ್ಲಿ ಪುರುಷರು ೧೨,೩೬,೯೫೪ರಷ್ಟಿದ್ದಾರೆ ಹಾಗೂ ಮಹಿಳೆಯರು ೧೨,೧೫,೬೪೧ರಷ್ಟಿದ್ದಾರೆ. ಪರಿಶಿಷ್ಟ ಜಾತಿಯು ಜನಸಂಖ್ಯೆಯು ಒಟ್ಟು ೫,೧೭,೪೦೯ರಷ್ಟಿದೆ ಇದರಲ್ಲಿ ಪುರುಷರು ೨,೫೮,೫೮೨ ಹಾಗೂ ಮಹಿಳೆಯರು ೨,೫೮,೮೨೭ ರಷ್ಟಿದ್ದಾರೆ.

| ೨೦೧೧ರ ಜನಗಣತಿ ಪ್ರಕಾರ ಕರ್ನಾಟಕದ ಬುಡಕಟ್ಟುಗಳ ಜನಸಂಖ್ಯೆ | | | | | |
|---|---|---|---|---|---|
| ೧. | ನಾಯಕ, ವಾಲ್ಮೀಕಿ, ಬೇಡ | | ಒಟ್ಟು | ಗಂಡು | ಹೆಣ್ಣು |
| | | ಒಟ್ಟು | ೪,೨೯೩,೭೨.೦೦ | ೨,೧೪,೬೫೧ | ೨,೧೪,೭೨೧ |
| | | ಗ್ರಾಮೀಣ | ೩,೨೧,೮೮೫ | ೧,೬೧,೫೮೮ | ೧,೬೦,೨೯೭ |
| | | ನಗರ | ೧,೦೭,೪೮೭ | ೫೩,೦೬೩ | ೫೪,೪೨೪ |
| ೨. | ಪಾರ್ಧಿ | ಒಟ್ಟು | ೭,೧೬೨ | ೩,೬೬೫ | ೩,೪೯೭ |
| | | ಗ್ರಾಮೀಣ | ೫,೨೨೨ | ೨,೬೮೯ | ೨,೫೩೩ |
| | | ನಗರ | ೧೯೪೦ | ೯೭೬ | ೯೬೪ |
| ೩. | ಮೇದ | ಒಟ್ಟು | ೨,೪೪೯ | ೧,೨೩೩ | ೧,೨೧೬ |
| | | ಗ್ರಾಮೀಣ | ೭೨೭ | ೩೬೭ | ೩೬೦ |
| | | ನಗರ | ೧,೭೨೨ | ೮೬೬ | ೮೫೬ |
| ೪. | ಡುಂಗ್ರಿ ಗರಾಸಿಯ | ಒಟ್ಟು | ೯೭ | ೪೬ | ೫೧ |
| | | ಗ್ರಾಮೀಣ | ೧೧ | ೫ | ೬ |
| | | ನಗರ | ೮೬ | ೪೧ | ೪೫ |
| ೫. | ಇತರೆ ಪ.ಪಂ | | ೮೮೦ | ೫೦೩ | ೩೭೯ |
| | | ಒಟ್ಟು | ೪,೩೯,೯೬೦ | ೨,೨೦,೦೯೮ | ೨,೧೯,೮೬೪ |

ಆಧಾರ: ೨೦೧೧ರ ಜನಗಣತಿ ವರದಿ, ಕರ್ನಾಟಕ ಸರ್ಕಾರ

ಬಳ್ಳಾರಿ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೪,೩೯,೯೬೦, ಇದರಲ್ಲಿ ಪುರುಷರು ೨,೨೦,೦೯೮ ಹಾಗು ಮಹಿಳೆಯರು ೨,೧೯,೮೬೪ರಷ್ಟಿದ್ದಾರೆ. ಕರ್ನಾಟಕದ ಒಟ್ಟು ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಹೋಲಿಸಿದರೆ ಬಳ್ಳಾರಿ ಜಿಲ್ಲೆಯಲ್ಲಿ ವಾಸವಾಗಿರುವ ಪರಿಶಿಷ್ಟ ಪಂಗಡದ ಜನಸಂಖ್ಯೆ ಕೇವಲ ಶೇಕಡ ೧೦.೬೨ರಷ್ಟು ಮಾತ್ರವಿದೆ. ಜಿಲ್ಲೆಯ ಪರಿಶಿಷ್ಟ ಪಂಗಡದ ಜನಸಂಖ್ಯೆಯಲ್ಲಿ ಬಹುಸಂಖ್ಯಾತ ಸಮುದಾಯ ನಾಯಕ ಸಮುದಾಯವಾಗಿದೆ.

ಕೋಷ್ಟಕ ೧ : ಬಳ್ಳಾರಿ ಜಿಲ್ಲೆಯ ಬುಡಕಟ್ಟುಗಳ ಜನಸಂಖ್ಯೆ (೨೦೧೧)




ನಾಯಕ ಸಮುದಾಯವು ಶೇಕಡ ೯೬.೫೫ ರಷ್ಟು ಇದೆ. ಈ ಜಿಲ್ಲೆಯ ಪರಿಶಿಷ್ಟ ಪಂಗಡದ ಸೂಕ್ಷ್ಮ ಬುಡಕಟ್ಟುಗಳಲ್ಲಿ ಮೇದ ಸಮುದಾಯವು ಶೇಕಡ ೦.೫೬ರಷ್ಟು ಜನಸಂಖ್ಯೆಯನ್ನು ಹೊಂದಿದೆ. ಶೇಕಡ ೨.೬೭ ರಷ್ಟು ಪಾರ್ಧಿ ಸಮುದಾಯವಿದೆ. ಡುಂಗ್ರಿ ಗರಾಸಿಯ ಸಮುದಾಯವು ಶೇಕಡ ೦.೦೨ರಷ್ಟು ಮಾತ್ರವಿದೆಯೆಂದು ದಾಖಲಾಗಿದೆ.

**ಆಧಾರಗಳು**

ಕುಮಾರ್ ಆರ್ ಬಿ, ೨೦೦೫, ಮುದ್ದೆಕಂಬಾರರು, ಸಾರಾ ಎಂಟರ್ ಪ್ರೈಸಸ್, ಸುಭಾಷ್ ನಗರ ಮೈಸೂರು

ಗೆಜಿಟೆಡ್ ಆಫ್ ಇಂಡಿಯಾ, ೧೯೭೨, ಮೈಸೂರು ಸ್ಟೇಟ್, ಬಳ್ಳಾರಿ ಜಿಲ್ಲೆ ಸರ್ಕಾರಿ ಮುದ್ರಣಾಲಯ, ಬೆಂಗಳೂರು

ಜನಗಣತಿ ವರದಿ, ೨೦೧೧, ಕರ್ನಾಟಕ ಸರ್ಕಾರ, ಬೆಂಗಳೂರು

ಬಳ್ಳಾರಿ ಜಿಲ್ಲಾ ಗೆಜೆಟಿಯರ, ೧೯೦೪, ಮದ್ರಾಸ್ ಪ್ರಸಿಡೆನ್ಸಿ,

ರುಮಾಲೆ, ಮೃತ್ಯಂಜಯ; ೧೯೯೯, ಅಲ್ಲಂ ಸುಮಂಗಳಮ್ಮ, ವಿದ್ಯಾವರ್ಧಕ ಸಂಘ, ಬಳ್ಳಾರಿ

ರಾಮಸ್ವಾಮಿ ಎಸ್ ಆರ್ (ಲೇ), ೧೯೯೮, ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ, ೧೯೫

ವಿರೂಪಾಕ್ಷಿ ಪೂಜಾರಿಹಳ್ಳಿ, ೨೦೦೯, ಬಳ್ಳಾರಿ ಜಿಲ್ಲೆಯಲ್ಲಿನ ಕಲೆಕ್ಟರ್‌ಗಳ ಆಳ್ವಿಕೆ, ಕ.ವಿ.ವಿ. ಯೋಜನೆ, ಅಪ್ರಕಟಿತ, ೪೫

ಸಾವಿತ್ರಿ, ೨೦೦೨, ಕುಮ್ಮಟ ಪರಿಸರದ ಕುಮಾರರಾಮನ ಹಬ್ಬ, ಗೆಳೆಯರ ಬಳಗ, ಕಂಪ್ಲಿ

ಸೂರ್ಯನಾಥ ಕಾಮತ್ (ಸಂ), ೧೯೯೮, ಸ್ವಾತಂತ್ರೋದಯದ ಮೈಲಿಗಲ್ಲುಗಳು; ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಹನುಮಂತರೆಡ್ಡಿ ವೈ, ೨೦೦೮, ಬಳ್ಳಾರಿ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ

# ಅಧ್ಯಾಯ: ಮೂರು
# ಬುಡಕಟ್ಟು ಮಹಿಳಾ ಸಬಲೀಕರಣ ಮತ್ತು ಯೋಜನೆಗಳು

೩.೧ ಮಹಿಳಾ ಸಬಲೀಕರಣದ ಪರಿಕಲ್ಪನೆ

೩.೨ ಮಹಿಳಾ ಸಬಲೀಕರಣದ ಹಿನ್ನೆಲೆ

೨.೩ ಮಹಿಳೆ ಮತ್ತು ಶಿಕ್ಷಣ

೩.೪ ಮಹಿಳೆ ಮತ್ತು ಉದ್ಯೋಗ

೩.೫ ಮಹಿಳೆ ಮತ್ತು ಆರೋಗ್ಯ

೩.೬ ಮಹಿಳೆ: ಪಂಚವಾರ್ಷಿಕ ಯೋಜನೆಗಳು

೩.೭ ಭಾರತ ಸರಕಾರದ ಬುಡಕಟ್ಟು ಮಹಿಳಾ ಸಬಲೀಕರಣದ ಯೋಜನೆಗಳು

೩.೭.೧ ಆದಿವಾಸಿ ಮಹಿಳಾ ಸಶಕ್ತೀಕರಣ ಯೋಜನೆ ಮತ್ತು ಮಹಿಳೆಯರ ವೃತ್ತಿಪರ ತರಬೇತಿ ಕೇಂದ್ರಗಳ ಸ್ಥಾಪನೆ

೩.೭.೨ ಬುಡಕಟ್ಟು ಅರಣ್ಯ ನಿವಾಸಿಗಳ ಸಬಲೀಕರಣ ಯೋಜನೆ

೩.೭.೩ ಸ್ವ-ಸಹಾಯ ಗುಂಪುಗಳಿಗೆ ಸೂಕ್ಷ್ಮಸಾಲ ಯೋಜನೆ

೩.೭.೪ ಬುಡಕಟ್ಟು ಮಹಿಳೆಯರ ಕೇಂದ್ರ ಪ್ರಾಯೋಜಿತ ಯೋಜನೆಗಳು

೩.೭.೫ ಮಹಿಳಾ ಉದ್ಯೋಗ ಮತ್ತು ಪೂರಕ ತರಬೇತಿ ಕಾರ್ಯಕ್ರಮ

೩.೭.೬ ಇಂದಿರಾಗಾಂಧಿ ಮಾತೃತ್ವ ಸಹಯೋಗ ಯೋಜನೆ

೩.೭.೭ ಭೇಟಿ ಬಚಾವೋ ಭೇಟಿ ಪಢಾವೊ ಮತ್ತು ಮಹಿಳಾ ಸಹಾಯವಾಣಿ ಯೋಜನೆ

೩.೭.೮ ಸುಕನ್ಯಾ ಸಮೃದ್ಧಿ ಯೋಜನೆ ಮತ್ತು ಉಜ್ವಲ್ ಯೋಜನೆ

೩.೭.೯ ಒನ್ ಸ್ಟಾಪ್ ಸೆಂಟರ್ ಯೋಜನೆ ಮತ್ತು ಜನ್‌ಧನ್ ಯೋಜನೆ

# ಅಧ್ಯಾಯ : ಮೂರು

# ಬುಡಕಟ್ಟು ಮಹಿಳಾ ಸಬಲೀಕರಣ ಮತ್ತು ಕೇಂದ್ರ ಸರ್ಕಾರದ ಯೋಜನೆಗಳು

ಪ್ರತಿಯೊಂದು ಪ್ರಾಣಿಯಲ್ಲಿಯೂ ಸಾಮಾನ್ಯವಾಗಿ ಗಂಡು ಹೆಣ್ಣು ಎಂಬ ಎರಡು ವರ್ಗಗಳನ್ನು ಕಾಣುತ್ತೇವೆ. ಪ್ರಾಕೃತಿಕವಾಗಿ ಜೈವಿಕ ಬದಲಾವಣೆಗಳಿಂದಾಗಿ ಈ ವಿಭಾಗೀಕರಣ ಮಾಡಲಾಗಿದೆ. ಗಂಡು, ಹೆಣ್ಣು ಎರಡೂ ಸಂತಾನೋತ್ಪತ್ತಿ ಕ್ರಿಯೆಯಲ್ಲಿ ಮುಖ್ಯವಾಗಿರುವವು. ಇದು ಮನುಷ್ಯನಿಗೂ ಹೊರತಾದ ಕ್ರಿಯೆಯೇನಲ್ಲ. ಎರಡು ಲಿಂಗಿಗಳು ಸೇರಿಯೇ ಸಂಸಾರವಾಗುವುದು. ಆ ಸಂಸಾರವೇ ಕುಟುಂಬ. ಸಂಸಾರವು ಸಮಾಜದ ಹುಟ್ಟಿಗೆ ಕಾರಣವಾಗಿದೆ. ಅಂತಹ ಸಮಾಜದಲ್ಲಿರುವ ಹೆಣ್ಣು ಗಂಡುಗಳ ಮಧ್ಯ ತಾರತಮ್ಯಗಳು ಸೃಷ್ಟಿಯಾಗಿದೆ. ಪುರುಷಶಾಹಿ ವ್ಯವಸ್ಥೆಯು ಹೆಣ್ಣು ತನ್ನ ಅಡಿಯಾಳಾಗಿಯೇ ಬದುಕಬೇಕು ಎಂದು ಆಪೇಕ್ಷಿಸುವುದು. ಇದು ಕೇವಲ ಒಂದು ನಾಡು, ದೇಶದ ಸಮಸ್ಯೆಯಾಗಿರದೆ ಗಂಡು ಹೆಣ್ಣುಗಳ ಮಧ್ಯದ ಈ ತಾರತಮ್ಯವು ಜಾಗತಿಕ ಸಮಸ್ಯೆಯಾಗಿಯೇ ಕಾಡುತ್ತಿದೆ. ಗಂಡು ಹೆಣ್ಣು ಎರಡೂ ಸಮಾಜದ ಎರಡು ಕಣ್ಣುಗಳು. ಆ ಎರಡು ಕಣ್ಣಲ್ಲಿ ಯಾವುದೇ ಒಂದು ಕಳೆದರೂ ಸಮಾಜವು ಊನವಾಗಿಯೇ ಉಳಿಯುವುದು. ಹೀಗಾಗಿ ಎರಡನ್ನೂ ಸಮಾನವಾಗಿ ಕಾಣುವಂತೆ ವ್ಯವಸ್ಥೆಯನ್ನು ರೂಪಿಸುವುದೇ ಮಹಿಳಾ ಸಬಲೀಕರಣದ ಉದ್ದೇಶವಾಗಿದೆ. ಮಹಿಳಾ ಸಬಲೀಕರಣದ ಪರಿಕಲ್ಪನೆಯು ಮಹಿಳಾವಾದಿಗಳ ಮೂಲಕವೇ ಚಾಲ್ತಿಗೆ ಬಂದಿದೆಯೆಂದರೆ ತಪ್ಪಾಗಲಾರದು. ಸಬಲೀಕರಣವೆಂದರೆ ದುರ್ಬಲವಾದ ವ್ಯಕ್ತಿಯನ್ನು ಸಶಕ್ತಗೊಳಿಸುವುದೇ ಸಬಲೀಕರಣವೆನ್ನಬಹುದು.

### ೩.೧. ಮಹಿಳಾ ಸಬಲೀಕರಣದ ಪರಿಕಲ್ಪನೆ

ಪುರುಷಶಾಹಿ ಸಮಾಜದಲ್ಲಿ ಮಹಿಳೆಯು ಎಲ್ಲಾ ರಂಗಗಳಲ್ಲಿಯೂ ದುರ್ಬಲವಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಇಂದಿಗೂ ಎಷ್ಟೋ ರಾಷ್ಟ್ರಗಳಲ್ಲಿ ಮಹಿಳೆಗೆ ಮತದಾನದ ಹಕ್ಕಿಲ್ಲ. ಕೌಟುಂಬಿಕವಾಗಿ ಸ್ವಂತ ನಿರ್ಧಾರಗಳನ್ನು ಹೊಂದುವ ಹಕ್ಕಿಲ್ಲ. ಗಂಡು ಹೆಣ್ಣಿನ ಮಧ್ಯದ ಈ ತಾರತಮ್ಯಗಳು ಇಂದು ನಿನ್ನೆಯದಲ್ಲ. ಮನುಷ್ಯ ನಾಗರಿಕ ಜಗತ್ತಿಗೆ ಕಾಲಿಟ್ಟಾಗಿನಿಂದಲೂ ಈ ಕಂದರ ಏರ್ಪಟ್ಟಿದೆ ಎನಿಸುತ್ತದೆ. ಈ ವಿಚಾರವಾಗಿ ದೇವರ ದಾಸಿಮಯ್ಯನ ವಚನವೊಂದು ನೆನಪಾಗುತ್ತಿದೆ.

"ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮನು ಹೆಣ್ಣೂ ಅಲ್ಲ,
ಗಂಡೂ ಅಲ್ಲ ಕಾಣಾ ರಾಮನಾಥ"(ದೇವರ ದಾಸಿಮಯ್ಯನ ವಚನ).

ಸಂವಿಧಾನದ ಚೌಕಟ್ಟಿನೊಳಗೆ ಹೆಣ್ಣು ಗಂಡು ಇಬ್ಬರೂ ಸಮಾನರು. ಪುರುಷನಷ್ಟೇ ಸಮರ್ಥವಾದ, ಸ್ವತಂತ್ರವಾಗಿ ಆಲೋಚಿಸುವ ಶಕ್ತಿ ಹೆಣ್ಣಿಗಿದೆಯಾದರೂ ಸಮಾನತೆಯ ಮಂತ್ರ ಅನುಷ್ಠಾನದಲ್ಲಿ ಕಂಡುಬರುತ್ತಿಲ್ಲ. ಪುರುಷನಿಗೆ ಸಮಾನವಾಗಿ ನಿರ್ಣಯಗಳನ್ನು ತೆಗೆದುಕೊಳ್ಳುವ ಹಕ್ಕನ್ನು ಮಹಿಳೆಯಾದವಳು ಪಡೆಯಬೇಕು. ಕೇವಲ ನಿರ್ಣಯ ತೆಗೆದುಕೊಳ್ಳುವ ಮಟ್ಟಿಗೆ ಮಾತ್ರ ಅದು ಸೀಮಿತವಾಗದೆ ತೆಗೆದುಕೊಂಡ ನಿರ್ಣಯಗಳನ್ನು ಅನುಷ್ಠಾನಗೊಳಿಸುವ ಧಾರಣಶಕ್ತಿಯೂ ಮಹಿಳೆಗೆ ದೊರೆಯುವಂತಾಗಬೇಕು. ಹಾಗಾದಾಗ ಮಾತ್ರ ಸಮಾನತೆ ಕಾಣಲು ಸಾಧ್ಯ. ಆ ರೀತಿಯ ಸಮಾನತೆಯನ್ನು ತರುವ ಆಶಯವನ್ನು ಮಹಿಳೆ ಸಬಲೀಕರಣಗೊಂಡಾಗ ಮಾತ್ರ ಸಾಧ್ಯವಾಗುವುದು. ಸಬಲೀಕರಣದ ಆಶಯದಂತೆ ಮಹಿಳೆಯು ಪುರುಷನಿಗೆ ಸಮಾನವಾಗಲು ಇರಬೇಕಾದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಸ್ಥಾನಗಳಲ್ಲಿ ಮಹಿಳೆಗೆ ಪುರುಷನಿಗಿರುವಷ್ಟೇ ಅವಕಾಶಗಳು ಹಾಗೂ ಪಡೆದ ಅವಕಾಶಗಳನ್ನು ಸಮರ್ಪಕವಾಗಿ ಬಳಸಲು ಇರಬೇಕಾದ ನಿರ್ಣಾಯಕ ಶಕ್ತಿ ಮಹಿಳೆಗೆ ದೊರೆಯುವಂತಾಗಬೇಕು ಎಂಬ ಆಶಯವನ್ನು ಮಹಿಳಾ ಸಬಲೀಕರಣವು ಹೊಂದಿದೆ.

ಇಪ್ಪತ್ತನೇ ಶತಮಾನದಲ್ಲಿ ಮಹಿಳಾ ಸಬಲೀಕರಣ, ಮಹಿಳಾ ಕಲ್ಯಾಣ ಮತ್ತು ಲಿಂಗನ್ಯಾಯ ಪರಿಭಾವನೆಗಳು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಅಭಿವೃದ್ಧಿ ವಿಶ್ಲೇಷಣೆಯಲ್ಲಿ ಪ್ರಸಿದ್ಧಿಯಾಗಿ ಬೆಳಕಿಗೆ ಬಂದವು. ಮಹಿಳೆಯರು ಬಹುತೇಕ ಎಲ್ಲಾ ವಲಯಗಳಲ್ಲೂ ದ್ವಿತೀಯ ಪ್ರಜೆಯಾಗಿಯೇ ಉಳಿದಿದ್ದಾರೆ. ಹುಟ್ಟಿನಿಂದ ಹಿಡಿದು ಜೀವನದ ಕೊನೆಯವರೆಗೂ ಎಲ್ಲಾ ಸ್ತರಗಳಲ್ಲಿಯೂ ಮಹಿಳೆ ಪುರುಷನನ್ನೇ ಅವಲಂಬಿಸುವಂತಹ ಪರಿಸ್ಥಿತಿಯನ್ನು ಪುರುಷಶಾಹಿಯು ಮಹಿಳೆಗೆ ತಂದೊಡ್ಡಿದೆ. ಮಹಿಳೆ ಭೋಗದ ವಸ್ತು ಎಂದು ಮನು ಹೇಳಿದ್ದಾನೆ. ಮಹಿಳಾ ಶೋಷಣೆಯೆಂಬುದು ಮನುವಿನ ಕಾಲದಿಂದಲೇ ಪ್ರಾರಂಭಗೊಂಡಿತೇನೊ. ನಮ್ಮ ಪುರಾಣ ಪಠ್ಯಗಳಲ್ಲಿಯೂ ಮಹಿಳೆ ಶೋಷಿತಳಾಗಿಯೇ ಚಿತ್ರಣಗೊಂಡಿದ್ದಾಳೆ. ಮಹಿಳಾ ಶೋಷಣೆಗೆ ಪಾತಿವ್ರತ್ಯದ ಬಣ್ಣ ಬಳಿಯಲಾಗಿದೆ. ಇಂದಿಗೂ ಅದು ಯಾವುದೇ ಬದಲಾವಣೆ ಕಾಣದೆ ಚಾಲ್ತಿಯಲ್ಲಿರುವುದು ಮಾತ್ರ ಶೋಚನಿಯ ವಿಚಾರವಾಗಿದೆ. ಆದರೆ ಇಂದು ಆಧುನಿಕ ಶಿಕ್ಷಣವು ಸಮಾಜದಲ್ಲಿ ಸಾಕಷ್ಟು ಬದಲಾವಣೆಯ ಗಾಳಿಯನ್ನು ಹಾಯಿಸುತ್ತಿದೆ. ಮಹಿಳೆಯು ಪ್ರಜ್ಞಾವಂತಳಾದಂತೆಲ್ಲ ತನಗೂ ವ್ಯವಸ್ಥೆಯಲ್ಲಿ ಸಮಾನ ಹಕ್ಕುಗಳು ಬೇಕು ಎಂದು ಕೇಳುವಷ್ಟರ ಮಟ್ಟಿಗೆ ಕೆಲವಾದರೂ ಮಹಿಳೆಯರು ಧ್ವನಿ ಎತ್ತುತ್ತಿರುವರು. ಅದರ ಪರಿಣಾಮವೇ ಮಹಿಳಾವಾದವೆಂದರೆ ತಪ್ಪಾಗಲಾರದು.

### ೩.೨ ಮಹಿಳಾ ಸಬಲೀಕರಣದ ಪರಿಕಲ್ಪನೆಯ ಹಿನ್ನೆಲೆ

ಮಹಿಳಾ ಸಬಲೀಕರಣ ಪರಿಕಲ್ಪನೆಯು ಕಳೆದ ೫೦ ವರ್ಷಗಳ ಅವಧಿಯಲ್ಲಿ ಅಭಿವೃದ್ಧಿ ಪ್ರಕ್ರಿಯೆಯ ಕೇಂದ್ರ ಬಿಂದುವಾಗಿ ಹೊರಹೊಮ್ಮಿದೆ. ಈ ನಿಟ್ಟಿನಲ್ಲಿ ಹಲವಾರು ಬದಲಾವಣೆಗಳು ನೀತಿಗಳ ಅಡಿಯಲ್ಲಿ ಬಂದಿವೆ. ಎಪ್ಪತ್ತರ ದಶಕದವರೆಗೂ 'ಯೋಗ ಕ್ಷೇಮ' ಪರಿಕಲ್ಪನೆಯು ಮುಂಚೂಣಿಯಲ್ಲಿತ್ತು, ಎಂಭತ್ತರ ದಶಕದ ಅವಧಿಯಲ್ಲಿ 'ಅಭಿವೃದ್ಧಿ' ಕೇಂದ್ರ ಬಿಂದುವಾಗಿತ್ತು ಮತ್ತು ಅಂತಿಮವಾಗಿ ತೊಂಭತ್ತರ ದಶಕದ ಅವಧಿಯಲ್ಲಿ 'ಸಬಲೀಕರಣ' ಪರಿಕಲ್ಪನೆಯು ಮಹತ್ವವನ್ನು ಪಡೆದುಕೊಂಡಿದೆ. ಮಹಿಳಾ ಸಬಲೀಕರಣ ಒಂದು ವಿಶ್ವವ್ಯಾಪಿ ವಿಷಯವಾಗಿದ್ದು. ಇದು ಆಸಕ್ತಿದಾಯಕ ಹಾಗೂ ವಿವಿಧ ಆಯಾಮಗಳಿಂದ ಕೂಡಿದ ಪ್ರಕ್ರಿಯೆಯಾಗಿದೆ. 'ಸಬಲೀಕರಣ' ಎಂದರೆ ಮಾನವನ ಸರ್ವಾಂಗೀಣ ಅಭಿವೃದ್ಧಿಗೆ ಅವಶ್ಯವಾದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ, ಮಾನಸಿಕ ಬೌದ್ಧಿಕತೆಗೆ ನೈತಿಕ ಸಶಕ್ತಿಯನ್ನು ಕೊಡುವುದೆಂದರ್ಥ. ವಿಶಾಲ ಅರ್ಥದಲ್ಲಿ ಹೇಳುವುದಾದರೆ, ವ್ಯವಸ್ಥೆಯ ಜೈವಿಕವಾದ ಎರಡು ಭಿನ್ನ ಲಿಂಗಿಗಳ ಮಧ್ಯ ಇರುವ ತಾರತಮ್ಯದ ವಿರುದ್ಧ ಸಂವಿಧಾನಾತ್ಮಕವಾದ ಹಕ್ಕುಗಳಿಗಾಗಿ ಹೋರಾಡುವುದೇ 'ಸಬಲೀಕರಣ'ದ ಗುರಿಯಾಗಿದೆ. ಮಹಿಳಾ ಸಬಲೀಕರಣವು ಮಹಿಳೆಯ ಆತ್ಮಸಾಕ್ಷಿಯನ್ನು ಹೆಚ್ಚಿಸುವುದು, ಆಕೆಯನ್ನು ಆರ್ಥಿಕ ಹಾಗೂ ಸಾಮಾಜಿಕವಾಗಿ ಸ್ವಾತಂತ್ರ್ಯ ಮತ್ತು ಸ್ವಾವಲಂಬನೆಗೆ ಸಜ್ಜುಗೊಳಿಸುವ ಕಾರ್ಯವನ್ನು ಸಬಲೀಕರಣದ ಮೂಲಕ ಮಾಡುವ ಪ್ರಯತ್ನವೆಂದು ಹೇಳಬಹುದು. ವಾಸ್ತವಿಕವಾಗಿ ಮಹಿಳಾ ಸಬಲೀಕರಣವೆಂಬುದು ಇತ್ತೀಚಿನ ಪರಿಕಲ್ಪನೆಯಾಗಿದೆ. 'ಮಹಿಳಾ ಸಬಲೀಕರಣವು ಪುರುಷ ಪ್ರಾಧಾನ್ಯತೆಗೆ ಮಂಗಳ ಹಾಡಿ ಮಹಿಳಾ ಲೋಕದಲ್ಲಿ ಸಂಪೂರ್ಣ ಆತ್ಮವಿಶ್ವಾಸ, ಸ್ವಾತಂತ್ರ್ಯ ಮನೋಭಾವ ಮತ್ತು ಸಾಮರ್ಥ್ಯವನ್ನು ಮೂಡಿಸುವ ಮೂಲಕ ಮಹಿಳೆಯರಲ್ಲಿ ಆತ್ಮಸ್ಥೈರ್ಯವನ್ನು ಹೆಚ್ಚಿಸುವುದಾಗಿದೆ. ಸ್ತ್ರೀ, ಪುರುಷರ ಮಧ್ಯದ ಭೇದಭಾವವನ್ನು ಮಹಿಳಾ ಸಬಲೀಕರಣದ ಮೂಲಕ ಕೊನೆಗಾಣಿಸಿ ಸಮಾನತೆಯನ್ನು ಸೃಷ್ಟಿಸುವುದಾಗಿದೆ.

"ಸಬಲೀಕರಣದ ಅರ್ಥ ಒಬ್ಬರನ್ನು ಬಲಗೊಳಿಸುವುದು ಮತ್ತು ಜೀವನದ ಸವಾಲುಗಳನ್ನು ಎದುರಿಸಲಿಕ್ಕೆ ಬೇಕಾದ ಧೈರ್ಯ ಸಾಹಸಗಳನ್ನು ತುಂಬುವುದು ಎಂಬುದಾಗುತ್ತದೆ. ಒಬ್ಬರು ಬಲಗೊಳ್ಳುವುದರಿಂದ ಅವರು ತಮ್ಮ ಅಸಾಮರ್ಥ್ಯತೆ, ಅನಾನುಕೂಲತೆ, ಅಸಮಾನತೆಗಳನ್ನು ಕೊಡವಿ ಆತ್ಮ ನಿರ್ಧಾರ ಹೊಂದುವಂತಾಗುವುದು"(AgarwalMeenu:೨೦೦೭:೧೮೪), ವ್ಯಾಪಕ ಅರ್ಥದಲ್ಲಿ ಹೇಳುವುದಾದರೆ ಸಬಲಗೊಳ್ಳುವುವಿಕೆಯು ಮಹಿಳೆಯರಿಗೆ ಪ್ರತಿಯೊಂದು ಕ್ಷೇತ್ರದ ಜೀವನವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಅಸ್ಪದ ಮಾಡಿಕೊಡುತ್ತದೆ. ಸಬಲತೆಯನ್ನು ಹೊಂದಿದ ಮಹಿಳೆಯರು ಹೊಸ ಹೊಸ ಜ್ಞಾನಕ್ಷೇತ್ರಗಳನ್ನು ಹುಡುಕಿಕೊಂಡು ಹೋಗುತ್ತಾರೆ. ತಮಗೇನು ಅವಶ್ಯಕವೆಂಬುದನ್ನು ಅರಿತುಕೊಳ್ಳುತ್ತಾರೆ. ಮಹಿಳೆ ಸ್ವಯಂ ನಿರ್ಧಾರದ ಮನೋಬಲವಲ್ಲದೇ ತಮ್ಮ ಜೀವನವನ್ನು ತಾವೇ ರೂಪಿಸಿಕೊಳ್ಳುವ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತಾರೆ. ಮಹಿಳೆಯರ ಮೇಲೆ ತಲೆ ತಲಾಂತರದಿಂದ ಹೇರಲಾದ ಕಂದಾಚಾರ,

ಮೂಢನಂಬಿಕೆ, ರೀತಿ ರೀವಾಜುಗಳನ್ನು ಕಿತ್ತಿ ಹಾಕಿ, ಹತ್ತಾರು ಅಡ್ಡಿ ಆತಂಕಗಳನ್ನು ಹೇಗೆ ನಿವಾರಿಸಿಕೊಳ್ಳಬೇಕೆಂಬ ಪರಿಜ್ಞಾನವನ್ನು ಸಂಪಾದಿಸಿಕೊಳ್ಳುತ್ತಾರೆ. "ಮಹಿಳಾ ಸಬಲೀಕರಣವೆಂದರೆ ಮಹಿಳೆಯರನ್ನು ಪುರುಷ ಸಮಾಜದ ವಿರುದ್ಧ ಎತ್ತಿ ಕಟ್ಟುವುದಲ್ಲ. ನಿಜವಾಗಿಯೂ ಇದೊಂದು ಹೆಣ್ಣು ಗಂಡು ಪರಸ್ಪರವಾಗಿ ಅರ್ಥಮಾಡಿಕೊಂಡು ಮತ್ತು ಪರಸ್ಪರರನ್ನು ಗೌರವಿಸಿ ಸುಖ ಸೌಹಾರ್ದತೆಯಿಂದ ಬಾಳುವಂತೆ ಮಾಡುವುದಾಗಿದೆ. ವಾಸ್ತವಿಕವಾಗಿ ಮಹಿಳಾ ಸಬಲೀಕರಣವೆಂದರೆ ಪುರುಷ ದುರ್ಬಲೀಕರಣವಲ್ಲ. ಇದೊಂದು ರೀತಿಯಲ್ಲಿ ಕುಟುಂಬದಲ್ಲಿನ ಹೊಣೆಗಾರಿಕೆಗಳ ಪುನರ್ ಹಂಚಿಕೆ, ಕಾಲಮಾನಕ್ಕೆ ತಕ್ಕಂತೆ ನಡೆತೆಗಳ ಪುನರ್ ಮೌಲ್ಯೀಕರಣ, ಹೊಸ ರೀತಿಯ ಹೊಂದಾಣಿಕೆ, ಮತ್ತು ಪರಸ್ಪರರ ಯೋಗಕ್ಷೇಮ ಬಯಸುವ ಹೊಸ ದೃಷ್ಟಿಕೋನದ ಅಳವಡಿಕೆ."(Devi Laxmi:೧೯೯೮:೧೩೨), ಸಬಲೀಕರಣವು ಆಯ್ಕೆ ಮತ್ತು ಅವಕಾಶಗಳ ವಿಸ್ತರಣೆಯಲ್ಲಿ ಮಾನವನ ಸಾಮರ್ಥ್ಯಗಳನ್ನು ವರ್ಧಿಸುವ ಮೂಲಕ ಪ್ರತಿಯೊಬ್ಬ ವ್ಯಕ್ತಿಯೂ ಮೌಲ್ಯಯುತ ಹಾಗೂ ಆತ್ಮ ಗೌರವವುಳ್ಳ ಜೀವನವನ್ನು ನಡೆಸುವಂತಾಗುವ ಒಂದು ಕ್ರಿಯೆಯಾಗಿದೆ. ಮಹಿಳಾ ಸಬಲೀಕರಣ ಪರಿಭಾವನೆಯು 'ಮಹಿಳಾ ಸಾಮಾಜಿಕ ನ್ಯಾಯ ಮತ್ತು ಸಮಾನತೆಯೊಂದಿಗೆ ಹೋರಾಡಲು ಹೊಂದಿಕೊಳ್ಳುವ ಸಲುವಾಗಿ ಬೆಳಕಿಗೆ ಬಂದಿದೆ' ನಾಲ್ಕನೇ ಅಂತರಾಷ್ಟ್ರೀಯ ಬೀಜಿಂಗ್ ಮಹಿಳಾ ಸಮ್ಮೇಳನದಲ್ಲಿ ಪ್ರಸ್ತುತಪಡಿಸಿದ ಭಾರತ ಸರಕಾರದ ವರದಿಯ ಪ್ರಕಾರ, 'ಸಬಲೀಕರಣ' ಎಂದರೆ 'ಅಧಿಕಾರ ರಾಹಿತ್ಯದ ಭಾಗದಿಂದ ಅಧಿಕಾರ ಹಿಡಿಯುವತ್ತ ಕಾರ್ಯೋನ್ಮುಖವಾಗುವುದೆಂದರ್ಥ. ಅದು ಮಹಿಳೆಯ ಅಂತಃಶಕ್ತಿ ಮತ್ತು ಸ್ವಷ್ಟವಾದ ಸ್ವಾಭಿಮಾನವನ್ನು ಹೆಚ್ಚಿಸುವುದು. ಮಹಿಳಾ ಸಬಲೀಕರಣವು ಮಹಿಳೆಯನ್ನು ಆರ್ಥಿಕ ಸ್ವಾತಂತ್ರ್ಯ ಮತ್ತು ಸ್ವಾವಲಂಬನೆಗೆ ಸಜ್ಜುಗೊಳಿಸುವುದಾಗಿದೆ. ಇದರಿಂದ ಅವರು ಯಾವುದೇ ರೀತಿಯ ಕಠಿಣ ಪರಿಸ್ಥಿತಿಯನ್ನು ಎದುರಿಸಲು ಸಾಮರ್ಥ್ಯವನ್ನು ಹೊಂದುವರು. ಹಾಗೆಯೇ ಅವರು ಅಭಿವೃದ್ಧಿ ಚಟುವಟಿಕೆಗಳಲ್ಲಿ ಮತ್ತು ನಿರ್ಧಾರತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಮರ್ಥರಾಗುವರು.

ಸಬಲತೆ ಅಥವಾ ಸಶಕ್ತತೆ ಎಂಬ ಪರಿಕಲ್ಪನೆಯು ಅಧಿಕಾರ ಹೊಂದುವುದು ಮತ್ತು ಶಕ್ತಿಯುತರಾಗುವುದನ್ನು ಸೂಚಿಸುತ್ತದೆ. ಸಬಲತೆ ಎನ್ನುವುದು ಸ್ತ್ರೀ-ಪುರುಷರಿಬ್ಬರಿಗೂ ಸಮಾಜದಲ್ಲಿ ಬದುಕಲು ಬೇಕಾದ ಶಕ್ತಿಯನ್ನು ಸಮಾನವಾಗಿ ನೀಡುವುದಾಗಿದೆ. ಒಬ್ಬ ಮಹಿಳೆಯು ಶಕ್ತಿವಂತಳಾಗಿ, ಸ್ವತಂತ್ರವಾಗಿ ತನ್ನ ಇಚ್ಚೆಯಂತೆ ಸ್ವಾವಲಂಭಿಯಾಗಿ ಬಾಳುವ ಸ್ಥಿತಿಯನ್ನೇ ಸಬಲತೆ ಎನ್ನಬಹುದು. ಒಬ್ಬ ಮಹಿಳೆ ತನ್ನ ಜೀವನದ ಬಗ್ಗೆ ಪರಿಪೂರ್ಣ ಜ್ಞಾನವನ್ನು ಹೊಂದುವುದು, ತನ್ನ ಜೀವನದ ಬಗ್ಗೆ ನಿರ್ಣಯ ಹಾಗೂ ತೀರ್ಮಾನಗಳನ್ನು ಕೈಗೊಳ್ಳುವ ಸ್ವಾತಂತ್ರ್ಯ ಹೊಂದುವುದು, ಅಧಿಕಾರ ಹಾಗೂ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಅವಕಾಶಗಳನ್ನು ಹೊಂದುವುದು. ಯಾವುದೇ ರೀತಿಯ ಅಸಮಾನತೆ, ಶೋಷಣೆಗಳಿಗೆ ಒಳಗಾಗದೇ ಶಿಕ್ಷಣ, ಉದ್ಯೋಗ, ವಿವಾಹ, ಜೀವನ, ಸಂತಾನೋತ್ಪತ್ತಿ ಆರೋಗ್ಯ ಮತ್ತು ಹಕ್ಕುಗಳನ್ನು ಹೊಂದುವುದು. ಸಾಮಾಜಿಕ ಚಲನೆ, ರಾಜಕೀಯ ಮತ್ತು ಆಡಳಿತದಲ್ಲಿ ಪಾಲ್ಗೊಳ್ಳುವಿಕೆ ಇಂತಹ ಆಂಶಗಳ ಬಗ್ಗೆ ಸ್ವತಂತ್ರ್ಯ ಹೊಂದಿದ್ದ ಸ್ವಾಭಿಮಾನಿಯಾಗಿ ಆತ್ಮ ವಿಶ್ವಾಸದಿಂದ

ಬಾಳುವ ಶಕ್ತಿಯೇ ಮಹಿಳಾ ಸಬಲತೆ. ಮಹಿಳಾ ಸಬಲತೆಯು ಮೂಲಭೂತವಾಗಿ ಮಹಿಳೆಯರ ಮಾನಸಿಕ ಸಬಲತೆಯಾಗಿದ್ದು ಅವರು ಪ್ರಜ್ಞಾಪೂರ್ವಕವಾಗಿ ಶಕ್ತಿವಂತರಾಗುವ ಸ್ಥಿತಿ. ಮಹಿಳೆಯರ ಯೋಚನೆ, ಶಕ್ತಿ ಸಾಮರ್ಥ್ಯ, ಅರಿವು, ಅಭಿವ್ಯಕ್ತಿ, ಆರೋಗ್ಯ, ನಿರ್ಣಯ, ಆತ್ಮವಿಶ್ವಾಸ, ಪಾಲ್ಗೊಳ್ಳುವಿಕೆ ಮತ್ತು ಸಾಮಾಜಿಕ ಚಲನೆಗಳಿಂದ ಹಂತ ಹಂತವಾಗಿ ಶಕ್ತವಂತಳಾಗಿ, ಸ್ವಾವಲಂಭಿಯಾಗಿ ವಿಕಾಸವಾಗುವ ಕ್ರಿಯೆಯೇ ಸಬಲತೆ. ಮಹಿಳಾ ಸಬಲತೆಯು ಬಹು ಆಯಾಮಗಳ ಪ್ರಕ್ರಿಯೆಯಾಗಿದ್ದು ವ್ಯಕ್ತಿಗತವಾಗಿ ಹಾಗೂ ಸಾಮಾಜಿಕ ಹಿನ್ನೆಲೆಯಲ್ಲಿ ಮೂಡಿಬರುವಂತದ್ದು. ವ್ಯಕ್ತಿತ್ವದೊಂದಿಗೆ ಮಹಿಳೆಯು ತನ್ನನ್ನು ಗುರುತಿಸಿಕೊಳ್ಳುವುದು, ತನ್ನ ಜೀವನದ ಬಗ್ಗೆ ಪೂರ್ಣ ಅಧಿಕಾರ ಹೊಂದುವ ಸ್ಥಿತಿ. ಪುರುಷರಿಗೆ ಸರಿಸಮಾನವಾದ ಗೌರವ ಮತ್ತು ಘನತೆ ಹೊಂದುವುದು. "ಸಾಮಾಜಿಕ ಚಲನೆ, ಆರ್ಥಿಕ ಸ್ವಾವಲಂಬನೆ, ಹಕ್ಕುಗಳ ಬಗ್ಗೆ ಅರಿವು, ಆರೋಗ್ಯ ಸೇವೆಗಳು ಮತ್ತು ಸಂಪನ್ಮೂಲಗಳ ಮೇಲಿನ ಬಡತನ, ಆರ್ಥಿಕ ಚಟುವಟಿಕೆಗಳು ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಪಾಲ್ಗೊಳ್ಳುವಿಕೆಯಿಂದ ಆತ್ಮ ವಿಶ್ವಾಸದಿಂದ ಸಶಕ್ತಳಾಗಿ ಬಾಳುವ ಸ್ಥಿತಿಯೇ ಸಬಲೀಕರಣ"(Dube M.P,Bora Neeta:೧೯೯೯:೩೪), ಎಂದಾಗಿದೆ.

**೩.೩ ಮಹಿಳೆ ಮತ್ತು ಶಿಕ್ಷಣ**

ಮಹಿಳೆಯರ ಸಬಲೀಕರಣವಾಗಬೇಕಾದರೆ ಅವರು ಪುರುಷರಿಗೆ ಸಮಾನವಾದ ಶಿಕ್ಷಣವನ್ನು ಹೊಂದಬೇಕು. ಶಿಕ್ಷಣ ದೊರೆಯದೆ ಯಾವೊಬ್ಬ ವ್ಯಕ್ತಿಗೂ ಆತ್ಮಸ್ಥೈರ್ಯ ದೊರೆಯಲಾರದು. ಶಿಕ್ಷಣದಿಂದ ಆಲೋಚನಾ ಶಕ್ತಿ ವೃದ್ಧಿಯಾಗುತ್ತದೆ. 'ವಿದ್ಯೆ ಇಲ್ಲದವನ ಬಾಳು ಹದ್ದಿಗಿಂತಲೂ ಕಡೆ' ಎಂದು ಸರ್ವಜ್ಞನು ತನ್ನ ವಚನವೊಂದರಲ್ಲಿ ಹೇಳಿರುವನು. ಶಿಕ್ಷಣ ಪಡೆದ ಹೆಣ್ಣು ಸಾಮಾಜಿಕವಾಗಿ ಗೌರವಕ್ಕೆ ಪಾತ್ರಳಾಗುವಳು. ಆದರೆ ಭಾರತದ ಸ್ಥಿತಿ ತುಂಬಾ ಭಿನ್ನವಾಗಿದೆ. ಪುರುಷನ ಶಿಕ್ಷಣಕ್ಕೆ ನೀಡಿದ ಮಹತ್ವವನ್ನು ಈ ವ್ಯವಸ್ಥೆಯಲ್ಲಿ ಮಹಿಳೆಗೆ ನೀಡುವುದಿಲ್ಲ. ಭಾರತೀಯ ಸಮಾಜದಲ್ಲಿ ಸಮಾನತೆ ಬರಬೇಕಾದರೆ ಮುಖ್ಯವಾಗಿ ಮಹಿಳೆಯರು ಪುರುಷರಿಗೆ ಸಮಾನವಾಗಿ ಶಿಕ್ಷಣವನ್ನು ಪಡೆಯಲೇಬೇಕೆಂದು ಅಂಬೇಡ್ಕರ್‌ರವರು ತಿಳಿಸುತ್ತಾರೆ. ಆ ಕಾರಣಕ್ಕಾಗಿಯೇ ಸಂವಿಧಾನದಲ್ಲಿ ಹಿಂದುಳಿದ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ, ಮಹಿಳೆಯರಿಗೆ ಶಿಕ್ಷಣದಲ್ಲಿ ಹಾಗೂ ಉದ್ಯೋಗದಲ್ಲಿ ಮೀಸಲಾತಿ ನೀಡಬೇಕೆಂದು ತಿಳಿಸಲಾಗಿದೆ. ಶಿಕ್ಷಣ ಮನುಷ್ಯನ ಆತ್ಮ ಗೌರವವನ್ನು ಹೆಚ್ಚಿಸುತ್ತದೆ ಹಾಗೂ ಅವನು/ಳು ಸ್ವಾಭಿಮಾನದ ಬದುಕನ್ನು ಸಾಗಿಸಲು ಅದು ಆತ್ಮ ಸ್ಥೈರ್ಯವನ್ನು ನೀಡುತ್ತದೆ. ಹೀಗಾಗಿ ಪ್ರತಿಯೊಬ್ಬರಿಗೂ ಕಡ್ಡಾಯ ಶಿಕ್ಷಣದ ಅವಶ್ಯಕತೆಯನ್ನು ಮನಗಂಡ ಸರ್ಕಾರ ಭಾರತದ ಪ್ರತಿಯೊಬ್ಬ ಪ್ರಜೆಗೂ ಕಡ್ಡಾಯ ಶಿಕ್ಷಣ ನೀತಿಯನ್ನು ಅನುಸರಿಸುವಂತೆ ತಿಳಿಸುತ್ತದೆ. ಆದರೆ ಯಾವುದೇ ನೀತಿ ಅಥವಾ ನಿಯಮಗಳು, ಒತ್ತಡಗಳು ಮನುಷ್ಯನಿಗೆ ಮುಖ್ಯವಾಗಿ ಮುನ್ನಡೆಸಲು ಸಾಧನವಾಗುವುದಿಲ್ಲ. ಮುಖ್ಯವಾಗಿ ಮಹಿಳೆಯರನ್ನು ಶಾಲೆಗೆ ಸೇರಿಸಲು ಹಿಂಜರಿಯುವುದೇಕೆ, ಶಾಲೆಗೆ ಸೇರಿಸಿದರೂ ಆ ಮಕ್ಕಳು ಶಾಲೆಯನ್ನು ಪೂರೈಸಲು ಏಕೆ ಸಾಧ್ಯವಾಗುತ್ತಿಲ್ಲ ಎಂಬುದರ ಆಳಕ್ಕೆ ಇಳಿದು ನೋಡಿದರೆ ಬೇರೆ ಸತ್ಯಗಳೇ ಹೊರಬೀಳುತ್ತವೆ. ಭಾರತೀಯರ ಮೂಲಭೂತ ಸಮಸ್ಯೆಗಳಲ್ಲಿ ಬಡತನವೂ ಒಂದು,

ಕೇವಲ ಬಡತನವೊಂದೇ ಶಿಕ್ಷಣಕ್ಕೆ ಅಡ್ಡಿ ಎಂದು ನಾವು ತಿಳಿಯಬಾರದು. ಅದರಾಚೆಗೂ ಹಲವಾರು ಸಾಮಾಜಿಕ ಕಾರಣಗಳು ಹೆಣ್ಣುಮಕ್ಕಳು ಶಾಲೆಗೆ ಹೋಗದಂತೆ ತಡೆಯುತ್ತವೆ. ಉದಾಹರಣೆಗೆ ಕರ್ನಾಟಕದಲ್ಲಿ ಅನುಸೂಚಿತ ಪಟ್ಟಿಯಲ್ಲಿರುವ ಪರಿಶಿಷ್ಟ ಪಂಗಡಗಳ ಸಂಖ್ಯೆ ಐವತ್ತಿದೆ ಆದರೆ ಈ ಐವತ್ತು ಸಮುದಾಯಗಳಲ್ಲಿ ನಿಜಕ್ಕೂ ಶಿಕ್ಷಣಕ್ಕೆ ತೆರೆದುಕೊಂಡಿರುವ ಸಮುದಾಯಗಳು ಕೇವಲ ಬೆರಳೆಣಿಕೆಯಷ್ಟಿವೆ. ಈ ಐವತ್ತು ಸಮುದಾಯಗಳಲ್ಲಿ ನಲವತ್ತೆಂಟರಷ್ಟು ಪರಿಶಿಷ್ಟ ಪಂಗಡದ ಸಮುದಾಯಗಳಲ್ಲಿ ಶೇಕಡ ನಾಲ್ಕರಷ್ಟು ಶಿಕ್ಷಣ ಪಡೆಯಲು ಸಾಧ್ಯವಾಗಿಲ್ಲವೆಂದರೆ ಆಶ್ಚರ್ಯವಾಗಬಹುದು.

ಜನಸಮುದಾಯಗಳ ಮಧ್ಯ ಇದ್ದು ನಾಗರೀಕ ಬದುಕನ್ನು ಕಂಡ ಪರಿಶಿಷ್ಟ ಪಂಗಡದಲ್ಲಿರುವ ವಾಲ್ಮೀಕಿಯಂತಹ ಸಮುದಾಯಗಳು ಮಾತ್ರ ಇಂದು ಶಿಕ್ಷಣದಲ್ಲಿ ಅಲ್ಪ ಮಟ್ಟಿಗೆ ಮುಂದಿವೆ. ಇಂದು ಸಾರ್ವತ್ರಿಕವಾಗಿ ಕರ್ನಾಟಕದ ಶೈಕ್ಷಣಿಕ ಸ್ಥಿತಿಗತಿಗಳನ್ನು ನೋಡುವಾಗ ಸಾಮಾನ್ಯವಾಗಿ ಕರ್ನಾಟಕದ ಒಟ್ಟು ಶೈಕ್ಷಣಿಕ ಪ್ರಗತಿ, ಅದರಲ್ಲಿ ಪರಿಶಿಷ್ಟ ಜಾತಿ, ಪಂಗಡಗಳ ಶೈಕ್ಷಣಿಕ ಪ್ರಗತಿ, ಹಾಗೂ ಇತರ ವರ್ಗಗಳ ಶೈಕ್ಷಣಿಕ ಪ್ರಗತಿ, ಅದರಲ್ಲಿಯೂ ಪುರುಷ ಹಾಗೂ ಮಹಿಳೆಯರ ಶೈಕ್ಷಣಿಕ ಅನುಪಾತ, ಅಲ್ಲದೇ ಇಂದು ಉದ್ಯೋಗ, ಶಿಕ್ಷಣ ಹಾಗೂ ಇತರ ಸವಲತ್ತುಗಳನ್ನು ಈ ಸಮುದಾಯಗಳು ಮಾತ್ರ ಅಲ್ಪ ಮಟ್ಟಿಗಾದರೂ ಪಡೆಯಲು ಸಾಧ್ಯವಾಗಿದೆ. ಆದರೆ ಮನುಷ್ಯರಲ್ಲಿಯೇ ಎರಡನೇ ದರ್ಜೆಯ ಪ್ರಜೆಯೆಂದು ಪರಿಗಣಿಸಲ್ಪಟ್ಟ ಮಹಿಳೆಯು ಶಿಕ್ಷಣದಂತಹ ಮೂಲಭೂತ ಸೌಲಭ್ಯವನ್ನು ಪರಿಪೂರ್ಣವಾಗಿ ಪಡೆಯಲು ಸಾಧ್ಯವಾಗಿಲ್ಲವೆಂಬುದನ್ನು ತಿಳಿಸಲೇಬೇಕಾದ ಅನಿವಾರ್ಯತೆ ಇದೆ. ಈ ಮಾತನ್ನು ಹೇಳಲು ಮುಖ್ಯ ಕಾರಣವೇನೆಂದರೆ ಅವಕಾಶ ದೊರೆಯುವ ಪುರುಷರೊಂದಿಗೆ ಅವಕಾಶ ವಂಚಿತ ಮಹಿಳೆಯರು ಮೂಲಭೂತ ಸೌಲಭ್ಯಗಳು ದೊರೆಯಬೇಕೆಂದೇ ಇದರ ಆಶಯವಾಗಿದೆ. ದಲಿತರಲ್ಲಿಯೇ ದಲಿತರೆಂದು ಪರಿಗಣಿತವಾದ ಮಹಿಳೆಯರು ಶೈಕ್ಷಣಿಕ ಪ್ರಗತಿಯಲ್ಲಿ ತುಂಬಾ ಹಿಂದುಳಿದಿದ್ದಾರೆ. ಮುಖ್ಯವಾಗಿ ಮೇಲ್ವರ್ಗಗಳಲ್ಲಿ ಸಾಮಾಜಿಕ ಕಾರಣಗಳಿಗಾಗಿ ಮಹಿಳೆಯರನ್ನು ಮನೆಯಿಂದ ಹೊರಗೆ ವಿದ್ಯಾಭ್ಯಾಸಕ್ಕಾಗಿ ಕಳಿಸುವುದು ತುಂಬಾ ಅಪರೂಪವಾಗಿದೆ. ಹುಡುಗಿಯರು ಹದಿಮೂರು ವರ್ಷದಿಂದ ಹದಿನಾರು ವರ್ಷದೊಳಗೆ ಋತಿಮತಿಯಾಗುವುದು ಪ್ರಕೃತಿ ನಿಯಮ, ಹೀಗೆ ಮೈನೆರೆದ ಮಕ್ಕಳನ್ನು ಶಾಲೆಗೆ, ಅದರಲ್ಲೂ ಊರಿನಾಚೆಗೆ ಇರುವ ಶಾಲೆಗಳಿಗೆ ಕಳಿಸುವುದು (ಸಾಮಾಜಿಕ ಕಾರಣಗಳಿಗಾಗಿ) ಅಪಾಯವೆಂದೇ ಭಾವಿಸುವ ಪಾಲಕರು ಸಾಮಾನ್ಯವಾಗಿ ಉನ್ನತ ಶಿಕ್ಷಣಕ್ಕೆ ಹುಡುಗಿಯರನ್ನು ಕಳಿಸುವುದು ಅಪರೂಪ. ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ, ಅವಳಿಗೆ ಬಂಡವಾಳ ತೊಡಗಿಸಿ ಓದುಸುವುದಕ್ಕಿಂತ ಅದೇ ಹಣವನ್ನು ವರದಕ್ಷಿಣೆಯಾಗಿ ನೀಡಿ ಮದುವೆ ಮಾಡಿಕೊಟ್ಟರೆ ಪಾಲಕರಾದ ತಮ್ಮ ಜವಾಬ್ದಾರಿ ಕಳೆಯುತ್ತದೆ ಎಂದೇ ಭಾವಿಸುವ ಪಾಲಕರ ಪ್ರಮಾಣವೇ ಹೆಚ್ಚು. ಹೀಗಾಗಿ ಮಹಿಳೆಯರಿಗೆ ಉನ್ನತ ಶಿಕ್ಷಣ ಕೊಡಿಸುವುದರಲ್ಲಿ ಪಾಲಕರು ಹಿಂಜರಿಯುತ್ತಾರೆ.

"ಬಹುತೇಕ ಪರಿಶಿಷ್ಟ ಪಂಗಡದ ಗಂಡುಮಕ್ಕಳು ಇಂದು ಶೇಕಡ ೮೦% ರಷ್ಟು ಶಾಲೆಗೆ ಹೋಗುತ್ತಿವೆಯಾದರೂ ಅದು ಉನ್ನತ ಶಿಕ್ಷಣಕ್ಕೆ ಏರಿದಂತೆಲ್ಲಾ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪ್ರಮಾಣ ಗಣನೀಯವಾಗಿ ಇಳಿಮುಖವಾಗುತ್ತಾ ಸಾಗುತ್ತದೆ. ಅದರಲ್ಲೂ ಉನ್ನತ ಶಿಕ್ಷಣಕ್ಕೆ ಹೋಗುವ ಪರಿಶಿಷ್ಟ ಪಂಗಡದ ಹೆಣ್ಣು ಮಕ್ಕಳ ಪ್ರಮಾಣವಂತೂ ಶೇಕಡ ೧% ರಷ್ಟು ಇಲ್ಲವೆಂದರೆ ಆಶ್ಚರ್ಯವಾಗುತ್ತದೆ" (ಕರ್ನಾಟಕ ಮಾನವಾಭಿವೃದ್ಧಿ ವರದಿ:೨೦೦೫:೧೬೪), ಸಮೀಕ್ಷೆ ಪ್ರಕಾರ "ಪ್ರಾಥಮಿಕ ಶಿಕ್ಷಣದ ಮೊದಲ ಮೂರರಿಂದ ನಾಲ್ಕು ವರ್ಷಗಳವರೆಗೆ ಮಕ್ಕಳು ಶಾಲೆಗೆ ದಾಖಲಾಗುವುದಿಲ್ಲ ಇಲ್ಲವೆ ಹಾಜರಾಗುವುದಿಲ್ಲ. ಇದರಿಂದ ಮುಂದೆ ಮಕ್ಕಳು ಅನಕ್ಷರಸ್ಥರಾಗಿ ಉಳಿದುಬಿಡುತ್ತಾರೆ. ಇದಲ್ಲದೆ ವಿವಿಧ ಹಂತಗಳಲ್ಲಿ ಶಾಲೆ ಬಿಡುವವರ ಸಂಖ್ಯೆಯೂ ಹೆಚ್ಚಾಗಿದೆ. ಶಿಕ್ಷಣದ ಮೊದಲ ಊರುಗೋಲೆ ಶಾಲಾ ದಾಖಲಾತಿ. ಇಲ್ಲಿ ಪರಿಶಿಷ್ಟ ಪಂಗಡಗಳನ್ನು ಹೊರತು ಪಡಿಸಿ ಇತರ ಸಾಮಾಜಿಕ ಗುಂಪುಗಳ ಸಾಧನೆಯ ಉತ್ತಮವಾಗಿದೆ"(ಕರ್ನಾಟಕಮಾನವಾಭಿವೃದ್ಧಿ ವರದಿ:೨೦೦೫:೨೫೮), ಅತ್ಯಧಿಕ ಪರಿಶಿಷ್ಟ ಪಂಗಡಗಳನ್ನು ಹೊಂದಿರುವ ಬಳ್ಳಾರಿ, ರಾಯಚೂರು, ಕೊಪ್ಪಳ ಮುಂತಾದ ಜಿಲ್ಲೆಗಳಲ್ಲಿ ಪರಿಶಿಷ್ಟ ಪಂಗಡದ ಶೈಕ್ಷಣಿಕ ಪಂಗಡದ ಸರಾಸರಿ ಮಟ್ಟ ಕೆಳಮಟ್ಟದಲ್ಲಿದೆ ರಾಯಚೂರು ಶೇಕಡ ೫.೨೧% ಬಳ್ಳಾರಿ ಶೇಕಡ ೭೬.೪೭%ರಷ್ಟಿದೆ. ಇದು ಕೇವಲ ದಾಖಲಾತಿ ಪ್ರಮಾಣ ಮಾತ್ರ, ಆದರೆ ಗಮನಿಸಬೇಕಾದ ಅಂಶವೇನೆಂದರೆ ಪರಿಶಿಷ್ಟ ಪಂಗಡದ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳು ಅತ್ಯಂತ ಕಡಿಮೆ ಅವಧಿಯನ್ನು ಶಾಲೆಯಲ್ಲಿ ಕಳೆಯುತ್ತಿದ್ದಾರೆ. ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ರಾಜ್ಯಮಟ್ಟದಲ್ಲಿ ಸರಾಸರಿ ಶೇಕಡ ೧.೫೪%ರಷ್ಟಿದ್ದರೆ, ಇದು ಪರಿಶಿಷ್ಟ ಪಂಗಡದ ಮಕ್ಕಳಲ್ಲಿ ಶೇಕಡ ೨.೪೨%ರಷ್ಟಿದೆ. ಅದರಲ್ಲೂ ಎಲ್ಲಾ ಜಾತಿ ವರ್ಗಗಳಿಗಿಂತಲೂ ಶಾಲೆಯಿಂದ ಹೊರಗುಳಿದ ಬಾಲಕಿಯರಲ್ಲಿ ಪರಿಶಿಷ್ಟ ಪಂಗಡದ ಬಾಲಕಿಯರ ಪ್ರಮಾಣವೇ (ಶೇಕಡ ೨.೬೭) ಅಧಿಕವಾಗಿದೆ. ಮಹಿಳಾ ಶಿಕ್ಷಣದ ಕೊರತೆಯನ್ನರಿತ ಸರ್ಕಾರವು ಇಂದು ಮಹಿಳಾ ಶಿಕ್ಷಣಕ್ಕಾಗಿಯೇ ಹತ್ತುಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಮರಳಿ ಬಾ ಶಾಲೆಗೆ, ಕಸ್ತೂರಿಬಾ ಬಾಲಕಿಯರ ವಸತಿಶಾಲೆ, ಮಹಿಳೆಯರಿಗೆ ಪೂರ್ಣ ಉಚಿತ ಶಿಕ್ಷಣ, ಹೆಣ್ಣುಮಕ್ಕಳಿಗಾಗಿಯೇ ವಸತಿನಿಲಯಗಳು, ಉನ್ನತ ಶಿಕ್ಷಣ ಪಡೆಯುವ ಮಹಿಳೆಯರಿಗೆ ವಿಶೇಷವಾದ ಸೌಲತ್ತುಗಳನ್ನು ಒದಗಿಸಲಾಗುತ್ತಿದೆ. ಹೀಗಿದ್ದೂ ಮಹಿಳಾ ಶಿಕ್ಷಣ ತಲುಪಬೇಕಾದ ಗುರಿಯನ್ನು ತಲುಪಲು ಸಾಧ್ಯವಾಗಿಲ್ಲ.



### ೩.೪ ಮಹಿಳೆ ಮತ್ತು ಉದ್ಯೋಗ

ಜೀವಿಸಿರುವ ಪ್ರತಿಯೊಂದು ವ್ಯಕ್ತಿಯೂ ಒಂದಿಲ್ಲ ಒಂದು ಉದ್ಯೋಗದಲ್ಲಿ ತೊಡಗಿರಲೇಬೇಕು. ಉದ್ಯೋಗವಿಲ್ಲದ ವ್ಯಕ್ತಿಗೆ ಸಮಾಜದಲ್ಲಿ ಗೌರವ ಸಿಗದು. ಸಂಸ್ಕೃತದಲ್ಲಿ ಉದ್ಯೋಗಂ ಪುರುಷ ಲಕ್ಷಣಂ ಎನ್ನುವ ವಾಕ್ಯವನ್ನು ಹೇಳಲಾಗುವುದು. ಪ್ರಾಯಶಃ ಪುರುಷಶಾಹಿ ವ್ಯವಸ್ಥೆಗೆ ಕಾರಣೀಭೂತವಾದ ವೈಧಿಕ ಪರಂಪರೆಯೇ ಈ ಘೋಷವಾಕ್ಯವನ್ನು ಸೃಷ್ಟಿಸಿರಬೇಕು. ಉದ್ಯೋಗ ಪುರುಷನಿಗೆ ಎಷ್ಟು ಮುಖ್ಯವೋ ಮಹಿಳೆಗೂ ಅಷ್ಟೇ ಮುಖ್ಯವಾದದ್ದು ಎಂಬುದು ವೈಧಿಕಶಾಹಿ ವ್ಯವಸ್ಥೆಗೆ

ಕಂಡುಬಂದಿಲ್ಲವೆನಿಸುತ್ತದೆ. ಹೆಣ್ಣು ಕೇವಲ ಪುರುಷನ ಚಾಕರಿ ಮಾಡುತ್ತಾ ಅವನ ಆಗುಹೋಗುಗಳನ್ನು ನೋಡಿಕೊಳ್ಳುವಷ್ಟಕ್ಕೇ ಸೀಮಿತವಾಗಬೇಕೆ. ಅವಳಿಗೂ ಆರ್ಥಿಕ ಸ್ವಾತಂತ್ರ್ಯದ ಅವಶ್ಯಕತೆ ಇಲ್ಲವೆ ಎಂಬುದನ್ನು ನೋಡಬೇಕಾಗುವುದು. ಆಧುನಿಕ ಯುಗದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಆರ್ಥಿಕ ಸಬಲತೆ ಬೇಕೇಬೇಕು. ಆರ್ಥಿಕ ಸಬಲತೆ ಇರದ ವ್ಯಕ್ತಿಯು ಈ ಸಮಾಜದಲ್ಲಿ ದುರ್ಬಲ ವ್ಯಕ್ತಿಯಾಗಿ ಕಾಣುವನು. ಇಂದು ಶ್ರಮಶಕ್ತಿಯ ಕುರಿತು ಹೇಳುವುದಾದರೆ ಪುರುಷನಿಗಿಂತ ಹೆಚ್ಚು ದೈಹಿಕ ಶ್ರಮವಹಿಸುವವಳು ಮಹಿಳೆಯೇ ಆಗಿರುವಳು. ಆದರೂ ಕೂಡ ಅವಳಿಗೆ ಆರ್ಥಿಕ ಸ್ವಾವಲಂಭನೆಯೆಂಬುದು ಕನಸಾಗಿಯೇ ಉಳಿದಿದೆ. ಯಾವುದೇ ಒಂದು ಅರ್ಜಿ ತುಂಬುವಾಗ ಪುರುಷನ ಉದ್ಯೋಗ ಕಾಲಮ್ಮಿನ ಮುಂದೆ ಕೂಲಿಯೆಂದೋ ಅಥವಾ ಅವನು ಮಾಡುವ ಸೇವೆಯ ಹೆಸರನ್ನು ಬರೆಯಲಾಗುವುದು. ಆದರೆ ಮಹಿಳೆಯ ಉದ್ಯೋಗದ ಕಾಲಮ್ಮಿನ ಮುಂದೆ ಬಹುತೇಕ ಶೇಕಡ ೯೮ರಷ್ಟು ಗೃಹಿಣಿಯೆಂದು ಬರೆಯಲಾಗುವುದನ್ನು ಕಾಣುತ್ತೇವೆ. ಗೃಹಿಣಿಯ ಗೃಹಕೃತ್ಯವೂ ಒಂದು ಉದ್ಯೋಗ ಎಂದು ಪರಿಗಣಿಸದಷ್ಟು ಕ್ರೂರತನವನ್ನು ಈ ವ್ಯವಸ್ಥೆಯು ಕಲ್ಪಿಸಿಕೊಂಡುಬಂದಿದೆ.


ಕರ್ನಾಟಕದಲ್ಲಿ ೨೦೧೧ರ ಜನಗಣತಿ ಪ್ರಕಾರ ಒಟ್ಟು ೬.೧೧ ಕೋಟಿ ಜನಸಂಖ್ಯೆ ಇದೆ. ಇಲ್ಲಿ ೧೦೦೦ ಪುರುಷರಿಗೆ ೯೭೩ ಮಹಿಳೆಯರಿರುವರು. ಅಂದರೆ ಪುರುಷರಿಗೆ ಅರ್ಧಕ್ಕಿಂತ ಸ್ವಲ್ಪ ಕಡಿಮೆ ಮಹಿಳೆಯರಿರುವರು. ಒಟ್ಟು "ಮುಖ್ಯ ಕೆಲಸಗಾರರಲ್ಲಿ ಶೇಕಡ ೬೯.೮೭ರಷ್ಟು ಪುರುಷರಿದ್ದರೆ ಶೇಕಡ ೩೦.೧೩ರಷ್ಟು ಮಾತ್ರ ಮಹಿಳೆಯರಿರುವರು. ಒಟ್ಟು ಕೃಷಿಕರಲ್ಲಿ ಶೇಕಡ ೭೫ರಷ್ಟು ಪುರುಷರು ಕೃಷಿಕರಾಗಿದ್ದರೆ ಶೇಕಡ ೨೫ರಷ್ಟು ಮಹಿಳೆಯರು ಕೃಷಿಯಲ್ಲಿ ತೊಡಗಿರುವರು. ಗೃಹೋದ್ಯಮದಲ್ಲಿ ತೊಡಗಿದವರಲ್ಲಿ ಪುರುಷರಿಗೆ ಸ್ವಲ್ಪ ಕಡಿಮೆ ಮಹಿಳೆಯರು ತೊಡಗಿರುವರು. ಇತರೆ ಕೆಲಸಗಳನ್ನು ಮಾಡುವವರಲ್ಲಿ ಪುರುಷರೇ (ಶೇಕಡ ೭೭) ಅಧಿಕವಾಗಿರುವರು. ಮಹಿಳೆಯರು ಅತಿ ಕಡಿಮೆ (ಶೇಕಡ ೨೩)ಇರುವರು"(ಜನಗಣತಿವರದಿ:೨೦೧೧:೦೮), ಕನಿಷ್ಟವೆಂದು ಪರಿಗಣಿಸುವ ಕೆಲಸಗಳಲ್ಲಿ ತೊಡಗಿರುವವರಲ್ಲಿ ಪುರುಷರಿಗಿಂತ ಮಹಿಳೆಯರ ಪ್ರಮಾಣ ಹೆಚ್ಚಿದೆ. ಅದೇ ರೀತಿಯಾಗಿ ನಿರುದ್ಯೋಗಿಗಳಲ್ಲಿ ಮಹಿಳೆಯರೇ ಅಧಿಕ ಪ್ರವಮಾಣದಲ್ಲಿರುವುದನ್ನು ಜನಗಣತಿ ವರದಿ ದಾಖಲಿಸಿರುವುದು.

| ೨೦೧೧ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ಕೆಲಸಗಾರರ ಪ್ರಮಾಣ | | | |
|---|---|---|---|
| ವಿವರ | ಒಟ್ಟು | ಗಂಡು | ಹೆಣ್ಣು |
| ಮುಖ್ಯ ಕೆಲಸಗಾರರು | ೨೩,೩೯೭,೧೮೧ | ೧೬,೩೪೯,೮೩೭ (೬೯.೮೭%) | ೭,೦೪೭,೩೪೪ (೩೦.೧೩%) |
| ಕೃಷಿಕರು | ೬,೦೨೮,೩೦೯ | ೪,೫೬೮,೫೦೫ (೭೫.೬೫%) | ೧,೪೬೯,೮೦೪ (೨೪.೩೫%) |
| ಕೃಷಿ ಕಾರ್ಮಿಕರು | ೫,೧೧೯,೯೨೧ | ೨,೬೦೯,೦೯೮ | ೨,೫೧೦,೮೨೩ |

| | | | |
|---|---|---|---|
| ಗೃಹೋದ್ಯಮ ಮಾಡುವವರು | ೬೯೫,೮೪೧ | ೩೫೩,೫೧೩ | ೩೪೨,೩೨೮ |
| ಇತರೆ ಕೆಲಸಗಳನ್ನು ಮಾಡುವವರು | ೧೧,೫೪೩,೧೧೦ | ೮,೮೧೮,೭೨೧ | ೨,೭೨೪,೩೮೯ |
| ಕನಿಷ್ಠವಾದ ಕೆಲಸ ಮಾಡುವವರು | ೪,೪೭೫,೪೧೬ | ೧,೯೨೦,೨೭೯ | ೨,೫೫೫,೧೩೭ |
| ನಿರುದ್ಯೋಗಿಗಳು | ೩೩,೨೨೨,೭೦೦ | ೧೨,೬೯೬,೫೪೧ | ೨೦,೫೨೬,೧೫೯ |

ಆಧಾರ: ೨೦೧೧ರ ಜನಗಣತಿ ವರದಿ

**ಲಂಬ ಚಿತ್ರ ೩.೧. ೨೦೧೧ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ಕೆಲಸಗಾರರ ಪ್ರಮಾಣ**




ಮೇಲಿನ ಅಂಕಿಸಂಖ್ಯೆಗಳನ್ನು ಒಟ್ಟಾರೆಯಾಗಿ ನೋಡಿದಾಗ ಕೆಲಸದಲ್ಲಿ ತೊಡಗಿದ ಪುರುಷರ ಪ್ರಮಾಣಕ್ಕಿಂತ ಮಹಿಳೆಯರ ಪ್ರಮಾಣವು ಕಡಿಮೆ ಇದೆ. ಆದರೆ ನಿರುದ್ಯೋಗಿಗಳಲ್ಲಿ ಮಹಿಳೆಯರ ಪ್ರಮಾಣ ಅಧಿಕವಾಗಿದೆ. ಆದರೆ ವಾಸ್ತವವಾಗಿ ಮಹಿಳೆಯರ ದುಡಿಮೆಯ ಪ್ರಮಾಣವು ಅಧಿಕವಾಗಿದೆ. ಆದರೆ ದುರ್ದೈವವೆಂದರೆ ಮಹಿಳೆಯರ ಗೃಹಕೃತ್ಯ, ಮಕ್ಕಳ ಪಾಲನೆ ಪೋಷಣೆಯನ್ನು ಈ ವ್ಯವಸ್ಥೆಯು ಉದ್ಯೋಗವೆಂದು ಪರಿಗಣಿಸದೇ ಹೋಗಿರುವುದು. ಕೃಷಿಯಲ್ಲಿಯೂ ಸಹ ಭೂಮಿಯ ಹಕ್ಕು ಸ್ವಾಮ್ಯವು ಪುರುಷರದ್ದಾಗಿದ್ದರೂ ಭೂಮಿಯ ದುಡುಮೆಯಲ್ಲಿ ಮಹಿಳೆಯ ಪಾಲೇ ಹೆಚ್ಚಾಗಿರುವುದು. ಆದರೆ ಅಂಕಿಸಂಖ್ಯೆಗಳು ಅದಾವುದನ್ನೂ ಪರಿಗಣಿಸದೆ ಜನಗಣತಿಯಲ್ಲಿ ದೊರೆತ ಮಾಹಿತಿಯನ್ನು ಮಾತ್ರ ದಾಖಲಿಸಿದೆ. ಇದೆಲ್ಲವನ್ನೂ ನೋಡಿದರೆ ಭಾರತದ ಜನಗಣತಿ ಮಾದರಿಯು ಇನ್ನೂ ಹೆಚ್ಚು ವೈಜ್ಞಾನಿಕವಾದ ರೀತಿಯಲ್ಲಿ ನಡೆಯಬೇಕಾಗಿದೆ. ಆದರೆ ಆಡಳಿತದ ಮುಖ್ಯ ಹುದ್ದೆಗಳನ್ನು ಅಲಂಕರಿಸಿದ ಪುರುಷರಿಗೆ ಇದೆಲ್ಲವೂ ಅರ್ಥವಾಗಲಾರದೇನೊ.

### ೩.೫ ಮಹಿಳೆ ಮತ್ತು ಆರೋಗ್ಯ

ಇಂದು ಆರ್ಥಿಕಾಭಿವೃದ್ಧಿಗಿಂತ ಮಾನವಾಭಿವೃದ್ಧಿಯೇ ಮುಖ್ಯವೆಂದು ಅಮಾರ್ತ್ಯಸೆನ್ ಹಾಗೂ ಜೀನ್ ಡ್ರೀಡ್ ಅವರಂತಹ ಆರ್ಥಿಕ ತಜ್ಞರು ಅಭಿಪ್ರಾಯಪಡುತ್ತಿರುವರು. "ಮಾನವನ ಮೂಲಭೂತ ಸೌಕರ್ಯಗಳಲ್ಲಿ ಶಿಕ್ಷಣಕ್ಕೆ ಎಷ್ಟು ಮಹತ್ವವಿದೆಯೋ ಆರೋಗ್ಯಕ್ಕೂ ಅಷ್ಟೇ ಮಹತ್ವವಿದೆ"(ಚಂದ್ರಶೇಖರ ಟಿ ಆರ್:೨೦೦೪:೯೪), ಹಿಂದಿನ ದಿನಮಾನಗಳಿಗೆ ಹೋಲಿಕೆ ಮಾಡಿದರೆ ಇಂದು ಮಾನವನಿಗೆ ಅಧಿಕ ಪ್ರಮಾಣದಲ್ಲಿ ಆರೋಗ್ಯ ಲಭಿಸುತ್ತಿದೆ ಎಂದೇ ಹೇಳಬಹುದು. ಮನುಷ್ಯನಿಗೆ ಆರೋಗ್ಯ ಸಮಸ್ಯೆಗಳು ಬಂದಾಗ ಚಿಕಿತ್ಸೆ ನೀಡುವುದಕ್ಕಿಂತ ಆರೋಗ್ಯ ಸಮಸ್ಯೆಗಳು ಬಾರದಂತೆ ಮುಂಜಾಗ್ರತೆ ವಹಿಸುವುದೇ ಜಾಣತನ. ಮನುಷ್ಯನು ಆರೋಗ್ಯವಂತನಾಗಿರುವಲ್ಲಿ ಪೌಷ್ಠಿಕ ಆಹಾರದ ಪಾತ್ರ ಅಧಿಕವಾಗಿದೆ. ಅಷ್ಟೇ ಅಲ್ಲ ಮನುಷ್ಯನ ಆರೋಗ್ಯಕ್ಕೆ ನೈರ್ಮಲ್ಯೀಕರಣವೂ ಮುಖ್ಯವೆಂದು ಪರಿಭಾವಿಸಲಾಗಿದೆ.

### ೩.೬ ಮಹಿಳೆ ಮತ್ತು ಪಂಚವಾರ್ಷಿಕ ಯೋಜನೆಗಳು

| ಭಾರತದ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳಾಪರ ಅಭಿವೃದ್ಧಿ ಯೋಜನೆಗಳು | |
|---|---|
| **ಯೋಜನೆಗಳು** | **ಉದ್ದೇಶ ಮತ್ತು ಅನುಷ್ಠಾನ** |
| ಮೊದಲ ಪಂಚವಾರ್ಷಿಕ ಯೋಜನೆ (೧೯೫೧-೫೬) | ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿ ಮುಖ್ಯವಾಹಿನಿಗೆ ತರುವುದು. |
| ಎರಡರಿಂದ ೫ನೇ ಪಂಚವಾರ್ಷಿಕ ಯೋಜನೆಗಳು (೧೯೬೧-೧೯೭೯) | ಮಹಿಳೆಯರ ಶಿಕ್ಷಣ, ಮಹಿಳೆ ಮತ್ತು ಮಕ್ಕಳ ಆರೋಗ್ಯ, ಮಹಿಳೆ ಮತ್ತು ಮಕ್ಕಳ ಪೌಷ್ಠಿಕ ಆಹಾರಕ್ಕೆ ಒತ್ತುಕೊಡುವುದು |
| ಆರನೇ ಪಂಚವಾರ್ಷಿಕ ಯೋಜನೆ (೧೯೮೦-೮೫) | ಮಹಿಳಾ ಆರೋಗ್ಯ, ಶಿಕ್ಷಣ, ಸಬಲೀಕರಣಕ್ಕೆ ಪೂರಕವಾಗುವಂತೆ ಬಹುಶಿಸ್ತೀಯವಾದ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುವುದು. |
| ಏಳನೇ ಪಂಚವಾರ್ಷಿಕ ಯೋಜನೆ (೧೯೮೫-೯೦) | ಮಹಿಳೆಯರ ಉದ್ಯೋಗ ಮತ್ತು ಆರ್ಥಿಕ ಸಾಮಾಜಿಕ ಅಭಿವೃದ್ಧಿಯ ಸ್ಥಿತಿಗತಿಗಳನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಿಸಿ ಮಹಿಳೆಯರನ್ನು ರಾಷ್ಟ್ರೀಯ ಅಭಿವೃದ್ಧಿಯ ಮುಖ್ಯವಾಹಿನಿಗೆ ಕೊಂಡೊಯ್ಯುವುದು |
| ಎಂಟನೇ ಪಂಚವಾರ್ಷಿಕ ಯೋಜನೆ (೧೯೯೨-೯೭) | ಮಹಿಳಾ ಪ್ರಗತಿಗೆ ಒತ್ತು ನೀಡುವುದು. |

| | |
|---|---|
| ಒಂಭತ್ತನೇ ಪಂಚವಾರ್ಷಿಕ ಯೋಜನೆ (೧೯೯೭-೨೦೦೨) | ಮಹಿಳೆ ಮತ್ತು ಮಹಿಳಾ ವಲಯಗಳಿಗೆ ಸಂಬಂಧಿಸಿದ ಸೇವೆಗಳನ್ನು ಮಹಿಳಾ ಸಬಲೀಕರಣಕ್ಕೆ ಪೂರಕವಾಗುವಂತೆ ಒಂದೆಡೆ ತಂದು ಅನುಷ್ಠಾನಗೊಳಿಸುವುದು. |
| ಹತ್ತನೇ ಪಂಚವಾರ್ಷಿಕ ಯೋಜನೆ (೨೦೦೨-೨೦೦೭) | ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕೆ ಕೊಂಡಯ್ಯಲು ಮಧ್ಯವರ್ತಿಯಾಗಿ ತಂತ್ರಗಳನ್ನು ರೂಪಿಸುವ ಮೂಲಕ ಮಹಿಳೆಯರಿಗೆ ನ್ಯಾಯ ಒದಗಿಸುವುದು. |
| ಹನ್ನೊಂದನೇ ಪಂಚವಾರ್ಷಿಕ ಯೋಜನೆ (೨೦೦೭-೨೦೧೨) | ಲಿಂಗತಾರತಮ್ಯ ತೊಲಗಿಸಲು ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಮೂಲಕ ಮಹಿಳಾ ಸಬಲೀಕರಣಗೊಳಿಸುವುದು ಹಾಗೆಯೇ ಮಹಿಳೆಯರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯವಾಗಿ ಸಬಲೀಕರಣಗೊಳಿಸಲು ಒತ್ತುನೀಡುವುದು. |
| ಹನ್ನೆರಡನೇ ಪಂಚವಾರ್ಷಿಕ ಯೋಜನೆ (೨೦೧೨-೨೦೧೭) | ಮಹಿಳೆಯರ ಸಶಕ್ತತೆಗಾಗಿ ಲಿಂಗ ತಾರತಮ್ಯ ಹೋಗಲಾಡಿಸಲು ರಚನಾತ್ಮಕ ಮತ್ತು ಸಾಂಸ್ಥಿಕ ಅಡೆತಡೆಗಳನ್ನು ಪರಿಹರಿಸಿ ಮಹಿಳೆಯರನ್ನು ಮುಖ್ಯವಾಹಿನಿಗೆ ತರುವುದು. |

ಆಧಾರ: (ಇಪಿಡಬ್ಲ್ಯೂ, ೨೦೧೭:೪೮) (ಭಾರತಿ ಬಿ ಎಂ:೨೦೦೮:೧೩೦)

ಭಾರತದ ಅಭಿವೃದ್ಧಿಯಲ್ಲಿ ಪಂಚವಾರ್ಷಿಕ ಯೋಜನೆಗಳಿಗೆ ಮಹತ್ವದ ಸ್ಥಾನವಿದೆ. ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಂಡ ನಿರ್ಣಯಗಳಂತೆಯೇ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. "ಮಹಿಳೆಯ ಅಭಿವೃದ್ಧಿಗಾಗಿ ಮೊದಲ ಪಂಚವಾರ್ಷಿಕ ಯೋಜನೆಗಳಿಂದಲೇ ನಿರಂತರವಾದ ಪ್ರಯತ್ನಗಳು ನಡೆಯುತ್ತಿವೆ. ೧೯೫೦ರ ಸುಮಾರಿಗೆ ಪಂಚವಾರ್ಷಿಕ ಯೋಜನೆ ಅನುಷ್ಠಾನಕ್ಕೆ ಬಂದಿತು. ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ 'ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿ ಮುಖ್ಯವಾಹಿನಿಗೆ ತರುವ ಉದ್ದೇಶವನ್ನಿರಿಸಿಕೊಂಡು ಆ ಉದ್ದೇಶಗಳಿಗನುಗುಣವಾಗಿ ಮಹಿಳಾಪರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಯಿತು" (ಭಾರತಿ ಬಿ ಎಂ:೨೦೦೮:೧೩೦), ಆದರೆ ಈ ಕಾರ್ಯಕ್ರಮಗಳಿಂದ ಮಹಿಳೆಯರು ಪೂರ್ಣವಾಗಿ ಅಭಿವೃದ್ಧಿ ಹೊಂದಿದರು ಎಂದು ಭಾವಿಸಬಾರದು. ಆದರೆ ಮಹಿಳಾ ಅಭಿವೃದ್ಧಿಯ ಕಾರ್ಯಕ್ರಮಗಳ ಮೂಲಕ ಸಾಮಾಜಿಕವಾಗಿ ಮಹಿಳೆಯರ ಕುರಿತಾಗಿದ್ದ ಭಾವನೆಗಳಲ್ಲಿ ಸ್ವಲ್ಪ ಬದಲಾವಣೆ ಕಾಣುವ ಪ್ರಯತ್ನ ಇದಾಗಿತ್ತು.

ಎರಡನೇ ಪಂಚವಾರ್ಷಿಕ ಯೋಜನೆಯಿಂದ ಐದನೇ ಪಂಚವಾರ್ಷಿಕ ಯೋಜನೆಯವರೆಗೆ ಮಹಿಳೆಯರ ಶಿಕ್ಷಣ, ಮಹಿಳೆ ಮತ್ತು ಮಕ್ಕಳ ಆರೋಗ್ಯ ಹಾಗೂ ಪೌಷ್ಠಿಕ ಆಹಾರಕ್ಕೆ ಒತ್ತು ನೀಡಲಾಯಿತು.

ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆಯರ ಆರೋಗ್ಯ, ಶಿಕ್ಷಣ ಹಾಗೂ ಅವರ ಸಬಲೀಕರಣಕ್ಕೆ ಪೂರಕವಾಗುವಂತೆ ಬಹುಶಿಸ್ತೀಯವಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಉದ್ದೇಶವನ್ನಿರಿಸಿಕೊಂಡು ಹಲವು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಯಿತು. ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಿಸಿ ಮಹಿಳೆಯರನ್ನು ರಾಷ್ಟ್ರೀಯ ಅಭಿವೃದ್ಧಿಯ ಮುಖ್ಯವಾಹಿನಿಗೆ ಕೊಂಡೊಯ್ಯುವ ಉದ್ದೇಶವನ್ನು ಇರಿಸಿಕೊಂಡು ಆ ಉದ್ದೇಶಗಳ ಅನುಷ್ಠಾನಕ್ಕಾಗಿ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಯಿತು. ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆಯ ಸರ್ವತೋಮುಖ ಪ್ರಗತಿಯನ್ನು ಮಾಡುವ ಉದ್ದೇಶವನ್ನಿರಿಸಿಕೊಂಡು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಯಿತು. ಒಂಭತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆ ಮತ್ತು ಮಹಿಳಾ ವಲಯಗಳಿಗೆ ಸಂಬಂಧಿಸಿದ ಸೇವೆಗಳನ್ನು ಮಹಿಳಾ ಸಬಲೀಕರಣಕ್ಕೆ ಪೂರಕವಾಗುವಂತೆ ಒಂದೆಡೆ ತಂದು ಅನುಷ್ಠಾನಗೊಳಿಸುವ ಉದ್ದೇಶವನ್ನಿರಿಸಿಕೊಂಡು ಅವುಗಳ ಅನುಷ್ಠಾನಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಹತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆಯರನ್ನು ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕೆ ಕೊಂಡಯ್ಯಲು ಮಧ್ಯವರ್ತಿಯಾಗಿ ತಂತ್ರಗಳನ್ನು ರೂಪಿಸುವ ಮೂಲಕ ಮಹಿಳೆಯರಿಗೆ ನ್ಯಾಯ ಒದಗಿಸುವ ಉದ್ದೇಶವನ್ನಿರಿಸಿಕೊಳ್ಳಲಾಗಿದ್ದು ಅದಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಯಿತು. ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಪುರುಷ ಮತ್ತು ಮಹಿಳೆಯರ ಮಧ್ಯದಲ್ಲಿರುವ ಲಿಂಗತಾರತಮ್ಯ ತೊಲಗಿಸಲು ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಮೂಲಕ ಮಹಿಳೆಯರನ್ನು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯವಾಗಿ ಸಬಲೀಕರಣಗೊಳಿಸಲು ಒತ್ತುನೀಡಿ ಅದಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಹನ್ನೆರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆಯರ ಸಶಕ್ತತೆಗಾಗಿ ಲಿಂಗ ತಾರತಮ್ಯ ಹೋಗಲಾಡಿಸಲು ರಚನಾತ್ಮಕ ಮತ್ತು ಸಾಂಸ್ಥಿಕ ಅಡೆತಡೆಗಳನ್ನು ಪರಿಹರಿಸಿ ಮಹಿಳೆಯರನ್ನು ಮುಖ್ಯವಾಹಿನಿಗೆ ತರುವ ಉದ್ದೇಶವನ್ನಿರಿಸಿಕೊಂಡು ಯೋಜನೆಗಳನ್ನು ರೂಪಿಸಲಾಯಿತು.

### ೩.೭ ಕೇಂದ್ರ ಸರ್ಕಾರದ ಮಹಿಳಾ ಸಬಲೀಕರಣದ ಯೋಜನೆಗಳು

ಮಹಿಳಾ ಸಬಲೀಕರಣದ ಉದ್ದೇಶದ ಹಿನ್ನೆಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹತ್ತು ಹಲವು ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿವೆ. ಅದರಲ್ಲಿ ಮುಖ್ಯವಾಗಿ ಕೇಂದ್ರ ಸರ್ಕಾರದ ಮಹಿಳಾ ಸಬಲೀಕರಣ ಯೋಜನೆಗಳ ಕುರಿತಾಗಿ ಸ್ಥೂಲವಾಗಿ ಈ ಕೆಳಗೆ ನೋಡಲಾಗಿದೆ.

### ೩.೭.೧. ಆದಿವಾಸಿ ಮಹಿಳಾ ಸಶಕ್ತೀಕರಣ ಯೋಜನೆ ಮತ್ತು ಮಹಿಳೆಯರ ವೃತ್ತಿಪರ ತರಬೇತಿ ಕೇಂದ್ರಗಳ ಸ್ಥಾಪನೆ

ಆದಿವಾಸಿ ಮಹಿಳಾ ಸಶಕ್ತೀಕರಣ ಯೋಜನೆಯು ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾಗಿದೆ. ಇದು ಅರ್ಹ ಪರಿಶಿಷ್ಟ ಬುಡಕಟ್ಟುಗಳ ಮಹಿಳೆಯರಿಗೆ ಆರ್ಥಿಕ ಅಭಿವೃದ್ಧಿಗಾಗಿ ಪ್ರತ್ಯೇಕವಾದ ವಾರ್ಷಿಕ ೪% ರ ರಿಯಾಯಿತಿ ನೀಡುವ ಯೋಜನೆ.

**೧. ಘಟಕದ ವೆಚ್ಚ**

• ಎನ್‌ಎಸ್‌ಡಿಎಫ್‌ಡಿ ಸಿ ಯು ತಂದ ಸಾಲವನ್ನು ಯೋಜನೆಗಳಿಗೆ/ಕಾರ್ಯಕ್ರಮಗಳಿಗೆ ಒಂದು ಘಟಕಕ್ಕೆ ರೂ. ೫೦,೦೦೦/-ವರೆಗೆ ಮಾತ್ರ ನೀಡುವುದು

**೨. ಸಹಾಯದ ಪ್ರಮಾಣ**

• ಎನ್‌ಎಸ್‌ಡಿಎಫ್‌ಡಿ ಸಿ ಯು ತಂದ ಸಾಲವನ್ನು ಯೋಜನೆಗಳಿಗೆ/ಕಾರ್ಯಕ್ರಮದ ವೆಚ್ಚದ ೯೦% ರವರೆಗೆ ಎಸ್‌ಸಿಎ ತನ್ನ ಪಾಲನ್ನು ಅರ್ಹತಾ ಸಹಾಯಧನ ನೀಡಬೇಕೆಂಬ ಷರತ್ತಿನ ಮೇರೆಗೆ ಎಸ್‌ಸಿಎಎಸ್ ಯು ಸಾಧ್ಯವಾದರೆ ಇತರೆ ಸಂಪನ್ಮೂಲಗಳಿಂದ ಹಣಕಾಸಿನ ಬೆಂಬಲಕ್ಕಾಗಿ ಸಹಯೋಗಕ್ಕೆ ಪ್ರಯತ್ನಿಸಬಹುದು.

**೩. ಪ್ರಾಯೋಜಕರ ವಂತಿಗೆ**

• ಪ್ರಾಯೋಜಕರ ಕನಿಷ್ಠ ವಂತಿಗೆಯನ್ನು ಕಡ್ಡಾಯ ಮಾಡದೇ ಇರಬಹುದು.

**೪. ಬಡ್ಡಿದರ**

• ಎನ್‌ಎಸ್‌ಡಿಎಫ್‌ಡಿ ಸಿ ಯು ಬಹಳ ರಿಯಾಯಿತಿ ಬಡ್ಡಿದರ ವಾರ್ಷಿಕ @ ೨% ವಿಧಿಸುವುದು. ಎಸ್‌ಸಿಎ ಗೆ ವಿಧಿಸುವುದು. ಎಸ್‌ಸಿಎಗಳು ಗರಿಷ್ಠ ಬಡ್ಡಿದರ ವಾರ್ಷಿಕ @೪% ಅನ್ನು ಮಹಿಳಾ ಫಲಾನುಭವಿಗಳಿಗೆ ವಿಧಿಸುವರು.

**೫. ಮರುಪಾವತಿ ಅವಧಿ**

• ಸಾಲವನ್ನು ತ್ರೈಮಾಸಿಕ/ಅರ್ಧವಾರ್ಷಿಕ ಕಂತಿನಲ್ಲಿ ಸಂಧರ್ಭನುಸಾರ ೧೦ ವರ್ಷದೊಳಗೆ ಪಾವತಿ ಸ್ಥಗಿತ ಅವಧಿಯು ಸೇರಿದಂತೆ ಕಟ್ಟಬಹುದು.

• ಯೋಜನೆಯ ಮರುಪಾವತಿ ಅವಧಿಯನ್ನು ಎನ್‌ಎಸ್‌ಡಿಎಫ್‌ಡಿ ಸಿ ಚಟುವಟಿಕೆಯ ಸ್ವರೂಪ ಮತ್ತು ಘಟಕದ ಅಧ್ಯಾಯ ಉತ್ಪನ್ನದ ಸಾಮಾರ್ಥ್ಯವನ್ನು ಗಮನಿಸಿ ನಿಗಧಿ ಮಾಡುತ್ತದೆ.

• ಎಸ್‌ಸಿಎ ಗಳಿಗೆ ಹೆಚ್ಚುವರಿಯಾಗಿ ನಿಗಧಿ ಪಡಿಸಿದ ಅವಧಿಗಿಂತ ಒಂದು ವರ್ಷವನ್ನು ಫಲಾನುಭವಿಗಳಿಗೆ ನೀಡಲಾಗುವುದು.

**ಬುಡಕಟ್ಟು ಪ್ರದೇಶಗಳಲ್ಲಿ ಮಹಿಳೆಯರ ವೃತ್ತಿಪರ ತರಬೇತಿ ಕೇಂದ್ರ್ರಗಳ ಸ್ಥಾಪನೆ**

ತಮ್ಮ ಶೈಕ್ಷಣಿಕ ಅರ್ಹತೆ, ಪ್ರಸ್ತುತ ಆರ್ಥಿಕ ಪ್ರವೃತ್ತಿಗಳು ಮತ್ತು ಮಾರುಕಟ್ಟೆಯ ಸಂಭಾವ್ಯತೆಯನ್ನು ಅವಲಂಭಿಸಿ ವಿವಿದ ಸಾಂಪ್ರದಾಯಿಕ ಆಧುನಿಕ ವೃತ್ತಿಗಳಲ್ಲಿ ಬುಡಕಟ್ಟು ಯುವಕರ ಕೌಶಲ್ಯಗಳನ್ನು ನವೀಕರಿಸುವುದು ಈ ಯೋಜನೆಯ ಪ್ರಮುಖ ಗುರಿಯಾಗಿದೆ. ಇದು ಸೂಕ್ಷ್ಮವಾದ ಉದ್ಯೋಗವನ್ನು ಪಡೆಯಲು ಅಥವಾ ಅವರನ್ನು ಸ್ವಯಂ-ಉದ್ಯೋಗದಲ್ಲಿರಿಸುವುದು.

**ಪ್ರಮುಖ ಅಂಶಗಳು**

• ರಾಜ್ಯ ಸರಕಾರಗಳು, ಸ್ವಾಯತ್ತ ಸಂಸ್ಥೆಗಳು, ಸರಕಾರ ಮತ್ತು ಸ್ಥಳೀಯ ಸಂಸ್ಥೆಗಳು ಮತ್ತು ಸಹಕಾರ ಸಂಘಗಳು ಮತ್ತು ಸರಕಾರೇತರ ಸಂಘಟನೆಗಳು ಮುಂತಾದ ಸಂಸ್ಥೆಗಳು ಸ್ಥಾಪಿಸಿದ ಸಂಸ್ಥೆಗಳ ಮೂಲಕ ಈ ಯೋಜನೆ ಜಾರಿಗೊಳಿಸಲಾಗುತ್ತಿದೆ.

• ಈ ಯೋಜನೆಯು ಪರಿಶಿಷ್ಟ ಬುಡಕಟ್ಟುಗಳು ಮತ್ತು ಪಿಟಿಜಿಗಳ ಪ್ರಯೋಜನಕ್ಕಾಗಿ ಪ್ರತ್ಯೇಕವಾಗಿ ಮತ್ತು ದೇಶದಲ್ಲಿ ಎಲ್ಲಿಯಾದರೂ ತೆಗೆದುಕೊಳ್ಳಬಹುದು ಆದರೆ ವಿಶೇಷವಾಗಿ ದುರ್ಬಲ ಬುಡಕಟ್ಟು ಜನಾಂಗದವರು ಮತ್ತು ಉಗ್ರಗಾಮಿ ಚಟುವಟಿಕೆಗಳಿಂದ ಪ್ರಭಾವಿತವಾಗಿರುವ ಪ್ರದೇಶಗಳಲ್ಲಿ ದೂರದ ಬುಡಕಟ್ಟು ಪ್ರದೇಶಗಳಿಗೆ ಆಧ್ಯತೆ ನೀಡಲಾಗುವುದು.

• ಪ್ರತಿ ವೃತ್ತಿ ತರಬೇತಿ ಕೇಂದ್ರದ ಸಾಮರ್ಥ್ಯವು ೧೦೦ ಅದಕ್ಕಿಂತ ಹೆಚ್ಚಿನ ತರಬೇತುದಾರರನ್ನು ಹೊಂದಿರುತ್ತದೆ. ಅಂದರೆ ಒಂದು ವ್ಯಾಪಾರಕ್ಕಾಗಿ ಕನಿಷ್ಟ ೨೦ ಅಭ್ಯರ್ಥಿಗಳು ಇರಬೇಕು. ಸಾಧ್ಯವಾದಷ್ಟು ಕನಿಷ್ಟ ೩೩% ಸೀಟುಗಳು ಬುಡಕಟ್ಟು ಹುಡುಗಿಯರಿಗೆ ಮೀಸಲಿಟ್ಟಿರುತ್ತದೆ.

• ಪ್ರತಿಯೊಂದು ಕೇಂದ್ರವು ಪ್ರದೇಶದ ಉದ್ಯೋಗದ ಸಾಮರ್ಥ್ಯವನ್ನು ಅವಲಂಭಿಸಿ ಸಾಂಪ್ರದಾಯಿಕ ಅಥವಾ ಇತರ ಕೌಶಲ್ಯಗಳಲ್ಲಿ ಇದು ವೃತ್ತಿಪರ ಶಿಕ್ಷಣವನ್ನು ಪೂರೈಸುತ್ತದೆ.

• ಪ್ರತಿ ಬುಡಕಟ್ಟು ಹುಡುಗ/ಹುಡುಗಿಯನ್ನು ಅವನ/ಅವಳ ಆಯ್ಕೆಯ ಒಂದು ವ್ಯಾಪಾರದಲ್ಲಿ ತರಬೇತಿ ನೀಡಲಾಗುತ್ತದೆ. ತರಬೇತಿಯ ಅವಧಿ ಗರಿಷ್ಟ ೬ ತಿಂಗಳ ಅವಧಿಯಾಗಿರುತ್ತದೆ.

• ಪ್ರತಿ ತರಬೇತಿ ಆರು ತಿಂಗಳಿನ ಅವಧಿಯಲ್ಲಿ ಪ್ರಾಯೋಗಿಕ ಅನುಭವದಿಂದ ತನ್ನ ಕೌಶಲ್ಯವನ್ನು ಕಲಿಯಲು ಅನುವು ಮಾಡಿಕೊಡುತ್ತದೆ.

ಹೀಗೆ ಈ ಯೋಜನೆಯು ಬುಡಕಟ್ಟು ಹುಡುಗಿಯರಿಗೆ ವೃತ್ತಿ ತರಬೇತಿಯ ಕೌಶಲ್ಯವನ್ನು ನೀಡುವ ಮೂಲಕ ಅವರಲ್ಲಿ ವೃತ್ತಿ ಕೌಶಲ್ಯದ ಮನೋಭಾವವನ್ನು ಉತ್ತೇಜಿಸುವುದರ ಜೊತೆಗೆ ಅವರನ್ನು ಆರ್ಥಿಕವಾಗಿ ಸಾಮಾಜಿಕವಾಗಿ ಸ್ವಾವಲಂಭಿಯಾಗಿಸುವಲ್ಲಿ ಈ ಯೋಜನೆಯು ಸಹಕಾರಿಯಾಗಿದೆ.

**೩.೭.೨. ಬುಡಕಟ್ಟು ಅರಣ್ಯ ನಿವಾಸಿಗಳ ಸಬಲೀಕರಣ ಯೋಜನೆ**

ಈ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ಅರಣ್ಯವಾಸಿ ಬುಡಕಟ್ಟುಗಳ ಸಬಲೀಕರಣಕ್ಕಾಗಿ ರೂಪಿಸಿದ ಯೋಜನೆಯಾಗಿದೆ. ಈ ಯೋಜನೆಯು ೨೦೦೬ರ ಅರಣ್ಯ ಹಕ್ಕು ಕಾಯ್ದೆಯಡಿ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಡಿ ಅರಣ್ಯವಾಸಿ ಬುಡಕಟ್ಟುಗಳು ಕೃಷಿ ಚಟುವಟಿಕೆಗಳಿಗಾಗಿ ಹಾಗೂ ಪಾರಂಪರಿಕವಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸ್ವಂತಕ್ಕೆ ಭೂಮಿಯನ್ನು ಹೊಂದುವ ಹಕ್ಕನ್ನು ಹೊಂದಿರುವರು.

೩.೭.೩. ಸ್ವ-ಸಹಾಯ ಗುಂಪುಗಳಿಗೆ ಸೂಕ್ಷ್ಮಸಾಲ ಯೋಜನೆ (ಮೈಕ್ರೋ ಕ್ರೆಡಿಟ್ ಸ್ಕೀಂ ಫಾರ್ ಸೆಲ್ಫ್ ಹೆಲ್ಪ್ ಗ್ರೂಪ್ಸ್ ಯೋಜನೆ)

ಸ್ವಸಹಾಯ(ಎಸ್‌ಜಿಎಚ್) ಗುಂಪುಗಳಿಗೆ ಕಿರು ಸಾಲ ಯೋಜನೆಯು ಅರ್ಹ ಪರಿಶಿಷ್ಟ ಬುಡಕಟ್ಟುಗಳಿಗೆ ಸಣ್ಣ ಸಾಲಗಳನ್ನು ಸ್ವ ಉದ್ಯೋಗ ಘಟಕ/ಅಥವಾ ಹೀಗಿರುವ ಸ್ವ ಸಹಾಯ ಗುಂಪುಗಳ ಮೂಲಕ ಮಾಡುವ ಕೆಲಸಕ್ಕಾಗಿ ಕೊಡುವ ಯೋಜನೆಯಾಗಿದೆ.

೧. ಸಹಾಯ ಪ್ರಮಾಣ

• ಎನ್‌ಎಸ್‌ಡಿಎಫ್‌ಡಿಸಿ ಯು ಒಬ್ಬ ವ್ಯಕ್ತಿಗೆ ರೂ. ೩೫೦೦೦ ರವರೆಗೆ ಮತ್ತು ಗರಿಷ್ಟ ರೂ. ೫ಲಕ್ಷ ಎಸ್ ಎಚ್ ಜಿಗೆ ಒದಗಿಸುವುದು. ಎಸ್‌ಸಿಎ ಗಳು ಅರ್ಹತೆ ಇರುವಷ್ಟು

ಸ್ವಸಹಾಯ ಗುಂಪುಗಳು

೧. **ಘಟಕ ವೆಚ್ಚ:** ಎನ್‌ಎಸ್‌ಟಿಎಫ್‌ಡಿಸಿ ಯು ಘಟಕ ವೆಚ್ಚವು ರೂ.೨೫ ಲಕ್ಷ ಯೋಜನೆ/ ಕಾರ್ಯಕ್ರಮಗಳಿಗೆ ಪ್ರತಿ ಸ್ವಸಹಾಯ ಗುಂಪಿಗೆ ಸಹಾಯ ಒದಗಿಸುವುದು.

೨. ಸಹಾಯ ಪ್ರಮಾಣ ಯೋಜನೆ/ ಕಾರ್ಯಕ್ರಮದ ವೆಚ್ಚದ ೯೦% ಹಣವನ್ನು ಒಬ್ಬ ಸದಸ್ಯಳಿಗೆ ಒಂದು ಘಟಕಕ್ಕೆ ರೂ. ೫೦,೦೦೦ ರವರೆಗೆ ನೀಡಲಾಗುವುದು

೩. ಇದು ಮತ್ತೆ ಕೆಲವು ಶರತ್ತುಗಳಿಗೆ ಒಳಪಟ್ಟಿರುವುದು ಮಾರ್ಗದರ್ಶಿ ಏಜೆನ್ಸಿಗಳು ಎಸ್‌ಸಿಎ ಯು ತನ್ನ ನಿಯಮಾವಳಿ ಪ್ರಕಾರ ತನ್ನ ಪಾಲನ್ನು ಮತ್ತು ಅರ್ಹತಾ ಸಹಾಯ ಧನದ ವ್ಯವಸ್ಥೆ ಮಾಡಬೇಕು. ಎಸ್‌ಸಿಎ ಯು ಇತರೆ ಮೂಲಗಳಿಂದಲೂ ಸಾಧ್ಯವಿದ್ದರೆ ಸಹಯೋಗ ಮಾಡಿಸಿ ಹಣಕಾಸಿನ ನೆರವು ಪಡೆಯಬಹುದು.

೪. **ಕಾರ್ಯನಿರತ ಬಂಡವಾಳ:** ಯೋಜನಾ/ ಕಾರ್ಯಕ್ರಮದ ವೆಚ್ಚದ ೩೦%ನ್ನು ಯೋಜನಾ ವೆಚ್ಚದ ಭಾಗವೆಂದೆ ಪರಿಗಣಿಸಬೇಕು.

೫. **ಸ್ವಸಹಾಯ ಗುಂಪುಗಳಿಂದ ಕನಿಷ್ಟ ವಂತಿಕೆ:** ಯೋಜನೆ/ಕಾರ್ಯಕ್ರಮದ ವೆಚ್ಚದ ೧೦% ದರದಲ್ಲಿರಬೇಕು.

೬. **ಬಡ್ಡಿದರ:** ಎನ್‌ಎಸ್‌ಡಿಎಫ್‌ಡಿಸಿಯು ಬಡ್ಡಿದರ ವಾರ್ಷಿಕ@ ೫% ಅನ್ನು (ಎನ್‌ಎಸ್‌ಟಿಎಫ್‌ಡಿಸಿ ಯ ಪಾಲಿನ ಮೇಲೆ) ಎಸ್‌ಸಿಎಗಳಿಂದ ಪಡೆಯುವುದು ಮತ್ತು ಎಸ್‌ಸಿಎಗಳು ವಾರ್ಷಿಕ ೮% ಬಡ್ಡಿಯನ್ನು ಎಸ್‌ಜಿಎಚ್‌ಗಳಿಂದ ಪಡೆಯಬಹುದು.

೭. ಹೊಸ ಎಸ್‌ಜಿಎಸ್/ ಈಗಿರುವ ಲಾಭದಾಯಕ ಎಸ್‌ಜಿಎಚ್‌ಗಳು ಕಾರ್ಯಸಾದುವಾದುಗಳಿಗೆ ಎನ್‌ಎಸ್‌ಡಿಎಫ್‌ಡಿಸಿ ಹಣಕಾಸಿನ ಬೆಂಬಲವನ್ನು ಎಸ್‌ಸಿಎಗಳ ಮೂಲಕ ಬುಡಕಟ್ಟುಗಳ ಸದಸ್ಯರ ಆದಾಯ ಮಿತಿಗೆ ಒಳಪಟ್ಟ ಷರತ್ತಿನ ಮೇರೆಗೆ ಪಡೆಯುವವು.

### ೩.೭.೪ ಬುಡಕಟ್ಟು ಮಹಿಳೆಯರಿಗಾಗಿ ಕೇಂದ್ರ ಪ್ರಾಯೋಜಿತ ಯೋಜನೆಗಳು

ಬುಡಕಟ್ಟು ಹುಡುಗಿಯರಿಗಾಗಿ ಕೇದ್ರ ಸರಕಾರವು ಅನೇಕ ಶೈಕ್ಷಣಿಕ ಯೋಜನೆಗಳನ್ನು ಹಮ್ಮಿಕೊಳ್ಳುವ ಮೂಲಕ ಅವರ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಬುಡಕಟ್ಟು ಹುಡುಗಿಯರಿಗೆ ಶಿಕ್ಷಣವು ಅವರ ಸಾಮಾಜಿಕ ಸ್ಥಾನಮಾನವನ್ನು ಹೆಚ್ಚಿಸುತ್ತದೆ ಮತ್ತು ಉದ್ಯೋಗ ಮತ್ತು ಇತರ ಆರ್ಥಿಕ ಚಟುವಟಿಕೆಗಳಲ್ಲಿ ಉದಯೋನ್ಮುಖ ಅವಕಾಶಗಳ ಪ್ರಯೋಜನವನ್ನು ಪಡೆಯಲು ಕುಶಾಗ್ರಮತಿಗಳೊಂದಿಗೆ ಸಜ್ಜುಗೊಳಿಸುತ್ತದೆ.

**ಬುಡಕಟ್ಟು ಬಾಲಕೀಯರ ವಸತಿ ಯೋಜನೆ**

ಬುಡಕಟ್ಟು ಬಾಲಕೀಯರು (ಪ್ರಿಮಿಟಿವ್ ಬುಡಕಟ್ಟು ಗುಂಪುಗಳು ಸೇರಿದಂತೆ) ಶಿಕ್ಷಣದಿಂದ ವಂಚಿತವಾಗಬಾರದು ಹಾಗೂ ಡ್ರಾಪ್‌ಔಟ್ ದರವನ್ನು ನಿಯಂತ್ರಿಸುವ ಕಡಿಮೆಗೊಳಿಸುವ ಉದ್ದೇಶದಿಂದ ಈ ಯೋಜನೆಯನ್ನು ೩ನೇ ಪಂಚವಾರ್ಷಿಕ ಯೋಜನೆಯ ಮೂಲಕ ಕಾರ್ಯಗತಗೊಳಿಸಲಾಯಿತು. ಮಧ್ಯಮ ಶಾಲೆಗಳು, ಹೈಯರ್ ಸೆಕೆಂಡರಿ ಶಾಲೆಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡುತ್ತಿರುವ ಬಾಲಕೀಯರಿಗಾಗಿ ನಿರ್ದಿಷ್ಟ ಪ್ರದೇಶ ಅಥವಾ ಬುಡಕಟ್ಟು ಜನಸಂಖ್ಯೆಯ ಸಾಂದ್ರತೆಯನ್ನು ಗಮನದಲ್ಲಿಟ್ಟುಕೊಂಡು, ಶೈಕ್ಷಣಿಕ ಸಂಸ್ಥೆಗಳಿಗೆ ಸಂಬಂಧಿಸಿದ ಸ್ಥಳದಲ್ಲಿ ಈ ಯೋಜನೆಯಡಿ ಬುಡಕಟ್ಟು ಬಾಲಕೀಯರ ವಸತಿ ಯೋಜನೆಯನ್ನು ನಿರ್ಮಿಸಲಾಗುತ್ತದೆ. ಬಾಲಕೀಯರ ವಸತಿ ಯೋಜನೆಯ ಮೂಲಕ ಹಾಸ್ಟೆಲ್‌ಗಳನ್ನು ನಿರ್ಮಾಣ ಮಾಡಲು ೧೦೦% ಕೇಂದ್ರದ ನೆರವು ಪಡೆಯುವ ರಾಜ್ಯ ಸರಕಾರಗಳ ಮೂಲಕ ಕಾರ್ಯಗತಗೊಳಿಸಲಾಗುತ್ತದೆ.

**ಪ್ರಿ–ಮೆಟ್ರಿಕ್ ಸ್ಕಾಲರ್‌ಶಿಪ್**

ಸಂವಿಧಾನದ ಭಾಗ ೪ರ ಅಧಿನಿಯಮ ೪೬ (ರಾಜ್ಯದ ನೀತಿಯ ನಿರ್ದೇಶನ ತತ್ವಗಳು) ನಿರ್ದಿಷ್ಟವಾಗಿ, ಜನರ ದುರ್ಬಲ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ವಿಶೇಷ ಆರೈಕೆಯೊಂದಿಗೆ ಉತ್ತೇಜಿಸಲು ರಾಜ್ಯದ ಮೇಲೆ ನಿಲ್ಲುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿನ ಅಸಮಾನತೆಯನ್ನು ತೊಡೆದುಹಾಕಲು, ಕಡಿಮೆಮಾಡಲು ಪ್ರಯತ್ನಿಸಲಾಗುತ್ತದೆ.

ಈ ಯೋಜನೆಯ ಪ್ರಮುಖ ಉದ್ದೇಶ ೯ ಮತ್ತು ೧೦ ನೇ ತರಗತಿಯಲ್ಲಿ ಅಧ್ಯಯನ ಮಾಡುವ ಮಕ್ಕಳು ಮತ್ತು ಪೋಷಕರನ್ನು ಪ್ರೋತ್ಸಾಹಿಸುವುದು. ವಿದ್ಯಾರ್ಥಿ ಪರಿಶಿಷ್ಟ ಪಂಗಡಕ್ಕೆ ಸೇರಿರಬೇಕು, ಸರಕಾರಿಶಾಲೆಯಲ್ಲಿ ಹಾಗೂ ಮಾನ್ಯತೆ ಪಡೆದ ಶಾಲೆಗಳಲ್ಲಿ ಓದುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಅನ್ವಯವಾಗುತ್ತದೆ. ಸ್ಕಾಲರ್ ಶಿಪ್ ನೀಡುವಿಕೆಯು ಕೇವಲ ಒಂದು ವರ್ಷದವರೆಗೆ ಮಾತ್ರ ಲಭ್ಯವಿರುತ್ತದೆ. ಅಧ್ಯಯನ ಮಾಡುವ ಕೋರ್ಸ್‌ಗಳ ಸ್ವರೂಪದ ಆಧಾರದ ಮೇಲೆ ಅವಲಂಭಿತವಾಗಿರುತ್ತದೆ.

**ಬುಡಕಟ್ಟು ಉಪ ಯೋಜನೆ ಪ್ರದೇಶಗಳಲ್ಲಿ ಆಶ್ರಮಶಾಲೆಗಳನ್ನು ಸ್ಥಾಪಿಸುವುದು**

ಬುಡಕಟ್ಟು ವಿದ್ಯಾರ್ಥಿಗಳಲ್ಲಿ ಸಾಕ್ಷರತೆಯನ್ನು ಹೆಚ್ಚಿಸಲು ಮತ್ತು ದೇಶದ ಇತರ ಜನರೊಂದಿಗೆ ಸಮಾನವಾಗಿ ತರಲು ಕಲಿಯಲು ಅನುಕೂಲವಾಗುವ ಪರಿಸರದಲ್ಲಿ ಪಿಟಿಜಿಗಳು ಸೇರಿದಂತೆ ಪರಿಶಿಷ್ಟ

ಪಂಗಡಗಳಿಗೆ ವಸತಿಶಾಲೆಗಳನ್ನು ಒದಗಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಈ ಯೋಜನೆಯು ೧೯೯೦/೯೧ರಿಂದ ಕಾರ್ಯಾಚರಣೆಯಲ್ಲಿದೆ. ಮತ್ತು ೨೦೦೮-೦೯ರ ಆರ್ಥಿಕ ವರ್ಷದಲ್ಲಿ ಅದನ್ನು ಪರಿಷ್ಕರಿಸಲಾಗಿದೆ. ಇದು ಕೇಂದ್ರ ಪ್ರಾಯೋಜಿತ ಯೋಜನೆಯಾಗಿದೆ. ಈ ಯೋಜನೆಯು ಪ್ರಾಥಮಿಕ, ಮಾಧ್ಯಮಿಕ, ದ್ವಿತಿಯ ಮತ್ತು ಹಿರಿಯ ಮಾಧ್ಯಮಿಕ ಶಿಕ್ಷಣದ ಶಿಕ್ಷಣವನ್ನು ಒಳಗೊಂಡಿದೆ. ಇದರಲ್ಲಿ ರಾಜ್ಯ ಸರಕಾರದ ಅನುದಾನವು ಒಳಗೊಂಡಿರುತ್ತದೆ. ಭಾರತ ಸಂವಿಧಾನದ ಪರಿಚ್ಛೇದ ೨೭೫ (೧) ರ ಅಡಿಯಲ್ಲಿ ಬುಡಕಟ್ಟು ಉಪಯೋಜನೆಗೆ ವಿಶೇಷ ಕೇದ್ರೀಯ ಸಹಾಯದ ಅನುದಾನವನ್ನು ಕೊಡುವುದರ ಮೂಲಕ ಮೂಲಸೌಕರ್ಯವನ್ನು ಒದಗಿಸಿ, ಉನ್ನತ ಮಟ್ಟದ ಶಿಕ್ಷಣವನ್ನು ಪ್ರೋತ್ಸಾಹಿಸುವ ಪ್ರಯತ್ನವನ್ನು ಈ ಯೋಜನೆಯ ಮೂಲಕ ಮಾಡಲಾಗುತ್ತದೆ.

**ಏಕಲವ್ಯ ಮಾದರಿ ವಸತಿಶಾಲೆ**

ದೇಶದಲ್ಲಿನ ಎಲ್ಲಾ ಪ್ರದೇಶಗಳು ಮತ್ತು ವಾಸಸ್ಥಾನಗಳಲ್ಲಿ ಶಿಕ್ಷಣದ ಉತ್ತೇಜನಕ್ಕಾಗಿ ಗುಣಮಟ್ಟದ ವಸತಿಶಾಲೆಗಳನ್ನು ಸ್ಥಾಪಿಸುವ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಏಕಲವ್ಯ ಮಾದರಿ ವಸತಿಶಾಲೆ, ಜವಾಹರ್ ನವೋದಯ ವಿದ್ಯಾಲಯಗಳು, ಕಸ್ತೂರ್ಬಾಗಾಂಧಿ ಬಾಲಿಕಾ ವಿದ್ಯಾಲಯಗಳು ಮತ್ತು ಕೇಂದ್ರೀಯ ವಿದ್ಯಾಲಯಗಳನ್ನು ಸ್ಥಾಪಿಸಲಾಯಿತು. ಇವುಗಳನ್ನು ಸಂವಿಧಾನದ ಪರಿಚ್ಛೇದ ೨೭೫(೧) ಅ ಅಡಿಯಲ್ಲಿ ಸ್ಥಾಪಿಸಲಾಗಿದೆ.

**೩.೭.೫ ಮಹಿಳಾ ತರಬೇತಿ ಮತ್ತು ಉದ್ಯೋಗ ಕಾರ್ಯಕ್ರಮಕ್ಕೆ ಬೆಂಬಲ**

ಈ ಯೋಜನೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ನಡೆಸುತ್ತಿದೆ. ಈ ಯೋಜನೆಯು ೧೯೮೬-೮೭ ರಿಂದ ಜಾರಿಯಲ್ಲಿದ್ದು ಈ ಯೋಜನೆಯನ್ನು ಸೆಂಟ್ರಲ್ ಸೆಕ್ಟರ್ ಯೋಜನೆ ಎಂದು ಸಹ ಕರೆಯಲಾಗುತ್ತದೆ. ಈ ಯೋಜನೆಯು ೧೦೦% ಕೇಂದ್ರ ವಲಯ ಯೋಜನೆಯಾಗಿದೆ. ಬಡ ಮತ್ತು ಅಂಚಿನಲ್ಲಿರುವ ಮಹಿಳೆಯರಿಗೆ ಸಾಂಪ್ರದಾಯಿಕ ವಹಿವಾಟುಗಳಲ್ಲಿ ಹೆಚ್ಚಾಗಿ ಅನೌಪಚಾರಿಕ ವಲಯದಲ್ಲಿ ತರಬೇತಿ ನೀಡಲಾಗುತ್ತದೆ. ಔಪಚಾರಿಕ ಕೌಶಲ್ಯ ತರಬೇತಿಯ ಅವಕಾಶವಿಲ್ಲದ ಬಡ ಮಹಿಳೆಯರ ಔದ್ಯೋಗಿಕ ಆಕಾಂಕ್ಷೆಗಳನ್ನು ಪರಿಹರಿಸಲು ಸ್ಟೆಪ್ ಕಾರ್ಯಕ್ರಮವನ್ನು ಪರಿಚಯಿಸಲಾಗಿದೆ. ಈ ಯೋಜನೆಯು ದೇಶದಾದ್ಯಂತ ೧೬ ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಮಹಿಳೆಯರಿಗೆ ಪ್ರಯೋಜನೆಯನ್ನು ಒದಗಿಸುತ್ತದೆ. ಉತ್ಪಾದಕತೆ ಹೆಚ್ಚಿಸುವ ಮತ್ತು ಆದಾಯದ ಚಟುವಟಿಕೆಗಳನ್ನು ತೆಗೆದುಕೊಳ್ಳಲು ಅನುವು ಮಾಡಿಕೊಡುವ ಮೂಲಕ ಮಹಿಳೆಯರ ಸ್ವಾವಲಂಬನೆ ಮತ್ತು ಸಬಲೀಕರಣದ ಗುರಿಯನ್ನು ಪ್ರತಿಪಾದಿಸುತ್ತದೆ. ಕೃಷಿ, ತೋಟಗಾರಿಕೆ, ಆಹಾರ ಸಂಸ್ಕರಣೆ, ಕಸೂತಿ, ಟೈಲರಿಂಗ್, ಹೊಲಿಗೆ, ಕರಕುಶಲ ವಸ್ತುಗಳು ಹೀಗೆ ಇತ್ಯಾದಿಗಳಲ್ಲಿ ವೃತ್ತಿ ತರಬೇತಿಯನ್ನು ನೀಡಲಾಗುತ್ತದೆ.

**ಉದ್ದೇಶ**

- ಮಹಿಳೆಯರಿಗೆ ಉದ್ಯೋಗ ನೀಡುವ ಕೌಶಲ್ಯಗಳನ್ನು ಒದಗಿಸುವುದು.
- ಮಹಿಳೆಯರಿಗೆ ಸ್ವಯಂ ಉದ್ಯೋಗಿ/ ಉದ್ಯಮಿಗಳು ಆಗಲು ಅನುಕೂಲವಾಗುವ ಸಾಮರ್ಥ್ಯ ಮತ್ತು ಕೌಶಲ್ಯಗಳನ್ನು ಒದಗಿಸಲು.

• ಬಡ ಮತ್ತು ಅಂಚಿನಲ್ಲಿರುವ ಮಹಿಳೆಯರ ಕೌಶಲ್ಯಗಳನ್ನು ನವೀಕರಿಸಲು.

• ಸಮರ್ಥನೀಯ ಆಧಾರದ ಮೇಲೆ ಅವರಿಗೆ ಉದ್ಯೋಗ ಒದಗಿಸುವುದು.

**ಅರ್ಹತೆ**

• **೧೬ ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ ಎಲ್ಲಾ ಮಹಿಳೆಯರು ಫಲಾನುಭವಿಗಳು**

ಹೀಗೆ ಈ ಯೋಜನೆಯು ಮಹಿಳಾ ಮತ್ತು ಮಕ್ಕಳಾ ಅಭಿವೃದ್ಧಿ ಇಲಾಖೆ ಭಾರತ ಸರಕಾರ ಅಡಿಯಲ್ಲಿ ನಡೆಯುತ್ತಿದ್ದು ಪರಿಣಾಮಕಾರಿಯಾಗಿ ಮಹಿಳೆಯರನ್ನು ಸ್ವಾವಲಂಭಿಗಳನ್ನಾಗಿಸುವತ್ತಾ ಒಂದು ದೊಡ್ಡ ಮಹತ್ವದ ಹೆಜ್ಜೆಯಾಗಿ ಗುರುತಿಸಿಕೊಂಡಿದೆ.

**೩.೭.೬. ಇಂದಿರಾಗಾಂಧಿ ಮಾತೃತ್ವ ಸಹಯೋಗ ಯೋಜನೆ**

ಈ ಯೋಜನೆಯ ಪ್ರಕಾರ ಗರ್ಬಿಣಿ, ಬಾಣಂತಿ ಮತ್ತು ಹಾಲುಣಿಸುವ ತಾಯಂದಿರ ಮತ್ತು ಶಿಶುಗಳ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕತೆ ಬಗ್ಗೆ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗುತ್ತಿದೆ. ಇದಕ್ಕೆ ಪೂರಕವಾದ ಹೆಜ್ಜೆಗಳು, ಪದ್ದತಿಗಳು, ಆರೈಕೆ ಕ್ರಮಗಳು, ಸುರಕ್ಷಾ ಹೆರಿಗೆ ಮತ್ತು ಹಾಲುಣಿಸುವ ತಾಯಂದಿರಿಗೆ ನೀಡಬೇಕಾದ ಆಹಾರ ಪದ್ದತಿ ಹೀಗೆ ಈ ವಿಚಾರಗಳ ಬಗ್ಗೆ ಕಾಳಜಿಯನ್ನು ವಹಿಸಲಾಗುತ್ತದೆ. ವಯೋಮಿತಿ ೧೯ ಮತ್ತು ಹೆಚ್ಚಿನ ಪ್ರಾಯದ ಗರ್ಬಿಣಿ ಮಹಿಳೆಯರ ಎರಡು ಮಕ್ಕಳಿಗೆ ಈ ಯೋಜನೆ ಅನ್ವಯಿಸುತ್ತದೆ. ಗರ್ಭವತಿಯಾದ ಸಂದರ್ಭ ಮತ್ತು ಹೆರಿಗೆ ಸಂದರ್ಭ ಉದ್ಯೋಗ/ಕೂಲಿ ಕೆಲಸಕ್ಕೆ ಹೋಗಲು ಅಸಾಧ್ಯವಾಗುವುದರಿಂದ ಅದಕ್ಕೆ ಪೂರಕವಾಗಿ ರೂ.೪,೦೦೦/–ಸಹಾಯ ಧನವನ್ನು ಮೂರು ಕಂತಿನಲ್ಲಿ ಮಹಿಳೆಯರಿಗೆ, ಗರ್ಬಿಣಿಯಾಗಿ ಆರು ತಿಂಗಳು ಪೂರ್ತಿಯಾಗಿ ಮತ್ತು ಹೆರಿಗೆಯಾಗಿ ಆರು ತಿಂಗಳು ಆಗುವ ಅವಧಿಯಲ್ಲಿ ನೀಡಲಾಗುತ್ತದೆ. ಈ ಯೋಜನೆಯು ಸಮಗ್ರ ಮಕ್ಕಳ ಕಲ್ಯಾಣ ಯೋಜನೆ ಉಸ್ತುವಾರಿಯಲ್ಲಿ ಅಂಗನವಾಡಿ ಕೇಂದ್ರಗಳ ಮೂಲಕ ಅನುಷ್ಠಾನವಾಗುತ್ತದೆ. ಮಹಿಳೆ ಗರ್ಬಿಣಿ ಆಗಿರುವಾಗ ಉತ್ತಮ ಆಹಾರ ಸೇವನೆ ಬಗ್ಗೆ ಜಾಗೃತಿ ವಹಿಸಿ ತನ್ನನ್ನು ಆರೈಕೆ ಮಾಡಿಕೊಂಡು ಆರೋಗ್ಯವಂತ ಶಿಶುಗಳ ಸುರಕ್ಷಿತ ಜನನ ಮತ್ತು ಶಿಶುಗಳ ಜನನವಾದ ತಕ್ಷಣದಲ್ಲಿ ಕಡ್ಡಾಯವಾಗಿ ಎದೆಹಾಲನ್ನು ಉಣಿಸುವ ಬಗ್ಗೆ ಜಾಗೃತಿ ಮತ್ತು ಬಾಣಂತಿ ಆರೈಕೆ ಸಮಗ್ರವಾಗಿ ತಾಯಿ ಮತ್ತು ಮಗು ಆರೋಗ್ಯವಂತರಾಗಿ ಇರುವಂತೆ ನೋಡಿಕೊಳ್ಳುವ ಯೋಜನೆ.

**ಫಲಾನುಭವಿಗಳು ಮಾಡಬೇಕಾದ ಕಾರ್ಯ**

೧. ಗರ್ಭವತಿ ಆದ ೪ ತಿಂಗಳೊಳಗಾಗಿ ಸ್ಥಳೀಯ ಅಂಗನವಾಡಿಯಲ್ಲಿ ನೊಂದಾವಣೆ ಮಾಡಿಸಿಕೊಳ್ಳಬೇಕು.

೨. ಪ್ರಸವ ಪೂರ್ವ ಆರೈಕೆ ಸ್ಥಳೀಯ ಅಂಗನವಾಡಿಯ ಮೂಲಕ ಪಡೆದುಕೊಳ್ಳಬೇಕು ಪ್ರತಿ ತಿಂಗಳಲ್ಲಿ ಒಂದು ದಿನ ಗ್ರಾಮ ಆರೋಗ್ಯ ಮತ್ತು ಪೌಷ್ಟಿಕ ದಿನವನ್ನು ಆಚರಿಸುವ ಸಂಧರ್ಭ ಹಾಜರಿರಬೇಕು.

೩. ಹೆರಿಗೆಯನ್ನು ಕಡ್ಡಾಯವಾಗಿ ನರ್ಸಿಂಗ್ ಹೋಮ್, ಆಸ್ಪತ್ರೆಗಳಲ್ಲಿ ನುರಿತ ಡಾಕ್ಟರ್/ನರ್ಸ್‌ಗಳಿಂದ ಮಾಡಿಸಬೇಕು ಮನೆಯಲ್ಲಿ ಹೆರಿಗೆ ಮಾಡಿಸಬಾರದು.

**೩.೭.೭. ಭೇಟಿ ಬಚಾವೋ ಭೇಟಿ ಪಢಾವೊ ಮತ್ತು ಮಹಿಳಾ ಸಹಾವಾಣಿ ಯೋಜನೆ**

**ಹಿನ್ನೆಲೆ:** ಅನುಪಾತ (ಸಿಎಸ್ ಆರ್) ಇಳಿಕೆ ಪ್ರವೃತ್ತಿ, ೧೯೬೧ ರಲ್ಲಿ ೧೦೦೦ ಹುಡುಗಿಯರಿಗೆ ೦೬- ವರ್ಷಗಳ ವಯಸ್ಸಿನ ಹುಡುಗರ ಸಂಖ್ಯೆ ನಡುವೆ ವ್ಯಾಖ್ಯಾನಿಸಲಾಗಿದೆ. ಮಕ್ಕಳ ಲಿಂಗ ಎಣಿಕೆಯು ೧೯೯೧ ರಲ್ಲಿ ೯೪೫, ೨೦೦೧ ರಲ್ಲಿ ೯೨೭, ಮತ್ತು ಅವ್ಯಾಹತವಾಗಿದೆ. ೨೦೧೧ ರಲ್ಲಿ ೯೧೮ ಗೆ ಅವನತಿಯಿಂದ ಮತ್ತೊಪ್ಪು ಎಚ್ಚರಿಕೆಯ ಗಂಟೆಯಾಗಿದೆ. ಸಿಎಸ್ ಆರ್ ಇದು ಮಹಿಳೆಯರ ಸಬಲೀಕರಣದ ಇಳಿಕೆಯ ಪ್ರಮುಖ ಸೂಚಕವಾಗಿದೆ. ಸಿಎಸ್ ಆರ್ ಪಕ್ಷಪಾತ ಲಿಂಗ ಆಯ್ಕೆ ಮೂಲಕ ಸ್ಪಷ್ಟವಾಗಿ ಜನನದ ಮುಂಚೆಯ ಭ್ರೂಣ ಪತ್ತೆಯ ತಾರತಮ್ಯ ಮತ್ತು ಹುಡುಗಿಯರ ವಿರುದ್ಧ ಜನ್ಮದ ತಾರತಮ್ಯವನ್ನು ಎರಡನ್ನೂ ಪ್ರತಿಬಿಂಬಿಸುತ್ತದೆ. ಪ್ರಾಯೋಗಿಕ ಉಪಕರಣಗಳ ದುರುಪಯೋಗ ಹೆಣ್ಣು ಮಕ್ಕಳ ಲಿಂಗ ಲಿಂಗಾನುಪಾತಕ್ಕೆ ಕಾರಣವಾಗುತ್ತದೆ. ಹೆಣ್ಣು ಮಕ್ಕಳ ಉಳಿವು ರಕ್ಷಣೆ ಮತ್ತು ಸಬಲೀಕರಣ ಖಚಿತಪಡಿಸಿಕೊಳ್ಳಲು ಸಂಘಟಿತ ಮತ್ತು ಒಮ್ಮುಖವಾಗಿರುವ ಪ್ರಯತ್ನಗಳು ಅಗತ್ಯವಿದೆ. ಅದಕ್ಕಾಗಿ ಸರಕಾರ ಬೇಟಿ ಬಚಾವೋ ಬೇಟಿ ಪಢಾವೋ ಉಪಕ್ರಮವನ್ನು ಘೋಷಿಸಿದೆ. ಭೇಟಿ ಬಚಾವೋ ಭೇಟಿ ಪಢಾವೋ ಯೋಜನೆಯನ್ನು ಅಕ್ಟೋಬರ್ ೨೦೧೪ ರಲ್ಲಿ ಕುಸಿಯುತ್ತಿರುವ ಮಕ್ಕಳ ಲಿಂಗಾನುಪಾತ (ಸಿಎಸ್ ಆರ್) ಸಮಸ್ಯೆಯನ್ನು ಬಗೆಹರಿಸಲು ಪರಿಚಯಿಸಲಾಯಿತು. ಈ ರಾಷ್ಟ್ರೀಯ ಅಭಿಯಾನದ ಮೂಲಕ ಕಡಿಮೆ ಸಿಎಸ್ ಆರ್ ಒಳಗೊಂಡ ಬಹು ಕ್ಷೇತ್ರಿಯ ೧೦೦ ಆಯ್ದ ಜಿಲ್ಲೆಗಳನ್ನು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿಯೂ ಜಾರಿಗೆ ತರಲಾಗಿದೆ. ಮತ್ತು ಕ್ರಮ ಕೈಗೊಳ್ಳುವಂತೆ ಮಾಡಲಾಗುತ್ತಿದೆ. ಇದು ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಜಂಟಿ ಉಪಕ್ರಮವಾಗಿದೆ.

**ಪ್ರಮುಖ ಉದ್ದೇಶ**

- **ಹೆಣ್ಣು ಮಗು ಹುಟ್ಟಿಗಾಗಿ ಸಂಭ್ರಮಿಸಿ ಮತ್ತು ಅವಳ ಶಿಕ್ಷಣ ಸಕ್ರೀಯಗೊಳಿಸಿ**

**ಗುರುತಿಸುವ ಜಿಲ್ಲೆಗಳು:** ಪ್ರತಿ ರಾಜ್ಯದಲ್ಲಿ ಕನಿಷ್ಟ ಒಂದು ಜಿಲ್ಲೆಯಂತೆ ಎಲ್ಲಾ ರಾಜ್ಯ/ಕೇಂದ್ರ ಆಡಳಿತ ಪ್ರದೇಶಗಳನ್ನು ಗಮನದಲ್ಲಿಟ್ಟುಕೊಂಡು ಜನಗಣತಿ ೨೦೧೧ ರ ಪ್ರಕಾರ ಕಡಿಮೆ ಲಿಂಗಾನುಪಾತ ಆಧಾರದ ಮೇಲೆ ೧೦೦ ಜಿಲ್ಲೆಗಳನ್ನು ಗುರುತಿಸಲಾಗಿದೆ, ಜಿಲ್ಲೆಗಳ ಆಯ್ಕೆಗೆ ಇರುವ ಮೂರು ಮಾನದಂಡಗಳು

೧. ರಾಷ್ಟ್ರೀಯ ಸರಾಸರಿಗಿಂತಲೂ ಕಡಿಮೆ ಜಿಲ್ಲೆಗಳು (೮೭ ಜಿಲ್ಲೆಗಳಲ್ಲಿ/೨೩ ರಾಜ್ಯಗಳಲ್ಲಿ) ರಾಷ್ಟ್ರೀಯ ಸರಾಸರಿಗಿಂತಲೂ ಅಧಿಕ ಆದರೆ ಕಡಿಮೆಯಾಗಲು ಆರಂಭಿಸಿದ್ಧ ಜಿಲ್ಲೆಗಳು (೮ ಜಿಲ್ಲೆಗಳಲ್ಲಿ/ ೮ ರಾಜ್ಯಗಳಲ್ಲಿ)

೨. ರಾಷ್ಟ್ರೀಯ ಸರಾಸರಿಗಿಂತಲೂ ಅಧಿಕ ಮತ್ತು ಜಾಸ್ತಿಯಾಗಲಾರಂಭಿಸಿದ್ದ ಜಿಲ್ಲೆಗಳು (೫ ಜಿಲ್ಲೆ/ ೫ ರಾಜ್ಯಗಳಲ್ಲಿ ಈ ಸಿಎಸ್‌ಆರ್ ಮಟ್ಟದ ನಿರ್ವಾಹಣೆ ಮಾಡಬಹುದು.

೩. ಇತರ ಜಿಲ್ಲೆಗಳು ಅನುಸರಿಸಲು ಮತ್ತು ಇತರ ಜಿಲ್ಲೆಗಳು ಮತ್ತು ತಮ್ಮ ಅನುಭವಗಳನ್ನು ಕಲಿಯಬಹುದು. ಆದ್ದರಿಂದ ಈ ಆಯ್ಕೆ.

**ಉದ್ದೇಶಗಳು**

- ಲಿಂಗಪಕ್ಷಪಾತ ಮತ್ತು ಅದರ ಆಯ್ಕೆ ತಡೆಗಟ್ಟುವುದು
- ಹೆಣ್ಣು ಮಕ್ಕಳ ಉಳಿವು ಮತ್ತು ರಕ್ಷಣೆ ಖಚಿತ ಪಡಿಸಿಕೊಳ್ಳುವುದು
- ಹೆಣ್ಣು ಮಗುವಿನ ಶಿಕ್ಷಣ ಖಚಿತ ಪಡಿಸಿಕೊಳ್ಳವುದು

**ಯೋಜನೆಯನ್ನು ಸಾಧಿಸಲು ಅನುಸರಿಸುವ ನೀತಿ**

ಹೆಣ್ಣು ಮಕ್ಕಳ ಸಮಾನ ಮೌಲ್ಯ ರಚಿಸಲು ಮತ್ತು ತನ್ನ ಶಿಕ್ಷಣವನ್ನು ಉತ್ತೇಜಿಸುವ ಒಂದು ನಿರಂತರ ಸಾಮಾಜಿಕ ಸಜ್ಜುಗೊಳಿಸುವಿಕೆ ಮತ್ತು ಸಂಪರ್ಕ ಕಾರ್ಯಾಚರಣೆಯ ಅಳವಡಿಕೆ. ಸಾರ್ವಜನಿಕ ಪ್ರವಚನದಲ್ಲಿ ಸಿಎಸ್‌ಆರ್ /ಎಸ್‌ಆರ್ ಬಿ ಇಳಿಕೆ ಸಮಸ್ಯೆಯ ಬಗ್ಗೆ ಚರ್ಚೆಯನ್ನು ಪ್ರೋತ್ಸಾಹಿಸುವುದು. ಅದರ ಸೂಧಾರಣೆ ಉತ್ತಮ ಆಡಳಿತದ ಒಂದು ಸೂಚಕ. ಸ್ಥಳೀಯ ಸಮುದಾಯ/ ಮಹಿಳಾ/ ಯುವ ಗುಂಪುಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳು/ನಗರ ಸ್ಥಳಿಯ ಸಂಸ್ಥೆಗಳ ಸಹಭಾಗಿತ್ವದಲ್ಲಿ ಸಾಮಾಜಿಕ ಬದಲಾವಣೆ ವೇಗ ವರ್ಧಕರನ್ನಾಗಿ ಸಜ್ಜುಗೊಳಿಸಲು ತರಬೇತಿ ನೀಡುವುದು.

**ಅನುಷ್ಠಾನ**

ಈ ಯೋಜನೆಯ ಆಯಾವ್ಯಯ ನಿಯಂತ್ರಣಕ್ಕೆ ಕೇಂದ್ರ ನಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಮತ್ತು ಆಡಳಿತ ಜವಾಬ್ದಾರಿ ಹೊಂದಿದೆ. ರಾಜ್ಯ ಮಟ್ಟದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯಾದರ್ಶಿ ಈ ಯೋಜನೆಯ ಅನುಷ್ಠಾನಕ್ಕೆ ಜವಾಬ್ದಾರರಾಗಿರುತ್ತಾರೆ. ಈ ಯೋಜನೆಯ ಪ್ರಾಸ್ತವಿಕ ರಚನೆ ಈ ಕೆಳಕಂಡಂತಿದೆ.

**ರಾಷ್ಟ್ರೀಯ ಮಟ್ಟದಲ್ಲಿ**

ಭೇಟಿ ಬಚಾವೋ ಭೇಟಿ ಪಥಾವೋ ರಾಷ್ಟ್ರೀಯ ಕಾರ್ಯಪಡೆಯ ಪ್ರಾತಿನಿಧ್ಯವನ್ನು ಡಬ್ಲ್ಯುಸಿಡಿ ಕಾರ್ಯದರ್ಶಿ ನೇತೃತ್ವದಲ್ಲಿ ಸರಕಾರವು ಆರೋಗ್ಯ ಮತ್ತು ಕುಟುಂಬ ಕಲ್ಯಾಣವನ್ನು ಅನುಷ್ಠಾನಕ್ಕೆ ತರುವುದು ಇದರ ಉದ್ದೇಶ

**ರಾಜ್ಯಮಟ್ಟದಲ್ಲಿ**

ರಾಜ್ಯವು ಒಂದು ಕಾರ್ಯಪಡೆ (ಎಸ್‌ಟಿಎಫ್) ಸಂಬಂಧಪಟ್ಟ ಇಲಾಖೆಗಳ ಜೊತೆಗೆ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. ಪಂಚಾಯತ್ ರಾಜ್ / ಗ್ರಾಮೀಣ ಅಭಿವೃದ್ಧಿಯನ್ನು)

ರೂಪಿಸುತ್ತದೆ. ಇದನ್ನು ಸಂಘಟಿಸಲು ಭೇಟಿ ಬಚಾವೋ ಭೇಟಿ ಪಢಾವೋ ಈ ಇಲಾಖೆ ಅನುಷ್ಠಾನಗೊಳಿಸುತ್ತದೆ.

**ಜಿಲ್ಲಾ ಮಟ್ಟದಲ್ಲಿ**

ಭೇಟಿ ಬಚಾವೋ ಭೇಟಿ ಪಢಾವೋ ಯೋಜನೆಯ ಅನುಷ್ಠಾನದ ಪ್ರಾತಿನಿಧ್ಯವನ್ನು ಜಿಲ್ಲಾಧಿಕಾರಿಯು ನೇತೃತ್ವವನ್ನು ವಹಿಸಿಕೊಂಡಿರುತ್ತಾರೆ. ಇದರ ಸಂಬಂಧ ಪಟ್ಟ ಇಲಾಖೆ ಸೂಕ್ತ ಪ್ರಾಧಿಕಾರದಿಂದ (ಪಿಸಿ ಮತ್ತು ಪಿಎನ್ ಡಿಟಿ) ಶಿಕ್ಷಣ ಆರೋಗ್ಯ ಕುಟುಂಬ ಕಲ್ಯಾಣ ಪಂಚಾಯತ್‌ರಾಜ್ /ಜಿಲ್ಲಾಸೇವಾ ಕಾನೂನು ಪ್ರಾಧಿಕಾರ ಸೇರಿದಂತೆ ಜಲ್ಲಾಕ್ರಿಯಾ ಯೋಜನೆಯ ಪರಿಣಾಮಕಾರಿಯಾಗಿ ಯೋಜನೆಗೊಳಿಸಲಾಗುತ್ತದೆ.

**ಬಜೆಟ್**

ಭೇಟಿ ಬಚಾವೋ ಭೇಟಿ ಪಢಾವೋ ಪ್ರಚಾರ ಮತ್ತು ಘೋಷಣೆ ಅಡಿಯಲ್ಲಿ ನೂರು ಕೋಟಿ ಬಜೆಟ್ ಹಂಚಿಕೆ ಮಾಡಲಾಗಿದೆ, ಹನ್ನೆರಡನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಬಹುವಲಯ ಕ್ರಿಯಾ ಯೋಜನೆಯಾದ ಕಾಳಜಿ ಮತ್ತು ಹೆಣ್ಣು ಮಕ್ಕಳ ರಕ್ಷಣೆ ಅಡಿಯಲ್ಲಿ ೧೦೦ ಕೋಟಿ ಒಟ್ಟುಗೂಡಿಸಲಾಗುತ್ತದೆ.

ಒಟ್ಟಾರೆಯಾಗಿ ಈ ಯೋಜನೆಯು ದೇಶದಲ್ಲಿ ಲಿಂಗಾನುಪಾತ ಕುಸಿದಿರುವ ಕಾರಣದಿಂದಾಗಿ ಹೆಣ್ಣು ಮಕ್ಕಳ/ಮಹಿಳೆಯರ/ವೃದ್ದೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಅತ್ಯಾಚಾರಗಳಿಂದಾಗಿ ಭವಿಷ್ಯದಲ್ಲಿ ಹೆಣ್ಣು ಮಕ್ಕಳ ಸಂಖ್ಯೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹೆಣ್ಣು ಭ್ರೂಣ ಹತ್ಯೆ ವಿರುದ್ದ ಜಾಗೃತಿ ಮೂಡಿಸಲು ಮತ್ತು ಹೆಣ್ಣು ಮಕ್ಕಳಿಗೆ ಶಿಕ್ಷಣದ ಆದ್ಯತೆ ನೀಡಲು ಈ ಕಾರ್ಯಕ್ರಮ ಅತ್ಯಂತ ಪ್ರಮುಖವಾದ ಯೋಜನೆಯಾಗಿದೆ.

**ಮಹಿಳಾ ಸಹಾಯವಾಣಿ ಯೋಜನೆ (ವುಮೆನ್ ಹೆಲ್ಪ್‌ಲೈನ್ ಯೋಜನೆ)**

ಈ ಯೋಜನೆಯು ಮಹಿಳಾ ಸಾರ್ವಭೌಮತ್ವದ ಯೋಜನೆಯಾಗಿದೆ. ಇದು ದಿನದ ೨೪ ಗಂಟೆಗಳ ಹಿಂಸೆಗೆ ಒಳಗಾದ ಮಹಿಳೆಯರಿಗೆ ತಕ್ಷಣದ ಮತ್ತು ತುರ್ತು ಪ್ರತಿಕ್ರಿಯೆ ನೀಡುವ ಉದ್ದೇಶವನ್ನು ಹೊಂದಿದೆ. ಈ ಯೋಜನೆಯು ೦೧-೦೪-೨೦೧೫ ರಿಂದ ಕೇಂದ್ರ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಈ ಯೋಜನೆ ಜಾರಿಗೊಳಿಸಲಾಗುತ್ತಿದೆ. ಹಿಂಸೆಗೆ ಒಳಗಾದ ಮಹಿಳೆಯರಿಗೆ ಸಮಗ್ರ ಬೆಂಬಲ ಮತ್ತು ನೆರವು ಒದಗಿಸಲು, ಖಾಸಗಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಒಂದೇ ಛಾವಣಿಯಡಿಯಲ್ಲಿ ಹಿಂಸಾಚಾರದಿಂದ ಮತ್ತು ಮಹಿಳೆಯರ ಸಮಸ್ಯೆಗಳಿಗೆ ಅಗತ್ಯವಿರುವ ಸೌಲಭ್ಯಗಳನ್ನು ನೈತಿಕ ಸ್ಥೈರ್ಯವನ್ನು ತುಂಬುವ ಕೆಲಸವನ್ನು ಈ ಯೋಜನೆ ಕಾರ್ಯನಿರ್ವಹಿಸುತ್ತದೆ. ಈ ಯೋಜನೆಯಡಿಯಲ್ಲಿ 'ರಾಜ್ಯಗಳು/ಕೇಂದ್ರ ಸರ್ಕಾರಗಳು ತಮ್ಮ ಅಸ್ತಿತ್ವದಲ್ಲಿರುವ ಮಹಿಳಾ ಸಹಾಯವಾಣಿಗಳನ್ನು ಸಮರ್ಪಕ ಏಕೈಕ ರಾಷ್ಟ್ರೀಯ ಸಂಖ್ಯೆಯ ಮೂಲಕ ಬಳಸಿಕೊಳ್ಳುತ್ತವೆ.

**ಉದ್ದೇಶ**

ಬೆಂಬಲ ಮತ್ತು ಮಾಹಿತಿಗಾಗಿ ಹಿಂಸೆಗೆ ಒಳಗಾದ ಮಹಿಳೆಯರಿಗೆ ಟೋಲ್ ಫ್ರೀ ೨೪ ಗಂಟೆಗಳ ಕಾಲ ಟೆಲಿಕಾಮ್ ಸೇವೆಗಳನ್ನು ಒದಗಿಸುವುದು.

**ಅರ್ಹತೆ**

ಸಾರ್ವಜನಿಕ ಅಥವಾ ಖಾಸಗಿ ಕ್ಷೇತ್ರದ ವ್ಯಾಪ್ತಿಯಲ್ಲಿ ಹಿಂಸಾಚಾರ ಎದುರಿಸುತ್ತಿರುವ ಮಹಿಳೆಯರು

**ಪ್ರಯೋಜನಗಳು**

ಮಹಿಳೆಯರಿಗೆ ವಿರುದ್ಧವಾದ ಹಿಂಸಾಚಾರ ತಡೆಗಟ್ಟುವಿಕೆ : ಅನ್ಯಾಯಕ್ಕಿಡಾದ ಮಹಿಳೆಯ ಪರವಾಗಿ ಯಾರೊಬ್ಬರು ವುಮೆನ್ ಹೆಲ್ಪ್ ಲೈನ್‌ನ್ನು ಸಂಪರ್ಕಿಸುತ್ತಾರೆಯೋ ಅಲ್ಲಿಗೆ ನೇಮಕವಾದ ಕರೆ ಪ್ರತಿಕ್ರಿಯೆಯಿಂದ ಅವಳು ಕೂಡಲೇ ನೆರವಾಗುತ್ತಾರೆ.

ಹೀಗೆ ಮಹಿಳಾ ಸಬಲೀಕರಣ ಯೋಜನೆಗಳು ಮತ್ತು ಕಾರ್ಯಕ್ರಮಗಳ ಮಾಹಿತಿ: ಮಹಿಳಾ ಸಬಲೀಕರಣ ಮತ್ತು ರಕ್ಷಣೆಗೆ ಸಂಬಂಧಿಸಿದ ಕಾನೂನುಗಳು ಅಸ್ತಿತ್ವದಲ್ಲಿರುವ ಯೋಜನೆಗಳು ಮತ್ತು ಸರ್ಕಾರಿ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲಾಗಿದೆ. ಈ ಯೋಜನೆಗಳು ಮತ್ತು ಕಾರ್ಯಕ್ರಮಗಳ ಪ್ರಯೋಜನೆಗಳನ್ನು ಪಡೆದುಕೊಳ್ಳುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ಮಹಿಳೆಯರಿಗೆ ಇದು ಸಹಾಯ ಮಾಡುತ್ತದೆ. ಹೀಗೆ ಈ ಯೋಜನೆಯ ಮೂಲಕ ಹಿಂಸೆಗೆ ಒಳಗಾದ ಮಹಿಳೆಯರಿಗೆ ನೈತಿಕ ಶಕ್ತಿಯನ್ನು ತುಂಬುವ ಕೆಲಸವನ್ನು ಈ ಯೋಜನೆ ಸಹಾಯಕವಾಗಿದೆ.

**೩.೭.೮. ಸುಕನ್ಯಾ ಸಮೃದ್ಧಿ ಯೋಜನೆ ಮತ್ತು ಉಜ್ವಲ್ ಯೋಜನೆ**

ಸುಕನ್ಯಾ ಸಮೃದ್ಧಿ ಯೋಜನೆಯು ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದ ಪ್ರಮುಖ ಯೋಜನೆಯಾಗಿದೆ. ಈ ಯೋಜನೆ ಚಿಕ್ಕ ವಯಸ್ಸಿನ ಹೆಣ್ಣುಮಕ್ಕಳಿಗಾಗಿ ಸುಕನ್ಯಾ ಸಮೃದ್ಧಿ ಖಾತೆ ಸೌಲಭ್ಯ ನೀಡುತ್ತಿದೆ. ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಮದುವೆಯ ಸಂದರ್ಭದಲ್ಲಿ ನೆರವಾಗುವುದು. ಈ ಖಾತೆಯ ಪ್ರಮುಖ ಉದ್ದೇಶ. ಸುಕನ್ಯಾ ಸಮೃದ್ಧಿ ಖಾತೆಯನ್ನು ಯಾವುದೇ ಬ್ಯಾಂಕ್ ಅಥವಾ ಅಂಚೆ ಕಛೇರಿಯಲ್ಲಿ ತೆರೆಯಬಹುದಾಗಿದೆ. ಅದರಂತೆ ಸುಕನ್ಯಾ ಸಮೃದ್ಧಿ ಖಾತೆ ಸಂದರ್ಭದಲ್ಲಿ ಪಾಲಿಸಬೇಕಾದ ಹೊಸ ನಿಯಮಗಳ ವಿವರ ಈ ಕೆಳಗಿನಂತಿದೆ.

**೧. ಗರಿಷ್ಠ ಮೊತ್ತ:** ಒಂದು ಹಣಕಾಸು ವರ್ಷದ ಅವಧಿಯಲ್ಲಿ ಖಾತೆಯ ಒಟ್ಟು ಠೇವಣಿ ಮೊತ್ತ ೧.೫ ಲಕ್ಷ ದಾಟಬಾರದು. ಇದಕ್ಕಿಂತಲೂ ಹೆಚ್ಚಿನ ಮೊತ್ತಕ್ಕೆ ಯಾವುದೇ ಬಡ್ಡಿ ಇರುವುದಿಲ್ಲ. ೧.೫ ಲಕ್ಷಕಿಂತ ಹೆಚ್ಚು ಇಟ್ಟಿರುವ ಮೊತ್ತವನ್ನು ಖಾತೆದಾರರು ಯಾವಾಗ ಬೇಕಾದರೂ ಹಿಂಪಡೆಯಬಹುದು.

**೨. ಬಡ್ಡಿದರ:** ಸರಕಾರ ಈ ಖಾತೆಯ ಬಡ್ಡಿದರವನ್ನು ಕಾಲಕಾಲಕ್ಕೆ ನಿರ್ದರಿಸಲಿದೆ. ಹಾಗೂ ವಾರ್ಷಿಕವಾಗಿ ಇದನ್ನು ಪರಿಷ್ಕರಿಸಲಿದೆ. ಸರಕಾರ ಪ್ರತಿ ತ್ರೈಮಾಸಿಕಕ್ಕೆ ಅನುಗುಣವಾಗಿ ಬಡ್ಡಿಯನ್ನು ಘೋಷಿಸಲಿದೆ. ಪ್ರಸ್ತುತ ತ್ರೈಮಾಸಿಕದ ಬಡ್ಡಿದರ ಶೇಕಡಾ ೮.೩ ರಷ್ಟು ಇದೆ.

೩. **ಖಾತೆ ವರ್ಗಾವಣೆ:** ಮೂಲ ವಾಸ್ತವ್ಯ ವಿಳಾಸದೊಂದಿಗೆ ಖಾತೆಯನ್ನು ಅಂಚೆ ಕಚೇರಿಯಿಂದ ಬ್ಯಾಂಕ್‌ಗೆ ಅಥವಾ ಬ್ಯಾಂಕ್ ನಿಂದ ಅಂಚೆ ಕಛೇರಿಗೆ ವರ್ಗಾಹಿಸಲಾಗುವುದು. ಇದಕ್ಕೆ ಯಾವುದೇ ಶುಲ್ಕ ಇರುವುದಿಲ್ಲ.

೪. **ಠೇವಣಿ ವಯಸ್ಸು:** ಈ ಹಿಂದೆ ಠೇವಣಿ ಮಾಡಿಸಲು ನಿಮ್ಮ ಮಗಳಿಗೆ ಕನಿಷ್ಟ ೧೫ ವರ್ಷ ವಯಸ್ಸಾಗಿರಬೇಕು.

೫. **ಕನಿಷ್ಟ ಠೇವಣಿ:** ಮೊದಲಿಗೆ ವಾರ್ಷಿಕವಾಗಿ ಕನಿಷ್ಟ ಠೇವಣಿ ೧೦೦೦ ರೂ. ಇತ್ತು ಪ್ರಸ್ತುತ ಯಾವುದೇ ಕನಿಷ್ಟ ಠೇವಣಿ ಇಟ್ಟಿಲ್ಲ. ಆದರೆ ಸಾಮಾನ್ಯ ಉಳಿತಾಯ ಖಾತೆದಾರರು ಶೇ. ೪% ರಷ್ಟು ಬಡ್ಡಿ ಪಡೆಯಲು ಅರ್ಹರಾಗಿರುತ್ತಾರೆ.

೬. **ಮೆಚುರಿಟಿ ಅವಧಿ:** ಖಾತೆ ತೆರೆದ ದಿನದಿಂದ ೨೧ ನೇ ವಯಸ್ಸು ಪೂರೈಸಿದ ನಂತರ ಈ ಖಾತೆಯ ಮೆಚುರಿಟಿ ಅವಧಿ ಮುಗಿಯುತ್ತದೆ. ೨೧ ವರ್ಷಗಳ ಅವಧಿ ಮುಗಿದ ನಂತರ ಯಾವುದೇ ಬಡ್ಡಿಯನ್ನು ಪಾವತಿಸಲಾಗುವುದಿಲ್ಲ.

೭. **ಪೌರತ್ವ:** ಸುಕನ್ಯಾ ಸಮೃದ್ಧಿ ಖಾತೆದಾರರ ಪೌರತ್ವದಲ್ಲಿ ಬದಲಾವಣೆಗಳಾದಲ್ಲಿ ಖಾತೆಯನ್ನು ಮುಚ್ಚಲಾಗುವುದು. ಆದರೆ ವಿದೇಶದಲ್ಲಿ ಹೋಗಿ ವಾಸವಾದರೆ ಖಾತೆಯನ್ನು ಅಕಾಲಿಕವಾಗಿ ಮುಚ್ಚಲಾಗುವುದು.

ಒಟ್ಟಾರೆಯಾಗಿ, ಹತ್ತು ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಸುಕನ್ಯಾ ಸಮೃದ್ಧಿ ಖಾತೆಗಳನ್ನು ತೆರೆಯುವ ಹೊಸ ಯೋಜನೆಯನ್ನು ಕೇಂದ್ರ ಸರಕಾರ ಆರಂಭಿಸಿರುವುದು ಹೆಣ್ಣು ಮಕ್ಕಳ ಸ್ವಾವಲಂಬನೆಯ ಬದುಕಿಗೆ ದಾರಿ ದೀಪವಾಗಿದೆ ಎಂದೇ ಹೇಳಬಹುದು.

**ಉಜ್ವಲ್ ಯೋಜನೆ** ಲೈಂಗಿಕ ಶೋಷಣೆಗೆ ಒಳಗಾದ ಮಕ್ಕಳು/ಮಹಿಳೆಯರ ರಕ್ಷಣೆ, ಆರೈಕೆ ಮತ್ತು ಅವರನ್ನು ಕುಟುಂಬದ ಜೊತೆ ಜೋಡಿಸುವ ಯೋಜನೆ, ಹೆಣ್ಣು ಮಕ್ಕಳು ಮತ್ತು ಮಹಿಳೆಯರ ಅಕ್ರಮ ಸಾಗಾಣಿಕೆ ಮತ್ತು ಬಲತ್ಕಾರವಾದ ಲೈಂಗಿಕತೆ, ಇಂತಹ ದೌರ್ಜನ್ಯವನ್ನು ತಡೆಯುವುದಕ್ಕೊಸ್ಕರ ಸಮಾಜದಲ್ಲಿ ಸಾರ್ವಜನಿಕರಿಗೆ ಮಹಿಳೆಯರ ಪರವಾಗಿ ಗೌರವಯುತ ಭಾವನೆಯನ್ನು ತರುವಂತೆ ಮತ್ತು ಲೈಂಗಿಕ ಬಲತ್ಕಾರ ಮತ್ತು ಶೋಷಣೆಯ ವಿರುದ್ದ ಜಾಗೃತಿ ಮೂಡಿಸುವಲ್ಲಿ ಈ ಯೋಜನೆ ಶ್ರಮಿಸುತ್ತದೆ. ಇಂತಹ ಸಮಸ್ಯೆಗೆ ಸಿಲುಕಿದಂತಹ ಮಹಿಳೆಯರ ರಕ್ಷಣೆ ಮತ್ತು ಅವರಿಗೆ ಸಮಾಜದಲ್ಲಿ ಸ್ಥಾನಮಾನ ಕಲ್ಪಿಸುವಲ್ಲಿ ದೇಶದ ಗಡಿ ಪ್ರದೇಶದಲ್ಲಿ ಈ ಸಮಸ್ಯೆಗೆ ಒಳಗಾದಂತಹ ಮಹಿಳೆಯರನ್ನು ಅವರ ಸ್ವದೇಶಕ್ಕೆ ಮರಳುವಂತೆ ವಸತಿ ವ್ಯವಸ್ಥೆ ಊಟೋಪಚಾರ ಮೂಲಭೂತ ಸೌಕರ್ಯಗಳ ಒದಗಣೆ ಹೀಗೆ ಈ ರೀತಿಯಾದಂತಹ ಸೇವೆಗಳನ್ನು ಕಲ್ಪಿಸಲಾಗುತ್ತಿದೆ. ಈ ಯೋಜನೆಯನ್ನು ಸಮಾಜ ಕಲ್ಯಾಣ ಇಲಾಖೆ, ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಮಹಿಳಾ ಅಭಿವೃದ್ದಿ ನಿಗಮಗಳು, ಇತರ ಸ್ವಯಂ ಸೇವಾ ಸಂಸ್ಥೆಗಳು ಅನುಷ್ಟಾನ ಮಾಡುತ್ತಿದೆ.

### ೩.೭.೯ ಒನ್ ಸ್ಟಾಪ್ ಸೆಂಟರ್ ಯೋಜನೆ ಮತ್ತು ಜನ್ ಧನ್ ಯೋಜನೆ

ಲಿಂಗ ಆಧಾರಿತ ಗಲಭೆ (ಜಿಬಿವಿ) ಜಾಗತೀಕ ಆರೋಗ್ಯ, ಮಾನವ ಹಕ್ಕುಗಳು ಮತ್ತು ಅಭಿವೃದ್ಧಿಯ ವಿಷಯವಾಗಿದ್ದು, ಪ್ರಪಂಚದ ಪ್ರತಿಯೊಂದು ಮೂಲೆಯಲ್ಲಿಯೂ ಪ್ರತಿ ಸಮುದಾಯ ಮತ್ತು ದೇಶವನ್ನು ಭೌಗೋಳಿಕ, ವರ್ಗ, ಸಂಸ್ಕೃತಿ, ವಯಸ್ಸು, ಜನಾಂಗ ಮತ್ತು ಧರ್ಮದ ಮೇಲೆ ಪ್ರಭಾವ ಬೀರುತ್ತದೆ. ಹಿಂಸೆಯನ್ನು ತೊಡೆದುಹಾಕುವ ಕುರಿತಾದ ಯುಎನ್ ಘೋಷಣೆಯ ಲೇಖನ ೧ ಲಿಂಗ ಆಧಾರಿತ ನಿಂದನೆ ವ್ಯಾಖ್ಯಾನವನ್ನು ಒದಗಿಸುತ್ತದೆ. ಇದು ಲಿಂಗ ಆಧಾರಿತ ಹಿಂಸಾಚಾರದ ಯಾವುದೇ ಕ್ರಿಯೆಗೆ ಕಾರಣವಾಗುತ್ತದೆ. ಅಥವಾ ಅದು ಉಂಟಾಗುವ ಸಾಧ್ಯತೆ ದೈಹಿಕ, ಲೈಂಗಿಕ ಅಥವಾ ಮಾನಸಿಕ ಹಾನಿ ಅಥವಾ ನೋವು ಮಹಿಳೆಯರಿಗೆ, ಅಂತಹ ಕೃತ್ಯಗಳ ಬೆದರಿಕೆಗಳು ದಬ್ಬಾಳಿಕೆ ಅಥವಾ ಸ್ವಾತಂತ್ರ್ಯದ ಆನಿಯಂತ್ರಿತ ಅಭಾವ ಸಾರ್ವಜನಿಕ ಅಥವಾ ಖಾಸಗಿ ಜೀವನದಲ್ಲಿ ಸಂಭವಿಸುತ್ತಿರುವುದು ಭಾರತದಲ್ಲಿ ಲಿಂಗ ಆಧಾರಿತ ಹಿಂಸೆ ಅನೇಕ ಅಭಿವ್ಯಕ್ತಿಗಳನ್ನು ಹೊಂದಿದೆ. ಅತ್ಯಚಾರ, ಗೌರವಾನ್ವಿತ ಹತ್ಯೆ, ಆಸಿಡ್ ದಾಳಿಗಳು, ಮಾಟಗಾತಿ-ಬೇಟೆ, ಲೈಂಗಿಕ ಕಿರುಕುಳ, ಮಕ್ಕಳ ಲೈಂಗಿಕ ದುರುಪಯೋಗ, ವಾಣಿಜ್ಯ ಲೈಂಗಿಕ ಶೋಷಣೆಗಾಗಿ ಕಳ್ಳಸಾಗಾಣೆ, ಬಾಲ್ಯವಿವಾಹ, ಲೈಂಗಿಕ ಆಯ್ಕೆ ಮಾಡುವಂತಹ ಹಾನಿಕಾರ ಸೇರಿದಂತೆ ದೇಶೀಯ ಮತ್ತು ಲೈಂಗಿಕ ಹಿಂಸೆಯ ಹೆಚ್ಚು ಸಾರ್ವತ್ರಿಕ ಸ್ವರೂಪಗಳ ಪ್ರಕಾರ ಗರ್ಭಪಾತ, ಸತಿ ಇತ್ಯಾದಿ.

'ಸಖಿ' ಎಂದು ಜನಪ್ರಿಯವಾಗಿ ಕರೆಯಲಾಗುವ ಈ ಯೋಜನೆಯನ್ನು ಏಪ್ರೀಲ್ ೧, ೨೦೧೫ ರಿಂದ ಜಾರಿಗೆಗೊಳಿಸಲಾಗಿದೆ. ಹಿಂಸೆಗೆ ಒಳಗಾದ ಮಹಿಳೆಯರಿಗೆ ಒಂದು ಹಂತದಡಿಯಲ್ಲಿ ಸಮಗ್ರ ಬೆಂಬಲ ಮತ್ತು ಸಹಾಯವನ್ನು ಒದಗಿಸಲು ಈ ಕೇಂದ್ರಗಳನ್ನು ದೇಶದಾದ್ಯಂತ ಸ್ಥಾಪಿಸಲಾಗಿದೆ.

**ಉದ್ದೇಶ**

ಒನ್ ಸ್ಟಾಪ್ ಕೇಂದ್ರಗಳು ಹಿಂಸೆ, ಖಾಸಗಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಕುಟುಂಬ, ಸಮುದಾಯ ಮತ್ತು ಕಾರ್ಯಸ್ಥಳದಲ್ಲಿ ಪರಿಣಾಮ ಬೀರುವ ಮಹಿಳೆಯರಿಗೆ ಬೆಂಬಲು ನೀಡಲು ಉದ್ದೇಶಿಸಲಾಗಿದೆ. ವಯಸ್ಸು, ವರ್ಗ, ಜಾತಿ, ಶಿಕ್ಷಣ, ಸ್ಥಿತಿ, ವೈವಾಹಿಕ ಸ್ಥಿತಿ, ಜನಾಂಗ ಮತ್ತು ಸಂಸ್ಕೃತಿಯ ಹೊರತಾಗಿ ದೈಹಿಕ, ಲೈಂಗಿಕ, ಭಾವನಾತ್ಮಕ, ಮಾನಸಿಕ ಮತ್ತು ಆರ್ಥಿಕ ದುರ್ಬಳಕೆ ಎದುರಿಸುತ್ತಿರುವ ಮಹಿಳೆಯರು ಬೆಂಬಲ ಮತ್ತು ಪರಿಹಾರಕ್ಕಾಗಿ ಸುಗಮಗೊಳಿಸಲಾಗುವುದು.

**ಗುರಿಗಳು**

ಹಿಂಸೆಗೆ ಒಳಗಾದ ಮಹಿಳೆಯರಿಗೆ ಸಮಗ್ರ ಬೆಂಬಲ ಮತ್ತು ನೆರವು ಒದಗಿಸಲು. ಮಹಿಳೆಯರಿಗೆ ಯಾವುದೇ ರೀತಿಯ ಹಿಂಸೆಯ ವಿರುದ್ಧ ಹೋರಾಡಲು ಒಂದು ಛಾವಣಿಯಡಿಯಲ್ಲಿ ವೈದ್ಯಕೀಯ, ಕಾನೂನು ಮಾನಸಿಕ ಮತ್ತು ಸಮಾಲೋಚನೆ ಬೆಂಬಲ ಸೇರಿದಂತೆ ತುರ್ತುಸ್ಥಿತಿಗೆ ಪ್ರವೇಶವನ್ನು ಸುಲಭಗೊಳಿಸಲು.

**ಟಾರ್ಗೆಟ್ ಗುಂಪು**

ಎಲ್ಲಾ ಜಾತಿ ವರ್ಗದವರು, ಧರ್ಮ, ಪ್ರದೇಶ, ಲೈಂಗಿಕ ದೃಷ್ಟಿಕೋನ ಅಥವಾ ವೈವಾಹಿಕ ಸ್ಥಾನಮಾನದ ಹೊರತಾಗಿ ಹಿಂಸೆಗೆ ಒಳಪಟ್ಟ ೧೮ ವರ್ಷಕ್ಕಿಂತ ಕಡಿಮೆ ವಯಸ್ಸಿನ ಹುಡುಗಿಯರನ್ನು ಒಳಗೊಂಡಂತೆ ಎಲ್ಲಾ ಮಹಿಳೆಯರಿಗೆ ಒನ್ ಸ್ಟಾಪ್ ಸೆಂಟರ್ ಕೇಂದ್ರ ಬೆಂಬಲ ನೀಡುತ್ತದೆ.

**ನೀಡಲಾಗುವ ಸೇವೆಗಳು**

ಈ ಕೆಳಗಿನ ಸೇವೆಗಳಿಗೆ ಪ್ರವೇಶವನ್ನು ಕಲ್ಪಿಸಲು ಕೇಂದ್ರಗಳು ಮಹಿಳಾ ಸಹಾಯವಾಣಿಗಳೊಂದಿಗೆ ಸಂಯೋಜಿಸಲ್ಪಡುತ್ತದೆ.

• ತುರ್ತು ಪ್ರತಿಕ್ರಿಯೆ ಮತ್ತು ಪಾರುಗಾಣಿಕಾ ಸೇವೆಗಳು – ಹಿಂಸೆಗೆ ಒಳಗಾದ ಮಹಿಳೆಯರಿಗೆ ಒನ್ ಸ್ಟಾಫ್ ಸೆಂಟರ್ ಪಾರುಗಾಣಿಕಾ ಮತ್ತು ಉಲ್ಲೇಖಿತ ಸೇವೆಗಳನ್ನು ಒದಗಿಸುತ್ತದೆ. ಇದಕ್ಕಾಗಿ ನ್ಯಾಷನಲ್ ಹೆಲ್ತ್ ಮಿಷನ್, ೧೦೮ ಸರ್ವಿಸ್, ಪೋಲಿಸ್ (ಪಿಸಿಆರ್ ವ್ಯಾನ್)ನಂತಹ ಅಸ್ತಿತ್ವದಲ್ಲಿರುವ ಕಾರ್ಯವಿಧಾನಗಳೊಂದಿಗೆ ಸಂಪರ್ಕಗಳನ್ನು ಅಭಿವೃದ್ಧಿಪಡಿಸಲಾಗುವುದು.

• ವೈದ್ಯಕೀಯ ಸಹಾಯ – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಅಭಿವೃದ್ಧಿಪಡಿಸಿದ ಮಾರ್ಗದರ್ಶಿ ಸೂತ್ರಗಳು ಮತ್ತು ಪ್ರೋಟೋಕಾಲ್ಗಳ ಪ್ರಕಾರ ಕೈಗೊಳ್ಳಬೇಕಾದ ವೈದ್ಯಕೀಯ ನೆರವು/ ಪರೀಕ್ಷೆಯ ಸಮೀಪದ ಆಸ್ಪತ್ರೆಗೆ ಹಿಂಸೆಯಿಂದಾಗುವ ಮಹಿಳೆಯರನ್ನು ಉಲ್ಲೇಖಿಸುತ್ತದೆ.

• ಸೈಕೋ–ಸಾಮಾಜಿಕ ಬೆಂಬಲ/ ಸಮಾಲೋಚನೆ – ಸೈಕೋ ಸಾಮಾಜಿಕ ಸಮಾಲೋಚನಾ ಸೇವೆಗಳನ್ನು ಒದಗಿಸುವ ಪರಿಣಿತ ಸಲಹೆಗಾರರು ಕರೆಗೆ ಲಭ್ಯವಿರುತ್ತಾರೆ.

• ಕಾನೂನಿನ ನೆರವು ಮತ್ತು ಸಮಾಲೋಚನೆ –ಹಿಂಸೆ, ಕಾನೂನು ನೆರವು ಮತ್ತು ಸಮಾಲೋಚನೆಗಳನ್ನು ಮಹಿಳೆಯರಿಗೆ ನ್ಯಾಯಕ್ಕೆ ಪ್ರವೇಶಿಸಲು ಅನುಕೂಲವಾಗುವಂತೆ OSP ನಲ್ಲಿ empanelled ವಕೀಲರು ಅಥವಾ ರಾಷ್ಟ್ರೀಯ/ರಾಜ್ಯ/ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ಒದಗಿಸಲಾಗುತ್ತದೆ.

• ಆಶ್ರಯ – ದುಷ್ಕೃತ್ಯದ ಮಹಿಳೆಯರಿಗೆ ಓಎಸ್ಸಿ ತಾತ್ಕಲಿಕ ಆಶ್ರಯ ಸೌಲಭ್ಯಗಳನ್ನು ಒದಗಿಸುತ್ತದೆ. ದೀರ್ಘಾವಧಿಯ ಆಶ್ರಯ ಅವಶ್ಯಕತೆಗಳಿಗಾಗಿ ಸ್ವಾಧರ್ ಗೃಹ, ಸಣ್ಣ ಸ್ಟೇ ಹೋಂಗಳು (ಆಡಳಿತ/ ಸರಕಾರಿ/ಎನ್‌ಜಿಒ) ಜೊತೆ ಸಂಯೋಜಿತವಾಗಿದೆ. ತಾತ್ಕಾಲಿಕ ಆಶ್ರಯಕ್ಕೆ ಯಾವುದೇ ಮಹಿಳೆಯನ್ನು ಪ್ರವೇಶಿಸುವುದು ಕೇಂದ್ರ ನಿರ್ವಾಹಕನ ವಿವೇಚನೆಗೆ ಒಳಪಟ್ಟಿರುತ್ತದೆ.

• ವೀಡಿಯೋ ಕಾನ್ಫರೆನ್ಸಿಂಗ್ ಫೆಸಿಲಿಟಿ – ವೇಗವಾದ ಮತ್ತು ಜಗಳ ಮುಕ್ತ ಪೋಲೀಸ್ ಮತ್ತು ಕೋರ್ಟ್ ವಿಚಾರಣೆಗೆ ಅನುಕೂಲವಾಗುವಂತೆ ಓಎಸ್‌ಸಿ ವೀಡಿಯೋ ಕಾನ್ಫರೆನ್ಸಿಂಗ್ ಸೌಲಭ್ಯವನ್ನು ಒದಗಿಸುತ್ತದೆ.

ಒಟ್ಟಾರೆಯಾಗಿ ಒನ್ ಸ್ಟಾಪ್ ಸೆಂಟರ್ ಯೋಜನೆಯು ಎಲ್ಲಾ ವರ್ಗದ ಮಹಿಳೆಯರಿಗೆ ಸಹಾಯ ಸೌಲಭ್ಯವನ್ನು ಒದಗಿಸುವ ಮೂಲಕ ನೊಂದ ಮಹಿಳೆಯರಿಗೆ ಈ ಯೋಜನೆ ಪರಿಣಾಮಕಾರಿಯಾಗಿದೆ.

ಈ ಯೋಜನೆಯನ್ನು ರಾಜ್ಯ ಸರಕಾರಗಳಿಗೆ ಕೇಂದ್ರಸರಕಾರವು ಆರ್ಥಿಕ ಸಹಾಯವನ್ನು ನೀಡುವ ಮೂಲಕ ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತದೆ.

**ಜನ್ ಧನ್ ಯೋಜನೆ**

ಕೇಂದ್ರ ಸರಕಾರವು ಪ್ರತಿಯೊಂದು ಕುಟುಂಬವನ್ನು ಆರ್ಥಿಕ ಸೇರ್ಪಡೆ ಮಾಡಿಸುವ ನಿಟ್ಟಿನಲ್ಲಿ "ಬ್ಯಾಂಕ್ ಗಳಲ್ಲಿ ಉಳಿತಾಯ ಖಾತೆ ತೆರೆಯುವ ವಿಶೇಷ ಯೋಜನೆಯನ್ನು ಆಗ ೨೦೦೪ ರಲ್ಲಿ ಜಾರಿಗೆ ತಂದಿತು. ಈ ಯೋಜನೆಯನ್ನು ಅತ್ಯಂತ ಸರಳ ಕೆ.ವೈ.ಸಿ ದಾಖಲೆಗಳನ್ನು ಒದಗಿಸಿ ಯಾವುದೇ ಆರಂಭಿಕ ಮೊತ್ತ ಜಮೆ ಮಾಡದೇ ಝೀರೋ ಬ್ಯಾಲೆನ್ಸ್‌ನಲ್ಲಿ ಖಾತೆ ಪ್ರಾರಂಭಿಸಬಹುದಾಗಿದೆ. ಈ ಖಾತೆ ತೆರೆದಲ್ಲಿ ಸದಸ್ಯರಿಗೆ ರೂ. ೧ ಲಕ್ಷ ತನಕ ಅಪಘಾತ ವಿಮೆ ಮತ್ತು ರೂ. ೩೦,೦೦೦/– ಜೀವ ವಿಮೆಯ ಸೌಲಭ್ಯ ದೊರಕುತ್ತದೆ. ಅಲ್ಲದೇ ಖಾತೆದಾರರು ಮಹಿಳೆಯರಾಗಿದ್ದಲ್ಲಿ ಆರು ತಿಂಗಳ ನಂತರ ರೂ.೫೦೦೦/–ತನಕ ಒವರ್ ಡ್ರಾಫ್ಟ್ ಸೌಲಭ್ಯ ಸಿಗುತ್ತದೆ. ಸರಕಾರದಿಂದ ದೊರಕುವ ಸೌಲಭ್ಯಗಳು ನೇರವಾಗಿ ಸದಸ್ಯರ ಈ ಖಾತೆಗೆ ವರ್ಗಾವಣೆಗೊಳ್ಳುತ್ತದೆ.

ಹೀಗೆ ಸರಕಾರದ ವಿವಿಧ ಇಲಾಖೆಗಳಿಂದ, ನಿಗಮಗಳಿಂದ, ಬಡ ಕುಟುಂಬಗಳು ಸ್ವಾವಲಂಬಿಗಳಾಗುವಂತೆ ಹಲವಾರು ಆರ್ಥಿಕ ಸೌಲಭ್ಯ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿವೆ. ಜಲಾನಯನ ಇಲಾಖೆಯಿಂದ ಸೌಲಭ್ಯಗಳು, ತೋಟಗಾರಿಕಾ ಇಲಾಖೆ, ಕೃಷಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆಗಳಿಂದ ಸೌಲಭ್ಯಗಳು ಅಲ್ಲದೇ ಅಲ್ಪ ಸಂಖ್ಯಾತರ ನಿಗಮ, ಅಂಬೇಡ್ಕರ್ ಅಬಿವೃದ್ಧಿ ನಿಗಮ, ಮಹಿಳಾ ಅಬಿವೃದ್ಧಿ ನಿಗಮ, ಹೀಗೆ ವಿವಿಧ ನಿಗಮಗಳ ಮೂಲಕ ಸೌಲಭ್ಯಗಳು ಜಾರಿಯಲ್ಲಿದೆ. ಇಷ್ಟೆಲ್ಲಾ ಸೌಲಭ್ಯಗಳಿದ್ದು ಇಂದಿಗೂ ಜನರಲ್ಲಿ ಅಸಹಾಯಕತೆಯ ಭಾವನೆ ಯಾಕೆ ಇದೆ? ಹಲವಾರು ಉತ್ತರಿಸಲಾಗದ ಪ್ರಶ್ನೆಗಳು ನಿಜವಾಗಿಯೂ ಈ ಸೌಲಭ್ಯಗಳು ತಲುಪಬೇಕಾದಲ್ಲಿ ತಲುಪುತ್ತಿದೆಯೇ? ಒಂದು ವೇಳೆ ಈ ಎಲ್ಲಾ ಯೋಜನೆಗಳು ತಲುಪಬೇಕಾದಲ್ಲಿ ತಲುಪಿದರೆ ಮುಂದಕ್ಕೆ ಹೊಸ ಯೋಜನೆಗಳ ಅವಶ್ಯಕತೆ ಇದೆಯೇ? ಜನರು ಬಿಟ್ಟು ಅವಲಂಬಿತರಾಗುತ್ತಿದ್ದಾರೆಯೇ? ಸ್ವಾವಲಂಬಿಗಳಾಗುವುದು ಯಾವಾಗ? ನಿಜವಾಗಿಯೂ ಈ ಎಲ್ಲಾ ಕಾರ್ಯಕ್ರಮಗಳ ಮಾಹಿತಿಯು ಸಾಮಾನ್ಯ ಜನರಲ್ಲಿ ಗ್ರಾಮಗಳಲ್ಲಿ ಕುಟುಂಬಗಳಲ್ಲಿ ಇದೆಯೇ? ಮಾಹಿತಿ ತಿಳಿದ ಮೇಲೂ ಈ ಸೌಲಭ್ಯಗಳನ್ನು ಪಡೆಯಲು ಅವರು ಶಕ್ತರೇ? ಬಹುಶ ಈ ಸೌಲಭ್ಯಗಳನ್ನುಪಡೆದುಕೊಳ್ಳುವಲ್ಲಿ ಜನ ಸಾಮಾನ್ಯರ ಸಾಮರ್ಥ್ಯವನ್ನು ಹೆಚ್ಚಿಸಬೇಕಾಗಿದೆ. ಅವರ ದನಿಯನ್ನು ಬಲಗೊಳಿಸಬೇಕಾಗಿದೆ ಜಾಗೃತಿಯನ್ನು ಮೂಡಿಸಬೇಕಾಗಿದೆ ಸರಕಾರಿ ಸೌಲಭ್ಯಗಳು ಜನಸಾಮಾನ್ಯರನ್ನು ತಲುಪುವಲ್ಲಿ ಹಾಗೂ ಅವರ ಜೀವನದಲ್ಲಿ ಪರಿವರ್ತನೆಯನ್ನು ತಂದಲ್ಲಿ ಮಾತ್ರ ಸಾರ್ಥಕತೆಯನ್ನು ಹೊಂದಲು ಸಾಧ್ಯ.

**ಆಧಾರಗಳು**


ಕರ್ನಾಟಕ ಮಾನವಾಭಿವೃದ್ಧಿ ವರದಿ, ೨೦೦೫, ೧೬೪

ಕಲಬುರ್ಗಿ ಎಂ ಎಂ (ಸಂ), ೧೯೯೮, ವಚನ ಸಂಪುಟ ೧, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೫೭

ಅದೇ ೨೦೦೫, ೨೫೮

ಕೇಂದ್ರ ಸರ್ಕಾರದ ಸಬಲೀಕರಣ ಯೋಜನೆಗಳು, ಮಿನಿಸ್ಟ್ರೀ ಫರ್ ವುಮೆನ್ ಅಂಡ್ ಚಿಲ್ಡ್ರನ್ ಡೆವೆಲಪ್‌ಮೆಂಟ್

ಚಂದ್ರಶೇಖರ್ ಟಿ ಆರ್, ೨೦೧೬, ಕರ್ನಾಟಕದಲ್ಲಿ ಸ್ತ್ರೀಯರ ಸ್ಥಿತಿಗತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೯೪

ಜನಗಣತಿ ವರದಿ, ೨೦೧೧, ಕರ್ನಾಟಕ ಸರ್ಕಾರ, ಬೆಂಗಳೂರು

ಭಾರತಿ ಎಂ, ೨೦೦೮, ಭಾರತದಲ್ಲಿ ಮಹಿಳೆ, ವಿದ್ಯಾನಿಧಿ ಪ್ರಕಾಶನ, ಗದಗ, ೧೩೦

Agrawal Meenu, 2007, Women Empowerment, Today's Vision for Tomorrow's Mission,184

Devi Laxmi, 1998,Women and Development, 132

Dube M.P. and Bora Neeta (eds.), 1999, Social Justice and Women in India, 34

## ಅಧ್ಯಾಯ: ನಾಲ್ಕು
## ಮಹಿಳೆ ಮತ್ತು ಕರ್ನಾಟಕ ಸರಕಾರದ ಯೋಜನೆಗಳು

೪.೧ ಕರ್ನಾಟಕ ಮಹಿಳಾ ಅಭಿವೃದ್ದಿ ಯೋಜನೆ ಮತ್ತು ಮಹಿಳಾ ತರಬೇತಿ ಯೋಜನೆ

೪.೨ ಸ್ತ್ರೀಶಕ್ತಿ ಮತ್ತು ಭಾಗ್ಯಲಕ್ಷ್ಮಿ ಯೋಜನೆ

೪.೩ ಸ್ವಾಧಾರ್ ಕೇಂದ್ರ ಮತ್ತು ಉದ್ಯೋಗಿನಿ ಯೋಜನೆ

೪.೪ ಸಾಂತ್ವಾನ ಕೇಂದ್ರ ಮತ್ತು ಜನನಿ ಸುರಕ್ಷಾ ಯೋಜನೆ

೪.೫ ರಾಜೀವ್ ಗಾಂಧಿ ಯುವತಿಯರ ಸಬಲೀಕರಣ ಯೋಜನೆ

೪.೬ ಮಹಿಳಾ ಪ್ರಸೂತಿ ಆರೈಕೆ ಯೋಜನೆ

೪.೭ ದೇವದಾಸಿಯರ ಪುರ್ನವಸತಿ ಯೋಜನೆ

೪.೮ ಪರಿಶಿಷ್ಟ ವರ್ಗದವರ ಶೈಕ್ಷಣಿಕ ಕಾರ್ಯಕ್ರಮ ಮತ್ತು ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ

೪.೯ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

## ಅಧ್ಯಾಯ : ನಾಲ್ಕು

## ಮಹಿಳೆ ಮತ್ತು ಕರ್ನಾಟಕ ಸರಕಾರದ ಯೋಜನೆಗಳು

'ಕರ್ನಾಟಕ ರಾಜ್ಯದಲ್ಲಿ ಬುಡಕಟ್ಟು ಜನರು ಬಯಲು ಸೀಮೆ, ಪಶ್ಚಿಮಘಟ್ಟ, ಕರಾವಳಿ ಮತ್ತು ಮಲೆನಾಡಿನ ತಪ್ಪಲು ಪ್ರದೇಶಗಳಲ್ಲಿ ಕಂಡುಬರುತ್ತಾರೆ. ೧೯೯೧ರ ಜನಗಣತಿಯ ಪ್ರಕಾರ ರಾಜ್ಯದ ಬುಡಕಟ್ಟು ಜನಸಂಖ್ಯೆ ೧೯,೧೫,೬೯೧. ಇವರು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ ೪.೨೬ ರಷ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಅಧಿಕೃತವಾಗಿ ೫೦ ಬುಡಕಟ್ಟುಗಳನ್ನು ಪರಿಶಿಷ್ಟ ಪಂಗಡಗಳಿಗೆ ಸೇರಿಸಲಾಗಿದೆ. ಆದರೆ ಇನ್ನೂ ಕೆಲವು ಬುಡಕಟ್ಟುಗಳು ರಾಜ್ಯದಲ್ಲಿ ಇವೆ ಎಂದು ಸಮಾಜಶಾಸ್ತ್ರೀಯ ಮತ್ತು ಮಾನವಶಾಸ್ತ್ರೀಯ ಅಧ್ಯಯನಗಳಿಂದ ತಿಳಿದು ಬಂದಿದೆ. ರಾಜ್ಯದಲ್ಲಿ ೧೯೬೧ ಮತ್ತು ೧೯೮೧ರ ನಡುವೆ ಬುಡಕಟ್ಟು ಜನಸಂಖ್ಯೆಯು ಬಹಳ ಹೆಚ್ಚಾಗಿದೆ. ಕರ್ನಾಟಕ ರಾಜ್ಯದಲ್ಲಿ ಬಳ್ಳಾರಿ, ಚಿತ್ರದುರ್ಗ, ಕೊಡಗು, ಕೋಲಾರ, ಮೈಸೂರು, ತುಮಕೂರು ಜಿಲ್ಲೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಬುಡಕಟ್ಟು ಜನರು ಕಂಡುಬಂದರೆ, ನಂತರದ ಸ್ಥಾನ ಬೆಂಗಳೂರು, ಬೆಳಗಾಂ, ಬೀದರ್, ಬಿಜಾಪುರ, ಚಿಕ್ಕಮಗಳೂರು, ದಕ್ಷಿಣಕನ್ನಡ, ಧಾರವಾಡ, ಗುಲ್ಬರ್ಗಾ ಮತ್ತು ಶಿವಮೊಗ್ಗ ಜಿಲ್ಲೆಗಳದ್ದು. ಉತ್ತರಕನ್ನಡ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಬುಡಕಟ್ಟು ಜನರ ಸಂಖ್ಯೆ ಆಯಾ ಜಿಲ್ಲೆಯ ಶೇಕಡ ಒಂದರಷ್ಟಿದೆ. ರಾಜ್ಯದ ಬುಡಕಟ್ಟುಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬರುವ ಬುಡಕಟ್ಟುಗಳೆಂದರೆ 'ನಾಯ್ಕಡ', ಅಥವಾ ನಾಯಕ ೬೯% ಇವರ ನಂತರ ಕಾಡು ಕುರುಬರು ಶೇಕಡ ೧೧ರಷ್ಟಿದ್ದರೆ, ಮರಾಠಿ ನಾಯಕರು ಶೇಕಡ ನಾಲ್ಕರಷ್ಟಿದ್ದಾರೆ. ಉಳಿದಂತೆ ಗೊಂಡರು ಶೇಕಡ ಮೂರರಷ್ಟು, ಕೋಲಿಡಾರ್, ಜೇನುಕುರುಬ ಮತ್ತು ಕೋಯ ತಲಾ ಶೇಕಡ ಎರಡರಷ್ಟು ಕಂಡುಬರುತ್ತಾರೆ. ಕಡಿಮೆ ಜನಸಂಖ್ಯೆಯ ರಾಜ್ಯದ ಬುಡಕಟ್ಟುಗಳೆಂದರೆ ಯರವ, ಮೇದ, ಸೋಲಿಗಾ, ಮಲೆಕುಡಿಯ ಮತ್ತು ಹಸಲರು. ಇವರ ಪ್ರಮಾಣ ಶೇಕಡ ಒಂದು. ಕೊರಗರ ಜನಸಂಖ್ಯೆ ಶೇಕಡ ಒಂದಕ್ಕಿಂತಲೂ ಕಡಿಮೆ ಇದೆ. ಕರ್ನಾಟಕ ರಾಜ್ಯವು ಭಾರತದ ಗಣರಾಜ್ಯದಲ್ಲಿ ೮ನೇ ಅತಿದೊಡ್ಡ ರಾಜ್ಯವಾಗಿದೆ. ಭೌಗೋಳಿಕ ಪ್ರದೇಶದ ೧.೯೦ ಲಕ್ಷ ಚದರ ಕಿ.ಮೀ. ಇದು ಜನಸಂಖ್ಯೆಯ ಪ್ರಕಾರ ೯ನೇ ಅತಿ ದೊಡ್ಡದಾಗಿದೆ. ಈ ರಾಜ್ಯವು ನೈರುತ್ಯ ಭಾರತದಲ್ಲಿ ನೆಲೆಗೊಂಡಿದೆ ಮತ್ತು ಭೌಗೋಳಿಕತೆಯ ೬.೩ ಪ್ರತಿಶತವನ್ನು ಹೊಂದಿದೆ.

### ೪.೧ ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆ ಮತ್ತು ಮಹಿಳಾ ತರಬೇತಿ ಯೋಜನೆ

ತತ್ವ ಸಮಾನತೆಯನ್ನು ಖಚಿತ ಪಡಿಸಲು ಮತ್ತು ಮಹಿಳೆಯರನ್ನು ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ತರಲು ನಿಧಿಯನ್ನು ಅಂತರವಲಯ ಹಂಚಿಕೆ ಮಾಡುವ ಯೋಜನೆಯನ್ನು ಮೇಲ್ವಿಚಾರಣೆ ಮಾಡುವ ದೃಷ್ಟಿಯಿಂದ ನಿರ್ದೇಶನಾಲಯದಲ್ಲಿ ದಿನಾಂಕ : ೦೩-೦೫-೨೦೦೩ ರಲ್ಲಿ ಕರ್ನಾಟಕ ಘನ ಸರಕಾರವು ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನಾ ಘಟಕವನ್ನು ಪ್ರಾರಂಭಿಸಲಾಗಿದೆ. ಲಿಂಗತ್ವಕ್ಕೆ ಸಂಬಂಧಪಟ್ಟ ವಿಷಯಗಳನ್ನು ಬಗೆ ಹರಿಸಲು ಮೊದಲ ಬಾರಿಗೆ ಸರಕಾರವು ಜಾಗೃತವಾದ ಮತ್ತು ಸಕರಾತ್ಮಕವಾದ ಪ್ರಯತ್ನ ಮಾಡಿದ್ದರಿಂದ ಈ ಆದೇಶವು ಹೆಗ್ಗುರುತಿನ ಧೋರಣಾತ್ಮಕ ಆದೇಶವಾಗಿರುತ್ತದೆ. ಸರಕಾರದಲ್ಲಿ ವಿವಿಧ ಇಲಾಖೆಗಳ ಎಲ್ಲಾ ಫಲಾನುಭವಿ ಆಧಾರಿತ ಯೋಜನೆಗಳಲ್ಲಿ ಹಾಗೂ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಕಾರ್ಯಕ್ರಮಗಳಿಗೆ ಒದಗಿಸುವ ಸಂಪನ್ಮೂಲಗಳಲ್ಲಿ ಮೂರನೇ ಒಂದು ಭಾಗವನ್ನು ಮಹಿಳೆಯರಿಗೆ ಮೀಸಲಿಡುವುದೇ ಈ ಯೋಜನೆಯ ಉದ್ದೇಶವಾಗಿರುತ್ತದೆ.

**ಮಹಿಳಾ ತರಬೇತಿ ಯೋಜನೆ**

ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ, ವಿಧವೆಯರಿಗೆ, ನಿರ್ಗತಿಕ ಮತ್ತು ವಿಕಲಚೇತನರಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯರಿಗೆ ಕೌಶಲ್ಯ ತರಬೇತಿ ನೀಡಿ ಅವರಲ್ಲಿ ಉದ್ಯಮಶೀಲತೆಯನ್ನು ಬೆಳೆಸುವುದು. ಮಹಿಳೆಯರಿಗೆ, ವಿಕಲಚೇತನ ಹಾಗೂ ಅಸಹಾಯಕ

| ವರ್ಷ | ಗುರಿ | | ಸಾಧನೆ | |
|---|---|---|---|---|
| | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) |
| ೨೦೧೪-೧೫ | ೩೬೦೦ | ೩೬೦.೦೦ | ೨೭೭೬ | ೧೭೧.೨೨ |
| ೨೦೧೫-೧೬ | ೫೬೫೦ | ೩೬೦.೦೦ | ೫೬೫೦ | ೩೬೦.೦೦ |
| ೨೦೧೬-೧೭ | ೪೧೬೦ | ೪೧೬.೦೦ | ೭೬೮೮ | ೪೧೬.೦೦ |
| **೨೦೧೭-೧೮ | ೪೧೬೦ | ೪೧೬.೦೦ | ೨೮೪೬ | ೩೧೨.೦೦ |
| *೨೦೧೮-೧೯ | ೫೦೦೦ | ೫೦೦.೦೦ | ೧೧೯೦ | ೧೧೯.೦೦ |

*೨೦೧೮ರ ನವೆಂಬರ್ ಅಂತ್ಯದವರೆಗೆ **ಸರ್ಕಾರದ ಆದೇಶದಂತೆ ೨೦೧೭-೧೮ನೇ ಸಾಲಿನಲ್ಲಿ ಮಹಿಳಾ ತರಬೇತಿ ಯೋಜನೆಯಿಂದ ರೂ. ೪೯.೫೧ ಲಕ್ಷಗಳನ್ನು ಧನಶ್ರೀ ಯೋಜನೆಗೆ ಉಪಯೋಗಿಸಿಕೊಳ್ಳಲಾಗಿದೆ.(ಕರ್ನಾಟಕ ಆರ್ಥಿಕ ಸಮೀಕ್ಷೆ ೨೦೧೮-೧೯: ೬೯)

ಮಹಿಳೆಯರಿಗೆ ಆದ್ಯತೆ ನೀಡಲಾಗುವುದು ಹಾಗೂ ಆದಾಯದ ಮಿತಿ ಇರುವುದಿಲ್ಲ. ತರಬೇತಿಯನ್ನು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಮಾರ್ಗಸೂಚಿಯಂತೆ

ಮಾನ್ಯತೆ ಪಡೆದ ತರಬೇತಿ ಸಂಸ್ಥೆಗಳು, ರೂಡ್‌ಸೆಟಿ, ಬ್ಯಾಂಕ್ ಪ್ರಾಯೋಜಿತ ತರಬೇತಿ ಸಂಸ್ಥೆಗಳು, ರಾಜ್ಯ/ಕೇಂದ್ರ ಸರ್ಕಾರದ ಸ್ವಾಮ್ಯದ ಪ್ರತಿಷ್ಠಿತ ತರಬೇತಿ ಸಂಸ್ಥೆಗಳ ಮೂಲಕ ನಡೆಸಲಾಗುತ್ತದೆ. ೨೦೧೮-೧೯ನೇ ಸಾಲಿನಲ್ಲಿ ರೂ.೫೦೦.೦೦ ಲಕ್ಷಗಳ ಅನುದಾನ ನಿಗದಿಪಡಿಸಿದ್ದು, ೫೦೦೦ ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲು ಉದ್ದೇಶಿಸಿದೆ.

**೪..೩ ಸ್ತ್ರೀ ಶಕ್ತಿ ಮತ್ತು ಭಾಗ್ಯಲಕ್ಷ್ಮಿ ಯೋಜನೆ**

ಸ್ವ-ಸಹಾಯ ಗುಂಪುಗಳ ಮೂಲಕ ಮಹಿಳೆಯರ ಸಬಲೀಕರಣದ ಧ್ಯೇಯದೊಂದಿಗೆ ೨೦೦೦-೨೦೦೧ನೇ ಸಾಲಿನಲ್ಲಿ ಸ್ತ್ರೀಶಕ್ತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಸ್ತ್ರೀಶಕ್ತಿ ಯೋಜನೆಯನ್ನು ಸಮಾಜದ ಬಡ ಕುಟುಂಬದ, ಸಾಮಾಜಿಕ ಅಥವಾ ಆರ್ಥಿಕವಾಗಿ ಹಿಂದುಳಿದ, ಸಮಾನ ಮನಸ್ಸಿನ ಭೂರಹಿತ ಮಹಿಳಾ ಕೃಷಿ ಕಾರ್ಮಿಕರು, ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗಕ್ಕೆ ಸೇರಿದ ೧೫-೨೦ ಮಹಿಳೆಯರನ್ನು ಒಟ್ಟು ಸೇರಿಸಿ ೧.೬೫ ಲಕ್ಷ ಸ್ವ-ಸಹಾಯ ಗುಂಪುಗಳನ್ನು ರಚಿಸಲಾಗಿದೆ. ಪ್ರಸ್ತುತ ೨೨.೩೦ ಲಕ್ಷ ಮಹಿಳಾ ಸದಸ್ಯರನ್ನು ಒಳಗೊಂಡಿದೆ. ಮಹಿಳಾ ಸಬಲೀಕರಣಕ್ಕೆ ಸಹಾಯಕವಾದ ಅಂಶಗಳಲ್ಲಿ ಸ್ವಸಹಾಯ ಸಂಘಗಳು ಪ್ರಮುಖ ಪಾತ್ರ ವಹಿಸುತ್ತವೆ. ಗ್ರಾಮೀಣ ಪ್ರದೇಶದ ಬಡತನ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಲು ತಾವೇ ಸ್ವಶಕ್ತ ಹಾಗೂ ಪ್ರೇರಣೆಯಿಂದ ರಚಿಸಿಕೊಂಡಿರುವ ಸಮೂಹಗಳನ್ನು ಸ್ವಸಹಾಯ ಸಂಘಗಳು ಎಂದು ಕರೆಯಬಹುದು. ಸಮಾನ ವಯಸ್ಸು, ಸಮಾನ ಆಸಕ್ತಿ, ಪರಸ್ಪರ ಕಷ್ಟ, ಸುಖಗಳಲ್ಲಿ ಪಾಲ್ಗೋಳ್ಳುವುದು. ತಮ್ಮ ಸಾಮಾರ್ಥ್ಯಕ್ಕೆ ತಕ್ಕಂತೆ ಹಣ ಉಳಿತಾಯ ಮಾಡುವುದು ಇದರ ಕರ್ತವ್ಯವಾಗಿದ್ದು : ಈ ಸ್ವ ಸಹಾಯ ಸಂಘಗಳು ಎಲ್ಲಾ ವರ್ಗದ ಮಹಿಳೆಯರ ಪಾಲಿಗೆ ಆಶಾಕಿರಣಗಳು ಆರ್ಥಿಕ ಅಭ್ಯುದಯ ಕೇಂದ್ರಗಳು ಆಗಿವೆ. ಇದು ಪ್ರಥಮವಾಗಿ ಆರಂಭವಾದದ್ದು ಬಾಂಗ್ಲಾದೇಶದಲ್ಲಿ.

**ಸ್ವಸಹಾಯ ಸಂಘಗಳ ಪಾತ್ರ**

- ಮಹಿಳಾ ಸಬಲೀಕರಣ
- ವೈಯಕ್ತಿಕ ಪ್ರಗತಿಗೆ ಸಹಾಯಕ
- ಕೌಟುಂಬಿಕ ಸುವ್ಯವಸ್ಥೆ ಯೋಗಕ್ಷೇಮ ಇತ್ಯಾದಿ.
- ಆರ್ಥಿಕ ಸುಭದ್ರತೆ
- ನಾಯಕತ್ವದ ವೃದ್ಧಿ
- ಸಾಮಾಜಿಕ, ರಾಜಕೀಯ, ಆರ್ಥಿಕ ಸ್ಥಾನಮಾನಗಳಿಗೆ
- ಹೊರ ಪ್ರಪಂಚದ ಅರಿವು ಅಭಿವ್ಯಕ್ತಿ
- ಸಂಪನ್ಮೂಲಗಳ ಮೇಲಿನ ಹಿಡಿತ

**ಸ್ವಸಹಾಯ ಸಂಘಗಳ ಉದ್ದೇಶ**

- ನಾಯಕತ್ವದ ಗುಣಗಳನ್ನು ಗ್ರಾಮೀಣ ಪ್ರದೇಶದ ಬಡ ಮಹಿಳೆಯರಲ್ಲಿ ಬೆಳೆಸುವುದು.
- ಉಳಿತಾಯ ಮನೋಭಾವನೆಯ ಬೆಳವಣಿಗೆ
- ಸಾಲ ಸೌಲಭ್ಯಗಳನ್ನು ಒದಗಿಸಿಕೊಡುವುದು
- ಸಂಘಟನೆ ಮತ್ತು ಉದ್ಯೋಗದ ಚಾಲನೆ
- ಗ್ರಾಮೀಣ ಅಭಿವೃದ್ಧಿ ಅರಿವು
- ಸಾಮುದಾಯಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರೋತ್ಸಾಹ ನೀಡುವುದು
- ಅವರವರ ಸಮಸ್ಯೆಗಳನ್ನು ಅವರೇ ಪರಿಹರಿಸಿಕೊಳ್ಳುವ ಸಾಮಾರ್ಥ್ಯ ತುಂಬುವುದು. (ವೈಯಕ್ತಿಕ)
- ಸ್ವಾವಲಂಬನೆ ಮತ್ತು ಹೈನುಗಾರಿಕೆ, ವ್ಯಾಪಾರ ಮನೋಭಾವನೆ ಮುಂತಾದುವುಗಳನ್ನೇ ಬೆಳೆಸುವುದು. ಇತರೆ ಉಪಕಸುಬುಗಳಾದ ಕುರಿ ಕೋಳಿ ಸಾಕಾಣಿಕೆಯ ಬಗ್ಗೆ ಅರಿವು ಮೂಡಿಸುವುದು.
- ಸಂಘಟನೆ ಸಾಮುದಾಯಿಕ ಭಾವನೆ, ಸಾಲಗಾರರ ಕಪಿಮುಷ್ಟಿಯಿಂದ ಪಾರಾಗುವಿಕೆ, ಕಡಿಮೆ ಬಡ್ಡಿದರದಲ್ಲಿ ಸಾಲ ಪಡೆದುಕೊಳ್ಳುವಿಕೆ ಇತ್ಯಾದಿ ಪರಿಣಾಮಕಾರಿ ಮತ್ತು ಪ್ರಯೋಜನಕಾರಿ ಗುರಿಗಳನ್ನು ಇಟ್ಟುಕೊಂಡು ಮುನ್ನೆಡೆಯುವುದು.
- ಆರ್ಥಿಕ ಮಹತ್ವವನ್ನು ಮಾತ್ರವಲ್ಲದೇ ಸಾಕ್ಷರತೆಯ ಮಹತ್ವ, ವರದಕ್ಷಿಣೆಯ ಬಗ್ಗೆ ಅರಿವು, ಬಾಲ್ಯವಿವಾಹದ ವಿರುದ್ಧದ ಧೋರಣೆ ಮುಂತಾದುವುಗಳ ಸಹ ಇದರ ಉದ್ದೇಶಗಳಾಗಿವೆ.

**ಸ್ವಸಹಾಯ ಸಂಘಗಳ ಸೂತ್ರಗಳು**

- ಇದು ಮಹಿಳೆಯರಿಗಾಗಿಯೇ ಇರುವಂತದ್ದು. ಉಳಿತಾಯ ಮನೋಭಾವನೆಯಿಂದ ನಾವು ನಮ್ಮವರು ಎಂಬ ಆಸಕ್ತಿವುಳ್ಳ ಮಹಿಳೆಯರು ಇದರಲ್ಲಿ ಭಾಗವಹಿಸಬಹುದಾಗಿದೆ.
- ಸ್ವಸಹಾಯ ಸಂಘಕ್ಕೆ ಬನ್ನಿ ಎಂಬ ಒತ್ತಡ ಹಾಕುವುದಿಲ್ಲ. ಇದಕ್ಕೆ ಸ್ವ ಆಸಕ್ತಿ, ಸ್ವಪ್ರೇರಣೆ ಅತಿಮುಖ್ಯ.
- ಸಂಬಂಧಪಟ್ಟ ನಿಯಮಗಳಿಗೆ ಎಲ್ಲಾರು ಬದ್ಧರಾಗಿರಬೇಕು
- ಸದಸ್ಯರ ವಯೋಮಿತಿ ೧೮ ರಿಂದ ೬೦ ವರ್ಷದೊಳಗಿರಬೇಕು
- ಯಾವುದೇ ಅಪರಾಧದಲ್ಲಿ ತೊಡಗಿದ ಕುರಿತು ಸಾಕ್ಷಿ ಪುರಾವೆಗಳು ಇರಬಾರದು.
- ಸಂಘದ ಎಲ್ಲಾ ಸದಸ್ಯರು ಕ್ರಿಯಾಶೀಲರಾಗಿರಬೇಕು.
- ಪಡೆದುಕೊಂಡ ಸಾಲವನ್ನು ಹಿಂತಿರುಗಿಸಬೇಕು. ಅವಧಿ ಮೀರಿದರೆ ಶೇ.೨ ರಂತೆ ಹೆಚ್ಚಿನ ಬಡ್ಡಿ ಕಟ್ಟಬೇಕು.

- ಸಾಲ ಪಡೆಯುವ ಉದ್ದೇಶ ಇರುವವರು ೬ ತಿಂಗಳಾದರೂ ಉಳಿತಾಯ ಮಾಡಿರಬೇಕು.
- ಸಂಘದ ಹಿತರಕ್ಷಣೆ ಆಗುಹೋಗುಗಳೇ ಸದಸ್ಯರ ಗುರಿಯಾಗಿರಬೇಕು.

"ದೇಶದದ್ಯಾಂತ ಸುಮಾರು ೮೬.೭೪೫ ಸ್ವ ಸಹಾಯ ಸಂಘಗಳಿದ್ದು ಕರ್ನಾಟಕದಲ್ಲಿ ಇದರ ಪ್ರಮಾಣ ೮೨.೧೭೮ ರಷ್ಟಿದೆ ಎಂದು ತಿಳಿದು ಬಂದಿದೆ. ಎಲ್ಲಾ ವರ್ಗದ ಮಹಿಳೆಯರಿಗೆ ಅವರ ಬೆಳವಣಿಗೆ ಆತ್ಮವಿಶ್ವಾಸ ಬದುಕಿನ ಭರವಸೆ, ಧೈರ್ಯ, ಮಾನವಸಂಪನ್ಮೂಲಗಳ ಬಳಕೆ, ಕೌಶಲ್ಯ, ಆರ್ಥಿಕ ಸುಭದ್ರತೆ, ಸಾಮಾಜಿಕ ಸ್ಥಾನಮಾನ ಮುಂತಾದುವುಗಳನ್ನು ಬೆಳೆಯಿಸಿಕೊಳ್ಳಲು ಸಹಾಯಕವಾಗಿವೆ. ಉಳಿತಾಯ, ಸಾಮೂಹಿಕ ಪ್ರಜ್ಞೆ, ಸಹಕಾರ ಸಹಾಯ, ಸ್ವಚಿಂತನೆ, ಅಭಿವೃದ್ಧಿ ಉತ್ಪಾದಕತೆಯಲ್ಲಿ ಹೆಚ್ಚಳ ಮುಂತಾದವು ಸ್ವಸಹಾಯ ಸಂಘಗಳ ತತ್ವಗಳಾಗಿವೆ"(ಭಾರತಿ ಬಿ ಎಂ:೨೦೦೮:೧೪೪), ಮಹಿಳಾ ಸಶಕ್ತೀಕರಣ ಮತ್ತು ಅವರನ್ನು ಸ್ವಾವಲಂಬಿಗಳನ್ನಾಗಿಸುವ ನಿಟ್ಟಿನಲ್ಲಿ ೨೦೦೦-೦೧ರಲ್ಲಿ ಆಗಿನ ಕರ್ನಾಟಕ ಘನ ಸರಕಾರವು ಸ್ತ್ರೀಶಕ್ತಿ ಸಂಘಗಳ ರಚನೆಯನ್ನು ಪ್ರಾರಂಭಿಸಿತು. ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬ, ಕೃಷಿ ಕೂಲಿ ಕಾರ್ಮಿಕರು, ಭೂ ರಹಿತ ಕುಟುಂಬಗಳು, ಮಹಿಳೆಯರು ಸಂಘ ರಚನೆ ಮಾಡುತ್ತಾರೆ. ಸಣ್ಣ ಉಳಿತಾಯವನ್ನು ಪ್ರಾರಂಭಿಸಿ ಅವರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವುದು ಇದರ ಮೂಲ ಉದ್ದೇಶ. ಮಹಿಳೆಯರನ್ನು ಸಂಘಟಿಸಿ ಅವರು ಆದಾಯ ವೃದ್ಧಿ ಚಟುವಟಿಕೆಗಳನ್ನು ಹಮ್ಮಿಕೊಂಡು ತಮ್ಮ ಕುಟುಂಬದ ಏಳಿಗೆ ಮಾಡುವ ಅವಕಾಶ ಈ ಸ್ತ್ರೀಶಕ್ತಿ ಸಂಘಗಳ ಮೂಲಕ ಸಾಧ್ಯವಿದೆ. ಅಲ್ಲದೇ ಇಲಾಖೆಯ ಇತರ ಸೌಲಭ್ಯಗಳನ್ನು ಈ ಸಂಘಗಳ ಮೂಲಕ ನೇರವಾಗಿ ನೀಡುವಲ್ಲಿಯೂ ಇದು ಸಹಕಾರಿಯಾಗಿದೆ.

### ಭಾಗ್ಯಲಕ್ಷ್ಮಿ ಯೋಜನೆ

ಹೆಣ್ಣು ಮಗುವಿನ ಸ್ಥಾನವನ್ನು ಮೊದಲು ಕುಟುಂಬದಲ್ಲಿ ನಂತರ ಸಮಾಜದಲ್ಲಿ ಹೆಚ್ಚಿಸಲು ಮತ್ತು ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಹೆಣ್ಣು ಮಗುವಿನ ಜನನ ಉತ್ತೇಜಿಸಲು ೨೦೦೬-೦೭ನೇ ಸಾಲಿನಲ್ಲಿ ಹೆಣ್ಣು ಮಕ್ಕಳ ರಕ್ಷಣೆಗೆ "ಭಾಗ್ಯಲಕ್ಷ್ಮಿ" ಎಂಬ ಹೊಸ ಯೋಜನೆಯನ್ನು ಜಾರಿಗೆ ತರಲಾಯಿತು. ಈ ಯೋಜನೆಯ ಆರ್ಥಿಕ ಸೌಲಭ್ಯವನ್ನು ಹೆಣ್ಣು ಮಗುವಿಗೆ ಅದರ ತಾಯಿ/ತಂದೆ/ ಪೋಷಕರ ಮೂಲಕ ಕೆಲವು ನಿಬಂಧನೆಗಳನ್ನು ಪೂರೈಸಿದಲ್ಲಿ ನೀಡಲಾಗುವುದು.

- ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬಗಳಲ್ಲಿ ೩೧.೩.೨೦೦೬ರ ನಂತರ ಜನಿಸಿದ ಹೆಣ್ಣು ಮಕ್ಕಳು ಈ ಯೋಜನೆಯಡಿ ಫಲಾನುಭವಿಗಳಾಗಿ ನೋಂದಾಯಿಸಿಕೊಳ್ಳಲು ಅರ್ಹರಿರುತ್ತಾರೆ.
- ಮಗು ಜನಿಸಿದ ಒಂದು ವರ್ಷದೊಳಗೆ ಜನನ ಪ್ರಮಾಣ ಪತ್ರವನ್ನು ಒದಗಿಸಿ ನೋಂದಾಯಿಸಲು ಅವಕಾಶವಿದೆ.
- ಯೋಜನೆಯ ಸೌಲಭ್ಯಗಳನ್ನು ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬದ ಇಬ್ಬರು ಹೆಣ್ಣುಮಕ್ಕಳಿಗೆ ಸೀಮಿತಗೊಳಿಸಲಾಗಿದೆ.

• ಫಲಾನುಭವಿ ಹೆಣ್ಣುಮಗುವಿನ ತಂದೆ ಅಥವಾ ತಾಯಿ ಶಾಶ್ವತ ಕುಟುಂಬ ಯೋಜನೆಯನ್ನು ಅಳವಡಿಸಿಕೊಂಡಿರತಕ್ಕದ್ದು ಮತ್ತು ಕುಟುಂಬದಲ್ಲಿ ಮಕ್ಕಳ ಸಂಖ್ಯೆ ೨ಕ್ಕಿಂತ ಹೆಚ್ಚಿಗೆ ಇರಬಾರದು.

• ನೋಂದಣಿ ನಂತರ ಹಾಗೂ ಪೂರ್ಣ ಪರಿಶೀಲನೆ ನಂತರ ದಿನಾಂಕ:೩೧.೦೭.೨೦೦೮ರವರೆಗೆ ಜನಿಸಿದ ಪ್ರತಿ ಫಲಾನುಭವಿಗೆ ರೂ.೧೦,೦೦೦/–ಗಳನ್ನು ಆಯ್ಕೆಯಾದ ಪಾಲುದಾರ ಹಣಕಾಸು ಸಂಸ್ಥೆಯಲ್ಲಿ ನಿಶ್ಚಿತ ಠೇವಣಿಯನ್ನು ಇಡಲಾಗಿದೆ.

• ಪಾಲುದಾರ ಹಣಕಾಸು ಸಂಸ್ಥೆಯು ಹೆಣ್ಣುಮಗುವಿನ ಹೆಸರಿನಲ್ಲಿ ಇಟ್ಟ ರೂ.೧೦,೦೦೦/–ಗಳ ಠೇವಣಿಯ ಮೇಲಿನ ಆದಾಯವನ್ನು ಗರಿಷ್ಠಗೊಳಿಸಿ, ಠೇವಣಿ ಹಣವನ್ನು ಬಡ್ಡಿ ಸಮೇತವಾಗಿ ಫಲಾನುಭವಿಗಳಿಗೆ ೧೮ ವರ್ಷಗಳು ಪೂರ್ಣಗೊಂಡ ನಂತರ ದೊರಕಿಸಿಕೊಡುತ್ತದೆ.

೧. ಮೊದಲ ಮಗುವಿಗೆ ಪರಿಪಕ್ವ ಮೊತ್ತ ರೂ.೩೪,೭೫೧/–ನ್ನು ಮತ್ತು ಎರಡನೇ ಮಗುವಿಗೆ ರೂ.೪೦,೯೧೮/–ನ್ನು ನೀಡಲಾಗುತ್ತದೆ.

೨. ಫಲಾನುಭವಿಗೆ ವಿದ್ಯಾರ್ಥಿ ವೇತನ, ವಿಮೆ ಸೌಲಭ್ಯ ಮುಂತಾದ ಮಧ್ಯಂತರ ಸಂದಾಯಗಳನ್ನು ಯೋಜನೆಯಡಿ ತಿಳಿಸಲಾದ ಅರ್ಹತೆ ಮಾನದಂಡಗಳನ್ನು ಪೂರೈಸಿದಲ್ಲಿ ನೀಡಲಾಗುವುದು.

ದಿನಾಂಕ:೦೧.೦೪.೨೦೦೬ ರಿಂದ ೩೧.೦೭.೨೦೦೮ರ ವರೆಗೆ ಜನಿಸಿ ಯೋಜನೆಯಡಿ ನೊಂದಣಿಯಾದ ಮಕ್ಕಳು ವಿದ್ಯಾರ್ಥಿ ವೇತನ ಪಡೆಯಲು ಪ್ರತಿ ತರಗತಿಯಲ್ಲಿಯೂ ವರ್ಷದಿಂದ ವರ್ಷಕ್ಕೆ ತೇರ್ಗಡೆ ಹೊಂದಬೇಕು. ಈ ಯೋಜನೆಯನ್ನು ದಿನಾಂಕ:೨೦.೦೧.೨೦೦೯ರಂದು ಪರಿಷ್ಕರಿಸಲಾಗಿರುತ್ತದೆ. (ದಿನಾಂಕ: ೦೧.೦೮.೨೦೦೮ ರಿಂದ ಜನಿಸಿದ ಹೆಣ್ಣುಮಕ್ಕಳಿಗೆ ಅನ್ವಯಿಸುತ್ತದೆ).

**ಪರಿಷ್ಕರಿಸಲಾದ ಯೋಜನೆಯ ರೂಪುರೇಷಗಳು ಕೆಳಕಂಡಂತಿವೆ.**

• ಯೋಜನೆಯಡಿ ನೋಂದಣಿಯಾದ ಕುಟುಂಬದಲ್ಲಿನ ಮೊದಲನೇ ಹೆಣ್ಣು ಮಗುವಿನ ಹೆಸರಿನಲ್ಲಿ ರೂ. ೧೯,೩೦೦/– ಹಾಗೂ ಅದೇ ಕುಟುಂಬದಲ್ಲಿನ ೨ನೇ ಹೆಣ್ಣು ಮಗುವಿನ ಹೆಸರಿನಲ್ಲಿ ರೂ. ೧೮,೩೫೦/– ಗಳನ್ನು ಪಾಲುದಾರ ಹಣಕಾಸು ಸಂಸ್ಥೆಯಲ್ಲಿ ಪ್ರಾರಂಭಿಕ ಠೇವಣಿ ಇಡಲಾಗುತ್ತದೆ.

• ೧೮ ವರ್ಷ ಪೂರ್ಣಗೊಂಡ ನಂತರದಲ್ಲಿ ಹೆಣ್ಣು ಮಕ್ಕಳು ರೂ. ೧,೦೦,೦೦೦/– ಪರಿಪಕ್ವ ಮೊತ್ತ ಪಡೆಯಲು ಅರ್ಹರಿರುತ್ತಾರೆ.

**ಯೋಜನೆಯ ಉದ್ದೇಶಗಳು**

• ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಲ್ಲಿ ಹೆಣ್ಣು ಮಗುವಿನ ಜನನವನ್ನು ಉತ್ತೇಜಿಸುವುದು ಮತ್ತು ಆತ್ಮ ಸ್ಥೈರ್ಯ ತುಂಬುವುದು.

• ಬಾಲ ಕಾರ್ಮಿಕತೆ, ಹೆಣ್ಣು ಭ್ರೂಣಹತ್ಯೆ, ಬಾಲ್ಯ ವಿವಾಹ ಮತ್ತು ಹೆಣ್ಣು ಮಕ್ಕಳ ಮಾರಾಟ ಮುಂತಾದ ಸಾಮಾಜಿಕ ಪಿಡುಗುಗಳನ್ನು ತಡೆಗಟ್ಟುವುದು.

• ಆರೋಗ್ಯ, ಶಿಕ್ಷಣ, ಪೋಷಣೆ ಮತ್ತು ಪೌಷ್ಠಿಕ ಮಟ್ಟವನ್ನು ಉತ್ತಮ ಪಡಿಸುವುದರ ಮೂಲಕ ಹೆಣ್ಣು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯನ್ನು ಉತ್ತಮಪಡಿಸುದು.

• ಹೆಣ್ಣು ಮಗುವಿಗೆ ಆರ್ಥಿಕ ನೆರವು ನೀಡುವುದರ ಮೂಲಕ ಅವರನ್ನು ಸಮಾಜದಲ್ಲಿ ಸದೃಢರನ್ನಾಗಿ ಮಾಡುವುದು.

**ಪ್ರಸ್ತುತ ಯೋಜನೆಯ ಸೌಲಭ್ಯ ಪಡೆಯಲು ಇರಬೇಕಾದ ಅರ್ಹತೆಯ ಅಂಶಗಳು**

• ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಗುರುತಿಸಿ ಶಾಶ್ವತ ಬಿಪಿಎಲ್ ಕಾರ್ಡ್/ ಆದ್ಯತಾ ಕುಟುಂಬ ಪಡಿತರ ಚೀಟಿ ಹೊಂದಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿ ಜನಿಸಿದ ಎರಡು ಹೆಣ್ಣು ಮಕ್ಕಳು ಯೋಜನೆಯಡಿ ನೊಂದಣಿ ಮಾಡಲು ಅರ್ಹರಿರುತ್ತಾರೆ.

• ಕುಟುಂಬದಲ್ಲಿ ಮಕ್ಕಳ ಸಂಖ್ಯೆ ಎರಡನ್ನು ಮೀರಿರಬಾರದು. ಈ ಕುಟುಂಬವು ಮಗುವಿನ ತಂದೆ ಅಥವಾ ತಾಯಿ ಯಾರದಾರೊಬ್ಬರು ಶಾಶ್ವತ ಕುಟುಂಬ ಯೋಜನೆಯ ಪದ್ಧತಿಯನ್ನು ಅಳವಡಿಸಿಕೊಂಡಿರಬೇಕು. ವಿಶೇಷ ಪ್ರಕರಣಗಳಲ್ಲಿ ಅಂದರೆ ಮೊದಲನೇ ಹೆರಿಗೆಯಲ್ಲಿ ಅವಳಿ ತ್ರಿವಳಿ ಹೆಣ್ಣು ಮಕ್ಕಳು ಜನಿಸಿದ್ದಲ್ಲಿ ಹಾಗೂ ಎರಡನೇ ಹೆರಿಗೆಯಲ್ಲಿ ಅವಳಿ/ತ್ರಿವಳಿ ಹೆಣ್ಣು ಮಕ್ಕಳು ಜನಿಸಿದ್ದಲ್ಲಿ ಈ ಎಲ್ಲಾ ಹೆಣ್ಣು ಮಕ್ಕಳಿಗೂ ಸೌಲಭ್ಯ ನೀಡುವುದು. ಈ ಸೌಲಭ್ಯವನ್ನು ಎರಡು ಹೆರಿಗೆಗೆ ಮಾತ್ರ ಮಿತಿಗೊಳಿಸುವುದು. ಇಂತಹ ಪ್ರಕರಣಗಳಲ್ಲಿ ಮಾತ್ರ ಕುಟುಂಬದ ಮಕ್ಕಳ ಸಂಖ್ಯೆ ಎರಡನ್ನು ಮೀರಿರಬಾರದು ಎಂಬ ನಿಯಮವನ್ನು ಸಡಿಸಲಾಗಿದೆ.

• ಈ ಯೋಜನೆಯನ್ನು ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲೂ ಅನುಷ್ಠಾನಗೊಳಿಸಲಾಗುವುದು. ಅಂಗನವಾಡಿ ಕೇಂದ್ರಗಳು ಇಲ್ಲದೆ ಇರುವ ಪ್ರದೇಶಗಳಲ್ಲಿ ವಾಸಿಸುವ ಪೋಷಕರು ತಮ್ಮ ಸಮೀಪದ ಅಂಗನವಾಡಿ ಕೇಂದ್ರದಲ್ಲಿ ನೊಂದಣಿ ಮಾಡುವುದು. ಮಗುವಿನ ಜನನವನ್ನು ಕಡ್ಡಾಯವಾಗಿ ನೊಂದಾಯಿಸಿರಬೇಕು ಹಾಗೂ ಜನನ ಪ್ರಮಾಣ ಪತ್ರವನ್ನು ಹೊಂದಿರಬೇಕು.

• ಪರಿಪಕ್ವ ಮೊತ್ತವನ್ನು ಪಡೆಯಲು ಫಲಾನುಭವಿ ಮಗು ಕನಿಷ್ಠ ೮ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಪಡೆದಿರಬೇಕು. ಆದರೆ ವಿಕಲಚೇತನ ಮಕ್ಕಳಿಗೆ ವಿನಾಯಿತಿ ನೀಡಲಾಗಿದ್ದು, ಸದರಿ ಮಕ್ಕಳು ೧ ರಿಂದ ೫ನೇ ತರಗತಿವರೆಗೆ ವ್ಯಾಸಂಗ ಮಾಡಿರಬೇಕು, ಒಂದು ವೇಳೆ ವಿಕಲಚೇತನ ಮಕ್ಕಳು ತೀವ್ರತರವಾದ ವಿಕಲತೆಯಿಂದ ಬಳಲುತ್ತಿದ್ದಲ್ಲಿ ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು ಪ್ರತಿ ಪ್ರಕರಣಗಳ ಸಾಧಕ ಬಾಧಕಗಳನ್ನು ಪರಿಶೀಲಿಸಿ ಈ ಷರತ್ತನ್ನು ಸಹ ಸಡಿಸಲು ಅಧಿಕಾರ ನೀಡಿ ಆದೇಶಿಸಿದೆ.

• ೫ನೇ ಮತ್ತು ೮ನೇತರಗತಿ ಉತ್ತೀರ್ಣರಾಗಿರುವ ಬಗ್ಗೆ ಶಾಲಾ ಮುಖ್ಯೋಪಾಧ್ಯಾಯರಿಂದ ದೃಢೀಕರಣ ಪಡೆದು ಸಲ್ಲಿಸುವುದು.

• ಬಾಲಕಾರ್ಮಿಕ ನಿಷೇಧ ಕಾಯ್ದೆ ೧೯೮೬ರಂತೆ ಬಾಲ ಕಾರ್ಮಿಕಳಾಗಿರತಕ್ಕದ್ದಲ್ಲ.

• ೧೮ ವರ್ಷ ಪೂರೈಸುವ ಮೊದಲು ವಿವಾಹವಾಗತಕ್ಕದ್ದಲ್ಲ

• ಆಯ್ಕೆಯಾದ ಫಲಾನುಭವಿಯು ಮೇಲೆ ತಿಳಿಸಿದ ಅರ್ಹತೆಯ ಮಾನದಂಡಗಳಲ್ಲಿನ ಯಾವುದೇ ಒಂದು ಷರತ್ತುನ್ನು ಪೂರೈಸದಿದ್ದಲ್ಲಿಯೂ ಸಹ ಸೌಲಭ್ಯವನ್ನು ಮುಟ್ಟುಗೋಲು ಹಾಕಲಾಗುವುದು.

**೪.೩ ಸ್ವಾಧಾರ್ ಕೇಂದ್ರ ಮಹಿಳೆಯರ ಸಂಕಷ್ಟಗಳ ಪರಿಸ್ಥಿತಿಯಲ್ಲಿ ನೆರವಾಗುವ ಯೋಜನೆ**

ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗಾಗಿ ಯೋಜನೆ ೨೦೧೬-೧೭ (ಕೇಂದ್ರದ ಪಾಲು:ರಾಜ್ಯದ ಪಾಲು-೬೦:೪೦) ೨೦೧೬-೧೭ನೇ ಸಾಲಿನಿಂದ ಕೇಂದ್ರ ಸರ್ಕಾರವು ಸ್ವಾಧಾರ ಕೇಂದ್ರಗಳನ್ನು ಮತ್ತು ಅಲ್ಪಾವಧಿ ವಸತಿ ಗೃಹ ವಿಲೀನಗೊಳಿಸಿ ಸ್ವಾಧಾರಗೃಹ ಯೋಜನೆಯನ್ನು ಪುನರಾವರ್ತಿಸಲಾಗಿದೆ. ಕಷ್ಟಕರ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗಾಗಿ ಆಶ್ರಯ, ಆಹಾರ, ಬಟ್ಟೆ, ತರಬೇತಿ ಹಾಗೂ ಶಿಕ್ಷಣ ನೀಡುವುದರ ಮೂಲಕ ಆರ್ಥಿಕವಾಗಿ, ಸಾಮಾಜಿಕವಾಗಿ ಸಶಕ್ತರಾಗುವಂತೆ ಮಾಡುವುದು ಯೋಜನೆಯ ಉದ್ದೇಶ. ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಭಾರತ ಸರ್ಕಾರವು ಆಶ್ರಯ ಮನೆ, ಸಲಹಾ ಕೇಂದ್ರ, ತರಬೇತಿ ಕೇಂದ್ರ ಹಾಗೂ ವೈದ್ಯಕೀಯ ಕೇಂದ್ರಗಳನ್ನು ನಡೆಸಲು ಅನುಮೋದಿಸಿದೆ. ರಾಜ್ಯದಲ್ಲಿ ಪ್ರಸ್ತುತ ೪೭ ಸ್ವಾಧಾರಗೃಹ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಸಾಮಾಜಿಕವಾಗಿ ಆರ್ಥಿಕವಾಗಿ ಅವರು ಮುಂದೆ ಬರುವಂತೆ ತರಬೇತಿ ಸೇವೆಗಳನ್ನು ನೀಡುತ್ತದೆ. ಈ ಯೋಜನೆಯನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಇಲಾಖೆಯ ಸಹಯೋಗದೊಂದಿಗೆ ಇತರ ಮಹಿಳಾ ಅಭಿವೃದ್ಧಿ ಸಂಸ್ಥೆಗಳ ಸಹಯೋಗದೊಂದಿಗೆ ಅನುಷ್ಠಾನ ಮಾಡಲಾಗುತ್ತಿದೆ. ಅಲ್ಲದೇ ಈ ಕೇಂದ್ರದಲ್ಲಿ ಮಹಿಳಾ ಸಹಾಯ ವಾಣಿಯ ಸೇವೆಯೂ ಲಭ್ಯವಿರುತ್ತದೆ.

**ಉದ್ಯೋಗಿನಿ ಯೋಜನೆ**

ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸ್ವಯಂ ಉದ್ಯೋಗಿಗಳಾಗಲು ಬ್ಯಾಂಕ್‌ಗಳ ಸಾಲ ಮತ್ತು ನಿಗಮದ ಮೂಲಕ ಸಹಾಯಧನ ನೀಡಲಾಗುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸಾಲದ ಘಟಕ ವೆಚ್ಚ ಗರಿಷ್ಠ ರೂ.೩.೦೦ ಲಕ್ಷ ಸಹಾಯಧನ ಮೊತ್ತ ಶೇ.೫೦, ಕುಟುಂಬದ ಆದಾಯದ ಮಿತಿ ಗರಿಷ್ಟ ರೂ.೨.೦೦ ಲಕ್ಷಗಳಿಗೆ ೨೦೧೭-೧೮ನೇ ಸಾಲಿನಿಂದ ಹೆಚ್ಚಿಸಲಾಗಿದೆ. ೨೦೧೮-೧೯ನೇ ಸಾಲಿನ ಆಯವ್ಯಯ ಭಾಷಣದನ್ವಯ ಸಾಮಾನ್ಯ ವರ್ಗ ಮತ್ತು ವಿಶೇಷ ವರ್ಗದ ಮಹಿಳೆಯರಿಗೆ ಯೋಜನಾ ವೆಚ್ಚವನ್ನು ರೂ. ೧.೦೦ ಲಕ್ಷದಿಂದ ರೂ.೩.೦೦ ಲಕ್ಷಗಳವರೆಗೆ, ಶೇಕಡ ೩೦ ಸಹಾಯಧನ ಮತ್ತು ಕುಟುಂಬದ ಗರಿಷ್ಠ ಆದಾಯ ಮಿತಿಯನ್ನು ರೂ.೧.೫೦ ಲಕ್ಷಗಳಿಗೆ ಹೆಚ್ಚಿಸಲಾಗಿದೆ. ಎಲ್ಲಾ ವರ್ಗದ ಮಹಿಳೆಯರಿಗೆ ವಯೋಮಿತಿ ೧೮ ವರ್ಷಗಳಿಂದ ಗರಿಷ್ಠ ೫೫ ವರ್ಷಗಳು. ಸಾಲ ಮಂಜೂರಾದ ನಂತರ ಹಾಗೂ ಸಾಲ ಬಿಡುಗಡೆ ಮುನ್ನ ಈ ಯೋಜನೆಯ ಅರ್ಹ ಫಲಾನುಭವಿಗಳಿಗೆ ೩ ದಿನಗಳ ಉದ್ಯಮಶೀಲತಾ ತರಬೇತಿ ನೀಡಲಾಗುವುದು. ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಖಾಸಗಿ ಆರ್ಥಿಕ ಸಂಸ್ಥೆಗಳಿಂದ ಪಡೆಯುವ ಸಾಲಕ್ಕೆ ಹೆಚ್ಚಿನ ಬಡ್ಡಿ ನೀಡುವುದನ್ನು ತಪ್ಪಿಸುವುದು ಈ ಯೋಜನೆಯ ಉದ್ದೇಶವಾಗಿದೆ. ೨೦೧೮-೧೯ನೇ ಸಾಲಿನಲ್ಲಿ ರೂ.೨೫೩೦.೦೦

ಲಕ್ಷಗಳ ಅನುದಾನವನ್ನು ಈ ಅನುದಾನದಲ್ಲಿ ಒಟ್ಟು ೨೭೫೫ ಮಹಿಳೆಯರಿಗೆ ಆರ್ಥಿಕ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ. ಮಹಿಳೆಯರು ಸ್ವಂತ ಉದ್ಯೋಗವನ್ನು ಕೈಗೊಳ್ಳುವ ನಿಟ್ಟಿನಲ್ಲಿ ಆರ್ಥಿಕ ಸೌಲಭ್ಯವನ್ನು ಒದಗಿಸುವ ಯೋಜನೆ. ಕರ್ನಾಟಕ ಮಹಿಳಾ ಅಭಿವೃದ್ಧಿ ಪ್ರಾಧಿಕಾರವು ಉದ್ಯೋಗ ಕೈಗೊಂಡ ಮಹಿಳೆಯರಿಗೆ ಪ್ರೋತ್ಸಾಹಧನವನ್ನು ನೀಡುತ್ತದೆ. ವರ್ಷಕ್ಕೆ ರೂ.೪೦,೦೦೦ ಆದಾಯದೊಳಗಿನ ಕುಟುಂಬದ ೧೮ ರಿಂದ ೪೫ವರ್ಷ ಪ್ರಾಯದ ಮಹಿಳೆಯರಿಗೆ ರೂ.೧,೦೦೦೦೦/-ಮೊತ್ತ ಆರ್ಥಿಕ ಸೌಲಭ್ಯ ನೀಡಲಾಗುತ್ತದೆ. ಇದರಲ್ಲಿ ಪರಿಶಿಷ್ಟಜಾತಿ/ಪಂಗಡದ ಮಹಿಳೆಯರಿಗೆ ೩೦% ಅಥವಾ ರೂ.೧೦,೦೦೦/-ಯಾವುದು ಕಡಿಮೆಯೋ ಅದು ಮತ್ತು ಇತರ ಮಹಿಳೆಯರಿಗೆ ೨೦% ಅಥವಾ ರೂ.೭೫೦೦/- ಯಾವುದು ಕಡಿಮೆಯೋ ಅದು ಪ್ರೋತ್ಸಾಹಧನ ಲಭ್ಯವಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂಲಕ ಅರ್ಜಿ ವಿಲೇವಾರಿ ಮಾಡಲಾಗುತ್ತದೆ.

**೪.೯ ಸಾಂತ್ವಾನ ಕೇಂದ್ರ ಮತ್ತು ಜನನಿ ಸುರಕ್ಷಾ ಯೋಜನೆ**

ಅತ್ಯಾಚಾರ, ಕೌಟುಂಬಿಕ ಹಿಂಸೆ, ವರದಕ್ಷಿಣೆ, ಲೈಂಗಿಕ ಕಿರುಕುಳ ಮುಂತಾದ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಸಾಂತ್ವನ ಹಾಗೂ ಪುನರ್ವಸತಿ ಒದಗಿಸುವ ಉದ್ದೇಶವನ್ನು ಸಾಂತ್ವನ ಯೋಜನೆಯು ಹೊಂದಿರುತ್ತದೆ. ಈ ಯೋಜನೆಯಡಿ ಕಾನೂನು ನೆರವು ನೀಡುವುದರೊಂದಿಗೆ ಆರ್ಥಿಕ ನೆರವು, ತಾತ್ಕಾಲಿಕ ಆಶ್ರಯ ಮತ್ತು ರಕ್ಷಣೆ ಹಾಗೂ ಅವರಿಗೆ ಸಾಮಾನ್ಯ ಜೀವನೋಪಾಯಕ್ಕೆ ಅವಶ್ಯವಿರುವ ಕೌಶಲ್ಯಾಭಿವೃದ್ಧಿ ತರಬೇತಿ ಹಾಗೂ ಶಿಕ್ಷಣ ಒದಗಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ೧೯೬ ಸಾಂತ್ವನ ಕೇಂದ್ರಗಳು ಸ್ವಯಂಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಕಾರ್ಯ ನಿರ್ವಹಿಸುತ್ತಿವೆ. ೨೦೧೮-೧೯ನೇ ಸಾಲಿನಲ್ಲಿ ರೂ.೭೨೯.೦೦ ಲಕ್ಷಗಳನ್ನು ಸದರಿ ಯೋಜನೆಗೆ ನಿಗದಿ ಪಡಿಸಲಾಗಿದ್ದು, ರೂ.೫೪೬.೭೫ ಲಕ್ಷಗಳನ್ನು ಜಿಲ್ಲೆಗಳಿಗೆ ಯೋಜನೆಯ ಅನುಷ್ಠಾನಕ್ಕಾಗಿ ಬಿಡುಗಡೆಗೊಳಿಸಿದ್ದು, ನವೆಂಬರ್-೨೦೧೮ರ ಅಂತ್ಯಕ್ಕೆ ರೂ.೨೨೮.೪೧ ಲಕ್ಷಗಳ ವೆಚ್ಚವನ್ನು ಭರಿಸಲಾಗಿದೆ. ಈ ಯೋಜನೆಯು ೨೦೦೦ನೇ ಇಸವಿಯಲ್ಲಿ ಪ್ರಾರಂಭವಾಯಿತು.. ಸ್ವಯಂ ಸೇವಾ ಸಂಸ್ಥೆಗಳು ಈ ಸಾಂತ್ವಾನ ಕೇಂದ್ರಗಳನ್ನು ನಡೆಸುತ್ತಿದ್ದು ೨೪ ಗಂಟೆಗಳ ಸೇವೆಯನ್ನು ಪ್ರತಿ ತಾಲೂಕುಗಳಲ್ಲಿ ನೀಡಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಸಮಿತಿ ಇದ್ದು ಈ ಸಮಿತಿಯ ನಿರ್ದೇಶನದಂತೆ ಕೇಂದ್ರ ಕಾರ್ಯಾಚರಿಸುತ್ತದೆ. ಮಹಿಳೆಗೆ ಅಗತ್ಯವಿದ್ದಾಗ ರೂ ೨೦೦೦/-ದಿಂದ ರೂ.೧೦೦೦೦/-ದವರೆಗೆ ಆರ್ಥಿಕ ನೆರವೂ ನೀಡಲಾಗುತ್ತಿದೆ.

| ಸಾಂತ್ವನ ಯೋಜನೆಯ ಪ್ರಗತಿ | | |
|---|---|---|
| ವರ್ಷ | ಖರ್ಚು(ರೂ. ಲಕ್ಷಗಳಲ್ಲಿ) | ಭೌತಿಕ ಪ್ರಗತಿ (ಕೇಂದ್ರಗಳು) |
| ೨೦೧೪-೧೫ | ೩೫೦.೪೬ | ೧೭೭ |
| ೨೦೧೫-೧೬ | ೫೫೦.೦೦ | ೧೮೭ |
| ೨೦೧೬-೧೭ | ೧೧೬೨.೧೬ | ೧೮೬ |

| | | |
|---|---|---|
| ೨೦೧೭-೧೮ | ೭೭೭.೬೯ | ೧೯೬ |
| ೨೦೧೮-೧೯ | ೨೨೮.೪೧ | ೧೯೬ |
| (ನವೆಂಬರ್-೧೮ರ ಅಂತ್ಯಕ್ಕೆ) | | |

**ಜನನಿ ಸುರಕ್ಷಾ ಯೋಜನೆ**

ಜನನಿ ಸುರಕ್ಷಾ ಯೋಜನೆಯ ಉದ್ದೇಶ, ತಾಯಂದಿರ ಮತ್ತು ಶಿಶು ಮರಣ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸುವುದು. ಹಾಗೆಯೇ ಕಡು ಬಡವರ್ಗಕ್ಕೆ ಸೇರಿದ ಮತ್ತು ಪ.ಜಾತಿ / ಪ.ಪಂಗಡ ಕುಟುಂಬದ ಗರ್ಭಿಣಿಯರು ಆರೋಗ್ಯ ಕೇಂದ್ರ/ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಳ್ಳುವಂತೆ ಪ್ರೋತ್ಸಾಹಿಸುವುದು. ಈ ಯೋಜನೆಯಡಿಯಲ್ಲಿ ಮಾತೃತ್ವ ಸೇವೆಗಳನ್ನು ಖಾತರಿಪಡಿಸುವುದರ ಜೊತೆಗೆ ಆರೋಗ್ಯ ಸಂಸ್ಥೆಗಳಲ್ಲಿ ಮತ್ತು ಮನೆಗಳಲ್ಲಿ ನಡೆಯುವ ಪ್ರಸೂತಿಗೆ ೩ ಪ್ರಸವಪೂರ್ವ ತಪಾಸಣೆಗಳು ಮತ್ತು ಸಾರಿಗೆ ನಗದು ನೆರವನ್ನು ಒದಗಿಸಲಾಗುತ್ತದೆ. ಈ ಯೋಜನೆಯಡಿ ಮನೆಯಲ್ಲಿ ಹೆರಿಗೆಯಾದಲ್ಲಿ ರೂ.೫೦೦/-ಗಳನ್ನು, ಗ್ರಾಮೀಣ ಭಾಗದಲ್ಲಿ ಹೆರಿಗೆಯಾದರೆ ರೂ.೭೦೦/-ಗಳನ್ನು, ನಗರ ಪ್ರದೇಶದಲ್ಲಿ ಆರೋಗ್ಯ ಸಂಸ್ಥೆಗಳಲ್ಲಿ ಹೆರಿಗೆಯಾದರೆ ರೂ.೬೦೦/-ಗಳನ್ನು ಕೊಡಲಾಗುತ್ತದೆ. ಹೆರಿಗೆಯ ಸಮಯದಲ್ಲಿ ಕಾಣಿಸಿಕೊಳ್ಳುವ ಅಪಾಯದ ಅಂಶಗಳನ್ನು (ಸಿಜೇರಿಯನ್ ಹೆರಿಗೆ) ನಿರ್ವಹಣೆಗಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಪರಿಣಿತ ಪ್ರಸೂತಿ ತಜ್ಞ ವೈದ್ಯರು ಲಭ್ಯವಿಲ್ಲದಿದ್ದಲ್ಲಿ ಸಂಸ್ಥೆಗಳು ಖಾಸಗಿ ವಲಯದಲ್ಲಿನ ವೈದ್ಯರ ಸೇವೆಗಳನ್ನು ಪಡೆಯಬಹುದು. ಇಂತಹ ಸೇವೆಗಳನ್ನು ಪಡೆಯುವ ಸಲುವಾಗಿ ರೂ.೧,೫೦೦/-ಗಳ ಸಹಾಯಧನವನ್ನು ಉಪಯೋಗಿಸಬಹುದು. ರಾಷ್ಟ್ರೀಯ ಗ್ರಾಮೀಣ ಆರೊಗ್ಯ ಮಿಷನ್-ಗ್ರಾಮೀಣ ಭಾಗದ ಮಹಿಳೆಯರು ಸುರಕ್ಷಿತ ಹೆರಿಗೆ ಮತ್ತು ಆರೈಕೆ ಮಾಡಿಸಿಕೊಳ್ಳಬೇಕೆಂಬ ಉದ್ದೇಶದಿಂದ ಈ ಯೋಜನೆಯನ್ನು ಜಾರಿಗೆ ತರಲಾಯಿತು.

ಆಶಾ ಕಾರ್ಯಕರ್ತರು ಈ ಯೋಜನೆಯನ್ನು ಗ್ರಾಮೀಣ ಭಾಗದಲ್ಲಿ ಅನುಷ್ಠಾನ ಮಾಡುತ್ತಾರೆ. (ಆಶಾ ಅಂದರೆ, ಅಕ್ರಡಿಯೇಟ್ ಸೋಶಿಯಲ್ ಹೆಲ್ತ್ ಯಾಕ್ಟೀವಿಸ್ಟ್) ಗ್ರಾಮೀಣ ಪ್ರದೇಶದಲ್ಲಿ ಗರ್ಬಿಣಿ ಸ್ತ್ರೀಯರನ್ನು ಗುರುತಿಸಿ ಅವರು ಪ್ರಸವ ಪೂರ್ವ ಆರೈಕೆ ಪಡೆದುಕೊಳ್ಳುವಂತೆ ಮತ್ತು ಹೆರಿಗೆ ಸಂದರ್ಭ ಆಕೆಯ ಸಂಪೂರ್ಣ ಆರೈಕೆ ಹೆರಿಗೆಯ ನಂತರ ಶಿಶು ಹಾಗೂ ತಾಯಿಯ ಆರೋಗ್ಯ ಸ್ಥಿತಿಯ ಬಗ್ಗೆ ನಿಗಾವಹಿಸುವಿಕೆ, ಶಿಶುವಿಗೆ ಲಸಿಕೆ ಹಾಕಿಸುವುದು ಮಗುವಿಗೆ ಎದೆಹಾಲು ಉಣಿಸುವಂತೆ ಮಾಡುವುದು ಆಸ್ಪತ್ರೆಯಲ್ಲಿಯೇ ಹೆರಿಗೆ ಆಗುವಂತೆ ನೋಡಿಕೊಳ್ಳುವುದು ಇತ್ಯಾದಿ ಜವಾಬ್ದಾರಿಗಳು ಆಶಾ ಕಾರ್ಯಕರ್ತೆಯರಿಗಿದೆ. ದೇಶದಲ್ಲಿ ಕೆಲವೊಂದು ರಾಜ್ಯಗಳನ್ನು ಉತ್ತಮ ನಿರ್ವಹಣೆಯ ರಾಜ್ಯಗಳು ಮತ್ತು ಸಾಮಾನ್ಯ ನಿರ್ವಹಣೆಯ ರಾಜ್ಯಗಳು (ಆರೋಗ್ಯ ಕೇಂದ್ರ ಆಸ್ಪತ್ರೆಗಳಲ್ಲಿ ಹೆರಿಗೆ ಆಗುವ ಸಂಖ್ಯೆಗಳ ಆಧಾರದಲ್ಲಿ) ಎಂದು ವಿಂಗಡನೆ ಮಾಡಲಾಗಿದೆ. ಈ ರಾಜ್ಯಗಳಿಗೆ ಸೂಕ್ತವಾದ ಸೌಲಭ್ಯಗಳು ಅನ್ವಯಿಸುತ್ತದೆ.

| ಆರೋಗ್ಯ ಸೇವೆಗಳ ವಿವರಗಳು | | | |
|---|---|---|---|
| ರಾಜ್ಯಗಳು | ಚಿಕಿತ್ಸೆ ಪಡೆದುಕೊಳ್ಳಬೇಕಾದ ಸ್ಥಳ | ಗ್ರಾಮೀಣ ಪ್ರದೇಶದಲ್ಲಾಗುವ ಮೊತ್ತ | ನಗರ ಪ್ರದೇಶದಲ್ಲಾಗುವ ಮೊತ್ತ |
| ಸಾಮಾನ್ಯ ನಿರ್ವಹಣೆ ರಾಜ್ಯಗಳು (LPS) Low Preparing States | ಸರಕಾರಿ ಆಸ್ಪತ್ರೆ ಸಮುದಾಯ, ಆರೋಗ್ಯ ಕೇಂದ್ರ ಜಿಲ್ಲಾ ರಾಜ್ಯ ಆಸ್ಪತ್ರೆಗಳಲ್ಲಿ ಮತ್ತು ಗುರುತಿಸಿದ ಖಾಸಗೀ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಕೊಳ್ಳುವ ಮಹಿಳೆಯರಿಗೆ | ೧,೪೦೦ | ೧,೦೦೦ |
| ಉತ್ತಮ ನಿರ್ವಹಣೆ ರಾಜ್ಯಗಳು (HPS)High Preparing States | ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ೧೯ ವರ್ಷ ಮೇಲ್ಪಟ್ಟ ಮಹಿಳೆಯರಿಗೆ | ೭೦೦ | ೬೦೦ |
| ಸಾಮಾನ್ಯ ಮತ್ತು ಉತ್ತಮ ನಿರ್ವಹಣೆ ರಾಜ್ಯಗಳು ( LPS, HPS) | ಎಲ್ಲಾ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮಹಿಳೆಯರು, ಸರಕಾರಿ ಆಸ್ಪತ್ರೆ, ಪ್ರಾಥಮಿಕ | ೧,೪೦೦ | ೧,೦೦೦ |

ಆಧಾರ: ಆರೋಗ್ಯ ಇಲಾಖೆ (ಕರ್ನಾಟಕ ಆರ್ಥಿಕ ಸಮೀಕ್ಷೆ ೨೦೧೮-೧೯:೬೩೨)

**೪.೫ ರಾಜೀವ್ ಗಾಂಧಿ ಯುವತಿಯರ ಸಬಲೀಕರಣ ಯೋಜನೆ**

ಈ ಯೋಜನೆಯೂ ಅಂಗನವಾಡಿ ಕೇಂದ್ರಗಳ ಮೂಲಕ ಅನುಷ್ಟಾನವಾಗುತ್ತದೆ. ಈ ಯೋಜನೆಯ ಉದ್ದೇಶ ಹದಿಹರೆಯದ ಯುವತಿಯರ ಸ್ವಯಂ ಅಭಿವೃದ್ಧಿ ಮತ್ತು ಸಬಲೀಕರಣ, ಅವರ ಆರೋಗ್ಯ ಮತ್ತು ಪೌಷ್ಟಿಕತೆ, ಸ್ಥಿತಿಗತಿಯನ್ನು ಅಭಿವೃದ್ಧಿ ಪಡಿಸುವುದು. ಆರೋಗ್ಯ, ಸ್ವಚ್ಛತೆ, ನೈರ್ಮಲ್ಯ, ಲೈಂಗಿಕ ವಿಚಾರಗಳ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ಮಾಡಲಾಗುತ್ತಿದೆ. ಅಲ್ಲದೆ ಯುವತಿಯರಲ್ಲಿರುವ ಕೌಶಲ್ಯಗಳನ್ನು ಗುರುತಿಸಿ, ಅದನ್ನು ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಕ್ಕೆ ಜೋಡಿಸಿ ಸ್ವ ಉದ್ಯೋಗಕ್ಕೆ ಪ್ರೇರಣೆ ನೀಡುವುದು. ಶಾಲೆ ಬಿಟ್ಟ ಯುವತಿಯರನ್ನು ಶಾಲೆಗೆ ಸೇರಿಸುವುದು ಹಾಗೂ ಸಾರ್ವಜನಿಕ ಸೇವೆಗಳ ಬಗ್ಗೆಯೂ ಅಂದರೆ ಪ್ರಾಥಮಿಕ ಆರೋಗ್ಯ ಕೇಂದ್ರ, ಬ್ಯಾಕ್, ಅಂಚೆಕಛೇರಿ,

ಪೋಲಿಸ್ ಸ್ಟೇಶ್‌ನಗಳ ಬಗ್ಗೆ ಮಾಹಿತಿ ಒದಗಿಸುವುದು ೧೧ ರಿಂದ ೧೮ ವರ್ಷದ ವಯೋಮಿತಿ ಒಳಗಿನ ಹೆಣ್ಣು ಮಕ್ಕಳು ಈ ಯೋಜನೆಯಡಿಯಲ್ಲಿ ಬರುತ್ತಾರೆ.

**ಈ ಯೋಜನೆಯ ಸೇವೆಗಳು**

೧. ಪೌಷ್ಟಿಕ ಆಹಾರ ಒದಗಿಸುವಿಕೆ

೨. ಕಬ್ಬಿಣ ಮತ್ತು ಪೋಲಿಕ್ ಆಸಿಡ್ ಮಾತ್ರೆಗಳ ಬಳಕೆ

೩. ಉಚಿತ ಆರೋಗ್ಯ ತಪಾಸಣೆ ಮತ್ತು ಮುಂದಿನ ಹಂತದ ಚಿಕಿತ್ಸೆಗಾಗಿ ಕಳುಹಿಸುವುದು

೪. ಪೌಷ್ಟಿಕತೆ ಮತ್ತು ಆರೋಗ್ಯದ ಬಗ್ಗೆ ಶಿಕ್ಷಣ

೫. ಕೌಟುಂಬಿಕ ಕ್ಷೇಮ ವಿಚಾರಗಳ ಬಗ್ಗೆ ಮಗುವಿನ ಆರೈಕೆ ಮತ್ತು ಗೃಹಾಡಳಿತದ ಬಗ್ಗೆ ಸಮಾಲೋಚನೆ/ ಮಾಹಿತಿ ಕಾರ್ಯಕ್ರಮಗಳು

೬. ಜೀವನ ಕೌಶಲ್ಯ ಶಿಕ್ಷಣ ಮತ್ತು ಸಾರ್ವಜನಿಕ ಸೇವೆಗಳನ್ನು ಪಡೆದುಕೊಳ್ಳುವುದು

೭. ೧೬ ವರ್ಷ ಮೇಲ್ಪಟ್ಟ ಹೆಣ್ಣಿಗೆ ಉದ್ಯೋಗ ಪೂರಕ ಕೌಶಲ್ಯಾಭಿವೃದ್ದಿ ತರಬೇತಿಗೆ ಅವಕಾಶ

**ಅನುಷ್ಠಾನ ಮಾದರಿ**

೧. **ಕಿಶೋರಿ ಸಮೂಹ:** ಎಂಬ ತಂಡಗಳನ್ನು ಮಾಡಿ ಸುಮಾರು ೧೫-೨೦ ಹೆಣ್ಣು ಮಕ್ಕಳು ಅಂಗನವಾಡಿಯಲ್ಲಿ ಸೇರುತ್ತಾರೆ. ಅಲ್ಲಿ ಮಾಹಿತಿಗಳನ್ನು ನೀಡಲಾಗುತ್ತಿದೆ

೨. ಇದಕ್ಕಾಗಿ ಪ್ರತಿ ಅಂಗನವಾಡಿ ಕೇಂದ್ರಕ್ಕೆ ತರಬೇತಿ ಕಿಟ್‌ಗಳನ್ನು ನೀಡಲಾಗುತ್ತದೆ

೩. ಕಿಶೋರಿ ದಿನ ಎಂದು ಒಂದು ದಿನ ಆಚರಣೆ ಮಾಡಿ ಉಚಿತ ವೈದ್ಯಕೀಯ ಚಿಕಿತ್ಸೆ ಹಮ್ಮಿಕೊಳ್ಳುತ್ತಾರೆ

೪. ಆರೋಗ್ಯ ಕಾರ್ಡಗಳನ್ನು ನೀಡಲಾಗುತ್ತದೆ

೫. ಜಿಲ್ಲಾ ಯೋಜನಾಧಿಕಾರಿ ಈ ಕಾರ್ಯಕ್ರಮವನ್ನು ಅನುಷ್ಠಾನಿಸಿ ಮಕ್ಕಳ ಅಭಿವೃದ್ದಿ ಅಧಿಕಾರಿ ತಾಲೂಕು ಮಟ್ಟದಲ್ಲಿ ಅನುಷ್ಠಾನಿಸುತ್ತಾರೆ. ಅಂಗನವಾಡಿ ಕಾರ್ಯಕರ್ತೆ ಸಂಯೋಜಿಕಿಯಾಗಿರುತ್ತಾರೆ.

### ೪.೬ ಮಹಿಳಾ ಪ್ರಸೂತಿ ಆರೈಕೆ ಯೋಜನೆ

ಈ ಯೋಜನೆಯು ರಾಜ್ಯ ಸರಕಾರದ ತಾಯಿ ಭಾಗ್ಯ ಯೋಜನೆಯ ಪ್ರಮುಖ ಭಾಗವಾಗಿದ್ದು, ಗರ್ಭಿಣಿಗೆ ಉತ್ತಮ ಪೌಷ್ಠಿಕ ಆಹಾರ ಪಡೆದು ಆರೋಗ್ಯವಂತಳಾಗಿ ಸುಸೂತ್ರವಾಗಿ ಹೆರಿಗೆಯಾಗಬೇಕೆಂದು ೬-೯ ನೇ ತಿಂಗಳ ಗರ್ಭಾವಸ್ಥೆಯಲ್ಲಿರುವಾಗ ರೂ ೧೦೦೦/-ವನ್ನು ಒಂದು ಬಾರಿಗೆ ಮತ್ತು ಸರಕಾರಿ ಆಸ್ಪತ್ರೆಯಲ್ಲಿ ಹೆರಿಗೆಯಾದ ೪೮ಗಂಟೆಯೊಳಗಾಗಿ ಎರಡನೇ ಬಾರಿ ರೂ ೧೦೦೦/-ಗಳಂತೆ ಒಟ್ಟು ೨೦೦೦/-ರೂ.ಗಳ ಆರ್ಥಿಕ ಸಹಾಯಧನ ನೀಡುವ ಕಾರ್ಯಕ್ರಮವಾಗಿದೆ. ಈ ಯೋಜನೆಯಲ್ಲಿ ಗರ್ಭಿಣಿ ಮತ್ತು ಬಾಣಂತಿಯಲ್ಲಿ ಕಂಡುಬರುವ ಅಪೌಷ್ಠಿಕತೆಯನ್ನು ನೀಗಿಸುವುದು,

ಕೂಲಿ–ನಾಲಿ ಮಾಡಿ ಬದುಕುವ ಗರ್ಭಿಣಿ ಕೆಲವು ದಿನ ಕೂಲಿ ಮಾಡಲು ಸಾಧ್ಯವಾಗದೆ ಇದ್ದರೂ ಉಪವಾಸ ಇರಬಾರದೆಂದು ಹಾಗೂ ತನ್ನಮೂಲಕ ತಾಯಿ ಮತ್ತು ಶಿಶು ಮರಣ ಪ್ರಮಾಣವನ್ನು ಕಡಿಮೆ ಮಾಡುವ ಆಶಯ ಹೊಂದಿದೆ. ಈ ಯೋಜನೆಯು ಎರಡು ಜೀವಂತ ಜನನಗಳಿಗೆ ಮಾತ್ರ ಸೀಮಿತ ಮತ್ತು ಪರಿಶಿಷ್ಟಜಾತಿ/ಪಂಗಡ ಹಾಗೂ ಬಡತನ ರೇಖೆಗಿಂತ ಕೆಳಗಿರುವ ಆದಾಯದ ಗರ್ಭೀಣಿಯರಿಗೆ ಮಾತ್ರ.

**೪.೭ ದೇವದಾಸಿಯರ ಪುನರ್ವಸತಿ ಯೋಜನೆ**

ದೇವದಾಸಿ ಪದ್ಧತಿಯು ಮಹಿಳಾ ವರ್ಗಕ್ಕೆ ಕಳಂಕ ತರುವ ಒಂದು ಅನಿಷ್ಟ ಪದ್ಧತಿ ಎಂದು ಗುರುತಿಸಿ ಇದರ ನಿರ್ಮೂಲನೆಗೆ ಕ್ರಮ ವಹಿಸಲಾಗಿದೆ. ಮಾಜಿ ದೇವದಾಸಿಯರ ಪುನರ್ವಸತಿಗಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯಡಿ ರಾಜ್ಯದ ೧೪ ಜಿಲ್ಲೆಗಳಾದ ಬೆಳಗಾವಿ, ವಿಜಯಪುರ, ಬಾಗಲಕೋಟೆ, ಬಳ್ಳಾರಿ, ಕೊಪ್ಪಳ, ರಾಯಚೂರು, ಕಲಬುರ್ಗಿ, ಧಾರವಾಡ, ಹಾವೇರಿ, ಶಿವಮೊಗ್ಗ, ಚಿತ್ರದುರ್ಗ, ಯಾದಗಿರಿ, ದಾವಣಗೆರೆ ಮತ್ತು ಗದಗ ಜಿಲ್ಲೆಗಳಲ್ಲಿ ಮಾಜಿ ದೇವದಾಸಿ ಮಹಿಳೆಯರಿಗೆ ಪಶು ಸಂಗೋಪನೆ, ಸಣ್ಣ ಅಂಗಡಿ ಇತ್ಯಾದಿ ವಿವಿಧ ಆದಾಯ ಉತ್ಪನ್ನಕರ ಚಟುವಟಿಕೆಗಳನ್ನು ಕೈಗೊಂಡು ಸ್ವಾವಲಂಬಿಗಳಾಗಿಸಲು ನಿಗಮದಿಂದ ನೇರವಾಗಿ ರೂ.೫೦,೦೦೦/– ಗಳ (ರೂ.೨೫,೦೦೦/– ಗಳ ಸಾಲ ಹಾಗೂ ರೂ.೨೫,೦೦೦/–ಗಳ ಪ್ರೋತ್ಸಾಹಧನ) ಆರ್ಥಿಕ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ಇದಲ್ಲದೆ, ಈ ಪದ್ಧತಿಯನ್ನು ಹೋಗಲಾಡಿಸಲು ಬೀದಿ ನಾಟಕಗಳನ್ನು, ಜಾತ್ರಾ ಜಾಗೃತಿ ಹಾಗೂ ಕಾನೂನು ಮತ್ತು ಆರೋಗ್ಯ ಶಿಬಿರಗಳನ್ನು ಸಹ ಕೈಗೊಳ್ಳಲಾಗಿದೆ. ೨೦೧೮–೧೯ನೇ ಸಾಲಿನಲ್ಲಿ ರೂ.೭೦೦.೦೦ ಲಕ್ಷಗಳ ಅನುದಾನ ನಿಗದಿಪಡಿಸಿದ್ದು, ೧೦೪೪ ಮಹಿಳೆಯರಿಗೆ ಆದಾಯ ಉತ್ಪನ್ನಕರ ಚಟುವಟಿಕೆಗಳನ್ನು ಕೈಗೊಳ್ಳಲು ತಲಾ ರೂ.೨೫೦೦೦/–ಗಳ ಪ್ರೋತ್ಸಾಹಧನ ಮತ್ತು ರೂ.೨೫,೦೦೦/–ಗಳ ಸಾಲದ ರೂಪದಲ್ಲಿ ಆರ್ಥಿಕ ಸಹಾಯ ನೀಡಲು ಹಾಗೂ ಜಾಗೃತಿ ಕಾರ್ಯಕ್ರಮಗಳು ಆರೋಗ್ಯ ಹಾಗೂ ಕಾನೂನು ಶಿಬಿರ, ಆಡಳಿತಾತ್ಮಕ ವೆಚ್ಚ ಭರಿಸಲು ಈ ಅನುದಾನವನ್ನು ಬಳಸಿಕೊಳ್ಳಲಾಗುವುದು. ಈ ಯೋಜನೆಯಡಿ ನವೆಂಬರ್ ೨೦೧೮ರ ಅಂತ್ಯದವರೆಗೆ ರೂ. ೧೯೫.೪೮ ಲಕ್ಷಗಳನ್ನು ಖರ್ಚು ಮಾಡಲಾಗಿದೆ.

| ದೇವದಾಸಿ ಪುನರ್ವಸತಿ ಯೋಜನೆಯಡಿ ಪ್ರಗತಿ (ರೂ.ಲಕ್ಷಗಳಲ್ಲಿ) | | | | |
|---|---|---|---|---|
| ವರ್ಷ | ಗುರಿ | | ಸಾಧನೆ | |
| | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) |
| ೨೦೧೪–೧೫ | ೨೫೬೫ | ೫೦೦.೦೦ | ೨೩೬೧ | ೫೦೦.೦೦ |
| ೨೦೧೫–೧೬ | ౩೦೭೮ | ೮೫೦.೦೦ | ౩೦೭೮ | ೮೫೦.೦೦ |

| | | | |
|---|---|---|---|
| ೨೦೧೬-೧೭ | ೨೭೫೪ ೮೦೦.೦೦ | ೨೭೫೪ | ೮೦೦.೦೦ |
| ೨೦೧೭-೧೮ | ೧೦೬೩ ೭೦೦.೦೦ | ೧೦೬೩ | ೭೦೦.೦೦ |
| *೨೦೧೮-೧೯ | ೧೦೪೪ ೭೦೦.೦೦ | - | ೧೯೫.೪೮ ** |

* ೨೦೧೮ರ ನವೆಂಬರ್ ಅಂತ್ಯದವರೆಗೆ

** ಜಾತ್ರಾ ಜಾಗೃತಿ, ಬೀದಿನಾಟಕ, ಕಾನೂನು ಹಾಗೂ ಆರೋಗ್ಯ ಶಿಬಿರಗಳನ್ನು ಹಮ್ಮಿಕೊಳ್ಳಲು ಹಾಗೂ ಆಡಳಿತಾತ್ಮಕ ವೆಚ್ಚಕ್ಕಾಗಿ ರೂ. ೧೯೫.೪೮ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. (ಕರ್ನಾಟಕ ಆರ್ಥಿಕ ಸಮೀಕ್ಷೆ ೨೦೧೮-೧೯:೬೯)

ದೇವದಾಸಿಯರಿಗೆ ಪುನರ್ವಸತಿ ಯೋಜನೆಗಳು ರೂಪಗೊಂಡಾಗ ದೇವದಾಸಿ ಮಹಿಳೆಯರ ಸದ್ಯದ ಜೀವನೋಪಾಯ ಸ್ಥಿತಿಯನ್ನು ಬದಲಾಯಿಸಿ ಉತ್ತಮ ಸ್ಥಿತಿಯ ಜೀವನೋಪಾಯ ಕಲ್ಪಿಸುವ ಉದ್ದೇಶ ಹೊಂದಿತ್ತು. ಅಂದರೆ ವ್ಯವಸಾಯಕ್ಕೆ ಭೂಮಿ, ವಸತಿಗೆ ಮನೆ, ಕೈಗೊಂದು ಕಸುಬು, ಮಕ್ಕಳಿಗೊಂದು ಶಾಲೆ, ಇವುಗಳು ದೇವದಾಸಿಯರ ಬದುಕನ್ನು ರೂಪಿಸಲು ಉತ್ತಮ ಮಾರ್ಗಗಳು ಎಂಬುದರಲ್ಲಿ ಅನುಮಾನವಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿಯೂ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ದೇವದಾಸಿ ಪುನರ್ವಸತಿ ಯೋಜನಾ ಕಛೇರಿ ಪ್ರಾರಂಭಿದ್ದಾರೆ. "ಕರ್ನಾಟಕ ರಾಜ್ಯದಲ್ಲಿ ೧೯೯೦-೯೧ನೇ ಸಾಲಿನಲ್ಲಿ ದೇವಾದಾಸಿಯರ ಪುನರ್ವಸತಿಗಾಗಿ ೫ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು ಅದಕ್ಕಾಗಿ ೧.೫ ಕೋಟಿ ರೂ ವೆಚ್ಚ ಮಾಡಲಾಗಿದೆ. ಬಳ್ಳಾರಿ ರಾಯಚೂರು, ಧಾರವಾಡ, ಬೆಳಗಾವಿ, ವಿಜಯಪುರ, ಜಿಲ್ಲೆಗಳು ಈ ಯೋಜನೆಯ ವ್ಯಾಪ್ತಿಯಡಿಗೆ ಸೇರಿದವು" (ಪ್ರಸನ್ನ ಕುಮಾರ್:೨೦೧೪:೨೦೧). ದೇವದಾಸಿಯರಿಗೆ ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಟ್ರೈನಿಂಗ್ ನೀಡುವುದು ಮತ್ತು ಪುರ್ನವಸತಿ ಕಲ್ಪಿಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದು ಹೇಳಬಹುದು. ಕರ್ನಾಟಕ ರಾಜ್ಯ ಮಹಿಳಾ ಭಿವೃದ್ಧಿ ನಿಗಮ, ದೇವದಾಸಿಯರ ಪುನರ್ವಸತಿ ಯೋಜನೆ ಘಟಕದಿಂದ ವಿಶೇಷವಾಗಿ ದೇವದಾಸಿ ಪುನರ್ವಸತಿ ಕಾರ್ಯಕ್ರಮಗಳ ವಿವರ ಈ ಮುಂದಿನಂತಿದೆ.

- ಪ್ರತಿ ಜಿಲ್ಲೆಯಲ್ಲಿ ಯೋಜನಾ ಅನುಷ್ಠಾನ ಕಛೇರಿಗಳನ್ನು ತೆರೆಯಲಾಗಿದೆ.
- ದೇವದಾಸಿ ಪದ್ಧತಿಯನ್ನು ಸಂಪೂರ್ಣ ತಡೆಗಟ್ಟುವಿಕೆ ಹಾಗೂ ಮಾಜಿ ದೇವದಾಸಿಯರ ಆರ್ಥಿಕ ಮತ್ತು ಸಾಮಾಜಿಕ ಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ ನಿಗಮದ ಮುಖ್ಯ ಕಾರ್ಯಕ್ಷೇತ್ರವಾಗಿದೆ.
- ಈ ಪದ್ಧತಿಯ ವಿರುದ್ಧ ವ್ಯಾಪಕ ಪ್ರಚಾರ, ಜನಾಂದೋಲನ, ಮಾಜಿ ದೇವದಾಸಿಯರ ಸ್ವಸಹಾಯ ಗುಂಪುಗಳ ರಚನೆ, ಜಾಗೃತಿ ಶಿಬಿರ, ಜಾತ್ರಾ ಜಾಗೃತಿ ಶಿಬಿರ, ಆರೋಗ್ಯ ತಪಾಸಣೆ ಮುಂತಾದ ಸಾಮಾಜಿಕ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸುವಿಕೆ.

- ಆದಾಯ ಉತ್ಪನ್ನಕರ ಚಟುವಟಿಕೆಗಳಿಗಾಗಿ ಯೋಜನಾ ವೆಚ್ಚ ರೂ. ೨೦,೦೦೦ ರೂಗಳಲ್ಲಿ ಶೇ.೫೦% ರಷ್ಟು ನಿಗಮದಿಂದ ಸಹಾಯಧನ ಹಾಗೂ ಉಳಿದ ಮೊತ್ತ ಬ್ಯಾಂಕ್ ಮುಖಾಂತರ ಸಾಲ ನೀಡಲಾಗುವುದು.
- ೨೦೦೭-೦೮ ನೇ ಸಾಲಿನ ಸಮೀಕ್ಷಾ ಪಟ್ಟಿಯು ಸರ್ಕಾರದ ಹಂತದಲ್ಲಿ ಅನುಮೋದನೆಗೊಂಡ ನಂತರ ಹಂತ ಹಂತವಾಗಿ ಮಾಜಿ ದೇವದಾಸಿಯರಿಗೆ ಆದಾಯ ಉತ್ಪನ್ನಕರ ಚಟುವಟಿಕೆಗಳಿಗೆ ಸಹಾಯಧನ, ಮಾಸಾಶನ ಮತ್ತು ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ.
- ಕಿರುಸಾಲ ಯೋಜನೆ: ಮಾಜಿ ದೇವದಾಸಿ ಮಹಿಳೆಯರಿಂದ ರಚಿತವಾದ ಸ್ವಸಹಾಯ ಗುಂಪಿನ ಸದಸ್ಯರಿಗೆ ರೂ.೫೦೦೦ (ಗರಿಷ್ಠ) ಶೇ. ೬ರ ಬಡ್ಡಿದರದಲ್ಲಿ ೨೪ ತಿಂಗಳುಗಳ ಮರುಪಾವತಿಯ ಷರತ್ತಿನೊಂದಿಗೆ ನೀಡಲಾಗುವುದು.
- ಮಾಜಿ ದೇವದಾಸಿ ಮಹಿಳೆಯರಿಗೆ ಮಾಸಾಶನ: ಮಾಜಿ ದೇವದಾಸಿಯರ ಪುನರ್ವಸತಿಗಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ದೇವದಾಸಿ ಪುನರ್ವಸತಿ ಕಾರ್ಯಕ್ರಮ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ೨೦೦೭-೦೮ನೇ ಸಾಲಿನ ಸಮೀಕ್ಷೆಯಲ್ಲಿ ಗುರುತಿಸಿದ ದೇವದಾಸಿಯ ಮಹಿಳೆಯರ ಪೈಕಿ ೪೫ ವರ್ಷ ವಯಸ್ಸು ಮೀರಿದ ಮಾಜಿ ದೇವದಾಸಿಯರಿಗೆ ಮಾತ್ರ ಪ್ರತಿ ತಿಂಗಳು ೪೦೦ ರೂಪಾಯಿಗಳ ಮಾಸಾಶನವನ್ನು ನೀಡಲಾಗುತಿತ್ತು. ನಂತರ ೧೦೦೦ ರೂಗಳನ್ನು ನೀಡುತ್ತಿದ್ದರು. ಪ್ರಸ್ತುತದಲ್ಲಿ ೧೫೦೦ ರೂಗಳನ್ನು ನೀಡುತ್ತಿದ್ದಾರೆ.
- ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ನಿರ್ಮಾಣ: ಕರ್ನಾಟಕ ರಾಜ್ಯ ಅಭಿವೃದ್ಧಿ ನಿಗಮವು ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಉತ್ತರ ಕರ್ನಾಟಕದ ೧೨ ಜಿಲ್ಲೆಗಳಲ್ಲಿ ವಸತಿ ರಹಿತ ಮಾಜಿ ದೇವದಾಸಿ ಮಹಿಳೆಯರಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ವಸತಿ ನಿರ್ಮಾಣ ಯೋಜನೆಯನ್ನು ೨೦೦೯-೧೦ನೇ ಸಾಲಿನಿಂದ ಘಟಕ ವೆಚ್ಚ ೪೦,೦೦೦ ರೂಪಾಯಿಗಳಲ್ಲಿ ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ನಿವೇಶನ ಇದ್ದವರಿಗೆ ಮನೆಗಳನ್ನು ನಿರ್ಮಿಸಿಕೊಡಲಾಗುತ್ತದೆ."(ರಾಧ ಟಿ:೨೦೧೮:೨೩೭-೩೩೮).

| ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ನಿರ್ಮಾಣ ಯೋಜನೆಯ ಪ್ರಗತಿ (ರೂ.ಲಕ್ಷಗಳಲ್ಲಿ) | | | | |
|---|---|---|---|---|
| ವರ್ಷ | ಗುರಿ | | ಸಾಧನೆ | |
| | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) |
| ೨೦೧೪-೧೫ | ೯೧೭ | ೧೧೦೦.೦೦ | ೯೧೭ | ೧೧೦೦.೦೦ |
| ೨೦೧೫-೧೬ | ೧೦೦೦ | ೧೨೦೦.೦೦ | ೭೮೮ | ೧೨೦೦.೦೦ |
| ೨೦೧೬-೧೭ | ೧೨೮೬ | ೨೦೦೦.೦೦ | ೧೨೮೬ | ೨೦೦೦.೦೦ |

| | |
|---|---|
| ೨೦೧೭-೧೮ ೧೨೯೫ ೨೦೦೦.೦೦ | ೧೨೯೫ ೨೦೦೦.೦೦ |
| *೨೦೧೮-೧೯ ೮೮೮ ೧೫೮೫.೦೦ | ೨೨೨ ೩೯೬.೨೫ |

*೨೦೧೮ರ ನವೆಂಬರ್ ಅಂತ್ಯದವರೆಗೆ.(ಕರ್ನಾಟಕ ಆರ್ಥಿಕ ಸಮೀಕ್ಷೆ ೨೦೧೮-೧೯ : ೭೦೦).

**೪.೮ ಪರಿಶಿಷ್ಟ ವರ್ಗದವರ ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ**

೧. "ಪರಿಶಿಷ್ಟ ವರ್ಗದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪ್ರತಿಷ್ಠಿತ ಶಾಲೆಗಳಿಗೆ ದಾಖಲು ಮಾಡುವುದು ಆಯಾ ಜಿಲ್ಲೆಗಳಲ್ಲಿರುವ ಪ್ರತಿಷ್ಠಿತ ವಸತಿ/ವಸತಿಯೇತರ ಶಾಲೆಗಳಿಗೆ ಪ್ರತಿಭಾನ್ವಿತ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳನ್ನು ೫ನೇ ತರಗತಿಯಿಂದ ಆಯ್ಕೆ ಮಾಡಿ ಸೇರಿಸಲಾಗುತ್ತಿದೆ. ಈ ಯೋಜನೆಯಡಿ ಪ್ರತಿಯೊಬ್ಬ ವಿದ್ಯಾರ್ಥಿಗೆ ತಗಲುವ ಶುಲ್ಕ ಹಾಗೂ ಇತರೆ ನಿರ್ವಹಣಾ ವೆಚ್ಚವನ್ನು ಇಲಾಖೆಯಿಂದ ಭರಿಸಲಾಗುತ್ತಿದೆ.

**೨. ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ:** ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು, ಶಾಲೆಗಳನ್ನು ಮಧ್ಯಂತರದಲ್ಲಿ ಬಿಡುವುದನ್ನು ಕಡಿಮೆ ಮಾಡಲು ೧ ರಿಂದ ೫ ನೇ ತರಗತಿ ಬಾಲಕರಿಗೆ ವಾರ್ಷಿಕ ತಲಾ ರೂ.೧೦೦೦/-, ೬ ರಿಂದ ೭ನೇ ಬಾಲಕರಿಗೆ ರೂ.೧೧೫೦/- ಹಾಗೂ ೮ನೇ ತರಗತಿ ಬಾಲಕರಿಗೆ ರೂ.೧೨೫೦/- ಮತ್ತು ೧ ರಿಂದ ೫ನೇ ತರಗತಿ ಬಾಲಕಿಯರಿಗೆ ರೂ.೧೧೦೦/-, ೬ ರಿಂದ ೭ನೇ ತರಗತಿ ಬಾಲಕಿಯರಿಗೆ ರೂ.೧೨೫೦/- ಮತ್ತು ೮ನೇ ತರಗತಿ ಬಾಲಕಿಯರಿಗೆ ರೂ.೧೩೫೦/- ರಂತೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗುತ್ತಿದೆ.

**೩. ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ:** ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವೃತ್ತಿಪರ ಕೋರ್ಸ್‌ಗಳನ್ನು ಒಳಗೊಂಡಂತೆ ವಿವಿಧ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಅವರ ಕುಟುಂಬದ ವಾರ್ಷಿಕ ವರಮಾನ ರೂ.೨.೫೦ ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ, ಅಂತಹ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲಾಗುವುದು. ಇದು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳು ಕಾಲೇಜು ಶಿಕ್ಷಣವನ್ನು ಪಡೆಯಲು ಪ್ರೋತ್ಸಾಹ ನೀಡಲಾಗಿದೆ.

**೪. ಪ್ರೋತ್ಸಾಹಧನ ನೀಡುವುದು:** ಈ ಯೋಜನೆಯಡಿ ೧೦ನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.೬೦ಕ್ಕಿಂತಲೂ ಹೆಚ್ಚು ಅಂಕ ಪಡೆದಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ರೂ.೭,೦೦೦/- ಮತ್ತು ಶೇ.೭೫ಕ್ಕಿಂತಲೂ ಹಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ರೂ.೧೫,೦೦೦/-ದಂತೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. ಇದೊಂದು ಮುಖ್ಯವಾದ ಪ್ರೋತ್ಸಾಹಧನವಾಗಿದ್ದು, ವಿದ್ಯಾರ್ಥಿಗಳಿಗೆ ಕಾಲೇಜು ಶಿಕ್ಷಣವನ್ನು ಪಡೆಯಲು ಅನುಕೂಲವಾಗಿದೆ. ಈ ಯೋಜನೆಯನ್ನು ೨೦೦೯-೧೦ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗಿದೆ.

೫. **ಪುಸ್ತಕ ಭಂಡಾರ ಸ್ಥಾಪನೆ:** ವೈದ್ಯಕೀಯ, ತಾಂತ್ರಿಕ, ಕೃಷಿ, ಪಶುವೈದ್ಯಕೀಯ, ಕಾನೂನು ಮುಂತಾದ ವೃತ್ತಿಪರ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಅವರ ಪಠ್ಯ ಕ್ರಮಕ್ಕೆ ಅನುಗುಣವಾಗಿ ಇರುವ ಪಠ್ಯ ಪುಸ್ತಕಗಳ ಬೆಲೆ ದುಬಾರಿ ಇರುವುದರಿಂದ, ಅವುಗಳನ್ನು ಖರೀದಿಸಲು ಆಸಕ್ತಿ ಇರುವ ವಿದ್ಯಾರ್ಥಿಗಳ ಉಪಯೋಗಕ್ಕೆ ಪುಸ್ತಕ ಬಂಡಾರವನ್ನು ಸ್ಥಾಪಿಸಲಾಗಿದೆ. ಈ ಕಾರ್ಯಕ್ರಮವನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ."(ಕರ್ನಾಟಕ ಆರ್ಥಿಕ ಸಮೀಕ್ಷೆ ೨೦೧೮-೧೯:೭೧೫-೭೧೮)

**ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ**

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಸದರಿ ಯೋಜನೆಯಡಿ ೬ ಸೇವೆಗಳನ್ನು ನೀಡಲಾಗುತ್ತಿದೆ. ಅವುಗಳೆಂದರೆ ಪೂರಕ ಪೌಷ್ಟಿಕ ಆಹಾರ, ಚುಚ್ಚುಮದ್ದು, ಆರೋಗ್ಯ ತಪಾಸಣೆ, ಮಾಹಿತಿ ಸೇವೆ, ತಾಯಂದಿರಿಗೆ ಆರೋಗ್ಯ ಮತ್ತು ಪೌಷ್ಟಿಕ ಶಿಕ್ಷಣ ಹಾಗೂ ೩-೬ ವರ್ಷದ ಮಕ್ಕಳಿಗೆ ಶಾಲಾ ಪೂರ್ವ ಶಿಕ್ಷಣ ನೀಡಲಾಗುತ್ತಿದೆ. ಈ ಯೋಜನೆಯು ೧೯೭೫ ರಿಂದ ಜಾರಿಯಲ್ಲಿರುತ್ತದೆ. ಈ ಯೋಜನೆಯಡಿ ೬೨೫೮೦ ಅಂಗನವಾಡಿ ಕೇಂದ್ರಗಳು ಮತ್ತು ೩೩೩೧ ಮಿನಿ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

೧. **ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮ:** ಪೂರಕ ಪೌಷ್ಟಿಕ ಆಹಾರಕ್ಕಾಗಿ ರಾಜ್ಯ ಸರ್ಕಾರ ವೆಚ್ಚ ಮಾಡುವ ಮೊತ್ತದ ಶೇ. ೫೦ ರಷ್ಟನ್ನು ಕೇಂದ್ರ ಸರ್ಕಾರವು ಮರುಪಾವತಿಸುತ್ತದೆ. ಫಲಾನುಭವಿಗಳು ಪ್ರತಿ ದಿನ ಮನೆಯಲ್ಲಿ ಸೇವಿಸುವ ಆಹಾರಕ್ಕೆ ಪೂರಕವಾಗಿ ಪರಿಷ್ಕೃತ ಮಾರ್ಗಸೂಚಿಯಂತೆ ೦-೬ ವರ್ಷದ ಮಕ್ಕಳಿಗೆ ೫೦೦ ಕ್ಯಾಲೋರಿಗಳನ್ನು, ೧೨-೧೫ ಗ್ರಾಂ ಪ್ರೋಟೀನ್, ಗರ್ಭಿಣಿ/ಬಾಣಂತಿ/ಪ್ರಾಯಪೂರ್ವ ಬಾಲಕಿಯರಿಗೆ ೬೦೦ ಕ್ಯಾಲೋರಿಗಳನ್ನು ಮತ್ತು ೧೮-೨೦ ಗ್ರಾಂ ಪ್ರೋಟೀನ್ ಅಲ್ಲದೆ ತೀವ್ರ ಅಪೌಷ್ಟಿಕತೆಯುಳ್ಳ ಮಕ್ಕಳಿಗೆ ೮೦೦ ಕ್ಯಾಲೋರಿಗಳನ್ನು ಮತ್ತು ೨೦-೨೫ ಗ್ರಾಂ ಪ್ರೋಟೀನ್ ನೀಡುವ ಉದ್ದೇಶದಿಂದ ಈ ಯೋಜನೆಯಡಿ ಪೂರಕ ಪೌಷ್ಟಿಕ ಅಹಾರ ನೀಡಲಾಗುತ್ತಿದೆ. ಯೋಜನೆಯ ಮಾರ್ಗಸೂಚಿಯಂತೆ ವರ್ಷದಲ್ಲಿ ೩೦೦ ದಿನಗಳಿಗೆ ಪೂರಕ ಪೌಷ್ಟಿಕ ಆಹಾರ ನೀಡಲಾಗುತ್ತಿದೆ.

೨. **ಕ್ಷೀರಭಾಗ್ಯ ಯೋಜನೆ:** ಕ್ಷೀರಭಾಗ್ಯ ಯೋಜನೆಯಡಿ ರಾಜ್ಯದ ಅಂಗನವಾಡಿ ಮಕ್ಕಳಿಗೆ ವಾರದಲ್ಲಿ ೨ ದಿನ ನೀಡಲಾಗುತ್ತಿದ್ದ ಹಾಲನ್ನು ಜುಲೈ-೨೦೧೭ ರಿಂದ ವಾರದಲ್ಲಿ ೫ ದಿನಕ್ಕೆ (೧೫ ಗ್ರಾಂ ಹಾಲಿನ ಪುಡಿಯಿಂದ ೧೫೦ ಎಂ.ಎಲ್ ಹಾಲು ಹಾಗೂ ೧೦ ಗ್ರಾಂ ಸಕ್ಕರೆ ಒಳಗೊಂಡ ಕೆನೆಭರಿತ ಹಾಲನ್ನು) ನೀಡಲು ಆದೇಶ ಹೊರಡಿಸಿದೆ. ೩೫.೯೨ ಲಕ್ಷ ಫಲಾನುಭವಿಗಳು ಯೋಜನೆಯ ಸೌಲಭ್ಯವನ್ನು ಪಡೆದಿರುತ್ತಾರೆ.

೩. **ಸೃಷ್ಟಿ ಯೋಜನೆ:** ಈ ಯೋಜನೆಯಡಿ ೩-೬ ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ ೨ ದಿನ ಮೊಟ್ಟೆಯನ್ನು ಜೂನ್-೧೭ ರಿಂದ ನೀಡಲಾಗುತ್ತಿದೆ. ನವೆಂಬರ್-೨೦೧೮ರ ಅಂತ್ಯಕ್ಕೆ ೧೪.೧೨ ಲಕ್ಷ ಫಲಾನುಭವಿಗಳು ಯೋಜನೆಯ ಸೌಲಭ್ಯವನ್ನು ಪಡೆದಿರುತ್ತಾರೆ.

**೪. ತೀವ್ರ ಅಪೌಷ್ಠಿಕ ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರ:** ೬ ತಿಂಗಳಿಂದ ೩ ವರ್ಷದ ತೀವ್ರ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ ೩ ದಿನ ಮೊಟ್ಟೆ, ೩-೬ ವರ್ಷದ ತೀವ್ರ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ ೫ ದಿನ ಮೊಟ್ಟೆ ನೀಡಲಾಗುತ್ತಿದೆ. ಮೊಟ್ಟೆ ತಿನ್ನದ ಮಕ್ಕಳಿಗೆ ವಾರದ ೬ ದಿನ ಹಾಲು ನೀಡಲಾಗುತ್ತಿದೆ.

**೫. ಮಾತೃಪೂರ್ಣ ಯೋಜನೆ:** ೨೦೧೭ನೇ ಅಕ್ಟೋಬರ್ ೨ ರಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಾತೃಪೂರ್ಣ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಸದರಿ ಯೋಜನೆಗೆ ರೂ.೨೦೨ ಕೋಟಿ ಅನುದಾನವನ್ನು ಕರ್ನಾಟಕ ಸರ್ಕಾರವು ನಿಗದಿಪಡಿಸಲಾಗಿರುತ್ತದೆ. ಸದರಿ ಯೋಜನೆಯಲ್ಲಿ ೧೦.೨೩ ಲಕ್ಷ ಫಲಾನುಭವಿಗಳ ಗುರಿ ಹೊಂದಲಾಗಿದೆ. ಸದರಿ ಯೋಜನೆಯಲ್ಲಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಅಂಗನವಾಡಿ ಕೇಂದ್ರದಲ್ಲಿಯೇ ಬಿಸಿಯೂಟವನ್ನು ರೂ.೨೧/-ಕ್ಕೆ ನೀಡಲಾಗುತ್ತಿದೆ. ಅದರಲ್ಲಿ ರೂ.೧೧.೫೦/- ಗಳು ರಾಜ್ಯದ ಪಾಲಾಗಿದ್ದು, ಉಳಿದ ರೂ.೯.೫೦/- ಗಳು ಕೇಂದ್ರದ ಪ್ರಾಯೋಜಿತ ಐಸಿಡಿಎಸ್ ಕಾರ್ಯಕ್ರಮದಡಿಯಲ್ಲಿ ಭರಿಸಲಾಗುತ್ತಿದೆ. ನವೆಂಬರ್-೨೦೧೮ರ ಅಂತ್ಯಕ್ಕೆ ೭.೮೩ ಲಕ್ಷ ಫಲಾನುಭವಿಗಳು ಸೌಲಭ್ಯವನ್ನು ಪಡೆದಿರುತ್ತಾರೆ.

**೬. ಆರೋಗ್ಯ ಮತ್ತು ಪೌಷ್ಠಿಕಾಂಶ ಶಿಕ್ಷಣ:** ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಆರೋಗ್ಯ ಮತ್ತು ಪೌಷ್ಠಿಕ ಶಿಕ್ಷಣ ನೀಡಲು ಕೈಪಿಡಿ ಹಾಗೂ ಫ್ಲಿಪ್ ಚಾರ್ಟ್‌ಗಳನ್ನು ಬಳಸಲಾಗುತ್ತಿದೆ.

**೭ ಶಾಲಾಪೂರ್ವ ಶಿಕ್ಷಣ:** ಪರಿಣಾಮಕಾರಿಯಾಗಿ ಶಾಲಾ ಪೂರ್ವ ಶಿಕ್ಷಣವನ್ನುಅಳವಡಿಸಲು ೪೨ ವಿಷಯವುಳ್ಳ "ಚಿಲಿಪಿಲಿ" ಪುಸ್ತಕವನ್ನು ಕನ್ನಡ ಹಾಗೂ ಉರ್ದು ಭಾಷೆಯಲ್ಲಿ ಅಭಿವೃದ್ಧಿಪಡಿಸಿ ಶಾಲಾ ಪೂರ್ವ ಚಟುವಟಿಕೆ ಸಮಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಬೋಧನೆಗಾಗಿ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡಲಾಗಿದೆ. ಮೌಲ್ಯಮಾಪನ ವ್ಯವಸ್ಥೆಯಲ್ಲಿ ಸುಧಾರಣೆ ಫಲಾನುಭವಿಗಳ ಹಾಜರಾತಿಯನ್ನು ಎಸ್.ಎಂ.ಎಸ್ ಮುಖಾಂತರ ಪಡೆಯಲು ಕ್ರಮಕೈಗೊಳ್ಳಲಾಗಿದೆ.

**ಈ ಯೋಜನೆಯ ಉದ್ದೇಶ**

೧. ಆರು ವರ್ಷದೊಳಗಿನ ಮಕ್ಕಳ ಆರೋಗ್ಯ ಮತ್ತು ಪೌಷ್ಠಿಕತೆಯನ್ನು ಕಾಪಾಡುವುದು

೨. ಮಗುವಿನ ದೈಹಿಕ, ಬೌದ್ಧಿಕ, ಮಾನಸಿಕ, ಮತ್ತು ಭಾವನಾತ್ಮಕ ಬೆಳವಣಿಗೆ ಸಮಗ್ರವಾಗುವಂತೆ ಮಾಡುವುದು

೩. ಶಿಶುಗಳ ಮರಣ ಅನಾರೋಗ್ಯ, ಅಪೌಷ್ಠಿಕತೆಯ ಸಮಸ್ಯೆಗಳ ನಿವಾರಣೆ ಮತ್ತು ಶಾಲೆ ಬಿಡುವ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡುವುದು

೪. ಮಕ್ಕಳ ಅಭಿವೃದ್ದಿಗೆ ಇರುವಂತಹ ವಿವಿಧ ಇಲಾಖೆಗಳ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನವಾಗುವಂತೆ ನೋಡುವುದು

೫. ಮುಖ್ಯವಾಗಿ ತಾಯಂದಿರು ತಮ್ಮ ಆರೋಗ್ಯ ನಿರ್ವಹಣೆ ಮತ್ತು ಮಕ್ಕಳ ಆರೋಗ್ಯಕ್ಕೆ ಪ್ರಾಮುಖ್ಯತೆ ನೀಡುವಂತೆ ಮಾಹಿತಿ ಕಾರ್ಯಕ್ರಮಗಳ ಆಯೋಜನೆ ಮಾಡುವುದು.

| ಸೇವೆಗಳು | | |
|---|---|---|
| ಸೇವೇಗಳು | ಯಾರಿಗೆ? | ಸೇವೆ ನೀಡುವವರು |
| ಪೌಷ್ಠಿಕ ಆಹಾರ ಒದಗಿಸುವಿಕೆ | ಆರು ವರ್ಷದೊಳಗಿನ ಮಕ್ಕಳಿಗೆ ಗರ್ಬಿಣಿ ಮತ್ತು ಹಾಲುಣಿಸುವ ತಾಯಂದಿರರಿಗೆ, ಹದಿಹರೆಯದ ಹೆಣ್ಣು ಮಕ್ಕಳಿಗೆ | ಅಂಗನವಾಡಿ ಕಾರ್ಯಕರ್ತೆಯರು |
| ಲಸಿಕೆಗಳು | ಆರು ವರ್ಷದೊಳಗಿನ ಮಕ್ಕಳು ಮತ್ತು ಗರ್ಬಿಣಿ ಮಹಿಳೆಯರು | ಎ.ಎನ್.ಎಂ |
| ಉಚಿತ ಆರೋಗ್ಯ ತಪಾಸಣೆ | ಆರು ವರ್ಷದೊಳಗಿನ ಮಕ್ಕಳು ಮತ್ತು ಗರ್ಬಿಣಿ ಮಹಿಳೆ, ಹಾಲುಣಿಸುವ ತಾಯಿ | ಡಾಕ್ಟರ್/ ಎ.ಎನ್.ಎಂ ಕಾರ್ಯಕರ್ತೆಯರು/ ಅಂಗನವಾಡಿ ಕಾರ್ಯಕರ್ತೆಯರು |
| ರೆಫರ | ಹದಿಹರೆಯದ ಹೆಣ್ಣು ಮಕ್ಕಳು | ಡಾಕ್ಟರ್/ ಎ.ಎನ್.ಎಂ / ಅಂಗನವಾಡಿ ಕಾರ್ಯಕರ್ತೆಯರು |
| ಪ್ರಾಥಮಿಕ ಶಾಲೆ/ ವಿದ್ಯಾಭ್ಯಾಸ | ೩–೬ ವರ್ಷದ ಹೆಣ್ಣು ಮಕ್ಕಳಿಗೆ | ಅಂಗನವಾಡಿ ಕಾರ್ಯಕರ್ತೆಯರು |
| ಪೌಷ್ಠಿಕತೆ ಮತ್ತು ಆರೋಗ್ಯ | ಶಿಕ್ಷಣ ೧೫ರಿಂದ ೪೫ವರ್ಷದ ಮಹಿಳೆಯರು, ಹದಿಹರೆಯದ ಹೆಣ್ಣುಮಕ್ಕಳು | ಅಂಗನವಾಡಿ ಕಾರ್ಯಕರ್ತೆಯರು |

ಆಧಾರ: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು, ೨೦೧೭

ಈ ಸೇವೆಗಳ ಅನುಷ್ಠಾನದಲ್ಲಿ ಹಲವಾರು ಮಾಹಿತಿ ಕಾರ್ಯಕ್ರಮಗಳು ಉಚಿತ ಆರೋಗ್ಯ ತಪಸಣಾ ಶಿಬಿರಗಳು ಗರ್ಬಿಣಿ/ ಬಾಣಂತಿಯರ ಆರೈಕೆ, ಶಿಶುಗಳ ಆರೈಕೆಗೆ ಕ್ರಮಗಳನ್ನು ಮಾಡಲಾಗುತ್ತಿದೆ. ಅಂಗನವಾಡಿ ಕೇಂದ್ರಗಳ ಮೂಲಕ ಸಮಗ್ರ ಅನುಷ್ಠಾನ ಮಾಡಲಾಗುತ್ತಿದೆ. ಗ್ರಾಮೀಣ ನಗರ ಪ್ರದೇಶಗಳ ಕುಟುಂಬಗಳು ಸೌಲಭ್ಯ ಪಡೆದುಕೊಳ್ಳಬಹುದಾಗಿದೆ.

### ೪.೯ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

ರಾಜ್ಯದಲ್ಲಿನ ಪರಿಶಿಷ್ಟ ಪಂಗಡದವರ ಆರ್ಥಿಕ ಅಭಿವೃದ್ಧಿಗಾಗಿ ವಿವಿಧ ಆರ್ಥಿಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ಸರ್ಕಾರವು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವನ್ನು ದಿನಾಂಕ: ೨೭.೦೫.೨೦೦೬ರಂದು ಸ್ಥಾಪಿಸಿತು. ಇದರಲ್ಲಿ ಅಭಿವೃದ್ಧಿ ಯೋಜನೆಗಳಾದ ಸ್ವಯಂ ಉದ್ಯೋಗ ಯೋಜನೆ, ಭೂ ಒಡೆತನ ಯೋಜನೆ, ಗಂಗಾ ಕಲ್ಯಾಣ ಯೋಜನೆ ಮುಂತಾದ ಯೋಜನೆಗಳನ್ನು ರಾಜ್ಯದಲ್ಲಿನ ಪರಿಶಿಷ್ಟ ಪಂಗಡದ ಜನರ ಆರ್ಥಿಕ ಅಭಿವೃದ್ಧಿಗಾಗಿ ಅನುಷ್ಠಾಗೊಳಿಸಲಾಗುತ್ತಿದೆ. ಸದರಿ ಯೋಜನೆಗಳ ಸಂಕ್ಷಿಪ್ತ ಪ್ರಗತಿ ಹಾಗೂ ಯೋಜನೆಗಳ ಮುಖ್ಯಾಂಶಗಳನ್ನು ಈ ಕೆಳಗಿನಂತೆ ತೋರಿಸಿದೆ.

**೧. ಸ್ವಯಂ ಉದ್ಯೋಗ ಯೋಜನೆ**

**ಅ. ಸ್ವಯಂ ಉದ್ಯೋಗ ಯೋಜನೆ:** ನಿರುದ್ಯೋಗಿ ಪರಿಶಿಷ್ಟ ಪಂಗಡದವರು ಸ್ವಯಂ ಉದ್ಯೋಗ ಚಟುವಟಿಕೆಗಳಾದ ಹೈನುಗಾರಿಕೆ, ಸಣ್ಣ ವ್ಯಾಪಾರ, ದಿನಸಿ ಅಂಗಡಿ, ಸೈಕಲ್ ಷಾಪ್, ಸಣ್ಣ ಕೈಗಾರಿಕೆ ಸೇವೆ ಮತ್ತು ವ್ಯಾಪಾರ ಇತ್ಯಾದಿಗಳನ್ನು ಕೈಗೊಳ್ಳಲು ಬ್ಯಾಂಕುಗಳ ಸಹಯೋಗದೊಂದಿಗೆ ರೂ.೧.೦೦ ಲಕ್ಷದವರೆಗಿನ ಘಟಕಗಳಿಗೆ ಸೌಲಭ್ಯ ಒದಗಿಸಲಾಗುವುದು. ಇದರಲ್ಲಿ ಶೇ.೫೦ರಷ್ಟು ಅಥವಾ ಗರಿಷ್ಠ ರೂ.೩೫,೦೦೦/- ಸಹಾಯಧನ ಇದ್ದು ಉಳಿದ ಮೊತ್ತ ಬ್ಯಾಂಕುಗಳ ಸಾಲವಿರುತ್ತದೆ.

| ಸ್ವಯಂ ಉದ್ಯೋಗ ಯೋಜನೆಯ ಪ್ರಗತಿ (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ವರ್ಷ | ಒಟ್ಟು ಫಲಾನುಭವಿಗಳ ಸಂಖ್ಯೆ | ಸಹಾಯ ಧನ | ಬ್ಯಾಂಕ್ ಸಾಲ | ಒಟ್ಟು |
| ೨೦೧೫-೧೬ | ೩೦೧೧ | ೯೬೪.೬೭ | ೧೫೦೨.೧೪ | ೨೪೬೬.೮೧ |
| ೨೦೧೬-೧೭ | ೫೧೫೫ | ೧೪೭೨.೦೦ | ೨೨೯೪.೩೨ | ೩೭೬೬.೩೨ |
| ೨೦೧೭-೧೮ | ೨೪೬೨ | ೮೩೨.೮೪ | ೧೨೯೮.೫೦ | ೨೧೩೧.೩೪ |
| ೨೦೧೮-೧೯* | ೧೩೭೬ | ೪೮೨.೫೧ | ೭೬೬.೯೪ | ೧೨೪೯.೪೫ |
| (ನವೆಂಬರ್-೧೮ರ ಅಂತ್ಯಕ್ಕೆ) | | | | |

**ಆ. ಸ್ವಯಂ ಉದ್ಯೋಗ ಯೋಜನೆ (ವೃತ್ತಿ ಕೌಶಲ್ಯ):** ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿನ ವೃತ್ತಿ ಕೌಶಲ್ಯ ತರಬೇತಿ ಪಡೆದ ಪರಿಶಿಷ್ಟ ಪಂಗಡಗಳ ನಿರುದ್ಯೋಗಿ ಯುವಕರಿಗೆ ಬ್ಯಾಂಕ್ ಸಹಯೋಗದೊಂದಿಗೆ ರೂ.೫.೦೦ ಲಕ್ಷಗಳವರೆಗಿನ ಘಟಕ ವೆಚ್ಚವನ್ನು ಹೊಂದಿರುವ ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು ರೂ.೨.೫೦ ಲಕ್ಷ ಅಥವಾ ಶೇ.೫೦ ರಷ್ಟು ಯೋಜನಾ ವೆಚ್ಚ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸಹಾಯಧನ ನೀಡಲಾಗುವುದು.

| ಸ್ವಯಂಉದ್ಯೋಗ(ವೃತ್ತಿಕೌಶಲ್ಯ)ಯೋಜನೆಯಪ್ರಗತಿ (ರೂ.ಲಕ್ಷಗಳಲ್ಲಿ) | | | | |
|---|---|---|---|---|
| ವರ್ಷ | ಒಟ್ಟು ಫಲಾನುಭವಿಗಳ ಸಂಖ್ಯೆ | ಸಹಾಯ ಧನ | ಬ್ಯಾಂಕ್ ಸಾಲ | ಒಟ್ಟು |
| ೨೦೧೭-೧೮ | ೪೮೬ | ೧೨೧೫.೦೦ | - | ೧೨೧೫.೦೦ |
| ೨೦೧೮-೧೯* | ೧೦ | ೨೫.೦೦ | - | ೨೫.೦೦ |

(ನವೆಂಬರ್-೧೮ರ ಅಂತ್ಯಕ್ಕೆ)

**ಇ. ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ:** ನಿರುದ್ಯೋಗಿ ಪರಿಶಿಷ್ಟ ಪಂಗಡದವರು ಇಚ್ಛಿಸುವ ವಿವಿಧ ಉದ್ಯಮ ಶೀಲತಾ ಅಭಿವೃದ್ಧಿ ಚಟುವಟಿಕೆಗಳಾದ ಸಣ್ಣ ಕೈಗಾರಿಕೆ, ಟಾಟಾ ಇಂಡಿಕಾ, ಆಟೋರಿಕ್ಷಾ ಮತ್ತು ಟ್ರ್ಯಾಕ್ಟರ್, ಹಂದಿಸಾಕಾಣಿಕೆ, ಕೋಳಿಸಾಕಾಣಿಕೆ, ಕುರಿಸಾಕಾಣಿಕೆ, ಚರ್ಮಗಾರಿಕೆ, ವಕೀಲರ ಕಛೇರಿ, ಬ್ಯೂಟಿಪಾರ್ಲರ್, ರೆಡಿಮೇಡ್ ಗಾರ್ಮೆಂಟ್ಸ್, ಡಿ.ಟಿ.ಪಿ.ಸೆಂಟರ್ ಇತ್ಯಾದಿ ಉದ್ದಿಮೆ ಸ್ಥಾಪಿಸುವ ಉದ್ದೇಶಗಳಿಗೆ ಘಟಕ ವೆಚ್ಚ ಮತ್ತು ಸಹಾಯಧನವನ್ನು ನಿಗದಿಪಡಿಸಲಾಗಿದೆ.

| ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆಗೆ ಸಹಾಯಧನ | | |
|---|---|---|
| ಘಟಕ ವೆಚ್ಚ | ಸಹಾಯಧನ | ಷರಾ |
| ರೂ.೧.೦೦ ಲಕ್ಷದಿಂದ ರೂ.೫.೦೦ ಲಕ್ಷಗಳವರೆಗೆ | ಘಟಕ ವೆಚ್ಚದ ೭೦% ಭಾಗ ಗರಿಷ್ಠ ರೂ.೩.೫೦ ಲಕ್ಷ | ಉಳಿದ ಮೊತ್ತ ಬ್ಯಾಂಕ್ ಸಾಲ |
| ರೂ.೫.೦೦ ಲಕ್ಷಗಳಿಂದ ರೂ.೧೦.೦೦ ಲಕ್ಷಗಳವರೆಗೆ | ಘಟಕ ವೆಚ್ಚದ ೬೦% ಭಾಗ ಗರಿಷ್ಠ ರೂ.೫.೦೦ ಲಕ್ಷ | ಉಳಿದ ಮೊತ್ತ ಬ್ಯಾಂಕ್ ಸಾಲ |
| ರೂ.೧೦.೦೦ ಲಕ್ಷಗಳಿಂದ ರೂ.೨೦.೦೦ ಲಕ್ಷಗಳವರೆಗೆ | ಘಟಕ ವೆಚ್ಚದ ೫೦% ಭಾಗ ಗರಿಷ್ಠ ರೂ.೫.೦೦ ಲಕ್ಷ | ಉಳಿದ ಮೊತ್ತ ಬ್ಯಾಂಕ್ ಸಾಲ |

(ನವೆಂಬರ್-೧೮ರ ಅಂತ್ಯಕ್ಕೆ)

**ಉ. ಮೈಕ್ರೋ ಕ್ರೆಡಿಟ್ ಯೋಜನೆ:** ಈ ಯೋಜನೆಯಡಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ಪರಿಶಿಷ್ಟ ಪಂಗಡದ ಜನರಿಗೆ ಸಣ್ಣ ಪ್ರಮಾಣದ ವ್ಯಾಪಾರ ಚಟುವಟಿಕೆಗಳನ್ನು ಕೈಗೊಳ್ಳಲು ಸ್ವ ಸಹಾಯ ಗುಂಪುಗಳ ಮೂಲಕ ಪ್ರತಿಯೊಬ್ಬ ಫಲಾಪೇಕ್ಷಿಗೆ ಗರಿಷ್ಠ ಮೊತ್ತ ರೂ.೧೫,೦೦೦/-ಗಳನ್ನು ಮಂಜೂರು ಮಾಡಲಾಗಿದೆ. ಇದರಲ್ಲಿ ಗರಿಷ್ಠ ರೂ.೧೦,೦೦೦/-ಸಹಾಯಧನ ಮತ್ತು ರೂ.೫,೦೦೦/ಗಳ ಅಂಚಿನ ಹಣ ಸಾಲ ರೂಪದಲ್ಲಿ ನಿಗಮದಿಂದ ಮಂಜೂರು ಮಾಡಲಾಗುವುದು. ಅಂಚಿನ ಹಣಕ್ಕೆ ಶೇ.೪ರಷ್ಟು ಬಡ್ಡಿ ಪಾವತಿ ಮಾಡಬೇಕಾಗಿದೆ. ಸಾಲ ಮತ್ತು ಬಡ್ಡಿಯನ್ನು ೩ ವರ್ಷಗಳಲ್ಲಿ ಮಾಸಿಕ/ತ್ರೈಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗಿರುತ್ತದೆ.

| ಮೈಕ್ರೋ ಕ್ರೆಡಿಟ್ ಯೋಜನೆಯ ಪ್ರಗತಿ (ರೂ.ಲಕ್ಷಗಳಲ್ಲಿ) | | | | |
|---|---|---|---|---|
| ವರ್ಷ | ಒಟ್ಟು ಫಲಾನುಭವಿಗಳ ಸಂಖ್ಯೆ | ಸಹಾಯ ಧನ | ಅಂಚಿನಹಣ | ಒಟ್ಟು |
| ೨೦೧೫-೧೬ | ३೪೭೪ | ३೪೭.೪೦ | ೧೭३.೭೦ | ೫೨೧.೧೦ |
| ೨೦೧೬-೧೭ | ೧೭೭೬೮ | ೧೭೮೨.३೮ | ೮೯೧.೧೯ | ೨೬೭३.೫೭ |
| ೨೦೧೭-೧೮ | ೫೭೫೦ | ೫೭೫.೦೦ | ೨३೪.३೭ | ೮೦೯.३೭ |
| ೨೦೧೮-೧೯* | ३೨೨೧ | ३೯೦.೯೪ | ೯೨.೨೫ | ೪೮३.೧೯ |

(ನವೆಂಬರ್-೧೮ರ ಅಂತ್ಯಕ್ಕೆ)

**ಊ. ಭೂ ಒಡೆತನ ಯೋಜನೆ :** ಈ ಯೋಜನೆಯಡಿ ಭೂ ರಹಿತ ಕೃಷಿ ಕಾರ್ಮಿಕ ಕುಟುಂಬದ ಮಹಿಳಾ ಫಲಾಪೇಕ್ಷಿಗೆ ಘಟಕ ವೆಚ್ಚ ರೂ.೧೫.೦೦ ಲಕ್ಷದಲ್ಲಿ ಖುಷ್ಕಿ/ತರಿ/ಭಾಗಾಯ್ತು ಜಮೀನು ಗರಿಷ್ಠ ಎಷ್ಟು ವಿಸ್ತೀರ್ಣ ಬರುತ್ತದೆಯೋ ಅಷ್ಟು ಜಮೀನನ್ನು ಖರೀದಿಗೆ ಕೊಡಲಾಗುವುದು. ಘಟಕ ವೆಚ್ಚ ರೂ. ೧೫.೦೦ ಲಕ್ಷಗಳಾಗಿದ್ದು, ಶೇ. ೫೦ ಭಾಗ ಸಹಾಯಧನ ಮತ್ತು ಶೇ.೫೦ ಭಾಗ ಅವಧಿ ಸಾಲವಾಗಿರುತ್ತದೆ. ಅವಧಿ ಸಾಲದ ಮೊತ್ತಕ್ಕೆ ಶೇ.೬ ರಂತೆ ಬಡ್ಡಿಯನ್ನು ನಿಗದಿಗೊಳಿಸಿದೆ. ಅವಧಿ ಸಾಲವನ್ನು ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ ಪಡೆದು ಮಂಜೂರಾತಿ ನೀಡಲಾಗಿದೆ. ಜಮೀನಿನ ದರ ಮಾರ್ಗಸೂಚಿ ದರದ ಮೂರು ಪಟ್ಟು ಮೀರಿದಲ್ಲಿ ಅಂತಹ ಪ್ರಕರಣಗಳನ್ನು ಸೂಕ್ತ ಸಮರ್ಥನೆಯೊಂದಿಗೆ ಸರ್ಕಾರಕ್ಕೆ ಸಲ್ಲಿಸಿದ್ದಲ್ಲಿ ಅಂತಹ ಪ್ರಕರಣಗಳನ್ನು ಪರಿಶೀಸಲಾಗುವುದು. ಆದರೆ ಸದರಿ ಪ್ರಕರಣಗಳಲ್ಲಿ ಜಮೀನು ಖರೀದಿಸುವ ಒಟ್ಟು ವೆಚ್ಚವು ರೂ.೧೫.೦೦ ಲಕ್ಷಗಳಿಗೆ ಮೀರಬಾರದು. ಇದರಲ್ಲಿ ರೂ.೭.೫೦ ಲಕ್ಷ ಸಹಾಯಧನ ಮತ್ತು ರೂ.೭.೫೦ ಲಕ್ಷ ಸಾಲ ಒಳಗೊಂಡಿರುತ್ತದೆ.

| ಭೂ ಒಡೆತನ ಯೋಜನೆಯ ಪ್ರಗತಿ (ರೂ.ಲಕ್ಷಗಳಲ್ಲಿ) | | | | |
|---|---|---|---|---|
| ವರ್ಷ | ಒಟ್ಟು ಫಲಾನುಭವಿಗಳ ಸಂಖ್ಯೆ | ಸಹಾಯ ಧನ | ಅವಧಿಸಾಲ | ಒಟ್ಟು |
| ೨೦೧೫-೧೬ | ೧೪೨ | ೪೭೯.೦೪ | ೪೭೯.೦೪ | ೯೫೮.೦೮ |
| ೨೦೧೬-೧೭ | ३೮೬ | ೧೪೨೬.३೮ | ೧೪೨೬.३೮ | ೨೮೫೨.೭೬ |
| ೨೦೧೭-೧೮ | ೧೨೫ | ೪೭೦.೨೨ | ೪೮೫.೯३ | ೯೫೬.೧೫ |
| ೨೦೧೮-೧೯* | ೯೨ | ೨೨೭.೪೦ | ೨೨೭.೪೦ | ೪೫೪.೮೦ |

(ನವೆಂಬರ್-೧೮ರ ಅಂತ್ಯಕ್ಕೆ)

## ಮಹಿಳಾ ಆಯೋಗ

ಸಿ ಎಸ್ ಡಬ್ಲ್ಯೂ ಐ (ಭಾರತದ ಮಹಿಳೆಯರ ಸ್ಥಿತಿಗತಿ ಅಧ್ಯಯನ ಸಮಿತಿ)ಯು ಮಹಿಳೆಯರ ಸಮಾಜೋ ಆರ್ಥಿಕ ಅಭಿವೃದ್ಧಿಯನ್ನು ತೀವ್ರಗೊಳಿಸಲು ರಾಷ್ಟ್ರೀಯ ಮಹಿಳಾ ಆಯೋಗವನ್ನು ರಚಿಸಲು ಸಮಿತಿಯು ಶಿಫಾರಸ್ಸು ಮಾಡಿತು. ಸಮಿತಿಯ ಶಿಫಾರಸ್ಸನ್ನು ಪರಿಗಣಿಸಿದ ಕೇಂದ್ರ ಸರ್ಕಾರವು ಮಹಿಳೆಯರ ಸಬಲೀಕರಣವನ್ನು ದೃಷ್ಟಿಯಲ್ಲಿರಿಸಿಕೊಂಡು ಮಹಿಳೆಯರಿಗೇ ವಿಶೇಷ ಆಯೋಗವೊಂದನ್ನು ರಾಷ್ಟ್ರೀಯ ಮಹಿಳಾ ಆಯೋಗ ಕಾಯ್ದೆ (೧೯೯೦ರ ಕಾಯ್ದೆ ಸಂಖ್ಯೆ ೨೦)ಯ ಅಡಿಯಲ್ಲಿ ಜನವರಿ ೧೯೯೨ರಲ್ಲಿ ಮಹಿಳಾ ಆಯೋಗವನ್ನು ರಚಿಸಲಾಯಿತು. ಈ ಆಯೋಗದ ಮುಖ್ಯ ಉದ್ದೇಶಗಳೆಂದರೆ ಮಹಿಳೆಯರ ಸಂವಿಧಾನಿಕ ಮತ್ತು ನ್ಯಾಯಬದ್ಧ ರಕ್ಷಣೆಗಳ ಪರಿಶೀಲನೆ, ಪರಿಹಾರಿಕ ನ್ಯಾಯ ಕ್ರಮಗಳನ್ನು ಶಿಫಾರಸ್ಸು ಮಾಡುವುದು ಕುಂದುಕೊರತೆಗಳ ಪರಿಹಾರವನ್ನು ಸುಗಮಗೊಳಿಸುವುದು ಹಾಗೂ ಮಹಿಳೆಯರ ಮೇಲೆ ಪರಿಣಾಮ ಬೀರುವ ಎಲ್ಲಾ ನೀತಿ ಸಂಬಂಧಿತ ವಿಷಯಗಳನ್ನು ಕುರಿತು ಸರ್ಕಾರಕ್ಕೆ ಸಲಹೆ ನೀಡುವ ಜವಾಬ್ದಾರಿಯನ್ನು ಗಮನದಲ್ಲಿಟ್ಟುಕೊಂಡು ಮಹಿಳೆಯರ ಸ್ಥಿತಿಯನ್ನು ಉತ್ತಮಪಡಿಸಲು ಆಯೋಗವು ಕ್ರಮಗಳನ್ನು ಕೈಗೊಳ್ಳುವ ಉದ್ದೇಶವನ್ನು ಹೊಂದಿದೆ. ಮಹಿಳೆಯರ ದೂರುಗಳನ್ನು ಸ್ವೀಕರಿಸಿ ನ್ಯಾಯ ಒದಗಿಸಲು ಕ್ರಮ ಜರುಗಿಸುವುದು. ಬಾಲ್ಯ ವಿವಾಹಗಳಂತಹ ವಿಷಯಗಳನ್ನು ತೆಗೆದುಕೊಂಡು ಜನಜಾಗೃತಿ ಮೂಡಿಸುವುದು. ವರದಕ್ಷಿಣೆ ತಡೆಗಟ್ಟುವಿಕೆ ಕಾಯ್ದೆಯನ್ನು ಜಾರಿಗೊಳಿಸುವುದು. ಮಹಿಳೆಯರ ಆರ್ಥಿಕ ಸಶಕ್ತತೆಗಾಗಿ ಕಾರ್ಯಾಗಾರ, ಸಮಾಲೋಚನೆ ನಡೆಸುವುದು, ಹೆಣ್ಣುಮಕ್ಕಳ ಭ್ರೂಣಹತ್ಯೆ, ಮಹಿಳಾ ದೌರ್ಜನ್ಯಗಳ ಕುರಿತು ಆಂದೋಲನ ಕೈಗೊಳ್ಳುವುದು. ಈ ಆಯೋಗದ ಮುಖ್ಯ ಉದ್ದೇಶವು ಮಹಿಳೆಯರ ಮೇಲೆ ಪರಿಣಾಮ ಬೀರುವ ಎಲ್ಲಾ ನೀತಿ ಸಂಬಂಧಿತ ವಿಷಯಗಳ ಕುರಿತು ಸರ್ಕಾರಕ್ಕೆ ಸಲಹೆ ಮಾಡುವುದಾಗಿದೆ. ಆಯೋಗವು ಸುಗಮವಾಗಿ ಕಾರ್ಯನಿರ್ವಹಿಸುವ ಸಲುವಾಗಿ ಒಬ್ಬ ಅಧ್ಯಕ್ಷರನ್ನು ಹಾಗೂ ಐದು ಜನ ನಾಮನಿರ್ದೇಶಿತ ಸದಸ್ಯರನ್ನು ಆಯ್ಕೆ ಮಾಡುತ್ತದೆ. ಈ ಸದಸ್ಯರು ಬಹುತೇಕ ಕಾನೂನು ತಿಳುವಳಿಕೆ ಇರುವವರು, ಸಾರ್ವಜನಿಕ ವಲಯದೊಳಗೆ ಕೆಲಸ ನಿರ್ವಹಿಸುವ ಸ್ವಯಂ ಸೇವಾ ಸಂಸ್ಥೆಗಳ ಸದಸ್ಯರು ಇತ್ಯಾದಿ ವಿಷಯ ತಜ್ಞರನ್ನೇ ಸದಸ್ಯರಾಗಿ ನೇಮಿಸಲಾಗುವುದು. ಇದರಲ್ಲಿ ಒಬ್ಬ ಪರಿಶಿಷ್ಟ ಜಾತಿ, ಒಬ್ಬ ಪರಿಶಿಷ್ಟ ಪಂಗಡದ ಸದಸ್ಯರಿರಬೇಕೆಂಬ ನಿಯಮವಿದೆ.

## ಆಯೋಗದ ಜವಾಬ್ದಾರಿಗಳು

ಆಯೋಗವು ಮುಖ್ಯವಾಗಿ ಸಂವಿಧಾನಿಕವಾಗಿ ಮಹಿಳೆಯರಿಗೆ ನೀಡಲಾಗಿರುವ ಸಂರಕ್ಷಣೆಗಳನ್ನು ಕುರಿತಂತೆ ತನಿಖೆ ಹಾಗೂ ಪರೀಕ್ಷೆ ನಡೆಸುವುದು ಹಾಗೂ ಮಹಿಳಾ ಸಂರಕ್ಷಣೆಯ ಕುರಿತು ಆಯೋಗವು ನಿರ್ವಹಿಸಿದ ಕಾರ್ಯ ಚಟುವಟಿಕೆಗಳ ಬಗ್ಗೆ ಆಯೋಗವು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸುವುದು. ಮಹಿಳೆಯರ ಸ್ಥಿತಿಗತಿಗಳ ಸುಧಾರಿಸುವ ನಿಟ್ಟಿನಲ್ಲಿ ಈ ಸಂರಕ್ಷಣೆಗಳ ಪರಿಣಾಮಕಾರಿ ಅನುಷ್ಠಾನಗೊಳಿಸುವುದು. ಹಾಗೆಯೇ ಕಾನೂನಾತ್ಮಕ ಲೋಪದೋಷಗಳನ್ನು ಹೋಗಲಾಡಿಸಲು ತಿದ್ದುಪಡಿಗಳನ್ನು ಶಿಫಾರಸ್ಸು ಮಾಡಲು ವರದಿಗಳನ್ನು ಮಾಡುವುದು.

**ಆಯೋಗವು ಈ ಕೆಳಕಂಡ ದೂರುಗಳನ್ನು ಸ್ವೀಕರಿಸಿ ಸೂಕ್ತ ಕ್ರಮ ಕೈಗೊಳ್ಳಬಹುದು**

೧ ಮಹಿಳಾ ಹಕ್ಕುಗಳನ್ನು ಕಿತ್ತುಕೊಳ್ಳುವುದು

೨ ಮಹಿಳಾ ಸಂರಕ್ಷಣೆಗಾಗಿ ರಚಿಸಿರುವ ಕಾನೂನು ಉಲ್ಲಂಘಿಸಿದರೆ

೩ ಮಹಿಳಾ ಸಾಂತ್ವಾನ, ಕಲ್ಯಾಣ ಖಾತ್ರಿ ಪಡಿಸುವ ನೀತಿ ನಿರ್ಧಾರ, ಮಾರ್ಗದರ್ಶನ ಅಥವಾ ಸೂಚನೆಗಳನ್ನು ಅನುಸರಿಸದಿದ್ದಲ್ಲಿ ಹಾಗೂ ಇಂತಹ ವಿಷಯಗಳಿಂದ ಉದ್ಭವಿಸುವ ಸಮಸ್ಯೆಗಳನ್ನು ಸಮರ್ಪಕ ಅಧಿಕಾರಿಗಳ ಸಹಕಾರದೊಂದಿಗೆ ಸರಿಪಡಿಸುವುದು ಹಾಗೂ ಕಾರ್ಯತಂತ್ರಗಳನ್ನು ಶಿಫಾರಸ್ಸು ಮಾಡುವುದು

೪ ಮಹಿಳಾ ಶಿಕ್ಷಣ, ಗುಲಾಮಗಿರಿ, ಆರೋಗ್ಯ ತೊಂದರೆ ನೀಗಿಸಲು ಇರುವ ಅಡೆತಡೆಗಳನ್ನು ಗುರುತಿಸಿ ಅವುಗಳ ನಿವಾರಣೆಗೆ ಶಿಫಾರಸ್ಸು ಮಾಡುವುದು, ಮಹಿಳಾ ಸಮಾಜೋ ಆರ್ಥಿಕ ಅಭಿವೃದ್ಧಿಗಾಗಿ ಯೋಜನಾ ಪ್ರಕ್ರಿಯೆಗಳಲ್ಲಿ ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡುವುದು, ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳ ಮೌಲ್ಯಮಾಪನ ಮಾಡುವುದು, ಮಹಿಳಾ ಜೈಲು, ರಿಮ್ಯಾಂಡ್ ಹೋಮ್‌ಗಳ ನ್ಯೂನ್ಯತೆಗಳನ್ನು ಗಮನಿಸಿ ಸರಿಪಡಿಸುವುದು, ಮಹಿಳಾ ಸಮೂಹಕ್ಕೆ ಪರಿಣಾಮ ಬೀರುವ ವಿಷಯಗಳ ನ್ಯಾಯಾಲಯ ವ್ಯವಹಾರಗಳ ವೆಚ್ಚವನ್ನು ಭರಿಸುವುದು, ಮಹಿಳೆಯರ ತೊಂದರೆಗಳ ಕುರಿತು ಸರ್ಕಾರಕ್ಕೆ ಕಾಲಕಾಲಕ್ಕೆ ವರದಿ ಮಾಡುವುದು. ಈ ಯೋಜನೆಯನ್ನು ಕರ್ನಾಟಕ ಸರ್ಕಾರವು ರಚಿಸಿ ಅನುಷ್ಠಾನಗೊಳಿಸಿದೆ. ಇಂದು ಸಾರ್ವಜನಿಕ ವಲಯದಲ್ಲಿ ಮಹಿಳೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸಾರ್ವಜನಿಕ ವಲಯದಲ್ಲಿ ಪುರುಷರೊಂದಿಗೆ ಸಮಾನವಾಗಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರಿಗೆ ಪುರುಷರಿಂದ ಮಾನಸಿಕ ಹಾಗೂ ಲೈಂಗಿಕ ಕಿರುಕುಳ ಜರುಗುತ್ತಿರುವ ಕುರಿತು ಆಗಾಗ್ಗೆ ಸುದ್ದಿ ಮಾಧ್ಯಮಗಳಲ್ಲಿ ವಿಷಯ ಬಿತ್ತರಗೊಳ್ಳುವುದನ್ನು ಓದುತ್ತಿರುತ್ತೇವೆ. ಔದ್ಯೋಗಿಕವಾಗಿ ಮಹಿಳೆ ಎಷ್ಟೇ ಎತ್ತರ ಬೆಳೆದರೂ ಅವಳನ್ನು ಪುರುಷಶಾಹಿ ಸಮಾಜವು ಕೀಳಾಗಿಯೇ ಕಾಣುತ್ತದೆಯೆಂಬುದನ್ನು ಈ ರೀತಿಯ ವರದಿಗಳ ಮೂಲಕ ತಿಳಿಯುತ್ತದೆ. ಮಹಿಳೆಯರಿಗಿರುವ ಇಂತಹ ಸಮಸ್ಯೆಗಳನ್ನು ಬಗೆಹರಿಸುವವು. ಮಹಿಳೆಯರಿಗೆ ಸಾಮಾಜಿಕವಾಗಿ ಕುಟುಂಬದ ಒಳಗೆ ಹಾಗೂ ಕುಟುಂಬದ ಹೊರಗೆ ನಾನಾ ರೀತಿಯ ತೊಂದರೆ, ಕಿರುಕುಳಗಳಿವೆ. ಇದನ್ನು ಮನಗಂಡ ಸರ್ಕಾರವು ಮಹಿಳೆಯರ ದೌರ್ಜನ್ಯ ತಡೆ ಕಾಯ್ದೆಯನ್ನು ಜಾರಿಮಾಡಿದೆ. ಹಾಗೆಯೇ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗಾಗಿ ಸಾಂತ್ವಾನ ಕೇಂದ್ರಗಳನ್ನು ತೆರೆದಿದೆ. ಈ ಯೋಜನೆಯು ೨೦೦೦ನೇ ಇಸವಿಯಲ್ಲಿ ಪ್ರಾರಂಭವಾಯಿತು. ಕೌಟುಂಬಿಕ ದೌರ್ಜನ್ಯ, ಅತ್ಯಾಚಾರ, ಲೈಂಗಿಕ ಕಿರುಕುಳ, ವರದಕ್ಷಿಣೆ ಇತ್ಯಾದಿಗಳಿಗೆ ಒಳಗಾದ ಮಹಿಳೆಯರಿಗೆ ಸಾಂತ್ವಾನ ಆಶ್ರಯ ನೀಡುವ ಉದ್ದೇಶದಿಂದ ಈ ಕೇಂದ್ರಗಳನ್ನು ಪ್ರಾರಂಭಿಸಲಾಯಿತು. ಈ ಕೇಂದ್ರದ ಮೂಲಕ ಕಾನೂನು ಸಹಾಯ, ತಾತ್ಕಾಲಿಕ ಆಶ್ರಯ, ಆರ್ಥಿಕವಾಗಿ ಸ್ವಾವಲಂಬನೆ ಹೊಂದುವುದಕ್ಕೆ ಪೂರಕ ತರಬೇತಿಗಳ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಸ್ವಯಂ ಸೇವಾ ಸಂಸ್ಥೆಗಳು ಈ ಸಾಂತ್ವಾನ ಕೇಂದ್ರಗಳನ್ನು ನಡೆಸುತ್ತಿದ್ದು ೨೪

ಗಂಟೆಗಳ ಸೇವೆಯನ್ನು ಪ್ರತಿ ತಾಲೂಕುಗಳಲ್ಲಿ ನೀಡಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಸಮಿತಿ ಇದ್ದು ಈ ಸಮಿತಿಯ ನಿರ್ದೇಶನದಂತೆ ಸಾಂತ್ವಾನ ಕೇಂದ್ರಗಳು ಕಾರ್ಯ ನಿರ್ವಹಿಸುವುದು. ಮಹಿಳೆಗೆ ಅಗತ್ಯವನ್ನು ಗಮನಿಸಿ ಅಗತ್ಯಬಿದ್ದರೆ ರೂ ೨೦೦೦/-ದಿಂದ ರೂ.೧೦,೦೦೦/-ದವರೆಗೆ ಆರ್ಥಿಕ ನೆರವೂ ನೀಡಲಾಗುವುದು. ಈ ಯೋಜನೆ ಜಾರಿಯಲ್ಲಿರುವುದಾದರೂ ಬುಡಕಟ್ಟು ಸಮುದಾಯಗಳಿಗೆ ಯೋಜನೆಯ ಲಾಭ ದೊರೆಯದೇ ಹೋಗಿದೆ. ಬಹುತೇಕ ಎಲ್ಲಾ ಬುಡಕಟ್ಟುಗಳಲ್ಲಿಯೂ ಮೇಲ್ನೋಟಕ್ಕೆ ಪುರುಷಶಾಹಿಯ ಹಿಡಿತವಿದೆಯೆನಿಸುವುದು. ದೈಹಿಕ ಹಿಂಸೆ ನೀಡುವವರಲ್ಲಿ ಮಹಿಳೆಯರಿಗಿಂತ ಪುರುಷರ ಪ್ರಮಾಣವೇ ಹೆಚ್ಚು. ಆದರೆ ಬುಡಕಟ್ಟುಗಳೊಳಗೆ ನಡೆಯುವ ಜಗಳ, ಹೊಡೆದಾಟ, ಕೌಟಂಬಿಕ ಸಂಘರ್ಷಗಳನ್ನು ಬಹುತೇಕ ತಮ್ಮ ಸಮುದಾಯದೊಳಗೇ ಬಗೆಹರಿಸಿಕೊಳ್ಳುವರು. ಸಮುದಾಯದ ಆಚೆ ಪೋಲೀಸ್ ಠಾಣೆಯ ಮೆಟ್ಟಿಲು ಹತ್ತುವುದು, ಸಾಂತ್ವಾನ ಕೇಂದ್ರಗಳಿಗೆ ಹೋಗುವುದು ಅಪರೂಪ ಎಂದೇ ಹೇಳಬಹುದು. ಒಬ್ಬೇ ಒಬ್ಬ ಮಹಿಳೆಯೂ ಸಾಂತ್ವಾನ ಕೇಂದ್ರದ ಸಹಾಯ ಪಡೆಯದಿರುವುದು ಕ್ಷೇತ್ರಕಾರ್ಯದಲ್ಲಿ ಒಂದೇ ಒಂದು ಉದಾಹರಣೆ ದೊರೆಯಲಿಲ್ಲ.

**ಆಧಾರಗಳು**


ಆರೋಗ್ಯ ಇಲಾಖೆ ಕೈಪಿಡಿ, ೨೦೧೭

ಕರ್ನಾಟಕ ಆರ್ಥಿಕ ಸಮೀಕ್ಷೆ, ೨೦೧೯, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು, ಫೆಬ್ರವರಿ ೪೧ನೇ ಪ್ರಕಟಣೆ

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕೈಪಿಡಿ, ೨೦೧೭

ರಾಧ ಟಿ, ೨೦೧೮, ದೇವದಾಸಿಯರ ತೌಲನಿಕ ಅಧ್ಯಯನ, (ಬಳ್ಳಾರಿ ಜಿಲ್ಲೆಯ ಪರಿಶಿಷ್ಟರ ಮತ್ತು ಹಿಂದುಳಿದ ವರ್ಗಗಳ ದೇವದಾಸಿಯರನ್ನು ಅನುಲಕ್ಷಿಸಿ) ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್ ಡಿ ಅಪ್ರಕಟಿತ ಮಹಾಪ್ರಬಂಧ.

http://kn.vikaspedia.in/social

# ಅಧ್ಯಾಯ: ಐದು

# ಬುಡಕಟ್ಟು ಸಮುದಾಯಗಳ ಪರಿಚಯ

೫.೧ ಬುಡಕಟ್ಟು ಸಮುದಾಯಗಳ ಅರ್ಥ ವಿವರಣೆ

೫.೨ ಭಾರತದಲ್ಲಿನ ಬುಡಕಟ್ಟುಗಳು

೫.೩ ಕರ್ನಾಟಕದಲ್ಲಿನ ಬುಡಕಟ್ಟುಗಳು

೫.೪ ಬಳ್ಳಾರಿ ಜಿಲ್ಲೆಯಲ್ಲಿನ ಬುಡಕಟ್ಟುಗಳು

೫.೪.೧ ಬೇಡ

೫.೪.೨ ಡುಂಗ್ರಿ ಗರಾಸಿಯಾ

೫.೪.೩ ಮೇದ

೫.೪.೪ ಪಾರ್ಧಿ ಬುಡಕಟ್ಟು

# ಅಧ್ಯಾಯ : ಐದು

# ಬುಡಕಟ್ಟು ಸಮುದಾಯಗಳ ಪರಿಚಯ

ಯಾವುದೇ ಒಂದು ಬುಡಕಟ್ಟು ತನ್ನದೇ ಆದ ಅನನ್ಯತೆಯನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತದೆ. ಬೇಡನಾಯಕ, ಡುಂಗ್ರಿ-ಗರಾಸಿಯಾ, ಪಾರ್ಧಿ, ಮೇಧಾ ಬುಡಕಟ್ಟುಗಳನ್ನು ಈ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಆ ಸಮುದಾಯಗಳ ಸಾಮಾಜಿಕ ರೀತಿ ರಿವಾಜುಗಳನ್ನು ಅರಿಯುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ. ವಿಶೇಷವಾಗಿ ಕ್ಷೇತ್ರಕಾರ್ಯದಲ್ಲಿ ಕಂಡುಬಂದ ಅಂಶಗಳು ಹಾಗೂ ದ್ವಿತೀಯ ಮಾಹಿತಿಗಳನ್ನು ಅನುಸರಿಸಿ ಇಲ್ಲಿಯ ವಿಷಯವನ್ನು ಮಂಡಿಸಲಾಗಿದೆ.

**೫.೧ ಭಾರತದಲ್ಲಿನ ಬುಡಕಟ್ಟುಗಳು**

ಪ್ರಪಂಚದಲ್ಲಿ ಅತ್ಯಂತ ಹೆಚ್ಚು ಬುಡಕಟ್ಟುಗಳನ್ನು ಹೊಂದಿದ ರಾಷ್ಟ್ರಗಳಲ್ಲಿ ಆಫ್ರಿಕಾ ಮೊದಲ ಸ್ಥಾನದಲ್ಲಿದ್ದರೆ ಭಾರತವು ಎರಡನೇ ಸಾಲಿನಲ್ಲಿದೆ ಎಂದು ಅಧ್ಯಯನಕಾರರು ಗುರುತಿಸಿರುವರು. "೧೯೯೧ರ ಜನಗಣತಿಯ ಪ್ರಕಾರ ಭಾರತದಲ್ಲಿ ೬೮ ಮಿಲಿಯನ್ ಸಂಖ್ಯೆಯಲ್ಲಿರುವುದಾಗಿ ದಾಖಲಿಸಲಾಗಿದೆ. ಭಾರತದಲ್ಲಿ ೬೩೦ಕ್ಕೂ ಹೆಚ್ಚು ಆದಿವಾಸಿ ಬುಡಕಟ್ಟುಗಳಿವೆ (ಗುರುಲಿಂಗಯ್ಯ ಎಂ:೨೦೦೪:೧೦). ಭಾರತದ ಮಧ್ಯಪ್ರದೇಶ ರಾಜ್ಯದಲ್ಲಿ ಅಧಿಕ ಸಂಖ್ಯೆಯಲ್ಲಿ (೧೫.೪ ಮಿಲಿಯನ್) ಬುಡಕಟ್ಟು ಸಮುದಾಯಗಳಿವೆ. ಇದರ ನಂತರದ ಸ್ಥಾನ ಮಹಾರಾಷ್ಟ್ರಕ್ಕೆ (೭.೩ ಮಿಲಿಯನ್) ಸಲ್ಲುವುದು. ಬಿಹಾರ (೬.೬ ಮಿಲಿಯನ್), ಗುಜರಾತ್ (೬.೧ ಮಿಲಿಯನ್) ರಾಜ್ಯಗಳಿವೆ. ಇವುಗಳಲ್ಲದೆ ಮಿಜೋರಾಮ್, ನಾಗಲ್ಯಾಂಡ್, ಮೇಘಾಲಯ, ಅರುಣಾಚಲ ಪ್ರದೇಶಗಳಲ್ಲಿಯೂ ಆಯಾ ರಾಜ್ಯದ ಒಟ್ಟಾರೆ ಜನಸಂಖ್ಯೆಯ ಪ್ರತಿಶತ ೮೦ಕ್ಕಿಂತ ಹೆಚ್ಚು ಪ್ರಮಾಣದಲ್ಲಿರುವುದಾಗಿ ತಿಳಿದುಬರುವುದು. ಬುಡಕಟ್ಟು ಜನರಲ್ಲಿಯೇ ಅಧಿಕ ಸಂಖ್ಯೆಯಲ್ಲಿರುವ ಬುಡಕಟ್ಟೆಂದರೆ ಗೊಂಡ ಬುಡಕಟ್ಟಾಗಿದೆ. ಇವರು ಮಧ್ಯಪ್ರದೇಶ, ಮಹಾರಾಷ್ಟ್ರ, ಆಂಧ್ರಪ್ರದೇಶಗಳಲ್ಲಿ ಹಂಚಿಹೋಗಿರುವರು. ಇವರ ಜನಸಂಖ್ಯೆ ೪ ಮಿಲಿಯನ್ ಎಂದು ಅಂದಾಜಿಸಲಾಗಿದೆ. ಭಿಲ್ಲರೂ ಸಹ ೪ ಮಿಲಿಯನ್ನಿನಷ್ಟಿರುವರೆಂದು ತಿಳಿದುಬರುವುದು. ಸಂತಾಲ ಬುಡಕಟ್ಟು ೩ ಮಿಲಿಯನ್ನಿನಷ್ಟಿದೆ. "ಬುಡಕಟ್ಟು ಜನರಲ್ಲಿ ಶೇಕಡ ೮೯ ಹಿಂದೂ, ಶೇಕಡ ೫.೫ ಕ್ರಿಶ್ಚಿಯನ್, ಶೇಕಡ ೦.೩ ಬೌದ್ಧ, ಶೇಕಡ ೦.೨ ಮುಸ್ಲಿಮ್, ಶೇಕಡ ೫ರಷ್ಟು ಇತರೆ ಧರ್ಮಗಳನ್ನು ಅನುಸರಿಸುತ್ತಿರುವರು" (ಅದೇ ೨೦೦೪:೧೧).

ಭಾರತವನ್ನು ನಾಲ್ಕು ವಲಯಗಳಾಗಿ ವಿಂಗಡಿಸಲಾಗಿದ್ದು ಹಿಮಾಚಲ ಪ್ರದೇಶ ವಲಯದಲ್ಲಿ ಹಿಮಾಚಲ ಪ್ರದೇಶ, ಜಮ್ಮು ಕಾಶ್ಮೀರ, ಅಸ್ಸಾಂ, ಮೇಘಾಲಯ, ನಾಗಲ್ಯಾಂಡ್, ಉತ್ತರ ಪ್ರದೇಶ, ಮಣಿಪುರ, ತ್ರಿಪುರ ರಾಜ್ಯಗಳನ್ನೊಳಗೊಂಡಿದೆ. ಗುಜ್ಜಾರ್, ಗಡ್ಡಿ ಬುಡಕಟ್ಟುಗಳು ಪ್ರಮುಖವಾಗಿ ಜಮ್ಮು ಕಾಶ್ಮೀರ, ಹಿಮಾಚಲ ಪ್ರದೇಶಗಳಲ್ಲಿ ಕಂಡುಬರುವವು. ಥಾರಸ್ ಬುಡಕಟ್ಟು ಉತ್ತರ ಪ್ರದೇಶದಲ್ಲಿ, ಮಿಜೋ, ಬಾಸಿ, ಗಾರೋ ಬುಡಕಟ್ಟುಗಳು ಅಸ್ಸಾಂ ರಾಜ್ಯದಲ್ಲಿ, ನಾಗ ಬುಡಕಟ್ಟು ನಾಗಾಲ್ಯಾಂಡ್‌ನಲ್ಲಿಯೂ, ಮಾವೋ ಬುಡಕಟ್ಟು ಮಣಿಪುರದಲ್ಲಿ, ತ್ರಿಪುರಿ ಬುಡಕಟ್ಟು ತ್ರಿಪುರಾ ರಾಜ್ಯಗಳಲ್ಲಿವೆ. ಮಧ್ಯಭಾರತದ ವಲಯದಲ್ಲಿ ಪಶ್ಚಿಮ ಬಂಗಾಳ, ಬಿಹಾರ, ಒರಿಸ್ಸಾ ರಾಜ್ಯಗಳಿವೆ. ಸಂತಾಲಾ, ಮುಂಡಾ, ಒರಾನ್ ಬುಡಕಟ್ಟುಗಳು ಪಶ್ಚಿಮ ಬಂಗಾಳದಲ್ಲಿ, ಸಂತಾಲ, ಒರಾನ್ ಬುಡಕಟ್ಟುಗಳು ಪಶ್ಚಿಮ ಬಂಗಾಳ, ಬಿಹಾರ ರಾಜ್ಯಗಳಲ್ಲಿಯೂ, ಕೊಂಡಾನ್, ಗೊಂಡಾ ಬುಡಕಟ್ಟುಗಳು ಒರಿಸ್ಸಾ ರಾಜ್ಯಗಳಲ್ಲಿವೆ. ಪಶ್ಚಿಮ ಭಾರತದ ವಲಯದಲ್ಲಿ ರಾಜಸ್ಥಾನ, ಮಧ್ಯ ಪ್ರದೇಶ, ಗುಜರಾತ್, ಮಹಾರಾಷ್ಟ್ರ ರಾಜ್ಯಗಳಿವೆ. ಭಿಲ್, ಗಾರ್ಸಿಯಾ, ಮೀನಾ ಬುಡಕಟ್ಟುಗಳು ರಾಜಾಸ್ಥಾನದಲ್ಲಿ, ಭಿಲ್, ಗೊಂಡ ಬುಡಕಟ್ಟುಗಳು ಮಧ್ಯಪ್ರದೇಶದಲ್ಲಿ, ಭಿಲ್, ದೋಬಲಿ, ದೋಂಡಿಯಾ ಬುಡಕಟ್ಟು ಗುಜರಾತಿನಲ್ಲಿ, ಭಿಲ್, ಕೋಲಿ, ಮಹಾದೇವ್, ಕೊಟ್ನಾ ಬುಡಕಟ್ಟುಗಳು ಮಹಾರಾಷ್ಟ್ರಗಳಲ್ಲಿರುವವರು. ದಕ್ಷಿಣ ಭಾರತ ವಲಯದಲ್ಲಿ ಕರ್ನಾಟಕ, ಆಂಧ್ರ ಪ್ರದೇಶ, ತಮಿಳುನಾಡು, ಕೇರಳ, ಅಂಡಮಾನ್ ನಿಕೋಬಾರ್ ದ್ವೀಪಗಳು ಸೇರಿವೆ. ಗೊಂಡಾ, ಕೊಂಡಾ, ದೋವಾ ಬುಡಕಟ್ಟು ಆಂಧ್ರಪ್ರದೇಶ, ನಾಯ್ಕಡಾ, ಮರಾಠಿ, ನಾಯಕ, ಬೇಡ, ಕೊರಗ, ಮಲೆಕುಡಿಯಾ, ಜೇನು ಕುರುಬ, ಬೆಟ್ಟ ಕುರುಬ ಬುಡಕಟ್ಟುಗಳು ಕರ್ನಾಟಕದಲ್ಲಿ, ಇರುಳ, ತೋಡ, ತಮಿಳುನಾಡಿನಲ್ಲಿ, ಪುಲಿಯನ್, ಫಣಿಯನ್ ಬುಡಕಟ್ಟುಗಳು ಕೇರಳದಲ್ಲಿ ಕಂಡುಬರುವವು. ಅಂಡಮಾನಿಸ್, ನಿಕೊಬಾರಿಸ್ ಬುಡಕಟ್ಟುಗಳು ಅಂಡಮಾನ್, ನಿಕೊಬಾರಿನಲ್ಲಿ ಕಂಡುಬರುತ್ತವೆ. ಗುಹಾರವರ ಪ್ರಕಾರ ಉತ್ತರ ಪೂರ್ವವಲಯ, ಕೇಂದ್ರೀಯ ಅಥವಾ ಮಧ್ಯವಲಯ, ದಕ್ಷಿಣ ವಲಯ ಎಂಬ ವಿಭಾಗಗಳನ್ನು ಗುರುತಿಸಿರುವರು.

**೫.೨ ಕರ್ನಾಟಕದಲ್ಲಿನ ಬುಡಕಟ್ಟುಗಳು**

ಭಾರತದ ಮೂರು ವಲಯಗಳಲ್ಲಿ ದಕ್ಷಿಣ ವಲಯದ ಬುಡಕಟ್ಟುಗಳು ಅತ್ಯಂತ ಹಿಂದುಳಿದ ಬುಡಕಟ್ಟುಗಳಾಗಿವೆ ಎಂದು ಗುರುತಿಸಲಾಗಿದೆ. ಕರ್ನಾಟಕದ ಬುಡಕಟ್ಟುಗಳನ್ನು ಮೂರು ರೀತಿಯಲ್ಲಿ ವಿಂಗಡಿಸಬಹುದಾಗಿದೆ. ಪಶ್ಚಿಮ ಘಟ್ಟಗಳ ಬೆಟ್ಟ ಗುಡ್ಡಗಳನ್ನು ಹಾಗೂ ಕರಾವಳಿ ಪ್ರದೇಶವನ್ನು ಆಶ್ರಯಿಸಿದ ಬುಡಕಟ್ಟುಗಳು, ಅಲೆಮಾರಿ ಬುಡಕಟ್ಟುಗಳು ಹಾಗೂ ಬಯಲುನಾಡಿನ ಬುಡಕಟ್ಟುಗಳು ಎಂದು ಹೇಳಬಹುದು. ಕರ್ನಾಟಕದಲ್ಲಿ ಜೇನುಕುರುಬ ಹಾಗೂ ಕೊರಗ ಬುಡಕಟ್ಟುಗಳನ್ನು ಆದಿಮ ಬುಡಕಟ್ಟುಗಳೆಂದು ಗುರುತಿಸಿರುವರು. ಅವುಗಳಲ್ಲಿ ಆಡಿಯನ್, ಬರಾಡ, ಬಾಮ್ಚ, ಭಿಲ್, ಡುಂಗ್ರಿಗರಾಸಿಯಾ, ಚಂಚು, ಚೋದರ, ಡುಬ್ಲಾ, ಗುಮಿತ್, ಗೊಂಡ, ಹಕ್ಕಿಪಿಕ್ಕಿ, ಹಸಲ, ಇರುಳ, ಕಾಡುಕುರುಬ, ಕಮ್ಮಾರ, ಕಾಥೋಡಿ, ಕಟ್ಟುಕುಡಿಯನ್, ಕುಕ್ನಾ, ಕಾಮ, ಕೋಟಾ, ಕೋಯಾ,

ಮಲೆಕುಡಿಯಾ, ರಾಜಗೊಂಡ, ಗೊಂಡ, ಕುರುಬ (ಕೊಡಗು ಜಿಲ್ಲೆ) ಕುರುಮನ್, ಮಾಲೇರು, ಮರಾಟಿ, ಮೇದಾ, ನಾಯಕಡಾ, ಪಳಿಯನ್, ಪಾರ್ಧಿ, ವರ್ಲಿ, ಪಥೆಲಿಯಾ, ರಾಥ್ವಾ, ಸೋಲಿಗ, ಕತ್ವಾಲಿಯಾ, ಯರವಾ, ಸಿದ್ದಿ ಇತ್ಯಾದಿ ಐವತ್ತು ಸಮುದಾಯಗಳು ಪರಿಶಿಷ್ಟ ಪಂಗಡದಲ್ಲಿದ್ದು ಇವುಗಳನ್ನು ಬುಡಕಟ್ಟುಗಳೆಂದು ಗುರುತಿಸಲಾಗಿದೆ.

**೫.೩ ಬಳ್ಳಾರಿ ಜಿಲ್ಲೆಯಲ್ಲಿನ ಬುಡಕಟ್ಟುಗಳು**

**೫.೩.೧ ಬೇಡ ಬುಡಕಟ್ಟು**

ಪ್ರಾಚೀನ ಬುಡಕಟ್ಟುಗಳಲ್ಲಿ ಒಂದಾದ ಬೇಡ ಬುಡಕಟ್ಟನ್ನು ನಾಯಕ, ತಳವಾರ, ವಾಲ್ಮೀಕಿ, ಬೇಡ. ಪರಿವಾರ, ಪಾಳೇಗಾರ ಮುಂತಾದ ಹೆಸರುಗಳಿಂದ ಗುರುತಿಸಲಾಗುತ್ತದೆ. ಈ ಬುಡಕಟ್ಟು ಕರ್ನಾಟಕದ ಆಚೆಗೂ ಕಂಡುಬರುತ್ತಿದ್ದು ಅದನ್ನು ಆಯಾ ಪ್ರದೇಶಕ್ಕನುಗುಣವಾಗಿ ನಾನಾ ಹೆಸರುಗಳಿಂದ ಕರೆಯಲಾಗುತ್ತದೆ. ತಮಿಳುನಾಡಿನಲ್ಲಿ ಈ ಬುಡಕಟ್ಟಿಗೆ ನಾಯಷಾ, ನಾಯಕರ್, ವಾಲ್ಮೀಕಿ, ವೇಡನ್, ವೆತ್ತಲ್, ವೇಡುವಾಸ, ವೇಟಕಾರನ್ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಉತ್ತರಪ್ರದೇಶದಲ್ಲಿ ಜಾಟ್, ಪಂಜಾಬ್ ಭಿಲ್, ಬಾಲಮೀಕಿ, ನಾಯಕಮಾಂಗ್, ಬಿಹಾರಸೇನ್ ಎನ್ನುತ್ತಾರೆ. ಕೇರಳದಲ್ಲಿ ನಾಯರ್ ಎಂದೂ ಮಹಾರಾಷ್ಟ್ರದಲ್ಲಿ ರಾಮೋಶಿ, ರಾಣವಾಸಿ, ಬೇರಡ್ ಮುಂತಾಗಿ ಕರೆಯಲಾಗುತ್ತದೆ. ದ್ರಾವಿಡಮೂಲ ಬುಡಕಟ್ಟಾದ ಈ ಸಮುದಾಯದ ಉಲ್ಲೇಖವು ಪ್ರಾಚೀನ ಗ್ರಂಥಗಳಲ್ಲಿ ಪುಳಿಂದ, ಭಿಲ್ಲ, ಕಿರಾತ, ವ್ಯಾಧ, ನಿಷಾಧ, ಶಿಬಿರ ಮುಂತಾದ ಹೆಸರುಗಳಿಂದ ಉಲ್ಲೇಖಿಸಿರುವುದು ಕಂಡುಬರುತ್ತದೆ. ಬೇಡ ಎಂಬ ಪದವು ಸಂಸ್ಕೃತದ ವ್ಯಾಧ ಪದದಿಂದ ಬಂದಿದೆ ಎಂಬ ವಾದವಿದೆ. ನಂಜುಂಡಯ್ಯ ಎಚ್ ವಿ ಮತ್ತು ಅನಂತಕೃಷ್ಣ ಅಯ್ಯರ್‌ರವರು "The beda's are an aboriginal tribe of the Telugu and Canarese district. Most of the Mysore palegar's of pretty chiefs are Beda's" (ನಂಜುಂಡಯ್ಯ ಎಚ್ ವಿ, ಅನಂತಕೃಷಅಯ್ಯರ್:೧೯೩೪:೬೭), ಬುಕನಾನ್‌ರವರು ಬೇಡ ಬುಡಕಟ್ಟು ದ್ರಾವಿಡ ಜನಾಂಗಕ್ಕೆ ಸೇರಿದವರಿರಬೇಕು ಎಂದು ಅಭಿಪ್ರಾಯಪಡುತ್ತಾರೆ. ಬೇಡರಲ್ಲಿ ಮುಖ್ಯವಾಗಿ ಊರಬೇಡರು ಮತ್ತು ಮ್ಯಾಸ ಬೇಡರು ಎಂಬ ಪಂಗಡಗಳು ಕಂಡುಬರುತ್ತವೆ. ಇವುಗಳಾಚೆ ಮೊಂಡರು ಸಹ ತಾವು ಬೇಡ ಪಂಗಡಕ್ಕೆ ಸೇರಿದವರು ಎಂದು ಹೇಳಿಕೊಳ್ಳುತ್ತಾರೆ. ಮೈಸೂರು ಪ್ರಾಂತ್ಯದ ಮಹದೇಶ್ವರನ ಬೆಟ್ಟದ ಸುತ್ತಮುತ್ತ ಬೇಡಗಂಪಣರು ಎನ್ನುವ ಸಮುದಾಯವೊಂದಿದ್ದು ತಾವೂ ಮೂಲತಃ ಬೇಡನಾಯಕರು, ತಮ್ಮ ಮೂಲಪುರುಷ ಬೇಡರಕಣ್ಣಪ್ಪ ಎಂದು ಹೇಳಿಕೊಳ್ಳುತ್ತಾರೆ. ಆದರೆ ಈ ಯಾವ ಪಂಗಡಗಳು ಪರಸ್ಪರ ರಕ್ತಸಂಬಂಧವನ್ನು ಬೆಸೆದುಕೊಳ್ಳುವುದಿಲ್ಲ. ಇತ್ತೀಚೆಗೆ ಊರ ನಾಯಕರು ಮತ್ತು ಮ್ಯಾಸ ನಾಯಕರಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ವೈವಾಹಿಕ ಸಂಬಂಧಗಳು ಏರ್ಪಡುತ್ತಿವೆ. ಮಧ್ಯಕಾಲೀನ ಕರ್ನಾಟಕದಲ್ಲಿ ಬೇಡ ನಾಯಕರು ಪಾಳೆಯಗಾರರಾಗಿ, ಚಿಕ್ಕ ಚಿಕ್ಕ ರಾಜ್ಯಗಳ ಅರಸರಾಗಿ, ಸೈನಿಕರಾಗಿ ಕಾರ್ಯನಿರ್ವಹಿಸಿದ ಉದಾಹರಣೆಗಳು ಸಾಕಷ್ಟಿವೆ. ಉದಾಹರಣೆಗೆ ಚಿತ್ರದುರ್ಗದ ಪಾಳೆಯಗಾರರು, ಬಸವಾಪಟ್ಟಣದ

ಪಾಳೆಗಾರರು, ಕಂಪಿಲರಾಯ ಮತ್ತು ಅವನ ವಂಶಸ್ಥರು, ವಿಜಯನಗರ ಸಾಮ್ರಾಜ್ಯದ ಸ್ಥಾಪಕರಾದ ಹರಿಹರ ಬುಕ್ಕ, ಹರಪನಹಳ್ಳಿಯ ಪಾಳೆಯಗಾರರು, ಉಚ್ಚಂಗಿ ದುರ್ಗದ ಪಾಳೆಯಗಾರರು ಮುಂತಾದವರನ್ನು ಹೆಸರಿಸಬಹುದು. ಬೇಡರಲ್ಲಿ ಕವಲೊಡೆದ ಅನೇಕ ಪಂಗಡಗಳುಗಳಿದ್ದು ಅವುಗಳಲ್ಲಿ ವಾಲ್ಮೀಕಿ, ತಳವಾರ, ಪರಿವಾರ ಮುಂತಾದವುಗಳು ಬರುತ್ತವೆಯೆಂಬ ವಾದವೂ ಇದೆ. ವಾಲ್ಮೀಕಿ ಋಷಿಯಿಂದಾಗಿ ಈ ಬುಡಕಟ್ಟಿಗೆ ವಾಲ್ಮೀಕಿ ಎನ್ನುವ ಹೆಸರು ಬಂದಿದೆ. ವಾಲ್ಮೀಕಿ ಮಹರ್ಷಿಯು ಮೂಲತಃ ಬೇಡರವನಾಗಿದ್ದನೆಂದು ತಿಳಿದುಬರುತ್ತದೆ. ರಾಮಾಯಣದ ಕತೃವಾಗುವುದಕ್ಕೂ ಪೂರ್ವದಲ್ಲಿ ವಾಲ್ಮೀಕಿಯು ಆದಿಮಾನವನಂತೆ ಅಡವಿಯಲ್ಲಿಯೇ ಅಲೆಯುತ್ತಿದ್ದನಂತೆ. ಇವನು ಪ್ರಚೇತನ ಮತ್ತು ಪ್ರಮೋಜಿಯರ ಮಗನಾಗಿ ಹುಟ್ಟಿ ತಮಸಾ ನದಿ ತೀರದಲ್ಲಿ ವಾಸವಾಗಿದ್ದು ಕಿರಾತರ ಯಜಮಾನನಾಗುವ ಶಕ್ತಿಯನ್ನು ಪಡೆದನೆಂಬ ತರ್ಕವಿದೆ. ಚಿತ್ರದುರ್ಗದ ಪಾಳೆಯಗಾರರು ಎಂಬ ಕೃತಿಯ ಉಪೋದ್ಘಾತದಲ್ಲಿ ಎಂ ಎಸ್ ಪುಟ್ಟಣ್ಣನವರು "ತುಂಗಾಭದ್ರಾ ತೀರದಲ್ಲಿ ವಿಜಯನಗರ ಸಂಸ್ಥಾನದ ಚಕ್ರಾಧಿಪತಿಗಳು ಬಹುಖ್ಯಾತಿಯಿಂದ ಆಳುತ್ತಾ ಇರುವಾಗ.... ತಮ್ಮ ರಾಜ್ಯದ ದೊರೆತನವು ಬಿಗಿಯಾಗಿ ನಡೆಯುವುದಕ್ಕಾಗಿ ಅನುಕೂಲಕ್ಕೆಂದು ಎಣಿಸಲ್ಪಟ್ಟು ಪೂರ್ವದಿಂದಲೂ ರೂಢಿಗೆ ಬಂದಿದ್ದ ಒಂದು ಏರ್ಪಾಡನ್ನು ಉಪಯೋಗ ಮಾಡಿಕೊಂಡಿದ್ದರು. ಇವರ ಚಕ್ರಾಧಿಪತ್ಯದ ಮುಖ್ಯವಾದ ಸ್ಥಳಗಳಲ್ಲಿ ಅಧಿಕಾರ ಮಾಡಲು ಪ್ರಮುಖರಾದ ಜನರನ್ನು ನೇಮಿಸಿದ್ದರು. ಈ ಆಡಳಿತಾಧಿಕಾರಿಗಳಿಗೆ ನಾಯಕರು ಎಂದು ಸರ್ವಸಾಧಾರಣವಾಗಿ ಹೆಸರಾಗಿತ್ತು. ಈ ನಾಯಕರು ತಂತಮ್ಮ ಅಧಿಕಾರಕ್ಕೆ ಒಳಪಟ್ಟ ಸೀಮೆಗಳಲ್ಲಿ ದೊರೆಗಳಂತೆ ಇರುತ್ತಾ ಅಲ್ಲಿ ಪ್ರಜೆಗಳಿಂದ ಕಂದಾಯ ಮೊದಲಾದ್ದನ್ನು ವಸೂಲ್ಮಾಡಿಕೊಂಡು ಚಕ್ರಾಧೀಶ್ವರರಿಗೆ ನಿಗಧಿಯಾದ ಕಪ್ಪವನ್ನು ವರ್ಷ ವರ್ಷವೂ ಕೊಡುತ್ತ ತಯಾರಾದ ಸೇನೆಯನ್ನು ಯುದ್ಧಪ್ರಸಕ್ತಿ ಬಿದ್ದಾಗ ವಿಜಯನಗರ ಅಧೀಶ್ವರರಿಗೆ ಸಹಾಯ ಮಾಡುತ್ತಾ ಇದ್ದರು. ಪಾಳೆಯಗಾರರೆಂದರೆ ದಂಡಿನೊಡನೆ ಪಾಳಯವನ್ನು ಹಾಕಿ ಇಳಿದುಕೊಂಡು ಕದನಕ್ಕೆ ಸಿದ್ಧವಾಗಿರತಕ್ಕದ್ದೆಂದು ಅರ್ಥ. ಸಾಧಾರಣವಾಗಿ ಈ ಪಾಳಯಗಾರರಲ್ಲಿ ಅನೇಕರು ಬೇಡರು ಅಥವ ವ್ಯಾಧರು. ಈ ಜಾತಿಯವರಲ್ಲಿ ಊರಬೇಡರು, ಮ್ಯಾಸಬೇಡರು ಎಂದು ಎರಡು ಪಂಗಡಗಳುಂಟು. ಮ್ಯಾಸಬೇಡರು ಪರಿಶುದ್ಧರು, ಪಾನ ಮಾಡುವುದಿಲ್ಲ, ಈಚಲು ಚಾಪೆಯನ್ನು ಕೂಡ ಹಾಸಿ ಮಲಗುವುದಿಲ್ಲ."(ರಾಮಮೂರ್ತಿ:೨೦೦೫:೩೪), ಪ್ರಾಯಶಃ ಬೇಡನಾಯಕರು ಇತರ ವೃತ್ತಿಗಿಂತ ದಂಡಿನಲ್ಲಿ ಸೇರಿ ಪರಾಕ್ರಮ ಮೆರೆಯುವುದು ಹೆಚ್ಚು ಇಷ್ಟವಾದ ಕೆಲಸವೆಂದು ಭಾವಿಸಿರಬೇಕು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಲ್ಲಿ ಮುಖ್ಯ ಪಾತ್ರವಹಿಸಿದ ಬೇಡ ನಾಯಕರು ಆ ಸಾಮ್ರಾಜ್ಯದ ಸೈನಿಕರಾಗಿ ಕಾರ್ಯನಿರ್ವಹಿಸಿದ ಕುರುಹುಗಳು ಇಂದಿಗೂ ಹಂಪೆ ಸುತ್ತಮುತ್ತಲ ಪ್ರದೇಶದಲ್ಲಿ ಕಂಡುಬರುತ್ತದೆ. ಕಮಲಾಪುರದ ನಾಯಕ ಸಮುದಾಯದ ಏಳು ಕೇರಿ ಹಾಗೂ ಹೊಸಪೇಟೆಯ ಏಳು ಕೇರಿಯ ನಾಯಕ ಸಮುದಾಯದ ಜನ ಹಿಂದೆ ವಿಜಯನಗರ ಅರಸರ ಸೈನಿಕರಾಗಿ ಕಾರ್ಯನಿರ್ವಹಿಸಿದವರು ತಾವು ಎಂದು ಹೇಳಿಕೊಳ್ಳುತ್ತಾರೆ. ಇಂದಿಗೂ ಕಮಲಾಪುರದ ನಾಯಕರು

ಆನೆಗೊಂದಿ ಅರಸರಿಗೆ ನಿಷ್ಠರಾಗಿಯೇ ನಡೆದುಕೊಳ್ಳುತ್ತಾರೆ. ಕಪಟರಾಳ್ ಕೃಷ್ಣರಾಯರು ಸುರಪುರದ ಸಂಸ್ಥಾನದ ಇತಿಹಾಸ ಕೃತಿಯಲ್ಲಿ ಬಳ್ಳಾರಿ ಜಿಲ್ಲೆಯ ಗೆಜೆಟಿಯರ್‌ನಲ್ಲಿ ಪ್ರಸ್ತಾಪಿತವಾದ ಕೆಲವು ವಿಷಯಗಳ ಕುರಿತು ಉಲ್ಲೇಖಿಸಿದ್ದಾರೆ. "ಈ ಭೋಯಾ ಜನರಿಗೆ ಕನ್ನಡ ದೇಶದಲ್ಲಿ ಬೇಡರೆಂದು ಕರೆಯಲಾಗುತ್ತದೆ. ಸರ್ ಥಾಮಸ್ ಮನ್ರೋ ಕಾಲದಲ್ಲಿ ನಾಡೆಲ್ಲಾ ಈ ಪಾಳೆಯಗಾರರ ಹಿಡಿತದಲ್ಲಿಯೇ ಇತ್ತು. ಈ ಪಾಳೆಯಗಾರರೆಲ್ಲರೂ ಬೇಡರೇ ಆಗಿದ್ದರು. ಅಸಂಖ್ಯವಾದ ಹೈದರಾಲಿಯ ಸೈನ್ಯವೂ ಇವರದೇ ಆಗಿತ್ತು.....ಔರಂಗಜೇಬನ ಕಾಲದಲ್ಲಿ ಕರ್ನಾಟಕದ ಪಾಯದಳವೆಂಬುದು ಇವರಿಗೇನೆ. ೧೮೫೮ನೇ ಸಂಗೊಳ್ಳಿ ರಾಯಣ್ಣ ಈ ಬೇಡರವನೆ. ಈ ಮೇಲಿನ ಸಂಕ್ಷಿಪ್ತ ವಿವರಗಳಿಂದ ತಿಳಿದುಬರುವುದೆಂದರೆ ವಿಜಯನಗರಕ್ಕಿಂತ ಪೂರ್ವ ಕ್ರಿಸ್ತಶಕ ಹತ್ತೊಂಭತ್ತನೇ ಶತಮಾನದವರೆಗೆ ಕರ್ನಾಟಕಾಂಧ್ರದಲ್ಲಿ ಸೈನಿಕ ವೃತ್ತಿಯಿಂದ ಜೀವನ ಸಾಗಿಸುತ್ತಾ ಬಂದಿರುವವರು ಈ ಬೇಡರೆ. ಇವರಿಗೇನೆ ಕರ್ನಾಟಕ ಸೈನ್ಯವೆಂದೂ ಬೇಡರ ಪಡೆಯಂದೂ ಪ್ಯಾದಾಹಾಯಾ ಕರ್ನಾಟಕೀಯಾ ಎಂದು ಬೇರೆಬೇರೆ ಕಾಲಗಳಲ್ಲಿ ಕರೆಯಲಾಗಿದೆ. ಕಾಳಗದಲ್ಲಿ ಇವರ ಶೌರ್ಯಕ್ಕೆ ಎಣೆಯಿಲ್ಲ. ಇವರ ಸಾಹಸ ಅವರ್ಣನೀಯವಾದುದು, ಹತ್ತೊಂಭತ್ತನೇ ಶತಮಾನದಲ್ಲಿ ಇವರನ್ನು ಸೈನ್ಯಕ್ಕೆ ಸೇರಿಸಿಕೊಳ್ಳಬಾರದೆಂದು ಸರಕಾರಿ ಹುಕುಮು ಹೊರಟಿದ್ದರಿಂದ ಇವರು ತಮ್ಮ ಕ್ಷೇತ್ರ ವೃತ್ತಿಯ ಉಪಜೀವನ ಸಾಧನೆಯಿಂದ ಎರವಾದರು. ಆದಾಗ್ಯೂ ಇಂದಿನವರೆಗೆ ಇವರು ತಮ್ಮ ಗಂಡು ಸ್ವಭಾವವನ್ನು ಕಳೆದುಕೊಂಡಿಲ್ಲ. ಬೇಟೆಗಾರರೆಂದು ಇವರು ಮೊದಲಿನಿಂದಲೂ ಪ್ರಸಿದ್ಧರು. ಬೇಡನೆಂದರೆ ಕಾಲಾಳು. ಗುಂಡಿನಗುರಿ ಹೊಡೆಯುವುದರಲ್ಲಿ ಎತ್ತಿದ ಕೈ ಇವರದು. ಕಾಲಮಹಿಮೆಯಿಂದ ಇವರು ಹಿಂದುಳಿದವರಾದರು."(ಪುಟ್ಟಣ್ಣ ಎಂ ಎಸ್:೧೯೩೭:೨೩),ಹಟ್ಟಿ ನಾಯಕರು ಆಂಧ್ರದ ಶ್ರೀಶೈಲದ ಕಡೆಯಿಂದ ಬಂದವರೆಂಬ ವಾದವೂ ಇದೆ. ಈ ವಾದಕ್ಕೆ ಪುಷ್ಟಿಕೊಡುವಂತೆ ಹಟ್ಟಿನಾಯಕರ ಮನೆಮಾತು ತೆಲುಗು ಭಾಷೆಯಾಗಿದೆ. ಇಂದು ಇವರಾಡುವ ತೆಲುಗು ಭಾಷೆಯು ಕನ್ನಡ ಮಿಶ್ರಿತ ತೆಲುಗಾಗಿದ್ದು ಅದು ತನ್ನದೇ ಆದ ವಿಶಿಷ್ಟತೆಯನ್ನು ಪಡೆದಿದೆ. ಬೇಡನಾಯಕರು ಆಂಧ್ರದ ಗುಡ್ಡಗಾಡನ್ನು ಬಿಟ್ಟು ಕರ್ನಾಟಕದ ಕಡೆ ವಲಸೆ ಬರಲು ಆ ಕಾಲಕ್ಕೆ ಆಂಧ್ರದಲ್ಲಿ ಬರಬಿದ್ದಿತಂತೆ ಎಂದು ತಿಳಿಸುತ್ತಾರೆ. ಪ್ರಾಯಶಃ ಬರದ ಕಾರಣಕ್ಕೆ ಇವರು ವಲಸೆ ಬಂದಿರುವ ಸಾಧ್ಯತೆಗಳು ತುಂಬಾ ಕಡಿಮೆಯಂದೇ ಹೇಳಬಹುದು. ಬಹುಶಃ ಉತ್ತರ ಭಾರತದ ಕಡೆಯಿಂದ ಮೇಲಿಂದ ಮೇಲೆ ದಾಳಿ ನಡೆಸುತ್ತಿದ್ದ ಮುಸ್ಲೀಮರ ಉಪಟಳ ತಡೆಯಲಾರದೆ ದಕ್ಷಿಣದ ಕಡೆಗೆ ವಲಸೆ ಬಂದರು ಎಂದು ತಮಿಳಿನ ಕೃತಿಯೊಂದರಲ್ಲಿ ತಿಳಿಸಿದೆ. ನಂಬಿಯಾರರ ಈ ವಾದವನ್ನು ಹೆಚ್ಚಾಗಿ ನಂಬಬಹುದು. ಯಾಕೆಂದರೆ ಬಹುತೇಕ ಕರ್ನಾಟಕದ ಬುಡಕಟ್ಟುಗಳು ಈ ರೀತಿಯ ಯಾವುದೊ ಅನಿವಾರ್ಯ ಕಾರಣಗಳಿಗಾಗಿ ವಲಸೆ ಬಂದಿರುವ ಕುರಿತು ತಿಳಿದುಬರುತ್ತದೆ. ತಮ್ಮ ಹಿರಿಯ ಕಾಟಿಮಲ್ಲನಾಯಕನೊಂದಿಗೆ ತಮ್ಮ ಬೇಡಜಾತಿಯವರೆಲ್ಲ ವಲಸೆ ಬಂದುದಾಗಿ ವಕ್ತೃಗಳು ತಿಳಿಸುತ್ತಾರೆ. ಥರ್ಸ್ಟನ್‌ರವರು ಬೇಡನಾಯಕರ ಕುರಿತು ಈ ಕೆಳಗಿನಂತೆ ತಿಳಿಸುತ್ತಾರೆ. '....Both telugu speaking Boyers number of and canarees Beders are split into the two main division of uru or villege

men and myasa or grass land men, each of these division is again subdivided into a exogamous bedags. according to Mysore census report 1901 the chief diety of the Bedas in Tirupati Venkataramanaswamy worshiped locally under the name of tirumala devaru, but off srings and sacrifices are also made to Mariyamma. Their Guru Thirumala Tatacharya who is also a head of srivaishnava Brahmins.....the dewan of sandur informs me that the recent times some Mysore bedas have changed their faith and are now showing special reverence to mahadeva. They were apparerently converted by jangamas but not to the fullest extent. The guru is the head of ujjani lingait matt which is in kudligi taluk, Bellary district..(ಎಡ್ಗರ್ ಥರ್ಸ್ಟನ್:೧೯೦೯:೧೩೪), ಬೇಡರು ಪೂರ್ವದಲ್ಲಿ ಶೈವ ಪರಂಪರೆಗೇ ಸೇರಿದವರಾಗಿದ್ದರು, ಪ್ರಾಯಶಃ ವಿಜಯನಗರ ಅರಸರ ಕಾಲಕ್ಕೆ ವೈಷ್ಣವ ಪ್ರಭಾವ ಹೆಚ್ಚಾಗಿದ್ದಿತು. ಆ ಕಾರಣಕ್ಕಾಗಿ ಅವರ ಅನುವರ್ತಿಗಳಾಗಿದ್ದ ಬೇಡರ ಮೇಲೆ ಆ ಪಂಥದ ಪ್ರಭಾವವಾಗಿರುವ ಸಾಧ್ಯತೆಯೂ ಇದೆ. ಬೇಡರು ಮೂಲತಃ ಒಂದೇ ಪಂಗಡವಾಗಿದ್ದು ಯಾವೂದೋ ಒಂದು ಹಂತದಲ್ಲಿ ಅವುಗಳೊಳಗೆ ಬೇರೆ ಬೇರೆ ಪಂಗಡಗಳು ಹುಟ್ಟಿರುವ ಸಾಧ್ಯತೆಯೂ ಇದೆ. ಇದಕ್ಕೆ ಉದಾಹರಣೆಯಾಗಿ ನೋಡುವುದಾದರೆ ಇವರ ಆರಾಧನಾ ದೈವ ಕುಮಾರರಾಮನನ್ನು ವೆಂಕಟೇಶ, ಗೋವಿಂದ ಮುಂತಾದ ಹೆಸರುಗಳಲ್ಲಿ ಇಂದಿಗೂ ಪೂಜಿಸುತ್ತಾರೆ. ಇವೆಲ್ಲಾಗಳ ಆಚೆ ಇವರು ಮಾತೃದೇವತಾ ಆರಾಧಕರು. ವೀರತ್ವವನ್ನೇ ಮೆರೆದ ಈ ಸಮುದಾಯವು ಬ್ರಿಟಿಷರ ಆಡಳಿತ ಕಾಲದಲ್ಲಿ ಅಪರಾಧಿ ಬುಡಕಟ್ಟು ಎಂದು ಗುರುತಿಸಲ್ಪಟ್ಟಿತು. ಊರು ಬೇಡ ಮತ್ತು ಮ್ಯಾಸಬೇಡರು ವಿಭಾಗವಾದುದಕ್ಕೆ ಕಾರಣ ನೀಡುವ ಕಥೆಯೊಂದು ಬೇಡರಲ್ಲಿ ಪ್ರಚಲಿತವಿದೆ. ಆ ಕಥೆಯ ಪ್ರಕಾರ ಇಬ್ಬರು ಅಣ್ಣ ತಮ್ಮಂದಿರಲ್ಲಿ ಹಾದಿತಪ್ಪಿ ಕಾಡಿನ ಕಡೆ ಸಾಗಿದವನು ಮ್ಯಾಸಬೇಡನಾದರೆ ನಾಡಿನ ಕಡೆ ಸಾಗಿದವನು ಊರ ಬೇಡನಾದನಂತೆ. ಊರನಾಯಕ ಮತ್ತು ಮ್ಯಾಸನಾಯಕರು ಇವತ್ತಿಗೂ ತಾವು ಅಣ್ಣ ತಮ್ಮಂದಿರೆಂದೇ ಹೇಳಿಕೊಳ್ಳುತ್ತಾರೆ. ಬೇಡನಾಯಕ ಸಮುದಾಯದಂತಹ ಸಮುದಾಯಗಳು ತಮ್ಮ ಆಶ್ರಯದಾತ ರಾಜಮನೆತನಗಳ ಅವನತಿಯಿಂದಾಗಿ ದಿಕ್ಕೇಡಿಗಳಾದವು. ಇಂತಹ ಆಸರೆ ತಪ್ಪಿದ ಬುಡಕಟ್ಟುಗಳಿಗೆ ಸುಲಭವಾಗಿ ಆಸರೆ ನೀಡಿದ್ದು ಕಾಡುಗಳು. ಕಾಡುಗಳಲ್ಲಿ ನೆಲೆನಿಂತ ಬುಡಕಟ್ಟುಗಳಿಗೆ ಅರಣ್ಯ ನೀತಿ ಕಾಯ್ದೆಯ ನೆವದಿಂದ ಅರಣ್ಯಗಳಿಂದ ಹೊರಹಾಕಲಾಯಿತು. ಅವರ ಸ್ವಾವಲಂಬನೆಯ ಬದುಕಿಗೆ ಈ ಮೂಲಕ ಸಂಚಕಾರ ಬಂದುದರಿಂದ ಕೆಲವು ಬುಡಕಟ್ಟುಗಳು ಜೀವನ ಮಾರ್ಗ ತಿಳಿಯದೆ ಕಂಗಾಲಾದವು. ಈ ರೀತಿ ಕಂಗಾಲದ ಕೆಲವು ಬುಡಕಟ್ಟು ಸಮುದಾಯಗಳು ತಮ್ಮ ಜೀವನ ನಿರ್ವಹಣೆಗಾಗಿ ಚಿಕ್ಕ ಪುಟ್ಟ ಅಪರಾಧಗಳನ್ನು ಮಾಡುವುದು ಅನಿವಾರ್ಯವಾಯಿತು. ಆದರೆ ಅದನ್ನೇ ದೊಡ್ಡ ಅಪರಾಧವೆಂದು ಬ್ರಿಟಿಷ್ ಸರ್ಕಾರ ಭಾವಿಸಿತು. ಅದಕ್ಕಿಂತಲೂ ಮುಖ್ಯವಾಗಿ ಬ್ರಿಟಿಷರು ಆ ಕಾಲದ

ಸ್ವಾತಂತ್ರ್ಯ ಚಳುವಳಿಯನ್ನು ಹತ್ತಿಕ್ಕುವ ಅಸ್ತ್ರವಾಗಿಯೂ ಅಪರಾಧಿ ಬುಡಕಟ್ಟುಗಳ ಕಾಯ್ದೆಯನ್ನು ಜಾರಿಗೆ ತಂದಿತೇನೋ, ಉದಾಹರಣೆಗೆ ಹಲಗಲಿ ಬೇಡರು ತಮ್ಮ ವಿರುದ್ಧ ತಿರುಗಿಬೀಳದಂತೆ ನಿಶ್ಯಸ್ತ್ರೀಕರಣ ಕಾಯ್ದೆಯನ್ನು ಬ್ರಿಟೀಷ್ ಸರ್ಕಾರ ಜಾರಿಗೆ ತಂದಿತು. ತಮ್ಮ ಬೇಟೆ ಜೀವನಕ್ಕೆ ಅವಶ್ಯಕವಾದ ಆಯುಧಗಳನ್ನು ಸರ್ಕಾರ ಕಿತ್ತುಕೊಳ್ಳಲು ನೋಡಿದಾಗ ಸಹಜವಾಗಿಯೇ ಬೇಡಪಡೆ ವಿರೋಧ ವ್ಯಕ್ತಪಡಿಸಿತು. ಹೀಗಾಗಿ ಬ್ರಿಟೀಷರಿಗೂ ಹಲಗಲಿಯ ಬೇಡರ ಮಧ್ಯ ಸಂಘರ್ಷವೇರ್ಪಟ್ಟಿತು. ಇದು ಕೇವಲ ಒಂದು ಉದಾಹರಣೆ. ಈ ರೀತಿಯ ಸಂಘರ್ಷಗಳು ಬುಡಕಟ್ಟುಗಳು ಹಾಗೂ ಆಗಿನ ಸರ್ಕಾರದಲ್ಲಿ ಬೇಕಾದಷ್ಟು ನಡೆದ ಉದಾಹರಣೆಗಳಿವೆ. ಒಟ್ಟಾರೆಯಾಗಿ ಕರ್ನಾಟಕದ ಬಹುತೇಕ ಎಲ್ಲಾ ಬುಡಕಟ್ಟುಗಳಂತೆ ಬೇಡ ಸಮುದಾಯವೂ ಶೋಷಣೆಗಳಿಗೆ ಒಳಗಾದುದು ಮಾತ್ರ ನಿಜ. ಈ ಬೇಡನಾಯಕ ಪಂಗಡ ಇಂತಹ ಒತ್ತಡಗಳ ಮಧ್ಯದಲ್ಲಿಯೂ ತನ್ನ ಬುಡಕಟ್ಟು ಮೂಲದ ಅನನ್ಯತೆಯನ್ನು ಬಿಟ್ಟುಕೊಟ್ಟಿಲ್ಲವೆಂಬುದು ಮಾತ್ರ ಸತ್ಯ.

ಬೇಡ ನಾಯಕರಲ್ಲಿ ಒಳಪಂಗಡಗಳು ಹಲವಾರಿವೆ ಎಂಬುದನ್ನು ಹೆಚ್ ವಿ ನಂಜುಂಡಯ್ಯನವರು ತಿಳಿಸುತ್ತಾರೆ ಅವರ ಪ್ರಕಾರ ಕರ್ನಾಟದಲ್ಲಿನ ಬೇಡ ಬುಡಕಟ್ಟಿಗೆ ನಾಯಕ ಮತ್ತು ವಾಲ್ಮೀಕಿ ಎಂದು ಕರೆಯುತ್ತಾರೆ. ಇವರಲ್ಲಿ ಈ ಕೆಳಗಿನ ಒಳಬಾಂಧವ್ಯದ ಪ್ರಭೇಧಗಳನ್ನು ಹೀಗೆ ತಿಳಿಸುತ್ತಾರೆ. ಊರು ಬೇಡರು (ಚಿನ್ನಬೋಯಿವಾಂಡ್ಲು, ವ್ಯಾಸ ಬೇಡರು (ಪೆದ್ದ ಬೋಯಿವಾಂಡ್ಲು), ಗುಡ್ಲ ಬೇಡರು(ಗುಂತಬೋಯಿವಾಂಡ್ಲು), ಮಾರೆಮ್ಮನ ಬೇಡರು (ಮುತ್ಯಾಲಮ್ಮ ಅಥವಾ ಉರುಮೆ ಬೇಡರು) ಹಾಲು ಬೇಡರು, ಮೊಂಡ ಬೇಡರು ಎಂದು ಗುರುತಿಸಿದ್ದಾರೆ. ಹೆಗ್ಗಡೆದೇವನಕೋಟೆ ಹಾಗೂ ಕಾಕನಕೋಟೆ ಪರಿಸರದಲ್ಲಿ ಕಂಡುಬರುವ ಓಡಿಗ ಮತ್ತು ಓಡಿಗ, ಗೌಡ ಎಂಬ ಸಮುದಾಯವು ಬೇಡ ಬುಡಕಟ್ಟಿನಿಂದ ಒಡೆದು ಹೊರಹೋಗಿರುವ ಸಾಧ್ಯತೆಗಳ ಕುರಿತು ಕೆ ಎಂ ಮೇತ್ರಿಯವರು ಅಭಿಪ್ರಾಯಪಡುತ್ತಾರೆ."(ಮೇತ್ರಿ ಕೆ ಎಂ:೨೦೦೭:೧೧೨)., ನಾಯ್ಕ್, ನಾಯಕ್, ಬೇಡ, ಬೇಡರ್ ಮತ್ತು ವಾಲ್ಮೀಕಿ ಪದಗಳು ಕರ್ನಾಟಕದಲ್ಲಿ ೧೯೯೧ರಲ್ಲಿ ನಾಯಕ ಬುಡಕಟ್ಟಿನ ಪರ್ಯಾಯ ಪದಗಳೆಂದು ಪರಿಗಣಿಸಲ್ಪಟ್ಟಿದ್ದರೂ ದಿನಾಂಕ ೧೯.೦೪.೧೯೯೩ರಿಂದ ಈ ಪದಗಳು ಮೀಸಲಾತಿ ಅನುಭವಿಸಲು ಅರ್ಹಗೊಂಡವು ಹಾಗೂ ಇತರೆ ನಾಯಕ್ಡ, ನಾಯಕ, ಚೋಲಿವಾಲ ನಾಯಕ, ಕಪಾಡಿಯಾ ನಾಯಕ, ಮೋಟಾ ನಾಯಕ, ನಾನಾ ನಾಯಕ, ನೈಯ್ಕ, ನಾಯಕ್, ಬೇಡ, ಬೇಡರ್, ಮತ್ತು ವಾಲ್ಮೀಕಿ ನಾಯಕ ಬುಡಕಟ್ಟಿನ ಪರ್ಯಾಯ ನಾಮಗಳು. ೧೯೬೦ರಲ್ಲಿ ಬೆಳಗಾವಿ, ಬಿಜಾಪುರ, ಧಾರವಾಡ, ಉತ್ತರಕನ್ನಡ ಜಿಲ್ಲೆಗಳಿಗೆ ಸೀಮಿತಗೊಂಡಂತೆ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿರುವವು. ೧೯೫೦ರಿಂದಲೇ ಬಾಂಬೇ ರಾಜ್ಯದಲ್ಲಿ ನಾಯಕ್ಡ ಮತ್ತು ನಾಯಕ ಪದದ ಸಮುದಾಯಗಳು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಇರುವವು."ಮಹಾರಾಷ್ಟ್ರ ಸೀಮೆಯಲ್ಲಿ ಬೇಡರಿಗೆ ರಾಮೋಸಿ (ರಾಣವಾಸಿಯೇ ರಾಮೋಸಿಯಾಗಿ ಮಾರ್ಪಾಡು ಹೊಂದಿದೆ) ಎನ್ನುವರು. ಖಾನ್ ದೇಶದ ಉತ್ತರದಲ್ಲಿ ಬೇಡರಿಗೆ ಭಿಲ್ ಎನ್ನುವರು, ಮೂಲತಃ ಬೇಡರ್ ಎನ್ನುವುದು ಉರ್ದು ಮೂಲದ

ಪದವಾಗಿದ್ದು ಅದರ ಅರ್ಥ ಉರ್ದುವಿನಲ್ಲಿ ಅಂಜದವರು, ಧೈರ್ಯಶಾಲಿ ಮುಂತಾದ ಅರ್ಥವಾಗಿರುವುದಾಗಿ ತಿಳಿದು ಬರುತ್ತದೆ. ತೆಲುಗಿನಲ್ಲಿ ಬೋಯಾ, ಬೋವಿಯೆಂದು ಸಹ ಕರೆಯುವುದನ್ನು ಕಾಣಬಹುದು. ಆಂಧ್ರದಲ್ಲಿ ಬೇಡರಿಗೆ ಈ ಕೆಳಗಿನ ಒಳಬಾಂಧವ್ಯದ ಗುಂಪುಗಳು ಕಂಡುಬರುತ್ತವೆ. ಅವುಗಳು ಕ್ರಮವಾಗಿ ಈ ರೀತಿಯಾಗಿದೆ. ಸಾದರ (ಉನ್ನತ ಶ್ರೇಣಿಯ) ಅಥವಾ ನಾಯ್ಕುಲು (ವಾಲ್ಮೀಕಿ) ಬೇಡರು, ಟಂಜ್ಜ ಬೇಡರು, ಮಂಗಲ (ಕ್ಷೌರಿಕ) ಬೇಡರು, ಚಾಕ್ಲಾ (ಅಗಸ) ಬೇಡರು, ನೀಚ ಬೇಡರು, ಬಸವಿ ಬೇಡರು, ರಾವೋಶಿ ಬೇಡರು, ಜಾಸ ಬೇಡರು, ಸ್ಥಳೀಯ ಬೇಡರು ಎಂದಿದ್ದು ಈ ಗುಂಪುಗಳು ಅವರ ಸಾಮಾಜಿಕ, ರಾಜಕೀಯ ಸ್ಥಾನಮಾನ ಮತ್ತು ಕಸುಬುಗಳನ್ನು ಪ್ರತಿನಿಧಿಸುತ್ತವೆ."(ಮೇತ್ರಿ ಕೆ ಎಂ:೨೦೦೭:೧೧೩).

ಕರ್ನಾಟಕದಲ್ಲಿ ಮುಖ್ಯವಾಗಿ ಊರ ಬೇಡರು ಅಥವಾ ಊರ ನಾಯಕರು, ಮ್ಯಾಸ ನಾಯಕರು ಅಥವಾ ಮ್ಯಾಸ ಬೇಡರು ಹಾಗೂ ಕರಕರ ಮೊಂಡ, ಬುಟ್ಟಿ ನಾಯಕರು – ಮುಂತಾದ ಪಂಗಡಗಳು ಕಂಡುಬರುತ್ತವೆ. ಇಂದು ಬುಟ್ಟಿ ನಾಯಕರು ಎಲ್ಲಿದ್ದಾರೆ ಎಂಬುದು ತಿಳಿದುಬರುವುದಿಲ್ಲವಾದರೂ ಊರ ನಾಯಕರ ಹಾಗೂ ಇನ್ನುಳಿದ ಮ್ಯಾಸನಾಯಕ, ಕರಕರ ಮೊಂಡ ಸಮುದಾಯಗಳು ಕಂಡು ಬರುತ್ತವೆ. ಈ ಮೂರು ಪಂಗಡಗಳು ಒಂದೇ ಜಾತಿ ಮೂಲದವರಾದರೂ ಇವುಗಳ ನಡುವೆ ಯಾವುದೇ ರೀತಿಯ ವೈವಾಹಿಕ ಸಂಬಂಧಗಳು ಏರ್ಪಡುವುದಿಲ್ಲ. ಬಹುತೇಕ ಭಾರತದ ಬುಡಕಟ್ಟುಗಳು ತುಂಬಾ ಸ್ವಾಭಿಮಾನದ ಬದುಕನ್ನು ಬದುಕಿದವು. ಬೇಡ ಬುಡಕಟ್ಟಿನಲ್ಲಿ ಇದರದೇ ಆದ ಕಟ್ಟೆಮನೆ ಪದ್ಧತಿ, ಜಾತಿ ಪಂಚಾಯ್ತಿಗಳನ್ನು ಇಂದಿಗೂ ಕಾಣಬಹುದು. ಒಂದು ಬುಡಕಟ್ಟು ಸಮುದಾಯ ಮತ್ತೊಂದು ಬುಡಕಟ್ಟು ಸಮುದಾಯದೊಂದಿಗೆ ಅಥವಾ ಬೇರೆ ಜಾತಿಯೊಂದಿಗೆ ಯಾವುದೇ ಕಾರಣಕ್ಕೂ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವುದಿಲ್ಲ. ಹೀಗಾಗಿ ಊರುಬೇಡ, ಮ್ಯಾಸಬೇಡ, ಮೊಂಡರಲ್ಲಿ ಪರಸ್ಪರ ವೈವಾಹಿಕ ಸಂಬಂಧಗಳು ಏರ್ಪಡುವುದಿಲ್ಲ. ಇತ್ತೀಚೆಗೆ ಊರುಬೇಡ ಮತ್ತು ಮ್ಯಾಸಬೇಡರಲ್ಲಿ ವಿದ್ಯಾವಂತರಾದರಾದವರು ವೈವಾಹಿಕ ಸಂಬಂಧಗಳನ್ನು ಅತ್ಯಲ್ಪ ಪ್ರಮಾಣದಲ್ಲಿ ಏರ್ಪಡಿಸಿಕೊಳ್ಳುತ್ತಿದ್ದಾರೆ. ಆದರೆ ಮೊಂಡರೊಂದಿಗೆ ಈ ಎರಡೂ ಪಂಗಡಗಳು ವೈವಾಹಿಕ ಸಂಬಂಧ ಏರ್ಪಡಿಸಿಕೊಂಡ ಉದಾಹರಣೆ ಇಲ್ಲ. ಬೇಡ ಬುಡಕಟ್ಟಿನ ಈ ಮೂರೂ ಪಂಗಡಗಳಲ್ಲಿಯೂ ಅವುಗಳದೇ ಆದ ವಿಶಿಷ್ಟ ಬೆಡಗುಗಳು, ಆರಾಧನಾ ದೈವಗಳು ಇವೆ. ಇವರದೇ ಆದ ಸಾಂಸ್ಕೃತಿಕ ನಾಯಕರು ಇಂದು ದೈವಗಳಾಗಿ ಪೂಜೆಗೊಳ್ಳುತ್ತವೆ. ಸಚೇತನವಾದಿಯಾದ ಬೇಡ ಬುಡಕಟ್ಟು ವೈವಾಹಿಕ ಸಂಬಂಧಗಳನ್ನು ಬೆಳೆಸಲು ಮುಖ್ಯವಾಗಿ ಬೆಡಗುಗಳನ್ನು ಆಧಾರವಾಗಿ ಇರಿಸಿಕೊಳ್ಳುತ್ತವೆ.

### ೪.೧.೧. ಊರಬೇಡರು

ಊರಬೇಡರು ಅಥವಾ ಊರನಾಯಕರು ಮೂಲತಃ ಊರಿನ ಇತರರೊಂದಿಗೆ ಸಹಬಾಳ್ವೆ ಮಾಡುತ್ತಾರೆ. ಜಾತಿ ವ್ಯವಸ್ಥೆಯಲ್ಲಿ ಇವರು ಮಧ್ಯದಲ್ಲಿ ನಿಲ್ಲುತ್ತಾರೆ. ಮಾದಿಗ, ಹೊಲೆಯ ಸಮುದಾಯಗಳನ್ನು ಇತರರಂತೆ ಅಸ್ಪೃಶ್ಯರಾಗಿ ನೋಡುವ ಇವರು ಕುರುಬ ಬ್ರಾಹ್ಮಣ, ಅಕ್ಕಸಾಲಿ, ಲಿಂಗಾಯತ ಗೌಡ

ಮುಂತಾದ ಸಮುದಾಯಗಳು ಶ್ರೇಣೀಕರಣದಲ್ಲಿ ತಮಗಿಂತ ಮುಂದಿವೆಯೆಂದು ಭಾವಿಸುತ್ತಾರೆ. ವಿಶೇಷವೆಂದರೆ ಮ್ಯಾಸ ಬೇಡರು ಹಾಗೂ ಮೊಂಡ ಸಮುದಾಯಗಳು ತನಗಿಂತ ಕೀಳು ಎಂದು ಭಾವಿಸುತ್ತದೆ. ದನ, ಕಾಡು ಹಂದಿ, ಕುರಿ, ಕೋಳಿ, ಉಡ ಮುಂತಾದ ಪ್ರಾಣಿಗಳ ಮಾಂಸವನ್ನು ಭಕ್ಷಣೆ ಮಾಡುತ್ತಾರೆ. ಸಾಮಾಜಿಕವಾಗಿ ತಾವು ಮೇಲಿದ್ದೇವೆಯಂದು ತೋರಿಸಿಕೊಳ್ಳಲು ಇಷ್ಟಪಡುವರು. ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವಾಗ ಮುಖ್ಯವಾಗಿ ಬೆಡಗುಗಳನ್ನು ಪರಿಗಣಿಸುತ್ತಾರೆ. ವಿಜಾತಿ ಬೆಡಗುಗಳಲ್ಲಿ ಮಾತ್ರ ವೈವಾಹಿಕ ಸಂಬಂಧಗಳು ಏರ್ಪಡುತ್ತವೆ. ಸಜಾತಿ ಬೆಡಗಿನವರನ್ನು ಸಹೋದರರೆಂದು ಭಾವಿಸುತ್ತಾರೆ. ತೆರ ಪದ್ಧತಿ ಇವರಲ್ಲಿ ಹಿಂದೆ ಜಾರಿಗೆ ಇದ್ದರೂ ಈಗ ಇಲ್ಲವಾಗಿದೆ. ತೆರ ಪದ್ಧತಿಯ ಬದಲಿಗೆ ವರದಕ್ಷಿಣೆ ಪದ್ಧತಿ ಇವರಲ್ಲಿ ಕಂಡುಬರುತ್ತಿದೆ. ಊರ ನಾಯಕರು ಗಂಡಿನ ಮನೆಮುಂದೆ ಮದುವೆ ಮಾಡುತ್ತಾರೆ. ಕೆಲವೊಮ್ಮೆ ಹೆಣ್ಣಿನ ಮನೆ ಮುಂದೆ ಮದುವೆ ಮಾಡುವುದೂ ಉಂಟು. ಅತ್ತಿಕಂಭ, ಆಲಗಂಭ ತರುವುದು, ಮನೆ ಮುಂದೆ ಚಪ್ಪರ ಹಾಕುವುದು, ಐರಣಿ ಮತ್ತು ಸುರಗಿ ಪದ್ಧತಿಗಳು ಜಾರಿಯಲ್ಲಿವೆ. ತಾಳಿ ಕಟ್ಟಲು ಪುರೋಹಿತರನ್ನು ಕರೆಸುತ್ತಾರೆ. ಇತರ ಮ್ಯಾಸಬೇಡ ಹಾಗೂ ಮೊಂಡರಿಗಿಂತ ಆರ್ಥಿಕವಾಗಿ ಈ ಸಮುದಾಯ ಸಬಲವಾಗಿದೆ. ಹಾಗೇ ಶಿಕ್ಷಣ ಪಡೆದವರ ಪ್ರಮಾಣ ಇತರ ಮ್ಯಾಸಬೇಡರು ಹಾಗೂ ಮೊಂಡರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಈ ಸಮುದಾಯದಲ್ಲಿ ಕಂಡುಬರುತ್ತಾರೆ. ಊರಬೇಡರ ಬೆಡಗುಗಳು, ಮುಮ್ಮಡ್ಲೋರು, ನಲ್ಲಬೋತುಲು, (ಇವೆರಡೂ ಸಹೋದರ ಬೆಡಗುಗಳೆಂದು ಭಾವಿಸುತ್ತಾರೆ.) ಮೀನಿಗೋರು, ಕಾಶೇರು, ಗುಜ್ಜಲ, ಪೂಲೋರು, ಚಿನ್ನಮಾದಲ, ಪೆದ್ಧ ಮಾದಲ, ಮುದಗುಂಡ್ಲು, ಸಾಕೇಲ್ಲೋರು, ಎನಿಮಲೋರು ನೆಲ್ಲಬಾಮುಡ್ಲು, ಡೋಣಮಂಡ್ಲು, ಬೋಸುರಲು, ನಶೆನೋರು, ಮುನ್ನೋಲ್ಲೋರು, ಗಟ್ಟಿಮತ್ಯೇರು, ಕುಂಬ್ರೇಲು, ಕಾದುಗಡ್ಲೇರು, ಎತ್ತಿನೋರು, ದಡ್ಡಿದಾಸರಿಗಳು, ಪಾಲಜ್ಜಿಗಳು, ಗಾಡವುಲು, ಓಬನಾಯಕರು, ಪಟ್ಟಪಲ್ಲಾರು, ಭಾನೋರ್, ಬೋನಳ್ಳಿಯೋರ್, ಚಿನ್ನನಾಯ್ಕಲು, ಪಾಮಲ್ಲೇರು, ರಾಯಬೋರ್, ಬಡಸಲೋರ್ ಮುಂತಾದ ಬೆಡಗುಗಳು ಕಂಡುಬರುತ್ತವೆ. ಮೇಲಿನ ಎರಡು ಬೆಡಗುಗಳಿಗೆ ಇವು ವಿಜಾತಿ ಬೆಡಗುಗಳಾಗುವುದರಿಂದ ಅವರೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸುತ್ತಾರೆ.

**ಹೆರಿಗೆ:** ಊರನಾಯಕರಲ್ಲಿ ವಿವಾಹಿತ ಹೆಣ್ಣು ಬಸಿರೆಯಾದರೆ ಮೂರನೇ ತಿಂಗಳಲ್ಲಿ ಹೆಣ್ಣಿನ ತವರು ಮನೆಯವರು ಬಯಕೆ ಬುತ್ತಿಯನ್ನು ಒಯ್ಯುತ್ತಾರೆ. ಬಯಕೆ ಬುತ್ತಿಯಲ್ಲಿ ಮುಖ್ಯವಾಗಿ ಮೊಸರನ್ನ, ರೊಟ್ಟಿ, ವಿವಿಧ ತರಕಾರಿ ಪಲ್ಯಗಳು, ಸಿಹಿತಿನಿಸುಗಳನ್ನು ಒಯ್ಯುತ್ತಾರೆ. ತರುವಾಯ ಐದು ಅಥವಾ ಎಂಟನೇ ತಿಂಗಳಲ್ಲಿ ಬಸಿರೆ ಹೆಣ್ಣಿಗೆ ಸೀರೆ ಮಾಡುವ ಕಾರ್ಯಕ್ರಮ ಮಾಡುತ್ತಾರೆ. ಇದನ್ನು ಸೀಮಂತ ಕಾರ್ಯವೆಂದೂ ಸಹ ಕರೆಯುತ್ತಾರೆ. ಸೀಮಂತ ಕಾರ್ಯವನ್ನು ಸಾಮಾನ್ಯವಾಗಿ ಗಂಡನ ಮನೆಯಲ್ಲಿಯೇ ಮಾಡಲಾಗುತ್ತದೆ. ಆದರೆ ಅಂದಿನ ಊಟೋಪಚಾರದ ಮತ್ತು ಇತರ ಖರ್ಚುಗಳು ಕೇವಲ ಹೆಣ್ಣಿನ ತವರು ಮನೆಯವರೇ ಮಾಡುತ್ತಾರೆ. ಬಸಿರೆ ಹೆಂಗಸಿಗೆ ಹೊಸ ಸೀರೆ, ಕುಬುಸ, ಇಷ್ಟವಾದ ಪದಾರ್ಥಗಳನ್ನು ತರುತ್ತಾರೆ. ರಾತ್ರಿ ಮುತ್ತೈದೆಯರ ಸಮ್ಮುಖದಲ್ಲಿ ಬಸಿರೆ ಹೆಂಗಸನ್ನು ಕೂಡಿಸಿ ಹೂವಿನ ಸೂಸುಗ ಇತ್ಯಾದಿಗಳನ್ನು ಹಾಕಿ ತವರಿನವರು ಉಡಿ ತುಂಬುತ್ತಾರೆ. ಅಂದು ತವರಿನವರೇ

ಗಂಡಿನ ಊರಿನ ಊರದೈವಕ್ಕೆ ಸಿಹಿ ಊಟವನ್ನು ಕೊಡುತ್ತದೆ. ಈ ಕಾರ್ಯಕ್ರಮವಾದ ಮಾರನೆ ದಿನ ಬಸಿರೆ ಹೆಂಗಸನ್ನು ತೌರಿಗೆ ಕರೆದುಕೊಂಡು ಹೋಗುತ್ತಾರೆ. ಈ ಕಾರ್ಯಕ್ರಮ ಕೇವಲ ಚೊಚ್ಚಿಲು ಬಸಿರೆಗೆ ಮಾತ್ರ ಮಾಡಲಾಗುತ್ತದೆ. ಊರಬೇಡರು ಮನೆಯೊಳಗೆ ಹೆರಿಗೆಯನ್ನು ಮಾಡಿಸುತ್ತಾರೆ. ಹೆರಿಗೆಯಾದ ೧೬ ದಿನದವರೆಗೆ ಆ ಮನೆಯನ್ನು ಮೈಲಿಗೆ ಮನೆಯಂದು ಪರಿಗಣಿಸಲಾಗುತ್ತದೆ. ಹೆರಿಗೆಯಾದ ತರುವಾಯ ಮೈಲಿಗೆ ಬಟ್ಟೆಗಳನ್ನು ಅಗಸರು ತೊಳೆದುಕೊಡುತ್ತಾರೆ. ೧೬ ದಿನದವರೆಗೆ ಮೈಲಿಗೆ ಬಟ್ಟೆ ತೊಳೆಯುವವರು ಅಗಸರೇ ಆಗಿರುತ್ತಾರೆ. ತರುವಾಯ ಮನೆಗೆ ಸುಣ್ಣ ಹಚ್ಚಿ ಮನೆ ತೊಳೆದುಕೊಂಡ ತರುವಾಯ ದೇವರನ್ನು ತೊಳೆದುಕೊಳ್ಳುತ್ತಾರೆ. ಆ ನಂತರ ಬಾಣಂತಿಯ ಕೈಯ್ಯಲ್ಲಿ ಗಂಗೆ ಪೂಜೆ ಮಾಡಿಸುತ್ತಾರೆ. ಸಾಮಾನ್ಯವಾಗಿ ೧೬ ದಿನದಲ್ಲಿಯೇ ಮಗುವಿಗೆ ಹೆಸರಿಡುವ ಕಾರ್ಯ ಮಾಡುತ್ತಾರೆ. ತಮ್ಮ ಮನೆದೇವರ ಹೆಸರು ಕರೆದು ತರುವಾಯ ತಮಗೆ ಇಷ್ಟವಾದ ಹೆಸರುಗಳನ್ನು ಇಡುತ್ತಾರೆ. ಮಗುವಿಗೆ ಸೋದರಮಾವ ಅಥವಾ ಸೋದರತ್ತೆ ಹೆಸರಿಡುತ್ತಾರೆ. ಮಗುವಿಗೆ ಹೆಸರಿಡುವಾಗ ಬಾಣಂತಿಗೆ ಸೂಸುಗ ಹಾಕುತ್ತಾರೆ. ಕಂಕಣ ಕಟ್ಟುತ್ತಾರೆ, ತೊಟ್ಟಿಲು ಕೆಳಗೆ ಬಾಣಂತಿ ಪೂಜೆ ಮಾಡಿ ತಂದ ಗಂಗಮ್ಮನ ಕೊಡ ಇರಿಸುತ್ತಾರೆ. ಮುತ್ತೈದೆಯರು ಕಂಕಣ ಕಟ್ಟಿಕೊಂಡು ಹೆಸರಿಡುವ ಕಾರ್ಯದಲ್ಲಿ ಭಾಗವಹಿಸುತ್ತಾರೆ. ಹೆರಿಗೆಯಾದ ಐದು ತಿಂಗಳ ತರುವಾಯ ಗಂಡಿನ ಮನೆಗೆ ಕಳಿಸಿಕೊಡಲಾಗುತ್ತದೆ. ಅಂದು ಮಗುವಿನ ಸೋದರ ಮಾವ ತೊಟ್ಟಿಲನ್ನು ಒಯ್ಯುತ್ತಾನೆ.

**ಋತುಮತಿ:** ಹೆಣ್ಣು ಋತುಮತಿಯಾದಾಗ ಹೆಣ್ಣನ್ನು ಮನೆಯ ಒಂದು ಮೂಲೆಯಲ್ಲಿ ಕೂರಿಸುತ್ತಾರೆ. ಆ ಹೆಣ್ಣಿಗೆ ತಾಯಿ ಇಲ್ಲವೆ ಅತ್ತೆಯು ಮುಟ್ಟು ನೀರು ಎರೆಯುತ್ತಾರೆ. ಹೆಣ್ಣು ಋತುಮತಿಯಾದ ಮನೆಯನ್ನು ಮೈಲಿಗೆ ಮನೆಯಂದು ಪರಿಗಣಿಸಲಾಗುತ್ತದೆ. ಹೆಣ್ಣಿನ ಮೈಲಿಗೆ ಬಟ್ಟೆಗಳನ್ನು ತೊಳೆಯುವವರು ಅಗಸರಾಗಿರುತ್ತಾರೆ. ಇಲ್ಲಿಯೂ ಸಹ ಐದು ದಿನ ಅಥವಾ ೯ನೇ ದಿನಕ್ಕೆ ಮನೆ ಶುದ್ಧ ಮಾಡಿಕೊಂಡು ಹುಡುಗಿಯ ಕೈಯ್ಯಲ್ಲಿ ಗಂಗೆ ಪೂಜೆ ಮಾಡಿಸುತ್ತಾರೆ. ತರುವಾಯ ಹುಡುಗಿಯನ್ನು ೯ ದಿನ ಅಥವಾ ೧೬ ದಿನದವರೆಗೆ ಹುಡುಗಿಗೆ ಹೂಮುಡಿಸುವ ಕಾರ್ಯ ಮಾಡುತ್ತಾರೆ. ಹದಿನಾರನೇ ದಿನಕ್ಕೆ ಹುಡುಗಿಯ ಕೈಯಲ್ಲಿ ತಂಗಡಿ ಗಿಡದ ಪೂಜೆ ಮಾಡಿಸಿ ತರುವಾಯ ಆಂಜನೇಯನ ದೇವಾಲಯಕ್ಕೆ ಬಂದು ಹಣ್ಣು ಕಾಯಿ ಮಾಡಿಸುತ್ತಾರೆ. ಹುಡುಗಿಯ ಸೋದರತ್ತೆ, ಬೀಗರು ಒಸಗೆ ತರುವ ಪದ್ಧತಿಯೂ ಇದೆ.

**ದೇವರಿಗೆ ಬಿಡುವ ಪದ್ಧತಿ:** ಸಾಮಾನ್ಯವಾಗಿ ಹುಡುಗಿಗೆ ರೋಗಗಳು ಬಂದಾಗ, ಮನೆಯಲ್ಲಿ ಗಂಡುಮಗು ಜನನವಾಗದಿರುವಾಗ, ಮನೆಯ ರೂಢಿ ಪದ್ಧತಿ ಎನ್ನುವ ಕಾರಣಕ್ಕೆ ಹೆಣ್ಣನ್ನು ದೇವರಿಗೆ ಬಿಡಲಾಗುತ್ತದೆ. ಊರ ನಾಯಕರು ಹಾಗೂ ಮ್ಯಾಸನಾಯಕರಲ್ಲಿ ದೇವದಾಸಿ ಪದ್ಧತಿ ಜಾರಿಯಲ್ಲಿದೆ. ಈ ಪದ್ಧತಿ ಒಂದರ್ಥದಲ್ಲಿ ಬುಡಕಟ್ಟು ನಿಯಮಗಳಿಗೆ ವಿರುದ್ಧವಾದುದಾಗಿದೆ. ಪ್ರಾಯಶಃ ಮಧ್ಯಕಾಲೀನ ಕರ್ನಾಟಕದ ರಾಜರ ಆಡಳಿತ ಸಂದರ್ಭದಲ್ಲಿ ನಾಯಕ ಸಮುದಾಯದಲ್ಲಿ ಇಂತಹ ಅನಿಷ್ಟ ಆಚರಣೆ ಪ್ರವೇಶ ಪಡೆದಿರಬೇಕು. ಹಿಂದೆ ರಾಜರ ಸೇವಕರಾಗಿ, ಸೈನಿಕರಾಗಿ ನಾಯಕ ಪುರುಷರು ರಾಜ ಮಹಾರಾಜರ

ಸೇವೆ ಮಾಡಿದರೆ ಅವರ ಕುಟುಂಬದ ಮಹಿಳೆಯರು ದೇವರ ಸೇವೆಯ ಹೆಸರಿನಲ್ಲಿ ರಾಜಮಹಾರಾಜರ ಮತ್ತು ಅವರನ್ನು ರಕ್ಷಿಸುವ ಸೈನಿಕರ ಲೈಂಗಿಕ ಅಭಿಲಾಷೆಯನ್ನು ತೀರಿಸುವವಳಾಗಿ ಕಾರ್ಯನಿರ್ವಹಿಸುತ್ತಿದ್ದಳೆನಿಸುತ್ತದೆ. ಈ ಅನಿಷ್ಟ ಪದ್ಧತಿ ದೇವರ ಹೆಸರಿನಲ್ಲಿ ಇಂದಿಗೂ ಜಾರಿಯಲ್ಲಿರುವುದು ಕಂಡುಬರುತ್ತದೆ. ಇವರ ಈ ಪದ್ಧತಿಗೆ ಆಂಜನೇಯ, ಹುಲಿಗೆಮ್ಮ, ಯಲ್ಲಮ್ಮ, ತುಳಜಾ ಭವಾನಿ, ಅಂಬಾ ಜೋಗಾಯಿ, ಗುತ್ಯಮ್ಮನಂತಹ ದೈವಗಳು ನೆರವಾಗಿವೆ. ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗಿ ಕೂಡ್ಲಿಗಿ, ಕಮಲಾಪುರ, ಹೊಸಪೇಟೆ, ಬಳ್ಳಾರಿಯಂತಹ ಊರುಗಳಲ್ಲಿ ದೇವದಾಸಿ ಹೆಸರಿನಲ್ಲಿ ಜೀವನ ನಿರ್ವಹಣೆ ಮಾಡುವ ನಾಯಕ ಸಮುದಾಯದ ಮಹಿಳೆಯರನ್ನು ಕಾಣಬಹುದು. ಸಾಮಾಜಿಕವಾಗಿ ಅವಮಾನಕರವಾದ ಈ ಅನಿಷ್ಟ ಪದ್ಧತಿಯಿಂದಾಗಿ ಮಹಿಳೆಯರು ಅನುಭವಿಸುವ ನೋವು ಯಾತನೆಗಳು ಎಂಥವು ಎಂಬುದು ಅನುಭವಿಸಿದವಳಿಗೆ ಮಾತ್ರ ಅರ್ಥವಾಗುವಂತದ್ದು. ದೇವದಾಸಿ ಪದ್ಧತಿ ಅಳವಡಿಸಿಕೊಂಡ ಏಕೈಕ ಕಾರಣಕ್ಕಾಗಿ ಈ ನಾಯಕ ಸಮುದಾಯದ ಬಹುತೇಕ ಮಹಿಳೆಯರು ಸಾಮಾಜಿಕವಾಗಿ ತುಂಬಾ ಅಪಮಾನಕಾರಿ ಜೀವನ ನಿರ್ವಹಿಸಬೇಕಾದಂತಹ ಅನಿವಾರ್ಯ ಸ್ಥಿತಿ ನಿರ್ಮಾಣವಾಗಿದೆ. ಇತ್ತೀಚೆಗೆ ವಿದ್ಯಾಭ್ಯಾಸ ನಡೆಸಿ ಶಿಕ್ಷಿತರಾದ ಹೊಸ ತಲೆಮಾರಿನ ಹುಡುಗಿಯರು ಈ ಅನಿಷ್ಟ ಪದ್ಧತಿಯಿಂದ ದೂರವಾಗುತ್ತಿರುವುದು ಕಂಡುಬರುತ್ತಿದೆ.

**ಸಾವು:** ಮನೆಯಲ್ಲಿ ಸಾವುಂಟಾದಾಗ ಸತ್ತ ವ್ಯಕ್ತಿಯ ದೇಹವನ್ನು ಉತ್ತರ ದಕ್ಷಿಣ ಮುಖವಾಗಿ ಮಲಗಿಸಲಾಗುತ್ತದೆ. ಹೆಣದ ತಲೆದೆಸೆಗೆ ತೆಂಗಿನ ಕಾಯಿ ಇರಿಸುತ್ತಾರೆ, ಒಂದು ಪ್ರಣತಿಯ ದೀಪವನ್ನು ಇರಿಸುತ್ತಾರೆ. ಹೆಣದ ಎರಡು ಕಾಲುಗಳ ಹೆಬ್ಬೆರಳನ್ನು ಸೇರಿಸಿ ನುಲಿಯಿಂದ ಕಟ್ಟುತ್ತಾರೆ. ಹೆಣದ ಕಣ್ಣಿನ ಮೇಲ್ಭಾಗದಲ್ಲಿ ನವಣೆ ಅಥವಾ ಅಕ್ಕಿಯನ್ನು ಹಾಕುತ್ತಾರೆ. ಬಾಯಿಗೆ ಎಲೆಯಡಿಕೆ ಕುಟ್ಟಿ ಇರಿಸುತ್ತಾರೆ. ಮೂಗಿಗೆ ಹತ್ತಿಯನ್ನು ಇರಿಸುತ್ತಾರೆ. ಬಂಧು ಬಾಂಧವರು ಬಂದ ತರುವಾಯ ಹೆಣವನ್ನು ಸ್ಮಶಾನಕ್ಕೆ ಒಯ್ಯುತ್ತಾರೆ. ಹೆಣವನ್ನು ಸಿದಿಗೆಯ ಮೇಲೆ ಮಲಗಿಸಿ ಒಯ್ಯುತ್ತಾರೆ. ಸಿದಗಿಯನ್ನು ಕಳ್ಳಿ ಅಥವಾ ಬಿದಿರಿನ ಕೋಲನ್ನು ಬಳಸಿ ತಯಾರಿಸುತ್ತಾರೆ. ಸಿದಗಿಯ ಮೇಲೆ ಹೆಣ ಮಲಗಿಸುವ ಪೂರ್ವದಲ್ಲಿ ಸಿದಗಿಯ ಮೇಲ್ಭಾಗದಲ್ಲಿ ಬಿಳಿ ಬಟ್ಟೆ ಹಾಸುತ್ತಾರೆ, ತರುವಾಯ ಹೆಣವನ್ನು ಬಿಳಿ ಬಟ್ಟೆ ಮೇಲೆ ಮಲಗಿಸಿ ಅದರ ಕಾಲಿನ ಭಾಗದಿಂದ ಬಿಳಿಬಟ್ಟೆಯನ್ನು ತಲೆಭಾಗಕ್ಕೆ ಬರುವಂತೆ ಮೇಲೆ ಹೊದಿಸುತ್ತಾರೆ. ತರುವಾಯ ಉರಿಕೊನೆಯಿಂದ ಸಿದಗಿಗೆ ಹೊಂದಿಸಿ ಹೆಣವನ್ನು ಕಟ್ಟಲಾಗುತ್ತದೆ. ಹೆಣಕ್ಕೆ ಅರಿಸಿಣ, ಕುಂಕುಮ ಹಚ್ಚಿ ಪೂಜೆ ಮಾಡಲಾಗುತ್ತದೆ. ಹೆಣದ ತಲೆಭಾಗದಲ್ಲಿ ತೆಂಗಿನ ಕಾಯಿ ಇರಿಸಿರುತ್ತಾರೆ. ಹೆಣವನ್ನು ಮೊದಲಿಗೆ ಹೊತ್ತವರೇ ಕೊನೆಯವರೆಗೂ ಹೆಣವನ್ನು ಹೋರಬೇಕೆಂಬ ಪದ್ಧತಿ ಇದೆ. ಆದರೆ ಮಧ್ಯಭಾಗದಲ್ಲಿ ಕೆಲವು ಬಂಧುಬಾಂಧವರು ಹೆಗಲುಕೊಡುವ ಪದ್ಧತಿಯೂ ಉಂಟು. ಹೆಣದ ಮುಂಭಾಗದಲ್ಲಿ ಮನೆಯ ವಾರಸುದಾರ ಅಥವಾ ಹಿರಿಯ ಮಗನು ಮಣ್ಣಿನ ಮಡಕೆಯಲ್ಲಿ ಬೆಂಕಿ ಹಾಗು ಕೂಳನ್ನು ಹಿಡಿದುಕೊಂಡು ಹೋಗಲಾಗುತ್ತದೆ. ಸ್ಮಶಾನದ ಮಧ್ಯಭಾಗದಲ್ಲಿ ಹೆಣವನ್ನು ಇಳಿಸುವಾಗ ಮೊದಲಿಗೆ ಆ ಸ್ಥಳದಲ್ಲಿ ತುಂಬಿದ ಕೊಡದ ನೀರನ್ನು ಹಾಕಿ ಹೆಣವನ್ನು

ಇಳಿಸಿ ಮುಖ ನೋಡದವರು ಹೆಣದ ಮುಖ ನೋಡುತ್ತಾರೆ. ಈ ಕಾರ್ಯದ ತರುವಾಯ ಮಗನ ಕೈಯಲ್ಲಿಯ ಅನ್ನದ ಮಡಕೆಯನ್ನು ನೆಲದ ಮೇಲೆ ಬೋರಲಾಕಿ ಎಡಗಾಲಿನಿಂದ ತುಳಿದು ಹೆಣವನ್ನು ಸ್ಮಶಾನಕ್ಕೆ ಸಾಗಿಸುತ್ತಾರೆ. ಹೆಣ ಇಡಲು ಕುಣಿಯನ್ನು ಸಾಮಾನ್ಯವಾಗಿ ಹೊಲೆಯರು ತೆಗೆಯುತ್ತಾರೆ. ಅವರಿಗೆ ಇಂತಿಷ್ಟು ಎಂದು ಕಾಣಿಕೆ ಸಲ್ಲಿಸಲಾಗುತ್ತದೆ. ಹೆಣವನ್ನು ಕುಣಿಗೆ ಇಳಿಸುವ ಪೂರ್ವದಲ್ಲಿ ಎಡಭಾಗದಿಂದ ಬಲಭಾಗಕ್ಕೆ ಮೂರುಸುತ್ತು ಸುತ್ತಲಾಗುತ್ತದೆ. ಹೆಣಕ್ಕೆ ಪೂಜೆ ಸಲ್ಲಿಸಿದ ತರುವಾಯ ಹೆಣವನ್ನು ಬಿಳಿಬಟ್ಟೆಯಿಂದ ಹೊರತೆಗೆದು ಉತ್ತರ ದಕ್ಷಿಣಾಭಿಮುಖವಾಗುವಂತೆ ಇರಿಸಿ ಬಲಭಾಗಕ್ಕೆ ಬರುವಂತೆ ಸ್ವಲ್ಪ ಮುಖವನ್ನು ಓರೆಮಾಡಿ ಮಲಗಿಸಿ ಮಣ್ಣನ್ನು ಹಾಕಲಾಗುತ್ತದೆ. ಸಾಮಾನ್ಯವಾಗಿ ಗಂಡು ಸತ್ತರೆ ಅವನ ಹೆಂಡತಿಯ ಬಳೆ ತಾಳಿ, ಮೂಗುತಿ ತೆಗೆಸಿಕೊಂಡು ಬರಲಾಗುತ್ತದೆ.

**ಕೂಳು ಹಾಕುವುದು:** ವ್ಯಕ್ತಿ ಸತ್ತ ಜಾಗದಲ್ಲಿ ಕುರಿ ಅಥವಾ ಕೋಳಿಯನ್ನು ಬಲಿಕೊಡಲಾಗುತ್ತದೆ. ಆ ಪ್ರಾಣಿಯ ಮಾಂಸ ಹಾಗೂ ಇಷ್ಟವಾದ ಪದಾರ್ಥಗಳನ್ನು ಅಡುಗೆ ಮಾಡಿಕೊಂಡು ಹೋಗಿ ಗುಟ್ಟೆಯ ಮೂರು ಭಾಗಗಳ ಮೇಲೆ ಪೂಜೆ ಮಾಡಿ ಇರಿಸುತ್ತಾರೆ. ವಿಶೇಷವಾಗಿ ಮಾಂಸದ ಪದಾರ್ಥವನ್ನು ಕಾಗೆ ಮುಟ್ಟುವವರೆಗೂ ಕಾದು ನಂತರ ಗುಟ್ಟೆಯ ಕಡೆಗೆ ತಿರುಗಿನೋಡದೆ ಮನೆಗೆ ಹಿಂದಿರುಗುತ್ತಾರೆ. ಮನೆಗೆ ಬಂದು ಊಟ ಮಾಡಲಾಗುತ್ತದೆ. ಇವರ ಊಟದ ತರುವಾಯ ಇತರರು ಊಟ ಮಾಡುತ್ತಾರೆ.

**ದಿವಸ ಕಾರ್ಯ:** ವ್ಯಕ್ತಿ ಸತ್ತ ೯ ಅಥವಾ ೧೧ ದಿನಕ್ಕೆ ದಿವಸ ಮಾಡಲಾಗುತ್ತದೆ. ಅಂದು ಸಾಯಂಕಾಲ ಗಂಗೆಗೆ ಹೋಗಿ ದೇವರನ್ನು ತೊಳೆಯುತ್ತಾರೆ ಮತ್ತು ಗಂಗೆ ಪೂಜೆ ಮಾಡಿ ತುಂಬಿದ ಕೊಡವನ್ನು ಹಿರಿಯ ಮಗ ಹೊತ್ತುಕೊಂಡು ಬರುತ್ತಾನೆ. ಬರುವಾಗ ಸತ್ತ ವ್ಯಕ್ತಿಯು ದೇವಲೋಕಕ್ಕೆ ಹೋಗಿದ್ದಾನೆಂದು ಜೋರಾಗಿ ಹೊಗಳುತ್ತಾ ಬರಲಾಗುತ್ತದೆ. ಮನೆಗೆ ಬಂದ ತರುವಾಯ ಗೊರವಪ್ಪನವರು ಆಕಳ ಮೂತ್ರ ಹಾಕಿ ಮನೆ ಶುದ್ಧಗೊಳಿಸುತ್ತಾನೆ. ಅವನ ಕಾರ್ಯದ ತರುವಾಯ ವ್ಯಕ್ತಿ ಸತ್ತ ಸ್ಥಳದಲ್ಲಿ ತಂಬಿಗೆ ತುಂಬಿರಿಸಿ ಪೂಜೆ ಸಲ್ಲಿಸಿ ಮನೆಯ ಜನರು ಹಾಗೂ ಬಂಧುಬಾಂಧವರು ಊಟಮಾಡುತ್ತಾರೆ, ಅಂದು ಸಿಹಿ ಅಡುಗೆ ಮಾಡುತ್ತಾರೆ.

**ಧಾರ್ಮಿಕ ಆಚರಣೆಗಳು:** ಊರನಾಯಕರು ಸಾಮಾನ್ಯವಾಗಿ ಇತರ ಹಿಂದೂಗಳು ಆಚರಿಸುವ ಹಬ್ಬಗಳನ್ನೆಲ್ಲಾ ಆಚರಿಸುತ್ತಾರೆ. ವಿಶೇಷವಾಗಿ ಆಂಜನೇಯನ ಭಕ್ತರಾದ ಇವರ ದೇವದಾಸಿ ಹೆಣ್ಣುಮಕ್ಕಳು ಓಕಳಿ ಚಲ್ಲುವ ಆಟದಲ್ಲಿ ಭಾಗವಹಿಸುವುದುಂಟು. ಮುಖ್ಯವಾಗಿ ಸ್ತ್ರೀ ದೈವ ಆರಾಧಕರಾದ ಇವರು ಸ್ತ್ರೀ ದೈವಗಳಿಗೆ ಕುರಿ ಕೋಳಿ ಬಲಿಕೊಡುವುದನ್ನು ಕಾಣಬಹುದಾಗಿದೆ. ವಿಶೇಷವಾಗಿ ಮಲೆಯಮ್ಮ, ಸುಂಕ್ಲಮ್ಮ, ಹುಲಿಗೆಮ್ಮ, ಎಲ್ಲಮ್ಮ, ಮಾರೆಮ್ಮ ಮುಂತಾದ ದೈವಗಳನ್ನು ಆರಾಧಿಸುತ್ತಾರೆ.

**೩.೧.೨. ಮ್ಯಾಸ ನಾಯಕರು**

ಮ್ಯಾಸನಾಯಕರು ಕುರಿ, ಕಾಡುಹಂದಿ, ದನ ಮತ್ತು ಇತರ ಕಾಡುಪ್ರಾಣಿಗಳನ್ನು ತಿನ್ನುವರಾದರೂ ಕೋಳಿ ಮತ್ತು ಕೋಳಿಯ ಮೊಟ್ಟೆ ಇವರಿಗೆ ನಿಷಿದ್ಧವಾಗಿದೆ. ಹಾಗೇ ಈಚಲು ಹೆಂಡ, ಈಚಲು ಚಾಪೆ, ಈಚಲು ಹಣ್ಣು ಯಾವುದನ್ನೂ ಇವರು ಬಳಸುವುದಿಲ್ಲ. ಕೋಳಿ ಮತ್ತು ಈಚಲು ಪದಾರ್ಥಗಳನ್ನು ಬಳಸಿದರೆ ಅಂಥವರನ್ನು ಕುಲದಿಂದ ಹೊರಗಿಡುವ ಪದ್ಧತಿ ಇವರಲ್ಲಿದೆ. ಕಾಡುಗೊಲ್ಲರಂತೆ

ಮ್ಯಾಸನಾಯಕರು ಸಹ ಪ್ರತ್ಯೇಕವಾದ ಹಟ್ಟಿಗಳಲ್ಲಿ ವಾಸ ಮಾಡುವ ಪದ್ಧತಿಯನ್ನು ಇಂದಿಗೂ ಉಳಿಸಿಕೊಂಡಿದ್ದಾರೆ. ಆದರೆ ಕೆಲವು ಕಡೆ ನಿಧಾನವಾಗಿ ಮ್ಯಾಸ ಬೇಡರು ಊರಿನ ಮಧ್ಯಕ್ಕೆ ಬರುತ್ತಿದ್ದಾರೆ. ಇಂದಿಗೂ ಬುಡಕಟ್ಟು ಲಕ್ಷಣಗಳನ್ನು ಉಳಿಸಿಕೊಂಡಿರುವ ಇವರು ಮದುವೆ ಇತ್ಯಾದಿ ಕಾರ್ಯದಲ್ಲಿ ಬ್ರಾಹ್ಮಣ ಪುರೋಹಿತರನ್ನು ಆಹ್ವಾನಿಸುವುದಿಲ್ಲ. ಮದುವೆ ಕಾರ್ಯಗಳನ್ನು ಕುಲದ ಹಿರಿಯನೇ ಮುಂದೆ ನಿಂತು ಮಾಡುತ್ತಾನೆ. ಸಾಮಾನ್ಯವಾಗಿ ಹೆಣ್ಣಿನ ಮನೆ ಮುಂದೆ ಮದುವೆಗಳು ನಡೆಯುತ್ತವೆ. ಇವರಲ್ಲಿಯೂ ಐರಣಿ, ಸುರಗಿ ಪದ್ಧತಿಗಳಿರುವುದನ್ನು ಕಾಣಬಹುದು. ಮ್ಯಾಸಬೇಡರು ಮತ್ತು ಊರ ಬೇಡರ ನಡುವೆ ಆಚರಣೆಗಳಲ್ಲಿ ವ್ಯತ್ಯಾಸ ಕಂಡುಬರುವುದಾದರೂ ಶೇಕಡ ಎಂಭತ್ತರಷ್ಟು ಆಚರಣೆಗಳಲ್ಲಿ ಸಾಮ್ಯತೆ ಕಂಡುಬರುತ್ತದೆ. ಮದುವೆಯಲ್ಲಿ ಬಾಸಿಂಗ ದಂಡೆಯನ್ನು ಕಟ್ಟುವುದಿಲ್ಲ. ಗಂಡಿಗೆ ರುಮಾಲನ್ನು ಸುತ್ತಿದರೆ ಹೆಣ್ಣಿಗೆ ಕೇವಲ ಹೂವು ಮುಡಿಸುತ್ತಾರೆ. ಮ್ಯಾಸ ನಾಯಕರು ಗಂಡಿನ ಮನೆಮುಂದೆ ಮದುವೆ ಮಾಡುತ್ತಾರೆ ಹಾಲುಗಂಬ, ಹತ್ತಿಕಂಬದ ಪದ್ಧತಿಯಾಗಲೀ ಸುರಗಿ ಪದ್ಧತಿಯಾಗಲೀ ಇವರಲ್ಲಿರಲಿಲ್ಲ. ಆದರೆ ಇತ್ತೀಚೆಗೆ ಇವರಲ್ಲಿ ಸುರಗಿ ಪದ್ಧತಿ ಪ್ರವೇಶ ಪಡೆದಿದೆ. ಹೆಣ್ಣನ್ನು ನೋಡಲು ಹೋಗುವಾಗ ಐದು ಎಲೆ, ಐದು ಅಡಕೆ, ಐದು ಚಿಪ್ಪು ಬಾಳೆಹಣ್ಣು, ಐದು ಉತ್ತುತ್ತಿ, ಐದು ಕೊಬ್ಬರಿ ಗಿಟುಗ, ಐದು ಅರಿಸಿಣಕೊಂಬು, ಐದು ಸೇರು ಅಕ್ಕಿ ಇಲ್ಲವೆ ಅಕ್ಕಿಯಿಂದ ಮಾಡಿದ ಹಿಟ್ಟು, ಐದು ಸೇರು ಸಜ್ಜೆ ಹಿಟ್ಟಿನ ರೊಟ್ಟಿಗಳನ್ನು ಹೆಣ್ಣಿನ ಮನೆಗೆ ತೆಗೆದುಕೊಂಡು ಹೋಗುತ್ತಾರೆ. ಹೆಣ್ಣು ಒಪ್ಪಿಗೆಯಾದ ತರುವಾಯ ಹೆಣ್ಣಿನ ಮನೆಗೆ ತಾವು ಒಯ್ದ ಪದಾರ್ಥಗಳನ್ನೆಲ್ಲ ಕೊಡುತ್ತಾರೆ. ಇದು ನಿಶ್ಚಯ ಕಾರ್ಯವಿದ್ದಂತೆ. ಇದಾದ ತರುವಾಯ ಕಟ್ಟೆಮನೆಯವರ ಒಪ್ಪಿಗೆ ಪಡೆದು ಒಂದು ನಿಶ್ಚಿತ ದಿನದಂದು ಮದುವೆ ಮಾಡುತ್ತಾರೆ. ಕಟ್ಟೆಮನೆಯ ಯಜಮಾನನೇ ಪುರೋಹಿತನಂತೆ ಮದುವೆ ಕಾರ್ಯಗಳನ್ನು ನಡೆಸಿಕೊಡುತ್ತಾನೆ. ಇವರಲ್ಲಿ ಇಂದಿಗೂ ತೆರ ಪದ್ಧತಿ ಜಾರಿಯಲ್ಲಿದೆ.

ಮ್ಯಾಸ ನಾಯಕರಲ್ಲಿ ಮಂಡಲರು ಮತ್ತು ಮಲ್ಲಿನಾಯಕರು ಎಂಬ ಎರಡು ಪಂಗಡಗಳಿವೆ. ಈ ರೀತಿಯ ಪಂಗಡಗಳು ಊರ ನಾಯಕರಲ್ಲಿ ಕಂಡುಬರುವುದಿಲ್ಲ. ಈ ಎರಡು ಪಂಗಡಗಳು ತಮ್ಮನ್ನು ಚಂದ್ರವಂಶ ಮತ್ತು ಸೂರ್ಯವಂಶಗಳಿಗೆ ಸೇರಿದವರು ಎಂದು ತಿಳಿಸುತ್ತಾರೆ. ಈ ಎರಡು ಪಂಗಡಗಳ ನಡುವೆ ವೈವಾಹಿಕ ಸಂಬಂಧಗಳು ಏರ್ಪಡುತ್ತವೆ. ಮ್ಯಾಸನಾಯಕರಲ್ಲಿ ಮಲ್ಲಿನಾಯಕರು, ಯರಮಂಚನಾಯಕರು, ಮಂದಾಲರು, ಬುಡಗ್ಲೋರು, ಮಂಡ್ಲೋರು ಮುಂತಾದ ಪ್ರಮುಖ ಬೆಡಗುಗಳಿದ್ದು ಅವುಗಳಲ್ಲಿ ಮತ್ತೆ ಉಪಬೆಡಗುಗಳು ಕಂಡು ಬರುತ್ತವೆ. ಮಲ್ಲಿನಾಯಕ ಬೆಡಗಿನಲ್ಲಿ ಈಶ್ವರೋರು, ಎನುಮನಲೋರ್, ಓಬನಾಯಕರು, ಕಾಟಮಲ್ಲರ್, ಚೆನ್ನಕಾದನೋರ್, ಪೆದ್ದನಾಯಕರು, ಕೇರುಲೋರ್, ಮೇಸಲೋರ್, ಎಡೇಲೋರು ಎಂಬ ಉಪ ಬೆಡಗುಗಳಿವೆ. ಯರಮಂಚ ನಾಯಕರಲ್ಲಿ ಅಚ್ಚಪುವೇರ್, ಕರೇನೋರ್, ನಲಗಟೇರ್, ಯರಗೋಟಿಯೇರ್, ಯರಗಟ್ಲಾರ್, ಎಡೇಲರ್ ಎಂದಿವೆ. ಮಂದಾಲರಲ್ಲಿ ಕಾಮಗೇತಿ, ಗಾದ್ರಿಪಾಲ, ಬುಲ್ಲೋಡರ್, ಸಾಕಲೋರು ಎಂದಿವೆ. ಮಂಡ್ಲೋರಲ್ಲಿ ಜರಕಡ್ಲು ಪಾಮುಡ್ಲು, ನಲ್ಲ ಪಾಮುಡ್ಲು, ಪೂಜಾರಳ್ಳಿ ಪಾಮುಡ್ಲು, ಯರಪಾಲಮುಡ್ಲುಗಳು ಎಂದಿವೆ.

ದಾಸರಲ್ಲಿ ಗುಗ್ರಿದಾಸರು, ಗೊಡಗು ದಾಸರು, ಬೋಡ ದಾಸರು, ದಡ್ಡಿ ದಾಸರು ಎಂಬ ಉಪಬೆಡಗುಗಳು ಕಂಡುಬರುತ್ತವೆ. ಮ್ಯಾಸ ಬೇಡರಲ್ಲಿ ಸುಮಾರು ೫೦೦ರಷ್ಟು ಬೆಡಗುಗಳಿವೆಯಂದು ಕೊತ್ಲಮ್ಮನವರು ತಮ್ಮ ಬಳ್ಳಾರಿ ಜಿಲ್ಲೆಯ ಬುಡಕಟ್ಟು ದೇವದಾಸಿಯರ ಅಧ್ಯಯನ ಎನ್ನುವ ಮಹಾಪ್ರಬಂಧದಲ್ಲಿ ತಿಳಿಸಿದ್ದಾರೆ. ಮ್ಯಾಸ ಬೇಡರು ೬೦-೭೦ ಕುಟುಂಬಗಳು ಸೇರಿ ಗುಂಪಾಗಿ ಹಟ್ಟಿಗಳನ್ನು ಕಟ್ಟಿಕೊಳ್ಳುತ್ತಾರೆ. ಹಟ್ಟಿಯ ಮಾದರಿಯ ಚಿಕ್ಕ ಚಿಕ್ಕ ಗುಂಪಾದ ಗುಡಿಸಲುಗಳಾಗಿರುತ್ತವೆ. ಈ ಹಟ್ಟಿ ಸುತ್ತ ಮುಳ್ಳು ಬೇಲಿ ಹಾಕುವ ಪದ್ಧತಿಯಿದ್ದುದಾಗಿ ತಿಳಿದುಬರುತ್ತದೆ. ಬಹುತೇಕ ಈಗ ಬೇಲಿ ಹಾಕುವ ಪದ್ಧತಿ ಕೈಬಿಡಲಾಗಿದೆ.

**ಜನನ:** ಹೆಣ್ಣು ಮಗಳು ಬಸಿರೆಯಾಗಿ ಮಗುವನ್ನು ಪಡೆಯುವ ಸಂದರ್ಭವನ್ನು ಸೂತಕವೆಂದು ಇವರು ಭಾವಿಸುತ್ತಾರೆ. ಹೀಗಾಗಿ ಹಿಂದೆ ಹೆಣ್ಣಿಗೆ ಹೆರಿಗೆಗಾಗಿ ಪ್ರತ್ಯೇಕ ಗುಡಿಸಲನ್ನು ನಿರ್ಮಿಸಲಾಗುತ್ತಿತ್ತು. ಆದರೆ ಈ ಪದ್ಧತಿ ಇಂದು ಮ್ಯಾಸನಾಯಕರಲ್ಲಿ ಕಾಣೆಯಾಗಿದೆ. ಮನೆಯ ಒಂದು ಮೂಲೆಯನ್ನೇ ಹೆರಿಗೆಯ ಸ್ಥಳ ಹಾಗೂ ಬಾಣಂತಿಯನ್ನಿರಿಸುವ ಸ್ಥಳವಾಗಿ ಮಾರ್ಪಡಿಸಲಾಗುತ್ತದೆ. ಹೆರಿಗೆಯಾದ ೧೬ ದಿನದವರೆಗೆ ಇವರೂ ಸಹ ಮೈಲಿಗೆ ಮನೆಯಂದೇ ಭಾವಿಸುತ್ತಾರೆ. ಇನ್ನುಳಿದಂತೆ ಹೆರಿಗೆ ಸಂದರ್ಭದಲ್ಲಿ ಮಾಡುವ ಆಚರಣೆಗಳು ಊರನಾಯಕರನ್ನೇ ಹೋಲುತ್ತವೆ. ಹಿಂದೆ ಇವರಲ್ಲಿ ಸೀಮಂತ ಮಾಡುವ ಪದ್ಧತಿ ಇರಲಿಲ್ಲ. ಆದರೆ ಅಕ್ಕಪಕ್ಕದವರನ್ನು ಅನುಕರಣೆ ಮಾಡುವ ಇವರಲ್ಲಿ ಇಂದು ಸೀಮಂತಕಾರ್ಯ ಪದ್ಧತಿ ಪ್ರವೇಶ ಪಡೆದಿದೆ.

**ಋತುಮತಿ ಆಚರಣೆ:** ಮ್ಯಾಸಬೇಡರ ಹೆಣ್ಣುಮಕ್ಕಳು ಮೈನೆರೆತರೆ ಇತರ ಬುಡಕಟ್ಟುಗಳಂತೆ ಮನೆಯ ಹೊರಗೆ ಪ್ರತ್ಯೇಕವಾಗಿ ಗುಡಿಸಲು ಹಾಕಿ ಇರಿಸುವ ಪದ್ಧತಿ ಇತ್ತು ಆದರೆ ಇಂದು ಗುಡಿಸಲನ್ನು ಪ್ರತ್ಯೇಕವಾಗಿ ಹಾಕದೆ ಮನೆಯ ಮೂಲೆಯಲ್ಲಿ ಹುಡುಗಿಯನ್ನ ೧೦ ದಿನದವರೆಗೂ ಕೂಡಿಸುತ್ತಾರೆ. ಆ೧೦ ದಿನಗಳು ಸೂತಕದ ದಿನಗಳಾಗಿರುತ್ತವೆ. ಹನ್ನೊಂದನೇ ದಿನ ಹುಡುಗಿಗೆ ತಂಗಡಿ ಗಿಡದ ಬಳಿಗೆ ಕರೆದುಕೊಂಡು ಹೋಗಿ ತಂಗಡಿ ಗಿಡದ ಪೂಜೆ ಮಾಡಿಸುತ್ತಾರೆ ಹಾಗೂ ಆ ಗಿಡವನ್ನು ಹುಡುಗಿ ದಾಟುವಂತೆ ತಿಳಿಸುತ್ತಾರೆ. ಇಷ್ಟು ಮಾಡಿದರೆ ಮೈಲಿಗೆ ಮುಗಿಯುತ್ತದೆ. ಹುಡುಗಿಯ ನಾಲಿಗೆಯನ್ನು ಬೇವಿನ ಕಡ್ಡಿಯಿಂದ ಸುಟ್ಟು ಶುದ್ಧಗೊಳಿಸುತ್ತಾರೆ. ತರುವಾಯ ಹುಡುಗಿಯಿಂದ ಗಂಗೆ ಪೂಜೆ ಮಾಡಿಸಿ ಮುತ್ತೈದೆಯರು ತುಂಬಿದ ಕೊಡ ಮನೆಗೆ ತರುವರು. ಇತ್ತೀಚೆಗೆ ಹುಡುಗಿಯನ್ನು ಅಲಂಕರಿಸಿ ಕೂಡಿಸುವ ಪದ್ಧತಿ ಇವರಲ್ಲಿ ಪ್ರವೇಶಪಡೆದಿದೆ.

**ಸಾವು:** ವ್ಯಕ್ತಿ ಸತ್ತರೆ ಅವನ ಹೆಣಕ್ಕೆ ಮೊದಲಿಗೆ ಸ್ನಾನ ಮಾಡಿಸಿ ಉತ್ತರ ದಕ್ಷಿಣಾಭಿಮುಖವಾಗಿ ಮಲಗಿಸಲಾಗುತ್ತದೆ. ಊರನಾಯಕರಂತೆಯೇ ಇವರು ಸಹ ಸತ್ತಾಗ ಮಾಡುವ ಚರಣೆಗಳನ್ನೇ ಮಾಡುವುದನ್ನು ಕಾಣಬಹುದು.

**ಕೂಳು ಕಾರ್ಯ:** ಮೂರನೇ ದಿನ ವ್ಯಕ್ತಿ ಸತ್ತ ಜಾಗದಲ್ಲಿ ಕುರಿ ಕೊಯ್ಯಲಾಗುತ್ತದೆ. ತರುವಾಯ ಅದರ ಅಡುಗೆ ಮಾಡಿ ಸುಡುಗಾಡಿಗೆ ನೈವೇದ್ಯ ಒಯ್ದು ಹೆಣದ ಗುಟ್ಟಿಯ ಮೂರು ಭಾಗಕ್ಕೆ ಆಹಾರವನ್ನು ಇರಿಸಲಾಗುವುದು. ಕಾಗೆ ಬಂದು ಆಹಾರವನ್ನು ಮುಟ್ಟಿದ ತರುವಾಯ ಮರಳಿಬಂದು

ಮನೆಯಲ್ಲಿ ಊಟ ಮಾಡುವರು. ಹೆಣ ಹೊತ್ತವರು ಹಾಗೂ ಕೂಳು ಹಾಕಲು ಹೋದವರು ಊಟ ಮಾಡಿದ ತರುವಾಯ ಇತರರು ಊಟ ಮಾಡುತ್ತಾರೆ. ಇನ್ನು ಹನ್ನೆರಡನೇ ದಿನಕ್ಕೆ ಊರ ನಾಯಕರಂತೆ ಇವರು ದಿವಸ ಕಾರ್ಯ ಮಾಡುತ್ತಾರೆ. ದಿವಸ ಕಾರ್ಯದ ತರುವಾಯ ಇವರ ಮನೆಯ ಮೈಲಿಗೆ ಹೊರಟು ಹೋಗುತ್ತದೆ. ಊರನಾಯಕರಿಗು ಇವರಿಗೂ ಇರುವ ವ್ಯತ್ಯಾಸವೆಂದರೆ ಇವರು ಗೊರವಪ್ಪನವರನ್ನು ಕರೆಸುವುದಿಲ್ಲ. ಈ ಕಾರ್ಯವನ್ನು ಕಟ್ಟೆಮನೆ ಯಜಮಾನ ಅಥವಾ ಪೆಟ್ಟಿಗೆ ದೇವರ ಪೂಜಾರಿ ಮಾಡುತ್ತಾನೆ.

**ದೈವಾರಾಧನೆ:** ಮ್ಯಾಸನಾಯಕರು ಮೂಲತಃ ಅಲೆಮಾರಿಗಳು ಹೀಗಾಗಿ ಇವರು ಪೆಟ್ಟಿಗೆ ದೈವಗಳನ್ನು ಆಚರಿಸುವುದೇ ಹೆಚ್ಚು. ಇವರ ಪ್ರಮುಖ ದೈವಗಳ ಸಂಖ್ಯೆ ಹನ್ನೆರಡು. ಅವುಗಳು ಬೋರೆದೇವರು, ಕಂಪಳ ರಂಗನಾಥ ದೇವರು, ಗಾದ್ರಿಪಾಲನಾಯಕ, ತಿಪ್ಪೇಸ್ವಾಮಿ, ಓಬಳದೇವರು, ಭೋಸೇದೇವರು, ಬೋರವದೇವರು, ಬೊಮ್ಮದೇವರು, ಸೂರನಾಯಕ ದೇವರು ಮುಂತಾದವುಗಳನ್ನು ಪೂಜಿಸುತ್ತಾರೆ. ಪ್ರಾಯಶಃ ಇವು ಅವರ ಸಾಂಸ್ಕೃತಿಕ ನಾಯಕರಾಗಿದ್ದು ತರುವಾಯ ಇವರ ದೈವಗಳಾಗಿ ಮಾರ್ಪಾಡುಹೊಂದಿರುವಂತೆ ಕಂಡುಬರುತ್ತದೆ. ಈ ದೈವಗಳಲ್ಲದೆ ಇತರ ಮಾತೃ ದೇವತೆಗಳಾದ ಸುಂಕ್ಲಮ್ಮ, ಮಾರೆಮ್ಮ, ಕೆಂಚಮ್ಮ, ಮಾಸದಮ್ಮ, ಮಾಸ್ತಮ್ಮ ಮುಂತಾದ ದೈವಗಳನ್ನೂ ಆರಾಧಿಸುತ್ತಾರೆ. ವಿಶೇಷವಾಗಿ ಸುಗ್ಗಿ ಕಾಲದಲ್ಲಿ ಕಂಪಳದೇವರಹಟ್ಟಿ ಮತ್ತು ಮಿಂಚೇರಿ ಭಾಗಗಳಲ್ಲಿ ಇಂದಿಗೂ ಮ್ಯಾಸ ಬೇಡರ ದೈವಗಳ ದೊಡ್ಡ ಜಾತ್ರೆ ನಡೆಯುವುದನ್ನು ಕಾಣಬಹುದು.

**೩.೧.೩. ಮೊಂಡರು**

ಮೊಂಡರು ಇಂದಿಗೂ ಅಲೆಮಾರಿಗಳಾಗಿ ಉಳಿದಿರುವ ಅಲ್ಪಸಂಖ್ಯಾತ ಸಮುದಾಯವಾಗಿದೆ. ತಾವು ಬೇಡ ಸಮುದಾಯಕ್ಕೆ ಸೇರಿದವರು ಎಂದು ಇವರು ಹೇಳುತ್ತಾರೆ. ಮ್ಯಾಸ ಬೇಡರು ತಾವು ಅಣ್ಣ ತಮ್ಮಂದಿರೆಂದು ತಿಳಿಸುತ್ತಾರೆ. ಆದರೆ ಬೇಡ ಸಮುದಯಗಳು ಮೊಂಡರನ್ನು ತಮ್ಮ ಸಮುದಾಯದ ಒಳಪಂಗಡವೆಂದು ಒಪ್ಪುವುದಿಲ್ಲ. ಬಿಕ್ಷಾಟನೆಯನ್ನೇ ವೃತ್ತಿಯಾಗಿಸಿಕೊಂಡಿರುವ ಇವರ ಸ್ಥಿತಿ ಹೆಚ್ಚುಕಡಿಮೆ ಈ ನಾಡಿನ ದಕ್ಕಲಿಗರ ಸ್ಥಿತಿಯೇ ಆಗಿದೆ. ಕೈಯ್ಯಲ್ಲಿ ಕಬ್ಬಿಣದ ಕಡಗ ಹಾಕಿಕೊಂಡು ಕತ್ತಿಯಿಂದ ಅದಕ್ಕೆ ಉಜ್ಜುತ್ತ ಶಬ್ಧವನ್ನು ಬರಸುತ್ತಾ ರಾಗಬದ್ಧವಾಗಿ ಹಾಡುತ್ತಾ ಬಿಕ್ಷಾಟನೆಯನ್ನು ನಡೆಸುತ್ತಾರೆ. ಸಾಮಾನ್ಯವಾಗಿ ಮಹಿಳೆಯರು ಸಹ ಕಸಬರಿಗೆ ಕಟ್ಟುವುದು ಮುಂತಾದ ಚಿಕ್ಕ ಪುಟ್ಟ ಕೆಲಸಗಳಲ್ಲಿ ತೊಡಗುವವರಾದರೂ ಮುಖ್ಯವಾಗಿ ಬಿಕ್ಷಾಟನೆಯನ್ನೇ ಅವಲಂಭಿಸಿದ್ದಾರೆ. ಇವರ ಬೆಡಗುಗಳು ಮ್ಯಾಸ ಬೇಡರ ಬೆಡಗುಗಳನ್ನು ಹೊಂದುತ್ತವೆಂದು ಮೊಂಡರು ತಿಳಿಸುತ್ತಾರೆ. ಬಿಕ್ಷೆ ಕೊಡದಿದ್ದ ಪಕ್ಷದಲ್ಲಿ ಕತ್ತಿಯಿಂದ ಕೈಕೊಯ್ದುಕೊಳ್ಳುವುದು, ತಲೆಹೊಡೆದುಕೊಳ್ಳುವುದು ವಾಂತಿ ಮಾಡುವುದು ಮುಂತಾಗಿ ಅಸಹ್ಯ ಬರುವಂತೆ ನಡೆದುಕೊಳ್ಳುತ್ತಾರೆ. ಹೀಗಾಗಿ ಇವರಿಗೆ ಊರವರು ಬೇಗನೆ ಬಿಕ್ಷೆ ನೀಡಿ ಸಾಗಹಾಕುವುದುಂಟು. ಊರ ಹೊರಗೆ ಕೌದಿ, ಹಳೆಬಟ್ಟೆ, ಪ್ಲಾಸ್ಟಿಕ್ ಹಾಳೆ ಬಳಸಿ ಗುಡಿಸಲು ಹಾಕಿಕೊಳ್ಳುವ ಇವರು ಊರಿಂದೂರಿಗೆ ಸಂಚರಿಸುತ್ತ ಬಿಕ್ಷಾಟನೆ ಮಾಡುತ್ತಾರೆ. ಮ್ಯಾಸಬೇಡರಂತೆ

ತೆಲುಗು ಮೂಲದ ಭಾಷೆಯನ್ನು ಮನೆ ಮಾತಾಗಿಸಿಕೊಂಡಿದ್ದಾರೆ. ಮೂಲತಃ ತಾವು ಆಂಧ್ರದ ಕಡೆಯಿಂದ ವಲಸೆ ಬಂದವರೆಂದು ತಿಳಿಸುತ್ತಾರೆ.

**ಮದುವೆ:** ಮೊಂಡರಲ್ಲಿ ಊರನಾಯಕರು ಹಾಗೂ ಮ್ಯಾಸನಾಯಕರಲ್ಲಿರುವ ಯಾವ ಆಚರಣೆಗಳೂ ಜಾರಿಯಲ್ಲಿಲ್ಲ. ಸಾಮಾನ್ಯವಾಗಿ ಹುಡುಗಿ ತೊಟ್ಟಿಲಲ್ಲಿದ್ದಾಗಲೇ ಮದುವೆ ಮಾಡುವ ಸಂದರ್ಭಗಳೇ ಹೆಚ್ಚು. ಇತ್ತೀಚೆಗೆ ತೊಟ್ಟಿಲ ಮದುವೆ ಇವರಲ್ಲಿ ಕಡಿಮೆಯಾದರೂ ಬಾಲ್ಯ ವಿವಾಹಗಳು ಇನ್ನೂ ನಿಂತಿಲ್ಲ. ಹುಡುಗಿ ಮೈನೆರೆಯುವುದಕ್ಕೆ ಬಂದಿದ್ದಾಳೆ, ಅಥವಾ ಮೈನೆರೆತ ಸ್ವಲ್ಪೇ ದಿನಗಳಲ್ಲಿ ಹೆಣ್ಣನ್ನು ಮದುವೆ ಮಾಡಿಕೊಡುತ್ತಾರೆ. ಮದುವೆಗಾಗಿ ಅಂತಹ ಖರ್ಚುವೆಚ್ಚಗಳೇನೂ ಇರುವುದಿಲ್ಲ. ಹೆಣ್ಣಿನ ಮನೆಗೇ ಗಂಡಿನವರು ಮೊದಲು ಬರುತ್ತಾರೆ. ಹುಡುಗಿಯ ತಂದೆ ತಾಯಿಯರಿಗೆ ಹೆಂಡ ಕುಡಿಸಿ ಮಾತುಕತೆ ನಡೆಸಿ ಹುಡುಗಿಯನ್ನು ಗೊತ್ತುಮಾಡಿಕೊಳ್ಳುತ್ತಾರೆ. ತರುವಾಯ ತಮಗೆ ಅನುಕೂಲವಾದ ಕಡೆ ತುಂಬಾ ಸಂಕ್ಷಿಪ್ತವಾಗಿ ಮದುವೆ ನಡೆಸಲಾಗುತ್ತದೆ. ಮೈನೆರೆದ ಹುಡುಗಿಯಾಗಿದ್ದರೆ ತಕ್ಷಣಕ್ಕೆ ಗಂಡಿನೊಂದಿಗೆ ಹೊರಟುಹೋಗುತ್ತಾಳೆ. ಮದುವೆಯಾಗಿ ಹುಡುಗಿ ಗಂಡನ ಮನೆಗೆ ಬಂದರೆ ಅವನ ಕುಟುಂಬ ಪ್ರತ್ಯೇಕವಾಗುತ್ತದೆ. ಹುಡುಗಿಯ ಸಂಪೂರ್ಣ ಜವಾಬ್ದಾರಿ ಆಕೆಯ ಗಂಡನಿಗೆ ಸೇರುತ್ತದೆ. ಊರುನಾಯಕರು, ಮ್ಯಾಸ ನಾಯಕರು, ಮೊಂಡರಲ್ಲಿ ವಿಧವಾ ವಿವಾಹ ಪದ್ಧತಿಯಿದೆ. ಇದನ್ನು ಸೀರುಡಿಕೆ ಎಂದು ಕರೆಯುತ್ತಾರೆ. ಈ ರೀತಿಯ ಮದುವೆ ವಿಜೃಂಭಣೆಯಿಂದ ನಡೆಯುವುದಿಲ್ಲ, ಕೇವಲ ಗಂಡು ಹೆಣ್ಣು ಕುಲಸ್ಥರ ಒಪ್ಪಿಗೆ ಪಡೆದು ಮದುವೆಯಾಗುತ್ತಾರೆ. ಈ ರೀತಿಯ ಸೀರುಡಿಕೆಯವರಿಗೆ ಮಕ್ಕಳಾದರೆ ಅವರನ್ನು ಇತರರು ಮದುವೆಯಾಗಲು ಹಿಂಜರಿಯುತ್ತಾರೆ. ಸಾಮಾನ್ಯವಾಗಿ ಸೀರುಡುಕಿ ಮನೆತನಗಳಲ್ಲಿಯೇ ಮದುವೆ ಸಂಬಂಧಗಳನ್ನು ಕಂಡುಕೊಳ್ಳುತ್ತಾರೆ.

**ಜನನ:** ಹುಡುಗಿ ಊರೂರಿಗೆ ಗಂಡನೊಂದಿಗೆ ಬಿಕ್ಷಾಟನೆ ಮಾಡುತ್ತಾ ಹೋಗುತ್ತಾಳೆ ವರ್ಷಕ್ಕೊಮ್ಮೆಯೋ ಎರಡು ವರ್ಷಕ್ಕೊಮ್ಮೆಯೋ ಅತ್ತೆ ಮಾವ, ತಂದೆ ತಾಯಿಯನ್ನು ನೋಡುವ ಸೌಭಾಗ್ಯವು ಅವಳಿಗೆ ದೊರೆಯಬಹುದು, ಹೀಗಾಗಿ ಬಸಿರು ಬಾಣಂತನದ ಪೂರ್ತಿ ಜವಾಬ್ದಾರಿ ಗಂಡ ಹೆಂಡತಿಗೆ ಮಾತ್ರ ಸಂಬಂಧಿಸಿದ್ದು. ಆಕೆ ಯಾವ ಊರಿನಲ್ಲಿರುತ್ತಾಳೋ ಅಲ್ಲಿಯೇ ಅವಳ ಹೆರಿಗೆಯಾಗುತ್ತದೆ. ಗಂಡ ಹೆಂಡತಿ ಮಾತನಾಡಿಕೊಂಡು ತಮ್ಮ ಮಗುವಿಗೆ ಒಂದು ಹೆಸರಿಟ್ಟುಕೊಳ್ಳುತ್ತಾರೆ. ಇವರಲ್ಲಿ ತೊಟ್ಟಿಲು ಶಾಸ್ತ್ರ ಇತ್ಯಾದಿಗಳು ಕಂಡುಬರುವುದಿಲ್ಲ.

**ಋತುಮತಿ ಆಚರಣೆ:** ಈ ಸಮುದಾಯದಲ್ಲಿ ಹುಡುಗಿ ಋತುಮತಿಯಾದರೆ ಅಂತಹ ಕಟ್ಟು ನಿಟ್ಟಿನ ಆಚರಣೆಗಳಿಲ್ಲ. ಹುಡುಗಿ ಮೈನೆರೆದಿದ್ದಾಳೆಂದು ತಿಳಿದ ತಕ್ಷಣ ಅವಳಿಗಾಗಿ ತಮ್ಮ ಗುಡಾರದ ಪಕ್ಕದಲ್ಲಿಯೇ ಚಿಕ್ಕ ಗುಡಾರವನ್ನು ಹಾಕಿಕೊಡುತ್ತಾರೆ. ಹುಡುಗಿಯ ತಾಯಿ ಅತ್ತೆ ಯಾರಾದರು ಒಬ್ಬರು ಹುಡುಗಿಗೆ ಮೈತೊಳೆಯುತ್ತಾರೆ. ಹುಡುಗಿಗೆ ಐದು ದಿನದವರೆಗೂ ಬಿಸಿ ಅನ್ನ ಕಾಡಿನ ಚಿಕ್ಕ ಪ್ರಾಣಿಗಳಾದ ಅಳಿಲು ಅಥವಾ ಕಾಡು ಹಕ್ಕಿಗಳ ಪದಾರ್ಥವನ್ನು ಮಾಡಿಕೊಡುತ್ತಾರೆ. ಕೆಲವೊಮ್ಮೆ ಅಕ್ಕಿ, ಗೋದಿ ಗಂಜಿಯನ್ನು ಮಾಡಿಕೊಡುತ್ತಾರೆ. ಐದು ದಿನಕ್ಕೆ ಹುಡುಗಿಗೆ ಮೈತೊಳೆದು ತಂಗಡಿ ಗಿಡ ಮುಟ್ಟಿಸುವ

ಶಾಸ್ತ್ರ ಮಾಡಲಾಗುತ್ತದೆ. ಅದರಾಚೆಗೆ ಅವಳ ಗುಡಾರವನ್ನು ಕಿತ್ತುಹಾಕಲಾಗುತ್ತದೆ. ಐದನೇ ದಿನದ ತರುವಾಯ ಆ ಊರನ್ನು ಬಿಟ್ಟು ಬೇರೆ ಊರಿಗೆ ಹೊರಡುತ್ತಾರೆ. ತರುವಾಯ ಬಿಕ್ಷಾಟನೆಯಿಂದ ಬಂದ ಆಹಾರವನ್ನೇ ಅವಳು ತೆಗೆದುಕೊಳ್ಳುತ್ತಾಳೆ.

**ಸಾವು:** ಸಾವಿಗೆ ಸಂಬಂಧಿಸಿದ ಆಚರಣೆಯೂ ತುಂಬಾ ಸರಳವಾಗಿದೆ. ಇವರಲ್ಲಿ ಸಾವು ಸಂಭವಿಸಿದರೆ ಸಾಮಾನ್ಯವಾಗಿ ಒಂದು ಗಳ ತೆಗೆದುಕೊಳ್ಳಲಾಗುತ್ತದೆ. ಆ ಗಳಕ್ಕೆ ಹೆಣದ ಕೈ ಹಾಗೂ ಕಾಲುಗಳನ್ನು ಹೊಂದಿಸಿ ಕಟ್ಟಲಾಗುತ್ತದೆ. ತರುವಾಯ ಹೆಣದ ಮೇಲೆ ಕೌದಿಯನ್ನು ಹಾಕಿ ಅದನ್ನೂ ಗಳುವಿಗೆ ಕಟ್ಟಿ ಇಬ್ಬರೆ ಹೆಣವನ್ನು ಒಯ್ಯುವ ಪದ್ಧತಿ ಇವರಲ್ಲಿತ್ತು. ಇತ್ತೀಚೆಗೆ ಈ ಪದ್ಧತಿ ಇವರಿಂದ ದೂರವಾಗಿದೆ. ಕಳ್ಳಿ ಕಟ್ಟಿಗೆ ಅಥವಾ ಬಿದಿರಿನಿಂದ ಚಟ್ಟ ಮಾಡಿ ನಾಲ್ಕು ಜನ ಹೆಣವನ್ನು ಒಯ್ಯುತ್ತಾರೆ. ಹೆಣಕ್ಕೆ ಕುಣಿಯನ್ನು ತಾವೇ ತೋಡುತ್ತಾರೆ. ಹೆಣ ಮಣ್ಣು ಮಾಡಿ ಬಂದ ತರುವಾಯ ಹೆಂಡ ಅಥವಾ ಸರಾಯಿ ಕುಡಿಸಿ ಇಸಬಾಯಿ ತೊಳೆಸುತ್ತಾರೆ. ತರುವಾಯ ಮೂರುದಿನಕ್ಕೆ ಕೋಳಿಯನ್ನು ಕೊಯ್ದು ದಿವಸ ಮಾಡುತ್ತಾರೆ. ಇಷ್ಟು ಮಾಡಿದ ತರುವಾಯ ಆ ಊರಿನಲ್ಲಿ ನಿಲ್ಲದೆ ಬೇರೆ ಊರಿಗೆ ತೆರಳುತ್ತಾರೆ.

**ದೈವಾಚರಣೆಗಳು:** ಮಾತೃದೇವತಾರಾಧಕರಾದ ಮೊಂಡರು ಸುಂಕ್ಲಮ್ಮ ಗಾಳೆಮ್ಮ, ಉಡಚಲಮ್ಮ, ಹುಲಿಗೆಮ್ಮ, ಮಾಸ್ತೆಮ್ಮ ಮುಂತಾದ ದೈವಗಳನ್ನು ಆರಾಧಿಸುತ್ತಾರೆ. ಸಚೇತನವಾದಿಗಳಾದ ಇವರು ತಂಗಡಿ ಗಿಡ, ಬೇವಿನ ಮರ ಮುಂತಾದವುಗಳನ್ನು ದೇವತೆಗಳ ಹೆಸರಿನಲ್ಲಿ ಪೂಜಿಸುವುದನ್ನು ಕಾಣಬಹುದಾಗಿದೆ. ಇನ್ನುಳಿದಂತೆ ಹಿಂದೂಗಳ ಹಬ್ಬಗಳನ್ನೆಲ್ಲಾ ಇವರು ಮಾಡುತ್ತಾರೆ.

**ಒಳಾಡಳಿತ ವ್ಯವಸ್ಥೆ:** ಊರನಾಯಕರು ಕಟ್ಟೆ ಮನೆಗಳನ್ನು ಹೊಂದಿದ್ದರು. ಆದರೆ ಇತ್ತೀಚೆಗೆ ಇವರಲ್ಲಿ ಕಟ್ಟೆಮನೆ ಪದ್ಧತಿ ಇಲ್ಲವಾಗುತ್ತಿದೆ. ಮದುವೆ ಹಾಗೂ ಇತರ ಕಾರ್ಯಗಳನ್ನು ನಡೆಸಲು ಕಟ್ಟೆಮನೆ ಯಜಮಾನನಿರುತ್ತಿದ್ದನು. ಕಟ್ಟೆ ಮನೆ ಯಜಮಾನನೊಂದಿಗೆ ಈ ಸಮುದಾಯದಲ್ಲಿ ತಳವಾರ ಮತ್ತು ಇತರ ನಾಲ್ಕು ಜನ ಪ್ರಮುಖರಿರುತ್ತಿದ್ದರು ಈ ಐದು ಜನರನ್ನು ಸೇರಿಸಿ ಕಟ್ಟೆಮನೆಯನ್ನು ರಚಿಸಲಾಗುತ್ತಿತ್ತು. ಸಮುದಾಯದೊಳಗೆ ನಡೆಯುವ ಜಾತಿ ಪಂಚಾಯತಿ, ಜಾತಿಯಿಂದ ಹೊರಹಾಕುವುದು, ಜಾತಿಗೆ ಮರು ಸೇರ್ಪಡೆ ಮಾಡಿಕೊಳ್ಳುವುದು, ಸಾವು ಇತ್ಯಾದಿ ಸಂಭವಿಸಿದಾಗ ಅವುಗಳ ಮೇಲ್ವಿಚಾರಣೆ ನಡೆಸುವುದು, ಹುಡುಗ ಹಾಗೂ ಹುಡುಗಿ ಅನ್ಯ ಜಾತಿಯವರೊಂದಿಗೆ ಅನೈತಿಕ ಸಂಬಂಧಗಳನ್ನಿರಿಸಿಕೊಂಡರೆ ಅವರನ್ನು ಜಾತಿಯಿಂದ ಹೊರಹಾಕುವುದು, ಚಪ್ಪಲಿಯಿಂದ ಹೊಡೆಸಿಕೊಳ್ಳುವುದು, ಸಮುದಾಯದ ಶುಭ ಸಮಾರಂಭಗಳಿಗೆ ಹಾಜರಾಗದೇ ಇರುವುದು, ಸಮುದಾಯದ ಕೆಲಸಕಾರ್ಯಗಳನ್ನು ವಿರೋಧಿಸುವುದು ಮುಂತಾದ ವಿಧಿನಿಷೇಧಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಕಟ್ಟೆಮನೆ ಯಜಮಾನನಿಗೆ ಸೇರಿರುತ್ತದೆ. ಜನ ಬಾಹುಳ್ಯವಿರುವ ಊರ ನಾಯಕರು ಈ ಪದ್ಧತಿಗಳಿಂದ ದೂರ ಸರಿಯುತ್ತಿದ್ದಾರೆ. ಇಂದು ಎಷ್ಟೋ ಊರನಾಯಕ ಯುವಕರು ಇತರ ಸಮುದಾಯದ ಹೆಣ್ಣುಗಳನ್ನು ವಿವಾಹವಾಗಿರುವುದನ್ನು ಕಾಣಬಹುದು. ಆದರೆ ಮ್ಯಾಸನಾಯಕರಲ್ಲಿ ಹಾಗೂ ಮೊಂಡರಲ್ಲಿ ಇನ್ನೂ ಗಟ್ಟಿಯಾಗಿ ಕಟ್ಟೆಮನೆ ಪದ್ಧತಿ ಉಳಿದುಕೊಂಡಿದೆ.

ಸಾಮಾನ್ಯವಾಗಿ ಊರಹೊರಗೆ ಹಟ್ಟಿ ಕಟ್ಟಿಕೊಂಡಿರುವ ಬುಡಕಟ್ಟುಗಳು ತಮ್ಮ ಜೀವನ ಕ್ರಮ ಸಡಿಲದಂತೆ ಈ ರೀತಿಯ ಕಟ್ಟುಪಾಡುಗಳನ್ನು ಹೇರಿಕೊಂಡಿರುತ್ತವೆ ಇದಕ್ಕೆ ಮ್ಯಾಸನಯಕರು ಹೊರತಲ್ಲ. ಇಡೀ ಹಟ್ಟಿ ಒಂದು ಕುಟುಂಬದಂತೆ ವರ್ತಿಸುತ್ತದೆ. ಹೆಣ್ಣು ಹೊರಕುಲದವನನ್ನು ಮದುವೆಯಾದರೆ ಅವಳನ್ನು ಜಾತಿಯ ಒಳಗೆ ಸೇರಿಸಿಕೊಳ್ಳುವುದಿಲ್ಲ. ಕುಲಕ್ಕೆ ಹೆಣ್ಣು ಹೊರಗೆ ಎಂದೇ ಭಾವಿಸುತ್ತಾರೆ. ಗಂಡಸರಾದರೆ ವಿಜಾತಿ ಹೆಣ್ಣನ್ನು ಮದುವೆಯಾಗಿ ಕುಲದೊಳಗೆ ಬರಲು ಆಪೇಕ್ಷಿಸಿದರೆ ಅಂಥವರು ತಾವು ಮದುವೆಯಾದ ಹೆಣ್ಣನ್ನು ಬಿಟ್ಟು ಬರಬೇಕು. ಊರನಾಯಕರು ಈ ವಿಚಾರದಲ್ಲಿ ಇತ್ತೀಚೆಗೆ ಸ್ವಲ್ಪ ಉದಾರಿಗಳಾದಂತೆ ಕಂಡುಬರುವರಾದರೂ ಮ್ಯಾಸನಾಯಕರ ಹಟ್ಟಿ ಹಾಗೂ ಮೊಂಡರಲ್ಲಿ ಇನ್ನೂ ಈ ಪದ್ಧತಿಗಳೆಲ್ಲಾ ಗಟ್ಟಿಯಾಗಿ ಉಳಿದುಕೊಂಡಿವೆ. ಮ್ಯಾಸನಾಯಕರಲ್ಲಿ ಯಾರಾದರೂ ಕೋಳಿ, ಮೊಟ್ಟೆ ತಿಂದುಬಂದರೂ ಅವರನ್ನು ಜಾತಿಯಿಂದ ಬಹಿಷ್ಕರಿಸುತ್ತಿದ್ದರು. ಆದರೆ ಇತ್ತೀಚೆಗೆ ಪುರುಷರು ಯಾರಿಗೂ ತಿಳಿಯದಂತೆ ನಗರ ಪ್ರದೇಶದ ಹೋಟೇಲುಗಳಲ್ಲಿ ಕೋಳಿ, ಮೊಟ್ಟೆ ತಿಂದುಬರುವುದುಂಟು. ಆದರೆ ಹಟ್ಟಿಯಲ್ಲಿ ಬದುಕುವ ಮ್ಯಾಸನಾಯಕ ಕುಟುಂಬಗಳು ತಮ್ಮ ದೈವ ಮುನಿಸುಗೊಂಡೀತೆಂದು ಹೆದರುತ್ತಾರೆ. ಸಾಮಾನ್ಯವಾಗಿ ಕೋಳಿ ಮೊಟ್ಟೆ ತಿಂದು ಹೆಂಡ ಕುಡಿದು ಹಟ್ಟಿಯನ್ನು ಪ್ರವೇಶಿಸುವುದಿಲ್ಲ. ಅಕಸ್ಮಾತ್ ಪ್ರವೇಶಿಸಿದರೂ ಸ್ನಾನ ಮಾಡಿ ಹಟ್ಟಿ ಪ್ರವೇಶಿಸುತ್ತಾರೆ. "ಪ್ರಪಂಚದ ಎಲ್ಲ ಬುಡಕಟ್ಟುಗಳಿಗೂ ಆಹಾರಕ್ಕೆ ಸಂಬಂಧಿಸಿದ ಇಂತಹ ವಿಧಿನಿಷೇಧಗಳು ಕಾಣಬಹುದು. ಕರ್ನಾಟಕದ ಬುಡಕಟ್ಟುಗಳಲ್ಲಿಯೇ ನೋಡುವುದಾದರೆ ಅಟ್ಟಿ ಕುಣಬಿಯರು ಮೊಲವನ್ನು ಕೊಲ್ಲುವುದಿಲ್ಲ, ಕುಂಬ್ರಿಗಳು ಹುಲಿ ಕೊಲ್ಲುವುದಿಲ್ಲ, ನಾಮಧಾರಿಗಳು ಪಡಚಿ ಹುಳುವನ್ನು ಪವಿತ್ರವೆಂದು ಭಾವಿಸಿ ಕೊಲ್ಲುವುದಿಲ್ಲ. ಲಂಬಾಣಿಗರು ಕೋಳಿಯನ್ನು ಪವಿತ್ರವೆಂದು ಭಾವಿಸುವರು, ಹರಿಕಂತ್ರ ಬೆಸ್ತರು ಮಡ್ಲೆ ಮೀನನ್ನು ಪವಿತ್ರವೆಮದು ಭಾವಿಸಿ ಹಿಡಿಯುವುದಿಲ್ಲ, ಈ ರೀತಿಯ ಆಹಾರದಲ್ಲಿ ನಿಷೇಧಗಳನ್ನು ಹೇರಿಕೊಂಡಿರುವುದನ್ನು ಕಾಣಬಹುದು.(ಕೃಷ್ಣಮೂರ್ತಿ ಹನೂರು:೨೦೦೬:೮೯),ಈ ರೀತಿ ಆಹಾರ ಪದ್ಧತಿಯನ್ನು ಮೀರಿ ನಡೆದವರಿಗೆ ಬಹಿಷ್ಕರಿಸುವ ಹಕ್ಕು ಕಟ್ಟೆಮನೆ ಯಜಮಾನನಿಗಿರುತ್ತದೆ. ಈ ಮೂರೂ ಪಂಗಡಗಳಲ್ಲಿ ಅವಾಚ್ಯ ಶಬ್ಧದಿಂದ ಬೈಸಿಕೊಳ್ಳುವುದು ಹಾಗೂ ಚಪ್ಪಲಿಯಿಂದ ಹೊಡೆಸಿಕೊಳ್ಳುವುದು ಜಾತಿ ಬಹಿಷ್ಕಾರಕ್ಕೆ ಕಾರಣವಾಗುತ್ತದೆ. ಅಂತಹ ವ್ಯಕ್ತಿ ಜಾತಿಗೆ ಮರಳಿ ಸೇರಲು ಕಟ್ಟೆಮನೆ ಯಜಮಾನರ ಸಮ್ಮುಖದಲ್ಲಿ ಶುದ್ಧಗೊಳ್ಳಬೇಕು. ಈ ರೀತಿಯ ಹಲವಾರು ವಿಧಿನಿಷೇಧಗಳು ಊರನಾಯಕರಲ್ಲಿ ಬಹುತೇಕ ಕಡಿಮೆಯಾದರೆ ಮ್ಯಾಸಬೇಡರಲ್ಲಿ ಸ್ವಲ್ಪಮಟ್ಟಿಗೆ ಉಳಿದುಕೊಂಡು ಬಂದಿವೆ. ಮೊಂಡರಲ್ಲಿ ಅವಿನ್ನೂ ಪ್ರಭಲವಾಗಿಯೇ ಇವೆ.

### ೫.೩.೨ ಡುಂಗ್ರಿ ಗರಾಸಿಯಾ ಬುಡಕಟ್ಟು

ಭಾರತ ವೈವಿದ್ಯಮಯವಾದ ದೇಶ. ವಿವಿಧ ರೀತಿಯ ಭೌಗೋಳಿಕ ಪರಿಸರವನ್ನು ಒಳಗೊಂಡ ಭಾರತದ ಸಂಸ್ಕೃತಿಯು ಮೇಲ್ನೋಟಕ್ಕೆ ಒಂದೇ ಎಂದು ಕಾಣಸಿದರೂ ಅದರ ಆಳಕ್ಕೆ ಇಳಿದು ನೋಡಿದಾಗ ವಿವಿಧ ಸಂಸ್ಕೃತಿಗಳು ಕಂಡುಬರುತ್ತವೆ. ನೂರಾರೂ ಜಾತಿ ಸಮುದಾಯ ಬುಡಕಟ್ಟುಗಳನ್ನೊಳಗೊಂಡ ಭಾರತವು ಅಷ್ಟೆ ಸಂಖ್ಯೆಯ ಭಾಷೆ, ರೀತಿ-ನೀತಿಗಳನ್ನು ಒಳಗೊಂಡಿದೆ.

ಭಾರತದ ಉದ್ದಕ್ಕೂ ಅಲೆಮಾರಿ ಸಮುದಾಯಗಳು ಕಂಡು ಬರುತ್ತವೆ. ಅವು ಇಂಥಲ್ಲಿಯೇ ನೆಲೆಸಬೇಕು ಎನ್ನುವ ಕಟ್ಟುಪಾಡಿಗೆ ಒಳಗಾಗದೆ ತಮ್ಮ ಜೀವನಕ್ಕೆ ಅನೂಕೂಲವಾದ ಪ್ರದೇಶಗಳಲ್ಲಿ ಅಲೆದಾಡುತ್ತಲೇ ಇರುತ್ತವೆ. ಡುಂಗ್ರಿಗರಾಸಿಯ ಸಮುದಾಯವು ಇಂತಹ ಅಲೆಮಾರಿ ಸಮುದಾಯಗಳಲ್ಲಿ ಒಂದು. ಬುಡಕಟ್ಟು ಸಮುದಾಯಗಳ ಕುರಿತು ವಿದ್ವಾಂಸರಲ್ಲಿ ಹಲವಾರು ಗೊಂದಲಗಳಿವೆ. ಹೀಗಾಗಿ ಯಾವುದೋ ಬುಡಕಟ್ಟು ಸಮುದಾಯವನ್ನು ಇನ್ನಾವುದೋ ಸಮುದಾಯದೊಂದಿಗೆ ಸಮೀಕರಿಸಿ ಹೇಳುವ ಸಾಧ್ಯತೆಗಳೂ ಇರುತ್ತವೆ. ಇಂದು ಅಲೆಮಾರಿ ಬುಡಕಟ್ಟು ಸಮುದಾಯಗಳನ್ನು ಕಾಡಿನಿಂದ ಒಕ್ಕಲೆಬ್ಬಿಸಿ ನಾಡಿಗೆ ದೂಡಲಾಗುತ್ತಿದೆ. ಆ ಸಮುದಾಯಗಳಿಗಾಗಿ ಕಾಲೋನಿಗಳನ್ನು ಸೃಷ್ಟಿಸಿ ಎಲ್ಲಾ ಬುಡಕಟ್ಟುಗಳನ್ನು ಒಂದೇ ಕಾಲೋನಿಯಲ್ಲಿ ನೆಲೆಸುವಂತೆ ಮಾಡಿದ ಸಾಧ್ಯತೆಗಳೂ ಇರುತ್ತದೆ. ಹಕ್ಕಿಪಿಕ್ಕಿಗಳು, ಸೋಲಿಗರು, ಇರುಳಿಗರು ಹೀಗೆ ಎಲ್ಲಾ ಸಮುದಾಯಗಳನ್ನು ಒಂದೇ ಕಡೆ ನೆಲೆಸುವಂತೆ ಮಾಡಿದಾಗ ಅಧ್ಯಯನಕಾರನು ಕೆಲವೊಮ್ಮೆ ಸಮುದಾಯಗಳ ಕುರಿತು ಹೇಳುವಾಗ ಗೊಂದಲಗೊಳ್ಳುವ ಸಾಧ್ಯತೆಗಳಿರುತ್ತವೆ. ಯಾಕೆಂದರೆ ಬಹುತೇಕ ಬುಡಕಟ್ಟುಗಳು ಒಂದೇ ಸ್ವರೂಪದಲ್ಲಿರುವಂತೆ ಮೇಲ್ನೋಟಕ್ಕೆ ಕಾಣಬಹುದು. ಅವುಗಳ ಅಂತರಾಳಕ್ಕೆ ಇಳಿದು ನೋಡಿದಾಗ ಮಾತ್ರ ಅವುಗಳ ಭಿನ್ನತೆಯ ಅರಿವಾಗುತ್ತದೆ. ಕರ್ನಾಟಕದಲ್ಲಿ ಡುಂಗ್ರಿಗರಾಸಿಯಾ ಸಮುದಾಯವನ್ನು ಗುರುತಿಸುವಲ್ಲಿಯೂ ಇಂತಹ ಹತ್ತೆಂಟು ಗೊಂದಲುಗಳು ಕಾಡಿದ್ದುಂಟು. ಮೈಸೂರು ಪ್ರಾಂತ್ಯದ ಒಂದು ಕಾಲೋನಿಯಲ್ಲಿ ವಾಸಿಸುವ ಡುಂಗ್ರಿಗರಾಸಿಯಗಳನ್ನು ಹಕ್ಕಿಪಿಕ್ಕಿಗಳು ಎಂದುಕರೆಯಲಾಗುತ್ತದೆ. ಬಳ್ಳಾರಿ ಪ್ರದೇಶದಲ್ಲಿ ಡುಂಗ್ರಿ ಗರಾಸಿಯಾಗಳನ್ನು ಗೋಸಂಗಿಗಳು, ಗೋಸಾಯಿಗಳು ಎಂದು ಕರೆಯುತ್ತಾರೆ. ಅದೇ ರೀತಿ ಬೆಳಗಾವಿ ಪ್ರದೇಶದಲ್ಲಿ ಡುಂಗ್ರಿ ಗರಾಸಿಯಾಗಳನ್ನು ಗೋಸಾಯಿಗಳು ಎಂದು ಕರೆಯಲಾಗುತ್ತಿದೆ. ಹೀಗೆ ಬೇರೆ ಬೇರೆ ಜಿಲ್ಲೆಗಳಲ್ಲಿಯೂ ಈ ಸಮಸ್ಯೆಗಳಿವೆ. ಆದರೆ ಗೋಸಾಯಿ, ಗೋಸಂಗಿ, ಗೋಸಾವಿ, ಸಮುದಾಯಗಳಿಗೂ ಹಾಗೂ ಡುಂರಿಗರಾಸಿಯಾ ಸಮುದಾಯಕ್ಕೂ ಆಂತರ್ಯದಲ್ಲಿ ತುಂಬಾ ವ್ಯತ್ಯಾಸಗಳಿವೆ. ಹಕ್ಕಿಪಿಕ್ಕಿಗಳಿಗೂ ಡುಂಗ್ರಿ ಗರಾಸಿಯಾಗಳಿಗೂ ಯಾವುದೇ ರೀತಿಯ ಸಂಬಂಧಗಳಿರುವುದಿಲ್ಲ. ಹಾಗೇ ಗೋಸಂಗಿ ಗೋಸಾವಿ, ಗೋಸಾಯಿಗಳಿಗೂ ಡುಂಗ್ರಿಗರಾಸಿಯಾಕ್ಕೂ ಯಾವುದೇ ರೀತಿಯ ಹೋಲಿಕೆಗಳು ಸಾಧ್ಯವಿಲ್ಲ. ಡುಂಗ್ರಿಗರಾಸಿಯಾ ಬೆಡಗುಗಳು, ಗೋಸಂಗಿ, ಗೋಸಾಯಿ ಬೆಡಗುಗಳಿಗೂ ತುಂಬಾ ಭಿನ್ನತೆ ಇದೆ. ಹಾಗೆ ಪ್ರತಿಯೊಂದು ಆಚರಣೆಗಳು, ದೈವಗಳಲ್ಲಿಯೂ ಭಿನ್ನತೆ ಇದೆ. ಹಾಗಾಗಿ "ಡುಂಗ್ರಿಗರಾಸಿಯಾ ಸಮುದಾಯಕ್ಕೂ ಗೋಸಂಗಿ, ಗೋಸಾಯಿ, ಗೋಸಾವಿ ಸಮುದಾಯಗಳಿಗೂ ತುಂಬಾ ಭಿನ್ನತೆ ಕಂಡುಬರುತ್ತದೆ. ಈ ಎಲ್ಲಾ ಸಮುದಾಯಗಳ ಮಧ್ಯ ವೈವಾಹಿಕ ಸಂಬಂಧಗಳು ಏರ್ಪಡಲಾರವು. ಆದರೆ ದುರ್ದೈವದ ವಿಚಾರವೆಂದರೆ ಎಷ್ಟೋ ಪ್ರದೇಶಗಳಲ್ಲಿ ಡುಂಗ್ರಿ ಗರಾಸಿಯಾಗಳನ್ನು ಗೋಸಂಗಿ, ಗೋಸಾಯಿ, ಗೋಸಾವಿ, ಹಕ್ಕಿಪಿಕ್ಕಿಗಳು ಎಂದು ಗುರುತಿಸುತ್ತಿರುವುದು ಕಂಡುಬರುತ್ತಿದೆ"(ಜಗದೀಶ ಕೆ ಕೆ:೨೦೦೮:೨೩), ಈ ರೀತಿ ಭಿನ್ನ ಸಮುದಾಯಗಳ ಹೆಸರಿನಿಂದ ಇವರನ್ನು ಗುರುತಿಸುತ್ತಿರುವುದರಿಂದ ಈ ಸಮುದಾಯಕ್ಕೆ ವ್ಯವಸ್ಥೆಯಲ್ಲಿ ಸಿಗಬೇಕಾದ ನ್ಯಾಯ ಸಿಗದೇ ಹೋಗಿದೆಯೋನೋ ಎನಿಸುತ್ತದೆ. ನಿಜವಾಗಿಯೂ ಆ ಸಮುದಾಯಕ್ಕೆ ನ್ಯಾಯ ದೊರೆಯಬೇಕು ಎನ್ನುವ ಉದ್ದೇಶದಿಂದಾಗಿ ಹಾಗೂ ಈ ಸಮುದಾಯದ

ಕುರಿತು ಸಮಗ್ರವಾಗಿ ಓದುಗರಿಗೆ ಮಾಹಿತಿ ನೀಡುವ ಉದ್ದೇಶದಿಂದ ಈ ಕೃತಿಯಲ್ಲಿ ಡುಂಗ್ರಿಗರಾಸಿಯಾಗಳ ಕುರಿತು ಸಮಗ್ರವಾದ ಮಾಹಿತಿಯನ್ನು ನೀಡಲು ಪ್ರಯತ್ನಿಸಲಾಗಿದೆ.

**ಪದ ನಿಷ್ಪತ್ತಿ:** "ಮೂಲತಃ ಗುಜಾರತ್ ಮೂಲದವರಾದ ಡುಂಗ್ರಿಗರಾಸಿಯ ಸಮುದಾಯವು ಭಾರತದ ಬೇರೆ ಬೇರೆ ಪ್ರಾಂತಕ್ಕೆ ವಲಸೆ ಹೋಗಿರಬೇಕು. ಡುಂಗ್ರಿಗರಾಸಿಯ ಎನ್ನುವುದು ಮೂಲತಃ ಗುಜರಾತಿ ಭಾಷೆಯ ಪದವಿರಬೇಕು. ಡುಂಗರ್+ಗರ್+ಸಿಯಾ ಈ ಮೂರು ಪದಗಳ ಸಮೂಹವೇ ಡುಂಗ್ರಿಗರಾಸಿಯಾ ಆಗಿರಬೇಕು. ಗುಜರಾತಿಯಲ್ಲಿ ಡುಂಗರ್ ಎಂದರೆ ಕಾಡು, ಬೆಟ್ಟ, ಗುಡ್ಡ ಎನ್ನುವ ಅರ್ಥವಿದೆ. ಹಾಗೆ ಘರ್ ಎಂದರೆ ಮನೆ ಎಂದರ್ಥ. ಸಿಯಾ ಎಂದರೆ ಗುಜರಾತಿ ಭಾಷೆಯಲ್ಲಿ ಮಕ್ಕಳು ಎನ್ನುವ ಅರ್ಥವಿದೆ. ಡುಂಗ್ರಿಗರಾಸಿಯಾ ಎಂದರೆ ಬೆಟ್ಟಗುಡ್ಡಗಳಲ್ಲಿ ಮನೆಮಾಡಿಕೊಂಡು ವಾಸಿಸುವ ಮಕ್ಕಳು ಎನ್ನುವ ಅರ್ಥವನ್ನು ಕೊಡುತ್ತದೆ. ಇಲ್ಲಿ ಮಕ್ಕಳು ಎನ್ನುವಪದವು ವಿಶಾಲಾರ್ಥದಲ್ಲಿ ಬಳಕೆಗೊಂಡಿದ್ದು, ಅದನ್ನು ಸಮುದಾಯ ಎಂದು ಬಳಕೆ ಮಾಡಬಹುದು. ಡುಂಗ್ರಿಗರಾಸಿಯ ಎನ್ನುವ ಪದ ಕನ್ನಡದಲ್ಲಿ ಕಾಡಿನ ಮಕ್ಕಳು ಎಂದು ಅರ್ಥೈಸಿಕೊಳ್ಳಬಹುದು."(ಜಗದೀಶ ಕೆ ಕೆ:೨೦೦೮:೩೪).

ಡುಂಗ್ರಿಗರಾಸಿಯಾ ಸಮುದಾಯವು ಭಾರತದ ಮೂಲನಿವಾಸಿಗಳಲ್ಲೊಂದು ದಕ್ಷಿಣ ಭಾರತದ ಕೇರಳ ಹಾಗೂ ತಮಿಳುನಾಡು ರಾಜ್ಯಗಳನ್ನು ಹೊರತುಪಡಿಸಿ ಭಾರತದ ಬಹುತೇಕ ರಾಜ್ಯಗಳಲ್ಲಿ ಈ ಸಮುದಾಯವು ನೆಲೆ ನಿಂತಿರುವುದನ್ನು ಕಾಣಬಹುದು. ರಾಜಸ್ತಾನದಿಂದ ಗುಜರಾತಿಗೆ ವಲಸೆ ಬಂದು ತರುವಾಯ ಬೇರೆ ಬೇರೆ ಪ್ರದೇಶಗಳಿಗೆ ಇವರು ವಲಸೆ ಹೋಗಿರಬೇಕು. ಅಂಡಮಾನ್ ಹಾಗೂ ನಿಕೋಬಾರ್ ದ್ವೀಪಗಳಲ್ಲೂ ಈ ಸಮುದಾಯ ನೆಲೆಸಿರುವುದು ತಿಳಿದು ಬರುತ್ತದೆ. ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಇವರನ್ನು ಗುರುತಿಸಲಾಗುತ್ತದೆ. ಭಿಲ್, ಭಿಲ್‌ಗರಾಸಿಯಾ, ಧೋಳಿ, ಡುಂಗ್ರಿಬಿಲ್, ಡುಂಗ್ರಿಗರಾಸಿಯ ಪಂಚಮಹಲ್, ಭರೂಚ್, ಮೇವಾಸಿಭಿಲ್, ರಾವಾಲ್‌ಭಿಲ್, ತಾಡ್ವಿಭಿಲ್ ಭಗಾಲೀಯ, ಭೀಲಾಲ, ಪಾವರ, ವಾಸವಾ, ವಾಸವೇ ಹೀಗೆ ನಾನಾ ಹೆಸರುಗಳಿಂದ ಇವರನ್ನು ಗುರುತಿಸಲಾಗುತ್ತದೆ."ಕರ್ನಾಟಕದ ಒಟ್ಟು ೨೧ ಜಿಲ್ಲೆಗಳಲ್ಲಿ ಈ ಸಮುದಾಯವು ನೆಲೆ ನಿಂತಿರುವುದು ಕಂಡುಬರುತ್ತದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಂತರ, ಬೆಳಗಾವಿ, ಚಾಮರಾಜನಗರ ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಹಾಸನ, ಹಾವೇರಿ ಕಾರವಾರ, ಕೋಲಾರ, ಕೊಡಗು, ಮಂಡ್ಯ, ಮಂಗಳೂರು, ಮೈಸೂರು, ಶಿವಮೊಗ್ಗ, ತುಮಕೂರು, ಉಡುಪಿ, ಬಳ್ಳಾರಿ ಜಿಲ್ಲೆಗಳ ಗ್ರಾಮಾಂತರ ಪ್ರದೇಶ ಹಾಗೂ ನಗರ ಪ್ರದೇಶಗಳಲ್ಲಿ ಇವರು ನೆಲೆ ನಿಂತಿರುವುದು ಕಂಡುಬರುತ್ತದೆ."(ಜಗದೀಶ ಕೆ ಕೆ:೨೦೦೮:೪೫).

**ನೆಲೆಯ ಸ್ವರೂಪ**

ಡುಂಗ್ರಿಗರಾಸಿಗರು ಸಾಮಾನ್ಯವಾಗಿ ಊರ ಹೊರಭಾಗದಲ್ಲಿ ಅಥವಾ ಕಾಡಿನ ಅಂಚಿನಲ್ಲಿ ಹಾಗೂ ಬಯಲು ಜಾಗದಲ್ಲಿ ಗುಡಾರಗಳನ್ನು ಹಾಕಿಕೊಂಡು ನೆಲೆಸುತ್ತಾರೆ. ಅಲೆಮಾರಿಗಳಾದ ಈ ಸಮುದಾಯವು ಒಂದೇ ಕಡೆ ನೆಲೆ ನಿಲ್ಲದೆ ತಾವು ನೆಲೆಸಿದ ಉದ್ದೇಶ ಪೂರ್ಣಗೊಂಡ ನಂತರ ಮತ್ತೊಂದು ಊರಿಗೆ

ತೆರಳುತ್ತಾರೆ. ಸಾಮಾನ್ಯವಾಗಿ ತಾವು ವಾಸಿಸುವ ಪ್ರದೇಶದಲ್ಲಿ ಯಾವುದೇ ಒಂದು ಸಮಸ್ಯೆ ಕಂಡುಬಂದರೆ ಸಮುದಾಯದ ಯಜಮಾನನಾದವನು, ಸಮುದಾಯದ ಎಲ್ಲ ಹಿರಿಯರು ಸ್ಥಳೀಯ ತೀರ್ಮಾನ ತೆಗೆದುಕೊಂಡು ತಮಗೆ ಅನುಕೂಲವೆನಿಸಿದ ಮತ್ತೊಂದು ಪ್ರದೇಶಕ್ಕೆ ಸ್ಥಳಾಂತರಗೊಳ್ಳುತ್ತಾರೆ. ಇವರು ನೆಲೆ ನಿಲ್ಲಲು ನೀರಿಗೆ ಅನುಕೂಲವಿರುವ ಪ್ರದೇಶವನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಅಂದರೆ ನದಿ, ಕೆರೆ, ಹಳ್ಳ, ಕಾಲುವೆಗಳ ಹತ್ತಿರದಲ್ಲಿ ವಾಸಿಸಲು ಇಷ್ಟಪಡುತ್ತಾರೆ. ಹಾಗೇ ಬೇಟೆಗೆ ಅನುಕೂಲವಾಗುವ ಆದರೆ ಅಪಾಯಕಾರಿಯಲ್ಲದ ಪ್ರದೇಶಗಳನ್ನು ಸಹ ಇವರು ನೆಲೆಸಲು ಆಯ್ಕೆ ಮಾಡಿಕೊಳ್ಳುವುದುಂಟು. ಪ್ಲಾಸ್ಟಿಕ್ ಚೀಲಗಳು, ಬಟ್ಟೆಯಿಂದ ಹೊಲಿದ ಕೌದಿಗಳನ್ನು ಗುಡಾರದ ಮೇಲ್ಭಾಗದಲ್ಲಿ ಹೊದಿಸುತ್ತಾರೆ. ಗುಂಪು ಗುಂಪಾಗಿ ಡೇರೆಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಡೇರೆ ನಿರ್ಮಿಸಲು ಮೂರು ಬಿದರಿನ ಕೋಲುಗಳನ್ನು, ಕೌದಿ ಅಥವಾ ಪ್ಲಾಸ್ಟಿಕ್ ಚೀಲಗಳನ್ನು ಎಂಟು ಹಗ್ಗಗಳನ್ನು ಹಾಗೂ ಕಬ್ಬಿಣದ ಮುಂಚೂಣಿಗಳನ್ನು ಬಳಸುತ್ತಾರೆ. ತಾವು ವಾಸಿಸುವ ಗುಡಾರಗಳ ಗುಂಪಿಗೆ 'ಜಮಾತ್' ಎಂದು ಕರೆಯುತ್ತಾರೆ. ಜಮಾತ್‌ನ ಮುಂಭಾಗದಲ್ಲಿ (ಮಹಿಳೆಯರ ನೆರಳು ಬೀಳದ ಜಾಗದಲ್ಲಿ) ಎಂಟು ಹತ್ತು ಹೆಜ್ಜೆಗಳ ಅಂತರದಲ್ಲಿ ದೇವರ ಬಾವುಟಗಳನ್ನು ನೆಡುತ್ತಾರೆ. ದೇವರ ಬಾವುಟಗಳ ಬಲಭಾಗದಲ್ಲಿ ಭಗತ್‌ನ ಗುಡಾರವನ್ನು ನಿರ್ಮಿಸಲಾಗುತ್ತದೆ. ಇನ್ನುಳಿದರೆಲ್ಲಾ ಭಗತ್‌ನ ಗುಡಾರದ ಹಿಂಭಾಗದಲ್ಲಿ ಗುಡಾರಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಇವರ ಗುಡಾರದ ಮುಖಗಳು ಹಾಗೂ ದೇವರ ಬಾವುಟಗಳು ಪೂರ್ವಾಭಿಮುಖವಾಗಿರುತ್ತವೆ. ಇವರು ತಮ್ಮ ಡೇರಗಳಿಗೆ ಹೊದಿಸುವ ಕೌದಿ ಬಟ್ಟೆಗಳಿಗೆ ಕೆಂಪು ಬಣ್ಣವನ್ನು ಹಚ್ಚುತ್ತಾರೆ. ಪರಿಸರದಲ್ಲಿ ಸಿಗುವ ಗೇರು ಕಲ್ಲನ್ನು ಅರೆದು ಪುಡಿಗೊಳಿಸಿ ನೀರಿಗೆ ಬೆರಸುತ್ತಾರೆ. ಅದರಿಂದ ಉಂಟಾದ ಕೆಂಪು ಬಣ್ಣವನ್ನು ಗುಡಾರಕ್ಕೆ ಹೊದಿಸುವ ಕೌದಿಗೆ ಹಚ್ಚಲಾಗುತ್ತದೆ. ಹಾಗೆ ಗುಡಾರದೊಳಗೆ ಮಳೆನೀರು ನುಸಳಬಾರದು ಎಂಬ ಉದ್ದೇಶದಿಂದ ಗುಡಾರದ ಸುತ್ತಲೂ ತೆಗೆದ ಈ ಚಿಕ್ಕ ಕಾಲುವೆಗೆ 'ಚರಿ' ಎಂದು ಕರೆಯುತ್ತಾರೆ. ಮಳೆಯ ನೀರು ಹರಿದುಹೋಗುವ ಉದ್ದೇಶದಿಂದ ಮಾಡಿರುತ್ತಾರೆ. ಈ ರೀತಿಯಾಗಿ ನಿರ್ಮಿಸಿದ ಗುಡಾರಕ್ಕೆ 'ಘರ್' ಎಂದು ಕರೆಯುತ್ತಾರೆ.

ಗುಡಾರದ ಹೊರಭಾಗದ ಬಲ ಭಾಗದಲ್ಲಿ ಮೂರು ಕಲ್ಲುಗಳನ್ನು ಇಟ್ಟು ಅಡುಗೆ ತಯಾರಿಸಲು ಅನುಕೂಲವಾಗವ ಹಾಗೆ ಒಲೆಯನ್ನು ನಿರ್ಮಿಸಿಕೊಳ್ಳುತ್ತಾರೆ. ಎಡಭಾಗಕ್ಕೆ ತಾವು ಸಾಕಿದ ನಾಯಿ, ಕತ್ತೆ, ಕೋಳಿಗಳು ಕಟ್ಟಲು ಗೂಟಗಳನ್ನು ಹೊಡೆಯಲಾಗಿರುತ್ತದೆ. ಹಾಗೆ ತಮಗೆ ಸಂಬಂಧಿಸಿದ ಆಹಾರ ಪದಾರ್ಥಗಳನ್ನು ತಯಾರಿಸುವ ಪಾತ್ರೆ ಪಡಗಗಳನ್ನು ಕುಕ್ಕೆ(ಟೋಪ್ಲಿ)ಯಲ್ಲಿ ಹಾಕಿ ಒಲೆಯ ಪಕ್ಕದಲ್ಲಿ ಟೆಂಟ್ ಒಳಭಾಗಕ್ಕೆ ಇಡುವರು. ಹಾಗೆಯೇ ಒಲೆಯ ಪಕ್ಕದಲ್ಲೆ ಕಟ್ಟಿಗೆಯನ್ನು ಇಡಲು ಸ್ಥಳವನ್ನು ಮಾಡಿಕೊಳ್ಳುವರು. ಪ್ರಮುಖವಾಗಿ ಅತೀ ಪ್ರಮುಖವಾದ ಹಿರಿಯರ ಗುರುತರಗಳು, ಅತ್ಯಮೂಲ್ಯ ವಸ್ತುಗಳು ಮೊದಲಾದವುಗನ್ನು ಖಲ್ಯದಲ್ಲಿ ಹಾಕಿ, ಹಗ್ಗ ಮತ್ತು ಮರದಿಂದ ಮಾಡಿದ ಮಂಚ(ಖಾಟ್)ದ ಮೇಲೆ ಇಟ್ಟು ಅದನ್ನು ಗುಡಾರದ ಒಳಭಾಗದ ಕೊನೆಯಲ್ಲಿ ಅಡ್ಡಲಾಗಿರಿಸಿ ಅದರ ಮೇಲೆ ಮಲಗಲು ಉಪಯೋಗಿಸುವ ಹಾಸುವ (ಲತ್ರೊ), ಹೊದ್ದುಕೊಳ್ಳುವ (ಗೋದ್ದಿ) ಹೊದಿಕೆಗಳನ್ನು ಜೋಡಿಸಿ ಇಟ್ಟುಕೊಳ್ಳುತ್ತಾರೆ. ಪ್ರತಿಯೊಂದು ಸಮುದಾಯದಲ್ಲಿಯೂ ಸಂಬಂಧಗಳು

ಏರ್ಪಡುವುದು ಬೆಡಗುಗಳ ಮೂಲಕ. ಡುಂಗ್ರಿ ಗರಾಸಿಯಾ ಸಮುದಾಯದಲ್ಲಿಯೂ ಹಲವಾರು ಬೆಡಗುಗಳು ಚಾಲ್ತಿಯಲ್ಲಿವೆ. ಪ್ರತಿ ಬೆಡಗಿಗೂ ಪ್ರತ್ಯೇಕವಾದ ದೈವಗಳೂ ಇವೆ. ಈ ಸಮುದಾಯದವರ ಬೆಡಗುಗಳು ಹಾಗೂ ಅವುಗಳ ಒಳಪಂಗಡಗಳು ಈ ಕೆಳಗಿನಂತಿವೆ. ಡುಂಗ್ರಿಗರಾಸಿಯ ಸಮುದಾಯದಲ್ಲಿ ಒಟ್ಟು ೧೮ ಬೆಡಗುಗಳನ್ನು ಕಾಣಬಹುದು. ಕರ್ನಾಟಕದಲ್ಲಿ ವಾಸಿಸುವವರು ಒಟ್ಟು ೧೧ ಬೆಡಗಿನವರಾಗಿದ್ದಾರೆ. ಈ ಬೆಡಗುಗಳನ್ನು ಕುಲಗಳೆಂದು ಕರೆಯುತ್ತಾರೆ. ಈ ಕುಲಗಳು ಡುಂಗ್ರಿಗರಾಸಿಯದ ಬಂಧುತ್ವದ ಮೂಲವನ್ನು ಸಂಕೇತಿಸುತ್ತವೆ. ಇಂದಿಗೂ ರಕ್ತ ಸಂಬಂಧಗಳನ್ನು ಬೆಸೆಯುವಾಗ ಕುಲಗಳು ಮಹತ್ವದ ಸ್ಥಾನವನ್ನು ಪಡೆಯುತ್ತವೆ. ಸ್ವಜಾತಿ ಕುಲಗಳಲ್ಲಿ ವೈವಾಹಿಕ ಸಂಬಂಧಗಳು ಏರ್ಪಡುವುದಿಲ್ಲ. ವಿಜಾತಿ ಕುಲಗಳಲ್ಲಿ ಮಾತ್ರ ರಕ್ತಸಂಬಂಧಗಳು ಏರ್ಪಡುತ್ತವೆ ಕುಲಗಳಿಗೆ ಸಂಬಂಧಿಸಿದಂತೆ ಹಿಂದಿನ ಅಧ್ಯಾಯದಲ್ಲಿ ವಿವರವಾಗಿ ವಿಶ್ಲೇಷಿಸಲಾಗಿದೆ. ಡುಂಗ್ರಿಗರಾಸಿಯ ಸಮುದಾಯದ ಕುಲಗಳಲ್ಲಿ ಒಂದೊಂದು ಕುಲಕ್ಕೂ ವಿಭಿನ್ನವಾದ ಆಚರಣೆಗಳಿವೆ. ಆಯಾ ಆಚರಣೆಗಳ ಮೇಲೆಯೇ ಇವರು ಇಂಥ ಕುಲಕ್ಕೆ ಸೇರಿದ ಡುಂಗ್ರಿಗರಾಸಿಯಗಳೆಂದು ಸುಲಭವಾಗಿ ಗುರುತಿಸಬಹುದು.

ಡುಂಗ್ರಿಗರಾಸಿಯಾ ಸಮುದಾಯದಲ್ಲಿ ಹಲವಾರು ಕುಲಗಳಿವೆ. ಅವುಗಳನ್ನು ಕರ್ನಾಟಕದ ಇತರೆ ಬುಡಕಟ್ಟುಗಳಲ್ಲಿ ಕಂಡುಬರುವ ಬೆಡಗುಗಳಿಗೆ ಸಮಾನ ಎಂದು ಪರಿಗಣಿಸಬಹುದು. "ಈ ಸಮುದಾಯದಲ್ಲಿ ಒಂದು ಹೇಳಿಕೆ ಇದೆ. ಅದೇನೆಂದರೆ "ಅತ್ರಾ ಪಗಡೀರೀ ಜಾತ್ ಅಪಾರಿ" ಅಂದರೆ ಈ ಸಮುದಾಯದವು ಹದಿನೆಂಟು ಕುಲಗಳನ್ನು ಹೊಂದಿದೆ ಎಂದು ಅರ್ಥ. ಅವುಗಳು ಯಾವುವೆಂದರೆ.

| | | |
|---|---|---|
| ೧. ಮುಣಿಯಾಣಿ | ೭. ಪಂವಾರ್ | ೧೩. ಕಾಳಮಾ |
| ೨. ಖಾಗಳ್ | ೮. ಫಟಾಡ್ | ೧೪. ತೇಂವಾಲಿಯಾ |
| ೩. ಉಮ್ಮಟ್ | ೯. ಮಕ್ವಾಣ | ೧೫. ಬೋಡ್ಕ್ಯಾ |
| ೪. ಮಾಂಗ್ಳ್ಯ | ೧೦. ಗೋಡ್ | ೧೬. ಇಸ್ಕಾವಂತ್ |
| ೫. ಪಡಿಯಾರ್ | ೧೧. ವಾಘೇಲಾ | ೧೭. ಚಂವಾಣ್ |
| ೬. ಜುಂವಾ | ೧೨. ರಾಠೋಡ್ | ೧೮. ಬಾಮ್ಣಿಯಾ |

ಎನ್ನುವ ಕುಲಗಳು ಕಂಡುಬರುತ್ತವೆ."(ಜಗದೀಶ ಕೆ ಕೆ:೨೦೦೮:೩೮)), ಇವುಗಳಲ್ಲಿ ಹನ್ನೊಂದು ಬೆಡಗಿನವರು (ಮುಣಿಯಾಣಿ, ಖಾಗಳ್, ಉಮ್ಮಟ್, ಮಾಂಗ್ಳ್ಯ, ಪಡಿಯಾರ್, ಜುಂವಾ, ಪಂವಾರ್, ಫಟಾಡ್, ಮಕ್ವಾಣ, ಗೋಡ್, ವಾಘೇಲಾ) ಕರ್ನಾಟಕದಲ್ಲಿ ಕಂಡುಬರುವರು. ಇನ್ನುಳಿದ ಏಳುಬೆಡಗಿನವರು ಹೆಚ್ಚಾಗಿ ಮಹಾರಾಷ್ಟ್ರದಲ್ಲಿ ಇವೆಯಂದು ಈ ಬುಡಕಟ್ಟಿನ ವಕ್ತೃಗಳು ತಿಳಿಸಿರುವರು.

**ಆಚರಣೆಗಳು**

**ಜನನ:** ಜನನದ ಬಗ್ಗೆ ವಿಶೇಷವಾದ ಗಮನ ಹರಿಸಲಾಗುವುದು. ಸಾಮಾನ್ಯವಾಗಿ ಬಸರಿ ಸ್ತ್ರೀಗೆ ೯ನೇ ತಿಂಗಳಲ್ಲಿ ಅಂದರೆ ಹೆರಿಗೆ ದಿನಗಳು (ಛುಟವಾರಾದನ್) ಹತ್ತಿರ ಬರುತ್ತಿದ್ದಂತೆ ಆಕೆಯ ಕೈ-

ಕಾಲುಗಳು (ಹತ್‌ಪಗ್), ತೊಡೆಗಳು (ಜಾಂಗು), ಸೊಂಟ (ಕಂಬರ್), ಹೊಟ್ಟೆ(ಪೇಟ್)ಯಲ್ಲಿ ನೋವು ಕಂಡುಬರುತ್ತದೆ. ಆಕೆಗೆ ಹೆರಿಗೆಯ ಹೊಟ್ಟೆ ನೋವು ಜಾಸ್ತಿಯಾದಾಗ ಜೀರಿಗೆ ಕುಟ್ಟಿ ಸ್ವಲ್ಪ ನೀರು ಹಾಕಿ ಕುದಿಸಿ ಆರಿಸಿ ಒಂದು ಲೋಟ ಕುಡಿಸಲಾಗುತ್ತದೆ. ಗಂಡು ಮಗು ಹುಟ್ಟಿದಾಗ ಸಮುದಾಯದಲ್ಲಿ ಹೆಚ್ಚು ಸಂತೋಷ ಪಡುವುದನ್ನು ಕಾಣಬಹುದು. ಹಾಗೆಯೇ ಹೆಣ್ಣು ಮಗು ಹುಟ್ಟಿದಾಗ ಮಗು ಹೆದರಬಾರದೆಂದು ಮಗುವಿನ ಮೇಲೆ ನೀರು ಸಿಂಪಡಿಸುತ್ತಾರೆ. ನಂತರ ಮುಗವಿನ ಹೊಕ್ಕಳು ಬಳ್ಳಿಯನ್ನು ಕುಡಗೋಲು (ದಾಂತ್ಳೊ) ಅಥವಾ ಬ್ಲೇಡ್‌ನಿಂದ ಬೇರ್ಪಡಿಸಿ ಮಗುವನ್ನು ತಾಯಿಯ ಪಕ್ಕದಲ್ಲಿಯೆ ಮಲಗಿಸುತ್ತಾರೆ. ತರುವಾಯ ಸಮುದಾಯದ ಯುವಕನೊಬ್ಬ ಗುಡಾರದ ಎಡ ಭಾಗ ಅಥವಾ ಯಾವುದಾದರೊಂದು ಹೊರ ಮೂಲೆಯಲ್ಲಿ ಗುಂಡಿ ತೆಗೆದು ಅದರಲ್ಲಿ ಮಾಸ(ಅಂಬರ್)ವನ್ನು ಹಾಕಿ ಅದರ ಮೇಲೆ ಐದು ಕಾಲು ಜೋಳವನ್ನು ಹಾಕಿ ಮಣ್ಣು ಮುಚ್ಚಲಾಗುತ್ತದೆ. ಇದನ್ನು 'ಸ್ಥಾಣಿ' ಎಂದು ಕರೆಯುತ್ತಾರೆ. ಹಾಗೂ ಅದರ ಮೇಲೆ ಒಂದು ಕಲ್ಲನ್ನು ಇಟ್ಟು ಆ ಕಲ್ಲಿನ ಮೇಲೆಯೇ ೧೨ ದಿನಗಳವರೆಗೆ ತಾಯಿ ಮತ್ತು ಮಗುವನ್ನು ಬಿಸಿ ನೀರಿನಿಂದ ಸ್ನಾನ ಮಾಡಿಸುವುದು ೧೨ ದಿನಗಳ ನಂತರ ಸ್ವಲ್ಪ ಹುಲ್ಲನ್ನು ತಂದು ಸ್ಥಾಣಿಯ ಮೇಲೆ ಸುಡಲಾಗುತ್ತದೆ.

ಹೆರಿಗೆಯಾದ ಸ್ತ್ರೀಯು ಒಂದು ತಿಂಗಳವರೆಗೆ ಮನೆಯ ಬೇರೆ ಯಾವುದೇ ಪದಾರ್ಥಗಳನ್ನು ಮುಟ್ಟುವಂತಿಲ್ಲ. ಅವಳಿಗಾಗಿಯೆ ಒಂದು ತಟ್ಟೆ, ಲೋಟವನ್ನು ನೀಡಲಾಗುತ್ತದೆ. ಆಕೆಗೆ ದೂರದಿಂದಲೇ ಎಲ್ಲವನ್ನು ಪೂರೈಸಲಾಗುತ್ತದೆ. ೧ ತಿಂಗಳ ನಂತರ ಆಕೆಗೆ ನೀಡಲಾದ ತಟ್ಟೆ, ಲೋಟ, ಚೊಂಬನ್ನು ಸುಟ್ಟು ಅವುಗಳನ್ನು ತೊಳೆದು ಆಕೆಯನ್ನು ಸ್ನಾನ ಮಾಡಿಸಿ ಮನೆಗೆ ಪ್ರವೇಶ ಮಾಡಿಸುತ್ತಾರೆ. ಈ ಆಚಾರದಲ್ಲಿ ಯಾವುದೇ ತಪ್ಪು ನಡೆದರೆ ಆಕೆಯು ಹೊರಗಾದಾಗ ಹೆಚ್ಚು ನೋವು ಕಾಣಿಸಿಕೊಳ್ಳುತ್ತದೆ.

ಇದಕ್ಕೂ ಮೊದಲು ಹೆರಿಗೆಯಾದವಳನ್ನು ಇರಿಸಿದ ಟೆಂಟ್‌ನ ಮೂರು ಕಡೆಯ ಕಂಡಿಗಳಲ್ಲಿ ಹಸಿರು ಸೊಪ್ಪನ್ನು ತುಂಬಲಾಗುತ್ತದೆ ಹಾಗೂ ಯಾವುದೇ ರೀತಿಯ ಕೆಡಕುಂಟಾಗದೇ ಇರಲೆಂದು ಟೆಂಟ್‌ನ ಸುತ್ತಲೂ ಮೀನು ಬಲೆಯನ್ನು ಟೆಂಟ್‌ಗೆ ತಾಗುವಂತೆ ನೆಲದಲ್ಲಿ ಹರಡಲಾಗುವುದು. ಅದರ ಪಕ್ಕದಲ್ಲಿ ಬೂದಿಯ ಪಟ್ಟೆಯನ್ನು ಸುತ್ತಲೂ ಹಾಕಲಾಗುತ್ತದೆ. ಇದರಿಂದ ಯಾವುದೇ ರೀತಿಯ ಸರಿಸೃಪಗಳು, ಕೀಟಗಳು ಆ ಟೆಂಟ್‌ನ ಒಳ ಹೋಗುವುದಿಲ್ಲ ಎಂಬ ನಂಬಿಕೆ ಇದೆ. ಇಷ್ಟೇ ಅಲ್ಲದೆ ಗರ್ಭಿಣಿ ಹೆಂಗಸರಲ್ಲಿ ಹೆರಿಗೆ ನೋವು ಕಾಣಿಸಿಕೊಂಡಾಗ ಅಂದು ಎಲ್ಲರೂ ಒಂದು ಗೂಡಿ ದೇವರ ದ್ಯಾನದಲ್ಲಿ ತೊಡಗುತ್ತಾರೆ. ಹೆಂಗಸರೆಲ್ಲರೂ ಆಕೆಯ ಶುಶ್ರೂಷೆಯಲ್ಲಿ ತೊಡಗುತ್ತಾರೆ. ಹೆರಿಗೆ ಆದ ತಕ್ಷಣ ಹೆರಿಗೆ ಆಯಿತೆಂಬ ಸೂಚನೆ ನೀಡಲು ತಟ್ಟೆಗೆ ಸೌಟನಿಂದ ಹೊಡೆದು ಜೋರಾಗಿ ಶಬ್ದ ಮಾಡುವ ಮೂಲಕ ಎಲ್ಲರಿಗೂ ತಿಳಿಸಲಾಗುವುದು. ಸಾಮಾನ್ಯವಾಗಿ ೯ ತಿಂಗಳು ೯ನೇ ದಿನದಲ್ಲಿ ಹೆರಿಗೆಯಾಗುತ್ತದೆ. ಹೆರಿಗೆಯಾದ ನಂತರ ಆಕೆಗೆ ಯಾವುದೇ ರೀತಿಯ ಮಾಂಸಾಹಾರಗಳನ್ನು ನೀಡುವುದಿಲ್ಲ. ಇದರ ಬದಲಾಗಿ ಕೊಬ್ಬರಿ (ಗಟಕ್), ಬೆಲ್ಲ (ಗೋಳ್), ತುಪ್ಪ (ಘೀ), ಇವುಗಳನ್ನು ಬಳಸಿ ಮಾಡಿದ ಚರ್ಕೊವನ್ನು ಆಕೆಗೆ ತಿನ್ನಲು ಕೊಡಲಾಗುತ್ತದೆ. ಹಾಗೆಯೇ ರವೆ (ರವೋ), ಬೆಲ್ಲ

ಹಾಗೂ ತುಪ್ಪವನ್ನು ಬಳಸಿ ಮಾಡಿದ 'ರವೋ'ವನ್ನು ಕೊಡಲಾಗುತ್ತದೆ. ಹೀಗೆ ಐದು ದಿನಗಳ ನಂತರ ಸಪ್ಪೆ ಬೇಳೆ ಸಾರು ಹಾಗೂ ಅನ್ನ(ಗಾಟೋ)ವನ್ನು ಆಕೆಗೆ ನೀಡಲಾಗುತ್ತದೆ. ಹನ್ನೆರಡು ದಿನಗಳ ತರುವಾಯ ಬಾಣಂತಿಯು ಅಲ್ಪ ಪ್ರಮಾಣದಲ್ಲಿ ಮಾಂಸಾಹಾರವನ್ನು ಸೇವಿಸಬಹುದಾಗಿರುತ್ತದೆ. ಹೀಗೆ ಒಂದೊಂದು ಬೆಡಗುಗಳಲ್ಲಿ ಒಂದೊಂದು ರೀತಿಯ ಆಚರಣೆಗಳಿವೆ.

**ಮಾಂಗ್ಯ:** ಇವರಲ್ಲಿ ಪ್ರತಿ ಗಂಡು ಮಗು ಹುಟ್ಟಿದ ದಿನದಿಂದ ಅವನ ತಲೆಕೂದಲು ಜಾವಳ್ ಬಿಡಲಾಗುವುದು. ಇವರ ಪೂಜೆಗೆ ನಿಖರ ಅವಧಿ ಇರುವುದಿಲ್ಲ. ಅವರಿಗೆ ಹಣ ದೊರೆತಾಗ ಗಂಡು ಮಗುವಿನ ಜವಳ ತೆಗೆಸಲು ೧ ಆಡನ್ನು ಕೊಯ್ಯಬೇಕಾಗುತ್ತದೆ. ಜವಳ ತೆಗೆಸುವವರೆಗೆ ಮಗುವನ್ನು ಮುಟ್ಟಾದ ಹೆಂಗಸರು ಮುಟ್ಟುವುವಂತಿಲ್ಲ. ನೆರಳೂ ಕೂಡ ಬೀಳುವ ಹಾಗಿಲ್ಲ. ಒಂದು ವೇಳೆ ಹಾಗೇನಾದರೂ ಆದರೆ ತಕ್ಷಣ ದೇವರನ್ನು ಕರೆದು ಬಾಯಲ್ಲಿ ಚಪ್ಪಲಿ ಹಿಡಿದು ದೇವರ ಮುಂದೆ ಅಂಗಾತ ಬಿದ್ದು ಕ್ಷಮೆಯಾಚಿಸುವುದು ಪದ್ಧತಿ, ಎಲ್ಲಿಯವರೆಗೆ ಮಗುವಿನ ಜವಳ ತೆಗೆಸುವುದಿಲ್ಲವೋ ಅಲ್ಲಿಯವರೆಗೆ ಅವನ ತಲೆಕೂದಲನ್ನು ಕತ್ತರಿಸುವಂತಿಲ್ಲ. ಪೂಜೆ ಸಮಯದಲ್ಲಿ ದೇವರನ್ನು ಕರೆದು ದೇವರಿಗೆ ಒಪ್ಪಿಗೆಯಾದ ನಂತರವಷ್ಟೆ ಅದು ಯಶಸ್ವಿಯಾಗುವುದು. ಈ ವೇಳೆಯಲ್ಲಿ ಪೂಜೆ ಮುಗಿದ ತಕ್ಷಣ ಶಂಖವನ್ನು ಊದಲಾಗುತ್ತದೆ. ಶಂಖವನ್ನು ಊದಿದಾಗ ಶಬ್ದ ಬಂದರೆ ಮಾತ್ರ ಪೂಜೆ ಸರಿಯಾಗಿದೆ. ಶಬ್ದ ಬಂದಿಲ್ಲದಿದ್ದರೆ ಪೂಜೆಯಲ್ಲಿ ಲೋಪವುಂಟಾಗಿದೆ ಎಂದು ಹೇಳಿ ತಕ್ಷಣ ದೇವರನ್ನು ಕರೆದು ಕ್ಷಮೆ ಮತ್ತು ಪರಿಹಾರ ಮಾರ್ಗವನ್ನು ಕೇಳಲಾಗುತ್ತದೆ.

**ಮುಣಿಯಾಣಿ:** ಮೂರು ತಿಂಗಳ ಗರ್ಭಿಣಿಯಾದ ಹೆಂಗಸು ಯಾವುದೇ ಎಣ್ಣೆ ಪದಾರ್ಥವನ್ನು ತಿನ್ನುವ ಹಾಗಿಲ್ಲ. ಅಂದಾಜು ೩ ತಿಂಗಳ ಗರ್ಭಿಣಿ (ದೋ ಜಿವಾಳಿ) ಎಂದು ಗೊತ್ತಾದ ಕೂಡಲೆ ಮನೆಯನ್ನು ಶುಚಿಗೊಳಿಸಿ ತಲೆ ಸ್ನಾನ ಮಾಡಿಸಲಾಗುತ್ತದೆ. ಅಂದಿನಿಂದ ಗರ್ಭಿಣಿ ಹೆಂಗಸು ಒಳ್ಳೆಣ್ಣೆ ಪದಾರ್ಥಗಳನ್ನು ತಿನ್ನುವಂತಿಲ್ಲ. ಜೊತೆಗೆ ಅಡುಗೆಯಲ್ಲಿ ಎಣ್ಣೆಯನ್ನು ಬಳಸುವುದು ನಿಷೇಧವಾಗಿರುತ್ತದೆ. ಇದರ ಬದಲಾಗಿ ತುಪ್ಪವನ್ನು ಬಳಸಲಾಗುತ್ತದೆ. ಇದರ ಜೊತೆಗೆ ಪಪ್ಪಾಯಿ, ಕಲ್ಲಂಗಡಿ ಹಣ್ಣು ಹಾಗೂ ಕಬ್ಬಿನ ರಸವನ್ನು ತಿನ್ನುವಂತಿಲ್ಲ ಹಾಗೂ ಹಗಲು ವೇಳೆಯಲ್ಲಿ ಊಟ ಮಾಡಬೇಕು. ಇನ್ನೊಬ್ಬರ ಮನೆಯ ಆಹಾರ ಪದಾರ್ಥವನ್ನು ಸೇವಿಸಬಾರದು. ಈ ರೀತಿಯ ಆಚಾರವನ್ನು ಪಾಲಿಸದೇ ಇದ್ದಲ್ಲಿ ಆಕೆಯು ಗರ್ಭಾಶಯವನ್ನು ಕಳೆದು ಕೊಳ್ಳುತ್ತಾಳೆ ಎಂಬ ನಂಬಿಕೆ ಇದೆ. ಇದನ್ನು 'ಪೇಟ್ ಪಡೀ ಜಾಯೆ' ಎಂದು ಕರೆಯುತ್ತಾರೆ. ಮಗು ಹುಟ್ಟಿದ ೧ ತಿಂಗಳ ನಂತರ ಖೇತರ್ ಪಾಳ್ ದೇವರಿಗೆ 'ಪಿಂಡೋ' ಎನ್ನುವ ಕಾರ್ಯವನ್ನು ಮಾಡಲಾಗುತ್ತದೆ. ಇದಕ್ಕೆ ೫ ಸೇರು ಬಿಳಿ ಜೋಳ, ೫ ಸೇರು ಕಪ್ಪು ಎಳ್ಳು, ೧೧/೪ ಕೆ.ಜಿ. ಬೆಲ್ಲ, ಅರಿಷಿಣ ಪುಡಿ, ೧ ತೆಂಗಿನಕಾಯಿ, ಹಸಿನೂಲು, ಅರ್ಜ್ಯ(ಮುಳ್ಳುಗಿಡ) ಇವುಗಳನ್ನು ತಂದು ಹುತ್ತ ಇರುವೆಡೆಗೆ ಹೋಗಿ ಅಲ್ಲಿ ಮುಳ್ಳುಗಿಡವನ್ನು ಹುತ್ತಕ್ಕೆ ಚುಚ್ಚಿ, ಹಸಿನೂಲನ್ನು ೫ ಸುತ್ತ ಹುತ್ತದ ಸುತ್ತು ಸುತ್ತಿ ಅನಂತರ ಪೂಜೆ ಮಾಡಿ ಸ್ವಲ್ಪ ಎಳ್ಳನ್ನು ಅರೆದು ಎಣ್ಣೆ ತೆಗೆದು ಅದರಿಂದ ದೀಪ ಉರಿಸಬೇಕಾಗುತ್ತದೆ. ನಂತರ ಎಳ್ಳನ್ನು ಅರೆದು ಬೆಲ್ಲವನ್ನು

ಬೆರೆಸಿ ಬೇಯಿಸಿದ ಜೋಳವನ್ನು ಸ್ವಲ್ಪ ಬೆರೆಸಿ, ಅದರಿಂದ ೫ ಉಂಡೆ ಕಟ್ಟಿ, ೧ ತೆಂಗಿನ ಕಾಯಿ, ಅರಿಶಿಣ ಪುಡಿ ಎಡೆ ಇರಬೇಕು.

ತರುವಾಯ ೫ ಜನ ಮದುವೆ ಆಗಿರುವ ಪುರುಷರು ತಲೆಗೆ ಪೇಟಾ ಕಟ್ಟಿ ಎಡೆಸಾಮಾನನ್ನು ಒಂದು ತಟ್ಟೆಗೆ ಹಾಕಿ "ಏಳಕೋಟ್, ಏಳಕೋಟ್ ಚಾಂಗ್ ಭಲೆ, ಚಾಂಗ್ ಭಲೆ, ಚಿಂತಾಮಣಿ ಹರಹರಾ ಮಹಾದೇವ್" ಎಂದು ೫ ಬಾರಿ ಹೇಳಿದ ನಂತರ ದೇವರನ್ನು ಕರೆದು ನಮ್ಮಿಂದ ಅಪ್ಪಿತಪ್ಪಿ ತಪ್ಪಾಗಿದ್ದರೆ ಕ್ಷಮಿಸು ಎಂದು ಕೇಳಿ ಕೊಳ್ಳಲಾಗುತ್ತದೆ. ನಂತರ ಮಗುವನ್ನು ಅಂಗಾತ ಮಲಗಿಸಿ ತಾಯಿಯ ಒಂದೆರಡು ತಲೆ ಕೂದಲನ್ನು ಕಿತ್ತು ಹುತ್ತಕ್ಕೆ ಹಾಕಲಾಗುತ್ತದೆ. ವಿಶೇಷವೆಂದರೆ ಈ ಕಾರ್ಯ ಮಾಡುವವರೆಗೆ ತಾಯಿಯು ತಲೆಯನ್ನು ತೊಳೆಯುವ ಹಾಗಿಲ್ಲ. ಕೂದಲೆರಡರನ್ನು ಕಿತ್ತು ಹುತ್ತಕ್ಕೆ ಹಾಕುವುದರ ಮೂಲಕ ಅವರಿಗೆ ಎಣ್ಣೆ ಪದಾರ್ಥ ತಿನ್ನಲು ಅಭ್ಯಂತರವಿರುವುದಿಲ್ಲ. ಜೊತೆಗೆ ಆ ಮಗುವು ಮೂಣಿಯಾಣಿ ಜಾತಿಗೆ ಸೇರುತ್ತದೆ. ಪ್ರತಿ ಮಕ್ಕಳಿಗೂ ಇದು ಆಗಲೇ ಬೇಕಾಗಿರುತ್ತದೆ. ಪೂಜೆಯು ಬಹಳ ಶ್ರದ್ಧಾಭಕ್ತಿಯಿಂದ ನಡೆಯುವವರೆಗೆ ಯಾವುದೇ ಎಣ್ಣೆ ಪದರ್ಥಾ ತಿನ್ನುವುದಾಗಲಿ ಮಾಡುವಂತಿಲ್ಲ. ತಿಳಿಯದೇ ಒಂದು ವೇಳೆ ತಿಂದಿದ್ದರೆ, ಪೂಜೆ ಸಮಯಕ್ಕೆ ಅನ್ನ (ದಾವಣ್) ೫ ತೆಂಗಿನಕಾಯಿಯ ಹರಕೆಯನ್ನು ಆಕೆ ಹೊತ್ತುಕೊಳ್ಳುತ್ತಾಳೆ.

**ನಾಮಕರಣ:** ಮಗು ಹುಟ್ಟಿದ ಐದು ದಿನಕ್ಕೆ ನಾಮಕರಣ ಮಾಡುವ ಪದ್ಧತಿ ಇದೆ. ಹೆರಿಗೆಯಾದ ದಿನದಿಂದಲೂ ನಾಮಕರಣದ ದಿನದವರೆಗೆ ಆ ಮನೆಯಿಂದ ಯಾರೂ ಕೂಡ ಒಲೆಯ ಬೆಂಕಿಯಾಗಲೀ ಯಾವುದೊಂದು ಪದಾರ್ಥವನ್ನು ಪಡೆದುಕೊಳ್ಳುವಂತಿಲ್ಲ. ಇದು ಒಂದು ತರಹದ ಸೂತಕದ ಹಾಗೆ ಇದನ್ನು ನಿವಾರಿಸಲು ೫ನೇ ದಿನಕ್ಕೆ ಐದು ಮನೆಗಳಿಂದ ಸ್ವಲ್ಪ ಸ್ವಲ್ಪ ಸೌದೆಯನ್ನು ತಂದು ತಮ್ಮ ಮನೆಯ ಒಲೆಯಲ್ಲಿ ಬೆಂಕಿ ಹಾಕಿ ಅದರಿಂದ ನೀರನ್ನು ಕಾಯಿಸಿ, ಕಾಯಿಸಿದ ನೀರಿನಲ್ಲಿ ಮಗುವನ್ನು ಸ್ನಾನ ಮಾಡಿಸಿದ ನಂತರವೇ ನಾಮಕರಣಕ್ಕಾಗಿ ತೊಟ್ಟಿಲಲ್ಲಿ ಹಾಕಲಾಗುತ್ತದೆ. ಐದು ಜನ ಅಕ್ಕತಂಗಿಯರು ಮತ್ತು ಮಕ್ಕಳನ್ನು ಕರೆದು ಮಗುವನ್ನು ಮರಕ್ಕೆ ಹಗ್ಗ ಕಟ್ಟಿ, ಅದಕ್ಕೆ ಒಂದು ಸೀರೆಯನ್ನು ಕಟ್ಟಿ ಅಥವಾ ಅವರು ವಾಸಿಸುವ ಡೇರದ ಎರಡು ಕೋಲುಗಳ ನಡುವೆ ಹಗ್ಗ ಕಟ್ಟಿ, ಅದಕ್ಕೆ ಹೊದಿಕೆಯನ್ನು ಹಾಕಿ ಅದರಲ್ಲಿ ಮಗುವನ್ನು ಮಲಗಿಸಿ ತೆಂಗಿನಕಾಯಿ ಮತ್ತು ಬೆಲ್ಲವನ್ನು ಮಕ್ಕಳಿಗೆ ನೀಡಿ ಅವರು ಅದನ್ನು ತಿನ್ನುತ್ತಾ ಲಾಲಿ ಹಾಡನ್ನು ಹಾಡುತ್ತ ಮಗುವಿನ ಹೆಸರನ್ನು ಹೇಳುವರು.

ಹೆಸರು ಇಡುವುದರ ಬಗ್ಗೆ ಹೇಳುವುದಾದರೆ ಆ ಮನೆಯ ಯಜಮಾನ ಹಾಡಿಯಲ್ಲಿರುವ ಹಿರಿಯರು, ಸಮುದಾಯದ ನಾಯಕ ಇವರಲ್ಲಿ ಯಾರಾದರೂ ಒಬ್ಬರು ಆ ಮಗುವಿನ ಕುಟುಂಬದ ಪೂರ್ವಿಕರ ಹೆಸರನ್ನು ಸೂಚಿಸುತ್ತಾರೆ. ಆ ಮಗುವಿಗೆ ಅದೇ ಹೆಸರನ್ನು ಇಡಲಾಗುತ್ತದೆ. ಒಬ್ಬರು ಸೂಚಿಸಿದ ಹೆಸರನ್ನು ಅಥವಾ ಒಂದು ಬಾರಿ ಇಟ್ಟ ಹೆಸರನ್ನು ಮತ್ತೆ ಯಾವ ಕಾರಣಕ್ಕೂ ಬದಲಾವಣೆ

ಮಾಡುವುದಿಲ್ಲ. ಹೆರಿಗೆಯಾದ ನಂತರ ಗಂಡು ಮಗು ಹುಟ್ಟಿದ ೧೦ನೇ ದಿನಕ್ಕೆ ಹಾಗೂ ಹೆಣ್ಣು ಮಗು ಹುಟ್ಟಿದ ೧೧ನೇ ದಿನಕ್ಕೆ ಬಾಲಕ ಸೂತಕ ಅಥವಾ ಗಾಯಿಮುತ್ತರ್ ತೆಗೆಯಲಾಗುತ್ತದೆ. ಅಂದರೆ ಹುಟ್ಟಿದ ಮಗುವನ್ನು ಅಲ್ಲಿಯವರೆಗೆ ಯಾರೂ ಮುಟ್ಟುವಂತಿಲ್ಲ. ಅದಕ್ಕಾಗಿ ಬಾಲಕ ಸೂತಕವನ್ನು ತೆಗೆಯಬೇಕಾಗುತ್ತದೆ. ಇದನ್ನು ಒಂದು ಚೊಂಬು ಒಳ್ಳೆಯ ನೀರನ್ನು ಅಥವಾ ಶುದ್ಧವಾದ ನೀರನ್ನು ಮನೆಯ ಯಾರಾದರೊಬ್ಬರು ಮೊದಲು ದೇವರ ಮೇಲೆ ಎರಚಿ, ನಂತರ ಭಕ್ತ ಅಥವಾ ಭಗತ್‌ನ ಮೇಲೆ ಎರಚಿ ಅನಂತರ ಹಾಡಿಯ ಎಲ್ಲಾ ಮನೆಗಳ ಮೇಲೆ ಎರಚಿದ ನಂತರ ಬಾಲಕನ ಸೂತಕ ಕಳೆಯುತ್ತದೆ. ಅನಂತರ ಮಗುವನ್ನು ಯಾರಾದರೂ ಎತ್ತಿಕೊಳ್ಳಬಹುದು.

**ಋತುಮತಿ:** ಡುಂಗ್ರಿಗರಾಸಿಯಾ ಸಮುದಾಯದಲ್ಲಿ ಹೆಣ್ಣು ಋತುಮತಿಯಾದಾಗ ಅನುಸರಿಸುವ ಪದ್ಧತಿಗಳು ಈ ರೀತಿಯಾಗಿವೆ. ಮೊದಲ ಮುಟ್ಟು ಆದಾಗ ೭ ರಿಂದ ೧೦ ದಿನಗಳು ಆಕೆಗೆ ಪ್ರತ್ಯೇಕವಾದ ಒಂದು ತಟ್ಟೆ, ಲೋಟ ಹಾಸಿಗೆ ಬಟ್ಟೆಗಳನ್ನು ಕೊಡಲಾಗುತ್ತದೆ. ಅವರನ್ನು ಯಾರೂ ಕೂಡ ಮುಟ್ಟಬಾರದು ಮತ್ತು ಅವಳೂ ಕೂಡ ಯಾರನ್ನು ಮುಟ್ಟಬಾರದು ೭ ರಿಂದ ೧೦ ದಿನಗಳ ತರುವಾಯ ವಸ್ತ್ರಾಲಂಕಾರವನ್ನು ಮಾಡಿ ಅವಳ ಮಡಿಲು ತುಂಬಿಸುವ ಕಾರ್ಯ ಮಾಡಲಾಗುವುದು, ಮಡಲಿಗೆ ಬಳೆ, ಪುರಿಕಡ್ಲೆ, ಕೊಬ್ಬರಿಯನ್ನು ತುಂಬಿಸಲಾಗುತ್ತದೆ. ಅದನ್ನು ಅವಳು ತನ್ನ ಸಂಬಂಧಿಕರಿಗೆಲ್ಲ ಹಂಚುತ್ತಾಳೆ. ಇದಕ್ಕೆ "ಮಡಿಲು ತುಂಬಿಸುವುದು" (ಖೋಳೋ ಭರ್ನು) ಎಂದು ಹೇಳಲಾಗುತ್ತದೆ.

**ಮರಣ:** ಹಾಡಿಯಲ್ಲಿ ಒಬ್ಬರು ತೀರಿಕೊಂಡರೆ ಎಲ್ಲರೂ ಅಂದು ಮನೆಯಲ್ಲಿಯೇ ಇರಬೇಕು. ಅಂದರೆ ಯಾರೂ ಕೂಡ ನಿತ್ಯ ಕಸುಬಿಗಾಗಿ ಹೋಗುವುದಿಲ್ಲ. ಅಂದು ಸತ್ತವನ ಸಂಬಂಧಿಕರು ಹತ್ತಿರದಲ್ಲಿ ಇದ್ದರೆ ಅವರಿಗೆ ಸುದ್ದಿ ತಿಳಿಸಲಾಗುವುದು, ಬಂಧುಗಳು ಸಿಗದೇ ಇದ್ದರೆ ಮುಂದಿನ ಹಬ್ಬದಲ್ಲಿ ಸೇರಿದಾಗ ಹೇಳಲಾಗುತ್ತದೆ. ಹೆಣವನ್ನು ಮೊದಲು ಮನೆಯ ಮುಂದೆ ಅಡ್ಡಲಾಗಿ ಮಲಗಿಸಲಾಗುತ್ತದೆ. ಸತ್ತ ತಕ್ಷಣದಲ್ಲೇ ಕಾಲಿನ ಎರಡು ಹೆಬ್ಬೆಟ್ಟುಗಳನ್ನು ಮತ್ತು ಕೈಗಳ ಎರಡು ಹೆಬ್ಬರಳನ್ನು ಹಸಿನೂಲಿನಿಂದ ಕಟ್ಟಲಾಗುತ್ತದೆ. ಕೈಯೊಳಗೆ ಗೋಧಿ, ರಾಗಿ ಹಿಟ್ಟನ್ನು ನೀರಲ್ಲಿ ಬೆರೆಸಿ ಮುದ್ದೆಯಂತೆ ಮಾಡಿ ಹೆಣದ ಕೈಯಲ್ಲಿ ಇಡಲಾಗುತ್ತದೆ. ಕೈಗಳನ್ನು ಎದೆಗೆ ತಾಗಿಸಿ ಇರಿಸಲಾಗುತ್ತದೆ. ಶವದ ಮುಂದೆ ಆತನ ಸಂಬಂಧಿಕರೆಲ್ಲರೂ ಸೇರಿ ಶೋಕವನ್ನು ವ್ಯಕ್ತಪಡಿಸುತ್ತಾರೆ. ಹಾಡಿಯವರೆಲ್ಲರೂ ಮನೆಯವರನ್ನು ಸಮಾಧಾನ ಪಡಿಸಿ ನಾವಿದ್ದೀವಿ ನಿಮ್ಮ ಜತೆ, ನೀವು ಅಳಬಾರದು, ಅತ್ತರೆ ಅವರ ಆತ್ಮಕ್ಕೆ ಶಾಂತಿ ಸಿಗುವುದಿಲ್ಲ. ಮಣ್ಣಿನ ಹುಳ ಮಣ್ಣಿಗೆ ಸೇರಿದೆ ಮುಂತಾಗಿ ಹೇಳಿ ಸಮಾಧಾನ ಪಡಿಸುವುದು ಮಾಡುತ್ತಾರೆ.

**ಮದುವೆ**

**ತೆರ:** ಡುಂಗ್ರಿ ಗರಾಸಿಯ ಸಮುದಾಯದಯಲ್ಲಿ ಹೆಣ್ಣಿಗೆ ತೆರ ಕೊಡುವ ಪದ್ಧತಿ ಇದೆ. ರೂ. ೬೦ರ ಕಾಯಿದೆ ಅನುಸರಿಸಿಯೇ ಮದುವೆಯಾಗುವುದು. ಇವರಲ್ಲಿ ವರದಕ್ಷಿಣೆ ಪದ್ಧತಿ ಇರುವುದಿಲ್ಲ. ಹೆಣ್ಣಿನ ಮನೆಯವರು ಗಂಡಿನ ಸ್ಥಿತಿವಂತಿಕೆಯನ್ನು ನೋಡಿ ತಮ್ಮ ಮನೆಯ ಹುಡುಗಿಯನ್ನು ಆ ಮನೆಗೆ ಕೊಡಬೇಕೊ ಕೊಡಬಾರದೊ ಎನ್ನುವುದನ್ನು ನಿರ್ಧರಿಸುತ್ತಾರೆ. ಸಾಮಾನ್ಯವಾಗಿ ಹತ್ತಿರದ

ರಕ್ತಸಂಬಂಧಿಗಳಲ್ಲಿ ಕೊಡುಕೊಳ್ಳುವಿಕೆಯು ನಡೆಯುವುದು ಸಹಜ. ಸಮುದಾಯದ ಹೆಣ್ಣು ಗರ್ಭಿಣಿಯಾದಾಗಲೇ ಆಕೆಯ ಹೊಟ್ಟೆಯಲ್ಲಿರುವ ಮಗುವಿಗೆ ನಿಶ್ಚಯ ನಡೆಯುತ್ತದೆ. ಅದು ಹೇಗೆಂದರೆ ನಿನ್ನ ಹೊಟ್ಟೆಯಲ್ಲಿ ಹೆಣ್ಣು ಹುಟ್ಟಿದರೆ ನನ್ನ ಮಗನಿಗೆ ಕೊಡಬೇಕು. ಒಂದುವೇಳೆ ಗಂಡು ಹುಟ್ಟಿದರೆ ನನ್ನ ಮಗಳನ್ನು ಮಾಡಿಕೊಳ್ಳಬೇಕು ಎನ್ನುವ ತೀರ್ಮಾನ ನಡೆದು ಹೊಗುತ್ತಿತ್ತು. ಇವರಲ್ಲಿ ಬಾಲ್ಯವಿವಾಹ ಪದ್ಧತಿ ಜಾರಿಯಲ್ಲಿತ್ತು. ಆದರೆ ಇತ್ತೀಚೆಗೆ ಬಾಲ್ಯವಿವಾಹಕ್ಕೆ ಅಂತಹ ಒಲವು ಇವರಲ್ಲಿ ಕಂಡುಬರುತ್ತಿಲ್ಲ. ಹೆಣ್ಣು ಋತುಮತಿಯಾದ ತರುವಾಯವೇ ಹುಡುಗಿಯ ಮನೆಯವರು ತಮ್ಮ ಮಗಳಿಗೆ ಮದುವೆ ಮಾಡಲು ಆಪೇಕ್ಷಿಸುತ್ತಾರೆ. ಹೆಣ್ಣಿನ ಮನೆಯವರು ಎಂದೂ ತಮ್ಮ ಮನೆಯ ಹೆಣ್ಣನ್ನು ಮದುವೆ ಮಾಡಿಕೊಳ್ಳಿ ಎಂದು ಗಂಡಿನವರಿಗೆ ಬೇಡುವುದಿಲ್ಲ. ಹಾಗೆ ಕೇಳುವುದು ತಮ್ಮ ಕುಲಕ್ಕೆ ಅಪಮಾನವೆಂದು ಭಾವಿಸುತ್ತಾರೆ. ಹಾಗೇ ಗಂಡಿನ ಮನೆಯವರು ಹೆಣ್ಣನ್ನು ಕೇಳಬೇಕಾದರೆ ತಮ್ಮ ಹತ್ತಿರದ ಸಂಬಂಧಿಕರ ಮೂಲಕ ಕೇಳಿಸುತ್ತಾರೆ. ಸಾಮಾನ್ಯವಾಗಿ ಹೆಣ್ಣಿನ ಪಾಲಕರು ತಮ್ಮ ಹೆಣ್ಣನ್ನು ಕೊಡಲು ಗಂಡಿಗೆ ಎಷ್ಟು ಆಸ್ತಿ ಇದೆ ಎಂದು ಕೇಳುತ್ತಾರೆ. ಇಲ್ಲಿ ಆಸ್ತಿ ಎಂದರೆ ಭೂಮಿ ಅಥವಾ ಸಂಪತ್ತು ಎಂದರ್ಥವಲ್ಲ. ಹುಡುಗನಲ್ಲಿರುವ ಬೇಟೆನಾಯಿಗಳು, ಕತ್ತೆ, ಕುದುರೆಗಳು, ಬಲೆಗಳು, ಡೇರೆ, ಬಿದಿರಿನ ಕೊಳವೆ, ಸುತ್ತಿಗೆ, ಹಾರೆ, ಖಾರ ಅರಿಯುವ ಕಲ್ಲು ಮುಂತಾದವುಗಳು ಆತನಲ್ಲಿ ಸ್ವಂತಕ್ಕೆ ಇವೆ ಎಂದು ತಿಳಿದಾಗ ಮಾತ್ರ ತಮ್ಮ ಹೆಣ್ಣು ಮಗಳನ್ನು ಮದುವೆ ಮಾಡಿಕೊಡಲು ಮುಂದೆ ಬರುತ್ತಾರೆ. ಒಟ್ಟಿನಲ್ಲಿ ತಮ್ಮ ಮನೆಯ ಮಗಳು ಸುಖವಾಗಿರಲು ಮೇಲೆ ತಿಳಿಸಿದ ಎಲ್ಲ ವಸ್ತುಗಳು ಅಗತ್ಯವೆಂದು ಭಾವಿಸುತ್ತಾರೆ. ಕತ್ತೆ, ಕುದುರೆಗಳು, ದಿನನಿತ್ಯ ಬಳಕೆಗೊಳ್ಳುವ ವಸ್ತು, ಡೇರೆಯ ಸರಂಜಾಮುಗಳನ್ನು ಹೇರಿಕೊಂಡು ಹೋಗಲು ಅವಶ್ಯಕ. ಹಾಗೆಯೇ ಬೇಟೆನಾಯಿಗಳು ಆಹಾರಕ್ಕೆ ಅವಶ್ಯಕವಾದ ಮಾಂಸಹಾರವನ್ನು ಪೂರೈಸುವಂತವು. ಬಲೆಗಳು ಮೀನು, ಆಮೆ ಮುಂತಾದ ಜಲಚರ ಪ್ರಾಣಿಗಳನ್ನು ಹಿಡಿಯಲು, ಸುತ್ತಿಗೆ, ಹಾರೆಗಳು ಡೇರೆಯನ್ನು ಹಾಕಲು ನೆರವಾಗುವುದು ಹಾಗೆಯೇ ಡೇರೆಯು ಬಿಸಿಲು, ಮಳೆ, ಗಾಳಿಯಿಂದ ಕುಟುಂಬವನ್ನು ರಕ್ಷಿಸುವಂಥಾದ್ದು. ಹೀಗೆ ನಿತ್ಯಜೀವನೋಪಾಯದಲ್ಲಿ ಬಳಸುವ ಎಲ್ಲಾ ವಸ್ತುಗಳು ಇದ್ದಾಗ ಮಾತ್ರ ಮಗಳು ಸುಖವಾದ ಜೀವನ ಮಾಡುತ್ತಾಳೆ ಎಂಬ ನಂಬಿಕೆ ಈ ಸಮುದಾಯದವರದ್ದು. ಇದರಲ್ಲಿ ಯಾವುದೇ ಒಂದು ವಸ್ತು ಇಲ್ಲದಿದ್ದಲ್ಲಿ ಆ ಕುಟುಂಬವನ್ನು ತುಂಬಾ ಹಿಯ್ಯಾಳಿಕೆಯ ದೃಷ್ಟಿಯಿಂದ ನೋಡಲಾಗುತ್ತದೆ. ಉದಾಹರಣೆಗೆ ಕುಟುಂಬವೊಂದರಲ್ಲಿ ನಾಯಿ ಇಲ್ಲವೆಂದು ಭಾವಿಸಿ, ಆಗ ಡುಂಗ್ರಿಗರಾಸಿಯ ಸಮುದಾಯದವರು "ನಾಯಿ ಇಲ್ಲದ ಮನೆ ಒಂದು ಮನೆಯೇ" ಎಂದು ಹಿಯ್ಯಾಳಿಸುತ್ತಾರೆ. ಮೇಲೆ ತಿಳಿಸಿದ ಎಲ್ಲವುಗಳಿಗಿಂತ ಮುಖ್ಯವಾಗಿ ಡುಂಗ್ರಿಗರಾಸಿಯರವರ ಪಿತ್ರಾರ್ಜಿತ ಆಸ್ತಿ ಎನ್ನಲಾದ "ಖಲ್ಯಾ" (ಕತ್ತೆಯ ಮೇಲೆ ಸಾಮಾನು ಹೇರಲು ಯೋಗ್ಯವಾದಂತಹ ಗೋಣಿಚೀಲದ ಜೋಳಿಗೆಯಂತಿರುವ ಒಂದು ಸಾಧನ) ಎಂದು ಭಾವಿಸಲಾಗುತ್ತದೆ. "ಖಾಟ್" (ನಾಲ್ಕು ಕಾಲುಗಳಿಂದ ಕೂಡಿದ ಮಂಚದ ಆಕಾರದ ವಸ್ತು ಇದರ ಮೇಲೆ ತಮ್ಮ ದಿನನಿತ್ಯ ಅವಶ್ಯಕವಾದ ಪದಾರ್ಥಗಳನ್ನು ಜೋಡಿಸಿ ಇಡುತ್ತಾರೆ). "ಟೋಪ್ಲೊ" (ದೊಡ್ಡ ಕುಕ್ಕೆ) ಬೆಳ್ಳಿ ರೂಪಾಯಿ, ಅಭರಣ ಮುಂತಾದ ಮುಖ್ಯ ವಸ್ತುಗಳನ್ನು ಈ ಟೋಪೋದ

ಒಳ ಪದರಿನಲ್ಲಿ ಮುಚ್ಚಿಡಲಾಗುತ್ತದೆ. ಊರಿಂದ ಊರಿಗೆ ವಲಸೆ ಹೋಗುವಾಗ ಈ ಟೋಪೋವನ್ನು ಹೋರುವ ಅಧಿಕಾರ ಕೇವಲ ಮನೆಯ ಯಜಮಾನತಿ ಇಲ್ಲವೇ ಸೊಸೆಯಾದವಳು ಮಾತ್ರ ಹೊಂದಿರುತ್ತಾಳೆ. 'ಲಾಟೀನು' (ದೀಪದ ಬುಡ್ಡೆ) ಇವು ಕಟ್ಟುನಿಟ್ಟಾಗಿ ಗಂಡಿನ ಮನೆಯಲ್ಲಿ ಇರಲೇಬೇಕು.

**ಮದುವೆಯ ಕ್ರಮ**

**ಹೆಣ್ಣನ್ನು ಖಾಯಂಗೊಳಿಸುವುದು:** ಡುಂಗ್ರಿಗರಾಸಿಯ ಸಮುದಾಯದಲ್ಲಿ ಮಧ್ಯವರ್ತಿಗಳು ಮೊದಲಿಗೆ ಹೆಣ್ಣಿನ ತಂದೆತಾಯಿಗಳ ಮನ ಒಲಿಸುತ್ತಾರೆ ಅವರು ಹೆಣ್ಣನ್ನು ಕೊಡಲು ಒಪ್ಪಿದ ತರುವಾಯ ನಿಶ್ಚಯ ಕಾರ್ಯ ಏರ್ಪಡುತ್ತದೆ. ಗಂಡಿನ ಮನೆಯವರು ಹೆಣ್ಣಿನ ಗುಡಾರದ ಮುಂಭಾಗದಲ್ಲಿ ಹಾಸಿಗೆ ಹಾಸಿ ಕುಳಿತುಕೊಳ್ಳುತ್ತಾರೆ. ತರುವಾಯ ಕುಲ ಬಾಂಧವರೆಲ್ಲಾ ಅಲ್ಲಿಗೆ ಬಂದು ಸೇರುತ್ತಾರೆ. ಸೇರಿದವರ ಸಮ್ಮುಖದಲ್ಲಿ ಮಾತುಕತೆ ನಡೆಯುತ್ತದೆ. ಗಂಡಿನ ಕಡೆಯವರು ವಧು ದಕ್ಷಿಣೆಯಾಗಿ ಹೆಣ್ಣಿನ ತಂದೆಗೆ ಕನಿಷ್ಟ ೮ ರೂ.ಗಳು ನೀಡಬೇಕಾಗುತ್ತದೆ. ಇದರಲ್ಲಿ ಮದುವೆಗೆ ೪ ರೂ.ಗಳು, ೪ ರೂ. ವೀಳ್ಯಶಾಸ್ತ್ರಕ್ಕೆ, ೪ ರೂ. ಪಂಚರಿಗೆ ಒಟ್ಟು ಹನ್ನೆರಡು ರೂಪಾಯಿಗಳನ್ನು ವರನ ಕಡೆಯವರು ನೀಡಲೇಬೇಕು. ವಧುದಕ್ಷಿಣೆ (ತೆರ) ನೀಡಬೇಕು.

**ವೀಳ್ಯಶಾಸ್ತ್ರ:** ಮದುವೆ ಕಾರ್ಯ ಹೆಣ್ಣಿನ ಮನೆಯಲ್ಲಿ ಆಗುತ್ತದೆ. ಮದುವೆ ಗಂಡು ಹೆಣ್ಣು ಇಬ್ಬರಿಗೂ ವಸ್ತ್ರಾಭರಣ ಮಾಡಿಸಿ ಹೊಸ ಬಟ್ಟೆ ತರುವ ಪದ್ಧತಿ ಇಲ್ಲ. ಅಂದರೆ ಗಂಡಿಗೆ ಬಿಳಿಪಂಚೆ ಉಡಿಸಿ, ತಲೆಗೆ ಪೇಟಾ ಕಟ್ಟಿಕೊಂಡು ಅಕ್ಕಿ ಮತ್ತು ಕುಂಕುಮವನ್ನು ಬೆರೆಸಿ ಹಣೆಯ ತುಂಬಾ ಹಚ್ಚಿ ಪಲೇಡೋ (ಕವಡೆಯಿಂದ ಮಾಡಲ್ಪಟ್ಟಿರುತ್ತದೆ) ಹಿರಿಯರ ಕಾಲದ ಒಂದು ಕೆಂಪು ಬಟ್ಟೆ, ಕವಡೆ ಮತ್ತು ಗಾಜುಗಳಿಂದ ಅಲಂಕೃತಗೊಳಿಸಲಾಗಿರುತ್ತದೆ. ಒಂದು ಕುಕ್ಕೆಯಲ್ಲಿ ಕುಂಕುಮ ಬೆರೆಸಿದ ಅಕ್ಕಿ, ಎಲೆ, ಅಡಿಕೆಗಳನ್ನು ಇರಿಸಿ ಇವುಗಳನ್ನು ಹುಡುಗನ ಅಕ್ಕ ಅಥವಾ ತಂಗಿಯ ತಲೆಗೆ ಹೊರೆಸಿ, ಮದುವೆಯ ಹಾಡನ್ನು ಹಾಡುತ್ತಾ ಹುಡುಗನ ಸಂಬಂಧಿಗಳು, ಕುಣಿಯುತ್ತಾ ಹೆಣ್ಣಿನ ಮನೆಗೆ ಸಾಗುವರು. ಹೆಣ್ಣಿನ ಮನೆಯ ಮುಂದೆ ಹೊದಿಕೆಯನ್ನು ಹಾಸಲಾಗುತ್ತದೆ. ನಂತರ ಮದುವೆ ಗಂಡು ಚಪ್ಪಲಿ ಸಮೇತ ಹೋಗಿ ಹಾಸಿಗೆಯ ಮೇಲೆ ಕೂರಬೇಕು. ನಂತರ ಗಂಡಿನ ಮನೆಯಿಂದ ತೆಗೆದುಕೊಂಡು ಹೋದ ವಸ್ತುಗಳನ್ನು ಹೆಣ್ಣಿಗೆ ಕೊಟ್ಟು ಅವಳ ಹಣೆಯ ತುಂಬಾ ಕುಂಕುಮದ ಅಕ್ಕಿಯನ್ನು ಮೆತ್ತಲಾಗುವುದು. ನಂತರ ಹೆಣ್ಣು ಮತ್ತು ಗಂಡಿನ ಕಡೆಯವರೆಲ್ಲರೂ ಸೇರಿ ಮತ್ತೊಮ್ಮೆ ವಿವಾಹದ ಬಗ್ಗೆ ತೀರ್ಮಾನ ಕೈಗೊಂಡು ಒಪ್ಪಿಗೆ ಆದ ನಂತರ ಮದುವೆ ಗಂಡಿನ ಮುಂದೆ ಒಂದು ಅಡಕೆಯನ್ನು ಸ್ವಲ್ಪ ಹೊಗಸೊಪ್ಪನ್ನು ಪುಡಿ ಮಾಡಿ ಇಟ್ಟು ಎಲ್ಲರ ಒಪ್ಪಿಗೆಯನ್ನು ಪಡೆದು, (ಪಂಚರ ಒಪ್ಪಿಗೆ ಪಡೆದು) ಪಂಚರಲ್ಲಿ ಗಂಡು ಮತ್ತು ಹೆಣ್ಣಿನ ಬೆಡಗಿನವರು ಬಿಟ್ಟು ಉಳಿದವರು ಆ ಅಡಿಕೆಯನ್ನು ಹೊಡೆಯ ಬೇಕು. ಹೀಗೆ ಅಡಿಕೆ ಹೊಡೆದ ತಕ್ಷಣ ವೀಳ್ಯಶಾಸ್ತ್ರ ಕಾರ್ಯ ಮುಗಿಯುತ್ತದೆ.

ಅದೇ ಕ್ಷಣದಲ್ಲಿ ಮತ್ತೆ ೨ ಅಡಿಕೆಗಳನ್ನು ಮತ್ತು ಸ್ವಲ್ಪ ಹೊಗೆಸೊಪ್ಪನ್ನು ಪುಡಿ ಮಾಡಿ ಇಟ್ಟು ಮದುವೆ ಪ್ರಾರಂಭಕ್ಕೆ ಎಲ್ಲರ ಒಪ್ಪಿಗೆ ಪಡೆಯಲಾಗುತ್ತದೆ. ಮೇರೆಗೆ ಅಡಿಕೆಗಳನ್ನು ಹೊಡೆಯಲಾಗುವುದು.

ಒಟ್ಟಿನಲ್ಲಿ ವೀಳ್ಯಶಾಸ್ತ್ರಕ್ಕೆ ಒಂದು ಅಡಿಕೆ, ಮದುವೆಗೆ ಎರಡು ಆ ಅಡಿಕೆ ಹೊಡೆಯಬೇಕು. ಹೀಗೆ ಎರಡು ಅಡಿಕೆ ಒಡೆದ ತಕ್ಷಣದಿಂದ ಮದುವೆ ಕಾರ್ಯ ಪ್ರಾರಂಭವಾಗುತ್ತದೆ. ನಂತರ ಮದುವೆ ಗಂಡು ಮೊದಲು ಮನೆಯಿಂದ ಹೇಗೆ ಹೊರಟನೋ ಅದೇ ರೀತಿ ಬಂದಿರುತ್ತಾನೋ ಹಾಗೇ ಮನೆಗೆ ವಾಪಸ್ ಬರುತ್ತಾನೆ. ಅನಂತರ ಮದುವೆ ಹೆಣ್ಣಿಗೆ ವಸ್ತ್ರಾಭರಣಗಳನ್ನು ಕೊಂಡುಕೊಳ್ಳುತ್ತಾರೆ. ಅವುಗಳಲ್ಲಿ ಕೆಂಪು ಸೀರೆ, ಕೆಂಪು ರವಿಕೆ, ಬಳೆ, ಕೊಬ್ಬರಿ ಹಾರ ಮುಂತಾದವುಗಳನ್ನು ಕೊಳ್ಳುತ್ತಾರೆ. ಇವುಗಳನ್ನು ಬಿಟ್ಟು ಮತ್ತೆ ಯಾರೂ ಕೂಡ ಹೊಸ ಬಟ್ಟೆ ತೊಡುವಂತಹ ಪದ್ಧತಿ ಇರುವುದಿಲ್ಲ. ನಂತರ ತಂದಿದ್ದ ವಸ್ತುಗಳನ್ನು ಮದುವೆ ಗಂಡಿನ ಮನೆಯಲ್ಲಿಯೇ ಇರಿಸಿಕೊಂಡಿದ್ದು ಸಗಾಯಿ ವೇಳೆಯಲ್ಲಿ ಹೋದ ಹಾಗೆ ತಂದಿದ್ದ ಹೆಣ್ಣಿನ ವಸ್ತುಗಳನ್ನು ಅವರಿಗೆ ಕೊಟ್ಟು ಹಿಂತಿರುಗುತ್ತಾರೆ. ಸರ್ವರಿಂದ ಅರಿಷಿಣ ಹಚ್ಚುವ ಕಾರ್ಯ ಪ್ರಾರಂಭವಾಗುತ್ತದೆ. ಮದುವೆ ಗಂಡಿಗೆ ಮೊದಲು ಅರಿಷಿಣ ಹಚ್ಚಿ ಉಳಿದ್ದಿದ್ದನ್ನು ಹೆಣ್ಣಿಗೆ ಹಚ್ಚಲಾಗುತ್ತದೆ. ಒಂದು ಅಥವಾ ಎರಡು ದಿನಗಳವರೆಗೆ ಅರಿಷಿಣ ಹಚ್ಚುವ, ಹಾಡು ಹೇಳುವ, ಕುಣಿಯುವ, ಕುಡಿಯುವ ಪ್ರವೃತ್ತಿಯೇ ಇರುತ್ತದೆ. ದಿನಕ್ಕೆ ಎರಡು ಬಾರಿ ಮದುವೆ ಗಂಡನ್ನು ಸ್ನಾನ ಮಾಡಿಸುತ್ತಾರೆ. ಮದುವೆ ಮುಗಿಯುವವರೆಗೂ ಸಂಪೂರ್ಣ ಖರ್ಚನ್ನು ಮದುವೆ ಗಂಡಿನವರೇ ಭರಿಸಬೇಕಿರುತ್ತದೆ. ಹೆಣ್ಣಿನ ತಂದೆಯ ಖುಷಿ ಇದ್ದರೆ ಮದುವೆಯ ಖರ್ಚನ್ನು ಕೊಡಬಹುದು, ಇಲ್ಲದಿದ್ದರೆ ಇಲ್ಲ. ಅಡಿಗೆ ಸೌಕರ್ಯವು ಇದ್ದು ಮದುವೆ ಮುಗಿಯುವವರೆಗೆ ಹಾಡಿಯಲ್ಲಿ ಯಾರ ಮನೆಯಲ್ಲೂ ಅಡಿಗೆ ಮಾಡುವಂತಿಲ್ಲ. ಎಲ್ಲರೂ ಮದುವೆ ಮನೆಯಲ್ಲಿಯೇ ಮಾಡಿದ್ದ ಸಸ್ಯಹಾರ ಅಡುಗೆಯನ್ನು ಸೇವಿಸಬೇಕಾಗುತ್ತದೆ. ನಂತರ ಹೆಣ್ಣಿನ ಕಡೆಯವರು ಐದು ಸೇರು ಗೋದಿ ಎರಡೂವರೆ ಮೊಳ ಕೆಂಪು ಹಲವಣಿ ಬಟ್ಟೆ, ಒಂಭತ್ತು ನಾಡಾಪುಡಿ ಅಂದರೆ ಸಣ್ಣ ಸಣ್ಣ ಕುಂಕುಮದ ಪೊಟ್ಟಣ, ಒಂಭತ್ತು ಒಣ ಖರ್ಜೂರ, ಒಂಭತ್ತು ತುಂಡು ಕೊಬ್ಬರಿ ಮತ್ತು ಚಿಲ್ಲರೆ ಹಣ ಇವುಗಳನ್ನು ತಂದಿದ್ದ ಎರಡೂವರೆ ಮೊಳ ಬಟ್ಟೆಯಲ್ಲಿ ಕಟ್ಟಬೇಕು. ಆ ಬಟ್ಟೆಗೆ ಒಂದು ಚಾಕುವನ್ನು ಕಟ್ಟಲಾಗುವುದು. ಇದರಂತೆಯೇ ಮದುವೆ ಗಂಡು ಎರಡೂವರೆ ಕೆ.ಜಿ ಗೋಧಿ, ಒಂದೂವರೆ ಮೊಳ ಕೆಂಪು ಬಟ್ಟೆ, ಒಂಭತ್ತು ಚಿಕ್ಕ ಚಿಕ್ಕ ಕುಂಕುಮದ ಪೊಟ್ಟಣ, ಒಂಭತ್ತು ಒಣ ಖರ್ಜೂರ, ಐದು ತುಂಡು ಕೊಬ್ಬರಿ ಮತ್ತು ಚಿಲ್ಲರೆ ಹಣ ತಂದಿದ್ದ ಬಟ್ಟೆಯಲ್ಲಿ ಕಟ್ಟಿ ಅದಕ್ಕೆ ಒಂದು ಚಾಕು ಕಟ್ಟಬೇಕಾಗುತ್ತದೆ. ಇವುಗಳನ್ನು ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳಬೇಕಾಗುತ್ತದೆ. ಏಕೆಂದರೆ ಇವುಗಳು ದೇವರಿಗೆ ಸಮರ್ಪಣೆಯಾಗುವ ವಸ್ತುಗಳು.

ತರುವಾಯ ಗಂಡಿನ ಕಡೆಯವರು ೫ ಜನ ಮದುವೆ ಆಗಿರುವವರು. 'ಲಗನ್‌ಮಾಂಡ್ವ' ಉಪವಾಸ ಇದ್ದು ಗಂಡಿನ ಮನೆಯಿಂದ ವಸ್ತುಗಳನ್ನು ಗಂಡಿನ ಜೊತೆಯಲ್ಲಿ ಮದುವೆ ಹೆಣ್ಣಿನ ಮನೆಗೆ ಕೊಂಡಯ್ಯಬೇಕು. ಇದನ್ನು ಬಹಳ ಶಿಸ್ತಿನಿಂದ ತೆಗೆದುಕೊಂಡು ಹೋಗಬೇಕಾಗುತ್ತದೆ. ಇದಕ್ಕೆ ಮೊದಲು ಮನೆಯಿಂದ ಹೊರಡುವಾಗ ತಂದಿದ್ದ ಗೋಧಿಯಲ್ಲಿ ಒಂದು ಬೊಗಸೆ ಗೋಧಿಯನ್ನು ಹೆಣ್ಣಿನ ಮನೆಗೆ ಬಂದು ಮನೆಯ ಮುಂದೆ ಹೆಣ್ಣನ್ನು ನಿಲ್ಲಿಸಿ ಆಕೆಯ ಕೈಗೆ ಕೊಡುವನು. ಆ ಗೋಧಿಯನ್ನು ಮದುವೆ ಹೆಣ್ಣು ಎರಡು ಅಡಿಕೆ ಹೊಡೆಯುವ ಸಂದರ್ಭದಲ್ಲಿ ಮಾಡಿದ ದೇವರ ಪ್ರತಿ ರೂಪಗಳ

(ಮಣ್ಣಿನಿಂದ ಮಾಡಿರುತ್ತವೆ 'ಮನುಖ್ಯಾ') ಎದುರು ಇಡಲಾಗುತ್ತದೆ. ಇವುಗಳನ್ನು ಅವರು ಮುಟ್ಟುಂವತಿಲ್ಲ. ಕಾರಣ ಮನೆಯಲ್ಲಿರುವಂತಹ ಮಣ್ಣಿನ ಅಡಿಗೆ ಪಾತ್ರೆಗಳು, ಅಂದರೆ ತಟ್ಟೆಗಳು, ಮಡಿಕೆಗಳು ಮುಟ್ಟಿದರೆ ಬೇಗ ಒಡೆದು ಹೋಗುತ್ತವೆ ಎಂದು ನಂಬಲಾಗುತ್ತದೆ.

ಗಂಡು ಕೊಟ್ಟ ಬೊಗಸೆ ಗೋಧಿಯನ್ನು ಹೆಣ್ಣು ತಂದು ದೇವರು ಪ್ರತಿರೂಪದ ಎದುರು ಹಾಕಿ ಜೋಪಾನವಾಗಿ ನೋಡಿಕೊಳ್ಳುವುದು. ಜೊತೆಗೆ ಉಳಿದ್ದದ್ದನ್ನು ಅಲ್ಲಿಯೇ ಕೊಡಲಾಗುವುದು. ನಂತರ ಹೆಣ್ಣು ಕೂಡ ಅದೇ ರೀತಿ ತಂದಿದ್ದ ಗೋಧಿಯಲ್ಲಿ ಒಂದು ಬೋಗಸೆಗೆ ಹಾಕಿ ಅದರೊಂದಿಗೆ ಉಳಿದ ಎಲ್ಲ ಪದಾರ್ಥಗಳನ್ನು ನೀಡಲಾಗುತ್ತದೆ. ಇದರೊಂದಿಗೆ ಮದುವೆ ಗಂಡು ವಾಪಸ್ ಬಂದು ಆ ಗೋಧಿಯನ್ನು ದೇವರ ಪ್ರತಿರೂಪದ ಮುಂದೆ ಹಾಕಿ ಅದನ್ನು ಜೋಪಾನವಾಗಿ ನೋಡಿಕೊಳ್ಳುವುದು. ಹಿರಿಯರು ಅಂಗಿದಾಗ್ಗೆ ಎಚ್ಚರಿಕೆಗಳನ್ನು ನೀಡುತ್ತಿರುತ್ತಾರೆ. ಇಷ್ಟಾದ ನಂತರ ಉಪವಾಸವಿದ್ದು ಲಗನ್‌ಮಾಂಡ್ವ್ಯ ಎಂಬ ಐದು ಜನರು ಹೆಣ್ಣಿನ ತಂದೆತಾಯಿಗೆ ತೃಪ್ತಿಯಾಗಲೆಂದು ಕಾಂಸೋ ನೀಡಬೇಕಾಗುತ್ತದೆ. ಕಾಂಸೋ ಎಂದರೆ ಒಂದು ದೊಡ್ಡ ತಟ್ಟೆಯ ತುಂಬಾ ಅನ್ನ ಒಳ್ಳೆಯ ತುಪ್ಪ ಮತ್ತು ಅನ್ನಕ್ಕೆ ಸಾಕಷ್ಟು ಬೆಲ್ಲವನ್ನು ಸೇರಿಸಲಾಗಿರುತ್ತದೆ. ಇದನ್ನು ಹೆಣ್ಣಿನ ಕಡೆಯವರು ತೆಗೆದುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಅನ್ನ ಇನ್ನಿತರ ಯಾವುದೇ ಪದಾರ್ಥ ಕಡಿಮೆಯಾದರೆ ಜಗಳಗಳಾಗುವ ಸಂದರ್ಭವಿದ್ದು ಮದುವೆಗಳು ನಿಂತು ಹೋಗುವ ಸಂಭವವಿದೆ. ಬಹಳ ಎಚ್ಚರಿಕೆಯಿಂದ ಹಿರಿಯರ ಆಜ್ಞೆಗಳಂತೆ ಇದನ್ನು ಕೊಡಬೇಕಾಗುತ್ತದೆ. ಇದನ್ನು ಹೆಣ್ಣಿನ ತಂದೆ ತಾಯಿಯರು ಒಪ್ಪಿದ ನಂತರ ಹೆಣ್ಣಿನ ಕಡೆಯ ಐದು ಜನ ಅಕ್ಕತಂಗಿಯರು ಕೂಡಿ ಅದನ್ನು ತಿನ್ನಬೇಕಾಗುತ್ತದೆ.

ನಂತರ ಹೆಣ್ಣಿನ ಮನೆಯಲ್ಲಿ ಹೆಣ್ಣಿಗೆ ಗಂಡಿನ ಮನೆಯಲ್ಲಿ ಗಂಡಿಗೆ ಎಣ್ಣೆ, ಅರಿಷಿಣವನ್ನು ಹಚ್ಚಬೇಕು. ಮೊದಲು ಗಂಡನ್ನು ಸ್ನಾನ ಮಾಡಿಸಿ, ಅವನು ಸ್ನಾನ ಮಾಡುವಾಗ ಉಟ್ಟಿದ್ದ ಬಟ್ಟೆಯನ್ನು ಹೆಣ್ಣಿಗೆ ಉಡಿಸಿ ಸ್ನಾನ ಮಾಡಿಸುವುದು ಪದ್ಧತಿಯಾಗಿದೆ. ಮದುವೆ ವೇಳೆಯಲ್ಲಿ ಎಲೆ ಅಡಿಕೆಯನ್ನು ಪೂರೈಸಬೇಕಾಗುತ್ತದೆ. ಮಾರನೆಯ ದಿನ ಗಂಡು ಮತ್ತು ಹೆಣ್ಣಿಗೆ ವಸ್ತ್ರವನ್ನು ಉಡಿಸಿ ಹೆಣ್ಣಿನ ಮನೆಯ ಮುಂದೆ ಗಂಡನ್ನು ಕರೆದುಕೊಂಡು ಹೋಗಲಾಗುತ್ತದೆ. ಗಂಡು-ಹೆಣ್ಣು ಹೋದಾಗ ಮಾವಿನ ತೋರಣ ಅಡ್ಡ ಹಿಡಿಯಲಾಗುತ್ತದೆ. ಆಗ ಹೆಣ್ಣಿನ ತಾಯಿ ಏಳು ಚೊಂಬುಗಳನ್ನು ತಲೆ ಮೇಲೆ ಹೊತ್ತು, ಸೌಟನ್ನು ಸೆರಗಿನಲ್ಲಿ ಹಿಡಿದು ಗಂಡಿನ ಕೆನ್ನಗೆ ಹೊಡೆಯುತ್ತಾಳೆ. ಹೊಡೆಯುವಾಗ ಅತ್ತೆಯ ನೆನಪಿರಲಿ (ಸಾಸುರಿವಳಕ್ ರೇವಾದೆ) ಎಂದು ಹೇಳಿ ಹೊಡೆಯುತ್ತಾಳೆ. ಆಗ ಮದುವೆ ಗಂಡು ಕೈಯಲ್ಲಿರುವ ಚಾಕುವಿಂದ ಅತ್ತೆಯ ತಲೆಯ ಮೇಲಿರುವ ಚೊಂಬುಗಳನ್ನು ಕೆಳಗಿನಿಂದ ಮೆಲ್ಲನೆ ಹೊಡೆದು ಮೇಲಿನ ಚೊಂಬುವಿನಲ್ಲಿ ಒಂದು ಅಡಿಕೆಯನ್ನು ಹಾಕಿದ ನಂತರ ಮೇಲಿನ ಚೊಂಬನ್ನು ಎತ್ತಲಾಗುತ್ತದೆ. ಹೀಗೆ ಏಳುಬಾರಿಯೂ ಈ ಪ್ರಕ್ರಿಯೆ ನಡೆಯುತ್ತದೆ. ನಂತರ ತೋರಣವನ್ನು ಕೈಯಲ್ಲಿರುವ ಚಾಕುವಿನಿಂದ ಕೊಯ್ದು ಚಪ್ಪಲಿ ಸಮೇತ ಹೋಗಿ ಕೂರುತ್ತಾನೆ. ಅವನ ಮುಂದೆ ಐದು ಚೊಂಬುಗಳು ಇಟ್ಟು ಅದರಲ್ಲಿ ಐದು ಮಾವಿನ ಎಲೆ, ಐದು ಕಾಳು ಅಕ್ಕಿಯನ್ನು ಹಾಕಿ ಐದು ಚೊಂಬುಗಳನ್ನು ಹಸಿ ನೂಲಿನಿಂದ ಐದು ಸುತ್ತು ಸುತ್ತಿ ಒಟ್ಟಿಗೆ ಸೇರಿಸಲಾಗಿರುತ್ತದೆ. ನಂತರ ಒಬ್ಬ

ಹಿರಿಯನನ್ನು ಪೂಜಾರಿ ಎಂದು ಹೆಸರಿಸಿ ಅವರ ಮುಂದೆ ಗಂಡು ಮತ್ತು ಹೆಣ್ಣನ್ನು ಕೊಡಿಸುತ್ತಾರೆ. ಪೂಜಾರಿ ಹಿತವಚನಗಳನ್ನು ನೀಡಿ, ಸಂಸಾರದ ಬಗ್ಗೆ ಸಮುದಾಯದ ಬಗ್ಗೆ, ದೇವರ ಬಗ್ಗೆ, ಸಂಬಂಧಗಳ ಬಗ್ಗೆ ಮದುಮಕ್ಕಳಿಗೆ ತಿಳುವಳಿಕೆ ನೀಡುತ್ತಾನೆ. ಹಾಗೆ ತಂದೆ-ತಾಯಿ, ಅತ್ತೆ-ಮಾವ, ದೇವರ ಸೇವೆ ಇವುಗಳನ್ನು ಮನದಟ್ಟು ಮಾಡಿಸುತ್ತನೆ. ನಂತರ ದೇವರ ಹೆಸರು ಹೇಳಿ ಅವರಿಬ್ಬರ ಮೇಲೆ ಅಕ್ಕಿ ಕಾಳನ್ನು ಹಾಕುತ್ತಾನೆ. ಅವನನ್ನು ಇತರರು ಅನುಸರಿಸುತ್ತಾರೆ. ಇದರ ಮಾರನೆಯ ದಿನ ಬೆಳಗಿನ ಜಾವ ೪ ರಿಂದ ೫ ಗಂಟೆಯ ವೇಳೆಗೆ ಗಂಡಿನ ತಾಯಿ ಮತ್ತು ಅಕ್ಕ ಹೀಗೆ ಒಂದಿಬ್ಬರು ಸೇರಿ ಹಲ್ಲಿಟ್ಟು ಮಸಿ ಮತ್ತು ಕರಿಮಣಿದಾರ ಅಥವಾ ತಾಳಿ ಇದನ್ನು ತೆಗೆದುಕೊಂಡು ಹೋಗಿ ಮದುವೆ ಹುಡುಗಿಗೆ ಕಟ್ಟಬೇಕಾಗುತ್ತದೆ. ಕಟ್ಟುವ ವೇಳೆ ಮದುವೆ ಗಂಡಿನ ಮನೆಯವರ ಪರಿಚಯ ಮಾಡಿಸಲಾಗುತ್ತದೆ. ಒಟ್ಟಿನಲ್ಲಿ ಮದುವೆ ಗಂಡು-ಹೆಣ್ಣಿಗೆ ತಾಳಿ ಕಟ್ಟುವುದಿಲ್ಲ. ಇದರೊಂದಿಗೆ ವಿವಾಹ ಮುಕ್ತಾಯವಾಗುವುದು.

ತರುವಾಯ ಹೆಣ್ಣು ಮತ್ತು ಗಂಡಿನವರು ಹಾಗೂ ಪೂಜಾರಿಯು ಕುಳಿತು ಅವರಲ್ಲಿರುವ ಎರಡು ಗಂಟುಗಳ ಪದಾರ್ಥಗಳನ್ನು ಅಂದರೆ ಗೋಧಿ ಮೊದಲಾದವುಗಳನ್ನು ಒಟ್ಟಿಗೆ ಬೆರೆಸಿ ಹೆಣ್ಣಿಗೆ ಎರಡು ಪಾಲು, ಗಂಡಿಗೆ ಒಂದು ಪಾಲು, ಅರ್ಧ ಪಾಲು ಪೂಜಾರಿಗೆ ಎಂದು ಹಂಚಲಾಗುವುದು. ಹೆಣ್ಣಿನ ಪಾಲನ್ನು ಹೆಣ್ಣಿನವರು ಏನಾದರೂ ಮಾಡಬಹುದು ಅಥವಾ ಯಾರಿಗಾದರೂ ತಿನ್ನಿಸಬಹುದು, ಪೂಜಾರಿಯೂ ಅಷ್ಟೆ. ಗಂಡಿನ ಪಾಲು ಪ್ರಮುಖವಾದದ್ದು, ಪಾಲಿಗೆ ಬಂದ ಗೋದಿ ಮತ್ತು ಬೊಗಸೆ ಗೋದಿಯನ್ನು ಸೇರಿಸಿ ಅವರ ಮನೆ ದೇವರ ಪೂಜೆ ಮಾಡಲಾಗುತ್ತದೆ. ಮತ್ತು ಪೂಜೆಯು ಒಂದೊಂದು ಬೆಡಗುಗಳಲ್ಲಿ ಒಂದೊಂದು ತರಹದ್ದಾಗಿರುತ್ತದೆ. ಅಂದರೆ ಪೂಜೆ ವಿಧಾನಗಳು ಬೇರೆ ಬೇರೆಯದ್ದಾಗಿರುತ್ತದೆ. ಉದಾಹರಣೆಗೆ ಮುಣಿಯಾಣಿಯಲ್ಲಿ ತಂದಿದ್ದ ಗೋಧಿಯನ್ನು ಗಂಡಿನ ಕಡೆಯವರು ಮಾತ್ರ ಸೇರಿಕೊಂಡು ಬಾಯಿಗೆ ಬಟ್ಟೆ ಕಟ್ಟಿ ಬೀಸುವ ಕಲ್ಲಿಗೆ ಹಾಕಿ ಪುಡಿ ಮಾಡಬೇಕು ಏಕೆಂದರೆ ಅದು ದೇವರಿಗೆ ಸಲ್ಲಬೇಕಾಗಿರುವುದರಿಂದ ಅದರಲ್ಲಿ ಉಗುಳು, ಬೆವರು ಬೀಳದಂತೆ ಕಟ್ಟೆಚ್ಚರ ವಹಿಸಬೇಕಾಗುತ್ತದೆ. ಇದರ ಜೊತೆಗೆ ಪುನಃ ಎರಡೂವರೆ ಸೇರು ಗೋಧಿಯನ್ನು ತಂದು ಪುಡಿ ಮಾಡಬೇಕು. ಇದರಲ್ಲಿ ಒಂಭತ್ತು ಚಪಾತಿಗಳನ್ನು ತಯಾರಿಸಿ ಅದರಲ್ಲಿ ಒಂಭತ್ತು ಪಾಲನ್ನು ಮಾಡಿ ಕುಲದೇವರು ಶ್ರೀ ಚಾಮುಂಡೇಶ್ವರಿಗೆ ಅರ್ಪಿಸಬೇಕು. ಜೊತೆಗೆ ಎರಡೂವರೆ ಸೇರು ಹೆಸರು ಕಾಳನ್ನು ಬೇಯಿಸಿ ಅದನ್ನು ಚಪಾತಿಯ ಮೇಲೆ ಇಟ್ಟು ಅದರ ಮೇಲೆ ತುಪ್ಪವನ್ನು ಹಾಕಲಾಗುವುದು. ನಂತರ ಸಮುದಾಯದ ಹಿರಿಯರಾದ ತಾಂತುನಾಥ್ ಹೆಸರಿಗೆ ಎರಡು ಚಪಾತಿ ಮತ್ತು ಬೇಯಿಸಿದ ಹೆಸರುಕಾಳು ಮತ್ತು ತುಪ್ಪವನ್ನು ಹಾಕಿ ಇಡಬೇಕು. ಎಡೆಯನ್ನು ಮುಣಿಯಾಣಿಯವರು ಮಾತ್ರ ತಿನ್ನಬೇಕು. ಇದರ ಉದ್ದೇಶ ಮದುವೆ ಹೆಣ್ಣನ್ನು ಜಾತಿಗೆ, ಕುಟುಂಬಕ್ಕೆ, ದೇವರಿಗೆ ಸೇರಿಸುವ ಪದ್ಧತಿಯಾಗಿದೆ. ಪ್ರತಿ ಬೆಡಗಿನಲ್ಲಿ ಬೇರೆ ಬೇರೆ ರೀತಿಯ ಆಚರಣೆಗಳಿವೆ. ಒಟ್ಟಾರೆ ಇವು ಆ ಮದುವೆ ಆದ ಹೆಣ್ಣನ್ನು ಬೆಡಗಿಗೆ ಸೇರಿಸಿಕೊಳ್ಳುವ ಪದ್ಧತಿಯಾಗಿದೆ. ಮದುವೆಯಾದ ನಂತರ ಶ್ರೀ ಚಾಂಮುಂಡೇಶ್ವರಿ ದೇವಿಗೆ ಪೂಜೆ ಮಾಡಿ ಹೆಣ್ಣನ್ನು ಕುಲಕ್ಕೆ ಸೇರಿಸಿಕೊಳ್ಳಲಾಗುತ್ತದೆ. ಈ ಕಾರ್ಯಕ್ಕೆ

'ಭೇಡಾ' ಎಂದು ಹೆಸರು. ಸಮುದಾಯದಲ್ಲಿ ಯಾವುದೇ ಶುಭ ಅಶುಭ ಕಾರ್ಯಗಳಿಗೆ ಪಂಚಾಂಗ ನೋಡುವ ಪ್ರವೃತ್ತಿ ಇಲ್ಲ. ಹಾಗೂ ಮದುವೆ ಕಾರ್ಯದಲ್ಲಿ ಅನ್ಯ ಸಮುದಾಯದವರನ್ನು ಪೂಜಾರಿ ಎಂದು ನೇಮಿಸುವಂತಿಲ್ಲ. ಬ್ರಾಹ್ಮಣ ಹಾಗೂ ಅನ್ಯ ಮೇಲ್ಜಾತಿಗಳಿಗೆ ಸಮುದಾಯದ ಯಾವುದೇ ಕಾರ್ಯಗಳಿಗೆ ಪ್ರವೇಶವಿಲ್ಲ.

**ವಿಧವಾ ವಿವಾಹ:** ಗಂಡ ಸತ್ತಿದ್ದರೆ ಹೆಂಡತಿಗೆ ಅಥವಾ ಹೆಂಡತಿ ಸತ್ತರೆ ಗಂಡನಿಗೆ ಮರು ವಿವಾಹ ಮಾಡುವ ಬಗ್ಗೆ ಚಿಂತಿಸುವ ಮತ್ತು ನಿರ್ಣಯ ತೆಗೆದುಕೊಳ್ಳುವ ಸಂಪೂರ್ಣ ಹುಕ್ಕು ಸಮುದಾಯದ ಪಂಚರಿಗಿರುತ್ತದೆ. ಅವನು/ಅವಳು ವಯಸ್ಕಳಾಗಿದ್ದರೆ ಅಥವಾ ಅವರಿಗೆ ಒಂದೆರಡು ಮಕ್ಕಳಿದ್ದರೆ ಅವರ ಮುಂದಿನ ಭವಿಷ್ಯಕ್ಕಾಗಿ ಎಲ್ಲರೂ ಸೇರಿ ಆಲೋಚಿಸಿ ಅವರಿಗೆ ಮರು ವಿವಾಹದ ಅಗತ್ಯದ ಬಗ್ಗೆ ಮತ್ತು ಯಾರ ಜೊತೆಯಲ್ಲಿ ಮರು ವಿವಾಹ ಮಾಡಬೇಕು ಎಂಬುದನ್ನು ಚರ್ಚಿಸಿ ಒಂದು ತೀರ್ಮಾನಕ್ಕೆ ಬರುತ್ತಾರೆ. ಇದಕ್ಕೆ ಅವರ ಒಪ್ಪಿಗೆ ಮೇರೆಗೆ ಮುಂದಿನ ಕಾರ್ಯಕ್ರಮವನ್ನು ಕೈಗೊಳ್ಳುತ್ತಾರೆ. ಒಂದು ವೇಳೆ ನಿರಾಕರಿಸಿದರೆ ಅವನಿಗೆ/ಅವಳಿಗೆ ಯೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳಲು ೬ ತಿಂಗಳು ಅಥವಾ ೧ ವರ್ಷ ಗಡುವು ನೀಡಲಾಗುತ್ತದೆ. ಹಾಗೆಯೇ ಅಲ್ಲಿಯವರೆಗೆ ಅವಳ/ನ ನಡುವಳಿಕೆಗಳ ಬಗ್ಗೆ ಎಚ್ಚರವಹಿಸುವುದು ಹಾಡಿಯ ಎಲ್ಲರ ಜವಾಬ್ದಾರಿಯಾಗಿರುತ್ತದೆ. ಅವರ ಕುರಿತು ಪ್ರತಿ ದಿನ ಮಾಹಿತಿಯನ್ನು ಪಂಚರಿಗೆ ತಲುಪಿಸುವುದು ಸಮುದಾಯದವರ ಕರ್ತವ್ಯವೆಂದು ಭಾವಿಸಲಾಗುತ್ತದೆ. ಎಲ್ಲಾ ಮಾಹಿತಿಗಳನ್ನು ಪಂಚರು ಗುಪ್ತವಾಗಿಡಬೇಕು. ನಂತರ ಗಡುವು ಮುಗಿದ ನಂತರ ಅಥವಾ ಅಗತ್ಯವಿದ್ದರೆ ಮಧ್ಯದಲ್ಲಿ ಅವರನ್ನು ಕರೆಯಿಸಿ ಎಲ್ಲರ ಸಮ್ಮುಖದಲ್ಲಿ ತೀರ್ಮಾನಿಸಲು ವಿಚಾರಣೆ ನಡೆಸಿ ಅವರು ಯಾರನ್ನು ಇಷ್ಟಪಡುತ್ತಾರೋ ಅವರಿಗೆ ಮರು ವಿವಾಹ ಮಾಡಲಾಗುವುದು. ಆಕೆ ಮೊದಲ ವಿಧವೆಯಾಗಿದ್ದರೆ ಆಕೆಗೆ ಬಾಳು ಕೊಡುವ ಹಕ್ಕನ್ನು ಆಕೆಯ ಗಂಡನ ತಮ್ಮ/ಅಣ್ಣಂದಿರು ಹೊಂದಿರುತ್ತಾರೆ. ಅವರಿಲ್ಲದಿದ್ದರೆ ಅವಳ ಗಂಡನ ಚಿಕ್ಕಪ್ಪ/ದೊಡ್ಡಪ್ಪನ ಮಕ್ಕಳು ಅವಳನ್ನು ಮದುವೆಯಾಗುವ ಪದ್ಧತಿ ಜಾರಿಯಲ್ಲಿದೆ. ಅವರು ಒಪ್ಪದಿದ್ದಾಗ ಬೇರೆಯರಿಗೆ ವಿವಾಹವಾಗುವ ಅವಕಾಶವಿದೆ.

ಆಕೆಯನ್ನು ಮದುವೆಯಾಗುವವನು ಆಕೆಯ ಮತ್ತು ಆಕೆಯ ಮಕ್ಕಳು ಮತ್ತು ಅವರ ಆಸ್ತಿಯನ್ನು (ಆಸ್ತಿಯನ್ನು ಹಿಂದೆ ವಿವರಿಸಲಾಗಿದೆ) ಆತನಿಗೆ ನೀಡಿ ಅವರೆಲ್ಲರ ಪಾಲನೆ, ಪೋಷಣೆಯ ಜವಾಬ್ದಾರಿ ವಿವಾಹವಾಗುವವನಿಗೆ ವಹಿಸಲಾಗುತ್ತದೆ. ಮಕ್ಕಳು ಚಿಕ್ಕವರಾಗಿದ್ದರೆ ಪ್ರಾಪ್ತ ವಯಸ್ಕಾರಾಗುವವರೆ ಅಂದರೆ ೧೦-೧೨ ವರ್ಷ ಆಗುವವರೆಗೆ ಅವರನ್ನು ಸಾಕಿ, ಬೆಳೆಸಿ ನಂತರ ಅವರ ರಕ್ತ ಸಂಬಂಧಿಗಳಿಗೆ ಅಂದರೆ ತನ್ನ ಹೆಂಡತಿಯ ಮೊದಲನೆ ಗಂಡನ ಸಂಬಂಧಿಕರಿಗೆ ವರ್ಗಾಯಿಸುವುದು ಆತನ ಕರ್ತವ್ಯವಾಗಿರುತ್ತದೆ. ಈ ಅವಧಿಯನ್ನು ಪಂಚರು ತೀರ್ಮಾನಿಸುತ್ತಾರೆ. ಇದಕ್ಕೆ ಅವರು ಬದ್ಧರಾಗಿರಬೇಕು ಯಾವುದೇ ಕಾರಣಕ್ಕೂ ಆಕೆಯನ್ನು ಅಥವಾ ಅವಳ ಮಕ್ಕಳನ್ನು ಬೀದಿ ಪಾಲು ಮಾಡುವ ಹಕ್ಕನ್ನು ಪಂಚರು ಅವನಿಗೆ ನೀಡುವುದಿಲ್ಲ. ಹಾಗೇನಾದರೂ ಆದರೆ ಆತನಿಗೆ ದಂಡ ವಿಧಿಸಿ ಹಾಡಿಯಿಂದ ಮತ್ತು ಸಮುದಾಯದಿಂದ ಹೊರ ಹಾಕುತ್ತಾರೆ. ಹೀಗೆ ಒಂದು ಹೆಣ್ಣಿಗೆ ಅಥವಾ ವಿಧವೆಗೆ ಮರು

ವಿವಾಹದ ಮೂಲಕ ಆಕೆಗೆ ಹಾಡಿಯಲ್ಲಿ ಎಲ್ಲರಂತೆ ಸುಖವಾಗಿ ಜೀವನ ನಡೆಸಲು ಸಹಕಾರಿಯಾಗುವಂತೆ ಮರುವಿವಾಹ ಪದ್ಧತಿಯು ರೂಢಿಯಲ್ಲಿದೆ. ಗಂಡನಿಗೆ ಮರು ವಿವಾಹ ಆದಾಗ ಆತನಿಗೆ ಹೊಸದಾಗಿ ಮದುವೆಯ ಯಾಗುವಾಗ ನಡೆಸುವ ಎಲ್ಲಾ ಕಾರ್ಯಗಳನ್ನು ಮಾಡುತ್ತಾರೆ. ಅದೇ ವಿಧವಾ ವಿವಾಹದ ಸಮಯದಲ್ಲಿ ಆಕೆಗೆ ಪುನಃ ಮದುವೆ ಮಾಡಲು ಸಾಧ್ಯವಿಲ್ಲ. ಏಕೆಂದರೆ ಒಂದು ಹೆಣ್ಣಿಗೆ ಒಂದೇ ಬಾರಿ ಮದುವೆ ಸಾಧ್ಯ ಎಂಬ ನಂಬಿಕೆ ಇವರಲ್ಲಿದೆ.

**ಆಚರಣೆ:** ಈ ಸಮಯದಲ್ಲಿ ಆಕೆಯನ್ನು ಆಕೆಯ ತಂದೆ ಅವಳ ಹತ್ತಿರದ ಸಂಬಂಧಿಕರ ಮನೆಗೆ ಕಳುಹಿಸಲಾಗುತ್ತದೆ. ಅಂದರೆ ಆಕೆಯು ಈಗ ತನ್ನ ತಂದೆಯ ಮನೆಯಲ್ಲಿರುವ ವಿವಾಹಕ್ಕೆ ಸಿದ್ಧವಾಗಿರುವ ಕನ್ಯೆ ಎಂದು ಭಾವಿಸಲಾಗುವುದು. ಆಗ ಯಾರ ಮನೆಯಲ್ಲಿ ಆಕೆ ಇರುತ್ತಾಳೋ ಅವರ ಮನೆಯ ಯಜಮಾನ ತಂದೆಯ ಸಮನಾಗುತ್ತಾನೆ. ಹೀಗೆ ಆಕೆ ತನ್ನ ತಂದೆಯ ಮನೆಗೆ ಹೋದಾಗ ಮೊದಲ ಮದುವೆಯ ಎಲ್ಲಾ ಸಂಬಂಧಗಳು ಮುರಿದು ಹೋಗುತ್ತವೆ ಎಂಬ ನಂಬಿಕೆ.

**ದೇವರ ಬೆಟ್ಟ:** ನಂತರ ಅವಳು ಆಕೆಯ ಮೊದಲ ಗಂಡನ ಸಂಬಂಧಿಕರೊಂದಿಗೆ ಮದುವೆಯಾಗುವ ಹಾಗಿದ್ದರೆ ಅದನ್ನು ದೇವರ ಬೆಟ್ಟ ಎಂದು ಕರೆದು ೨ ರೂ.ಗಳನ್ನು ಪಂಚರಿಗೆ ನೀಡಿ ಕರಿಮಣಿದಾರ ಕಟ್ಟಿ ಹಲ್ಲಿಟ್ಟು ಹಾಕಿಸಿ ನಂತರ ಪಂಚರು ಆಕೆಯನ್ನು ಅವರ ಮನೆಗೆ ಬಿಡುವುದರ ಮೂಲಕ ಮರುವಿವಾಹದ ಕಾರ್ಯ ಮುಗಿದಂತೆ, ಒಂದುವೇಳೆ ಆಕೆ ಅದನ್ನು ಬಿಟ್ಟು ಮೊದಲ ಗಂಡನ ಬೆಡಗು ಬಿಟ್ಟು ಉಳಿದ ಬೆಡಗಿನವರನ್ನು ಮದುವೆಯಾಗಲು ಇಚ್ಛಿಸಿದ್ದರೆ ಅವರ ಹೆಸರಿನ ಕರಿಮಣಿ ದಾರ ಕಟ್ಟಿ ಹಲ್ಲಿಟ್ಟು ಹಾಕಿಸಿ, ೩೦ ರೂ.ಗಳನ್ನು ಪಂಚರಿಗೆ ನೀಡುವುದರೊಂದಿಗೆ ಆಕೆಯನ್ನು ಮರು ವಿವಾಹವಾಗಬಹುದು. ಈ ಹಣವನ್ನು ಪಡೆದು ಪಂಚರು ಅವಳ ಮೊದಲ ಗಂಡನ ಸಂಬಂಧಿಕರಿಗೆ ಆ ಹಣವನ್ನು ನೀಡುತ್ತಾರೆ. ಸಂಬಂಧಿಕರು ಯಾರೂ ಅಲ್ಲಿ ಇರದಿದ್ದರೆ ಮುಂದೆ ಎಂದಾದರೂ (ಹಬ್ಬಗಳಲ್ಲಿ) ಸಿಕ್ಕಿದರೆ ಆಕೆಯ ಸಂಪೂರ್ಣ ಚರಿತ್ರೆಯನ್ನು ಹೇಳಿ ಅವರಿಗೆ ಮನವರಿಕೆ ಮಾಡಿಸಿ ಪಡೆದ ೩೦ ರೂ. ಹಣವನ್ನು ಅವರಿಗೆ ನೀಡಲಾಗುವುದು ಇದರಿಂದ ಅವರ ಮತ್ತು ಆಕೆಯ ಸಂಬಂಧ ಮುಗಿದ ಹಾಗೆ ಎಂದು ಭಾವಿಸಲಾಗುತ್ತದೆ.

**೫.೩.೩ ಪಾರ್ಧಿ**

ಪಾರ್ಧಿ ಎಂಬುದು ಇಂದಿಗೂ ಕಾಡುಮೇಡನ್ನು ಆಶ್ರಯಿಸಿದ ಅಲೆಮಾರಿ ಬುಡಕಟ್ಟಾಗಿದೆ. ಯಾವುದೋ ಒಂದು ಹಂತದಲ್ಲಿ ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ವಲಸೆ ಬಂದು ಅಲೆಮಾರಿಗಳಾಗಿ ರೂಪಾಂತರಗೊಂಡ ಸಮುದಾಯಗಳಲ್ಲಿ ಈ ಬಡಕಟ್ಟೂ ಒಂದು. ಕೆಲವು ಪಾರ್ಧಿ ಬುಡಕಟ್ಟಿನ ವಕ್ತೃಗಳು ತಮ್ಮ ಮೂಲ ರಾಜಸ್ಥಾನದ ಚಿತ್ತೊಡದ ಮೇವಾಡ ಎಂದು ಹೇಳುತ್ತಾರೆ. ತಮ್ಮ ಪೂರ್ವಿಕರು ಮೇವಾಡದ ಅರಸ ರಾಣಾ ಪ್ರತಾಪನ ಅಂಗರಕ್ಷಕರರಾಗಿದ್ದರು. ಪಾರ್ಧಿ ಎಂದರೆ ಅಂಗರಕ್ಷಕ (Bodyguard) ಎಂದರ್ಥ. ಬಾಬರನು ಮಹಾರಾಣಾ ಪ್ರತಾಪನನ್ನು ಕೊಲ್ಲಲು ಹಲವಾರು ಸಲ ಅವನ ಮೇಲೆ ದಂಡೆತ್ತಿ ಬಂದಾಗಲೆಲ್ಲಾ ಪಾರ್ಧಿ ಬುಡಕಟ್ಟಿನವರೇ ಅವನಿಗೆ ಅಂಗರಕ್ಷಕರಾಗಿದ್ದರು.

ಆದರೆ ಬಾಬರನು ತನ್ನ ೧೬ನೇ ಪ್ರಯತ್ನದಲ್ಲಿ ರಾಣಾ ಪ್ರತಾಪನನ್ನು ಕೊಂದುಬಿಟ್ಟ. ಅದಕ್ಕೂ ಮುಂಚೆ ಅಕ್ಬರ್ ಬಾದಶಾಹನು ರಾಣಾ ಪ್ರತಾಪನನ್ನು ಸೋಲಿಸಿದಾಗ, ರಾಣಾ ಪ್ರತಾಪನು ತಲೆಮರಸಿಕೊಂಡು ಕಾಡಿನೊಳಗೆ ಅಲೆಯುತ್ತಿದ್ದನು. ಆಗಲೂ ಸಹ ಪಾರ್ಧಿ ಬುಡಕಟ್ಟಿನವರೇ ಅವನ ಅಂಗರಕ್ಷಕರಾಗಿದ್ದರು ಎಂದು ಹೇಳಲಾಗುತ್ತದೆ. ರಾಣಾ ಪ್ರತಾಪನ ಅವನತಿಯ ನಂತರ ಗ್ವಾಲಿಯರದ ಝಾನ್ಸಿರಾಣಿ ಲಕ್ಷ್ಮೀಬಾಯಿಯು ಪಾರ್ಧಿಯವರನ್ನು ತನ್ನ ಅಂಗ ರಕ್ಷಕರನ್ನಾಗಿ ನೇಮಿಸಿಕೊಂಡಿದ್ದಳಂತೆ. ಆಕೆಯ ತೀರಿದ ತರುವಾಯ ಪಾರ್ಧಿ ಜನರು ಕೊಲ್ಲಾಪುರದ ಶಾಹು ಮಹಾರಾಜನ ಆಶ್ರಯ ಪಡೆದರಂತೆ. ಶಾಹು ಮಹಾರಾಜನ ಅವನತಿಯ ನಂತರ ಪಾರ್ಧಿಗಳು ರಾಜಾಶ್ರಯ ಕಳೆದುಕೊಂಡು ದಿಕ್ಕುಪಾಲಾಗಿ ಕಾಡನ್ನು ಆಶ್ರಯಿಸುವಂತಾಯಿತೆಂದು ಹೇಳಲಾಗುತ್ತದೆ. ಮೂಲತಃ ತಾವು ಮಧ್ಯಭಾರತದ ವಿಂಧ್ಯಪರ್ವತದ ಮೂಲದವರೆಂದು ಹೇಳಿಕೊಳ್ಳುವ ಪಾರ್ಧಿ ಸಮುದಾಯದವರು ಕರ್ನಾಟಕ, ತಮಿಳ್ನಾಡು, ಆಂಧ್ರ ಪ್ರದೇಶ, ತೆಲಂಗಾಣ ಮತ್ತು ಮಹಾರಾಷ್ಟ್ರ, ರಾಜಸ್ಥಾನ, ಗುಜರಾತ್, ಮಧ್ಯಪ್ರದೇಶ, ಗೋವಾ ಮುಂತಾದ ರಾಜ್ಯಗಳಲ್ಲಿಯೂ ಕಂಡುಬರುವರು. ವಿಶೇಷವಾಗಿ ಮಹಾರಾಷ್ಟ್ರದಲ್ಲಿ ಈ ಸಮುದಾಯವು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಹಾಗೆಯೇ ಗುಜರಾತ್, ರಾಜಸ್ಥಾನಗಳಲ್ಲಿಯೂ ಸಹ ಹೆಚ್ಚಿನ ಸಂಖ್ಯೆಯಲ್ಲಿ ಈ ಸಮುದಾಯ ನೆಲೆಸಿದೆ. ಪಾರ್ಧಿ ಸಮುದಾಯವನ್ನು ಪ್ರಾದೇಶಿಕವಾಗಿ ಭಿನ್ನ ಭಿನ್ನ ಹೆಸರುಗಳಿಂದ ಕರೆಯಲ್ಪಡುತ್ತಿರುವರು. ಹೀಗಾಗಿ ತಮಿಳ್ನಾಡು, ಕೇರಳ ಇತ್ಯಾದಿ ರಾಜ್ಯಗಳಲ್ಲಿ ಇವರು ಇಲ್ಲವೆಂದೇ ಹೇಳಲಾಗುತ್ತದೆ. "ಕರ್ನಾಟವೊಂದರಲ್ಲಿಯೇ ಪಾರ್ಧಿ, ಫಾನ್ಸೆ ಪಾರ್ಧಿ, ನೀಲಶಿಕಾರಿ, ತಾಕಣಕರಿ, ಪಾಶೆಚಾರಿ, ಹರಣಶಿಕಾರಿ, ಹರಿಣಶಿಕಾರಿ, ರಾಜ್ ಪಾರ್ಧಿ, ಹಕ್ಕಿಪಿಕ್ಕಿ, ಅಡವಿಚಿಂಚರ್, ಚಿಂಚೇರ್, ಚಿಗರೆಬೇಟೆಗಾರ್, ಮೇಲು ಶಿಕಾರಿ, ನರಿಶಿಕಾರಿ, ನರಿಕೊರವನ್, ನಕ್ಕಲರ್, ಪಿಚ್ಚೆಳ್ಳಿಯೋರು, ಕುರುವಿಕಾರನ್, ಪಿಂಡಂಡೆ, ಪಿಟ್ಟಲೋಳ್ಳು ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ಇವೆಲ್ಲವೂ ಒಂದೇ ಸಮುದಾಯಕ್ಕೆ ಕರೆಯುವ ಹೆಸರಾಗಿದ್ದರೂ ಸ್ಥಳೀಯರ ದೃಷ್ಟಿಯಲ್ಲಿ ಭಿನ್ನ ಭಿನ್ನ ಸಮುದಾಯಗಳೆಂದೇ ಗುರುತಿಸಲಾಗುತ್ತಿದೆ."(ಶಿಕಾರಿರಾಮು:೨೦೦೮:೩೯), "ರಜಪೂತ್" ಎಂಬ ಜಾತಿ ಸೂಚಿತ ಹೆಸರನಿಂದಲೂ ಕೆಲವು ಕಡೆ ಈ ಸಮುದಾಯದವರನ್ನು ಗುರುತಿಸಲಾಗುತ್ತಿದೆ. ಹೀಗಾಗಿ ಪಾರ್ಧಿ ಸಮುದಾಯಕ್ಕೆ ಸಂಬಂಧಿಸಿದ ಈ ರೀತಿಯ ಗೊಂದಲಗಳು ಕರ್ನಾಟಕವನ್ನೊಳಗೊಂಡು ಬಹುತೇಕ ಎಲ್ಲಾ ರಾಜ್ಯಗಳಲ್ಲಿಯೂ ಕಂಡುಬರುತ್ತದೆ. ಸಮುದಾಯದ ಜನ ತಮ್ಮನ್ನು ಗುರುತಿಸಿಕೊಳ್ಳುವಾಗ ಸಮುದಾಯದವರು ತಮ್ಮನ್ನು ತಾವು ಬಾವುರ್ರಿ, ವ್ಹಾಗ್ರಿ, ಪಾರಧಿ ಸಮುದಾಯದವರೆಂದು ಹೇಳಿಕೊಳ್ಳುತ್ತಾರೆ. ಪಾರ್ಧಿ ಸಮುದಾಯದವರೇ ಹೇಳುವಂತೆ ಈ ಸಮುದಾಯದೊಳಗೆ ಫಾಸಿಪಾರ್ಧಿ, ಗಾಯಿ ಪಾರ್ಧಿ, ರಾಜ್‌ಪಾರ್ಧಿ, ಭಿಲ್ ಪಾರ್ಧಿ, ಲಂಗೋಟಿ ಪಾರ್ಧಿ, ಚೋರಾಸ್ ಪಾರ್ಧಿ ಎನ್ನುವ ಒಳಪಂಗಡಗಳಿವೆ. ಈ ಒಳಪಂಗಡಗಳು ಪರಸ್ಪರ ವಿವಾಹ ಸಂಬಂಧಗಳನ್ನು ಬೆಸೆದುಕೊಳ್ಳುತ್ತವೆ. ಈ ಸಮುದಾಯದವರನ್ನು ಕರ್ನಾಟಕದ ಬೀದರ್, ಗುಲ್ಬರ್ಗ ಜಿಲ್ಲೆಗಳಲ್ಲಿ ಪಾರ್ಧಿ ಎಂದೂ, ಬಳ್ಳಾರಿ, ಕೊಪ್ಪಳ, ಧಾರವಾಡ, ಗದಗ, ಬೆಳಗಾವಿ ಜಿಲ್ಲೆಗಳಲ್ಲಿ ಪಾರ್ಧಿ, ಹಕ್ಕಿಪಿಕ್ಕಿ, ಹರಣಶಿಕಾರಿ, ಅಡವಿಚಿಂಚೇರ್ ಎಂದೂ, ವಿಜಯಪುರ, ಬಾಗಲಕೋಟೆಗಳಲ್ಲಿ ಹರಣಶಿಕಾರಿ, ಬೇಟೆಗಾರ್, ಚಿಗರಿಕಾರ್ ಎಂದೂ

ಕರೆಯಲಾಗುತ್ತದೆ. ಆಂಧ್ರ ಪ್ರದೇಶ, ತೆಲಂಗಾಣಗಳಲ್ಲಿ 'ಪಾರ್‌ದಾನ್', 'ನೀರ್‌ಶಿಕಾರಿ' ಹಾಗೂ 'ಪಿಟಲೊಲು' ಎಂದು ಗುರ್ತಿಸುತ್ತಾರೆ, ಮಹಾರಾಷ್ಟ್ರ, ಗುಜರಾತ್ ಮತ್ತು ರಾಜಾಸ್ಥಾನ ರಾಜ್ಯಗಳಲ್ಲಿ ಪಾರ್ಧಿ ಹಾಗೂ ವಾಗ್ರಿ ಎಂದು ಕರೆಯುತ್ತಾರೆ. ಮಧ್ಯಪ್ರದೇಶದ ಬಸ್ತರ ಜಿಲ್ಲೆಯಲ್ಲಿಯ ಪಾರ್ಧಿಗಳನ್ನು ನಹರ(Nahar) ಎಂದು ಕರೆಯುವರು. ಮಧ್ಯ ಪ್ರದೇಶದ ಹಲವೆಡೆ ಬಾಹೆಲ್ಲಿಯ (Bahellia) ಮತ್ತು ಚಿತಾಪಾರ್ಧಿ (Chitapardhi) ಹೆಸರಿನಿಂದ ಈ ಸಮುದಾಯವನ್ನು ಗುರುತಿಸಲಾಗುತ್ತದೆ.

**ಫಾನ್ಸೆ ಪಾರ್ಧಿ**

ಫಾನ್ಸೆಪಾರ್ಧಿಗಳು ಮಹಾರಾಷ್ಟ್ರದ ಧುಲೆ, ಜಲಗಾಂ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಇವರನ್ನು ಲಂಗೋಟಿ ಪಾರ್ಧಿಗಳೆಂತಲೂ ಕರೆಯುತ್ತಾರೆ. ಫಾಸಿ ಅಥವಾ ಗಲ್ಲು ಹಾಕುವುದರ ಮುಖಾಂತರ ಬೇಟೆಯಾಡುವವರಿಗೆ ಫಾನ್ಸೆ ಪಾರ್ಧಿ ಎಂಬ ಹೆಸರು ಬಂದಿರುವುದು. ಫಾನ್ಸೆಪಾರ್ಧಿಗಳು ಭೊಸ್ಲೆ, ಪವಾರ, ಚವ್ಹಾಣ, ರೇಲೆ(Ralay) ಮತ್ತು ಸಿಂಧಿಯಾ ಎಂಬ ಬೆಡಗುಗಳನ್ನು ಹೊಂದಿದ್ದಾರೆ. ಇವರು ಮಾರುತಿ, ಖಂಡೇರಾವ, ಜುನದೇವ್ ಇತ್ಯಾದಿ ಗ್ರಾಮದೈವಗಳನ್ನು ಹಾಗೂ ಚಿತಾರಸಿಂಗ್, ಭವಾನಿ ಮತ್ತು ಶಿವ-ಶಕ್ತಿ ಇತ್ಯಾದಿ ಮನೆ ದೇವರುಗಳನ್ನು ಆರಾಧಿಸುವರು. ಈ ದೈವಗಳ ಪೂಜಾರಿಗಳಿಗೆ ಭಗತ್ ಎನ್ನುವರು. ಇವರನ್ನು ಟಾಕಣಕಾರ್ (Takankar) ಪಾರ್ಧಿಗಳೆಂತಲೂ ಮಹಾರಾಷ್ಟ್ರದಲ್ಲಿ ಕರೆಯುವರು.

ಆಂಧ್ರ ಪ್ರದೇಶದ ಪಾರ್ಧಿಗಳನ್ನು ಪಾಲ್ ಅಥವಾ ಲಂಗೋಟಿ ಪಾರ್ಧಿ ಮತ್ತು ಚಿತೆವಾಲೆ ಫಾನ್ಸಿ ಪಾರ್ಧಿಗಳೆಂದು ಕರೆಯುವರು. ಪಾಲ್ ಅಥವಾ ಲಂಗೋಟಿ ಪಾರ್ಧಿಗಳು ಅಲೆಮಾರಿಗಳು ಮತ್ತು ಲಂಗೋಟಿಧಾರಿಗಳಾದರೆ, ಚಿತೆವಾಲೆ, ಚಿತಾವಾಲೆ ಅಥವಾ ಫಾನ್ಸಿ ಪಾರ್ಧಿಗಳು ಚಿರತೆ ಬೇಟೆಗಾರರಾಗಿರುವರು. ಇವರು ಪವಾರ್, ಡೊಂಗ್ಲೆ, ಜಾಧವ್, ಚವ್ಹಾಣ, ಕಾರೆ ಇತ್ಯಾದಿ ಬೆಡಗುಗಳನ್ನು ಹೊಂದಿರುವರು. ಸಜಾತಿ ಬೆಡಗುಗಳಲ್ಲಿ ವಿವಾಹ ನಿಷೇಧವಿದ್ದು ವಿಜಾತಿ ಬೆಡಗುಗಳಲ್ಲಿ ವಿವಾಹ ಮಾಡಿಕೊಳ್ಳುತ್ತಾರೆ. ಇವರಲ್ಲಿ ಸತ್ತವರನ್ನು ಹೂಳುವರು ಮತ್ತು ಸೂತಕ ಆಚರಿಸುವರು. ೧೯೩೧-೪೧ರ ಜನಗಣತಿಯ ಪ್ರಕಾರ ಹೈದ್ರಾಬಾದ್ ರಾಜ್ಯದಲ್ಲಿಯ ಇವರ ಜನಸಂಖ್ಯೆ ಕ್ರಮವಾಗಿ ೭,೧೭೨ ಮತ್ತು ೬,೩೮೮ ಎಂದು ದಾಖಲಾಗಿದೆ.

**ಪಾರ್ಧಿ ಸಮುದಾಯದ ದೈಹಿಕ ಲಕ್ಷಣಗಳು**

ಯಾವುದೇ ಬುಡಕಟ್ಟಾನ್ನಾದರೂ ಅದರ ವಿಶಿಷ್ಟವಾದ ದೈಹಿಕ ಲಕ್ಷಣ, ಭಾಷೆ, ಆಚರಣೆ, ಗುಂಪಾಗಿ ನೆಲೆಸುವಿಕೆಯ ಮೂಲಕ ಗುರುತಿಸಬಹುದು. ಅಂತಹ ಒಂದು ವಿಶಿಷ್ಟ ಬುಡಕಟ್ಟುಗಳಲ್ಲಿ ಪಾರ್ಧಿ ಬುಡಕಟ್ಟೂ ಒಂದಾಗಿದೆ. ಈ ಬುಡಕಟ್ಟಿನವರು ದೈಹಿಕವಾಗಿ ೫ ರಿಂದ ೬ಅಡಿ ಎತ್ತರವಿರುವರು. ಮಹಿಳೆಯರು ಪುರುಷರಿಗಿಂತ ಸ್ವಲ್ಪ ಕಡಿಮೆ ಎತ್ತರ ಇರುವರು. ಸಾಮಾನ್ಯವಾಗಿ ಕಿರಿದಾದ ಕಣ್ಣಿನ ರಚನೆಯಿದ್ದು ನೀಲಿ, ಕಪ್ಪು ಗುಡ್ಡೆಯ ಕಣ್ಣುಳ್ಳವರನ್ನು ಕಾಣಬಹುದು. ಗಿಡ್ಡದಾದ ಚಪ್ಪಟೆ ಮೂಗು, ಕಟ್ಟುಮಸ್ತಾದ ಆಕರ್ಷಣೀಯ ಮೈಕಟ್ಟನ್ನು ಹೊಂದಿರುತ್ತಾರೆ.

**ಪದ ನಿಷ್ಪತ್ತಿ**

ಪಾರ್ಧಿ ಎನ್ನುವ ಪದ 'ಪಾರದ್'ಎಂಬ ಪದದಿಂದ ಉಗಮಗೊಂಡಿದೆ. ಪಾರದ್(Parad) ಎಂದರೆ ಬೇಟೆಯಾಡುವುದು ಎನ್ನುವ ಅರ್ಥವಿದೆ. ಹೀಗೆ ಬೇಟೆಯನ್ನೇ ಆಶ್ರಯಿಸಿದ್ದ ಈ ಸಮುದಾಯವನ್ನು ಪಾರ್ಧಿ ಎಂದು ಕರೆಯಲಾಗುತ್ತದೆ. ಪಾರ್ಧಿ ಬುಡಕಟ್ಟಿನ ಬೆಡಗುಗಳು

೧. ಸಾವಂಡಿಯಾ ೨. ಪಿಂಪ್‌ಳಾಜ್ ೩. ಖ್ಗೋಢಿಯಾರ್ ೪. ಕೂರ್‌ಭೀಯಾ

೫. ಈಖ್ಗೋತೀಯಾ ೬. ಹರ್‌ಖ್ಫತೀಯಾ ಎಂದಿವೆ.

ಮಹಾರಾಷ್ಟ್ರ ಮತ್ತು ಕಲಬುರ್ಗಿ, ಬೀದರ್, ಬೆಳಗಾವಿ ಪ್ರದೇಶಗಳಲ್ಲಿ ಮೇಲಿನ ಬೆಡಗುಗಳನ್ನೇ ಈ ಕೆಳಗಿನ ಹೆಸರುಗಳಲ್ಲಿ ಗುರುತಿಸಲಾಗುತ್ತದೆ. ಚವ್ಹಾಣ (ಸಾವಂಡಿಯಾ) ಕಾಳೆ (ಪಿಂಪ್‌ಳಾಜಾ, ಖ್ಗೋಡಿಯಾರ್, ಹರಖ್ಫತೀಯಾ,)

ಪವಾರ (ಕೊರ್‌ಬೀಯಾ, ಇಖ್ಗೋತೀಯಾ, ಕಾಳೆ) ಹರಖ್ಫತೀಯಾ, ಕಾಳೆ ಹಾಗೂ ಖ್ಗೋಡಿಯಾರ್ ಸಹೋದರ ಬೆಡಗುಗಳಾಗಿವೆ. ಸಾಮಾನ್ಯವಾಗಿ ಸಹೋದರ ಬೆಡಗುಗಳ ಮಧ್ಯದಲ್ಲಿ ವೈವಾಹಿಕ ಸಂಬಂಧಗಳು ಏರ್ಪಡುವುದಿಲ್ಲ. ಸಾವಂಡಿಯಾ ಬೆಡಗಿನವರೊಂದಿಗೆ ಆ ಬೆಡಗಿನವರ ಹೊರತಾಗಿ ಬೇರೆ ಎಲ್ಲಾ ಬೆಡಗಿನವರೂ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವರು. ಇವುಗಳಲ್ಲದೆ ನೌಕಡ್ ವಾಲೆ, ಸಕತ್‌ವಾಲೆ, ಕಾಳಿವಾಲೆ, ಪಾಡೆವಾಲೆ, ವಾಗದೇವಿವಾಲೆ ನವಾಡೆ ಎಂಬ ಬೆಡಗುಗಳೂ ಕಂಡುಬರುವವು.

**ವಿವಾಹ**

ಮಾನವನ ಬದುಕಿನ ಅತೀ ಮುಖ್ಯ ಘಟಕವೇ ವಿವಾಹವಾಗಿದೆ. ವಿವಾಹವಾಗುವ ಮೂಲಕ ಒಂದು ಕುಟುಂಬದ ಘಟಕವು ರೂಪಿತಗೊಳ್ಳುವುದು. ಮನುಷ್ಯನು ವಿವಾಹದಂತಹ ಮುಖ್ಯ ಘಟಕದಲ್ಲಿ ತೊಡಗಿಕೊಳ್ಳಲು ಹಲವು ಸಾಮಾಜಿಕ ಕಟ್ಟಲೆಗಳಿಗೆ ಒಳಗಾಗಬೇಕಾಗುವುದು. ಅದಕ್ಕಾಗಿಯೇ ಬಹುಶಃ ಕುಲ, ಬೆಡಗು ಇತ್ಯಾದಿಗಳನ್ನು ರೂಪಿಸಿಕೊಂಡಿರುವುದು. ಇಲ್ಲಿ ಪಾರ್ಧಿ ಬುಡಕಟ್ಟಿನಲ್ಲಿ ನಡೆಯುವ ವಿವಾಹ ಕ್ರಮದ ಕುರಿತು ನೋಡಲಾಗಿದೆ.

**ಕನ್ಯೆ ನೋಡುವ ಶಾಸ್ತ್ರ**

ಪಾರ್ಧಿ ಬುಡಕಟ್ಟಿನಲ್ಲಿ ಪ್ರತಿಯೊಂದು ಗ್ರಾಮಕ್ಕೆ ಒಬ್ಬ ಕಟ್ಟಿಮನೆ ಗೌಡ ಇರುತ್ತಾನೆ. ಗೌಡನ ಪರವಾನಿಗೆ ಪಡೆದೇ ಹುಡುಗಿ ನೋಡುವ ಶಾಸ್ತ್ರಕ್ಕೆ ಕೈ ಹಾಕುವರು. ಮದುವೆಗೆ ಹೆಣ್ಣು ಗುರುತಿಸಲು ಹುಡುಗನ ತಂದೆ ತಾಯಿ ಹುಡುಗಿಯ ಮನೆಗೆ ಹೋಗಿ ತಮ್ಮ ಹುಡುಗನಿಗೆ ನಿಮ್ಮ ಹುಡುಗಿಯನ್ನು ಮದುವೆ ಮಾಡಿಕೊಳ್ಳಬೇಕೆಂದಿದ್ದೇವೆ ಎಂದು ಹುಡುಗಿಯ ತಂದೆ ತಾಯಿಗಳಲ್ಲಿ ತಮ್ಮ ಮನದ ಆಪೇಕ್ಷೆಯನ್ನು ವ್ಯಕ್ತಪಡಿಸುತ್ತಾರೆ. ಅಂದು ಹುಡುಗಿ ಕಡೆಯವರಿಗೆ ಹೆಂಡ, ಸರಾಯಿ ಕುಡಿಸುವ ಪೂರ್ಣ ಖರ್ಚು

ಗಂಡಿನ ಕಡೆಯವರದಾಗಿರುತ್ತದೆ. ಹುಡುಗಿಯ ಕಡೆಯವರು ತಮ್ಮ ಹುಡುಗಿಯನ್ನು ಕೊಡಲು ಒಪ್ಪಿದರೆ ಮುಂದೆ ಗೌಡ ಹಾಗೂ ದೈವದವರನ್ನು ಹುಡುಗಿ ಮನೆಗೆ ನಿಶ್ಚಯ ಕಾರ್ಯಕ್ಕೆ ಕರೆದೊಯ್ಯಲಾಗುತ್ತದೆ.

**ಹುಡುಗಿಯನ್ನು ಕೊಡಲು ಒಪ್ಪುವ ಕ್ರಮ**

ಸಾಮಾನ್ಯವಾಗಿ ಕನ್ಯೆ ಕೊಡುವವರು ಹುಡುಗನು ಯಾವ ದುಡುಮೆ ಮೂಲಕ ಜೀವನ ನಿರ್ವಹಣೆ ಮಾಡುವನು ಎಂಬುದನ್ನು ಗಮನಿಸುತ್ತಾರೆ. ಹುಡುಗನು ತಮ್ಮ ಮಗಳನ್ನು ಸುರಕ್ಷಿತವಾಗಿ ಸಾಕಬಲ್ಲನು ಎಂದು ದೃಢವಾದ ತರುವಾಯ ಹೆಣ್ಣಿನ ಕಡೆಯವರು ತಮ್ಮ ಮನೆಯ ಹೆಣ್ಣನ್ನು ಹುಡುಗನಿಗೆ ಕೊಡಲು ಒಪ್ಪುವರು. ಮೊದಲು ಗಂಡಿನವರು ಹೆಣ್ಣನ್ನು ಕೇಳಿದರೆ ಅವರ ಬೆಡಗು ಯಾವುದೆಂದು ತಿಳಿದುಕೊಳ್ಳುವರು. ವಿಜಾತಿ ಬೆಡಗಾಗಿದ್ದಲ್ಲಿ ಮಾತ್ರ ಹೆಣ್ಣನ್ನು ಗಂಡಿಗೆ ಕೊಡಲು ಒಪ್ಪುವರು. ಹಾಗೆ ಹೆಣ್ಣನ್ನು ಕೊಡುವ ಪೂರ್ವದಲ್ಲಿಯೇ ಗಂಡಿನ ಮನೆಯಿಂದ ತಮ್ಮ ಮನೆಗೆ ಒಂದು ಹೆಣ್ಣನ್ನು ಮದುವೆ ಮಾಡಿಕೊಳ್ಳಲು ಒಪ್ಪಬೇಕೆಂದು ಹೆಣ್ಣಿನ ಕಡೆಯವರು ಬೇಡಿಕೆಯನ್ನಿಡುತ್ತಾರೆ. ಅದು ಕಡ್ಡಾಯ ನಿಯಮವಾಗಿರುತ್ತದೆ. ಅಕಸ್ಮಾತ್ ಮದುವೆಗೆ ಬಂದ ಹೆಣ್ಣುಮಕ್ಕಳು ಗಂಡಿನ ಮನೆಯಲ್ಲಿ ಇರದೇ ಇದ್ದ ಪಕ್ಷದಲ್ಲಿ ಮುಂದೆ ಅವರ ಹೊಟ್ಟೆಯಲ್ಲಿ ಹುಟ್ಟಿದ ಹೆಣ್ಣು ಮಗುವನ್ನು ಕೊಡಬೇಕಾಗುವುದು. ಈ ನಿಯಮ ತಪ್ಪಿದಲ್ಲಿ ಕುಲಪಂಚಾಯತಿ ಕರೆದು ತೀರ್ಮಾನ ಕೈಗೊಳ್ಳುವರು. ಕುಲಪಂಚಾಯತಿಯ ತೀರ್ಮಾನದಂತೆ ಎರಡೂ ಕಟುಂಬಗಳು ಬದ್ಧವಾಗಿರಬೇಕಾಗಿರುವುದು. ಹೆಣ್ಣನ್ನು ಕೊಡಲು ಅಸಾಧ್ಯವಾದ ಸಂದರ್ಭದಲ್ಲಿ ಹೆಣ್ಣಿಗೆ ಕೊಡಬೇಕಾದ ತೆರವನ್ನಾದರೂ ಗಂಡಿನ ಕಡೆಯವರು ನೀಡಬೇಕೆಂಬ ನಿಯಮವೂ ಇವರಲ್ಲಿದೆ. ಹಿಂದೆ ತೆರದ ಮೊತ್ತವು ಅರವತ್ತು ರೂಪಾಯಿಗಳಿದ್ದಿತು. ಪ್ರಸ್ತುತ ಈ ಮೊತ್ತವು ಹತ್ತು ಸಾವಿರ ರೂಪಾಯಿಗಳವರೆಗೂ ಹೋಗಿದೆ. ಈ ಪದ್ಧತಿಗೆ ಪಾರ್ಧಿಯರಲ್ಲಿ ಆಟ್ಟು ಖ್ವಾಟ್ಟು (ಕೊಡುವ ಮತ್ತು ತೆಗೆದುಕೊಳ್ಳುವ) ಎನ್ನುತ್ತಾರೆ.

**ಮದುವೆಯ ಕ್ರಮ**

ಪಾರ್ಧಿ ಬುಡಕಟ್ಟಿನಲ್ಲಿ ತಮ್ಮ ಹಟ್ಟಿಯ ಕಟ್ಟಿಮನೆ ಗೌಡರಿಗೆ ಮದುವೆ ಇಂತಹ ದಿನ ನಿಶ್ಚಯಿಸಲಾಗಿದೆ ಎಂದು ತಿಳಿಸಿ ಕಟ್ಟೆ ಮನೆ ಗೌಡನಿಗೆ ಹಾಗೂ ದೈವಕ್ಕೆ ಸಲ್ಲಬೇಕಾದ ಬಾಬತ್ತುನ್ನು ಸಲ್ಲಿಸಿ ದೈವದವರಿಂದ ಪರವಾನಿಗೆ ಪಡೆಯುತ್ತಾರೆ.

**ಹಂದರೋ (ಹಂದರ ಶಾಸ್ತ್ರ)**

ಹೆಣ್ಣಿನ ಮನೆಯವರು ತಮ್ಮ ಗುಡಾರದ ಮುಂದೆ ಹಾಗೂ ಗಂಡಿನ ಮನೆಯವರು ತಮ್ಮ ಗುಡಾರಗಳ ಮುಂಭಾಗದಲ್ಲಿ ಹಂದರ ಹಾಕುತ್ತಾರೆ. ಹಂದರ ಹಾಕುವ ಪೂರ್ವದಲ್ಲಿ ವಧುವರರ ಸೋದರ ಮಾವಂದಿರು ಕಾಡಿಗೆ ಹೋಗಿ ಇಂಗಳದ ಮರದ ಗೂಟವನ್ನು ತರುವರು. ಸೋದರ ಮಾವನವರು ತಂದ ಗೂಟಗಳನ್ನು ಹೆಣ್ಣಿನ ಮನೆಯವರು ಹೆಣ್ಣಿನ ಮನೆಯ ಮುಂದೆಯೂ, ಗಂಡಿನ ಮನೆಯವರು

ಗಂಡಿನ ಮನೆಯ ಮುಂದೆಯೂ ಹಂದರ ಹಾಕುವರು. ಈ ಪದ್ಧತಿಯನ್ನು ಎಲ್ಲಾ ಕಡೆಗೂ ಮಾಡುವುದಿಲ್ಲ. ಕೆಲವು ಕಡೆಯಲ್ಲಿ ಮಾತ್ರ ಚಾಲ್ತಿಯಲ್ಲಿದೆ. ಹಂದರ ಹಾಕಿದ ದಿನದ ರಾತ್ರಿಯಲ್ಲಿ ಹಂದರದ ಕೆಳಗೆ ಆಯಾ ಮನೆಯವರು ಮಧ್ಯಭಾಗದಲ್ಲಿ ಹೊಸ ವಸ್ತ್ರವನ್ನು ಹಾಸಿ ಐದು ಜೊತೆ ಎಲೆ ಅಡಿಕೆ ಹಾಗೂ ಮನೆ ದೈವದ ಮೂರ್ತಿಗಳನ್ನಿರಿಸಿ ಪೂಜಿಸುವರು. ತುಪ್ಪದ ಅಥವಾ ಎಣ್ಣೆಯ ದೀಪವನ್ನು ಹಚ್ಚಿ ದೈವಗಳ ಮುಂದಿರಿಸುವರು. ಹೊಸ ಮಣ್ಣಿನ ಗಡಿಗೆಯಲ್ಲಿ ಮಾಡಿದ ಗೋಧಿ ಹುಗ್ಗಿ, ಅನ್ನ, ತುಪ್ಪ, ಬೆಲ್ಲವನ್ನು ನೈವೇದ್ಯ ಮಾಡುವರು. ಹೆಣ್ಣು ಹಾಗೂ ಗಂಡಿನ ಮನೆಯವರು ಇದನ್ನು ಪ್ರತ್ಯೇಕವಾಗಿ ತಮ್ಮ ಹಂದರದ ಕೆಳಗೆ ಮಾಡುತ್ತಾರೆ. ಅಲ್ಲಿ ಸೇರಿದ ದೈವದವರೆಲ್ಲ ಗಂಡು, ಹೆಣ್ಣುಗಳಿಗೆ ಆಶೀರ್ವಧಿಸುವರು.

ನೈವೇಧ್ಯ ಶಾಸ್ತ್ರ ಮುಗಿದ ತರುವಾಯ ಗಂಡಿನ ಮನೆಯವರು ಹೆಣ್ಣಿನ ಮನೆಗೆ ದಿಬ್ಬಣ ಹೊರಡುತ್ತಾರೆ. ಹೆಣ್ಣಿನ ಮನೆಯವರು ಗಂಡಿನ ಮನೆಯವರನ್ನು ಎದುರುಗೊಂಡು ತಮ್ಮ ಮನೆಯ ಮದುವೆ ಹಂದರಕ್ಕೆ ಕರೆದುಕೊಂಡು ಹೋಗುವರು. ಹಂದರದ ಕೆಳಗೆ ಹುಡುಗಿಯನ್ನು ಕೂರಿಸಿ ಗಂಡಿನ ಕಡೆಯವರು ತಂದ ಬಳೆ ತೊಡಿಸುವ ಶಾಸ್ತ್ರ ಮಾಡುತ್ತಾರೆ.

**ಕರವಲ್ಲಿಯೋ (ಪುರೋಹಿತ) ನೇಮಿಸುವುದು**

ಗಂಡು ಹೆಣ್ಣುಗಳ ನಡುವೆ ಮದುವೆ ಮಾಡಲು ಪುರೋಹಿತರನ್ನು ಕುಲದ ದೈವದವರೇ ನೇಮಿಸುವರು. ಗಂಡಿನಲ್ಲಿ ಒಬ್ಬನನ್ನೂ ಹಾಗೂ ಹೆಣ್ಣಿನಲ್ಲಿ ಒಬ್ಬಳನ್ನು ಕರವಲ್ಲಿಯೋ ಎಂದು ನೇಮಿಸುವರರು. ಈ ಗಂಡು ಹೆಣ್ಣು ಕರವಲ್ಲಿಯೋರು ಮದುವೆ ಮುಗಿಯುವವರೆಗೂ ಮುಂದೆ ನಿಂತು ಮದುವೆ ಶಾಸ್ತ್ರವನ್ನು ಪೂರೈಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಇವರನ್ನು ಗುರುಪಾದಿಯ ಎಂದೂ ಸಹ ಕರೆಯುವರು. ಈ ಕರವಲ್ಲಿಯೋರು ಪಾರ್ಧಿ ಬುಡಕಟ್ಟನವರಾಗಿದ್ದು ಹೆಣ್ಣು ಹಾಗೂ ಗಂಡಿನ ಬೆಡಗಿಗೆ ಹೊರತಾದ ಬೆಡಗಿನವನಾಗಿರುತ್ತಾರೆ. ಗಂಡು ಅಥವಾ ಹೆಣ್ಣಿನ ಬೆಡಗಿನವರು ಕರವಲ್ಲಿಯೋರಾಗಲು ಬರುವುದಿಲ್ಲ.

**ಹೆಣ್ಣು-ಗಂಡಿನ ನೀರು**

ಬೆಳಗಿನ ಜಾವ ನಸುಕಿನಲ್ಲಿ ಹೆಣ್ಣಿನ ಮನೆಯ ಮುಂದೆ ಒನಕೆಯ ಮೇಲೆ ಹೆಣ್ಣನ್ನು ಕೂರಿಸಿ ಹಿರಿಯ ಬಂಧುಬಳಗವೆಲ್ಲ ಸೇರಿ ನೀರು ಹಾಕುತ್ತಾರೆ. ಗಂಡಿನ ಕಡೆಯವರು ದಿಬ್ಬಣದ ಮನೆಯ ಮುಂಭಾಗದಲ್ಲಿ ಒನಕೆ ಅಥವಾ ಮಣೆಯನ್ನು ಹಾಕಿ ನೀರು ಹಾಕಲಾಗುತ್ತದೆ. ನೀರು ಹಾಕಲು ಸಾಮಾನ್ಯವಾಗಿ ಹೊಸ ಮಣ್ಣಿನ ಮಡಕೆಯನ್ನು ಉಪಯೋಗಿಸುವರು.

**ಹರ್ದಳ್ಣು ಪಾಣಿ (ಹರಿಸಿಣ ನೀರು)**

ಗಂಡು ಹೆಣ್ಣಿಗೆ ಪ್ರತ್ಯೇಕವಾಗಿ ಸುರುಗಿ ನೀರು ಹಾಕಿದ ತರುವಾಯ ಗಂಡು ಬಿಟ್ಟ ಬಟ್ಟೆಯನ್ನು ಹೆಣ್ಣಿನ ಮನೆಗೆ ಒಯ್ಯುತ್ತಾರೆ. ಅಲ್ಲಿ ಒಯ್ದ ಬಟ್ಟೆಗಳನ್ನು ಹೆಣ್ಣಿನ ಮೈಮೇಲೆ ಹಾಕಿ ಅವಳನ್ನು ಗಂಡಿನ

ಮನೆಗೆ ಕರೆದುಕೊಂಡು ಬರುತ್ತಾರೆ. ಹೆಣ್ಣನ್ನು ಕರೆತಂದ ನಂತರ ವಧುವರರಿಬ್ಬರನ್ನು ಜೊತೆಗೆ ಒನಕೆಯ ಮೇಲೆ ಕೂರಿಸಿ ಮತ್ತೆ ಸುರಗಿ ನೀರನ್ನು ಹಾಕುತ್ತಾರೆ. ಸುರಗಿ ನೀರು ಹಾಕಿದ ನಂತರ ವಧುವನ್ನು ಅವಳ ಮನೆಗೆ ಕರೆದುಕೊಂಡು ಹೋಗುತ್ತಾರೆ.

**ಬಾಸಿಂಗ್ (ಬಾಸಿಂಗದ ಶಾಸ್ತ್ರ)**

ತಾಳಿ ಶಾಸ್ತ್ರವು ರಾತ್ರಿ ನಡೆಸಲಾಗುವುದು. ತಾಳಿ ಶಾಸ್ತ್ರಕ್ಕಿಂತ ಪೂರ್ವದಲ್ಲಿ ಕಟ್ಟಿಮನಿ ಗೌಡನ ಆಜ್ಞೆಯಂತೆ ಕರವಲ್ಲಿಯೋನು ಕಾಡಿನಲ್ಲಿರುವ ಪಿಂಪಳಾನೋ ಝಾಡ್ಡುವು (ಆಲದ ಮರ)ಗೆ ಹೋಗಿ ಪೂಜೆ ಮಾಡಿ ಅದರ ಎರಡು ಕೊಂಬೆಗಳನ್ನು ಕತ್ತರಿಸಿಕೊಂಡು ತರುತ್ತಾನೆ. ಅವುಗಳಲ್ಲಿ ಒಂದು ಕೊಂಬೆಯನ್ನು ಹೆಣ್ಣಿನ ಮನೆಗೂ ಮತ್ತೊಂದು ಕೊಂಬೆಯನ್ನು ಗಂಡಿನ ಮನೆಗೂ ಕೊಡುತ್ತಾನೆ. ಗಂಡಿನ ಕಡೆಯವರು ಗಂಡಿಗೂ ಹೆಣ್ಣಿನ ಕಡೆಯವರು ಹೆಣ್ಣಿಗೂ ಆಲದ ಕೊಂಬೆಯೊಳಗಿನ ಏಳೇಳು ಎಲೆಗಳನ್ನು ಕತ್ತರಿಯಾಗಿರಿಸಿ ಏಳು ಎಳೆ ಬಿಳಿಯ ದಾರದಲ್ಲಿ ಪೋಣಿಸಿ ಬಾಸಿಂಗ ತಯಾರಿಸುತ್ತಾರೆ, ಪೋಣಿಸಿದ ದಾರದ ತುದಿಗೆ ಹತ್ತಿಯ ಗೊಂಡೆಯನ್ನು ಜೋಡಿಸುತ್ತಾರೆ. ಈ ಗೊಂಡೆಗಳು ಮುಖಕ್ಕೆ ಜೋತು ಬೀಳುವಂತಿರಬೇಕು ಎಂಬುದು ಇವರ ನಿಯಮ. ಬಾಸಿಂಗ ತಯಾರಿಸಿದ ತರುವಾಯ ಹರಿಸಿಣ, ಕುಂಕುಮ, ಎಲೆ ಅಡಿಕೆಗಳೊಂದಿಗೆ ಅದನ್ನು ಮಣ್ಣಿನ ಪರಾಯಣದೊಳಗೆ ಇರಿಸುವರು. ಕೊಬ್ಬರಿ ಗಿಟುಗವನ್ನು ಮಧ್ಯದಲ್ಲಿ ಕೊಯ್ದು ಮರಳಿ ಗಿಟುಕದ ಎರಡು ಬಟ್ಟಲನ್ನು ಜೋಡಿಸಿ ಗಿಟುಕ ಕಾಣದಂತೆ ಬಿಳಿದಾರ ಸುತ್ತುತ್ತಾರೆ. ಸುತ್ತಿದ ದಾರಕ್ಕೆ ಹರಿಸಿಣ ಹಚ್ಚುತ್ತಾರೆ. ಈ ಗಿಟುಕವನ್ನೂ ಬಾಸಿಂಗವನ್ನಿರಿಸಿದ ಮಣ್ಣಿನ ಪರಾಯಣದೊಳಗೇ ಇರಿಸುವರು.

**ತಾಳಿ ಶಾಸ್ತ್ರ**

ಗಂಡಿನ ದಿಬ್ಬಣದ ಮನೆಯ ಮುಂದೆ ಮಣ್ಣಿನ ಪ್ರಣತಿಯಲ್ಲಿ ದೀಪ ಹಚ್ಚಿ ಗಂಡಿಗೆ ಬಾಸಿಂಗ ಕಟ್ಟುವರು. ಹಾಗೆಯೇ ದಾರ ಸುತ್ತಿದ ಗಿಟುಕದ ಕಾಯನ್ನು ಗಂಡಿನ ಕೈಗೆ ಕೊಡುವರು. ತರುವಾಯ ತಾಳಿ ಶಾಸ್ತ್ರ ನಡೆಯುವ ಹೆಣ್ಣಿನ ಮನೆಯ ಮುಂದಿನ ಹಂದರಕ್ಕೆ ಗಂಡನ್ನು ದಿಬ್ಬಣದೊಂದಿಗೆ ಕರೆತರುವರು. ಗಂಡಿನ ಕಡೆಯ ದಿಬ್ಬಣವು ದೀಪದೊಂದಿಗೆ ಹೆಣ್ಣಿನ ಮನೆಗೆ ಹೋದ ತರುವಾಯ ಮದುವೆಯಾಗುವ ಹೆಣ್ಣಿಗೆ ಗಂಡಿನ ಮನೆಯವರು ಒಯ್ದ ದೀಪವನ್ನು ತೋರಿಸುತ್ತಾರೆ. ತರುವಾಯ ಗೌಡನ ಅಪ್ಪಣೆಯ ಮೇರೆಗೆ ಹೆಣ್ಣಿಗೆ ಬಾಸಿಂಗ ಕಟ್ಟುವರು. ತರುವಾಯ ಕರ್ಬ್ವೋಲಿಯೋನು ದೈವದವರ ಅಪ್ಪಣೆ ಪಡೆದು ಗಂಡಿನಿಂದ ಹೆಣ್ಣಿಗೆ ತಾಳಿಯನ್ನು ಕಟ್ಟಿಸುತ್ತಾನೆ. ತಾಳಿ ಕಟ್ಟುವಾಗ ತಾಳಿ ದಾರದ ಗಂಟನ್ನು ಹಾಕುವವರು ಮಾತ್ರ ಗೌಡ ಹಾಗೂ ಕರ್ಬ್ವೋಲಿಯೋರಾಗಿರುತ್ತಾರೆ. ತಾಳಿ ಕಟ್ಟಿದ ನಂತರ ಹೆಣ್ಣಿನ ಮೇಲ್ವಸ್ತ್ರದ ತುದಿಯನ್ನು ಗಂಡಿನ ಮೇಲ್ವಸ್ತ್ರದ ತುದಿಗೆ ಸೇರಿಸಿ ಏಳು ಗಂಟುಗಳನ್ನು ಹಾಕುತ್ತಾರೆ. ಹಂದರದ ಕೆಳಗೆ ಗಂಡು ಹೆಣ್ಣನ್ನು ಕೂರಿಸಿ ಗಂಡಿನ ಬಾಯಿಗೆ ಹೆಣ್ಣು, ಹೆಣ್ಣಿನ ಬಾಯಿಗೆ ಗಂಡು ಪರಸ್ಪರ ಶಾವಿಗೆಯನ್ನು ತಿನ್ನಿಸುವ ಶಾಸ್ತ್ರ ಮಾಡುತ್ತಾರೆ. ಶಾವಿಗೆ ತಿನ್ನಿಸಿದ ತರುವಾಯ ಗಂಡು ಹೆಣ್ಣು ಪರಸ್ಪರ ಒಬ್ಬರ ಮುಖವನ್ನೊಬ್ಬರು ನೀರಿನಿಂದ ತೊಳೆಯುತ್ತಾರೆ. ಇಲ್ಲಿಗೆ ಮೊದಲ ಹಂತದ ತಾಳಿ ಶಾಸ್ತ್ರವು ಮುಗಿಯುವುದು.

### ಗಂಡಿನ ಮನೆಗೆ ಕರೆತರುವ ಶಾಸ್ತ್ರ

ತಾಳಿ ಶಾಸ್ತ್ರದ ತರುವಾಯ ಗಂಡಿನ ಮನೆಯವರು ಒಯ್ದು ದೀಪದೊಂದಿಗೆ ಹೆಣ್ಣನ್ನು ಗಂಡಿನ ಮನೆಗೆ ಕರೆತರುತ್ತಾರೆ. ತರುವಾಯ ಗಂಡು ಹೆಣ್ಣು ಇಬ್ಬರನ್ನೂ ದೇವರ ಮುಂಭಾಗದಲ್ಲಿ ನಿಲ್ಲಿಸಿ ಇಬ್ಬರಿಗೆ ಕಟ್ಟಿದ ಬಾಸಿಂಗಗಳನ್ನು ಬಿಚ್ಚುವರು. ಬಾಸಿಂಗ ಬಿಚ್ಚಿದ ನಂತರ ಗೌಡರ ಬಾಬತ್ತನ್ನು ನೀಡುವರು. ಗೌಡನು ಮೇಲ್ವಸ್ತ್ರಗಳಿಗೆ ಕಟ್ಟಿದ ಏಳು ಗಂಟುಗಳನ್ನು ಬಿಚ್ಚುವನು. ಅಕಸ್ಮಾತ್ ಹಾಕಿದ ಗಂಟಿನಲ್ಲಿ ವ್ಯತ್ಯಾಸವಿದ್ದರೆ ಗೌಡನಿಗೆ ಪ್ರಾಯಶ್ಚಿತ್ತ ರೂಪದಲ್ಲಿ ತಪ್ಪುದಂಡವನ್ನು ಗಂಡು ಹಾಗೂ ಹೆಣ್ಣಿನ ಮನೆಯವರು ಕೊಡಬೇಕಾಗುವುದು. ತರುವಾಯ ಹೆಣ್ಣನ್ನು ಅವಳ ತೌರುಮನೆಗೆ ಕಳಿಸಿಕೊಡಲಾಗುವುದು.

### ಮನೆ ತುಂಬಿಸಿಕೊಳ್ಳುವ ಶಾಸ್ತ್ರ

ರಾತ್ರಿ ಮದುವೆಯಾದರೆ ಮಾರನೆಯ ಮುಂಜಾವಿನಲ್ಲಿ ಹೆಣ್ಣಿನ ಮನೆಯವರು ಹೆಣ್ಣಿಗೆ, ಗಂಡಿನ ಮನೆಯವರು ಗಂಡಿಗೆ ಹರಿಸಿಣ ಅಕ್ಕಿಯನ್ನು ಹಣೆ, ಪಾದಗಳಿಗೆ ಹಚ್ಚಿ ಅಲಂಕರಿಸುವರು. ತರುವಾಯ ಹೆಣ್ಣಿನ ಮನೆಗೆ ಗಂಡನ್ನು ಕರೆತರಲಾಗುವುದು. ಗಂಡು ಹೆಣ್ಣಿನ ಮನೆಗೆ ಬಂದು ವಧುವನ್ನು ಹೆಗಲಮೇಲೆ ಎತ್ತಿಕೊಂಡು ತನ್ನ ಮನೆಗೆ ಕರೆದೊಯ್ಯುವನು. ಇತ್ತೀಚೆಗೆ ಹಗಲು ಹೊತ್ತಿನಲ್ಲಿ ಮದುವೆ ಮಾಡುವವರು ಈ ಕಾರ್ಯವನ್ನು ತಾಳಿಶಾಸ್ತ್ರದ ದಿನ ಸಾಯಂಕಾಲ ಮಾಡುವರು.

### ಖಾಣು (ದಿಬ್ಬಣದ ಊಟ)

ಹೆಣ್ಣನ್ನು ಗಂಡು ಹೆಗಲ ಮೇಲೆ ಹೊತ್ತುಕೊಂಡುಹೋಗಿ ಮನೆತುಂಬಿಸಿಕೊಂಡ ತರುವಾಯ ದಿಬ್ಬಣದ ಊಟದ ಶಾಸ್ತ್ರ ಮಾಡಲಾಗುವುದು. ಗಂಡಿನವರೇ ದಿಬ್ಬಣದ ಊಟವನ್ನು ಹಾಕುವರು. ಅವರವರ ಯೋಗ್ಯತೆಗೆ ತಕ್ಕಂತೆ ದಿಬ್ಬಣದ ಊಟದ ವ್ಯವಸ್ಥೆ ಇರುತ್ತದೆ. ಸಾಮಾನ್ಯವಾಗಿ ಸಿಹಿ ಸಜ್ಜಕ, ಅನ್ನ, ಸಾರು ಮಾಡುವರು. ಎಲ್ಲ ಬಂಧುಗಳು ಗೌಡರು, ಊಟವನ್ನು ಮಾಡಿ ಸಂತೋಷದಿಂದ ತಮ್ಮ ತಮ್ಮ ಊರುಗಳಿಗೆ ಅಥವಾ ಮನೆಗಳಿಗೆ ಸೇರುತ್ತಾರೆ.

### ಪಜ್ಜೇ ಪಡವಾನು (ಕೈ ಮುಗಿಯುವ ಶಾಸ್ತ್ರ)

ತಾಳಿ ಶಾಸ್ತ್ರದ ಮರುದಿನ ಬೆಳಿಗ್ಗೆ ೭ ಗಂಟೆಗೆ ವಧುವರರು ಇಬ್ಬರಿಗೆ ಸ್ನಾನ ಮಾಡಿಸುವರು. ತಾಳಿಯ ದಿನ ಹಾಕಿದ ಬಟ್ಟೆಗಳನ್ನೇ ಅಂದೂ ವಧುವರರು ಹಾಕಿಕೊಳ್ಳಬೇಕೆಂಬ ನಿಯಮವಿದೆ. ಎಣ್ಣೆ, ಹರಿಸಿನ, ಕುಂಕುಮ, ಅಕ್ಕಿಯನ್ನು ಸೇರಿಸಿ ಕಲೆಸಿ ವಧುವರರ ಹಣೆ ಮತ್ತು ಕಾಲುಗಳಿಗೆ ಬಂಧುಗಳು ಹಚ್ಚುವರು. ವಧುವಿನ ತಲೆಯ ಕೂದಲನ್ನು ಬಾಚಿ ಚಿಕ್ಕ ಚಿಕ್ಕ ಜಡೆಗಳನ್ನು ಹಾಕುವರು. ಕರ್ವಲ್ಲಿಯೋರು ಮುಂದೆ ನಿಂತು ಎಲ್ಲಾ ದೈವಗಳಿಗೆ, ದೈವದ ಎಲ್ಲಾ ಹಿರಿಯರಿಗೆ, ವಧುವರರ ತಂದೆ ತಾಯಿಗಳಿಗೆ ಕಾಲು ಮುಗಿಸುವರು. ನಂತರ ಕರ್ವಲ್ಲೋಯರಿಗೆ ಅಕ್ಕಿ, ಬೆಲ್ಲ, ಒಣಮೆಣಸಿನ ಕಾಯಿ, ಬೇಳೆ, ಎಲೆ, ಅಡಿಕೆ ಹಾಗೂ ಇತರ ತಿನಿಸುಗಳನ್ನು ಹೊಸ ಮೊರದಲ್ಲಿರಿಸಿ ಕೊಡುವರು. ಅಂದು

ಕುರಿ ಅಥವಾ ಕೋಳಿಯನ್ನು ಕೊಯ್ದು ದೈವಕ್ಕೆ ಊಟ ಹಾಕುವರು. ಅಂದು ರಾತ್ರಿಯೇ ನಿಷೇಕವನ್ನೂ ಮಾಡಲಾಗುವುದು.

**ಹಂದರ್ಥೋ ಖಾಡವಾಣು (ಹಂದರ ತೆಗೆಯುವ ಶಾಸ್ತ್ರ)**

ಮದುವೆಯಾದ ಐದು ಅಥವಾ ಒಂಭತ್ತನೇ ದಿನಕ್ಕೆ ಚಪ್ಪರವನ್ನು ತೆಗೆಯುವ ಶಾಸ್ತ್ರ ಮಾಡಲಾಗುವುದು. ಹಂದರಕ್ಕೆ ಹಾಕಿದ ಹಂದರತೊಪ್ಪಲನ್ನು ಹಾಗೂ ಬಾಸಿಂಗ, ಕಂಕಣಗಳನ್ನು ಹರಿಯುವ ನೀರಿಗೆ ಬಿಟ್ಟುಬರುವರು. ಇಲ್ಲಿಗೆ ಮದುವೆ ಕಾರ್ಯಗಳು ಮುಗಿದ ಹಾಗೆ.

**ಮುರೋ (ವಿಧವಾ ವಿವಾಹ)**

ಹೆಣ್ಣಿನ ಗಂಡ ತೀರಿದ ತರುವಾಯ ಗಂಡನ ತಮ್ಮಂದಿರಲ್ಲಿಯೇ ಒಬ್ಬನು ತಮ್ಮ ಸಹೋದರನ ಹೆಂಡತಿಯನ್ನು ಮದುವೆಯಾಗುವ ಪದ್ಧತಿ ಇದೆ. ಅಕಸ್ಮಾತ್ ಗಂಡನ ತಮ್ಮಂದಿರು ಯಾರೂ ಇರದಿರುವಾಗ ಹೆಣ್ಣು ಇಷ್ಟಪಟ್ಟರೆ ತಮ್ಮ ಜಾತಿಯ ಬೇರೆ ವ್ಯಕ್ತಿಯನ್ನು ದೈವದ ಪರವಾನಿಗೆ ಪಡೆದು ಮಾಡಿಕೊಳ್ಳಬಹುದಾಗಿದೆ. ಈ ಮದುವೆಯನ್ನು ಗಂಡನ ಮನೆಯವರೇ ಮುಂದೆನಿಂತು ಮಾಡಬೇಕಾಗಿರುತ್ತದೆ.

**ವಿಧುರ ವಿವಾಹ**

ಹೆಂಡತಿ ತೀರಿಕೊಂಡರೆ ವಿಧುರನು ದೈವದವರ ಪರವಾನಿಗೆ ಪಡೆದು ತನ್ನ ಹೆಂಡತಿಯ ವಿವಾಹವಾಗದ ತಂಗಿಯನ್ನು ಮದುವೆಯಾಗುವುದುಂಟು. ಇಲ್ಲವೆ ತಮ್ಮ ಜಾತಿಯ ಇತರ ಹೆಣ್ಣನ್ನು ಮದುವೆಯಾಗಬಹುದು. ಈ ಹೆಣ್ಣು ವಿಧವೆಯಾಗಿರಬಹುದು ಅಥವಾ ಕನ್ಯೆಯಾಗಿರಬಹುದಾಗಿದೆ. ಆದರೆ ಈ ಮದುವೆಗೆ ಕಡ್ಡಾಯವಾಗಿ ದೈವದ ಪರವಾನಿಗೆ ಇರಲೇಬೇಕಾಗಿರುವುದು.

**ಬಹುಪತ್ನಿತ್ವ**

ಗಂಡು ಮೊದಲು ಮದುವೆಯಾಗಿ ಮಕ್ಕಳಾಗದ ಸಂದರ್ಭದಲ್ಲಿ ಹೆಂಡತಿ ಜೀವಂತವಿದ್ದಾಗಲೇ ಹೆಂಡತಿ ಮತ್ತು ದೈವದವರ ಪರವಾನಿಗೆ ಪಡೆದು ಇನ್ನೊಂದು ಹೆಣ್ಣನ್ನು ಮದುವೆಯಾಗುವ ಪದ್ಧತಿಯೂ ಇವರಲ್ಲಿದೆ.

**ಸೋಡ್‌ಚೀಟ (ವಿವಾಹ ವಿಚ್ಛೇದನ):** ವಿವಾಹ ವಿಚ್ಛೇಧನವು ಪಾರ್ಧಿ ಬುಡಕಟ್ಟಿನಲ್ಲಿಯೂ ಚಾಲ್ತಿಯಲ್ಲಿದೆ. ಸಾಮಾನ್ಯವಾಗಿ ಗಂಡು–ಹೆಣ್ಣಿನ ಮಧ್ಯ ಹೊಂದಾಣಿಕೆಯಾಗದಿದ್ದಲ್ಲಿ, ಬೇರೆ ಗಂಡು– ಹೆಣ್ಣಿನೊಂದಿಗೆ ದೈಹಿಕ ಸಂಪರ್ಕವಿದ್ದಲ್ಲಿ ವಿವಾಹ ವಿಚ್ಛೇಧನ ಮಾಡಿಕೊಳ್ಳುವುದುಂಟು. ವಿವಾಹ ವಿಚ್ಛೇಧನಕ್ಕೆ ಪೂರ್ವದಲ್ಲಿ ಗಂಡಾಗಲಿ, ಹೆಣ್ಣಾಗಲಿ ದೈವದವರ ಮುಂದೆ ತನಗೆ ವಿವಾಹ ವಿಚ್ಛೇಧನ ಬೇಕೆಂದು ತಿಳಿಸುವರು. ತರುವಾಯ ಕುಲಪಂಚಾಯತಿ ಕರೆದು ಪಂಚಾಯತಿಯಲ್ಲಿ ತಮ್ಮ ಮನೋ ನಿವೇದನೆಯನ್ನು ಸಲ್ಲಿಸಬೇಕಾಗಿರುತ್ತದೆ. ಪಂಚಾಯತಿಯ ತೀರ್ಮಾನದ ಪ್ರಕಾರ ಗಂಡು ಹೆಣ್ಣು ವಿಚ್ಛೇಧನ ವಿಚಾರವಾಗಿ ಮುಂದುವರೆಯಬೇಕಾಗುವುದು. ಅಕಸ್ಮಾತ್ ಗಂಡಿನಲ್ಲಿ ತಪ್ಪು ಕಂಡುಬಂದರೆ

ಗಂಡು, ಹೆಣ್ಣಿನಲ್ಲಿ ತಪ್ಪು ಕಂಡುಬಂದಲ್ಲಿ ಹೆಣ್ಣು ಪಂಚಾಯತಿಯ ತೀರ್ಮಾನದಂತೆ ತಪ್ಪುದಂಡ ಕೊಡಬೇಕಾಗುವುದು. ಗಂಡಿಗೆ ಹೆಣ್ಣು ಬೇಡವೆಂದಾದಲ್ಲಿ ಗಂಡು ಹೆಣ್ಣಿಗೆ ಯಾವುದೇ ರೀತಿಯ ಪರಿಹಾರಗಳನ್ನು ನೀಡುವ ಅವಶ್ಯಕತೆ ಇರುವುದಿಲ್ಲ. ಅಕಸ್ಮಾತ್ ಹೆಣ್ಣು ಗಂಡನ್ನು ಬೇಡವೆಂದು ಹೇಳಿದರೆ ಗಂಡಿನ ಮನೆಯವರಿಗೆ ಹೆಣ್ಣಿನ ಮನೆಯವರು ಮದುವೆಯ ಖರ್ಚಿನೊಂದಿಗೆ ತಪ್ಪುದಂಡದ ಮೊತ್ತವನ್ನೂ ಸಲ್ಲಿಸಬೇಕಾಗುತ್ತದೆ. ವಿಚ್ಛೇದನವು ಪಂಚಾಯತಿ ಕಲೆತ ತಕ್ಷಣಕ್ಕೆ ನಡೆಯುವುದಿಲ್ಲ. ಪಂಚಾಯತಿ ಸೇರಿದ ದೈವವು ಆದಷ್ಟು ಗಂಡು ಹೆಣ್ಣಿಗೆ ಹೊಂದಾಣಿಕೆ ಮಾಡಿಕೊಂಡು ಸಂಸಾರ ಮುಂದುವರೆಸಲು ಅವಕಾಶ ನೀಡುವರು. ಅದು ಸಾಧ್ಯವಿಲ್ಲವೆಂದಾಗ ಕಾಲಾವಕಾಶವನ್ನು ನೀಡಿ ಹೊಂದಾಣಿಕೆಯಾಗಬಹುದಾದ ಸಾಧ್ಯತೆಯನ್ನು ಕುಲಪಂಚಾಯತಿಯು ನಿರೀಕ್ಷಿಸುತ್ತದೆ. ಅದು ಸಾಧ್ಯವಿಲ್ಲವೆಂದಾಗ ಮಾತ್ರ ಕುಲಪಂಚಾಯತಿಯು ವಿಚ್ಛೇಧನವನ್ನು ಘೋಷಿಸುವುದು. ವಿಚ್ಛೇಧನಗೊಂಡ ಮಹಿಳೆಗೆ ಮಕ್ಕಳಿದ್ದರೆ ಮಕ್ಕಳು ಗಂಡಿಗೆ ಸೇರುತ್ತವೆಂದು ತೀರ್ಮಾನಿಸಲಾಗುವುದು.

**ಜನನ**

ಮಹಿಳೆಯು ಗರ್ಭಿಣಿಯಾಗಿ ಒಂಭತ್ತು ತಿಂಗಳು ತುಂಬುವವರೆಗೂ ಗಂಡನ ಮನೆಯಲ್ಲಿಯೇ ಇರುತ್ತಾಳೆ. ಗರ್ಭಿಣಿ ಮಹಿಳೆಗೆ ಹೆರಿಗೆಯ ನೋವು ಪ್ರಾರಂಭವಾದ ತಕ್ಷಣಕ್ಕೆ ಮನೆಯಿಂದ ಹೊರಗೆ ಕರೆದುಕೊಂಡು ಬರಲಾಗುವುದು. ಮನೆಗೆ ಹತ್ತಿರದಲ್ಲಿ ಯಾವುದಾದರೂ ಮರ ಇಲ್ಲವೆ ಮರೆಯಾದ ಪ್ರದೇಶಕ್ಕೆ ಕರೆದುಕೊಂಡು ಹೋಗಲಾಗುತ್ತದೆ. ಗರ್ಭಿಣಿ ಹೆಣ್ಣಿನೊಂದಿಗೆ ತಮ್ಮ ಜಾತಿಗೆ ಸೇರಿದ ಹಿರಿಯ ಮಹಿಳೆ ಇರುತ್ತಾಳೆ. ಶೂಲಗಿತ್ತಿಯ ಕೆಲಸವನ್ನು ಆ ಹಿರಿಯ ಮಹಿಳೆಯೇ ಮಾಡುವಳು. ಹೆರಿಗೆಯಾದ ತರುವಾಯ ಮಗು ಹಾಗೂ ಮಾಸುವನ್ನು ಬೇರ್ಪಡಿಸುವ ಕಾರ್ಯವನ್ನು ಹಿರಿಯ ಮಹಿಳೆ ಮಾಡುತ್ತಾಳೆ. ಹೊಕ್ಕಳ ಬಳ್ಳಿಯನ್ನು ಕೊರಚುಗಲ್ಲು ಅಥವಾ ತನ್ನ ಕೈಯಲ್ಲಿದ್ದ ಬಳೆಚೂರಿನಿಂದ ಕತ್ತರಿಸಿ ಬಟ್ಟೆಯ ತುಂಡಿನಿಂದ ಹೊಕ್ಕುಳ ಬಳ್ಳಿಯನ್ನು ಕಟ್ಟುತ್ತಾರೆ. ಮಾಸವನ್ನು ಯಾವುದಾದರೂ ವಸ್ತುವಿನಲ್ಲಿ ಒಯ್ದು ಪ್ರಾಣಿಗಳಿಗೆ ಸಿಗದಂತೆ ಹೂತುಹಾಕುತ್ತಾರೆ. ಮನೆಯ ಹತ್ತಿರದಲ್ಲಿ ಚಿಕ್ಕ ಗುಡಾರ ನಿರ್ಮಿಸಿ ಆ ಗುಡಾರದೊಳಗೆ ಮಗು, ಬಾಣಂತಿಯನ್ನು ಪ್ರತ್ಯೇಕವಾಗಿ ಇರಿಸುತ್ತಾರೆ. ಬಾಣಂತಿಯ ಸಹಾಯಕ್ಕಾಗಿ ಹೆರಿಗೆ ಮಾಡಿಸಿದ ಹಿರಿಯ ಮಹಿಳೆ ಇರುತ್ತಾಳೆ. ತಾಯಿ, ಮಗುವಿಗೆ ಸ್ನಾನ ಮಾಡಿಸುವುದರಿಂದ ಹಿಡಿದು ಅವಳ ಆಹಾರ ಮುಂತಾದ ಅವಶ್ಯಕತೆಗಳನ್ನು ಆ ಹಿರಿಯ ಮಹಿಳೆಯೇ ನೋಡಿಕೊಳ್ಳುತ್ತಾಳೆ. ಬಾಣಂತಿಗೆ ಮೂರು ದಿನದವರೆಗೂ ಗೋಧಿ ನುಚ್ಚಿನ ಗಂಜಿ ಊಟಕ್ಕೆ ಕೊಡುತ್ತಾರೆ. ನುಚ್ಚಿಗೆ ಬೆಲ್ಲ ಇಲ್ಲವೆ ಉಪ್ಪನ್ನು ಬೆರೆಸಿ ಕೊಡುವರು. ಸಾಮಾನ್ಯವಾಗಿ ಮಣ್ಣಿನ ಮಗಿಯಲ್ಲಿ ಗಂಜಿ ಕೊಡುತ್ತಾರೆ. ಮೂರು ದಿನದ ತರುವಾಯ ಸುಲಭವಾಗಿ ಜೀರ್ಣವಾಗುವ ಮೆತ್ತನೆಯ ಅನ್ನ, ಸಾರನ್ನು ಹದಿನೈದು ದಿನದವರೆಗೆ ಆಹಾರವಾಗಿ ಕೊಡುತ್ತಾರೆ. ನಂತರ ಹದಿನೈದು, ಇಪ್ಪತ್ತು ದಿನಗಳವರೆಗೆ ಬಿಳಿಜೋಳದ ರೊಟ್ಟಿ, ಗೋಧಿ ಚಪಾತಿ, ಮಾಂಸ ಊಟ ಮಾಡಲು ಕೊಡುವರು. ತರುವಾಯ ಮೂರು ತಿಂಗಳವರೆಗೆ ಸುಲಭವಾಗಿ ಜೀರ್ಣವಾಗುವ ಪದಾರ್ಥಗಳನ್ನು ಬಾಣಂತಿಗೆ ನೀಡುವರು.

ಹೆರಿಗೆಯಾದ ಐದನೇ ದಿನ ಬೆಳಿಗ್ಗೆ ಬಾಣಂತಿ ಬಳಸಿದ ಬಟ್ಟೆಗಳನ್ನು ಗಂಟು ಕಟ್ಟಿ ದೂರ ಬೀಸಾಡುತ್ತಾರೆ. ತರುವಾಯ ಒಂದು ತಿಂಗಳ ನಂತರ ಬಾಣಂತಿ, ಮಗು ಬಳಸಿದ ಬಟ್ಟೆಗಳನ್ನು ಗಂಟುಕಟ್ಟಿ ದೂರ ಎಸೆಯಲಾಗುವುದು. ಹಾಗೆಯೇ ಮೂರು ತಿಂಗಳವರೆಗೆ ಬಾಣಂತಿ ಮಗು ಬಳಸಿದ ಬಟ್ಟೆಗಳೊಂದಿಗೆ ಅವಳು ಬಳಸಿದ ಪ್ರತಿಯೊಂದು ವಸ್ತುವನ್ನೂ ದೂರ ಹಾಕಿಬರುವರು. ಬಾಣಂತಿ ಮಗು ಮೂರುತಿಂಗಳವರೆಗೂ ಪ್ರತ್ಯೇಕವಾದ ಗುಡಾರದೊಳಗೆ ಇರಬೇಕು. ಮೂರು ತಿಂಗಳವರೆಗೂ ಬಾಣಂತಿಯನ್ನು ಮೈಲಿಗೆ ಎಂದೇ ಭಾವಿಸಲಾಗುತ್ತದೆ. ಮೂರು ತಿಂಗಳ ತರುವಾಯ ಬಾಣಂತಿ ಹಾಗೂ ಮಗುವಿಗೆ ಸ್ನಾನ ಮಾಡಿಸಿ ಮನೆಯೊಳಗೆ ಕರೆದುಕೊಳ್ಳುವರು. ಮೂರು ತಿಂಗಳ ತರುವಾಯ ಬಾಣಂತಿಗಾಗಿ ಹಾಕಿದ ಗುಡಾರವನ್ನು ಕಿತ್ತಿ ಎಸೆಯಲಾಗುವುದು. ಬಾಣಂತಿ ಹಾಗೂ ಮಗುವಿಗೆ ಕೆಟ್ಟ ದೃಷ್ಟಿ ಬೀಳಬಾರದೆಂದು ಬಾಣಂತಿಯ ಗುಡಾರದ ಮೇಲೆ ಬಲೆಯೊಂದನ್ನು ಹರಡಲಾಗಿರುತ್ತದೆ. ಗುಡಾರ ತೆಗೆಯುವಾಗ ಬಲೆಯನ್ನು ಮಾತ್ರ ತೆಗೆದುಕೊಂಡು ಗುಡಾರವನ್ನು ಕಿತ್ತಿ ನಾಶಗೊಳಿಸಲಾಗುವುದು. ಇತ್ತೀಚಿನ ದಿನಗಳಲ್ಲಿ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿದರೂ ಈ ನಿಯಮಗಳ ವಿಚಾರವನ್ನು ಹಾಗೆಯೇ ಪಾಲಿಸಿಕೊಂಡು ಬರಲಾಗುತ್ತಿದೆ.

**ನಾಮಕರಣ**

ಹೆರಿಗೆಯಾದ ಐದನೇ ದಿನಕ್ಕೆ ಬೆಳಿಗ್ಗೆ ಬಾಣಂತಿ ವಾಸಮಾಡುವ ಚಿಕ್ಕ ಗುಡಾರದಲ್ಲಿ ಸೆಗಣಿಯಿಂದ ಸಾರಿಸಿ ತರುವಾಯ ಮನೆಯ ಹಿರಿಯ ವ್ಯಕ್ತಿಗಳಲ್ಲಿ ಒಬ್ಬನು ಮಗುವಿನ ತಲೆ ಕೂದಲನ್ನು ತೆಗೆಯುವನು. ತಲೆ ಕೂದಲು ತೆಗೆದ ತರುವಾಯ ಮಗುವಿಗೆ ಸ್ನಾನ ಮಾಡಿಸಿ ಪೂರ್ವಕ್ಕೆ ಮುಖವನ್ನು ಮಾಡಿ ತಾಯಿಯ ತೊಡೆಯ ಮೇಲೆ ಮಗುವನ್ನು ಮಲಗಿಸುತ್ತಾರೆ. ಪಕ್ಕದಲ್ಲಿ ಸೆಗಣಿಯಿಂದ ಸಾರಿಸಿದ ನೆಲದ ಮೇಲೆ ತುಪ್ಪದ ದೀಪವನ್ನು ಹಚ್ಚಿ ಗೋಧಿ ನುಚ್ಚಿನ ಹುಗ್ಗಿ ಮತ್ತು ನವಣೆ ಅಕ್ಕಿಯನ್ನು ಕುದಿಸಿ ಅನ್ನಮಾಡಿ ಎರಡು ಮಣ್ಣಿನ ಪರಾಣಿಯಲ್ಲಿ ಒಂದಕ್ಕೆ ಹುಗ್ಗಿಯ ಎಡೆ ಇನ್ನೊಂದಕ್ಕೆ ನವಣೆ ಅಕ್ಕಿ ಅನ್ನ ಮತ್ತು ಬೆಲ್ಲ ಸೇರಿಸಿ ತ್ಥಾತ್ (ಎಡೆ) ಇಡುವರು. ಮನೆಯ ಹಿರಿಯನಾದವನು ಮಗುವನ್ನು ಎತ್ತಿಕೊಂಡು ಮಗುವಿಗೆ ಟೋಪಿ, ಅಂಗಿ, ಲಂಗೋಟಿ, ಹಾಲುಬಳೆ, ಉಡದಾರ ಕಟ್ಟಿ ಮನೆ ದೇವರ ಹೆಸರುಗಳನ್ನು ಮಗುವಿನ ಕಿವಿಯಲ್ಲಿ ಕೂಗಿ ಮತ್ತು ಹಿರಿಯರ ಹೆಸರುಗಳನ್ನು ಕೂಗಿ ಆನಂತರ ತಮಗೆ ಇಷ್ಟವಾದ ತಮ್ಮ ಮನೆತನದ ಹಿರಿಯರ ಹೆಸರನ್ನು ಅಥವಾ ಇತರ ಹೆಸರನ್ನು ಕಿವಿಯಲ್ಲಿ ಐದು ಸಾರಿ ಕೂಗುತ್ತಾರೆ. ಇದಾದ ತರುವಾಯ ಮತ್ತೆ ಮಗುವಿನ ಸೋದರ ಮಾವನಿಂದಲೂ ಮಗುವಿಗೆ ಹೆಸರಿಡಿಸುವುದುಂಟು. ಇಷ್ಟಾದರೆ ನಾಮಕರಣ ಶಾಸ್ತ್ರ ಮುಗಿದಂತೆ. ಇತ್ತೀಚೆಗೆ ಮಗುವಿನ ನಾಮಕರಣವನ್ನು ಕೆಲವರು ಐದು ದಿನಕ್ಕೆ, ಕೆಲವರು ಒಂಭತ್ತು ದಿನಕ್ಕೆ, ಕೆಲವು ಕಡೆ ಮೂರು ತಿಂಗಳಿಗೆ ಮಾಡುವ ಪದ್ಧತಿಯನ್ನು ರೂಢಿಸಿಕೊಂಡಿದ್ದಾರೆ. ಹಾಗೆಯೇ ತಲೆಗೂದಲನ್ನು ಯಾರಾದರೂ ಹಜಾಮರಿಂದ ತೆಗೆಸುವರು. ಆದರೆ ಈ ಪದ್ಧತಿ ಈ ಹಿಂದೆ ಇರಲಿಲ್ಲ.

**ಋತುಮತಿ**

ಹೆಣ್ಣು ಹದಿಮೂರನೇ ವಯಸ್ಸಿನ ನಂತರ ದೈಹಿಕವಾಗಿ ಪ್ರೌಢಾವಸ್ಥೆಗೆ ಬರುತ್ತಾಳೆ. ಅದನ್ನೇ ಋತುಮತಿಯಾಗುವುದು, ದೊಡ್ಡವಳಾಗುವುದು ಎಂದು ಕರೆಯಲಾಗುತ್ತದೆ. ಹುಡುಗಿ ಮೈನೆರೆದಾಗ ತಮ್ಮ ಗುಡಾರದ ಹತ್ತಿರವೇ ಪ್ರತ್ಯೇಕವಾದ ಗುಡಾರವನ್ನು ಹಾಕಿ ಆ ಗುಡಾರದೊಳಗೆ ಅವಳನ್ನು ಇರಿಸುತ್ತಾರೆ. ಅವಳು ಮಲಗಲು ಕೌದಿ ಇಲ್ಲವೆ ಗೋಣಿಚೀಲ, ಒಂದು ಲೋಟ, ಮಣ್ಣಿನ ಪರಾತ, ತಂಬಿಗೆ ಮುಂತಾದ ಅವಳಿಗೆ ಅವಶ್ಯವಾದ ವಸ್ತುಗಳನ್ನು ಕೊಟ್ಟು ಪ್ರತ್ಯೇಕವಾಗಿ ಇರಿಸುತ್ತಾರೆ. ಅವಳನ್ನು ನೋಡಿಕೊಳ್ಳಲು ಅವಳ ತಾಯಿ ಅಥವಾ ಹಿರಿಯ ಹೆಂಗಸು ಇರುತ್ತಾರೆ. ಹುಡುಗಿಯ ಮೇಲ್ವಿಚಾರಣೆ ವಹಿಸಿದ ಹೆಂಗಸಿನ ಹೊರತಾಗಿ ಇತರ ಯಾರೂ ಮೈನೆರೆದ ಹುಡುಗಿಯನ್ನು ಇರಿಸಿದ ಗುಡಾರದೊಳಗೆ ಪ್ರವೇಶಿಸುವಂತಿಲ್ಲ. ಮೈನೆರೆದ ಹುಡುಗಿ ಇತರರಿಗೆ ಮುಖ ತೋರಿಸವಂತಿಲ್ಲ. ಆ ಹುಡುಗಿ ತನ್ನ ಬಟ್ಟೆ ತಾನೇ ತೊಳೆದುಕೊಳ್ಳಬೇಕು. ಮನೆಯಲ್ಲಿ ಅವಳಿಗಾಗಿ ತಯಾರಿಸಿದ ಅಡುಗೆಯನ್ನು ತಾಯಿ ಇಲ್ಲವೆ ಆ ಹುಡುಗಿಯ ಮೇಲುಸ್ತುವಾರಿ ನೋಡಿಕೊಳ್ಳುವ ಮಹಿಳೆ ತಂದು ಕೊಡುತ್ತಾಳೆ. ಏಳು ದಿನದವರೆಗೂ ಹುಡುಗಿ ಉಟ್ಟ ಬಟ್ಟೆಯಲ್ಲಿಯೇ ಇರುತ್ತಾಳೆ. ಏಳನೇ ದಿನಕ್ಕೆ ಮೈನೆರೆದ ಹುಡುಗಿ ಮೈತೊಳೆದುಕೊಂಡು ಉಟ್ಟ ಬಟ್ಟೆ ಬಿಟ್ಟು ಬೇರೆ ಬಟ್ಟೆ ಹಾಕಿಕೊಳ್ಳಬೇಕು. ಒಂಭತ್ತನೇ ದಿನಕ್ಕೆ ಹುಡುಗಿಗೆ ಮೈತೊಳೆದು ಗಂಗೆಗೆ ಕರೆದುಕೊಂಡು ಹೋಗುತ್ತಾರೆ. ಅಂದೇ ಹುಡುಗಿಯನ್ನಿರಿಸಿದ ಗುಡಾರವನ್ನು ಮನೆಯ ಹಿರಿಯ ಮಹಿಳೆಯು ಕೆಡಿಸಿ ದೂರಕ್ಕೆ ಬಿಸಾಕಿ ಬರುತ್ತಾಳೆ. ಅಂದು ಹುಡುಗಿಯ ಮನೆಯನ್ನು ಸಗಣಿಯಿಂದ ಸಾರಿಸಿ ಸ್ವಚ್ಛಗೊಳಿಸಿ ಮನೆ ದೇವರ ಪೂಜೆಯನ್ನು ಮಾಡಲು ಹುಡುಗಿಗೆ ತಿಳಿಸುತ್ತಾರೆ. ಈ ಕಾರ್ಯಕ್ರಮವನ್ನು ಋತುಮತಿಯಾದ ಹುಡಗಿಯಿಂದಲೇ ಮಾಡಿಸುತ್ತಾರೆ. ಅಂದು ಸಾಮಾನ್ಯವಾಗಿ ಹತ್ತಿರದ ಬಂಧುಗಳೆಲ್ಲಾ ಒಂದೇ ಕಡೆ ಸೇರುತ್ತಾರೆ. ಗೋಧಿ ಪಾಯಸ, ಮಾಂಸದ ಅಡುಗೆ ಮಾಡಿ ಎಲ್ಲರೂ ಸಂಭ್ರಮದಿಂದ ಊಟ ಮಾಡುತ್ತಾರೆ. ಬಹುಶಃ ಅಂದೇ ಹುಡುಗಿಯ ವಿವಾಹಕ್ಕೆ ಸಂಬಂಧಿಸಿದಂತೆ ಮಾತುಕತೆ ನಡೆಯುವುದುಂಟು.

**ಮರಣ:** ಹುಟ್ಟಿದ ಪ್ರತಿಯೊಂದು ಜೀವಿ ಸಾಯಲೇಬೇಕು. ಅದು ನಿಶ್ಚಿತ. ಪಾರ್ಧಿ ಬುಡಕಟ್ಟಿನವರು ಯಾರಾದರು ಸತ್ತರೆ ಸತ್ತ ವ್ಯಕ್ತಿಯನ್ನು ಗುಡಾರ ಮುಂಭಾಗದಲ್ಲಿ ಶವವನ್ನು ಪೂರ್ವಕ್ಕೆ ಕಾಲುಮಾಡಿ ಮಲಗಿಸುತ್ತಾರೆ. ಸತ್ತ ವ್ಯಕ್ತಿ ಪೂಜಾರಿಯಾಗಿದ್ದರೆ ಅಂತವರಿಗೆ ದೇವರ ಬಟ್ಟೆಯನ್ನು ಶವದ ಮೇಲೆ ಹೊದಿಸುತ್ತಾರೆ. ಹಿಂದೆ ಶವವನ್ನು ಸ್ಮಶಾನಕ್ಕೆ ಹೆಗಲಮೇಲೆ ಹೊತ್ತುಕೊಂಡುಹೋಗುತ್ತಿದ್ದರು. ಆದರೆ ಇತ್ತೀಚೆಗೆ ಇತರ ಸಮುದಾಯಗಳ ಪ್ರಭಾವದಿಂದಾಗಿ ಶವವನ್ನು ಚಟ್ಟದ ಮೇಲಿರಿಸಿ ನಾಲ್ಕುಜನ ಹೊತ್ತುಕೊಂಡು ಹೋಗುತ್ತಾರೆ. ಸುಡುಗಾಡಿಗೆ ಹೆಣವನ್ನು ಒಯ್ಯುವಾಗ ಹಲಗೆ ಇತ್ಯಾದಿ ಬಾರಿಸುತ್ತ ಒಯ್ಯುವುದಿಲ್ಲ. ಸುಡುಗಾಡು ಹತ್ತಿರ ಬಂದಾಗ ಚಟ್ಟವನ್ನು ನೆಲದ ಮೇಲೆ ಇಳಿಸುತ್ತಾರೆ. ಅಲ್ಲಿ ಹೆಣದ ಮುಖವನ್ನು ನೋಡದವರು ಹೆಣದ ಮುಖವನ್ನು ನೋಡಬಹುದು. ಸುಡುಗಾಡಿಗೆ

ಹೋದನಂತರ ಮನೆಯ ಹಿರಿಯ ಮಗನಾದವನು ಮಣ್ಣಿನ ಕೊಡದಲ್ಲಿ ನೀರನ್ನು ತರುತ್ತಾನೆ. ಸುಡುಗಾಡಿನಲ್ಲಿ ಶವವನ್ನು ಕೂಡಿಸಿ ತಲೆಗೆ ಹಾಗೂ ದೇಹಕ್ಕೆ ತುಪ್ಪವನ್ನು ಹಚ್ಚುತ್ತಾರೆ. ತುಪ್ಪ ಹಚ್ಚಿದ ನಂತರ ಮಣ್ಣಿನ ಕೊಡದಲ್ಲಿ ತಂದ ನೀರಿನಿಂದ ಶವದ ದೇಹವನ್ನು ತೊಳೆದು ಪೂಜೆ ಮಾಡುತ್ತಾರೆ. ಇದಾದ ನಂತರ ಕಟ್ಟಿಗೆಗಳನ್ನು ಹೊಂದಿಸಿ ಅದರ ಮೇಲೆ ಶವವನ್ನು ಮಲಗಿಸಿ ಮನೆಯ ಹಿರಿಯ ಮಗ ಹೆಣಕ್ಕೆ ಕೊಳ್ಳಿಯನ್ನು ಇಡುತ್ತಾನೆ.

**ಸತ್ತ ವ್ಯಕ್ತಿಯ ಆತ್ಮದ ಆವಾಹನೆ**

ಶವಕ್ಕೆ ಹಚ್ಚಿದ ಬೆಂಕಿಯು ಪೂರ್ಣ ಆವರಿಸಿದ ತರುವಾಯ ಎಲ್ಲರೂ ನಿಶಬ್ಧವಾಗಿ ಕುಳಿತುಕೊಳ್ಳುತ್ತಾರೆ. ಸತ್ತ ವ್ಯಕ್ತಿಯ ಬೆಡಗಿನ ಪೂಜಾರಿಯು ಶವದ ತಲೆಯ ಭಾಗದಲ್ಲಿ ಪೂರ್ವ ದಿಕ್ಕಿಗೆ ಮುಖಮಾಡಿ ನಿಲ್ಲುತ್ತಾನೆ. ಆ ಪೂಜಾರಿಯು ಸತ್ತವನ ಆತ್ಮವನ್ನು ಬರಮಾಡಿಕೊಳ್ಳುತ್ತಾನೆ. ಸತ್ತವನ ಆತ್ಮವು ಪೂಜಾರಿಗೆ ಆವಾಹನೆಗೊಂಡು ತಾನು ಸತ್ತ ಕಾರಣ, ತನ್ನ ನಂತರ ಕುಟುಂಬವನ್ನು ಮನೆಯವರೆಲ್ಲಾ ಹೇಗೆ ನಡೆಸಬೇಕು ಮುಂತಾದ ವಿಚಾರಗಳನ್ನು ತಿಳಿಸುತ್ತದೆ. ಆ ಆತ್ಮದ ಹೇಳಿಕೆಯನ್ನು ಈಡೇರಿಸುವುದಾಗಿ ಕುಟುಂಬದ ಸದಸ್ಯರು ವಾಗ್ದಾನ ನೀಡಿದ ತರುವಾಯ ಆವಾಹಿತ ಆತ್ಮವು ಪೂಜಾರಿಯನ್ನು ಬಿಟ್ಟು ತೊಲಗುತ್ತದೆ. ಈ ಹೇಳಿಕೆಯ ನಂತರ ಶವಸಂಸ್ಕಾರಕ್ಕೆ ಬಂದ ಜನರು ಹೆಣ ಪೂರ್ಣ ಸುಡುವವರೆಗೆ ಸ್ಮಶಾನದಲ್ಲಿಯೇ ಇರುತ್ತಾರೆ.

**ಹೆಂಡ ಸವರಿಕೊಳ್ಳುವ ಶಾಸ್ತ್ರ**

ಶವಸಂಸ್ಕಾರಕ್ಕೆ ಬಂದವರು ಮನೆಯ ಕಡೆಗೆ ಹೊರಡುವ ದಾರಿಯಲ್ಲಿ ಗಡಿಗೆಯಲ್ಲಿರಿಸಿದ ಹೆಂಡವನ್ನು ತಲೆ ಹಾಗೂ ಮೈಗೆ ಸವರಿಕೊಂಡು ಮುಳ್ಳಿನ ಗಿಡಗಳನ್ನು ಮೂರುಬಾರಿ ಸುತ್ತಿ ಮನೆಯ ಕಡೆ ಹೋಗುತ್ತಾರೆ. ದಾರಿಯಲ್ಲಿ ಸಿಗುವ ಹಳ್ಳ ಕೆರೆಗಳಲ್ಲಿ ಸ್ನಾನ ಮಾಡಿ ಸತ್ತ ವ್ಯಕ್ತಿಯ ಮನೆಗೆ ಹೋಗಿ ದೀಪ ನೋಡುತ್ತಾರೆ. ಸತ್ತ ವ್ಯಕ್ತಿಯ ಮನೆಯವರು ಹೆಂಡ ಇರಿಸಿಕೊಂಡಿರುತ್ತಾರೆ. ದೀಪ ನೋಡಲು ಬಂದವರಿಗೆ ತೀರ್ಥದಂತೆ ಹೆಂಡವನ್ನು ಕೈಗೆ ಹಾಕುತ್ತಾರೆ. ಹೀಗೆ ದೊರೆತ ಹೆಂಡ ಕುಡಿದು ಶವ ಸಂಸ್ಕಾರಕ್ಕೆ ಬಂದ ವ್ಯಕ್ತಿಗಳು ತಮ್ಮ ಮನೆಗಳಿಗೆ ಅಥವಾ ಊರುಗಳಿಗೆ ಹೋಗುತ್ತಾರೆ.

**ಕೂಳು ಹಾಕುವ ಕಾರ್ಯ**

ಶವ ಸಂಸ್ಕಾರವಾದ ಮರುದಿನ ಬೆಳಗಿನ ಜಾವ ಮನೆಯವರು ಮತ್ತು ಇದ್ದ ಸಂಬಂಧಿಕರು ಶವ ಸುಟ್ಟ ಸ್ಥಳಕ್ಕೆ ಹೋಗಿ ಶವದ ಬೂದಿಯನ್ನು ನೀರುಹಾಕಿ ಗುಟ್ಟೆ ಮಾಡುವರು. ತರುವಾಯ ಸತ್ತವನ ಆಪೇಕ್ಷೆಯ ತಿಂಡಿ ತಿನಿಸುಗಳನ್ನು ಸ್ಮಶಾನಕ್ಕೆ ಒಯ್ಯುತ್ತಾರೆ. ತೆಗೆದುಕೊಂಡು ಹೋದ ಎಲ್ಲಾ ಪದಾರ್ಥಗಳನ್ನು ಹೆಣದ ಗುಟ್ಟಿಯ ತಲೆ, ಹೊಟ್ಟೆ, ಕಾಲಿನ ಭಾಗಗಳ ಮೇಲೆ ಮೂರು ಕಡೆ ಇರಿಸುತ್ತಾರೆ. ಹೀಗೆ ಆಹಾರವನ್ನಿರಿಸಿ ಗುಟ್ಟಿಗೆ ಪೂಜೆ ಮಾಡಿ ದೂರದಲ್ಲಿ ನಿಶಬ್ಧವಾಗಿ ಕೂತಿರುತ್ತಾರೆ. ಯಾವುದೇ ಪಕ್ಷಿ, ಪ್ರಾಣಿ ಬಂದು ಆಹಾರವನ್ನು ಮುಟ್ಟುವವರೆಗೂ ಕಾಯುತ್ತಿರುತ್ತಾರೆ. ಯಾವುದೇ

ಪಕ್ಷಿ ಪ್ರಾಣಿ ಮುಟ್ಟಿದರೆ ಸತ್ತವರೇ ಆ ಪಕ್ಷಿ ಪ್ರಾಣಿಯಾಗಿ ಬಂದು ಆಹಾರವನ್ನು ಸ್ವೀಕರಿಸಿದರೆಂದು ನಂಬುತ್ತಾರೆ. ವ್ಯಕ್ತಿ ಸತ್ತ ಮನೆಯವರು ಹತ್ತು ದಿನದವರೆಗೆ ಯಾವುದೇ ಮಾಂಸದ ಅಡುಗೆ ತಿನ್ನುವಂತಿಲ್ಲ. ೧೨ ನೆಯ ದಿವಸಕ್ಕೆ ಸತ್ತವನ ಮನೆಯವರು ದಿವಸದ ಕಾರ್ಯವನ್ನು ಮಾಡುತ್ತಾರೆ. ದಿವಸ ಮಾಡುವವರೆಗೆ ಸತ್ತವರ ಮನೆಯವರು ಯಾವುದೇ ಶುಭಕಾರ್ಯಗಳನ್ನು ಮಾಡುವಂತಿಲ್ಲ. ಬೇರೆಯವರು ಮಾಡಿದ್ದಲ್ಲಿ ಭಾಗವಹಿಸುವಂತಿಲ್ಲ.

**೧೨ನೇ ದಿನದ ಕಾರ್ಯ**

ವ್ಯಕ್ತಿ ಸತ್ತ ಹನ್ನೆರಡನೆ ದಿವಸಕ್ಕೆ ಕುಂಬಾರರ ಮನೆಗೆ ಹೋಗಿ ಒಂದು ದೊಡ್ಡ ಗಡಿಗೆ, ಐದು ಪರಾಣಿ, ಇಪ್ಪತ್ತು ಸಣ್ಣ ಮಗಿಗಳು ತರುತ್ತಾರೆ. ಅಂದು ತಮ್ಮ ವಾಸ ಸ್ಥಳಕ್ಕೆ ಹತ್ತಿರವಿರುವ ಬಯಲು ಪ್ರದೇಶದಲ್ಲಿ ಹನ್ನೆರಡನೇ ದಿನದ ಕಾರ್ಯ ಮಾಡುತ್ತಾರೆ. ಬಯಲಿನಲ್ಲಿ ಯಾವುದಾದರೂ ಒಂದು ಮರದ ಕೆಳಗೆ ಗುಡಾರವನ್ನು ಹಾಕಿ ಅದರೊಳಗೆ ತಮ್ಮ ದೇವರ ಪೆಟ್ಟಿಗೆಯನ್ನು (ವಂಶದ ಹಿರಿಯರ ಮುಖಗಳು) ಇರಿಸುತ್ತಾರೆ. ಸತ್ತ ವ್ಯಕ್ತಿಗೆ ಇಷ್ಟವಾದ ಆಹಾರ ಮತ್ತು ಇತರ ಪದಾರ್ಥಗಳನ್ನು ಸತ್ತವನಿಗೆ ಸಮರ್ಪಣೆ ಮಾಡುತ್ತಾರೆ. ಒಂದು ಪಾವು ನವಣೆ ಅಕ್ಕಿ, ೨೫೦ ಗ್ರಾಂ ಗೋಧಿಹಿಟ್ಟು ತಂದು ಸಂಜೆ ೭ ಗಂಟೆ ಸುಮಾರಿಗೆ ಸತ ವ್ಯಕ್ತಿಯ್ತು ಬೆಡಗಿನ ಮುಖಂಡನು ವ್ಯಕ್ತಿಯೊಬ್ಬನೊಂದಿಗೆ ನೀರು ತರುತ್ತಾನೆ. ಮುಖಂಡನು ನೀರು ಹೊತ್ತುಕೊಂಡು ಬರುವ ಸಮಯದಲ್ಲಿ ಜೊತೆಗೆ ಹೋಗಿರುವ ವ್ಯಕ್ತಿಯು ನೀರು ತುಂಬಿದ ಗಡಿಗೆಗೆ ತೂತನ್ನು ಹಾಕುತ್ತಾನೆ. ಗಡಿಗೆಯಲ್ಲಿ ಇರುವ ನೀರು ಮುಗಿಯುವುದರೊಳಗಾಗಿ ಪೂಜೆಗೆ ಸಿದ್ಧಗೊಂಡಿರುವ ಸ್ಥಳಕ್ಕೆ ಮುಖಂಡನು ಬಂದು ತಲುಪಬೇಕು. ನೀರು ತರಲು ಹೋಗಿರವ ವ್ಯಕ್ತಿ ಮರಳಿ ಬರುವುದರೊಳಗೆ ಪೂಜಾ ಸ್ಥಳದಲ್ಲಿ ತಂದಿರುವ ೧೨ ಮಗಿಗಳನ್ನು ಮತ್ತೊಂದು ಭಾಗದಲ್ಲಿ ೮ ಮಗಿಗಳನ್ನು ಸಾಲಾಗಿ ಇರಿಸುತ್ತಾರೆ. ಒಂದು ಕಡೆ ಆರು ಆರು ಮಗಿಗಳನ್ನು ಎದುರುಬದರಾಗಿ ಇರಿಸಿದರೆ ಮತ್ತೊಂದು ಕಡೆ ಸ್ವಲ್ಪ ದೂರದಲ್ಲಿ ಉಳಿದ ಎಂಟು ಮಗಿಗಳನ್ನು ಸಾಲಾಗಿ ಜೋಡಿಸಿರುತ್ತಾರೆ. ಹೀಗೆ ಜೋಡಿಸಿದ ಹನ್ನೆರಡು ಮಗಿಗಳಿಗೆ ಮುಖಂಡನು ಹೊತ್ತು ತಂದಿರುವ ಗಡಿಗೆಯ ನೀರನ್ನು ತುಂಬಿಸಲಾಗುತ್ತದೆ. ಉಳಿದ ೮ ಮಗಿಗಳಿಗೆ ನೀರು ತುಂಬದೆ ಖಾಲಿ ಇಡಲಾಗುವುದು. ತರುವಾಯ ಹನ್ನೆರಡು ಗುಂಪಿನ ಮಗಿಗಳಿಗೆ ಏಳು ಸುತ್ತು ಸುರುಗಿ ದಾರವನ್ನು ಸುತ್ತಲಾಗುತ್ತದೆ. ಆಮೇಲೆ ಆರು ದೊಡ್ಡ ಗಡಿಗೆಗಳನ್ನು ಬೇರೆ ಸ್ಥಳದಲ್ಲಿ ಇರಿಸಿ ಅದಕ್ಕೂ ಸಹ ನೀರು ತುಂಬಿಸಲಾಗುತ್ತದೆ. ನೀರು ತುಂಬಿದ ಗಡಿಗೆಗಳಿಗೆ ಎಡಗೈಯಿಂದ ಮಾಡಿದ ಗೋಧಿ ರೊಟ್ಟಿಯಿಂದ ಗಡಿಗೆಗಳ ಬಾಯಿ ಮುಚ್ಚಲಾಗುತ್ತದೆ. ಈ ಗಡಿಗೆಗಳನ್ನು ಒಂದರ ಮೇಲೊಂದರಂತೆ ಪೇರಿಸಿ (ಅಡಕಲ ಗಡಿಗೆಯಂತೆ) ಇರಿಸಲಾಗುತ್ತದೆ. ನವಣೆ ಅಕ್ಕಿ ಅನ್ನಕ್ಕೆ ಬೆಲ್ಲವನ್ನು ಸೇರಿಸಿ ಮಣ್ಣಿನ ಪಾರಾಣಿಯಲ್ಲಿ ಇರಿಸಲಾಗುತ್ತದೆ. ಇದರ ಜೊತೆಗೆ ಅಂಗಡಿಯಿಂದ ತಂದ ಪದಾರ್ಥಗಳನ್ನೂ ಸೇರಿಸಿ ಇರಿಸಲಾಗುತ್ತದೆ. ತರುವಾಯ ನೀರು ತಂದಿರುವ ಮಡಕೆಯ ಮುಂಭಾಗಕ್ಕೆ ಒಂದು ಗೋಧಿ ರೊಟ್ಟಿಯನ್ನು ಇಡಲಾಗಿರುತ್ತದೆ. ಹೀಗೆ ನೈವೇಧ್ಯದ ಎಲ್ಲಾ ಸಿದ್ಧತೆಗಳು ಮುಗಿದ

ನಂತರ ಮಧ್ಯರಾತ್ರಿ ಹನ್ನೆರಡು ಪೂಜೆ ಮಾಡಲಾಗುತ್ತದೆ. ಪೂಜೆ ಮಾಡಿ ನೈವೇಧ್ಯವಿರಿಸಿದ ತರುವಾಯ ಕಾರ್ಯಕ್ಕೆ ಸೇರಿದ ಎಲ್ಲರೂ ಗುಡಾರದಿಂದ ದೂರಕ್ಕೆ ಕುಳಿತುಕೊಳ್ಳುತ್ತಾರೆ. ಮರುದಿನ ಬೆಳಿಗ್ಗೆ ನೈವೇಧ್ಯದ ಪಾತ್ರೆಗಳನ್ನು ಗಮನಿಸುತ್ತಾರೆ. ಪಾತ್ರೆಯಲ್ಲಿರಿಸಿದ ಆಹಾರ ಪದಾರ್ಥವನ್ನು ಯಾವುದಾದರೂ ಪ್ರಾಣಿಯಿಂದಾಗಿ ಸ್ವಲ್ಪ ಸ್ಥಾನಪಲ್ಲಟವಾಗಿದ್ದರೆ ಸತ್ತ ವ್ಯಕ್ತಿಯ ಆತ್ಮವು ಬಂದು ನೈವೇಧ್ಯವನ್ನು ಸ್ವೀಕರಿದೆ ಎಂದು ತಿಳಿಯುತ್ತಾರೆ. ಇದಾದ ತರುವಾಯ ಮಧ್ಯಾಹ್ನ ಹನ್ನೆರಡು ಗಂಟೆ ಸುಮಾರಿಗೆ ಎಲ್ಲಾ ಗಡಿಗೆಗಳನ್ನು ಒಡೆದು ಚೀಲವೊಂದರಲ್ಲಿ ತುಂಬಿಕೊಂಡು ಹೋಗಿ ಹರಿಯುವ ನೀರಿನಲ್ಲಿ ಬಿಡುತ್ತಾರೆ. ತರುವಾಯ ದೇವರ ಪೆಟ್ಟಿಗೆಯನ್ನು ಹಳ್ಳ, ಹೊಳೆಯ ಹತ್ತಿರ ಒಯ್ದು ಪೆಟ್ಟಿಗೆಗೆ ಪೂಜೆಮಾಡಿ ಮನೆಗೆ ಮರಳಿ ತೆಗೆದುಕೊಂಡು ಬರುತ್ತಾರೆ. ಈ ಎಲ್ಲಾ ಕಾರ್ಯಕ್ರಮ ಮುಗಿಯುವವರೆಗೂ ಸತ್ತ ವ್ಯಕ್ತಿಯ ಹೆಣವನ್ನು ಎತ್ತಿದ ನಾಲ್ಕು ಜನರು ಊಟ ಮಾಡುವಂತಿಲ್ಲ. ಇದು ಸತ್ತವರ ದಿವಸ ಆಚರಿಸುವ ಕಾರ್ಯವಾಗಿದೆ. ಪಾರ್ಧಿಯರಲ್ಲಿ ವ್ಯಕ್ತಿ ಸತ್ತ ಹನ್ನೆರಡನೆ ದಿನಕ್ಕೆ ಅವರ ತಿಥಿಯನ್ನು ಮಾಡಲು ಅನಾನುಕೂಲವಾದ ಪಕ್ಷದಲ್ಲಿ ಒಂದು ವರ್ಷದಿಂದ ಹತ್ತು ವರ್ಷಗಳೊಳಗೆ ತಮಗೆ ಅನುಕೂಲವಾದ ದಿನ ದಿವಸ ಕಾರ್ಯ ಮಾಡುವುದೂ ಉಂಟು. ಆದರೆ ಈ ರೀತಿ ಮಾಡುವುದು ತೀರಾ ಅಪರೂಪವಾಗಿರುತ್ತದೆ. ಸತ್ತವರ ದಿವಸ ಕಾರ್ಯ ಮಾಡದ ಹೊರತು ಮನೆಯಲ್ಲಿ ಯಾವ ಶುಭ ಕಾರ್ಯ ಮಾಡುವಂತಿಲ್ಲ.

**೫.೩.೪ ಮೇದ ಬುಡಕಟ್ಟು**

ಮೇದ ಬುಡಕಟ್ಟನ್ನು ಮೇದ, ಮೇದಾರ, ಮ್ಯಾದರ ಎಂದು ಕರೆಯುವರು. ಮೇದರು ಮೂಲತಃ ಆಂಧ್ರ ಮೂಲದಿಂದ ಬಂದವರೆಂದು ಹೇಳಲಾಗುವುದು. ಕರ್ನಾಟಕದ ಮಧ್ಯಭಾಗದಲ್ಲಿ ನೆಲೆನಿಂತ ಮೇದರು ಕನ್ನಡವನ್ನು ಮನೆ ಮಾತಾಗಿಸಿಕೊಂಡಿರುವರು. ಆಂಧ್ರ ಗಡಿಭಾಗದ ಮೇದರು ತೆಲುಗನ್ನೂ, ತಮಿಳ್ನಾಡು ಗಡಿಭಾಗದ ಮೇದರು ತಮಿಳನ್ನು ಮನೆ ಮಾತಾಗಿ ಹೊಂದಿರುವುದು ತಿಳಿದುಬರುವುದು. ಬಳ್ಳಾರಿಯು ಆಂಧ್ರದ ಗಡಿ ಭಾಗದಲ್ಲಿರುವುದರಿಂದ ಇಲ್ಲಿ ತೆಲುಗು ಮನೆ ಮಾತನ್ನು ಹೊಂದಿದವರೇ ಹೆಚ್ಚು. ಆದರೆ ಯುವಪೀಳಿಗೆಯು ತೆಲುಗಿಗಿಂತ ಕನ್ನಡವನ್ನೇ ಹೆಚ್ಚಾಗಿ ಬಳಸುವರು. "ಮೇದರಲ್ಲಿ ಪಲ್ಲಿ ಮೇದ, ಬಂಡಿಕಾರ ಮೇದ ಎಂಬ ಪಂಗಡಗಳಿವೆ. ಪಲ್ಲಿಮೇದ ಎಂಬುದು ಪ್ರಾಯಶಃ ತೆಲುಗು ಮೂಲದ ಪದವಾಗಿರಬೇಕು. ತೆಲುಗಿನಲ್ಲಿ ಪಲ್ಲಿ ಎಂದರೆ ಹಳ್ಳಿ ಎಂದರ್ಥ. ಹಳ್ಳಿಯಲ್ಲಿ ನೆಲೆಕಂಡುಕೊಂಡ ಮೇದರನ್ನು ಪಲ್ಲಿ ಮೇದರೆಂದೂ, ಕಾಡಿನಲ್ಲಿ ನೆಲೆನಿಂತು ಊರೂರು ಅಲೆಯುವ ಮೇದರನ್ನು ಬಂಡಿಕಾರ ಮೇದರೆಂದೂ ಕರೆದಿರುವ ಸಾಧ್ಯತೆಗಳಿವೆ."(ಪನ್ನಂಗಧರ:೨೦೧೨:೪೯), ಬಂಡಿ ಮೇದರು ತಾವು ಮೂಲತಃ ಬಂಡಿಯಲ್ಲಿ ದೇವರನ್ನು ಸಾಗಿಸುವವರಾಗಿದ್ದರಿಂದ ತಮ್ಮನ್ನು ಬಂಡಿಮೇದರೆಂದು ಕರೆಯುತ್ತಿದ್ದರು ಎಂದು ಹೇಳುವರು.

**ಪದನಿಷ್ಪತ್ತಿ:** ಮಹೇಂದ್ರಾಚಲ ಗುಡ್ಡಗಾಡಿನಲ್ಲಿ ನೆಲೆನಿಂತಿದ್ದ ಇವರನ್ನು ಮಹೇಂದ್ರಚಲದವರು> ಮಹೇಂದ್ರದವರು>ಮೇದರು ಎಂದು ಕರೆದಿರಬಹುದೆಂಬ ಅಭಿಪ್ರಾಯವನ್ನು ಮೇದ ಸಮುದಾಯದ

ಹಿರಿಯರು ವ್ಯಕ್ತಪಡಿಸುವರು. ಇನ್ನೂ ಕೆಲವರು ಮಹಾಭಾರತದ ಪೌರಾಣಿಕ ಕತೆಗೂ ತಮ್ಮ ಕುಲದ ಹೆಸರಿಗೂ ಸಂಬಂಧವನ್ನು ಕಲ್ಪಿಸುವರು. ವಿಧುರಾ ಎಂಬುದರಿಂದ ಬಿದಿರು ಪದ ಬಂದಿತೆಂದೂ, ವಿಧುರನು ಮೇಧನಾಡಿನ ರಾಜನಾಗಿದ್ದರಿಂದ ತಮಗೆ ಮೇದ ಎಂಬ ಜಾತಿಪದ ಅಂಟಿತೆಂದೂ ಹೇಳುವರು. ಅಂದರೆ ತಮ್ಮ ಕುಲದ ಮೂಲ ವ್ಯಕ್ತಿ ವಿಧುರ ಎಂದು ಮೇದರು ತಿಳಿಸುವರು. ತಮ್ಮ ಮೂಲ ದೈವವು ಆಂದ್ರ ಪ್ರದೇಶದ ಗುಂತಕಲ್ಲಿಗೆ ಅರವತ್ತು ಮೈಲು ದೂರದಲ್ಲಿರುವ ಆದಿಮಲ್ಲಮ್ಮನ ಗುಡ್ಡದಲ್ಲಿ ಇರುವುದಾಗಿ ಹೇಳುವರು. ತಮ್ಮ ಮೂಲದೈವ ಆದಿ ಮಲ್ಲಮ್ಮ ಎಂದು ಹೇಳುವರು. ಪ್ರಾಯಶಃ ಆದಿ ಮಲೆಯಮ್ಮ (ಕಾಡಿನ ಅಮ್ಮ)ನೇ ಇವರಲ್ಲಿ ಆದಿಮಲ್ಲಮ್ಮ ಎಂದು ಕರೆಯಲ್ಪಡುವಳು. ಇವರ ದೈವದ ಮೂಲವನ್ನು ನೋಡಿದರೆ ಮೇದರು ಆಂಧ್ರ ಮೂಲಿಗರೆನಿಸುವುದು.

**ಕುಲ/ಬಳಿ/ಬೆಡಗು**

ಮೇದರ ಬೆಡಗುಗಳು ಅವರ ಮೂಲಿಗರ ಹೆಸರಿನಿಂದಲೇ ಗುರುತಿಸುವರು. ಅವುಗಳನ್ನು ಕಕ್ಕುಕುಲ, ಈಶ್ವರಕುಲ, ವಿಷ್ಣುಕುಲ, ಮಾದೇರಕುಲ, ನಾಯಕರಕುಲ, ಗೌಡರ ಕುಲ ಇತ್ಯಾದಿ ಹೆಸರುಗಳಿಂದ ಗುರುತಿಸುವರು. ಇವರಲ್ಲಿ ೧.ಎಕ್ಕಮವಾಲು ೨. ಕನಿಕಿರಮವಲು ೩.ಕಂಕೆವಾಲು ೪. ಹೇರ ಕಂಕೆವಾಲು ೫ ನೆಲ ಕಂಕೆವಾಲು ೬ ದಮನೆವಾಲು ೭.ಮೇದರವಾಲು ೮. ಕೋಲೆವಾಲು ೯. ಪೋಲಿ ಕುಂದೀದರಂವಾಲು ೧೦. ದೇಲಕೋಶಿ ೧೧. ನಲಕೋಶಿ ೧೨. ಬಾಗಿಲುವಾಲು ೧೩. ಸಿಲೇವಾಲು ೧೪. ಪೋಂಬೀಡವಾಲು ೧೫. ಪೋದಲವಾಲು ಊರೇವಾಲು ೧೬. ಕಂಚಂವಾಲು ೧೭..ವಾಸಂವಾಲು ೧೮.ಪುಂಟಪರಿದಿವಾಲು ೧೯. ತಂಬೇವಾಲು ೨೦. ತಂಬಟವಾಲು ೨೧. ಕಣಿಗರವಾಲು ೨೨. ತಮನಾವಾಲು ೨೩. ಕಾಂಗೆವಾಲು ಇತ್ಯಾದಿ ಬೆಡಗುಗಳ ಹೆಸರನ್ನು ಮಾತ್ರ ಹೇಳುವರು. ಆದರೆ ತಮ್ಮಲ್ಲಿ ನೂರ ಒಂದು ಬೆಡಗುಗಳಿವೆಯಂದು ಹೇಳುವರು. ಒಂದು ನೂರ ಒಮದು ಬೆಡಗುಗಳ ಸಂಕೇತವಾಗಿ ನೂರಾಒಂದು ಗಂಟುಗಳನ್ನು ಹಾಕಿದ ಕರಿಯ ದಾರವನ್ನು ತಾಳಿಗೆ ಪೂರ್ವದಲ್ಲಿ ಮದುವೆ ಹೆಣ್ಣಿಗೆ ಕಟ್ಟುವರು. ವಿಜಾತಿ ಬೆಡಗುಗಳೊಂದಿಗೆ ಮಾತ್ರ ವೈವಾಹಿಕ ಸಂಬಂಧ ಬೆಳೆಸುವರು. ಇವರಲ್ಲಿ ಕಾಡಿನಿಂದ ಬಿದಿರನ್ನು ತರುವವರನ್ನು ಬೊಮ್ಮಕುಳಾಯಿಯರೆಂದು, ಮೊರ, ಬುಟ್ಟಿಗಳ ವ್ಯಾಪಾರಿಗಳನ್ನು ಶೆಟ್ಟಿಕುಳಾಯರೆಂದೂ, ಕುಲದಲ್ಲಿಯೇ ತಳವಾರಿಕೆ ಮಾಡುವವರನ್ನು ತಳಾರ ಕುಳಾಯಿಗಳೆಂದು ಕರೆದುಕೊಳ್ಳುವರು. ಈ ರೀತಿಯ ಕುಳಾಯಿಗಳನ್ನು ಗುರುತಿಸಿಕೊಳ್ಳುವವರು ತಮಿಳು ಮೂಲದ ಮೇದರಾಗಿರುವರು. ಇಂತಹ ಕುಳಾಯಿ ಪದ್ಧತಿಯ ಮೇದರು ಮೈಸೂರು, ಬೆಂಗಳೂರು, ಚೆನ್ನಪಟ್ಟಣ ಭಾಗದಲ್ಲಿರುವುದಾಗಿ ಮೇದ ವಕ್ತೃಗಳು ತಿಳಿಸುವರು. ಮೈಸೂರು ಪ್ರದೇಶದಲ್ಲಿ ನೆಲೆಸಿರುವ ಮೇದರನ್ನು ಗೌರಿಗರೆಂದು ಕರೆಯುತ್ತಾರೆ. ಇವರಲ್ಲಿ ಬೆಳ್ಳಿಕುಲ ಮತ್ತು ನಾಗರಕುಲ ಎಂಬ ಎರಡು ಬೆಡಗುಗಳಿವೆ. ಪಲ್ಲಿಮೇದರಲ್ಲಿ ಆಲುಕುಲ ಎಂದರೆ ಆಲದ ಮರದ ಗುಂಪಿಗೆ ಸೇರಿದವರಿದ್ದಾರೆ. ಇವರ ಕುಲ ಚಿಹ್ನೆ ಆಲದಮರ ಮತ್ತು ಈ ಮರ ಇವರಿಗೆ ಪವಿತ್ರವಾದುದು. ಮದುವೆ ಚಪ್ಪರಕ್ಕೆ ಈ ಮರದ ಗೆಲ್ಲುಗಳನ್ನೇ ಹಾಕಲಾಗುವುದು. "ಸಂಪಿಗೆ ಕುಲ" ಸಂಪಿಗೆ ಹೂವು

ಹಾಗೂ ಗೆಲ್ಲು ಪೂಜಾರ್ಹವಾದವು.ಈ ಮರದಡಿ ನೆಲೆಸಿ ಬದುಕು ಸಾಗಿಸಿದರು ಪೂಜ್ಯ ಕುಲ ಚಿಹ್ನೆ. ಕಾರೆಕುಲ ಇದು ಮುಳ್ಳಿನಿಂದ ಕೂಡಿರುವ ಒಂದು ಮುಳ್ಳಿನಗಿಡ. ಇದರ ಹಣ್ಣುಗಳನ್ನು ತಿನ್ನಲು ಯೋಗ್ಯ.ಬಯಲು ಸೀಮೆಯ ಕುರುಚಲು ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯುತ್ತವೆ. ಇದರ ಹಣ್ಣುಗಳು ನಾಗನ ಪೂಜೆಗೆ ಬಹುಶ್ರೇಷ್ಠ, ಹಾಗಾಗಿ ಕಾರೆಕುಲದವರು ಕಾರೆಗಿಡವನ್ನು ತಮ್ಮ ಕುಲಚಿಹ್ನೆಯಾಗಿ ಇಟ್ಟುಕೊಂಡಿದ್ದಾರೆ. ಕುರುಬ ಕುಲ ಕುರಿ ಸಾಕಾಣಿಕೆಯ ಹಿನ್ನೆಲೆಯಲ್ಲಿ ಬೆಳೆದು ಬಂದಿರುವಂತದ್ದು. ಬಂಡಿಕಾರ ಮೇಖಧರು ತಮ್ಮ ಕುಲದ ಹಿರಿಯರು ಮತ್ತು ಅವರ ಯಾಜಾಮಾನ್ಯದ ಹಿನ್ನೆಲೆಯಲ್ಲಿ ನಾಲ್ಕು ಗುಂಪುಗಳನ್ನಾಗಿ ಮಾಡಿಕೊಂಡು ಅವುಗಳಿಗೆ ನಾಯಕನ ಬೀಡು ಮತ್ತು ಮಸಕಣ್ಣಿ ಬೀಡು ಗೌಡನ ಬೀಡು ಹಾಗೂ ರಟ್ಟಾದ ಅಥವಾ ರತ್ನ ಬೀಡು ಎಂದು ವಿಂಗಡಿಸಿಕೊಂಡಿದ್ದಾರೆ. ಕನ್ನಡ ಮೇದರರಲ್ಲಿ ಕುಲದ ಹೆಸರುಗಳು ದೇವರ ಹೆಸರಿನಲ್ಲಿ ಕೆಲವು ಯಜಮಾನ ಅಥವಾ ಕುಲದ ಅಧಿಕಾರ ಪಡೆದವನ ಅಧಿಕಾರ ನಾಮದ ಹೆಸರಿನಲ್ಲಿ ಬಳಕೆಯಲ್ಲಿವೆ. ಅವೆಂದರೆ ಕಕ್ಕುಕುಲ, ಈಶ್ವರಕುಲ, ವಿಷ್ಣುಕುಲ, ಮಾದೇರಕುಲ, ನಾಯಕರಕುಲ, ಗೌಡರ ಕುಲವೆಂದು ಹಲವು ರೀತಿಯ ಕುಲ ವರ್ಗಗಳಿವೆ.

**ಕುಲ ಚಿಹ್ನೆಗಳು**

"೧ ಪರ್ವತ ೨ ಪುತ್ತ (ಹುತ್ತ) ೩ ಕೊಂಡ(ಬೆಟ್ಟ) ೪ ಜವಾದಿ(ಪುನುಗುಬೆಕ್ಕು) ೫ ನಂದಿಕಟ್ಟು (ಎತ್ತಿನಮುಖ) ೬ ಕಂದಿಕಟ್ಟು (ಬೇಳೆಸಾರು) ೭ ಕೊಟ್ಟ ಕುಂಡ (ಹೊಸ ಮಡಿಕೆ) ೮ ಪೊರಟಿ (ಹಕ್ಕಿ) ೯ ನವುಲ್ (ಎಳ್ಳು) ೧೦ ಸೆನಗಪಾತ್ರ (ಕಡ್ಲೆ ಬೇಳೆ) ೧೧ ಸಂದ ( ಚಂದ ) ೧೨ ನೀಲ ( ನೀಲಿ ಹರಳು) ೧೩ ಸಿರಿ ಗಿರಿ ( ಬೆಟ್ಟ ) ೧೪ ಕಸಿಗಿರಿ (ಬೆಟ್ಟ) ೧೫ ಪತ್ತು ( ಗಂಡು ) ೧೬ ನಾಗಿನ್ನದು ( ಹಾವು ) ೧೭ ಪಿಲೀಕ್ಯಾಟ್ ೧೮ ಕೋಬ."(ಪನ್ನಂಗಧರ:೨೦೧೨:೪೯).

**ಹೆಣ್ಣು–ತೆರ–ಮದುವೆ**

ತಮಿಳು ಮೂಲದ ಮೇದರು, ಆಂಧ್ರಮೂಲದ ಮೇದರು ಹಾಗೂ ತುಂಬಾ ಪೂರ್ವದಲ್ಲಿಯೇ ಕರ್ನಾಟಕಕ್ಕೆ ವಲಸೆಬಂದು ನೆಲೆಸಿದ ಮೇದರು ಪರಸ್ಪರ ವೈವಾಹಿಕ ಸಂಬಂಧಗಳನ್ನು ಹೊಂದಲು ಮುಂದಾಗುವುದಿಲ್ಲ. ಈ ಮೂರು ಗುಂಪುಗಳಲ್ಲಿಯೂ ತಾನೆಚ್ಚು ನಾನೆಚ್ಚು ಎಂಬ ಭಾವನೆ ಇದೆ. ಪ್ರಾಯಶಃ ಭೌಗೋಳಿಕ ದೂರವೂ ಇವರ ಮಧ್ಯದ ವೈವಾಹಿಕ ಸಂಬಂಧಗಳಿಗೆ. ಅಡ್ಡಿಯಾಗಿರುವ ಸಾಧ್ಯತೆಗಳಿವೆ.

**ವಿವಾಹ**

ಮೇದರಲ್ಲಿ ವಿವಾಹದ ಕ್ರಿಯೆ ಪ್ರಾರಂಭಗೊಳ್ಳುವುದು ಹೆಣ್ಣನ್ನು ನೋಡುವ ಮೂಲಕ. ಹೆಣ್ಣಿನ ಮನೆಯವರು ಗಂಡಿನ ಮನೆಗೆ ಬಂದು ನಮ್ಮ ಹುಡುಗಿಯನ್ನು ಮದುವೆಯಾಗಿ ಎಂದು ಬೇಡುವುದಿಲ್ಲ. ಹುಡುಗಿಯ ಮನೆಯವರನ್ನು ಗಂಡಿನ ಕಡೆಯವರೇ ಮೊದಲಿಗೆ ಮಧ್ಯವರ್ತಿಗಳಾದ ಹಿರಿಯರ

ಮೂಲಕ ವಿಚಾರಿಸುವರು. ಹೆಣ್ಣು ಕೊಡಲು ಒಪ್ಪಿದರೆ ಕುಲದ ಯಜಮಾನರೊಂದಿಗೆ ಹೆಣ್ಣನ್ನು ನೋಡುವ ಶಾಸ್ತ್ರವಾಗುತ್ತದೆ. ಹೆಣ್ಣನ್ನು ಮದುವೆ ಗಂಡು ನೋಡುವುದಿಲ್ಲ. ಮದುವೆ ಗಂಡಿನ ಮನೆಯ ಹಿರಿಯರು ಹಾಗೂ ಕುಲದ ಯಜಮಾನರು ನೋಡಿ ಒಪ್ಪಿದರೆ ಮುಗಿಯಿತು. ಇತ್ತೀಚೆಗೆ ಹುಡುಗನೂ ಹೆಣ್ಣನ್ನು ನೋಡಲು ಅವಕಾಶ ಮಾಡಿಕೊಡಲಾಗಿದೆ. ಹೆಣ್ಣನ್ನು ಗಂಡಿನ ಮನೆಯವರು ಒಪ್ಪಿಕೊಂಡ ತರುವಾಯ ಗಂಡು ಹಾಗೂ ಹೆಣ್ಣಿನ ಕಡೆಯ ದೈವದವರು ಸೇರಿ ನಿಶ್ಚಯಕಾರ್ಯ ಮಾಡುವರು. ಕುಲದ ದೈವದಲ್ಲಿ ಬುದ್ಯಂತ (ಬುದ್ದಿವಂತ), ಪೆದ್ದ (ದೊಡ್ಡ ಮನುಷ್ಯ), ಗೌಡ. ತಳವಾರ ಹಾಗೂ ವಯಸ್ಸಿನಲ್ಲಿ ಹಿರಿಯರಾದವರು ಮುಖ್ಯರಾಗಿ ಹಾಜರಿರಬೇಕು. ಮನೆಯ ಹಿರಿಯನು ಕುಲದೇವರ ಅಪ್ಪಣೆ ಪಡೆದು ಹೆಣ್ಣಿರುವ ಮನೆಗೆ ಜಾತಿ ಮುಖಂಡರೊಡನೆ ಹೋಗಿ ೫ ವೀಳ್ಯದಎಲೆ, ಅಡಿಕೆಗಳನ್ನು ಬದಲಾಯಿಸಿಕೊಂಡು ಒಪ್ಪಿಗೆ ಮಾಡಿಕೊಳ್ಳುತ್ತಾರೆ. ನಂತರ ಕುಲ ಮುಖ್ಯಸ್ಥರ ಸಭೆಯಲ್ಲಿ ತೆರ ಕೊಡುವುದು, ದೈವದವರ ಕರ ಇತ್ಯಾದಿಗಳನ್ನು ಕೊಟ್ಟು ನಿಶ್ಚಯ ಪೂರ್ಣಗೊಳಿಸುವರು. ಕೆಲವರಲ್ಲಿ ೫ ವೀಳ್ಯದೆಲೆ ನಿಶ್ಚಯವಾದರೆ ಕೆಲವರಲ್ಲಿ ೯ ವೀಳ್ಯದೆಲೆಯನ್ನು ಅದಲು ಬದಲು ಮಾಡಿಕೊಳ್ಳುತ್ತಾರೆ. ನಿಶ್ಚಯದ ದಿನವೇ ಮದುವೆ ಯಾವಾಗ ಎಂಬುದನ್ನು ನಿಶ್ಚಯಿಸಲಾಗುವುದು.

ಮೇದರಲ್ಲಿ ವಧುದಕ್ಷಿಣೆ ಅಥವಾ ಹೆಣ್ಣಿಗೆ ತೆರಕೊಡುವ ಪದ್ಧತಿಯಿದೆ. ಇತ್ತೀಚೆಗೆ ವರೋಪಚಾರದ ಹೆಸರಿನಲ್ಲಿ ಗಂಡಿಗೆ 'ವರದಕ್ಷಿಣೆ' ಕೊಡುವುದೂ ಉಂಟು. ಆದರೆ ಈ ಪ್ರಮಾಣ ಅತ್ಯಂತ ಕಡಿಮೆಯಂದೇ ಹೇಳಬಹುದು. ತೆರದ ರೂಪದಲ್ಲಿ ೧೦೧ ರೂಪಾಯಿ ಕೊಡಲಾಗುವುದು. ವಿವಾಹ ನಿಶ್ಚಯವಾಗುವ ದಿನ ಕಾಯಿ, ಹಣ್ಣು ,ಹೂವು, ತಾಂಬೂಲ ತೆಗೆದುಕೊಂಡು ಹೋಗುತ್ತಾರೆ. ಗಂಡಿನ ಕಡೆಯವರು ಹಣ್ಣು, ಕಾಯಿ, ತಾಂಬೂಲ ಹಿಡಿದು ಮಗನಿಗೆ ಮಗಳು ತಂದುಕೊಳ್ಳುವ ಬಗ್ಗೆ ಸಾರ್ವಜನಿಕವಾಗಿ ದೈವದ ಮುಂದೆ ಹೇಳುವರು. ಅದೇ ರೀತಿಯಾಗಿ ಮಗಳನ್ನು ಧಾರೆ ಎರೆದು ಕೊಡಲು ತಾವು ಸಿದ್ಧ ಎಂದು ಹೆಣ್ಣಿನ ಕಡೆಯವರು ಜಾತಿ ದೈವದ ಮುಂದೆ ತಾಂಬೂಲ ಹಿಡಿದು ಹೇಳುವರು. ಕುಲದ ಬಾಬ್ತು ಎಂದು ೩೫ ರೂ.ಗಳನ್ನು ಗಂಡಿನ ಯಜಮಾನರಿಂದ ತೆಗೆದುಕೊಳ್ಳುತ್ತಾರೆ. ಇದನ್ನು ಕುಲಸ್ಥರು ಮದುವೆಯ ಬಾಬ್ತಿಗೆ ಹಿರಿಯರನ್ನು ಕರೆಯಲು ಉಪಯೋಗಿಸುತ್ತಾರೆ.

### ಲಗ್ನ ಕಟ್ಟುವ ಶಾಸ್ತ್ರ

ಮೇದರಲ್ಲಿ ಲಗ್ನ ಕಟ್ಟುವ ಶಾಸ್ತ್ರ ಎಂದು ಪ್ರತ್ಯೇಕವಾಗಿ ಮಾಡುವರು. ಲಗ್ನಕಟ್ಟುವ ದಿನ ಗಂಡಿನ ಮನೆಯ ಐದು ಅಥವಾ ಒಂಭತ್ತು ಮುತ್ತೈದೆಯರು ಹಣ್ಣು, ಹೂವು, ಬಟ್ಟೆ, ಕಾಯಿ, ವೀಳ್ಯದೆಲೆ, ಅಡಿಕೆ, ಕುಬುಸದ ಕಣ, ಅರಶಿನ, ಕುಂಕಮ ಇತ್ಯಾದಿಗಳನ್ನು ಹೊಸಮೊರ ಇಲ್ಲವೆ ಹೊಸ ಬಿದಿರ ಪುಟ್ಟಿಯಲ್ಲಿಟ್ಟುಕೊಂಡು ಹೆಣ್ಣಿನ ಮನೆಗೆ ಹೋಗುವರು. ಹೆಣ್ಣಿಗೆ ಮಡ್ಲಕ್ಕಿ ಕೊಟ್ಟು ಊಟ ಮಾಡಿಕೊಂಡು ಮನೆಗೆ ವಾಪಾಸ್ಸು ಬರುವರು. ಮದುವೆಗೆ ಎರಡು ದಿನ ಮೊದಲು ಈ ಕಾರ್ಯ ಮಾಡುವರು.

**ಚಪ್ಪರ**

ತಾಳಿ ಶಾಸ್ತ್ರದ ಒಂದು ದಿನ ಮೊದಲು ಚಪ್ಪರ ಹಾಕುವರು. ಚಪ್ಪರ ಹಾಕುವ ಮೊದಲು ಕಂಬ ಹೂಳಿ ಕಂಬದಪೂಜೆ ಮಾಡುವರು. ಚಪ್ಪರಕ್ಕೆ ಹನ್ನೆರಡು ಕಂಬದ ಹೂಳುವರು. ಹುಡುಗಿಯ ಮನೆಮುಂದೆ ಮದುವೆ ನಡೆಯುವುದು. ಚಪ್ಪರ ಹಾಕಿದ ತರುವಾಯ ಹುಡುಗಿಯ ಮಾವನಾಗುವವನು ಹಾಲುಗಂಬ, ಅತ್ತಿಕಂಬವನ್ನು (ಟೊಂಗೆ)ತಂದು ಚಪ್ಪರದ ಮಧ್ಯಭಾಗದ ಕಂಬಕ್ಕೆ ಕಟ್ಟಿ ಪೂಜೆ ಮಾಡುವರು. ಚಪ್ಪರವನ್ನು ಮದುವೆಯಾಗುವ ಹುಡುಗಿಯು ಪೂಜಿಸುತ್ತಾಳೆ. ಚಪ್ಪರ ಹಾಕಿದ ರಾತ್ರಿ ಹೆಣ್ಣಿಗೆ ಬಳೆಶಾಸ್ತ್ರವಿರುತ್ತದೆ. ಮುಹೂರ್ತದ ಅಂಗವಾಗಿ ಹುಡುಗಿಗೆ ಹಾಗೂ ಆ ದಿನ ಬಂದ ಮುತ್ತೈದೆಯರಿಗೂ ಬಳೆ ತೊಡಿಸುತ್ತಾರೆ.

**ಅರಿಸಿಣ ಶಾಸ್ತ್ರ**

ಗಂಡಿನ ಮನೆಯಲ್ಲಿ ಮದಲಿಂಗ ಮನೆಯಲ್ಲಿ ಅರಿಸಿಣ ಹಚ್ಚಿ ಸ್ನಾನ ಮಾಡಿಸುವರು. ೫ ಉಂಡೆ ಸಗಣಿ ಹಾಗೂ ಗರಿಕೆಗಳನ್ನು ಹಾಕಿ ಗುಂಬದ ಸುತ್ತಾ ಹಸಿ ದಾರವನ್ನು ಸುತ್ತಿ ಅದರ ಸುತ್ತಾ ೫ ತಂಬಿಗೆಯಲ್ಲಿ ನೀರು ಇಟ್ಟು ಕಂಠದ ಸುತ್ತಾ ೫ ಜನ ಮುತ್ತೈದೆಯರು ಎಳೆಯನ್ನು ಕಟ್ಟುತ್ತಾರೆ, ಹೆಣ್ಣಿಗೆ ಅರಿಶಿನ, ಕುಂಕುಮ ಹಚ್ಚಿ ನಂತರ ಬಿಸಿ ಎಣ್ಣೆಗೆ ಅರಿಶಿನ ಸೇರಿಸಿ ಹಚುತ್ತಾರೆ, ಆ ದಿನ ಬಂದ ಹತ್ತಿರದ ನೆಂಟರೆಲ್ಲ ಎಣ್ಣೆ, ಅರಿಶಿನ ಹಚ್ಚುತ್ತಾರೆ, ಇದೇ ಶಾಸ್ತ್ರ ಗಂಡಿನ ಮನೆಯಲ್ಲಿಯೂ ನಡೆಯುತ್ತದೆ, ಸಾಮಾನ್ಯವಾಗಿ ಗಂಡಿನವರು ಬಂದು ಪ್ರತ್ಯೇಕ ಮನೆಯಲ್ಲಿ ಉಳಿದಿರುತ್ತಾರೆ. ಜಾತಿ ಯಜಮಾನನು ಹೆಣ್ಣು ಹಾಗು ಗಂಡಿಗೆ ಕಂಕಣ ಕಟ್ಟುತಾನೆ. ಕಂಕಣ ಕಟ್ಟುವಾಗ ಒಂದು ಪಾವಿನಲ್ಲಿ ಅಕ್ಕಿ ತುಂಬಿ ಅದರ ಮೇಲೆ ಮೊದಲು ವರನು ತನ್ನ ಬಲಹಸ್ತವನ್ನು ಇಡುತ್ತಾನೆ. ಕುಲದ ಯಜಮಾನನು ಆ ಹಸ್ತಕ್ಕೆ ಅರಿಶಿನ ಕುಂಕುಮ ಹಚ್ಚಿ ಕಂಕಣ ಕಟ್ಟುತ್ತಾನೆ. (ಕಂಕಣ ಎಂದರೆ ಅರಿಸಿಣ ಕೊಂಬು ಹಾಗೂ ವೀಳ್ಯದೆಲೆ ಸೇರಿಸಿ ಕಟ್ಟಿದ ದಾರ) ಇದಕ್ಕೆ ಕಂಕಣಶಾಸ್ತ್ರ ಎಂದು ಕರೆಯುವರು. ಇದೇ ರೀತಿಯ ಶಾಸ್ತ್ರವನ್ನು ವಧುವಿಗೂ ಕೂಡ ಅವರ ಕುಲದ ಯಜಮಾನ ಮಾಡುವನು.

**ಅರಿಸಿಣ ಬುಟ್ಟಿ**

ತಾಳಿಯ ಹಿಂದಿನ ದಿನ ಗಂಡಿನ ಮನೆಯವರು ಹೆಣ್ಣಿನ ಮನೆಗೆ ಉಡಕ್ಕಿಯನ್ನು ಒಂದು ಬಿದಿರ ಬುಟ್ಟಿಯಲ್ಲಿ ಕಳಿಸುವರು. ಬುಟ್ಟಿಯ ಒಳಗೆ ೫ ತೆಂಗಿನಕಾಯಿ ೫ ಅಚ್ಚು ಬೆಲ್ಲ ೫ ಸೇರು ಅಕ್ಕಿ, ಹಸಿರು ಬಳೆ, ಕರಿಮಣಿ ಕುಚ್ಚು, ಅರಿಶಿನ ಕೊಂಬು, ಕುಂಕುಮ, ಬಾಳೆಹಣ್ಣು, ಒಳ್ಳೆಣ್ಣೆ, ೫ ಚಟ್ಟು ವೀಳ್ಯದ ಎಲೆ, ೫ ಹಿಡಿ ಅಡಿಕೆಯನ್ನು ಕಳಿಸುವರು. ಕುಲದ ಯಜಮಾನನು ಗಂಡಿನ ಮನೆಯಿಂದ ಆ ಬುಟ್ಟಿಯನ್ನು ಹೊತ್ತುಕೊಂಡು ಹೋಗಿ ಹೆಣ್ಣಿನ ಮನೆಗೆ ಕೊಟ್ಟು ಬರುತ್ತಾನೆ. ಬುಟ್ಟಿ ತಂದ ಯಜಮಾನನಿಗೆ ಹೆಣ್ಣಿನ ಮನೆಯವರು ತಾಂಬೂಲ ಕೊಟ್ಟು ಸತ್ಕರಿಸುತ್ತಾರೆ.

**ಹಾಲುಗಳ್ಳಿ ತರುವ ಶಾಸ್ತ್ರ**

ಮಾರನೇಯ ದಿನ ಧಾರೆಗೆ ಮುನ್ನ ಚಪ್ಪರದ ಒಳಗೆ ಒಂದು ಅರಿಶಿನದ ಬಟ್ಟೆಯ ಮೇಲೆ ಬಿಳಿ ಅಕ್ಕಿ ಹಾಗೂ ಕಡಲೆ ಕಾಳನ್ನು ಹಾಕಿ ಬಟ್ಟೆಯನ್ನು ಕಟ್ಟುತ್ತಾರೆ. ಹೊರಗಡೆಯಿಂದ ೧೨ ಕಳ್ಳಿಯ ಹಸಿ ಕಡ್ಡಿಯನ್ನು ತಂದು ತೊಳೆದು ಅದನ್ನು ದಾರದಿಂದ ಕಟ್ಟಿ ಕೆಮ್ಮಣ್ಣಿನ ಪಟ್ಟು ಹಾಕುತ್ತಾರೆ. ಅದಕ್ಕೆ ಹೂವು ಮುಡಿಸಿ ಪೂಜಿಸುತ್ತಾರೆ. ಆ ಗಂಟನ್ನು ಕುಲಸ್ಥರಿಂದ ಮುಟ್ಟಿಸಿ ಶುಭವಾಗುವಂತೆ ಹರಸುತ್ತಾರೆ. ಆ ಗಂಟನ್ನು ಕುಲದ ಯಜಮಾನನು ದೇವರ ಗುಡಿಯಲ್ಲಿ ಇಟ್ಟು ಬರುತ್ತಾನೆ. ಹುಡುಗಿಯ ಸೋದರ ಮಾವನು ವಾದ್ಯ ಸಮೇತವಾಗಿ ಹೋಗಿ ಆ ಗಂಟನ್ನು ತರುತ್ತಾನೆ. ಇದನ್ನು ಚಪ್ಪರದಲ್ಲಿರುವ ಈಶಾನ್ಯ ದಿಕ್ಕಿನ ಕಂಬಕ್ಕೆ ಕಟ್ಟುತ್ತಾರೆ. ಇದರಿಂದ ಲಗ್ನ ಮುಗಿಯುವವರೆಗೆ ಯಾವುದೇ ರೀತಿಯ ತೊಂದರೆಗಳೂ ಸಂಭವಿಸುವುದಿಲ್ಲವೆಂಬ ನಂಬಿಕೆ ಮೇದರಲ್ಲಿದೆ.

**ಗಂಗೆ ಪೂಜೆ**

ಧಾರೆಗೆ ಎರಡು ಗಂಟೆ ಮುಂಚೆ ಹೆಣ್ಣಿನ ಕಡೆಯ ೫ ಮಂದಿ ಮುತ್ತೈದೆಯರು ಹಾಗೂ ಗಂಡಿನ ಮನೆಯ ೫ ಮಂದಿ ಮುತ್ತೈದೆಯರು ನೀರಿರುವ ತಾವಿಗೆ ಹೋಗುತ್ತಾರೆ. ನೀರಿನ ತಾವಿನ ದಂಡೆಗೆ ಸಗಣಿ ಹಾಕಿ ಸಾರಿಸುತ್ತಾರೆ. ಅದರ ಮೇಲೆ ಅಗಸನು ಒಗೆದು ತಂದಿರುವ ಬಿಳಿ ಬಟ್ಟೆಯನ್ನು ಹಾಸುತ್ತಾರೆ. ಅದರ ಮೇಲೆ ನೀರು ತುಂಬಿರುವ ೧೦ ತಂಬಿಗೆಗಳನ್ನು ಚೌಕಾಕರವಾಗಿ ಜೋಡಿಸುತ್ತಾರೆ. ಅದಕ್ಕೆ ಕಟ್ಟಿದ ಹೂವನ್ನು ಸುತ್ತುತ್ತಾರೆ. ನೀರಿಗೆ ಅರಿಶಿನ ಕುಂಕುಮ ವೀಳ್ಯದೆಲೆ ಅಡಕೆ ಇಟ್ಟು ಪೂಜಿಸುತ್ತಾರೆ. ನಂತರ ಗಂಡಿನ ಹಾಗೂ ಹೆಣ್ಣಿನ ಕಡೆಯ ಸುಮಂಗಲಿಯರು ಬಿಂದಿಗೆಗಳನ್ನು ತಲೆಯ ಮೇಲೆ ಹೊತ್ತುಕೊಂಡು ಬಂದು ಹೆಣ್ಣಿನ ಮನೆಯ ದೇವರ ಮನೆಯಲ್ಲಿ ಇಡುತ್ತಾರೆ. ಧಾರೆಯ ದಿನ ಕುಲದ ಯಜಮಾನನೇ ಬಾಸಿಂಗಕ್ಕೆ ಪೂಜೆ ಮಾಡಿ ವಧುವರರಿಗೆ ಕಟ್ಟುವನು. ಗಂಡು ಹೆಣ್ಣನ್ನು ಎದುರು ಬದರಾಗಿ ನಿಲ್ಲಿಸಿ ಮಧ್ಯದಲ್ಲಿ ಬಟ್ಟೆಯ ತೆರೆ ಹಿಡಿದಿರುತ್ತಾರೆ. ತಾಳಿಯನ್ನು ಜೋಡಿ ಕಾಯಿಯ ಮೇಲೆ ಇಟ್ಟು ಪೂಜೆ ಸಲ್ಲಿಸಿ ಜಾತಿಯ ಹಿರಿಯರ ಒಪ್ಪಿಗೆ ಪಡೆದು ತಾಳಿಯನ್ನು ವರನು ಕಟ್ಟುತ್ತಾನೆ. ತಾಳಿಯನ್ನು ಕಟ್ಟಿದ ನಂತರ ಹೆಣ್ಣಿನ ಹಾಗೂ ಗಂಡಿನ ಕಡೆಯವರು ಧಾರೆಯರೆಯುವ ಶಾಸ್ತ್ರವಿರುತ್ತದೆ. ಹಿರಿಯರು ಧಾರೆ ಬಿಟ್ಟು ಸೇಸವು ಅಕ್ಕಿ ಕಾಳು ಹಾಕಿ, ತಲೆ ಭುಜಗಳನ್ನು ಮುಟ್ಟಿ ಆರ್ಶೀವಧಿಸುತ್ತಾರೆ. ಹೆಂಗಸರು ಹಣ್ಣು ಕಾಯಿಗಳನ್ನು ಹೆಣ್ಣಿನ ಮಡಿಲಿಗೆ ಹಾಕುತ್ತಾರೆ. ನಂತರ ಬಂದ ನೆಂಟರಿಗಿಷ್ಟರೆಗೆಲ್ಲ ಊಟ ಸರಾಯಿಯನ್ನು ಸಮೃದ್ಧವಾಗಿ ಹಂಚಲಾಗುತ್ತದೆ. ಪ್ರಸ್ತಕ್ಕೆ ಮುಂಚೆ ಬಾಳೆ ಎಲೆ ಹಾಸಿ ೫ ಕಾಯಿ ೫ ಅಚ್ಚು ಬೆಲ್ಲ ೫ ಬಾಲೆಹಣ್ಣು ೫ ಎಲೆ ೫ ಅಡಿಕೆ ಪಾವಲಿಗಳನಿಟ್ಟು ದಂಪತಿಗಳು ಪೂಜೆ ಮಾಡುತ್ತಾರೆ. ಅದನ್ನು ಹೆಣ್ಣಿನ ಮನೆಯವರು ವಸ್ತ್ರದಲ್ಲಿ ಕಟ್ಟಿ ಗಂಡಿಗೆ ಕೊಡುತ್ತಾರೆ. ಮಾರನೇಯ ದಿನ ಅರಿಶಿನ ಮೈ ತೊಳೆಯುವ ಶಾಸ್ತ್ರವಿರುತ್ತದೆ. ಸ್ನಾನದ ನಂತರ ಕಂಕಣ ಬಿಚ್ಚಿ ಮರಕ್ಕೆ ಕಟ್ಟುತ್ತಾರೆ ಮತ್ತು ಧಾರೆಗಾಗಿ ಉಳಿದ ಕುಂಬದ ನೀರನ್ನು ಗಂಡ–ಹೆಂಡಿರಿಬ್ಬರು ಪವಿತ್ರವಾದ ಮರಕ್ಕೆ ಬಿಡುತ್ತಾರೆ. ಆ ದಿನವೇ ಗಂಡ ಹೆಂಡತಿಯನ್ನು ತನ್ನ ಮನೆಗೆ ಕರೆದುಕೊಂಡು ಹೋಗುತ್ತಾನೆ.

## ವಿಧವಾ ವಿವಾಹ

ವಿಧವಾ ವಿವಾಹವು ಮೇದರಲ್ಲಿ ಸಾಮಾನ್ಯವಾಗಿದೆ. ಅದನ್ನು ಉಡಿಕೆ ಮದುವೆಯೆನ್ನುವರು. ಆದರೆ ಹೆಣ್ಣು ಗಂಡನ ಸಹೋದರನನ್ನು ಮದುವೆಯಾಗಕೂಡದು. ವಿಧವೆಯನ್ನು ವಿಧುರನೊಬ್ಬ ಮದುವೆಯಾಗಲು ಜಾತಿಯಲ್ಲಿ ಅಡ್ಡಿಗಳಿರುವುದಿಲ್ಲ. ಮದುವೆಯಾಗದವನು ವಿಧವೆಯನ್ನು ಮದುವೆಯಾಗಬೇಕಾದರೆ ಅವನು ಮೊದಲು ಎಕ್ಕೆಯ ಗಿಡದೊಂದಿಗೆ ಮದುವೆಯಾಗಬೇಕಾಗುವುದು. ಈ ಮದುವೆಗೆ ಮುತ್ತೈದೆಯರು ಬರುವಂತಿಲ್ಲ. ಆದರೆ ವಿವಾಹದ ಭೋಜನಕ್ಕೆ ಬರುತ್ತಾರೆ. ವಧುವರರು ತಮ್ಮ ಮೊದಲ ರಾತ್ರಿಯನ್ನು ನೆರೆಯ ಗ್ರಾಮದಲ್ಲಿ ಕಳೆಯಬೇಕೆಂಬ ನಿಯಮವಿದೆ. ಮಾರನೇಯ ದಿನ ಅವರು ತಮ್ಮ ಮನೆಯಲ್ಲಿ ಇರಲು ಯಾವುದೇ ತೊಂದರೆ ಇಲ್ಲವೆಂದು ಭಾವಿಸುತ್ತಾರೆ. "ಮದುವೆಯಾದ ವಿಧವೆಯ ಮಕ್ಕಳಿಗೆ ಎಲ್ಲಾ ರೀತಿಯ ಹಕ್ಕುಗಳು ಇರುತ್ತವೆ. ಅವಳ ಮಕ್ಕಳು ಎಲ್ಲರಂತೆ ಮದುವೆಯಾಗಬಹುದಾಗಿದೆ. ವಿಧವೆಗೆ ಬರುವ ತೆರ ನ್ಯಾಯವಾಗಿ ಅವಳ ಮೊದಲ ಗಂಡನ ಕುಟುಂಬಕ್ಕೆ ಸೇರುತ್ತದೆ. ಮೇದರಲ್ಲಿ ವಿವಾಹ ವಿಚ್ಛೇದನಕ್ಕೂ ಅವಕಾಶವಿದೆ. ವಿವಾಹಿತ ಸ್ತ್ರೀ ವ್ಯಭಿಚಾರ ಮಾಡಿದಾಗ, ಗಂಡ ಕುಲಭ್ರಷ್ಟನಾದಾಗ, ಗಂಡ-ಹೆಂಡಿರಲ್ಲಿ ದೀರ್ಘಕಾಲದ ವಿರಸವಿದ್ದಾಗ ವಿಚ್ಚೇದನ ಪಡೆಯಬಹುದು. ಹೀಗೆ ವಿಚ್ಚೇದಿತಳಾದ ಸ್ತ್ರೀಯೂ ಕೂಡ 'ಸೀರುಡಿಗೆ' ರೀತಿಯ ವಿವಾಹವಾಗಬಹುದು. ವಿವಾಹಿತ ಸ್ತ್ರೀ ಅನ್ಯಕುಲದ ಪುರುಷನೊಂದಿಗೆ ಅನೈತಿಕ ಸಂಬಂದ ಹೊಂದಿದ್ದಾಗ ಆ ವ್ಯಕ್ತಿಯನ್ನು ಕುಲದೊಳಗೆ ಸೇರಿಸಿಕೊಂಡು ಅವನಿಗೆ ಮದುವೆ ಮಾಡಿಕೊಡುವರು. ಆದರೆ ಆಕೆಯ ಮೊದಲ ಗಂಡನ ವಿವಾಹದ ಖರ್ಚುನ್ನು ಕೊಡಬೇಕಾಗುತ್ತದೆ. ಅನೈತಿಕ ಸಂಬಂಧ ಹೊಂದಿರುವ ವ್ಯಕ್ತಿ ಕೀಳು ಜಾತಿಯವನಾಗಿದ್ದರೆ ಆಗ ವಿವಾಹಿತ ಸ್ತ್ರೀಯರನ್ನು ಜಾತಿಯಿಂದ ಹೊರಹಾಕಲಾಗುವುದು. ಕನ್ಯೆಯಾಗಿರುವವಳು ಗರ್ಬಿಣಿಯಾದರೆ ಅವಳು ಯಾರಿಂದ ಬಸುರಿಯಾದಳೋ ಅವನಿಗೆ ಒತ್ತಾಯ ಪೂರ್ವಕವಾಗಿ ಮದುವೆ ಮಾಡಲಾಗುತ್ತದೆ."(ಹೆಚ್ ಜಿ ಲಕ್ಕಪ್ಪಗೌಡ:೨೦೦೦:೫೫).

## ಜನನ

ಮೇದರಲ್ಲಿ ಹಿಂದೆ ಮನೆಯಲ್ಲೇ ಪ್ರತ್ಯೇಕ ಕೋಣೆಯಲ್ಲಿ ಹೆರಿಗೆಯನ್ನು ಜಾತಿಯ ಅಜ್ಜಿಯರು ಮಾಡಿಸುತ್ತಿದ್ದರು. ಮಾಸವನ್ನು ಯಾವುದಾದರೂ ಮರದಡಿಗೆ ತೆಗೆದುಕೊಂಡು ಹೋಗಿ ಹೂಳುತ್ತಾರೆ. ಸಾಮಾನ್ಯವಾಗಿ ಹೆರಿಗೆಯ ನಂತರ ೯ನೇ ದಿನ ಮನೆಗೆ ಗೋಮೂತ್ರ ಹಾಕಿ ಶುದ್ಧಪಡಿಸುತ್ತಾರೆ. ೧೧ದಿನ ಮನೆಯನ್ನು ಸೇರಿಸಿ ಶುದ್ಧಗೊಳಿಸಿ ಮಾವಿನ ಎಲೆ ಕಟ್ಟುತ್ತಾರೆ. ಭಾಣಂತಿಗೆ ಸೂಲಗಿತ್ತಿಯಾದವಳು ಮಡಿಕೆಯಲ್ಲಿ ನೀರು ತಂದು ಮೀಯಿಸುತ್ತಾಳೆ. ಮೇದರು ಮಕ್ಕಳನ್ನು ಬಿದಿರ ಬುಟ್ಟಿಯ ತೊಟ್ಟಿಲಿಗೆ ಹಾಕುವುದಿಲ್ಲ. ಬಟ್ಟೆಯ ಜೋಗುಳಿಯನ್ನು ಮಾಡಿ ಅದರ ಒಳಗೆ ಮಗುವನ್ನು ಮಲಗಿಸುತ್ತಾರೆ. ಮಗುವಿನ ಬಾಯಿಗೆ ತಂದೆ ಜೇನು ನೆಕ್ಕಿಸುತ್ತಾನೆ. ಮಗುವಿಗೆ ದೃಷ್ಟಿ ತಾಗದಿರಲೆಂದು ಮನೆಯ ಬಾಗಿಲಿಗೆ ಹಳೆ ಮೆಟ್ಟುಗಳನ್ನು ಕಟ್ಟುತ್ತಾರೆ. ಮನೆಯ ಮುಂಭಾಗಕ್ಕೆ ದೃಷ್ಟಿ ತಾಗದಿರುವ

ಅಂಕೋಲೆ ಗಿಡದ ಕೊನೆಗಳನ್ನು ಕಟ್ಟುತ್ತಾರೆ. ಈ ರೀತಿ ಮಾಡುವುದರಿಂದ ಭೂತ ಪ್ರೇತಗಳು ದುಷ್ಟಶಕ್ತಿಗಳು ಮಗುವಿಗೆ ಉಪದ್ರ ಮಾಡುವುದಿಲ್ಲ ಎಂದು ನಂಬುತ್ತಾರೆ.

**ಋತುಮತಿ**

ಮೇದರಲ್ಲಿ ಮೈನೆರೆದಾಗ ಸೋದರಮಾವನು ಬಂದು ಹೆಣ್ಣು ಎದ್ದು ಮಲಗಿ ಮಾಡಲು ಸ್ಥಳಾವಕಾಶವಿರುವಷ್ಟು ಸಣ್ಣಬಿದಿರಿನ ಗುಡಿಸಲು ಕಟ್ಟುತ್ತಾನೆ. ೧೧ ದಿವಸದವರೆಗೆ ಅವಳಿಗೆ ಊಟ ಉಪಚಾರ ಎಲ್ಲವೂ ಆ ಗುಡಿಸಲಿನಲ್ಲಿಯೇ ನಡೆಯಬೇಕಾಗುತ್ತದೆ. ೧೨ನೇ ದಿವಸ ೯ಜನ ಮುತ್ತೈದೆಯರು ಬಂದು ನೀರು ಕಾಯಿಸುತ್ತಾರೆ. ನೀರಿನ ಗುಡಾಣಕ್ಕೆ ಬೇವಿನ ಎಲೆ ಹಾಕುತ್ತಾರೆ. ಮನೆಯ ಹಿಂಭಾಗದ ಗುಡಿಸಲಿಗೂ ಈ ಸೊಪ್ಪನ್ನು ಹಾಕುತ್ತಾರೆ. ಈ ರೀತಿ ಮಾಡಿದರೆ ಗಾಳಿ, ಭೂತಗಳ ಹುಪದ್ರ, ಹಸಿಮೈಗೆ ತಾಗುವುದಿಲ್ಲವೆಂದು ನಂಬುತ್ತಾರೆ. ಆ ನಂತರ ಮುತ್ತೈದೆಯರು ಎಳ್ಳೆಣ್ಣೆ ಹಚ್ಚಿ ಹುಡುಗಿಗೆ ಸ್ನಾನ ಮಾಡಿಸುತ್ತಾರೆ. ಈ ರೀತಿಯ ಸೊಪ್ಪಿನ ನೀರಿನ ಸ್ನಾನವಾದ್ದರಿಂದ ಹುಡುಗಿಗೆ ಶೀತ, ಕೆಮ್ಮು ಉಂಟಾಗುವುದಿಲ್ಲವೆಂಬ ನಂಬಿಕೆಯೂ ಇವರಲ್ಲಿದೆ. ಮೈನೆರೆದ ಹುಡುಗಿಯ ಊಟಕ್ಕೆ ಹೆಚ್ಚಾಗಿ ಉದ್ದಿನಬೇಳೆಯ ಪದಾರ್ಥಗಳನ್ನು ಮಾಡಿ ಬಡಿಸುತ್ತಾರೆ. ಸಾಂಬಾರಕ್ಕೆ ಹೆಚ್ಚಾಗಿ ಅವರೆಕಾಳು, ಹೆಸರುಕಾಳು ಮುಂತಾದ ಕಾಳನ್ನು ಉಪಯೋಗಿಸುತ್ತಾರೆ. ತಿನ್ನಲು ಊಟವಾದ ನಂತರ ಕೊಬ್ಬರಿ ಮತ್ತು ಹುಚ್ಚೆಳ್ಳಿನ ಎಣ್ಣೆ ಸೇರಿಸಿ ಕೊಡುತ್ತಾರೆ. ಸೂತಕ ಕಳೆದ ತರುವಾಯ ಹುಡುಗಿ ಮಲಗಿದ ಗುಡಿಸಲನ್ನು ತಕ್ಷಣ ಸುಟ್ಟು ಹಾಕುತ್ತಾರೆ.

**ಸಾವು**

ಮೇದರಲ್ಲಿ ಗಂಡಸು ಸತ್ತಾಗ ಹೆಂಡತಿಯನ್ನು ಗಂಡನ ಹೆಣದ ಪಕ್ಕದಲ್ಲಿ ಕೂರಿಸುತ್ತಾರೆ. ಹೆಣದ ಹತ್ತಿರ ಕುಳಿತ ಹೆಂಡತಿ ವೀಳ್ಯವನ್ನು ಗಂಡನ ಮನೆಯ ಸಂಬಂಧಿಗಳಿಗೆ ಕೊಟ್ಟು ಗಂಡನಋಣ ತೀರಿತೆಂದು ಹೇಳುತ್ತಾಳೆ. ಹೆಣದ ಮುಂದೆ ಬೆಂಕಿ ಒಯ್ಯುವ ಪದ್ಧತಿ ಇಲ್ಲ. ಹೆಣದೊಂದಿಗೆ ಮೊಸರನ್ನದ ಕುಡಿಕೆ ಒಯ್ಯುತ್ತಾರೆ. ಸ್ಮಶಾನ ಹತ್ತಿರಕ್ಕೆ ಹೋದ ತರುವಾಯ ಮಧ್ಯದಲ್ಲಿ ಹೆಣವನ್ನು ಇಳಿಸಿ ಹೆಣದ ಮುಖನೋಡಿ ತರುವಾಯ ಮೊಸರನ್ನದ ಮಡಿಕೆಯನ್ನು ಒಡೆದು ಹಾಕುತ್ತಾರೆ. ಹೆಣವನ್ನು ಉತ್ತರಕ್ಕೆ ಕಾಲು ದಕ್ಷಿಣಕ್ಕೆ ತಲೆ ಇರುವಂತೆ ಹೂಳುವರು. ಮನೆಯ ಹಿರಿಯ ಮಗ ಅಥವಾ ಋಣ ತೀರಿಸುವ ವ್ಯಕ್ತಿಯು ಹೊಸ ಮಡಿಕೆಯಲ್ಲಿ ನೀರು ತೆಗೆದುಕೊಂಡು ಹೋಗಿ ಅದನ್ನು ಮೂರು ಸುತ್ತು ಗುಟ್ಟಿಗೆ ಸುತ್ತುವನು. ಪ್ರತಿ ಸುತ್ತಿಗೆ ಒಂದರಂತೆ ಮಾವನಾದವನು ಮಡಿಕೆಗೆ ತೂತು ಹಾಕುವನು ಕೊನೆಯ ಸುತ್ತಿನಲ್ಲಿ ತಲೆಭಾಗಕ್ಕೆ ಹಿಮ್ಮುಖವಾಗಿ ಮಡಿಕೆಯನ್ನು ನೆಲಕ್ಕೆ ಬೀಳಿಸುವರು. ನಂತರ ಬಾಯಿಬಡಿದುಕೊಂಡು ಬರುತ್ತಾರೆ. ಹೆಣ ಹೊತ್ತವರಿಗೆ ಹುಳಿ ನೀರಿನಿಂದ ಶುದ್ಧಗೊಳಿಸುತ್ತಾರೆ. ನಂತರ ಸ್ನಾನ ಮಾಡಿ ಮನೆಗೆ ಬರುತ್ತಾರೆ. ಸತ್ತ ಮಾರನೇಯ ದಿನ ಹಾಲು, ತುಪ್ಪ ಹಾಗೂ ಸಿಹಿ ಪದಾರ್ಥಗಳನ್ನು ಕೊಂಡು ತಂದು ಗುಟ್ಟಿಯ ಹತ್ತಿರ ಇಟ್ಟು ಬರುತ್ತಾರೆ. ಅದನ್ನು ಕಾಗೆಗಳು ಇತರ ಪ್ರಾಣಿಗಳು ತಿನ್ನುತ್ತವೆ. ಮತ್ತೆ ಹನ್ನೊಂದನೆ ದಿನ ಮಾಡಿದ ಅಡುಗೆಗಳನ್ನು ಗುಟ್ಟಿಯ ಹತ್ತಿರ ಒಯ್ದು

ಗುಟ್ಟಿ ಪೂಜೆ ಮಾಡಿ ಎಡೆ ಮಾಡಿ, ಆ ಎಡೆಯನ್ನು ಮನೆಗೆ ತರುವರು. ಅದನ್ನು ಕುಟುಂಬದ ಎಲ್ಲಾ ಸದಸ್ಯರು ಪ್ರಸಾದಂತೆ ತಿನ್ನುತ್ತಾರೆ. ತರುವಾಯ ಬಂಧುಬಳಗಕ್ಕೆ ಊಟ ಮಾಡಿಸಲಾಗುವುದು.

ಒಟ್ಟಾರೆಯಾಗಿ ನಾಯಕ, ಮೇದ, ಡುಂಗ್ರಿ ಗರಾಸಿಯಾ ಹಾಗೂ ಪಾರ್ಧಿ ಸಮುದಾಯಗಳು ಬುಡ್ಡಕಟ್ಟು ಸಮುದಾಯಗಳಾಗಿದ್ದರೂ ತಮ್ಮದೇ ಆದ ಆಚರಣೆ, ಭಾಷೆ, ವಿಧಿ ನಿಷೇಧಗಳಿಂದ ಭಿನ್ನವಾಗಿ ತೋರುವವು. ಹಾಗೆಯೇ ನೆಲೆಸಿಗ ಸಂಸ್ಕೃತಿಯನ್ನು ಮೈಗೂಡಿಸಿಕೊಂಡ ನಾಯಕ, ಮೇದ ಸಮುದಾಯಗಳಿಗೂ ಹಾಗೂ ಇನ್ನೂ ಅಲೆಮಾರಿತನವನ್ನು ಜೀವಂತವಾಗಿ ಉಳಿಸಿಕೊಂಡಿರುವ ಡುಂಗ್ರಿ ಗರಾಸಿಯಾ, ಪಾರ್ಧಿ ಬುಡಕಟ್ಟುಗಳ ಮಧ್ಯದ ವ್ಯತ್ಯಾಸಗಳನ್ನು ಅವುಗಳ ಆಚರಣೆಯ ಮೂಲ ತಿಳಿಯುವುದು.

**ಆಧಾರಗಳು**


ಎಡ್ಗರ್ ಥರ್ಸ್ಟನ್, ೧೯೦೯, ಕಾಷ್ಟ್ ಅಂಡ್ ಟ್ರೈಬ್ಸ್ ಇನ್ ಸದರ್ನ್ ಇಂಡಿಯಾ, ೧೩೪

ಕೃಷ್ಣಮೂರ್ತಿ ಹನೂರು, ೨೦೦೬, ಮ್ಯಾಸಬೇಡರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೪೯

ಜಗದೀಶ ಕೆ ಕೆ, ೨೦೦೮, ಡುಂಗ್ರಿ ಗರಾಸಿಯಾ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೩

ಅದೇ, ೨೦೦೮, ೩೪

ಅದೇ, ೨೦೦೮, ೪೫

ಅದೇ, ೨೦೦೮, ೩೮

ನಂಜುಂಡಯ್ಯ ಎಚ್ ವಿ ಮತ್ತು ಅನಂತಕೃಷ್ಣ ಅಯ್ಯರ್, ೧೯೯೪, ಮೈಸೂರು ಕಾಷ್ಟ್ ಅಂಡ್ ಟ್ರೈಬ್ಸ್, ೬೭

ಕಡ್ಲಬಾಳ್ ಪನ್ನಂಗಧರ, ೨೦೧೨, ಮೇಧ ಸಮುದಾಯದ ವಾಣಿಜ್ಯ ವ್ಯವಹಾರಗಳು, (ಅಪ್ರಕಟಿತ ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೪೯

ಅದೇ, ೨೦೧೨, ೩೯

ಪುಟ್ಟಣ್ಣ ಎಂ ಎಸ್, ೧೯೩೭, ಚಿತ್ರದುರ್ಗ ಜಿಲ್ಲೆಯ ಪಾಳೆಯಗಾರರು, ಮೈಸೂರು ರಾಜ್ಯ, ಬೆಂಗಳೂರು, ೨೩

ಅದೇ ೧೯೩೭, ೨೪

ಮೇತ್ರಿ ಕೆ ಎಂ, ೨೦೦೭, ಬುಡಕಟ್ಟು ಕುಲಕಸುಬುಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೧೨

ಅದೇ, ೨೦೦೭, ೧೧೩

ರಾಮಮೂರ್ತಿ, ೨೦೦೫, ಸೋಲಂಕಿ, ವಾಲ್ಮೀಕಿ ಮತ್ತು ರಾಮಾಯಣ, ಪತ್ರಿಕೆ ಪ್ರಕಾಶನ, ಮೈಸೂರು,೩೪

ಶಿಕಾರಿರಾಮು, ೨೦೦೮, ಪಾರ್ಧಿ, ೩೯

ಲಕ್ಕಪ್ಪಗೌಡ ಎಚ್ ಜೆ, ೨೦೦೦, ಕರ್ನಾಟಕ ಬುಡಕಟ್ಟುಗಳು: ಸಂಪು:೨, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೦೧-೫೫

# ಅಧ್ಯಾಯ: ಆರು
# ಬಳ್ಳಾರಿ ಜಿಲ್ಲೆಯ ಬುಡಕಟ್ಟು ಮಹಿಳಾ ಸಬಲೀಕರಣದ ಆಯಾಮಗಳು

೬.೧ ಬುಡಕಟ್ಟು ಮಹಿಳಾ ಸಾಮಾಜಿಕ ಸಬಲೀಕರಣ

೬.೨ ಬುಡಕಟ್ಟು ಮಹಿಳಾ ಆರ್ಥಿಕ ಸಬಲೀಕರಣ

೬.೩ ಬುಡಕಟ್ಟು ಮಹಿಳಾ ಶೈಕ್ಷಣಿಕ ಸಬಲೀಕರಣ

೬.೪ ಬುಡಕಟ್ಟು ಮಹಿಳಾ ಭೌತಿಕ ಸಬಲೀಕರಣ

೬.೫ ಬುಡಕಟ್ಟು ಮಹಿಳಾ ರಾಜಕೀಯ ಸಬಲೀಕರಣ

೬.೬ ಮಹಿಳೆಯರ ನಿರ್ಧಾರ ಮತ್ತು ಸಶಕ್ತೀಕರಣದ ಪ್ರಕ್ರಿಯೆ

# ಅಧ್ಯಾಯ : ಆರು

# ಬಳ್ಳಾರಿ ಜಿಲ್ಲೆಯ ಬುಡಕಟ್ಟು ಮಹಿಳಾ ಸಬಲೀಕರಣದ ಆಯಾಮಗಳು

ಯಾವುದೇ ಒಂದು ದುರ್ಬಲ ವರ್ಗವನ್ನು ಸಬಲಗೊಳಿಸಲು ಕೇವಲ ಒಂದು ಆಯಾಮದಿಂದ ಮಾತ್ರ ಸಾಧ್ಯವಾಗಲಾರದು. ಅದರಲ್ಲೂ ಸಮಾಜದಲ್ಲಿ ಮುಖ್ಯವಾಗಿದ್ದೂ ಅಮುಖ್ಯವೆಂದು ಪರಿಗಣಿಸಲ್ಪಟ್ಟ ಮಹಿಳೆಯರು ಈ ಪುರುಷಶಾಹಿ ವ್ಯವಸ್ಥೆಯಲ್ಲಿ ದುರ್ಬಲರಾಗಿರುವುದು ಮೇಲ್ನೋಟಕ್ಕೆ ಕಂಡುಬರುವುದು. ಪುರುಷಶಾಹಿ ವ್ಯವಸ್ಥೆಯು ಎಲ್ಲಾ ರಂಗಗಳಲ್ಲೂ ತನ್ನ ಕಬಂಧಬಾಹುವನ್ನು ಚಾಚಿರುವ ಈ ಸಂದರ್ಭದಲ್ಲಿ ಮಹಿಳೆಯು ಪುರುಷನಿಗೆ ಸಮಾನವಾಗಿ ಗೋಚರಿಸುವುದು ಪುರುಷ ವರ್ಗಕ್ಕೆ ಸಹಿಸಲ ಸಾಧ್ಯವಾದ ವಿಚಾರವಾಗಿದೆ.

### ೬.೧. ಸಾಮಾಜಿಕ ಸಬಲೀಕರಣ

ಸಾಮಾಜಿಕವಾಗಿ ಪುರುಷನ ನಡೆಯಲ್ಲಿ ತಪ್ಪುಗಳಾದರೆ ತಪ್ಪೆಂದು ಪರಿಗಣಿಸುವುದು ಅಪರೂಪ. ಆದರೆ ಅದೇ ತಪ್ಪುಗಳನ್ನು ಮಹಿಳೆ ಮಾಡಿದರೆ ಪುರುಷಶಾಹಿ ವ್ಯವಸ್ಥೆಯು ಹೆಣ್ಣನ್ನು ನೋಡುವ ದೃಷ್ಟಿಕೋನವೇ ಬದಲಾಗುತ್ತದೆ. ಹೆಣ್ಣು ಸಾಮಾಜಿಕವಾಗಿ ಬಹಿಷ್ಕೃತಳಾಗುತ್ತಾಳೆ. ಉದಾಹರಣೆಗೆ ಗಂಡು ಪರಸ್ತ್ರೀಯರ ಜೊತೆಗೆ ಅನೈತಿಕವಾಗಿ ನಡೆದುಕೊಂಡರೆ ಅವನಿಗೆ ಸಾಮಾಜಿಕವಾಗಿ ಅಷ್ಟೇನೂ ಘಾಸಿಯಾಗದು. "ಆಳುವವನಿಗೆ ಅರವತ್ತು ಜನ ಹೆಣ್ಣುಗಳು" ಎಂಬ ಗಾದೆಯನ್ನು ಪುರುಷನೇ ಸ್ವಯಂ ಸೃಷ್ಟಿಸಿಕೊಂಡಿರುವನೇನೊ. ಆದರೆ ಅದೇ ಮಾತು ಮಹಿಳೆಗೆ ಅನ್ವಯವಾಗುವುದಿಲ್ಲ. ಅವಳು ಪರಪುರುಷನೊಂದಿಗೆ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವುದು ಅಕ್ಷಮ್ಯ ಅಪರಾಧವೆಂದೇ ಪುರುಷ ಪ್ರಧಾನ ವ್ಯವಸ್ಥೆ ಭಾವಿಸುತ್ತದೆ. ಮೇಲ್ವರ್ಗದ ಸಮಾಜದ ರೀತಿ ರಿವಾಜುಗಳಲ್ಲಿ ಕಂಡುಬರುವ ಸಾಮಾನ್ಯ ವಿಚಾರವಿದು. ನಾಗರಿಕ ಬದುಕಿನಿಂದ ದೂರವಿರುವ ಅಲೆಮಾರಿ ಬುಡಕಟ್ಟು ಸಮುದಾಯಗಳಲ್ಲಿ ಬಹುತೇಕ ಗಂಡು ಹೆಣ್ಣುಗಳಲ್ಲಿ ಸಮಾನತೆ ಎದ್ದು ಕಾಣುವುದು. ಈ ಸಮುದಾಯಗಳು ಮೂಲತಃ ಮಾತೃಪ್ರಧಾನ ವ್ಯವಸ್ಥೆಯಿಂದ ಬಂದವುಗಳಾದುದರಿಂದ ಬಹುತೇಕ ಕುಟುಂಬದೊಳಗಿನ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಮಹಿಳೆಯರೇ ಪ್ರಧಾನ ಪಾತ್ರ ವಹಿಸುವರು. ಹೀಗಿದ್ದಾಗಲೂ ಕೂಡ ಸಾಮಾಜಿಕವಾಗಿ ಬಾಹ್ಯ ಪ್ರಪಂಚದಲ್ಲಿ ಮಹಿಳೆಯರಿಗೆ ನಿರ್ಣಯ

ತೆಗೆದುಕೊಳ್ಳುವ ಹಕ್ಕುಗಳು ಅತ್ಯಂತ ಕಡಿಮೆಯಂದೇ ಹೇಳಬಹುದು. ಆದರೆ ನೆಲೆನಿಂತ ಬುಡಕಟ್ಟುಗಳಲ್ಲಿ ಗಂಡು-ಹೆಣ್ಣುಗಳ ಮಧ್ಯದ ತಾರತಮ್ಯಗಳು ಸಹಜ ಸ್ವಭಾವವೆಂಬಂತೆ ಕಂಡುಬರುವವು. ಪ್ರಾಯಶಃ ತಮ್ಮ ಸುತ್ತಮುತ್ತಲು ನೆಲೆಸಿರುವ ಮೇಲ್ವರ್ಗಗಳ ಪ್ರಭಾವ ಈ ಬುಡಕಟ್ಟುಗಳ ಮೇಲಾಗಿರುವ ಸಾಧ್ಯತೆ ಇದೆ. ಆದರೆ ಬುಡಕಟ್ಟುಗಳಲ್ಲಿ ನ್ಯಾಯನಿರ್ಣಯ ಕೈಗೊಳ್ಳುವ, ಅಧಿಕಾರ ಸ್ಥಾನಗಳನ್ನು ಅಲಂಕರಿಸುವವರು ಪುರುಷರೇ ಆಗಿರುವುದನ್ನು ಕಾಣುತ್ತೇವೆ. ಈ ಸಮುದಾಯಗಳಲ್ಲಿ ತಪ್ಪಿಗೆ ಶಿಕ್ಷೆಯನ್ನು ವಿಧಿಸುವಾಗ ಗಂಡು-ಹೆಣ್ಣುಗಳೆಂಬ ಬೇಧವನ್ನು ಮಾಡುವುದಿಲ್ಲ. ತಪ್ಪು ಮಾಡಿದವರಿಗೆ ತಮ್ಮಿಂದ ಶಿಕ್ಷೆ ವಿಧಿಸಲು ಸಾಧ್ಯವಾಗದಿದ್ದಲ್ಲಿ ಬುಡಕಟ್ಟು ಸಮುದಾಯಗಳು ತಾವು ನಂಬಿದ ದೈವಗಳಿಗೆ ಮೊರೆಹೋಗುವರು. ಬುಡಕಟ್ಟುಗಳಲ್ಲಿ ಸಾಮಾನ್ಯವಾಗಿ ಮನೆಯ ಹೊರಗಿನ ವ್ಯವಹಾರದ ಹೊಣೆಯನ್ನು ಪುರುಷ ವಹಿಸಿದರೆ ಮನೆ ಒಳಗಿನ ವ್ಯವಹಾರಗಳನ್ನು ಮಹಿಳೆ ವಹಿಸಿಕೊಳ್ಳುವಳು. ಈ ಇಬ್ಬರೂ ತಮ್ಮ ಕ್ಷೇತ್ರವನ್ನು ಮೀರಿ ಇನ್ನೊಬ್ಬರ ಕ್ಷೇತ್ರಕ್ಕೆ ಪ್ರವೇಶಗೊಳ್ಳುವುದು ಅಪರೂಪ. ಉದಾಹರಣೆಗೆ ಮಹಿಳೆಯ ಜವಬ್ದಾರಿಗಳನ್ನು ಮಹಿಳೆಯೇ ನಿಭಾಯಿಸುವಳು. ಅದರೊಳಗೆ ಪುರುಷ ಪ್ರವೇಶ ಮಾಡುವುದಿಲ್ಲ. ಪುರುಷನ ಜವಬ್ದಾರಿಯನ್ನು ಪುರುಷನೇ ನಿಭಾಯಿಸುವನು. ಅದರೊಳಗೆ ಮಹಿಳೆ ಪ್ರವೇಶಗೊಳ್ಳುವುದಿಲ್ಲ.


ಮಹಿಳೆಯನ್ನು ಸಾಮಾಜಿಕವಾಗಿ ಸಬಲೀಕರಣಗೊಳಿಸಲೆಂದೇ ಸರ್ಕಾರವು ಹತ್ತು ಹಲವು ಯೋಜನೆಗಳನ್ನು ಹಮ್ಮಿಕೊಂಡಿರುವುದು. ಅವುಗಳಲ್ಲಿ ಕೆಲವು ಯೋಜನೆಗಳನ್ನು ಇಲ್ಲಿ ನೋಡಲಾಗಿದ್ದು ಬುಡಕಟ್ಟು ಮಹಿಳೆಯರ ಸಾಮಾಜಿಕ ಸಬಲೀಕರಣಕ್ಕೆ ಈ ಯೋಜನೆಗಳು ಎಷ್ಟು ಪೂರಕವಾಗಿ ಕಾರ್ಯನಿರ್ವಹಿಸಿವೆ ಎಂಬುದನ್ನು ನೋಡಲಾಗಿದೆ. ಕರ್ನಾಟಕದಲ್ಲಿ ಐವತ್ತು ಅನುಸೂಚಿತ ಬುಡಕಟ್ಟುಗಳಿವೆ. ಅವುಗಳಲ್ಲಿ ಬಳ್ಳಾರಿ ಜಿಲ್ಲೆಯಲ್ಲಿರುವ ಮುಖ್ಯವಾದ ಬೇಡ, ಮೇದ, ಡುಂಗ್ರಿಗರಾಸಿಯಾ, ಪಾರ್ಧಿ ಬುಡಕಟ್ಟು ಸಮುದಾಯಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದು ಆಯ್ಕೆ ವಿಧಾನವನ್ನು ಅನುಸರಿಸಲಾಗಿದೆ. ಪ್ರತಿ ಬುಡಕಟ್ಟಿನಿಂದಲೂ ಒಂದು ನೂರು ಕುಟುಂಬಗಳನ್ನು ಆಯ್ದುಕೊಳ್ಳಲಾಗಿದೆ.

**ಕೋಷ್ಟಕ ೬.೧ ಬಳ್ಳಾರಿ ಜಿಲ್ಲೆಯ ಬುಡಕಟ್ಟುಗಳ ಒಟ್ಟು ಕುಟುಂಬಗಳು ಹಾಗೂ ಆಯ್ಕೆ ಮಾಡಿಕೊಂಡ ಕುಟುಂಬಗಳು**

| ಕ್ರಸಂ | ಸಮುದಾಯಗಳು | ಒಟ್ಟು ಕುಟುಂಬಗಳು | ಅಧ್ಯಯನಕ್ಕೊಳಪಡಿಸಿದ ಕುಟುಂಬಗಳು |
|---|---|---|---|
| ೧ | ಬೇಡ | ೮೬೦೦೦ | ೧೦೦ |
| ೨ | ಮೇದ | ೫೦೦ | ೧೦೦ |
| ೩ | ಡುಂಗ್ರಿಗರಾಸಿಯಾ | ೧೨೦ | ೧೦೦ |
| ೪ | ಪಾರ್ಧಿ | ೨೫೦ | ೧೦೦ |

ಆಧಾರ: ೨೦೧೧ರ ಜನಗಣತಿ ವರದಿ

**೬.೧. ಬಳ್ಳಾರಿ ಜಿಲ್ಲೆಯ ಬುಡಕಟ್ಟುಗಳ ಒಟ್ಟು ಕುಟುಂಬಗಳು ಹಾಗೂ ಆಯ್ಕೆ ಮಾಡಿಕೊಂಡ ಕುಟುಂಬಗಳು**





ಬಳ್ಳಾರಿ, ರಾಯಚೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಅತೀ ಹೆಚ್ಚು ಬೇಡ ಸಮುದಾಯದ ಕುಟುಂಬಗಳಿವೆ. ಬೇಡ ಸಮುದಾಯದ ಒಟ್ಟು ೮೬,೦೦೦ ಕುಟುಂಬಗಳು ಬಳ್ಳಾರಿ ಜಿಲ್ಲೆಯಲ್ಲಿ ನೆಲೆಸಿವೆ. ಬೇಡ ಸಮುದಾಯಕ್ಕೆ ಹೋಲಿಕೆ ಮಾಡಿದರೆ ಮೇದ, ಡುಂಗ್ರಿಗರಾಸಿಯಾ, ಪಾರ್ಧಿ ಬುಡಕಟ್ಟುಗಳ ಸಂಖ್ಯೆ ಬಳ್ಳಾರಿ ಜಿಲ್ಲೆಯಲ್ಲಿ ಅತ್ಯಂತ ಕಡಿಮೆ ಇದೆ. ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ನಾಲ್ಕು ಸಮುದಾಯಗಳಲ್ಲಿ ಡುಂಗ್ರಿಗರಾಸಿಯಾ ಸಮುದಾಯದ ಜನಸಂಖ್ಯೆ ಅತ್ಯಂತ ಕಡಿಮೆ ಇದೆ. ೨೦೧೧ರ ಜನಗಣತಿ ಪ್ರಕಾರ ಬಳ್ಳಾರಿ ಜಿಲ್ಲೆಯಲ್ಲಿ ನೆಲೆಸಿರುವ ಡುಂಗ್ರಿ ಗರಾಸಿಯಾ ಸಮುದಾಯದ ಒಟ್ಟು ಜನಸಂಖ್ಯೆ ೯೭, ಇದರಲ್ಲಿ ಪುರುಷರು ೪೬, ಮಹಿಳೆಯರು ೫೧ ಜನ ದಾಖಲಾಗಿರುವರು. ಆದರೆ ಕ್ಷೇತ್ರಕಾರ್ಯ ಸಂದರ್ಭದಲ್ಲಿ ೧೨೦ ಕುಟುಂಬಗಳು ಇರುವುದು ಕಂಡುಬಂದಿತು. ಅದೇ ರೀತಿಯಾಗಿ ಪಾರ್ಧಿ ಸಮುದಾಯದ ಜನಸಂಖ್ಯೆ ೭೨೨, ಇದರಲ್ಲಿ ಪುರುಷರು ೩೭೯, ಮಹಿಳೆಯರು ೩೪೩ ಎಂದು ದಾಖಲಾಗಿದೆ. ಆದರೆ ವಾಸ್ತವವಾಗಿ ೨೫೦ಕ್ಕೂ ಮೇಲ್ಪಟ್ಟು ಕುಟುಂಬಗಳಿದ್ದು ೧೦೦೦ಕ್ಕೂ ಮೇಲ್ಪಟ್ಟು ಜನಸಂಖ್ಯೆಯು ಬಳ್ಳಾರಿ ಜಿಲ್ಲೆಯಲ್ಲಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿತು. ಪ್ರಾಯಶಃ ಡುಂಗ್ರಿ ಗರಾಸಿಯಾ ಮತ್ತು ಪಾರ್ಧಿ ಸಮುದಾಯಗಳು ಇಂದಿಗೂ ಅಲೆಮಾರಿತನವನ್ನು ಉಳಿಸಿಕೊಂಡಿರುವುದು ಇದರಿಂದ ತಿಳಿದುಬರುತ್ತದೆ. ಆದರೆ ಬೇಡ ಮತ್ತು ಮೇದ ಸಮುದಾಯಗಳು ತುಂಬಾ ಹಿಂದೆಯೇ ಅಲೆಮಾರಿತನದಿಂದ ದೂರಸರಿದು ನೆಲೆನಿಂತಿರುವುದು ಕಂಡುಬರುತ್ತಿದೆ. ಈ ನಾಲ್ಕು ಸಮುದಾಯಗಳಲ್ಲಿ ಪ್ರತಿ ಸಮುದಾಯಕ್ಕೆ ಒಂದು ನೂರರಂತೆ ೪೦೦ ಕುಟುಂಬಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದ್ದು ಆ ಕುಟುಂಬಗಳಲ್ಲಿ ಎಷ್ಟು ಮಹಿಳೆಯರಿಗೆ ಮಹಿಳಾ ಸಬಲೀಕರಣಕ್ಕಾಗಿ ರೂಪಿಸಿದ ಕಾರ್ಯಕ್ರಮಗಳು ತಲುಪಲು ಸಾಧ್ಯವಾಗಿದೆ ಎಂಬುದನ್ನು ನೋಡಲಾಗಿದೆ.

| ಕೋಷ್ಟಕ ೬.೨ ಅಧ್ಯಯನಕ್ಕೊಳಪಟ್ಟ ಬುಡಕಟ್ಟುಗಳ ಕುಟುಂಬವಾರು ಜನಸಂಖ್ಯೆ | | | | | | |
|---|---|---|---|---|---|---|
| ಕ್ರಸಂ | ಸಮುದಾಯಗಳು | ಅಧ್ಯಯನಕ್ಕೊಳಪಟ್ಟ ಕುಟುಂಬಗಳು | ಒಟ್ಟು | ಗಂಡು | ಹೆಣ್ಣು | ಲಿಂಗಾನುಪಾತ |
| ೧ | ಬೇಡ | ೧೦೦ | ೫೧೦ | ೨೫೦ | ೨೬೦ | ೧೦೪೦ |
| ೨ | ಮೇದ | ೧೦೦ | ೫೧೫ | ೨೬೦ | ೨೫೫ | ೯೮೦ |
| ೩ | ಡುಂಗ್ರಿಗರಾಸಿಯಾ | ೧೦೦ | ೫೨೦ | ೨೫೬ | ೨೬೪ | ೧೦೩೧ |
| ೪ | ಪಾರ್ಧಿ | ೧೦೦ | ೫೧೧ | ೨೫೩ | ೨೫೮ | ೧೦೧೯ |
| | ಒಟ್ಟು | ೪೦೦ | ೨೦೫೬ | ೧೦೧೯ | ೧೦೩೭ | ೧೦೧೭ |

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೆ

ಲಂಬ ಚಿತ್ರ ೬.೨. ಅಧ್ಯಯನಕ್ಕೊಳಪಟ್ಟ ಬುಡಕಟ್ಟುಗಳ ಕುಟುಂಬವಾರು ಜನಸಂಖ್ಯೆ




ಸಮೀಕ್ಷೆಗೆ ಆಯ್ಕೆ ಮಾಡಿಕೊಂಡ ನಾಯಕ ಸಮುದಾಯದ ಒಂದು ನೂರು ಕುಟುಂಬಗಳಲ್ಲಿ ಒಟ್ಟು ಜನಸಂಖ್ಯೆಯು ೫೧೦ ಇದೆ. ಇದರಲ್ಲಿ ಪುರುಷರು ೨೫೦ ಮಹಿಳೆಯರು ೨೬೦ ಜನರಿರುವರು. ಮೇದ ಸಮುದಾಯದ ಒಂದು ನೂರು ಕುಟುಂಬದಲ್ಲಿ ಒಟ್ಟು ೫೧೫ ಜನಸಂಖ್ಯೆ ಇರುವುದು. ಇದರಲ್ಲಿ ಪುರುಷರು ೨೬೦ ಮಹಿಳೆಯರು ೨೫೫ ಜನರಿರುವರು. ಡುಂಗ್ರಿ ಗರಾಸಿಯಾ ಸಮುದಾಯದ ಒಂದು ನೂರು ಕುಟುಂಬದಲ್ಲಿ ಒಟ್ಟು ೫೨೦ ಜನಸಂಖ್ಯೆ ಇರುವುದು. ಇದರಲ್ಲಿ ಪುರುಷರು ೨೫೬ ಮಹಿಳೆಯರು ೨೬೪ ಜನರಿರುವರು. ಪಾರ್ಧಿ ಸಮುದಾಯದ ಒಂದು ನೂರು ಕುಟುಂಬದಲ್ಲಿ ಒಟ್ಟು


೫೧೧ ಜನಸಂಖ್ಯೆ ಇರುವುದು. ಇದರಲ್ಲಿ ಪುರುಷರು ೨೫೩ ಮಹಿಳೆಯರು ೨೫೮ ಜನರಿರುವರು. ನಾಲ್ಕು ಸಮುದಾಯಗಳಿಂದ ಸಮೀಕ್ಷೆಗೆ ಒಳಪಡಿಸಿದ ಒಟ್ಟು ಕುಟುಂಬಗಳು ನಾಲ್ಕು ನೂರು. ಇದರಲ್ಲಿ ಪುರುಷರು ೧,೦೭೯, ಮಹಿಳೆಯರು ೧,೦೩೭ ಜನರಿರುವರು. ಅಂದರೆ ಪುರುಷರು ಶೇಕಡ ೪೯.೫೬, ಮಹಿಳೆಯರು ಶೇಕಡ ೫೦.೪೪ ಇರುವರು.

| ಕೋಷ್ಟಕ ೬.೩ ಬುಡಕಟ್ಟು ಸಮುದಾಯಗಳ ಮಹಿಳೆಯರ ವೈವಾಹಿಕ ಸ್ಥಾನಮಾನ | | | | | |
|---|---|---|---|---|---|
| ಕ್ರಸಂ | ಸಮುದಾಯ | ವಿವಾಹಿತರು | ಅವಿವಾಹಿತರು | ವಿಧವೆ | ದೇವದಾಸಿ |
| ೧ | ಬೇಡ | ೧೨೦ | ೫೧ | ೧೦ | ೩೧ |
| ೨ | ಮೇದ | ೧೫೭ | ೩೬ | ೧೨ | – |
| ೩ | ಡುಂಗ್ರಿಗರಾಸಿಯಾ | ೧೭೫ | ೧೨ | ೧೩ | – |
| ೪ | ಪಾರ್ಧಿ | ೧೭೮ | ೧೮ | ೧೪ | – |
| | ಒಟ್ಟು | ೬೩೦ | ೧೧೭ | ೪೯ | ೩೧ |

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೆ

ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಬುಡಕಟ್ಟುಗಳಲ್ಲಿ ಹುಟ್ಟಿನಲ್ಲಿಯೇ ಹೆಣ್ಣು ಗಂಡನ್ನು ಗುರುತಿಸಿ ಖಾಯಂ ಮಾಡುವ ಪದ್ಧತಿ ಇತ್ತು. ಆದರೆ ಅದರ ಪ್ರಮಾಣ ಇತ್ತೀಚೆಗೆ ಕಡಿಮೆಯಾಗುತ್ತಿದೆ. ಹಾಗೆಯೇ ೬ ವರ್ಷದೊಳಗಿನ ಮಕ್ಕಳಿಗೆ ಮದುವೆ ಮಾಡುವುದೂ ನಿಂತಿದೆ. ಆದರೆ ಹುಡುಗಿ ೧೮ ವರ್ಷ ತುಂಬುವುದರೊಳಗೆ ಮದುವೆ ಮಾಡುವುದೇ ಹೆಚ್ಚು. ಹುಡುಗಿಗೆ ೧೮ ವರ್ಷ ಪೂರ್ಣಗೊಳ್ಳುವ ಪೂರ್ವದಲ್ಲಿ ಹಾಗೂ ಹುಡುಗನಿಗೆ ೨೧ ವರ್ಷವಾಗುವರೆಗೆ ವಿವಾಹ ಮಾಡುವುದು ಭಾರತೀಯ

ವೃತ್ತ ಚಿತ್ರ ೬.೩. ಬುಡಕಟ್ಟು ಸಮುದಾಯಗಳ ಮಹಿಳೆಯರ ವೈವಾಹಿಕ ಸ್ಥಾನಮಾನ




ಕಾನೂನಿನ ಪ್ರಕಾರ ಅಪರಾಧವೆಂದು ಪರಿಗಣಿಸಲಾಗಿದೆ. ಆದರೆ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬೇಡ, ಮೇದ, ಡುಂಗ್ರಿಗರಾಸಿಯಾ, ಪಾರ್ಧಿ ಸಮುದಾಯಗಳಲ್ಲಿ ಮಹಿಳೆಗೆ ೧೮ ವರ್ಷ ಪೂರ್ಣಗೊಳ್ಳುವ ಪೂರ್ವದಲ್ಲಿಯೇ ಮದುವೆ ಮಾಡಿರುವುದು ಕಂಡುಬರುವುದು. ಆದರೆ ಸುದೈವವೆಂದರೆ ೦-೬ ವಯೋಮಾನದ ಮಕ್ಕಳಿಗೆ ಮದುವೆ ಮಾಡುತ್ತಿಲ್ಲ. ಸಾಮಾನ್ಯವಾಗಿ ಹುಡುಗಿಯರು ಮೈನೆರೆಯುವುದು ೧೩-೧೪ರ ವಯೋಮಾನದಲ್ಲಿ. ಮೈನೆರದ ತರುವಾಯ ಹುಡುಗಿಯರಿಗೆ ಮದುವೆ ಮಾಡುವುದರ ಕಡೆಗೇ ಪಾಲಕರ ಲಕ್ಷ್ಯವಿರುವುದು. ಬೇಡ ಸಮುದಾಯದಲ್ಲಿ ೧೨೦ ವಿವಾಹಿತ ಮಹಿಳೆಯರಿರುವರು. ೫೧ ಅವಿವಾಹಿತ ಮಹಿಳೆಯರಿರುವರು. ೧೦ ಜನ ವಿಧವೆಯರಿರುವರು. ಪ್ರಮಾಣದಲ್ಲಿ ೩೧ ದೇವದಾಸಿಯರಿರುವರು. ಇತ್ತೀಚಿನ ಹುಡುಗಿಯರು ದೇವದಾಸಿಯಾಗಲು ಇಷ್ಟಪಡುವುದಿಲ್ಲ. ಹೀಗಾಗಿ ಹದಿಹರೆಯದವರಲ್ಲಿ ದೇವದಾಸಿಯಾಗಿರುವವರ ಪ್ರಮಾಣ ಕಡಿಮೆ ಇದೆ. ಆದರೆ ಮಧ್ಯವಯಸ್ಕರು ಹಾಗೂ ವೃದ್ಧರಲ್ಲಿ ದೇವದಾಸಿಯರ ಪ್ರಮಾಣ ಅಧಿಕವಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ನಾಲ್ಕು ಸಮುದಾಯಗಳಲ್ಲಿ ದೇವದಾಸಿ ಪದ್ಧತಿ ರೂಢಿಯಲ್ಲಿರುವುದು ಕೇವಲ ಬೇಡ ಸಮುದಾಯದಲ್ಲಿ ಮಾತ್ರವಾಗಿದೆ.

ಮೇದ ಸಮುದಾಯದಲ್ಲಿ ವಿವಾಹಿತ ಮಹಿಳೆಯರು ಒಟ್ಟು ೧೫೭ ಜನರಿರುವರು. ಇವರಲ್ಲಿಯೂ ೧೮ ವರ್ಷ ಪೂರ್ಣಗೊಳ್ಳುವ ಪೂರ್ವದಲ್ಲಿಯೇ ವಿವಾಹವಾಗಿರುವ ಮಹಿಳೆಯರು ಕಾಣಸಿಗುವರು. ಅವಿವಾಹಿತರು ೩೬ ಮಹಿಳೆಯರಿರುವರು. ವಿಧವೆಯರು ೧೨ ಜನರಿರುವರು. ಡುಂಗ್ರಿಗರಾಸಿಯಾ ಸಮುದಾಯದಲ್ಲಿ ೧೭೫ ವಿವಾಹಿತ ಮಹಿಳೆಯರಿದ್ದರೆ ೧೨ ಅವಿವಾಹಿತ ಮಹಿಳೆಯರಿರುವರು. ೧೩ ವಿಧವೆಯರಿರುವರು. ಪಾರ್ಧಿ ಸಮುದಾಯದಲ್ಲಿ ೧೭೮ ವಿವಾಹಿತ ಮಹಿಳೆಯರು ೧೮ ಅವಿವಾಹಿತರು ಹಾಗೂ ೧೪ ವಿಧವೆಯರಿರುವರು. ಸಮೀಕ್ಷೆಗೊಳಪಡಿಸಿದ ಒಟ್ಟು ಮಹಿಳೆಯರಲ್ಲಿ ಶೇಕಡ ೭೬.೧೮ ವಿವಾಹಿತರು, ಶೇಕಡ ೧೪.೧೫ ಅವಿವಾಹಿತರು, ಶೇಕಡ ೫.೯೩ ವಿಧವೆಯರು ಹಾಗೂ ಶೇಕಡ ೩.೭೪ರಷ್ಟು ದೇವದಾಸಿಯರು ಇರುವರು

**ಕೋಷ್ಟಕ ೬.೪ ವಿಧವೆಯರ ಪುನರ್ವಸತಿ ಯೋಜನೆಯಡಿ ಸೂರನ್ನು ಹೊಂದಿದವರ ವಿವರ**

| ಕ್ರಸಂ | ಸಮುದಾಯ | ವಿಧವೆಯರ ಸಂಖ್ಯೆ | ಪುನರ್ವಸತಿ ಸೌಲಭ್ಯ ಪಡೆದವರು | ಪುನರ್ವಸತಿ ಸೌಲಭ್ಯ ಪಡೆಯದವರು |
|---|---|---|---|---|
| ೧ | ಬೇಡ | ೧೦ | ೦೭ | ೦೩ |
| ೨ | ಮೇದ | ೧೨ | ೦೮ | ೦೪ |
| ೩ | ಡುಂಗ್ರಿಗರಾಸಿಯ | ೧೩ | ೦೧ | ೧೨ |
| ೪ | ಪಾರ್ಧಿ | ೧೪ | ೦೧ | ೧೩ |
| | ಒಟ್ಟು | ೪೯ | ೧೭ | ೩೨ |

**ವೃತ್ತ ಚಿತ್ರ ೬.೪ ವಿಧವೆಯರ ಪುನರ್ವಸತಿ ಯೋಜನೆಯಡಿ ಸೂರನ್ನು ಹೊಂದಿದವರ ವಿವರ**




**ವಿಧವೆಯರ ಪುನರ್ವಸತಿ ಯೋಜನೆಯಡಿ ಸೂರನ್ನು ಹೊಂದಿದವರು**

ವಿಧವೆಯರಿಗಾಗಿ ಸರ್ಕಾರವು ವಸತಿ ಕಲ್ಪಿಸುವ ಯೋಜನೆಯೊಂದು ಜಾರಿಯಲ್ಲಿದೆ. ಈ ಯೋಜನೆಯಡಿ ಬೇಡ ಸಮುದಾಯದ ೧೦ ವಿಧವೆಯರಲ್ಲಿ ೭ವಿಧವೆಯರು ವಸತಿ ಯೋಜನೆಯ ಲಾಭವನ್ನು ಪಡೆದಿರುವುದು ಕ್ಷೇತ್ರಕಾರ್ಯದಲ್ಲಿ ತಿಳಿದುಬಂದಿತು. ಮೇದ ಸಮುದಾಯದ ೧೨ ವಿಧವೆಯರಲ್ಲಿ ೮ ಜನ ವಸತಿ ಸೌಲಭ್ಯವನ್ನು ಪಡೆದಿರುವವರು. ಇನ್ನುಳಿದ ನಾಲ್ಕು ಜನಕ್ಕೆ ವಸತಿ ಸೌಲಭ್ಯ ದೊರೆತಿರುವುದಿಲ್ಲ. ಡುಂಗ್ರಿಗರಾಸಿಯಾದಲ್ಲಿ ೧೩ ವಿಧವೆಯರಿದ್ದು ಮರಿಯಮ್ಮನಹಳ್ಳಿಯಲ್ಲಿ ಒಬ್ಬರಿಗೆ ಮಾತ್ರ ವಸತಿ ಸೌಲಭ್ಯ ದೊರೆತಿರುವುದು. ಇನ್ನುಳಿದ ೧೨ ಮಹಿಳೆಯರು ವಸತಿ ವಂಚಿತರಾಗಿರುವರು. ಹಾಗೆಯೇ ಪಾರ್ಧಿ ಸಮುದಾಯದ ಒಬ್ಬ ಹಿರಿಯ ಮಹಿಳೆಗೆ ಯಡ್ರಾಮನಹಳ್ಳಿಯಲ್ಲಿ ವಸತಿ ಸೌಲಭ್ಯ ದೊರೆತಿದೆ. ಇನ್ನುಳಿದ ೧೩ ಜನರು ವಸತಿ ಸೌಲಭ್ಯದಿಂದ ವಂಚಿತರಾಗಿರುವರು. ಈ ಎರಡೂ ಸಮುದಾಯಗಳು ಅಲೆಮಾರಿ ಸಮುದಾಯಗಳಾಗಿದ್ದು ಅವುಗಳಿಗೆ ಒಂದು ಸ್ವಂತ ನೆಲೆಯೆಂಬುದಿಲ್ಲ. ಈಗಿನ ಸ್ಥಿತಿಯಲ್ಲಿ ಸರ್ಕಾರದ ವಸತಿ ಯೋಜನೆ ಪಡೆಯಲು ನಿವೇಶನದ ಹಕ್ಕುಪತ್ರ ಹೊಂದಿರಬೇಕೆಂಬ ನಿಯಮ ಇರುವುದಾಗಿ ಸರ್ಕಾರಿ ಅಧಿಕಾರಿಗಳು ತಿಳಿಸುವರಂತೆ. ಆದರೆ ಈ ಎರಡೂ ಸಮುದಾಯಗಳಿಗೆ ಯಾವುದೇ ನಿವೇಶನ ಇರದ ಕಾರಣ ಇವರು ವಸತಿ ಯೋಜನೆಯ ಸೌಲಭ್ಯ ಹೊಂದುವಲ್ಲಿ ಅಸಮರ್ಥರಾಗಿರುವರು. ಮಹಿಳೆಯರಿಗೆ ಸಾಮಾಜಿಕ ಭದ್ರತೆ ದೊರೆಯಲು ಅವಳಿಗೆ ಸ್ವಂತ ವಸತಿ ಇರಬೇಕು. ಕನಿಷ್ಠ ಸ್ವಂತ ವಸತಿ ಇರದಿದ್ದಲ್ಲಿ ಆಕೆಯ ಆತ್ಮಸ್ಥೈರ್ಯ ಕುಗ್ಗಿಹೋಗುವುದು. ಇದನ್ನು ಮನಗಂಡೇ ಇತ್ತೀಚೆಗೆ ಸರ್ಕಾರವು ವಸತಿ ಯೋಜನೆಯಡಿ ಮನೆಗಳನ್ನು ನಿರ್ಮಿಸಿಕೊಡುತ್ತಿರುವುದು ಕೇವಲ ಮಹಿಳೆಯರ ಹೆಸರಿನಲ್ಲಿ ಮಾತ್ರ. ಹೀಗಾಗಿ ಕುಟುಂಬದೊಳಗೆ ಆಕೆಗೆ ಕನಿಷ್ಠವಾಗಿಯಾದರೂ ಆಸ್ತಿಯ ಹಕ್ಕು ದೊರೆಯುವಂತಾಗಿದೆ.



ಒಟ್ಟಾರೆಯಾಗಿ ಹೇಳುವುದಾದರೆ ಶೇಕಡ ೩೪.೬ ವಸತಿ ಯೋಜನೆಯಡಿ ಮನೆಗಳ ಸೌಲಭ್ಯ ಹೊಂದಿದವರು ಹಾಗೂ ಶೇಕಡ ೬೫.೩೧ರಷ್ಟು ವಸತಿ ಸೌಲಭ್ಯ ಪಡೆಯದವರು ಕಂಡುಬಂದಿರುವರು


**ದೇವದಾಸಿಯರ ಮದುವೆಗೆ ಹಣಕಾಸಿನ ಸಹಾಯಧನ ಯೋಜನೆ**

ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ನಾಲ್ಕು ಬುಡಕಟ್ಟುಗಳಲ್ಲಿ ಬೇಡ ಸಮುದಾಯವು ದೇವದಾಸಿ ಪದ್ಧತಿಯನ್ನು ರೂಢಿಯಲ್ಲಿರಿಸಿಕೊಂಡಿದೆ. "ಬೇಡ ಸಮುದಾಯದ ದೇವದಾಸಿ ಆಚರಣೆಗೂ ವಿಜಯನಗರ ಅರಸರ ಆಡಳಿತಕ್ಕೂ ಸಂಬಂಧವಿರುವುದಾಗಿ ಇತಿಹಾಸಕಾರರು ಗುರುತಿಸಿರುವರು."(ವಿರೂಪಾಕ್ಷಿ ಪೂಜಾರಹಳ್ಳಿ:೨೦೦೮:೯೮), ದೇವರ ಸೇವೆಯ ಹೆಸರಿನಲ್ಲಿ ಅಂದಿನ ರಾಜರು ಹಾಗೂ ಪುರೋಹಿತಶಾಹಿವರ್ಗವು ಮಹಿಳೆಯರನ್ನು ಶೋಷಣೆಗೆ ದೂಡಿರುವುದು ನಿಜ. ಆದರೆ ಈ ಆಚರಣೆಯು ೨೧ನೇ ಶತಮಾನದಲ್ಲಿಯೂ ಮುಂದುವರೆದಿರುವುದು ಮಾತ್ರ ಶೋಚನಿಯ ವಿಚಾರವಾಗಿದೆ. ಹುಲಿಗೆಮ್ಮ, ಯಲ್ಲಮ್ಮನ ಹೆಸರಿನಲ್ಲಿ ದೇವದಾಸಿ ಆಚರಣೆ ಬಳ್ಳಾರಿ ಭಾಗದಲ್ಲಿದೆ. ಮಾದಿಗ, ಚಲುವಾದಿ, ಬೆಸ್ತ, ಬೇಡ ಸಮುದಾಯಗಳಲ್ಲಿ ಹೆಚ್ಚಾಗಿ ಈ ಆಚರಣೆ ಉಳಿದುಕೊಂಡುಬಂದಿದೆ. ಬೇಡ ಸಮುದಾಯದ ಮಹಿಳೆಯರಲ್ಲಿ ಇತ್ತೀಚೆಗೆ ಪ್ರಜ್ಞಾವಂತಿಕೆ ಮೂಡುತ್ತಿರುವುದರಿಂದ ದೇವದಾಸಿ ಆಚರಣೆಗೆ ತಮ್ಮನ್ನು ಒಡ್ಡಿಕೊಳ್ಳಲು ಯುವತಿಯರು ನಿರಾಕರಿಸುತ್ತಿರುವುದು ಕಾಣಬರುವುದು. ಹಾಗಿದ್ದೂ ಸಹ ಬಡತನ, ಮನೆಗೆ ಗಂಡು ಸಂತಾನವಿರದೆ ಇರುವುದು, ಹುಟ್ಟಿದ ಮಗು ರೋಗದಿಂದ ಬಳಲುವ ಕಾರಣಗಳನ್ನು ನೀಡಿ ಪೋಷಕರು ಹುಡುಗಿಗೆ ತಿಳುವಳಿಕೆ ಬರುವ ಪೂರ್ವದಲ್ಲಿಯೇ ದೇವಿಯ ಮುತ್ತನ್ನು ಕಟ್ಟಿಸಿ ಹೆಣ್ಣನ್ನು ದೇವದಾಸಿಯಾಗಿಸುವರು. ಕ್ಷೇತ್ರಕಾರ್ಯದಲ್ಲಿ ಗಮನಿಸಿದಂತೆ ಬುಡಕಟ್ಟುಗಳಲ್ಲಿ ಬೇಡ ಸಮುದಾಯದೊಳಗೆ ಮಾತ್ರ ದೇವದಾಸಿ ಆಚರಣೆ ರೂಢಿ ಇದ್ದು ಕ್ಷೇತ್ರಕಾರ್ಯದಲ್ಲಿ ಸಂದರ್ಶಿಸಿದ ಬೇಡ ಸಮುದಾಯದ ೧೦೦ ಕುಟುಂಬಗಳಲ್ಲಿ ಒಟ್ಟು ೩೧ ದೇವದಾಸಿಯರಿರುವುದು ಕಾಣಿಸಿತು. "ದೇವದಾಸಿ ಪದ್ಧತಿಯ ನಿರ್ಮೂಲನೆಯ ಉದ್ದೇಶವನ್ನು ಇರಿಸಿಕೊಂಡು ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ."(ಕೊತ್ಲಮ್ಮ:೨೦೧೨:೧೩೪).ಅಂತಹ ಮಹತ್ವದ ಕಾರ್ಯಕ್ರಮಗಳಲ್ಲಿ ದೇವದಾಸಿಯರು ಮದುವೆಯಾದರೆ ಹಣಕಾಸಿನ ಸಹಾಯ ಧನವನ್ನು ಸರ್ಕಾರವು ನೀಡುತ್ತಿದೆ.

| **ಕೋಷ್ಟಕ ೬.೫ ದೇವದಾಸಿ ಧನ ಸಹಾಯ ಪಡೆದ ಮಹಿಳೆಯರ ವಿವರ** | | | |
|---|---|---|---|
| **ಸಮುದಾಯ** | **ದೇವದಾಸಿಯರ ಸಂಖ್ಯೆ** | **ವಿವಾಹವಾಗಿಧನ ಸಹಾಯ ಪಡೆದವರು** | **ವಿವಾಹವಾಗದೇ ಇರುವವರು** |
| ಬೇಡ | ೩೧ | ೦೨ | ೨೯ |

ಆಧಾರ: ಕ್ಷೇತ್ರಕಾರ್ಯ

ವೃತ್ತ ಚಿತ್ರ ೬.೫. ದೇವದಾಸಿ ಧನ ಸಹಾಯ ಪಡೆದ ಮಹಿಳೆಯರ ವಿವರ





ಆದರೆ ೩೧ ದೇವದಾಸಿಯರಲ್ಲಿ ಕೇವಲ ಇಬ್ಬರು ಮಹಿಳೆಯರು ಮಾತ್ರ ವಿವಾಹವಾಗಿ ಸರ್ಕಾರದ ಹಣಕಾಸಿನ ನೆರವನ್ನು ಪಡೆದಿರುವರು. ಇನ್ನುಳಿದ ೨೯ ದೇವದಾಸಿ ಮಹಿಳೆಯರು ದೇವರಿಗೆ ನಿಷ್ಠರಾಗಿದ್ದು ಮರುಮದುವೆಗೆ ಮನಸ್ಸು ಮಾಡದಿರುವುದರಿಂದ ಆ ಮಹಿಳೆಯರು ದೇವದಾಸಿ ಮದುವೆಗೆ ಕೊಡಮಾಡುವ ಹಣಸಹಾಯವನ್ನು ಪಡೆಯಲು ಸಾಧ್ಯವಾಗದಿರುವುದು ಕ್ಷೇತ್ರಕಾರ್ಯದ ಮೂಲಕ ತಿಳಿದುಬಂದಿತು. ಮಹಿಳಾ ತರಬೇತಿ ಮತ್ತು ಮಹಿಳಾ ಉದ್ಯೋಗ ಕಾರ್ಯಕ್ರಮಕ್ಕೆ ಬೆಂಬಲ **(Self Trining Empowerment Programm)** ಈ ಯೋಜನೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಸಚಿವಾಲಯವು ನಡೆಸುತ್ತಿದೆ. ಈ "ಯೋಜನೆಯು ೧೯೮೬-೮೭ ರಿಂದ ಜಾರಿಯಲ್ಲಿದ್ದು ಈ ಯೋಜನೆಯನ್ನು ಸೆಂಟ್ರಲ್ ಸೆಕ್ಟರ್ ಯೋಜನೆ ಎಂದು ಸಹ ಕರೆಯಲಾಗುತ್ತದೆ. ಈ ಯೋಜನೆಯು ಶೇಕಡ ೧೦೦ರಷ್ಟು ಕೇಂದ್ರ ವಲಯ ಯೋಜನೆಯಾಗಿದೆ. ಬಡ ಮತ್ತು ಅಂಚಿನಲ್ಲಿರುವ ಮಹಿಳೆಯರಿಗೆ ಕೃಷಿ, ತೋಟಗಾರಿಕೆ, ಆಹಾರ ಸಂಸ್ಕರಣೆ, ಕಸೂತಿ, ಹೊಲಿಗೆ, ಕರಕುಶಲ ವಸ್ತುಗಳ ತಯಾರಿಕೆ ಇತ್ಯಾದಿ ಅನೌಪಚಾರಿಕ ವಲಯದಲ್ಲಿ ತರಬೇತಿ ನೀಡಲಾಗುತ್ತದೆ. ಔಪಚಾರಿಕವಾದ ಕೌಶಲ್ಯ ತರಬೇತಿಯ ಅವಕಾಶವಿಲ್ಲದ ಬಡ ಮಹಿಳೆಯರ ಔದ್ಯೋಗಿಕ ಆಕಾಂಕ್ಷೆಗಳನ್ನು ಪರಿಹರಿಸಲು ಈ ಕಾರ್ಯಕ್ರಮವನ್ನು ಪರಿಚಯಿಸಲಾಗಿದೆ. ಈ ಯೋಜನೆಯು ದೇಶದಾದ್ಯಂತ ೧೬ ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಮಹಿಳೆಯರಿಗೆ ಪ್ರಯೋಜನಕಾರಕವಾಗಿರುವುದು. ಮಹಿಳೆಯರು ಈ ರೀತಿಯ ಅನೌಪಚಾರಿಕ ಕೌಶಲ್ಯಗಳನ್ನು ಕಲಿತು ಆರ್ಥಿಕವಾಗಿ ಸ್ವಾವಲಂಭಿಯಾಗುವ ಮೂಲಕ ಮಹಿಳೆ ಸಬಲೀಕರಣಗೊಳ್ಳಬೇಕೆಂಬ ಆಶಯದಿಂದ ಈ ಕಾರ್ಯಕ್ರಮ ಜಾರಿಗೆ ತರಲಾಗಿದೆ. ಕನಿಷ್ಠ ೧೬ ವರ್ಷ ಮತ್ತು ಅದಕ್ಕೂ ಮೇಲ್ಪಟ್ಟ ವಯಸ್ಸಿನ ಎಲ್ಲಾ ಮಹಿಳೆಯರು ಈ ರೀತಿಯ

ಅನೌಪಚಾರಿಕ ತರಬೇತಿಗಳನ್ನು ಪಡೆದು ಆ ಮೂಲಕ ತಾನು ದುಡಿಯಬಲ್ಲೆ ಎಂಬ ಮನಸ್ಥೈರ್ಯವನ್ನು ಪಡೆಯಲು ಸಾಧ್ಯವಾಗುವುದು. ಈ ಯೋಜನೆಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಭಾರತ ಸರಕಾರ ಅಡಿಯಲ್ಲಿ ನಡೆಯುತ್ತಿದ್ದು ಪರಿಣಾಮಕಾರಿಯಾಗಿ ಮಹಿಳೆಯರನ್ನು ಸ್ವಾವಲಂಭಿಗಳನ್ನಾಗಿಸುವತ್ತಾ ಒಂದು ದೊಡ್ಡ ಮಹತ್ವದ ಹೆಜ್ಜೆಯಾಗಿದೆಯೆಂದು ಹೇಳಲಾಗುತ್ತಿದೆ."(ದೇವದಾಸಿ ಯೋಜನೆಗಳ ಕೈಪಿಡಿ:೨೦೧೭:೧೨), ಆದರೆ ಬುಡಕಟ್ಟು ಮಹಿಳೆಯರಿಗೆ ಈ ರೀತಿಯ ಕೌಶಲ್ಯಗಳ ತರಬೇತಿ ದೊರೆಯುತ್ತಿದೆಯೆ ಎಂದು ಅವಲೋಕಿಸಿದಾಗ ನಿರಾಶೆಯಾಗುವುದು. ಉದಾಹರಣೆಗೆ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಒಟ್ಟು ಕುಟುಂಬಗಳಲ್ಲಿ ಈ ಕೌಶಲ್ಯ ತರಬೇತಿ ಪಡೆದವರು ಎಷ್ಟು ಎಂಬುದನ್ನು ಈ ಕೆಳಗೆ ನೋಡಲಾಗಿದೆ.

**ಕೋಷ್ಟಕ ೬.೬. ೧೬ ವರ್ಷದೊಳಗಿನ ಹಾಗೂ ೧೬ ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದ ɪ 艸 シ A i 饱 ಖವರ**

| ಸಮುದಾಯ | ೧೬ ವರ್ಷದೊಳಗಿನ ಹುಡುಗಿಯರು | ೧೬ ವರ್ಷ ಮೇಲ್ಪಟ್ಟವರು |
|---|---|---|
| ಬೇಡ | ೮೦ | ೧೮೦ |
| ಮೇದ | ೭೬ | ೧೭೯ |
| ಡುಂಗ್ರಿಗರಾಸಿಯ | ೮೦ | ೧೮೮ |
| ಪಾರ್ಧಿ | ೮೬ | ೧೭೨ |
| ಒಟ್ಟು | ೩೨೨ | ೭೧೯ |

**ಲಂಬ ಚಿತ್ರ ೬.೬. ೧೬ ವರ್ಷದೊಳಗಿನ ಹಾಗೂ ೧೬ ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದ ಮಹಿಳೆಯರ**




೧೬ ವರ್ಷದ ಮೇಲ್ಪಟ್ಟ ಮಹಿಳೆಯರಲ್ಲಿ ವೃದ್ಧರು ಯಾವುದೇ ಕೌಶಲ್ಯಗಳ ತರಬೇತಿಗೆ ಹೋಗಲಾರರು. ಆದರೆ ಹದಿಹರೆಯದ, ಮಧ್ಯವಯಸ್ಕ ಮಹಿಳೆಯರು ಕೌಶಲ್ಯ ತರಬೇತಿಗಳನ್ನು ಕಲಿಯಬಹುದು. ಕಂಪ್ಲಿ, ಹೊಸಪೇಟೆ, ಬಳ್ಳಾರಿ ಇತ್ಯಾದಿ ನಗರ ಪ್ರದೇಶಗಳಲ್ಲಿ ಟೈಲರಿಂಗ್, ಕಸೂತಿ, ಕಂಪ್ಯೂಟರ್ ತರಬೇತಿ ಕೊಡುವ ಸಂಸ್ಥೆಗಳೇನೋ ಇವೆ. ಈ ರೀತಿಯ ತರಬೇತಿಗಳಿಂದ ಮಹಿಳೆಯರು ಸ್ವಾವಲಂಭಿಗಳಾಗಿ ಸಬಲೀಕರಣಗೊಳ್ಳುವರೆಂಬ ಆಶಯವೇನೋ ಇದೆ. ಆದರೆ ಈ ರೀತಿಯ ತರಬೇತಿ ಹೊಂದುವ ಬುಡಕಟ್ಟು ಮಹಿಳೆಯರೆಷ್ಟು ಎಂದು ನೋಡಿದಾಗ ಬೇಸರವೆನಿಸುತ್ತದೆ.

**ಕೋಷ್ಟಕ ೬.೭. ಕೌಶಲ್ಯ ತರಬೇತಿಗಳನ್ನು ಹೊಂದಿದ ಬುಡಕಟ್ಟು ಮಹಿಳೆಯರು**

| ಸಮುದಾಯ | ತರಬೇತಿ ಹೊಂದಿದವರು | ತರಬೇತಿ ಹೊಂದದವರು |
|---|---|---|
| ಬೇಡ | ೮೦ | ೧೦೦ |
| ಮೇದ | ೭೬ | ೧೦೩ |
| ಡುಂಗ್ರಿ ಗರಾಸಿಯ | – | ೧೮೮ |
| ಪಾರ್ಧಿ | – | ೧೭೨ |
| ಒಟ್ಟು | ೧೫೬ | ೫೬೩ |

**ವೃತ್ತ ಚಿತ್ರ ೬.೭. ಕೌಶಲ್ಯ ತರಬೇತಿಗಳನ್ನು ಹೊಂದಿದ ಬುಡಕಟ್ಟು ಮಹಿಳೆಯರು**




ಬೇಡ ಸಮುದಾಯದ ೮೦ ಮಹಿಳೆಯರಲ್ಲಿ ೫೦ ಮಹಿಳೆಯರು ಟೈಲರಿಂಗ್ ತರಬೇತಿ ಮಾಡುತ್ತಿರುವರು. ಇನ್ನುಳಿದ ೩೦ ಮಹಿಳೆಯರು ಕಂಪ್ಯೂಟರ್ ತರಬೇತಿ ಪಡೆಯುತ್ತಿರುವರು. ಮೇದ ಸಮುದಾಯದಲ್ಲಿಯೂ ೪೦ ಮಹಿಳೆಯರು ಟೈಲರಿಂಗ್, ಕಟಿಂಗ್ ತರಬೇತಿಗಳನ್ನು ಮಾಡುತ್ತಿರುವರು. ಇನ್ನುಳಿದ ೨೬ ಮಹಿಳೆಯರು ಕಂಪ್ಯೂಟರ್ ತರಬೇತಿ ಮಾಡುತ್ತಿರುವರು.

ಆದರೆ ಡುಂಗ್ರಿ ಗರಾಸಿಯಾ ಹಾಗೂ ಪಾರ್ಧಿ ಸಮುದಾಯದ ಮಹಿಳೆಯರು ಸರ್ಕಾರದ ಯೋಜನೆಯಡಿ ನಡೆಸಲಾಗುತ್ತಿರುವ ಯಾವುದೇ ಕೌಶಲ್ಯ ತರಬೇತಿ ಪಡೆಯುತ್ತಿಲ್ಲ.

ಮೇದ ಸಮುದಾಯ ಕೈಕಸುಬನ್ನೇ ನಂಬಿ ಜೀವನ ನಡೆಸುತ್ತಿರುವ ಸಮುದಾಯ. ಇವರು ನಗರ ಪ್ರದೇಶಗಳಲ್ಲಿ ಬಿದಿರಿನ ತಟ್ಟಿ (ಚಾಪೆ), ಏಣಿ, ಬುಟ್ಟಿ, ಮೊರ ಇತ್ಯಾದಿ ತಯಾರಿಸಿ ಮಾರಿಯೇ ಜೀವನ ಸಾಗಿಸಬೇಕು. ಮೇದ ಮಹಿಳೆಯರಿಗೆ ಬಿದಿರಿನಲ್ಲಿ ಉಪಕರಣಗಳನ್ನು ತಯಾರಿಸುವ ಕಲೆ ಬಾಲ್ಯದಿಂದಲೇ ಬಂದಿರುತ್ತದೆ. ಬಿದಿರಿನ ಪರಿಕರಗಳ ತಯಾರಿಕೆ ಮತ್ತು ಮಾರಾಟದಲ್ಲಿ ಪುರುಷರಿಗೆ ಸಮಾನವಾಗಿ ದುಡಿಯುವರು. ಆದರೆ ಕೌಶಲ್ಯ ತರಬೇತಿ ನೀಡುವವರು ಬಿದಿರಿನಲ್ಲಾದ ಹೊಸ ಅವಿಷ್ಕಾರಗಳನ್ನು ಗಮನಿಸಿ ಮೇದರ ಮಹಿಳೆಯರಿಗೆ ತರಬೇತಿ ನೀಡುವುದೊಳಿತೇನೊ. ಮೇದ ಮಹಿಳೆಯರಿಗೆ ಮನೆಯೇ ಪಾಠಶಾಲೆಯಾಗಿದೆಯೇ ಹೊರತು ಯಾವುದೇ ತರಬೇತಿ ಸಂಸ್ಥೆಗಳ ತರಬೇತಿ ಕಾರ್ಯಕ್ರಮ ಪ್ರಯೋಜನಕ್ಕೆ ಬಾರಲಾರದವು. ಡುಂಗ್ರಿಗರಾಸಿಯಾ ಸಮುದಾಯದ ಮಹಿಳೆಯರು ಬಹುತೇಕ ಮೀನುಗಾರಿಕೆ, ರದ್ದಿ ಆಯುವ ಕಾಯಕದಲ್ಲಿ ಪಳಗಿದವರು. ಪುರುಷರು ಮೀನು ಬಲೆಗಳನ್ನು ಬಿಟ್ಟರೆ ಮಹಿಳೆಯರು ಹರಿಗೋಲು ಪುಟ್ಟಿಯನ್ನು ನಡೆಸುವರು. ಇವರಿಗೆ ಈ ವೃತ್ತಿಗಳ ಹೊರತಾಗಿ ಬೇರೆ ವೃತ್ತಿಗಳು ಕರಗತವಾಗುವುದು ಕಷ್ಟಸಾಧ್ಯದ ವಿಚಾರ. ಅದರಲ್ಲಿಯೂ ಕನಿಷ್ಠ ಪ್ರಾಥಮಿಕ ಹಂತದ ಶಿಕ್ಷಣವನ್ನೂ ಈ ಮಹಿಳೆಯರು ಹೊಂದಿರುವುದಿಲ್ಲ. ಅದೇ ರೀತಿಯಾಗಿ ಪಾರ್ಧಿ ಮಹಿಳೆಯರಲ್ಲಿ ಬಹುತೇಕ ಮಹಿಳೆಯರು ರದ್ದಿ ಆಯುವುದು, ಸಂತೆ, ಜಾತ್ರೆಗಳಲ್ಲಿ ಗೊಂಬೆಗಳ ಮಾರಾಟ, ವನಸ್ಪತಿ ಔಷಧಿಗಳ ತಯಾರಿಕೆ, ಕೂಲಿ, ಸರಾಯಿ ಭಟ್ಟಿ ಇಳಿಸುವುದರಲ್ಲಿ ಈ ಮಹಿಳೆಯರು ಕುಶಲರು. ಆದರೆ ಡುಂಗ್ರಿಗರಾಸಿಯಾ ಮತ್ತು ಪಾರ್ಧಿ ಸಮುದಾಯಗಳು ಒಂದೇ ಕಡೆ ನೆಲೆನಿಲ್ಲುವ ಗುಣದವರಲ್ಲ. ನಿರಂತರ ಅಲೆಮಾರಿಗಳು. ಹೀಗಾಗಿ ಇವರ ಮಕ್ಕಳಿಗೂ ಆಧುನಿಕ ಶಿಕ್ಷಣದ ಕೊರತೆ ಅತ್ಯಧಿಕವಾಗಿದೆ. ಆಧುನಿಕ ಶಿಕ್ಷಣದ ಕೊರತೆ ಇರುವುದರಿಂದ ಇವರು ಕೌಶಲ್ಯ ತರಬೇತಿಯಂತಹ ಯೋಜನೆಗಳಿಗೆ ಸ್ಪಂದಿಸುವುದು ಕಷ್ಟಸಾಧ್ಯದ ವಿಚಾರ. ಹಾಗೆಯೇ ಕೌಶಲ್ಯ ತರಬೇತಿ ನೀಡುವಾಗ ಈ ಸಮುದಾಯದ ಮಹಿಳೆಯರ ಆಸಕ್ತಿ ಯಾವುದು ಎಂಬುದನ್ನು ಗುರುತಿಸಿ ಅಂತಹ ಆಸಕ್ತಿ ಇರುವ ಕ್ಷೇತ್ರದಲ್ಲಿಯೇ ತರಬೇತಿ ನೀಡುವುದು ಉತ್ತಮ. ಅಲೆಮಾರಿ ಬುಡಕಟ್ಟುಗಳ ಆಸಕ್ತಿಯ ಕೇಂದ್ರಕ್ಕಿಂತ ಭಿನ್ನವಾದ ಯೋಜನೆಗಳಿಗೆ ಅವರು ಸ್ಪಂದಿಸಲಾರದವರಾಗಿರುವುದರಿಂದ ಸರ್ಕಾರದ ತರಬೇತಿ ಕಾರ್ಯಕ್ರಮ ಅವರನ್ನು ತಲುಪಲು ಸೋತಿವೆಯೆಂದೇ ಹೇಳಬಹುದು.

**ಸ್ತ್ರೀಶಕ್ತಿ ಸಂಘಗಳು**

೨೦೦೦ನೇ ಇಸ್ವಿಯ ಈಚೆಗೆ ಕರ್ನಾಟಕ ಸರ್ಕಾರವು ಸ್ತ್ರಿಯರನ್ನು ಕೇಂದ್ರವಾಗಿರಿಸಿಕೊಂಡು ಸ್ತ್ರೀಶಕ್ತಿ ಸಂಘಗಳನ್ನು ಪ್ರತಿ ಗ್ರಾಮದಲ್ಲಿಯೂ ಪ್ರಾರಂಭಿಸಿತು. ಗುಂಪುಗಳನ್ನು ರಚಿಸುವ ಕಾರ್ಯವು ಅಂಗನವಾಡಿಗಳ ಮೂಲಕ ಅನುಷ್ಠಾನಗೊಳಿಸಲಾಗುವುದು. ೮ ರಿಂದ ೧೨ ಮಹಿಳೆಯರು ಒಂದು ಗುಂಪಾಗುವುದು. ಸ್ಥಳೀಯ ಬ್ಯಾಂಕ್‌ಗಳಲ್ಲಿ ಗುಂಪುಗಳ ಹೆಸರಿನಲ್ಲಿ ಉಳಿತಾಯ ಖಾತೆ ಪ್ರಾರಂಭಿಸಿ ಗುಂಪಿನ ಸದಸ್ಯರು ಪ್ರತಿ ವಾರ ಇಂತಿಷ್ಟೆಂದು ಹಣವನ್ನು ಕೂಡಿಸಿ ಬ್ಯಾಂಕಿನಲ್ಲಿ ಜಮೆ ಮಾಡುವರು.


ಎಮ್ಮೆ ಸಾಕಣೆ, ಕುರಿಕೋಳಿ ಸಾಕಣೆ ಇತ್ಯಾದಿ ಸಣ್ಣ ಉದ್ಯೋಗಗಳಿಗೆ ಈ ಹಣವನ್ನು ಸಾಲರೂಪದಲ್ಲಿ ಪಡೆದು ಸದುಪಯೋಗಪಡಿಸಿಕೊಂಡು ಮರಳಿಸಬಹುದು. ಈ ಯೋಜನೆ ಮಹಿಳೆಯರು ಸ್ವಾವಲಂಭಿಗಳಾಗಲು ಪ್ರಯೋಜನಾಕಾರಿಯಾಗಿದೆ. ಈ ಯೋಜನೆಯ ಮೂಲ ಆಶಯ ಮಹಿಳೆಯರಿಗೆ ತುಂಬಾ ಉಪಯುಕ್ತವಾಗಿದೆ. ಆದರೆ ಬುಡಕಟ್ಟು ಮಹಿಳೆಯರಲ್ಲಿ ಈ ಯೋಜನೆಯ ಅನುಷ್ಠಾನವು ಎಷ್ಟು ಅನುಷ್ಠಾನಗೊಂಡಿದೆ ಎಂಬುದನ್ನು ನೋಡೋಣ.

ಅಧ್ಯಯನಕ್ಕೆ ಬಳ್ಳಾರಿ ಜಿಲ್ಲೆಯಲ್ಲಿರುವ ಬೇಡ, ಮೇದ, ಡುಂಗ್ರಿಗರಾಸಿಯಾ, ಪಾರ್ಧಿ ಸಮುದಾಯಗಳನ್ನು ಆಯ್ಕೆ ಮಾಡಿಕೊಂಡಿದೆ. ಬ್ಯಾಂಕಿನಲ್ಲಿ ಖಾತೆ ಹೊಂದಬೇಕಾಗಿರುವುದರಿಂದ ಕನಿಷ್ಠ ೧೮ ವರ್ಷ ಮೇಲ್ಪಟ್ಟವರೇ ಸ್ತ್ರೀಶಕ್ತಿ ಗುಂಪುಗಳಲ್ಲಿರುವರು.

**ಕೋಷ್ಟಕ ೬.೮. ಸ್ತ್ರೀಶಕ್ತಿ ಗುಂಪಿನ ಫಲಾನುಭವಿಗಳ ವಿವರ**

| ಸಮುದಾಯ | ಫಲಾನುಭವಿಗಳು | ಫಲಾನುಭವಿಗಳಲ್ಲದವರು |
|---|---|---|
| ಬೇಡ | ೧೪೦ | ೨೦ |
| ಮೇದ | ೧೪೫ | ೧೫ |
| ಡುಂಗ್ರಿ ಗರಾಸಿಯ | ೩೦ | ೧೫೦ |
| ಪಾರ್ಧಿ | ೪೦ | ೧೨೦ |
| ಒಟ್ಟು | ೩೫೫ | ೩೦೫ |

**ಲಂಬ ಚಿತ್ರ ೬.೮. ಸ್ತ್ರೀಶಕ್ತಿ ಗುಂಪಿನ ಫಲಾನುಭವಿಗಳ ವಿವರ**




ಬೇಡ ಹಾಗೂ ಮೇದ ಸಮುದಾಯದವರು ಒಂದೇ ಕಡೆ ನೆಲೆಸಿರುವುದರಿಂದ ಸ್ತ್ರೀಶಕ್ತಿ ಸಂಘಗಳಲ್ಲಿ ಹೆಚ್ಚು ತೊಡಗಿಸಲು ಸಾಧ್ಯವಾಗಿದೆ. ಬೇಡ ಸಮುದಾಯದ ೧೬೦ ಮಹಿಳೆಯರಲ್ಲಿ ೧೪೦ ಮಹಿಳೆಯರು ಸ್ತ್ರೀಶಕ್ತಿ ಸಂಘದ ಗುಂಪುಗಳ ಸದಸ್ಯರಾಗಿರುವರು. ಇನ್ನು ಇಪ್ಪತ್ತು ಮಹಿಳೆಯರು ತುಂಬಾ ಬಡತನದ

ಸ್ಥಿತಿಯಲ್ಲಿದ್ದು ಅನಕ್ಷರರೂ ಆಗಿರುವುದರಿಂದ ಸ್ತ್ರೀಶಕ್ತಿ ಗುಂಪುಗಳ ಸದಸ್ಯತ್ವದಿಂದ ದೂರವಿರುವರು. ಮೇದ ಸಮುದಾಯದಲ್ಲಿಯೂ ೧೬೦ ಮಹಿಳೆಯರಲ್ಲಿ ೧೪೫ ಮಹಿಳೆಯರು ಸ್ತ್ರೀಶಕ್ತಿ ಸಂಘಗಳ ಸದಸ್ಯರಾಗಿರುವರು. ಇನ್ನುಳಿದ ಹದಿನೈದು ಮಹಿಳೆಯರು ಸ್ತ್ರೀಶಕ್ತಿ ಸಂಘಗಳಲ್ಲಿ ತೊಡಗಿಸಿಕೊಳ್ಳಲು ಅನಾಸಕ್ತರಾಗಿರುವರು. ಪ್ರಾಯಶಃ ಅವರ ಕುಟುಂಬದ ಇತರ ಮಹಿಳೆಯರು ಸ್ತ್ರೀಶಕ್ತಿ ಸಂಘದ ಸದಸ್ಯರಾಗಿರುವುದರಿಂದ ತಾವು ಗುಂಪಿನಲ್ಲಿ ಸದಸ್ಯತ್ವವನ್ನು ಪಡೆದುಕೊಂಡಿಲ್ಲವೆಂದು ತಿಳಿಸಿದರು.

ಡುಂಗ್ರಿ ಗರಾಸಿಯಾ ಗುಂಪಿನಲ್ಲಿ ಬಡತನ, ಶಿಕ್ಷಣದ ಕೊರತೆ, ಅದಕ್ಕಿಂತ ಹೆಚ್ಚಾಗಿ ಅಲೆಮಾರಿತನ ಇವರನ್ನು ಸ್ತ್ರೀಶಕ್ತಿ ಗುಂಪುಗಳಲ್ಲಿ ಹೆಚ್ಚಾಗಿ ಪಾಲ್ಗೊಳ್ಳದಂತೆ ಮಾಡಿದೆ. ಮರಿಯಮ್ಮನಹಳ್ಳಿಯಲ್ಲಿ ಮಾತ್ರ ಎರಡು ಗುಂಪುಗಳು ಹಾಗೂ ಗುಡಾರನಗರದಲ್ಲಿ ಒಂದು ಗುಂಪು (೩೦ ಜನ) ಮಾತ್ರ ಸ್ತ್ರೀಶಕ್ತಿ ಸಂಘದಲ್ಲಿ ತೊಡಗಲು ಸಾಧ್ಯವಾಗಿದೆ. ಇನ್ನುಳಿದ ೧೫೦ ಮಹಿಳೆಯರು ಸ್ತ್ರೀಶಕ್ತಿ ಸಂಘಗಳಿಂದ ಹೊರಗುಳಿದಿರುವರು. ಅದೇ ರೀತಿಯಾಗಿ ಪಾರ್ಧಿ ಸಮುದಾಯವೂ ಅಲೆಮಾರಿ ಸಮುದಾಯವಾಗಿದೆ. ಒಂದೇ ಕಡೆ ನೆಲೆ ನಿಲ್ಲದ ಈ ಸಮುದಾಯ ಇತ್ತೀಚೆಗೆ ಕಂಪ್ಲಿ, ಕಾರಿಗನೂರಿನಲ್ಲಿ ನೆಲೆನಿಂತಿವೆ. ಕಾರಿಗನೂರಿನಲ್ಲಿ ಎರಡು ಗುಂಪು ಹಾಗೂ ಕಂಪ್ಲಿಯಲ್ಲಿ ಎರಡು ಗುಂಪುಗಳಿವೆ. ಇನ್ನುಳಿದಂತೆ ೧೨೦ ಮಹಿಳೆಯರು ಸ್ತ್ರೀಶಕ್ತಿ ಗುಂಪಿನಿಂದ ಹೊರಗಿರುವರು. ಆಸಕ್ತಿದಾಯಕ ವಿಚಾರವೆಂದರೆ ಸ್ತ್ರೀಶಕ್ತಿ ಸಂಘ ಯೋಜನೆಯ ಮೂಲ ಆಶಯದಂತೆ ಈ ಸಂಘಗಳು ಕಾರ್ಯನಿರ್ವಹಿಸದೇ ಇರುವುದು ಕ್ಷೇತ್ರಕಾರ್ಯದಲ್ಲಿ ಕಂಡುಬಂದಿತು. ಕೆಲವು ಸಂಘಗಳು ಕೇವಲ ಸುತ್ತುನಿಧಿ ಪಡೆಯುವಷ್ಟಕ್ಕೇ ಸೀಮಿತವಾಗಿವೆ. ಸ್ತ್ರೀಶಕ್ತಿ ಸಂಘಗಳ ಮೇಲೆ ಅಂಗನವಾಡಿ ಕಾರ್ಯಕರ್ತರ ಹಕ್ಕು ಯಾವುದೂ ಇರದೇ ಇದ್ದರೂ ಸ್ತ್ರೀಶಕ್ತಿ ಸಂಘಗಳು ಬ್ಯಾಂಕಿನಿಂದ ಸಾಲ ಪಡೆಯುವಾಗ ಹಾಗೂ ಸುತ್ತುನಿಧಿ ಬಂದಾಗ ಅಂಗನವಾಡಿ ಕಾರ್ಯಕರ್ತರಿಗೆ ಇಂತಿಷ್ಟೆಂದು ಹಣಕೊಡಬೇಕಾಗುವುದು ಎಂಬ ಅಳಲನ್ನು ಕೆಲವು ಸ್ತ್ರೀಶಕ್ತಿ ಸಂಘಗಳು ವ್ಯಕ್ತಪಡಿಸಿದವು. ಮುಖ್ಯವಾಗಿ ಸ್ತ್ರೀಶಕ್ತಿ ಗುಂಪುಗಳಲ್ಲಿ ಸದಸ್ಯರಾಗುವವರು ಕನಿಷ್ಠ ಪ್ರಾಥಮಿಕ ಹಂತದ ಶಿಕ್ಷಣವನ್ನು ಪೂರೈಸಿದರೆ ಒಳಿತು. ಆದರೆ ಸ್ತ್ರೀಶಕ್ತಿ ಸಂಘಗಳು ಮಹಿಳೆಯರ ಮಧ್ಯ ಪ್ರವೇಶಿಸಿದ ತರುವಾಯ ಬ್ಯಾಂಕಿನೊಳಗೆ ಕಾಲಿರಿಸುಷ್ಟು ಧೈರ್ಯವಾದರೂ ಬಂದಿರುವುದು ಎಂಬುದು ಮಾತ್ರ ಸುಳ್ಳಲ್ಲ. ಆದರೆ ಈ ಸಂಘಗಳನ್ನು ಮಧ್ಯವರ್ತಿಗಳಿಂದ ಪಾರುಮಾಡಬೇಕಾದ ಅಗತ್ಯವೂ ಇದೆ.

**ಭೇಟಿ ಬಚಾವೋ ಭೇಟಿ ಪಥಾವೊ ಕಾರ್ಯಕ್ರಮ**

ಭೇಟಿ ಬಚಾವೋ ಭೇಟಿ ಪಥಾವೋ ಕಾರ್ಯಕ್ರಮವು ಪುರುಷ ಹಾಗೂ ಮಹಿಳಾ ಲಿಂಗಾನುಪಾತದಲ್ಲಾಗುತ್ತಿರುವ ಅಸಮತೋಲನ ತಗ್ಗಿಸಲೆಂದೇ ನಿರ್ಮಿಸಿದ ಕಾರ್ಯಕ್ರಮವಾಗಿದೆ. ಸಾಮಾಜಿಕವಾಗಿ ಮಹಿಳೆಯನ್ನು ದ್ವಿತೀಯ ಪ್ರಜೆಯಾಗಿಯೇ ಪರಿಗಣಿಸುವ ಈ ವ್ಯವಸ್ಥೆಯಲ್ಲಿ ಸಾಮಾಜಿಕವಾಗಿ ಪುರುಷರ ಪ್ರಮಾಣಕ್ಕಿಂತ ಮಹಿಳೆಯರ ಪ್ರಮಾಣ ಗಣನೀಯವಾಗಿ ಹಿಂದಿದೆ. ಮಕ್ಕಳ ಲಿಂಗಾನುಪಾತವು ಈ ಕೆಳಗಿನಂತಿದೆ.


| ೧೯೯೧, ೨೦೦೧, ೨೦೧೧ರ ಜನಸಂಖ್ಯಾ ವರದಿ ಪ್ರಕಾರ ಲಿಂಗಾನುಪಾತದ ವಿವರ | |
|---|---|
| ವರ್ಷ | ಮಹಿಳಾ ಪ್ರಮಾಣ |
| ೧೯೯೧ | ೯೪೫ |
| ೨೦೦೧ | ೯೨೭ |
| ೨೦೧೧ | ೯೧೮ |

"೧೯೯೧ ರಲ್ಲಿ ಸಾವಿರ ಪುರುಷರಿಗೆ ೯೪೫ ಮಹಿಳೆಯರಿದ್ದರು. ೨೦೦೧ರಲ್ಲಿ ಸಾವಿರ ಪುರುಷರಿಗೆ ೯೨೭ ಮಹಿಳೆಯರಿರುವರು. ೨೦೧೧ಕ್ಕೆ ಸಾವಿರ ಪುರುಷರಿಗೆ ೯೧೮ ಮಹಿಳೆಯರಿರುವರು. ಮೇಲಿನ ಅಂಕಿ ಅಂಶಗಳನ್ನು ನೋಡಿದರೆ ದಶಕದಿಂದ ದಶಕಕ್ಕೆ ಮಹಿಳೆಯರ ಪ್ರಮಾಣವು ಪುರುಷರ ಪ್ರಮಾಣಕ್ಕಿಂತ ಕಡಿಮೆಯಾಗುತ್ತಾ ಸಾಗಿರುವುದನ್ನು ಕಾಣುತ್ತೇವೆ."(ಚಂದ್ರಶೇಖರ ಟಿ ಆರ್:೨೦೧೬:೧೦೩), ಇದು ಮಹಿಳೆಯರ ಕುರಿತಾಗಿ ಸಮಾಜವು ತೋರುತ್ತಿರುವ ನಿರ್ಲಕ್ಷ್ಯವನ್ನು ಪ್ರತಿಬಿಂಬಿಸುವುದು. ಗರ್ಭಿಣಿ ಮಹಿಳೆಯರನ್ನು ಸ್ಕ್ಯಾನಿಂಗ್ ಮುಖಾಂತರ ಲಿಂಗಪತ್ತೆ ಮಾಡುವುದು. ಹೆಣ್ಣುಶಿಶುವಿನ ಜನನವಾಗುತ್ತದೆಂಬುದನ್ನು ಮೊದಲೇ ಗ್ರಹಿಸಿ ಭ್ರೂಣಹತ್ಯೆ ಮಾಡುವುದು ಈ ಸಮಾಜದಲ್ಲಿ ಕಾಣುತ್ತೇವೆ. ಲಿಂಗಪತ್ಯೆ ಹಾಗೂ ಭ್ರೂಣಹತ್ಯೆಯು ಅಪರಾಧವಾಗಿದ್ದು ಕಾನೂನಾತ್ಮಕ ತೊಡಕುಗಳಿದ್ದಾಗಲೂ ವೈದ್ಯರ ಹಣದಾಶೆಯನ್ನು ಸುಲಭವಾಗಿ ಇಂತಹ ಕಾರ್ಯಗಳು ಈಡೇರಿಸುವವು. ಹೀಗಾಗಿಯೇ ವ್ಯವಸ್ಥೆಯಲ್ಲಿ ಪುರುಷ ಹಾಗೂ ಮಹಿಳಾ ಲಿಂಗಾನುಪಾತದಲ್ಲಿ ಅಂತರಗಳು ಏರ್ಪಡಲು ಕಾರಣವಾಗಿದೆ. ಆದರೆ ಆಧುನಿಕ ಶಿಕ್ಷಣದ ಕೊರತೆ ಇರುವ ಮೇದ ಹೊರತುಪಡಿಸಿ ಇನ್ನುಳಿದ ಬುಡಕಟ್ಟುಗಳಲ್ಲಿ ಲಿಂಗಾನುಪಾತ ಪ್ರಮಾಣವು ಪುರುಷರಿಗಿಂತ ಮಹಿಳೆಯರಲ್ಲಿಯೇ ಹೆಚ್ಚಿರುವುದು ಕ್ಷೇತ್ರಕಾರ್ಯದ ಮೂಲಕ ತಿಳಿದುಬಂದಿತು.

| ಕೋಷ್ಟಕ ೬.೯. ಸಮುದಾಯಗಳು ಹಾಗೂ ಲಿಂಗಾನುಪಾತ | | |
|---|---|---|
| ಕ್ರಸಂ | ಸಮುದಾಯಗಳು | ಲಿಂಗಾನುಪಾತ |
| ೧ | ಬೇಡ | ೧,೦೪೦ |
| ೨ | ಮೇದ | ೯೮೦ |
| ೩ | ಡುಂಗ್ರಿಗರಾಸಿಯಾ | ೧೦೩೧ |
| ೪ | ಪಾರ್ಧಿ | ೧೦೧೯ |
| | ಒಟ್ಟು | ೧೦೧೭ |

ಬೇಡ ಸಮುದಾಯದಲ್ಲಿ ಸಾವಿರ ಪುರುಷರಿಗೆ ೧೦೪೦ ಮಹಿಳೆಯರಿರುವುದು. ಡುಂಗ್ರಿಗರಾಸಿಯಾ ಸಮುದಾಯದಲ್ಲಿ ಸಾವಿರ ಪುರುಷರಿಗೆ ೧೦೩೧ ಮಹಿಳೆಯರಿರುವುದು. ಹಕ್ಕಿಪಿಕ್ಕಿ ಸಮುದಾಯದಲ್ಲಿ

ವೃತ್ತ ಚಿತ್ರ ೬.೯. ಸಮುದಾಯಗಳು ಹಾಗೂ ಲಿಂಗಾನುಪಾತ




ಸಾವಿರ ಪುರುಷರಿಗೆ ೧೦೧೯ ಮಹಿಳೆಯರಿರುವುದು. ಆದರೆ ಮೇದ ಸಮುದಾಯದಲ್ಲಿ ಸಾವಿರ ಪುರುಷರಿಗೆ ೯೮೦ ಮಹಿಳೆಯರು ಇರುವರು. ಅಂದರೆ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಸಮುದಾಯಗಳಲ್ಲಿ ಮೇದ ಸಮುದಾಯದಲ್ಲಿ ಮಾತ್ರ ಮಹಿಳೆಯರ ಪ್ರಮಾಣ ಕಡಿಮೆ ಇರುವುದು ಕಂಡುಬಂದಿದೆ. ಭೇಟಿಬಚಾವೊ, ಭೇಟಿ ಪಢಾವೋ ಕಾರ್ಯಕ್ರಮದ ಅಡಿಯಲ್ಲಿ ವಿಶೇಷವಾಗಿ ಬುಡಕಟ್ಟು ಮಹಿಳೆಯರಿಗೆ ಶಿಕ್ಷಣ ದೊರಕಿಸುವ ಮೂಲಕ ಅವರನ್ನು ಸಾಮಾಜಿಕವಾಗಿ ತಲೆ ಎತ್ತುವಂತೆ ಮಾಡಬಹುದಾಗಿದೆ. ಈ ನಿಟ್ಟಿನಲ್ಲಿ ಸರ್ಕಾರವು ಪ್ರಯತ್ನಿಸುತ್ತಿದೆಯಾದರೂ ಅಲೆಮಾರಿ ಬುಡಕಟ್ಟುಗಳು ಅಷ್ಟಾಗಿ ಕಾರ್ಯಕ್ರಮಗಳ ಲಾಭವನ್ನ ಪಡೆಯಲು ಸೋತಿವೆಯಂದೇ ತಿಳಿದುಬರುವುದು. ಈ ಯೋಜನೆಯ ಅನುಷ್ಠಾನದ ಪೂರ್ಣ ಲಾಭ ನಷ್ಟಗಳು ಅದರಲ್ಲಿಯೂ ಬುಡಕಟ್ಟುಗಳಿಗೆ ಈ ಕಾರ್ಯಕ್ರಮದ ಫಲಾಫಲಗಳು ಅರಿಯಲು ಕನಿಷ್ಠ ಒಂದು ದಶಕವಾದರೂ ಬೇಕಾಗಬಹುದು.


## ವಿಧವಾ ವೇತನ

ಸಾಮಾನ್ಯವಾಗಿ ಭಾರತದ ಪ್ರತಿಯೊಂದು ಗ್ರಾಮದಲ್ಲಿಯೂ ವಿಧವೆಯರು ಇರುವರು. ಕುಟುಂಬದ ಆಸರೆ ಇಲ್ಲದೆ ಅನಾಥವಾದ ವಿಧವೆಯರಿಗೆ ಆಧಾರ ಸ್ತಂಭವಾಗಿ ಸಮಾಜದಲ್ಲಿ ನಿಲ್ಲುವುದು. ಪೂರ್ಣವಾಗಿ ಸಹಕಾರಿಯಲ್ಲದಿದ್ದರೂ ಅತ್ಯಲ್ಪ ಆಸರೆಯನ್ನಾದರೂ ನೀಡಲಿ ಎಂಬ ಆಶಯದಿಂದ ವೃದ್ಧ, ವಿಧವಾ, ಅಂಗವಿಕಲ ಮಾಸಿಕ ವೇತನದ ಸೌಲಭ್ಯವನ್ನು ಸರ್ಕಾರ ಕಲ್ಪಿಸಿದೆ. ಈ ಯೋಜನೆಗಳ ದುರ್ಲಾಭವಾಗುತ್ತಿದೆಯೆಂಬ ಮಾತುಗಳು ಕೇಳಿಬರುವವಾದರೂ ಅತ್ಯಲ್ಪ ಜನಕ್ಕೆ ಈ ಯೋಜನೆ ಆಸರೆ ಒದಗಿಸಿದೆಯೆಂಬುದು ಕೂಡ ನಿಜ. ಕರ್ನಾಟಕದಲ್ಲಿ ಬಹುತೇಕ ವಿಧವೆಯರು ಈ ಯೋಜನೆಯ ಲಾಭಗಳನ್ನು ಪಡೆದಿರುವರು. ಸಾಮಾಜಿಕವಾಗಿ ಧೈರ್ಯಬರಲು ಮಹಿಳೆಯರಿಗೆ ಆರ್ಥಿಕ ಬಲವು ಸಹಾಯಕವಾಗುವುದು.



| ಕೋಷ್ಟಕ ೬.೧೦ ಸಮೀಕ್ಷೆಗೊಳಪಡಿಸಿದ ಬುಡಕಟ್ಟುಗಳಲ್ಲಿ ವಿಧವಾ ವೇತನ ಪಡೆಯುವವರ ವಿವರ | | | | |
|---|---|---|---|---|
| ಕ್ರಸಂ | ಸಮುದಾಯ | ವಿಧವೆಯರ ಸಂಖ್ಯೆ | ವಿಧವಾ ವೇತನ ಸೌಲಭ್ಯ ಪಡೆದವರು | ವಿಧವಾ ವೇತನ ಸೌಲಭ್ಯ ಪಡೆಯದವರು |
| ೧ | ಬೇಡ | ೧೦ | ೧೦ | - |
| ೨ | ಮೇದ | ೧೨ | ೧೨ | - |
| ೩ | ಡುಂಗ್ರಿಗರಾಸಿಯ | ೧೩ | ೦೪ | ೦೯ |
| ೪ | ಪಾರ್ಧಿ | ೧೪ | ೦೩ | ೧೧ |
| | ಒಟ್ಟು | ೪೯ | ೨೯ | ೨೦ |

**ವೃತ್ತ ಚಿತ್ರ ೬.೧೦ ಸಮೀಕ್ಷೆಗೊಳಪಡಿಸಿದ ಬುಡಕಟ್ಟುಗಳಲ್ಲಿ ವಿಧವಾ ವೇತನ ಪಡೆಯುವವರ ವಿವರ**




ಅಧ್ಯಯನಕ್ಕೆ ಆಯ್ದುಕೊಂಡ ಒಟ್ಟು ನಾಲ್ಕು ಸಮುದಾಯಗಳಲ್ಲಿ ಒಟ್ಟು ೪೯ ವಿಧವೆಯರಿರುವರು. ಇದರಲ್ಲಿ ೨೯ ವಿಧವೆಯರು ವಿಧವಾ ವೇತನ ಪಡೆದರೆ ಇನ್ನೂ ೨೦ ವಿಧವೆಯರಿಗೆ ವಿಧವಾ ವೇತನ ಸೌಲಭ್ಯವಿರುವುದಿಲ್ಲ. ಬೇಡ ಹಾಗೂ ಮೇದ ಸಮುದಾಯದ ಸಮೀಕ್ಷಿಸಿದ ಎಲ್ಲಾ ವಿಧವೆಯರು ವಿಧವಾ ವೇತನ ಪಡೆಯುತ್ತಿರುವರು. ಆದರೆ ಡುಂಗ್ರಿ ಗರಾಸಿಯಾ ಸಮುದಾಯದ ೧೩ ವಿಧವೆಯರಲ್ಲಿ ನಾಲ್ಕು ವಿಧವೆಯರು ಮಾತ್ರ ವಿಧವಾ ವೇತನ ಸೌಲಭ್ಯ ಹೊಂದಿರುವರು. ಇನ್ನುಳಿದ ಒಂಭತ್ತು ವಿಧವೆಯರು ವಿಧವಾ ವೇತನದಿಂದ ವಂಚಿತರಾಗಿರುವರು. ಅದೇ ರೀತಿಯಾಗಿ ಪಾರ್ಧಿ ಸಮುದಾಯದ ೧೪ ವಿಧವೆಯರಲ್ಲಿ ಮೂವರು ವಿಧವೆಯರು ಮಾತ್ರ ವಿಧವಾ ವೇತನ ಸೌಲಭ್ಯ ಹೊಂದಿರುವರು. ಇನ್ನುಳಿದ ಹನ್ನೊಂದು ವಿಧವೆಯರು ವಿಧವಾ ವೇತನದಿಂದ ವಂಚಿತರಾಗಿರುವರು. ಪ್ರಾಯಶಃ ಅವರ ಅಲೆಮಾರಿತನ, ಆಧಾರ ಕಾರ್ಡ್, ರೇಷನ್ ಕಾರ್ಡ್‌ಗಳು ಹಾಗೂ ಮತದಾರರ ಚೀಟಿಯನ್ನು

ವಿಧವಾ ವೇತನ ಅರ್ಜಿಯ ಜೊತೆಗೆ ಲಗತ್ತಿಸಬೇಕಾಗುವುದು. ಆದರೆ ಡುಂಗ್ರಿ ಗರಾಸಿಯಾ ಮತ್ತು ಪಾರ್ಧಿ ಬುಡಕಟ್ಟಿನ ಎಷ್ಟೋ ಮಹಿಳೆಯರಿಗೆ ಇಂದಿಗೂ ಆಧಾರ ಕಾರ್ಡ್, ಮತದಾರರ ಚೀಟಿ, ರೇಷನ್ ಕಾರ್ಡ್‌ಗಳ ಸೌಲಭ್ಯಗಳೇ ಇಲ್ಲ. ಹೀಗಾಗಿ ಇವರು ವಿಧವಾ ವೇತನದ ಯೋಜನೆಯಿಂದಲೂ ವಂಚಿತರಾಗಿರುವರು.

**ಬಾಲ್ಯ ವಿವಾಹ ತಡೆ ಕಾಯ್ದೆ**

ಬಾಲ್ಯ ವಿವಾಹ ತಡೆ ಕಾಯ್ದೆಯು ೨೦೦೬ರಲ್ಲಿ ಅನುಷ್ಠಾನಗೊಂಡಿತು. ಈ ಕಾಯ್ದೆಯನ್ನು ಉಪಕಮಿಷನರ್, ಉಪನಿರ್ದೇಶಕರು, ಕಾರ್ಯನಿರ್ವಾಹಣಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ತಹಶೀಲ್ದಾರ, ಕಾರ್ಮಿಕ ಇಲಾಖಾ ಅಧಿಕಾರಿ, ಕ್ಷೇತ್ರ ಶಿಕ್ಷಣಾಧಿಕಾರಿ, ಗ್ರಾಮಲೆಕ್ಕಿಗ ಇತ್ಯಾದಿ ಸರ್ಕಾರಿ ವಿವಿಧ ಇಲಾಖೆಯ ಅಧಿಕಾರಿಗಳು ಈ ಕಾಯ್ದೆಯನ್ನು ಅನುಷ್ಠಾನಗೊಳಿಸುವವರಾಗಿರುವರು. ಬಾಲ್ಯ ವಿವಾಹದ ಕುರಿತು ಮಾಹಿತಿ ತಿಳಿದುಬಂದಲ್ಲಿ ಈ ಅಧಿಕಾರಿಗಳು ಬಾಲ್ಯ ವಿವಾಹ ತಡೆ ಕಾಯ್ದೆಯಡಿ ಕಾರ್ಯನಿರ್ವಹಿಸಿ ವಿವಾಹವನ್ನು ತಡೆದು ಮುಂದಿನ ಕ್ರಮ ಜರುಗಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಬಾಲ್ಯ ವಿವಾಹವು ಬುಡಕಟ್ಟುಗಳಲ್ಲಿ ಸಹಜವಾಗಿದೆ. ಹಕ್ಕಿಪಿಕ್ಕಿ, ಡುಂಗ್ರಿಗರಾಸಿಯಾ ಸಮುದಾಯಗಳಲ್ಲಿ ಮಗು ಹುಟ್ಟುವುದಕ್ಕೂ ಪೂರ್ವದಲ್ಲಿಯೇ ವಿವಾಹದ ಮಾತುಕತೆ ನಡೆಯುತ್ತವೆ. ಬಹುತೇಕ ಇವರ ಮದುವೆಗಳು ತಮ್ಮ ಗುಂಪಿನೊಳಗೆ ಇಲ್ಲವೆ ತಮಗೆ ಭೌಗೋಳಿಕವಾಗಿ ಹತ್ತಿರವಿರುವ ಗುಂಪುಗಳ ಮಧ್ಯದಲ್ಲಿಯ ಗಂಡು ಹೆಣ್ಣುಗಳ ಕೊಡುಕೊಳ್ಳುವಿಕೆಯ ಮೇಲೆ ವಿವಾಹಗಳು ನಿರ್ಧರಿತವಾಗುತ್ತವೆ. ವಿವಾಹ ಏರ್ಪಡಿಸಲು ವಿಜಾತಿ ಬೆಡಗುಗಳಾದರೆ ಸಾಕು. ಸಾಮಾನ್ಯವಾಗಿ ಯಾವುದಾದರೂ ಜಾತ್ರೆ, ಹಬ್ಬ, ಇಲ್ಲವೆ ಕಾರ್ಯಕ್ರಮದಲ್ಲಿ ಒಂದೇ ಕಡೆ ಸೇರಿದಾಗ ಮದುವೆಗೆ ಸಂಬಂಧಿಸಿದ ಮಾತುಕತೆಗಳು ಜರುಗುತ್ತವೆ. ಹೆಣ್ಣು ಗಂಡು ಪರಸ್ಪರ ನೋಡಬೇಕೆಂಬ ಒಪ್ಪಂದವೇನೂ ಈ ಎರಡು ಅಲೆಮಾರಿ ಬುಡಕಟ್ಟುಗಳಲ್ಲಿಲ್ಲ. ಗಂಡು ಹೆಣ್ಣಿನ ತಂದೆ ತಾಯಿಯರು ಸೇರಿ ಮಾತುಕತೆಯಾಡಿದರೆ ಸಾಕು. ಅಕಸ್ಮಾತ್ ಮಾತಿಗೆ ತಪ್ಪಿ ಹುಡುಗಿಯನ್ನು ಬೇರೆಡೆಗೆ ಮದುವೆ ಮಾಡಿಕೊಟ್ಟರೆ ಮದುವೆ ಮಾಡಿಕೊಟ್ಟ ಹೆಣ್ಣಿನ ಕುಟುಂಬದವರು ಜಾತಿ ಪಂಚಾಯತಿಯ ಶಿಕ್ಷೆಯನ್ನು ಅನುಭವಿಸಬೇಕಾಗುವುದು. ಈ ನ್ಯಾಯವು ಹೆಣ್ಣಿನ ಮನೆಗೆ ಮಾತ್ರ ಸೀಮಿತವಾಗಿರದೆ ಗಂಡಿಗೂ ಅದು ಅನ್ವಯವಾಗುವುದು. ಇನ್ನು ಬೇಡ ಹಾಗೂ ಮೇದ ಸಮುದಾಯಗಳಲ್ಲಿಯೂ ಬಾಲ್ಯ ವಿವಾಹ ಹೆಚ್ಚಾಗಿ ನಡೆಯುವವು. ಇತ್ತೀಚೆಗೆ ಆಧುನಿಕ ಶಿಕ್ಷಣ ಪ್ರವೇಶ ಪಡೆದ ಮೇದ ಹಾಗೂ ಬೇಡ ಕುಟುಂಬಗಳು ಬಾಲ್ಯವಿವಾಹದಿಂದ ದೂರವುಳಿದಿವೆ. ಈ ಸಮುದಾಯದ ಜನರಿಗೆ ಬಾಲ್ಯವಿವಾಹ ತಡೆ ಕಾಯ್ದೆಯ ಹೆದರಿಕೆ ಅಲ್ಪಮಟ್ಟಿಗೆ ಇದೆ. ಹಿಗಾಗಿ ಬಹುತೇಕ ಮದುವೆಗಳು ಗೌಪ್ಯವಾಗಿ ನಡೆಯುವುದೇ ಹೆಚ್ಚು.


**'ಉಜ್ವಲ' ಯೋಜನೆ**

ಲೈಂಗಿಕ ಕಾರಣಗಳಿಗಾಗಿಯೇ ಹೆಣ್ಣನ್ನು ಬಹುತೇಕ ಶೋಷಣೆಗೆ ಒಳಗು ಮಾಡುತ್ತದೆ. ಅಕ್ರಮ ಸಾಗಾಣಿಕೆ, ಬಲತ್ಕಾರಗಳಿಗೆ, ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರನ್ನು ರಕ್ಷಿಸುವ, ಆರೈಕೆ ಮಾಡಿ ಅವರ ಕುಟುಂಬಗಳ ಜೊತೆ ಸೇರಿಸುವ, ಸಾಮಾಜಿಕವಾಗಿ ಮಹಿಳೆಯ ಕುರಿತಾಗಿ ಗೌರವ ಭಾವನೆ ಮೂಡಿಸುವ ಮಹಿಳಾ ಶೋಷಣೆಯ ವಿರುದ್ಧ ಜಾಗೃತಿ ಮೂಡಿಸುವ ಉದ್ದೇಶದಿಂದ 'ಉಜ್ವಲ' ಯೋಜನೆ ಜಾರಿಯಾಗಿದೆ. ಮುಖ್ಯವಾಗಿ ದೇಶದ ಗಡಿ ಪ್ರದೇಶದಲ್ಲಿ ಈ ಸಮಸ್ಯೆಗಳಿಗೆ

ಒಳಗಾಗಿ ಅನ್ಯ ರಾಷ್ಟ್ರಕ್ಕೆ ಸಾಗಣೆಗೊಳ್ಳುವ ಮಹಿಳೆಯರನ್ನು ತಡೆದು ಸ್ವಪ್ರದೇಶಕ್ಕೆ, ಸ್ವಕುಟುಂಬಕ್ಕೆ ಮರಳುವಂತೆ ಮಾಡುವುದು. ಅಂತಹ ಮಹಿಳೆಯರಿಗೆ ಊಟೋಪಚಾರ, ಮೂಲಭೂತ ಸೌಕರ್ಯಗಳು ಕಲ್ಪಿಸುವ ಕೆಲಸವನ್ನು ಈ ಯೋಜನೆಯಡಿ ಮಾಡುವರು. ಈ ಯೋಜನೆಯನ್ನು ಸಮಾಜಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಮಹಿಳಾ ಅಭಿವೃದ್ಧಿ ನಿಗಮ ಹಾಗೂ ಇತರೆ ಸ್ವಯಂ ಸೇವಾ ಸಂಸ್ಥೆಗಳು ಅನುಷ್ಠಾನಗೊಳಿಸುತ್ತಿವೆ. ಬುಡಕಟ್ಟು ಸಮುದಾಯಗಳಲ್ಲಿ ಬೇಡ ಸಮುದಾಯದ ಮಹಿಳೆಯರೇ ಹೆಚ್ಚು ಲೈಂಗಿಕ ಶೋಷಣೆಗೆ ಒಳಗಾಗುತ್ತಿರುವುದು ದುರಾದೃಷ್ಟಕರ ಸಂಗತಿಯಾಗಿದೆ. ಹೀಗೆಂದ ಮಾತ್ರಕ್ಕೆ ಮೇದ, ಡುಂಗ್ರಿಗರಾಸಿಯಾ ಹಾಗೂ ಪಾರ್ಧಿ ಸಮುದಾಯಗಳಲ್ಲಿ ಲೈಂಗಿಕ ಶೋಷಣೆ ಇಲ್ಲವೆಂದೇ ಅರ್ಥವಲ್ಲ. ಆದರೆ ಬುಡಕಟ್ಟು ನ್ಯಾಯಪದ್ಧತಿಯನ್ನು ಇನ್ನೂ ಕಟ್ಟುನಿಟ್ಟಾಗಿ ಪಾಲನೆಗೊಳ್ಳುತ್ತಿರುವುದರಿಂದ ಲೈಂಗಿಕ ಶೋಷಣೆ ಮಾಡಿದವರಿಗೆ ಕಠಿಣವಾದ ಶಿಕ್ಷೆಗೊಳಪಡಿಸುವುದರಿಂದ ಲೈಂಗಿಕ ಶೋಷಣೆಯ ಪ್ರಮಾಣ ತುಂಬಾ ಕಡಿಮೆಯಂದೇ ಹೇಳಬಹುದು. ಲೈಂಗಿಕ ಶೋಷಣೆಗೆ ಒಳಗಾದ ಮಹಿಳೆಯರಿಗೆ ಕಾನೂನು ಸಹಾಯ ಮಾಡುವುದು, ತಾತ್ಕಾಲಿಕ ಆಶ್ರಯ ಹಾಗೂ ಲೈಂಗಿಕ ಶೋಷಣೆಗೆ ಒಳಗಾದ ಮಹಿಳೆಯು ಸ್ವಾವಲಂಬಿಯಾಗಿ ಜೀವನ ನಡೆಸಲು ಅವಶ್ಯವಾದ ತರಬೇತಿ ಸೌಲಭ್ಯ ಒದಗಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಈ ಕಾರ್ಯಕ್ರಮವನ್ನು ಸರ್ಕಾರೇತರ ಸ್ವಯಂಸೇವಾ ಸಂಘಗಳು ನಡೆಸಲು ಅವಕಾಶ ಕಲ್ಪಿಸಿದ್ದು ಅದಕ್ಕೆ ಅವಶ್ಯವಾದ ಅನುದಾನವನ್ನು ಸರ್ಕಾರವು ಪೂರೈಸುತ್ತದೆ. ಸಂತ್ವಾನ ಕೇಂದ್ರಗಳು ೨೪ ಗಂಟೆಯೂ ಸೇವೆಯನ್ನು ನೀಡುವವು. ಈ ಕೇಂದ್ರಗಳ ಮೇಲುಸ್ತುವರಿಗಾಗಿ ಜಿಲ್ಲಾ ಮಟ್ಟದಲ್ಲಿ ಸಮಿತಿಯೊಂದಿದ್ದು ಅದರ ನಿರ್ದೇಶನದ ಪ್ರಕಾರ ಸಂತ್ವಾನ ಕೇಂದ್ರಗಳು ಕಾರ್ಯನಿರ್ವಹಿಸುತ್ತವೆ. ಸಂತ್ವಾನ ಕೇಂದ್ರದ ಆಶ್ರದಲ್ಲಿರುವ ಮಹಿಳೆಯರ ಅವಶ್ಯಕತೆಯನ್ನು ಗಮನಿಸಿ ರೂ ೨೦೦೦/–ದಿಂದ ರೂ ೧೦,೦೦೦/–ವರೆಗೂ ಆರ್ಥಿಕ ನೆರವನ್ನು ನೀಡುವ ಅವಕಾಶವನ್ನೂ ಕಲ್ಪಿಸಲಾಗಿರುವುದು. ಪ್ರತಿ ತಾಲೂಕಿನಲ್ಲಿಯೂ ಇಂತಹ ಸಂತ್ವಾನ ಕೇಂದ್ರಗಳು ಕಾರ್ಯನಿರ್ವಹಿಸುತ್ತವೆ. ಕ್ಷೇತ್ರಕಾರ್ಯದಲ್ಲಿ ಸಂತ್ವಾನ ಕೇಂದ್ರದ ನೆರವನ್ನು ಒಬ್ಬ ಬುಡಕಟ್ಟು ಮಹಿಳೆಯೂ ಪಡೆಯದೇ ಇರುವುದು ತಿಳಿದುಬಂದಿತು. ಸಾಮಾಜಿಕ ಪಿಡುಗುಗಳಾದ ವರದಕ್ಷಿಣೆ, ಬಾಲ್ಯವಿವಾಹ, ಕೌಟಂಬಿಕ ದೌರ್ಜನ್ಯ, ಮಹಿಳಾ ಶೋಷಣೆಗಳನ್ನು ತಡೆಗಟ್ಟಲೆಂದೇ ವಿಶೇಷ ಕೇಂದ್ರದ ಸ್ಥಾಪನೆಯನ್ನು ಸರ್ಕಾರವು ಸ್ಥಾಪಿಸಿದೆ. ಕೌಟಂಬಿಕ ದೌರ್ಜನ್ಯವು ಶೇಕಡ ೮೦ರಷ್ಟು ಕುಟುಂಬಗಳಲ್ಲಿರುವುದಾಗಿ ಹೇಳಲಾಗುವುದು. ಆದರೆ ನೆಲೆಸಿಗ ಬುಡಕಟ್ಟುಗಳಾದ ಬೇಡ ಸಮುದಾಯದ ಮಹಿಳೆಯರಿಗೆ ಕೌಟಂಬಿಕ ದೌರ್ಜನ್ಯದ ಕುರಿತು ಪ್ರಶ್ನಿಸಿದರೆ ಶೇಕಡ ೪೦ರಷ್ಟು ಮಹಿಳೆಯರು ಯಾವ ಉತ್ತರವನ್ನೂ ನೀಡದೆ ಮೌನವಹಿಸಿದರು. ಶೇಕಡ ೫೦ರಷ್ಟು ಮಹಿಳೆಯರು ನಮ್ಮ ಗಂಡ ಕುಡುಕ, ಸಂಸಾರದ ಜವಾಬ್ದಾರಿ ಇಲ್ಲದವನು, ಕುಡಿತಕ್ಕಾಗಿ ನಮ್ಮ ದುಡಿಮೆಯಲ್ಲಿಯೇ ಪಾಲು ಕೇಳುವನು, ಹಣ ಕೊಡದಿದ್ದರೆ ಹೊಡೆಯುವನು ಇತ್ಯಾದಿ ಉತ್ತರಗಳನ್ನು ನೀಡಿದರು. ಶೇಕಡ ೮ರಷ್ಟು ಮಹಿಳೆಯರು ತಮ್ಮ ಕುಟುಂಬದಲ್ಲಿ ಗಂಡ, ಅತ್ತೆ, ಮಾವರ ಕಿರುಕುಳ ಇದೆ. ಅದು ಅತಿಯಾದಾಗ ತವರುಮನೆಯವರ ಸಹಾಯದಿಂದ ವ್ಯಾಜ್ಯ ಬಗೆಹರಿಸಿಕೊಳ್ಳುವುದಾಗಿ ತಿಳಿಸಿದರು. ಇನ್ನೂ ಶೇಕಡ ಎರಡರಷ್ಟು ಮಹಿಳೆಯರು ತಮ್ಮ ಮನೆಯಲ್ಲಿ ಅತ್ತೆ, ಮಾವರ ಕಾಟಕ್ಕಿಂತ ಗಂಡನ ಕಿರುಕುಳ ಹೆಚ್ಚು, ತಾವು ಕುಟುಂಬದ ಸದಸ್ಯರಿಗೆ ಅಥವಾ ಗಂಡನಿಗೆ ಹೆದರದೆ ಧೈರ್ಯವಾಗಿ ಪ್ರತಿಭಟಿಸುತ್ತೇವೆ, ಸಾಧ್ಯವಾಗದಿದ್ದಾಗ ಪೋಲೀಸರ ಸಹಾಯವನ್ನೂ ಪಡೆಯುವುದಾಗಿ ತಿಳಿಸಿದರು.

| ಕೋಷ್ಟಕ ೬.೧೧ ಕೌಟಂಬಿಕ ದೌರ್ಜನ್ಯಕ್ಕೆ ಒಳಗಾಗುವ ಮಹಿಳೆಯರ ವಿವರ (ಶೇಕಡವಾರುಗಳಲ್ಲಿ) | | | | | | |
|---|---|---|---|---|---|---|
| ಸಮುದಾಯ | ವಿವಾಹಿತ ಮಹಿಳೆಯರು | ಕಿರುಕುಳಕ್ಕೆ ಒಳಗಾದವರು | ಕಿರುಕುಳದಿಂದ ಬೇಸತ್ತು ತವರುಮನೆ ಸಹಾಯ ಪಡೆಯುವವರು | ನೇರವಾಗಿ ಪ್ರತಿಭಟಿಸುವವರು/ ಪೋಲೀಸ್ ಸಹಾಯ ಪಡೆಯುವವರು | ಮೌನವಾಗಿರುವವರು | ಕುಲಪಂಚಾಯತಿ ಮೊರೆಹೋಗುವವರು |
| ಬೇಡ | ೧೨೦ | ೬೦ | ೧೦ | ೦೨ | ೪೦ | ೦೮ |
| ಮೇದ | ೧೫೭ | ೯೫ | ೦೭ | ೦೫ | ೫೦ | – |
| ಡುಂಗ್ರಿಗರಾಸಿಯಾ | ೧೭೫ | ೯೦ | ೧೧ | ೩೪ | ೦೭ | ೩೩ |
| ಪಾರ್ಧಿ | ೧೭೮ | ೮೫ | ೦೮ | ೪೫ | ೦೪ | ೩೬ |
| ಒಟ್ಟು | ೬೩೦ | ೩೩೦ | ೩೬ | ೮೬ | ೧೦೧ | ೭೭ |

ವೃತ್ತ ಚಿತ್ರ ೬.೧೧. ಕೌಟಂಬಿಕ ದೌರ್ಜನ್ಯಕ್ಕೆ ಒಳಗಾಗುವ ಮಹಿಳೆಯರ ವಿವರ (ಶೇಕಡವಾರುಗಳಲ್ಲಿ)




ಮೇದ ಸಮುದಾಯದ ಮಹಿಳೆಯರಿಗೆ ಕೌಟಂಬಿಕ ದೌರ್ಜನ್ಯದ ಕುರಿತು ಪ್ರಶ್ನಿಸಿದರೆ ೧೦೧ ಮಹಿಳೆಯರು ಯಾವ ಉತ್ತರವನ್ನೂ ನೀಡದೆ ಮೌನವಹಿಸಿದರು. ೩೩೦ ಮಹಿಳೆಯರು ನಮ್ಮ ಗಂಡ ಕುಡುಕ, ಸಂಸಾರದ ಜವಾಬ್ದಾರಿ ಇಲ್ಲದವನು, ಕುಡಿತಕ್ಕಾಗಿ ನಮ್ಮ ದುಡಿಮೆಯಲ್ಲಿಯೇ ಪಾಲು ಕೇಳುವನು, ಹಣ ಕೊಡದಿದ್ದರೆ ಹೊಡೆಯುವನು ಇತ್ಯಾದಿ ಕಿರುಕುಳಗಳ ಕುರಿತು ಉತ್ತರಗಳನ್ನು ನೀಡಿದರು. ೩೬ ಮಹಿಳೆಯರು ತಮ್ಮ ಕುಟುಂಬದಲ್ಲಿ ಗಂಡ, ಅತ್ತೆ, ಮಾವರ ಕಿರುಕುಳ ಸಹಿಸದೆ ತವರುಮನೆಗೆ ತೆರಳಿರುವುದಾಗಿ ತಿಳಿಸಿದರು. ೮೪ ಮಹಿಳೆಯರು ತಮ್ಮ ಮನೆಯಲ್ಲಿ ಅತ್ತೆ, ಮಾವರ ಕಾಟಕ್ಕಿಂತ ಗಂಡನ ಕಿರುಕುಳ ಹೆಚ್ಚು, ತಾವು ಕುಟುಂಬದ ಸದಸ್ಯರಿಗೆ ಅಥವಾ ಗಂಡನಿಗೆ ಹೆದರದೆ ಧೈರ್ಯವಾಗಿ ಪ್ರತಿಭಟಿಸುತ್ತೇವೆ ಎಂದು ತಿಳಿಸಿದರು. ೬೬ ಮಹಿಳೆಯರು ಕುಲಪಂಚಾಯತಿಗೆ ಮೊರೆಹೋಗುವುದಾಗಿ ತಿಳಿಸಿದರು. ಒಟ್ಟಾರೆಯಾಗಿ ಸಾಮಾಜಿಕವಾಗಿ ಮಹಿಳೆಯರ ಸಬಲೀಕರಣವಾಗಬೇಕೆಂಬ ಆಶಯದಿಂದ ಯೋಜನೆಗಳು ಅನುಷ್ಠಾನ ಮಾಡಲಾಗುತ್ತಿದೆ. ಆದರೆ ಬುಡಕಟ್ಟು ಸಮುದಾಯಗಳ ಸಾಮಾಜಿಕ ಸಂರಚನೆಯೇ ಇತರೆ ಸಮುದಾಯಗಳಿಗಿಂತ ಭಿನ್ನವಾಗಿರುವುದರಿಂದ ಸರ್ಕಾರದ ಸಾಮಾಜಿಕ ಸಬಲೀಕರಣಗಳಿಗಾಗಿ ಇರುವ ಯೋಜನೆಗಳು ಬುಡಕಟ್ಟು ಸಮುದಾಯಗಳಿಗೆ ಅಷ್ಟಾಗಿ ತಲುಪುತ್ತಿಲ್ಲವೆಂಬುದು ಕ್ಷೇತ್ರಕಾರ್ಯದ ಮೂಲಕ ತಿಳಿದುಬಂದಿತು.

### ೬.೨ ಶೈಕ್ಷಣಿಕ ಸಬಲೀಕರಣ

ಭಾರತೀಯ ಸಮಾಜದ ಜಾತಿ ಹಾಗೂ ಲಿಂಗ ವ್ಯವಸ್ಥೆಯಲ್ಲಿ ಸಮಾನತೆ ಬರಬೇಕಾದರೆ ಮುಖ್ಯವಾಗಿ ತಳಜಾತಿಗಳು ಹಾಗೂ ಮಹಿಳೆಯರು ಶಿಕ್ಷಣವನ್ನು ಪಡೆಯಲೇಬೇಕೆಂದು ಅಂಬೇಡ್ಕರ್‌ರವರು ತಿಳಿಸುತ್ತಾರೆ. ಆ ಕಾರಣಕ್ಕಾಗಿಯೇ ಸಂವಿಧಾನದಲ್ಲಿ ಹಿಂದುಳಿದ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ



ಪಂಗಡಗಳಿಗೆ ಹಾಗೂ ಮಹಿಳೆಯರಿಗೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮೀಸಲಾತಿ ನೀಡಬೇಕೆಂದು ತಿಳಿಸಲಾಗಿದೆ. ಶಿಕ್ಷಣ ಮನುಷ್ಯನ ಆತ್ಮಗೌರವವನ್ನು ಹೆಚ್ಚಿಸುತ್ತದೆ ಹಾಗೂ ಹೆಣ್ಣು ಸ್ವಾಭಿಮಾನದಿಂದ ಬದುಕನ್ನು ಸಾಗಿಸಲು ಆತ್ಮಸ್ಥೈರ್ಯವನ್ನು ನೀಡುತ್ತದೆ. ಹೀಗಾಗಿ ಪ್ರತಿಯೊಬ್ಬರಿಗೂ ಕಡ್ಡಾಯ ಶಿಕ್ಷಣದ ಅವಶ್ಯಕತೆಯನ್ನು ಮನಗಂಡ ಸರ್ಕಾರ ಭಾರತದ ಪ್ರತಿಯೊಬ್ಬ ಪ್ರಜೆಗೂ ಕಡ್ಡಾಯ ಶಿಕ್ಷಣ ನೀತಿಯನ್ನು ಅನುಸರಿಸುವಂತೆ ತಿಳಿಸುತ್ತದೆ. ಆದರೆ ಯಾವುದೇ ನೀತಿ ಅಥವಾ ನಿಯಮಗಳು, ಒತ್ತಡಗಳು ಮನುಷ್ಯನಿಗೆ ಆ ಮುಖವಾಗಿ ಮುನ್ನಡೆಸಲು ಸಾಧನವಾಗುವುದಿಲ್ಲ. ಮುಖ್ಯವಾಗಿ ಹಿಂದುಳಿದ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ತಮ್ಮ ಮಕ್ಕಳನ್ನು ಅದರಲ್ಲೂ ಹೆಣ್ಣುಮಕ್ಕಳನ್ನು ಶಾಲೆಗೆ ಸೇರಿಸಲು ಹಿಂಜರಿಯುವುದೇಕೆ, ಶಾಲೆಗೆ ಸೇರಿಸಿದರೂ ಆ ಮಕ್ಕಳು ಶಾಲೆಯನ್ನು ಪೂರೈಸಲು ಏಕೆ ಸಾಧ್ಯವಾಗುತ್ತಿಲ್ಲ ಎಂಬುದರ ಆಳಕ್ಕೆ ಇಳಿದು ನೋಡಿದರೆ ಬೇರೆ ಸತ್ಯಗಳೇ ಹೊರಬೀಳುತ್ತವೆ. ಭಾರತೀಯರ ಮೂಲಭೂತ ಸಮಸ್ಯೆಗಳಲ್ಲಿ ಬಡತನವೂ ಒಂದು, ಕೇವಲ ಬಡತನವೊಂದೇ ಶಿಕ್ಷಣಕ್ಕೆ ಅಡ್ಡಿ ಎಂದು ನಾವು ತಿಳಿಯಬಾರದು. ಅದರಾಚೆಗೂ ಹಲವಾರು ಸಾಮಾಜಿಕ ಕಾರಣಗಳು ಹೆಣ್ಣುಮಕ್ಕಳು ಶಾಲೆಗೆ ಹೋಗದಂತೆ ತಡೆಯುತ್ತವೆ. ಉದಾಹರಣೆಗೆ ಕರ್ನಾಟಕದಲ್ಲಿ ಅನುಸೂಚಿತ ಪಟ್ಟಿಯಲ್ಲಿರುವ ಪರಿಶಿಷ್ಟ ಪಂಗಡಗಳ ಸಂಖ್ಯೆ ಐವತ್ತಿದೆ ಆದರೆ ಈ ಐವತ್ತು ಸಮುದಾಯಗಳಲ್ಲಿ ನಿಜಕ್ಕೂ ಶಿಕ್ಷಣಕ್ಕೆ ತೆರೆದುಕೊಂಡಿರುವ ಸಮುದಾಯಗಳು ಕೇವಲ ಬೆರಳೆಣಿಕೆಯಷ್ಟಿವೆ. ಈ ಐವತ್ತು ಸಾಮುದಾಯಗಳಲ್ಲಿ ನಲವತ್ತೆಂಟರಷ್ಟು ಪರಿಶಿಷ್ಟ ಪಂಗಡದ ಸಮುದಾಯಗಳಲ್ಲಿ ಶೇಕಡ ನಾಲ್ಕರಷ್ಟು ಶಿಕ್ಷಣ ಪಡೆಯಲು ಸಾಧ್ಯವಾಗಿಲ್ಲವೆಂದರೆ ಆಶ್ಚರ್ಯವಾಗಬಹುದು. ಜನಸಮುದಾಯಗಳ ಮಧ್ಯ ಇದ್ದು ನಾಗರೀಕ ಬದುಕನ್ನು ಕಂಡ ಪರಿಶಿಷ್ಟ ಪಂಗಡದಲ್ಲಿರುವ ಬೇಡ ಸಮುದಾಯದಂತಹ ಸಮುದಾಯಗಳು ಮಾತ್ರ ಇಂದು ಶಿಕ್ಷಣದಲ್ಲಿ ಅಲ್ಪ ಮಟ್ಟಿಗೆ ಮುಂದಿವೆ.

ಸಾರ್ವತ್ರಿಕವಾಗಿ ಕರ್ನಾಟಕದ ಶೈಕ್ಷಣಿಕ ಸ್ಥಿತಿಗತಿಗಳನ್ನು ನೋಡುವಾಗ ಸಾಮಾನ್ಯವಾಗಿ ಕರ್ನಾಟಕದ ಒಟ್ಟು ಶೈಕ್ಷಣಿಕ ಪ್ರಗತಿ, ಅದರಲ್ಲಿ ಪರಿಶಿಷ್ಟ ಜಾತಿಗಳ ಶೈಕ್ಷಣಿಕ ಪ್ರಗತಿ ಹಾಗೂ ಪರಿಶಿಷ್ಟ ಪಂಗಡಗಳ ಶೈಕ್ಷಣಿಕ ಪ್ರಗತಿ, ಹಾಗೂ ಇತರರ ಶೈಕ್ಷಣಿಕ ಪ್ರಗತಿ ಈ ಮಾದರಿಯಲ್ಲಿ ನೋಡುವುದು ವಾಡಿಕೆ. ಅಂದರೆ ಇಂದು "ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳ ಒಟ್ಟು ಶೈಕ್ಷಣಿಕ ಪ್ರಗತಿ ಎಂಬುದು ಕೇವಲ ಕೆಲವೇ ಸಮುದಾಯಗಳಿಗೆ ಮಾತ್ರ ಸೀಮಿತವಾಗಿದೆ"(ಪ್ರಶಾಂತ ಹೆಚ್ ಡಿ:೨೦೦೧:೬೭), ಎಂಬುದನ್ನು ಗಮನಿಸಬೇಕಾಗುತ್ತದೆ. ಇಂದು ಉದ್ಯೋಗ, ಶಿಕ್ಷಣ ಹಾಗೂ ಇತರ ಸವಲತ್ತುಗಳನ್ನು ಈ ಸಮುದಾಯಗಳು ಮಾತ್ರ ಅಲ್ಪ ಮಟ್ಟಿಗಾದರೂ ಪಡೆಯಲು ಸಾಧ್ಯವಾಗಿದೆ. ಆದರೆ ಇದರಲ್ಲಿಯೇ ಅಲ್ಪ ಸಂಖ್ಯಾತವಾದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳು ಶಿಕ್ಷಣದಂತಹ ಮೂಲಭೂತ ಸೌಲಭ್ಯವನ್ನು ಪಡೆಯಲು ಸಾಧ್ಯವಾಗಿಲ್ಲವೆಂಬುದನ್ನು ತಿಳಿಸಲೇಬೇಕಾದ ಅನಿವಾರ್ಯತೆ ಇದೆ. ಈ ಮಾತನ್ನು ಹೇಳಲು ಮುಖ್ಯ ಕಾರಣವೇನೆಂದರೆ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವ ಸಮುದಾಯಗಳೊಂದಿಗೆ ಅವಕಾಶವಂಚಿತ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಮೂಲಭೂತ ಸೌಲಭ್ಯಗಳು ದೊರೆಯಬೇಕೆಂಬ ಆಶಯವಿದೆ. ದಲಿತರಲ್ಲಿಯೇ

ದಲಿತರೆಂದು ಪರಿಗಣಿತದಾದ ಮಹಿಳೆಯರು ಶೈಕ್ಷಣಿಕ ಪ್ರಗತಿಯಲ್ಲಿ ತುಂಬಾ ಹಿಂದುಳಿದಿದ್ದಾರೆ. ಮುಖ್ಯವಾಗಿ ಮೇಲ್ವರ್ಗಗಳಲ್ಲಿ ಸಾಮಾಜಿಕ ಕಾರಣಗಳಿಗಾಗಿ ಮಹಿಳೆಯರನ್ನು ಮನೆಯಿಂದ ಹೊರಗೆ ವಿದ್ಯಾಭ್ಯಾಸಕ್ಕಾಗಿ ಕಳಿಸುವುದು ತುಂಬಾ ಅಪರೂಪವಾಗಿದೆ. ಹುಡುಗಿಯರು ಹದಿಮೂರು ವರ್ಷದಿಂದ ಹದಿನಾರು ವರ್ಷದೊಳಗೆ ಋತಿಮತಿಯಾಗುವುದು ಪ್ರಕೃತಿ ನಿಯಮ, ಹೀಗೆ ಮೈನೆರೆದ ಮಕ್ಕಳನ್ನು ಶಾಲೆಗೆ, ಅದರಲ್ಲೂ ಊರಿನಾಚೆಗೆ ಇರುವ ಶಾಲೆಗಳಿಗೆ ಕಳಿಸುವುದು (ಸಾಮಾಜಿಕ ಕಾರಣಗಳಿಗಾಗಿ) ಅಪಾಯವೆಂದೇ ಭಾವಿಸುವ ಪಾಲಕರು ಸಾಮಾನ್ಯವಾಗಿ ಉನ್ನತ ಶಿಕ್ಷಣಕ್ಕೆ ಹುಡುಗಿಯರನ್ನು ಕಳಿಸಲು ಹಿಂಜರಿಯುವರು.

ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ, ಅವಳಿಗೆ ಬಂಡವಾಳ ತೊಡಗಿಸಿ ಓದುಸುವುದಕ್ಕಿಂತ ಅದೇ ಹಣವನ್ನು ವರದಕ್ಷಿಣೆಯಾಗಿ ನೀಡಿ ಮದುವೆ ಮಾಡಿಕೊಟ್ಟರೆ ತಮ್ಮ ಜವಬ್ದಾರಿ ಕಳೆಯುತ್ತದೆ ಎಂದು ಭಾವಿಸುವ ಪಾಲಕರ ಪ್ರಮಾಣವೇ ಹೆಚ್ಚು. ಹೀಗಾಗಿ ಮಹಿಳೆಯರಿಗೆ ಉನ್ನತ ಶಿಕ್ಷಣ ಕೊಡಿಸುವುದರಲ್ಲಿ ಪಾಲಕರು ಹಿಂಜರಿಯುತ್ತಾರೆ. ಭಾರತೀಯರ ಮನೋಭೂಮಿಕೆಯಲ್ಲಿ ಶಿಕ್ಷಣವೆಂಬುದು ಸರ್ಕಾರಿ ಹುದ್ದೆಯನ್ನು ಗಿಟ್ಟಿಸುವ ಹೆಬ್ಬಾಗಿಲಾಗಿ ಕಾಣಿಸುತ್ತದೆ. ಆದರೆ ಸರ್ಕಾರಿ ಹುದ್ದೆಗಳನ್ನು ಪಡೆಯಲು ಉಬ್ಬಸಪಡುವ ಯುವಜನತೆಯನ್ನು ನೋಡಿದ ಪಾಲಕರು ತಮ್ಮ ಮಕ್ಕಳು ಓದಿ ಕೆಲಸ ಸಿಗುವಷ್ಟರಲ್ಲಿ ತಮ್ಮ ಸಮಾದಿಯಾಗಿರುತ್ತದೆಂದು ತಿಳಿಯುವರು. ಇಂದು ಕೇವಲ ಓದಿನಿಂದ ಕೆಲಸ ಸಿಗದು, ಕೆಲಸ ಪಡೆಯಲು ಲಕ್ಷ, ಲಕ್ಷ ಹಣವನ್ನು ಲಂಚ ರೂಪದಲ್ಲಿ ನೀಡಬೇಕು, ತಮ್ಮಂತಹ ಬಡ ಕುಟುಂಬಗಳು ಎಲ್ಲಿಂದ ಲಕ್ಷದ ಎಣಿಕೆಯ ಹಣವನ್ನು ಹೊಂದಿಸುವುದು ಎಂಬ ಹೆದರಿಕೆಯಿಂದಲೇ ಅರ್ಧ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಹಿಂಜರಿಯುವರು. ಬುಡಕಟ್ಟು ಸಮುದಾಯಗಳಿಗೆ ಶಿಕ್ಷಣಕ್ಕಿಂತ ಹೆಚ್ಚಾಗಿ ತಮ್ಮ ನಿತ್ಯ ಜೀವನದ ಬದುಕೇ ಮುಖ್ಯವಾಗಿರುವುದು. ತಮ್ಮ ಕುಟುಂಬದ ನಿರ್ವಹಣೆಗೆ ಮತ್ತೊಂದು ಕೈ ಜೋಡಿಯಾದರೆ ತಮ್ಮ ಸಂಕಷ್ಟ ಸ್ವಲ್ಪ ತಗ್ಗೀತು ಎಂದು ಯೋಚಿಸುವ ಪಾಲಕರೇ ಬುಡಕಟ್ಟುಗಳಲ್ಲಿ ಹೆಚ್ಚು. ಶಾಲೆಗೆ ಮಕ್ಕಳನ್ನು ಕಳಿಸಿದರೂ ಅದು ತುಂಬಾ ಅಪರೂಪವೆಂದೇ ಹೇಳಬೇಕು. ಅಕಸ್ಮಾತ್ ಮಧ್ಯಾಹ್ನದ ಊಟ, ಉಚಿತ ಪಠ್ಯಪುಸ್ತಕ ಇತ್ಯಾದಿ ಯೋಜನೆಗಳ ಆಮಿಷವನ್ನು ಸರ್ಕಾರ ನೀಡಿದರೂ ಅದು ತಾತ್ಕಲಿಕವೆಂಬ ಭಾವನೆ ಪಾಲಕರದ್ದಾಗಿದೆ. ಸರ್ಕಾರದ ವಿಚಿತ್ರವಾದ ನೀತಿಗಳಿಂದ ಪಾರಾಗಲು ಬಹುತೇಕ ಶಾಲಾ ಶಿಕ್ಷಕರು ಆಡಳಿತಾತ್ಮಕವಾದ ತಲೆನೋವಿನಿಂದ ಪಾರಾಗಲು ಗೈರು ಹಾಜರಾದ ಮಕ್ಕಳನ್ನು ಕೂಡ ಹಾಜರಾಗಿರುವರು ಎಂದು ತಿಳಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ ಹೀಗಾಗಿ ಬಹುತೇಕ ಎಷ್ಟೋ ಮಕ್ಕಳು, ವಿಶೇಷವಾಗಿ ಬುಡಕಟ್ಟು ಮಕ್ಕಳು ಶಾಲೆಯಲ್ಲಿ ಹಾಜರಾದಂತೆ ಮೇಲ್ನೋಟಕ್ಕೆ ಕಾಣುವರಾದರೂ ವಾಸ್ತವವಾಗಿ ಶಾಲೆಯಿಂದ ಹೊರಗುಳಿಯುವುದೇ ಹೆಚ್ಚು ಎಂಬುದನ್ನು ಕ್ಷೇತ್ರಕಾರ್ಯದಲ್ಲಿ ಕಂಡುಬಂದಿತು. ಈ ರೀತಿಯ ವೈರುಧ್ಯಗಳಿಗೆ ಕಾರಣ ಕೇಳಿದರೆ ಪಾಲಕರು ಇದು ತಮ್ಮ ಬದುಕಿನ ಅನಿವಾರ್ಯತೆಯಂದೇ ಉತ್ತರ ನೀಡುವರು.

**ಶಾಲೆಯಿಂದ ಹೊರಗುಳಿದ ೬-೧೪ ವಯೋಮಾನದ ಮಕ್ಕಳ ವಿವರ**

ಆರ್ಥಿಕ ಹಾಗೂ ಸಾಂಖ್ಯಿಕ ನಿರ್ದೇಶನಾಲಯವು ೨೦೦೪ರಲ್ಲಿ ಪರಿಶಿಷ್ಟ ಪಂಗಡದ ಕುಟುಂಬಗಳ ಕುರಿತು ಮಾದರಿ ಸಮೀಕ್ಷೆಯನ್ನು ಕೈಗೊಂಡಿತ್ತು. ಅದು ೯-೩೫ ವಯೋಮಾನದೊಳಗಿನ ಜನರಿಂದ ಮಾಹಿತಿಯನ್ನು ಸಂಗ್ರಹಿಸಿದೆ. ಈ ಸಮೀಕ್ಷೆಯು ಹೆಣ್ಣು ಮಕ್ಕಳು ಶಾಲೆಯನ್ನು ಬಿಡಲು ಇರುವ ಕಾರಣಗಳನ್ನು ಈ ಕೆಳಗಿನಂತೆ ಗುರುತಿಸಿದೆ.

೧. ಮನೆಯಲ್ಲಿ ಗೃಹಕೃತ್ಯದ ಕೆಲಸಗಳಲ್ಲಿ ತೊಡಗುವುದು.

೨. ಪಾಲಕರಿಗೆ ಮಕ್ಕಳ ಶಿಕ್ಷಣದ ಹೊರೆಯನ್ನು ಭರಿಸಲು ಸಾಧ್ಯವಾಗದೇ ಇರುವುದು.

೩. ಮಕ್ಕಳ ಪಾಲನೆ ಪೋಷಣೆಗಾಗಿ ಶಾಲೆಯನ್ನು ತೊರೆಯುವುದು.

೪. ಹೊರಗೆ ಕೂಲಿ ಕೆಲಸಗಳಲ್ಲಿ ತೊಡಗುವುದು ಎಂಬ ಕಾರಣಗಳನ್ನು ಗುರುತಿಸಲಾಗಿದೆ.

ಪ್ರಾಥಮಿಕ ಶಾಲಾ ಹಂತದ ಸ್ಥಿತಿಯೇ ಹೀಗಿದ್ದರೆ ಉನ್ನತ ಶಿಕ್ಷಣ ಹಂತದ ಸ್ಥಿತಿ ಹೇಗಿರಬೇಡ. "ಉನ್ನತ ಹಂತದ ಶಿಕ್ಷಣದಲ್ಲಿ ಮಹಿಳೆಯರ ಪ್ರಮಾಣ ಇನ್ನಿಲ್ಲದಷ್ಟು ಕುಗ್ಗಿದೆ. ತಾಂತ್ರಿಕ ಶಿಕ್ಷಣದಲ್ಲಂತೂ (ಡಿಪ್ಲೊಮಾ, ಬಿ.ಇ, ಬಿಟೆಕ್, ವೈದ್ಯಕೀಯ ಇತ್ಯಾದಿ) ಪರಿಶಿಷ್ಟ ಪಂಗಡದ ಮಕ್ಕಳ ಪಾಲು ೨೦೦೦-೦೧ ರಲ್ಲಿ ಶೇಕಡ ೦.೧ ರಷ್ಟು ಇದ್ದು ೨೦೧೧-೨೨ರ ಹೊತ್ತಿಗೆ ಅದು ಶೇಕಡ ೧.೮ರಷ್ಟು ಏರಿಕೆ ಕಂಡಿದೆ. ಡಿಪ್ಲೊಮಾ ಕೋರ್ಸ್‌ಗಳಲ್ಲಿ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ದಾಖಾಲಾತಿಯು ಕನಿಷ್ಟ ಶೇಕಡ ೦.೮ರಷ್ಟು ಕಂಡುಬಂದಿದೆ" ಅಂದರೆ ತಾಂತ್ರಿಕ ಶಿಕ್ಷಣವನ್ನು ಪಡೆಯುವಲ್ಲಿ ಪರಿಶಿಷ್ಟ ಪಂಗಡಗಳು ಸೋತಿವೆ ಎಂದೇ ಇದರರ್ಥ. ಸರ್ಕಾರದ ಹೊಸ ಹೊಸ ಯೋಜನೆಗಳಾದ ವಿದ್ಯಾರ್ಥಿವೇತನ, ಉಚಿತ ವಸತಿ ನಿಲಯಗಳ ಸೌಲಭ್ಯ ಇತ್ಯಾದಿಗಳು ಇಂದು ಪರಿಶಿಷ್ಟ ಪಂಗಡದ ಮಕ್ಕಳಿಗೆ ದೊರೆಯುತ್ತಿವೆಯಾದರೂ ಸಹ ಆ ಸಮುದಾಯಗಳು ನಿರೀಕ್ಷಿತ ಮಟ್ಟದಲ್ಲಿ ಶೈಕ್ಷಣಿಕ ಪ್ರಗತಿಯನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಜನಸಂಖ್ಯಾಶಾಸ್ತ್ರಜ್ಞರ ಪ್ರಕಾರ ಜನಸಂಖ್ಯೆಯ ಬೆಳವಣಿಗೆಯ ಪ್ರಮಾಣ ನಿಯಂತ್ರಣ ಮಾಡಬೇಕೆಂದರೆ ಮೊದಲಿಗೆ ಜನತೆಯಲ್ಲಿ ಮೊದಲಿಗೆ ಸಾಕ್ಷರತೆಯ ಪ್ರಮಾಣ ಹೆಚ್ಚಬೇಕು. ಅದರಲ್ಲೂ ಮುಖ್ಯವಾಗಿ ಮಹಿಳೆಯರ ಸಾಕ್ಷರತೆಯು ಜನಸಂಖ್ಯೆಯನ್ನು ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂದೇ ಹೇಳುತ್ತಾರೆ. ಜನಸಂಖ್ಯೆಯನ್ನು ನಿಯಂತ್ರಿಸುವಲ್ಲಿನ ವೈಫಲ್ಯಗಳ ಕುರಿತು ಆಶೀಶ್ ಬೋಸ್‌ರವರು ಈ ಕೆಳಗಿನ ಕಾರಣಗಳನ್ನು ನೀಡುತ್ತಾರೆ.

೧. ಶೀಘ್ರವಾಗಿ ಅನಕ್ಷರತೆಯನ್ನು ತೊಲಗಿಸುವಲ್ಲಿ ಇರುವ ಭಾರತೀಯರ ವೈಫಲ್ಯ

೨. ಜನಸಾಮಾನ್ಯರ ಕನಿಷ್ಟ ಜೀವನಾವಶ್ಯಕತೆಯನ್ನು ಪೂರೈಸುವಲ್ಲಿ ಇರುವ ಕೊರತೆ


೩. ಸಮಾಜದಲ್ಲಿ ಅನಕ್ಷರತೆಯು ವ್ಯಾಪಕವಾಗಿರುವುದರಿಂದ ಜನಸಂಖ್ಯೆಯ ಬೆಳವಣಿಗೆಯ ನಿಯಂತ್ರಣದ ಮಹತ್ವವನ್ನು ತಿಳಿಸಿಕೊಡುವುದರಲ್ಲಿನ ವೈಫಲ್ಯಗಳೇ ಕಾರಣವೆಂದು ಬೋಸ್‌ರವರು ಒತ್ತಿಹೇಳುತ್ತಾರೆ.

"ಸಾಕ್ಷರತೆಯಲ್ಲಿ ಕರ್ನಾಟಕದ ಸಾಧನೆ ಉತ್ತಮವಾಗಿದೆ. ರಾಜ್ಯದ ಸಾಕ್ಷರತೆಯ ಪ್ರಮಾಣವೂ ರಾಷ್ಟ್ರದ ಸಾಕ್ಷರತಾ ಪ್ರಮಾಣಕ್ಕಿಂತ ಅಧಿಕವಾಗಿದೆ. ಆದರೆ ಪ್ರಾದೇಶಿಕ ಸ್ವರೂಪ ಮತ್ತು ಮಹಿಳಾ ಸಾಕ್ಷರತೆಗೆ ಸಂಬಂಧಿಸಿದಂತೆ ಅದರ ಸಾಧನೆ ಹೇಳಿಕೊಳ್ಳುವಂತಿಲ್ಲ. ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಒಟ್ಟು ಸಾಕ್ಷರತೆಯ ಪ್ರಮಾಣ ಶೇ ೭೦ಕ್ಕಿಂತ ಕಡಿಮೆ ಇದೆ. ಕರ್ನಾಟಕವು ತನ್ನ ಪ್ರಾದೇಶಿಕ ಅಸಮಾನತೆಯನ್ನು ಸರಿಪಡಿಸಿಕೊಳ್ಳುವುದರಲ್ಲಿ ವಿಫಲವಿರುವುದಕ್ಕೆ ಸಾಕ್ಷರತೆಯ ಪ್ರಾದೇಶಿಕ ಸ್ವರೂಪವು ನಿದರ್ಶನವಾಗಿದೆ."(ಚಂದ್ರಶೇಖರ ದಾಮ್ಲೆ:೨೦೧೬:೧೩೨), ಈ ಮಾತುಗಳು ಸಮುದಾಯಗಳಿಗೂ ಅನ್ವಯಿಸುತ್ತದೆ. ಕರ್ನಾಟಕದಲ್ಲಿರುವ ಅನುಸೂಚಿತ ಪರಿಶಿಷ್ಟ ಪಂಗಡಗಳ ಸಂಖ್ಯೆಯು ೫೦ರಷ್ಟಿದೆ. ಈ ೫೦ ಸಮುದಾಯಗಳ ಒಟ್ಟು ಸಾಕ್ಷರತಾ ಪ್ರಮಾಣವನ್ನು ಒಟ್ಟಾಗಿ ಪರಿಶಿಷ್ಟ ಪಂಗಡಗಳ ಸಾಕ್ಷರತಾ ಪ್ರಮಾಣವೆಂದು ಪರಿಗಣಿಸಲಾಗುತ್ತದೆ. ವಾಸ್ತವವಾಗಿ ಈ ೫೦ ಸಮುದಾಯಗಳಲ್ಲಿ ಕೆಲವೇ ಕೆಲವು ಸಮುದಾಯಗಳು ಸಾಕ್ಷರತೆಯನ್ನು ಪಡೆಯುವಲ್ಲಿ ಪೂರ್ಣವಾಗಿ ಯಶಸ್ಸನ್ನು ಸಾಧಿಸಿವೆ ಎಂದು ಹೇಳಲಾಗದಿದ್ದರೂ ಸ್ವಲ್ಪಮಟ್ಟಿಗಾದರೂ ಅವು ಸಾಕ್ಷರತೆಯ ಅಂಚನ್ನು ತಲುಪುವಲ್ಲಿ ಯಶಸ್ವಿಯಾಗಿವೆ. ಆದರೆ ಬಹುತೇಕ ಪರಿಶಿಷ್ಟ ಪಂಗಡದ ಅಲ್ಪ ಜನಸಂಖ್ಯಾತ ಸಮುದಾಯಗಳು ಸಾಕ್ಷರತೆಯ ಅಂಚನ್ನು ತಲುಪಲೂ ಸಾಧ್ಯವಾಗದ ಸ್ಥಿತಿ ಇದೆ. ಅಸ್ಪೃಶ್ಯತೆ ಎಂಬುದು ಭಾರತಕ್ಕೆ ಅಂಟಿದ ಕಳಂಕವೇ ಸರಿ. ಅಸ್ಪೃಶ್ಯತೆಯ ಆಚರಣೆ ಸಾಮಾಜಿಕ ಪಿಡುಗಾಗಿದೆ. ಭಾರತದ ಅಸ್ಪೃಶ್ಯತೆಗೂ ಹಾಗೂ ಬಡತನಕ್ಕೂ ನಂಟಿದೆ. ಅದೇ ರೀತಿಯಾಗಿ ಅಸ್ಪೃಶ್ಯತೆಗೂ ಮತ್ತು ಅನಕ್ಷರತೆಗೂ ನಂಟಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬೇಕಾಗಿದೆ. ಭಾರತದಲ್ಲಿ ಅನಕ್ಷರಸ್ಥರ ಪ್ರಮಾಣವು ಅಧಿಕವಾಗಿರಲು ಜಾತಿಯಾಧಾರಿತ ಏಣಿ ಶ್ರೇಣಿಗಳೇ ಕಾರಣವೆಂಬುದನ್ನು ಮರೆಯಲಾಗದು. ರಾಜ್ಯದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ, ವಿಭಾಗದಿಂದ ವಿಭಾಗಕ್ಕೆ ಸಾಕ್ಷರತೆಯ ಪ್ರಮಾಣದಲ್ಲಿ ಅಸಮತೋಲನವಿದೆ. ಪ್ರಾಯಶಃ ಈ ರೀತಿಯ ಅಸಮತೋಲನಕ್ಕೆ ಬಡತನ ಎಷ್ಟು ಕಾರಣವೋ ಅಸ್ಪೃಶ್ಯತೆಯೂ ಅಷ್ಟೇ ಕಾರಣವಾಗಿದೆ.

**ಕೋಷ್ಟಕ ೬.೧೨ ಕರ್ನಾಟಕದ ಸಾಕ್ಷರತೆ: ಚಾರಿತ್ರಿಕ ನೋಟ (ಶೇಕಡವಾರುಗಳಲ್ಲಿ)**

| ವರ್ಷಗಳು | ಪುರುಷರು | ಮಹಿಳೆಯರು | ಒಟ್ಟು |
|---|---|---|---|
| ೧೯೫೧ | – | – | ೨೦.೬೦ |
| ೧೯೬೧ | ೩೬.೨೦ | ೧೪.೨೦ | ೨೫.೪೦ |
| ೧೯೭೧ | ೪೧.೬೦ | ೨೧.೦೦ | ೩೧.೫೦ |
| ೧೯೮೧ | ೪೮.೮೦ | ೨೭.೭೦ | ೩೮.೫೦ |
| ೧೯೯೧ | ೬೭.೩೦ | ೪೪.೩೦ | ೫೬.೦೦ |
| ೨೦೦೧ | ೭೬.೧೦ | ೫೬.೦೭ | ೬೬.೬೪ |
| ೨೦೧೧ | ೮೨.೮೫ | ೬೮.೧೩ | ೭೫.೬೦ |

**ವೃತ್ತ ಚಿತ್ರ ೬.೧೨ ಕರ್ನಾಟಕದ ಸಾಕ್ಷರತೆ: ಚಾರಿತ್ರಿಕ ನೋಟ (ಶೇಕಡವಾರುಗಳಲ್ಲಿ)**




**ಮೂಲ:** ಸೆನ್ಸಸ್ ಆಫ್ ಇಂಡಿಯಾ ೨೦೧೧, ತಾತ್ಪೂರ್ತಿಕ ಜನಸಂಖ್ಯಾ ಮೊತ್ತ, ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಷನ್, ಕರ್ನಾಟಕ, ಭಾರತ ಸರ್ಕಾರ, ಪು. ೨೮. ಟಿಪ್ಪಣಿ: ೧೯೫೧, ೧೯೬೧, ೧೯೭೧ ಈ ಮೂರರ ಸಾಕ್ಷರತಾ ಪ್ರಮಾಣವು ಜನಸಂಖ್ಯೆಯ ಐದು ವರ್ಷಕ್ಕೆ ಮೇಲ್ಪಟ್ಟವರಿಗೆ ಸಂಬಂಧಿಸಿದ್ದರೆ ೧೯೮೧ರ ನಂತರದ ಸಾಕ್ಷರತೆಯು ಏಳು ವರ್ಷಕ್ಕೆ ಮೇಲ್ಪಟ್ಟವರಿಗೆ ಸಂಬಂಧಿಸಿದೆ.

**ಕರ್ನಾಟಕದ ಸಾಕ್ಷರತೆ: ಚಾರಿತ್ರಿಕ ನೋಟ**

ಕರ್ನಾಟಕದ ಸಾಕ್ಷರತೆಯ ಕುರಿತು ಒಂದು ಹಿನ್ನೋಟವನ್ನು ಬೀರಿದರೆ ಸಾಕ್ಷರತೆಯ ಪ್ರಮಾಣ ದಶಕದಿಂದ ದಶಕಕ್ಕೆ ಹೇಗೆ ವೃದ್ಧಿಗೊಳ್ಳುತ್ತಾ ಸಾಗಿದೆಯೆಂಬುದು ಅರ್ಥವಾಗುತ್ತದೆ. ಭಾರತದ ಜನತೆಯನ್ನು ಸಾಕ್ಷರರಾಗಿಸಲು ಹಿಂದಿನಿಂದಲೂ ಹತ್ತು ಹಲವು ಯೋಜನೆಗಳನ್ನು ಸರ್ಕಾರವು ರೂಪಿಸುತ್ತಲೇ ಬಂದಿವೆ. ಈ ಪ್ರಯೋಗಗಳಿಗೆ ಕರ್ನಾಟಕ ಹೊರತಾಗಿಲ್ಲ. ಭಾರತ ಹಮ್ಮಿಕೊಂಡ ಹಲವು ಕಾರ್ಯಕ್ರಮಗಳು ಭಾರತದ ಜನತೆಯನ್ನು ಸಾಕ್ಷರರಾಗಿಸಲು ಬಹುತೇಕ ಯಶಸ್ವಿಯಾಗಿವೆಯೆಂದೇ ಹೇಳಬಹುದು. ಇದಕ್ಕೆ ಉತ್ತಮ ಉದಾಹರಣೆ ಕರ್ನಾಟಕದ ಸಾಕ್ಷರರ ಪ್ರಮಾಣವನ್ನೇ ಗಮನಿಸಬಹುದು. "೧೯೫೧ರಲ್ಲಿ ಕರ್ನಾಟಕದ ಸಾಕ್ಷರತೆಯ ಪ್ರಮಾಣ ಕೇವಲ ಶೇ ೨೦.೬೦ ಮಾತ್ರವಿದೆ. ಅಂದರೆ ಶೇ ೭೯.೪೦ರಷ್ಟು ಜನ ಅನಕ್ಷರರಾಗಿಯೇ ಉಳಿದಿದ್ದರು. ೧೯೬೧ರಲ್ಲಿ ಈ ಪ್ರಮಾಣವು ಶೇ ೨೫.೪೦ರಷ್ಟಾಗಿದೆ. ಇದರಲ್ಲಿ ಪುರುಷರ ಪ್ರಮಾಣ ಶೇ ೩೯.೨೦ ಇದ್ದರೆ ಮಹಿಳೆಯರ ಸಾಕ್ಷರತೆಯ ಪ್ರಮಾಣ ಶೇ ೧೪.೨೦ ಮಾತ್ರವಿದೆ. ೧೯೫೧ಕ್ಕಿಂತ ೧೯೬೧ರ ಸಾಕ್ಷರತಾ ಸಾಧನೆ ಶೇ ೦೫.೬೦ರಷ್ಟು ವೃದ್ಧಿಯಾಗಿದೆ. ೧೯೭೧ರಲ್ಲಿಯ ಸಾಕ್ಷರತೆಯ ಪ್ರಮಾಣವು ಶೇ ೩೧.೫೦ರಷ್ಟಿದೆ. ಇದರಲ್ಲಿ ಪುರುಷರು ಶೇ ೪೧.೬೦ರಷ್ಟು ಸಾಕ್ಷರರಾಗಿದ್ದಾರೆ. ಮಹಿಳೆಯರು ಶೇ ೨೧.೦೦ರಷ್ಟು ಸಾಕ್ಷರರಾಗಿದ್ದಾರೆ. ೧೯೭೧ರ



ಸಾಕ್ಷರತೆಯ ಪ್ರಮಾಣದಲ್ಲಿ ಶೇ ೬.೧೦ರಷ್ಟು ಸಾಧನೆಯಾಗಿದೆ. ೧೯೮೧ರ ಸಾಕ್ಷರತಾ ಪ್ರಮಾಣವು ಶೇ ೩೮.೫೦ರಷ್ಟಿದೆ. ಇದರಲ್ಲಿ ಪುರುಷರ ಸಾಕ್ಷರತೆ ಶೇ ೪೮.೮೦ರಷ್ಟಿದ್ದರೆ ಮಹಿಳೆಯರ ಸಾಕ್ಷರತೆ ಶೇ ೨೭.೭೦ರಷ್ಟಿದೆ. ೧೯೭೧ಕ್ಕಿಂತ ೧೯೮೧ರಲ್ಲಿ ಶೇ ೦೭ರಷ್ಟು ವೃದ್ಧಿಯಾಗಿದೆ. ೧೯೯೧ರಲ್ಲಿಯ ಸಾಕ್ಷರತೆಯ ಪ್ರಮಾಣ ಶೇ ೫೬.೦೦ರಷ್ಟಿದೆ. ಇದರಲ್ಲಿ ಪುರುಷರ ಸಾಕ್ಷರತೆಯ ಪ್ರಮಾಣ ಶೇ ೬೭.೩೦ರಷ್ಟಿದ್ದರೆ ಮಹಿಳೆಯರ ಸಾಕ್ಷರತೆಯ ಪ್ರಮಾಣ ಶೇ ೪೪.೩೦ರಷ್ಟಿದೆ. ೧೯೯೧ರ ಸಾಕ್ಷರತೆಯಲ್ಲಿ ಶೇ ೧೭.೫೦ರಷ್ಟು ವೃದ್ಧಿಯಾಗಿದೆ. ೨೦೦೧ರಲ್ಲಿಯ ಸಾಕ್ಷರತೆಯ ಪ್ರಮಾಣವು ಶೇ ೬೬.೬೪ರಷ್ಟಿದೆ. ಇದರಲ್ಲಿ ಪುರುಷರು ಶೇ ೭೬.೧೦ ಹಾಗೂ ಮಹಿಳೆಯರು ಶೇ ೫೬.೦೭ರಷ್ಟು ಸಾಕ್ಷರತೆಯ ಸಾಧನೆ ಮಾಡಿರುವುದು ಕಂಡುಬರುತ್ತದೆ. ಈ ದಶಕದಲ್ಲಿ ವೃದ್ಧಿಗೊಂಡ ಸಾಕ್ಷರತೆಯ ಪ್ರಮಾಣ ಶೇ೧೦.೬೪ರಷ್ಟು ವೃದ್ಧಿಯಾಗಿದೆ. ೨೦೧೧ರಲ್ಲಿಯ ಸಾಕ್ಷರತೆಯ ಪ್ರಮಾಣವು ಶೇ ೭೫.೬೦ರಷ್ಟಿದೆ. ಇದರಲ್ಲಿ ಪುರುಷರು ಶೇ ೮೨.೮೫ ಹಾಗೂ ಮಹಿಳೆಯರು ಶೇ ೭೫.೬೦ರಷ್ಟು ಸಾಕ್ಷರತೆಯ ಸಾಧನೆ ಮಾಡಿರುವುದು ಕಂಡುಬರುತ್ತದೆ. ಈ ದಶಕದಲ್ಲಿ ವೃದ್ಧಿಗೊಂಡ ಸಾಕ್ಷರತೆಯ ಪ್ರಮಾಣ ಶೇ೮.೯೬ರಷ್ಟಿದೆ."

**ಪರಿಶಿಷ್ಟ ಪಂಗಡದ ಸಾಕ್ಷರತಾ ಪ್ರಮಾಣ ಮತ್ತು ಸಾಕ್ಷರತಾ ಅಂತರ**


೨೦೦೧ರ ಜನಗಣತಿ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆಯ ಸಾಕ್ಷರತಾ ಪ್ರಮಾಣವು ಶೇ ೬೭.೪ರಷ್ಟಿದೆ. ಇದರಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣವು ಶೇ ೫೭.೪೫ ಇದ್ದರೆ ಪುರುಷರ ಸಾಕ್ಷರತಾ ಪ್ರಮಾಣ ಶೇ ೭೬.೨೯ರಷ್ಟಿದೆ. ರಾಜ್ಯದ ಪರಿಶಿಷ್ಟ ಪಂಗಡಗಳ ಸಾಕ್ಷರತಾ ಪ್ರಮಾಣವು ಶೇ ೫೨.೯೦ ಇದೆ. ಇದರಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣವು ಶೇ ೪೧.೭೦ ಇದ್ದರೆ ಪುರುಷರ ಸಾಕ್ಷರತಾ ಪ್ರಮಾಣ ಶೇ ೬೩.೮೦ರಷ್ಟಿದೆ. ಅಂದರೆ ಸಾಮಾನ್ಯ ಸಾಕ್ಷರತೆಗೂ ಪರಿಶಿಷ್ಟ ಪಂಗಡಗಳ ಸಾಕ್ಷರತೆಗೂ ಇರುವ ಅಂತರ ಒಟ್ಟು –೧೪.೧೪ರಷ್ಟಿದೆ. ಮಹಿಳೆಯರ ಅಂತರ ಶೇ–೧೫.೭೫, ಪುರುಷರ ಅಂತರ ಶೇ–೧೨.೪೯ರಷ್ಟಿದೆ. ೨೦೧೧ರ ಕರ್ನಾಟಕದ ಒಟ್ಟು ಸಾಕ್ಷರತೆಯ ಪ್ರಮಾಣವು ೪೦,೩೪೦,೯೬೫ ಇದೆ ಇದರಲ್ಲಿ ಪುರುಷರ ಸಂಖ್ಯೆಯು ೨೨೫೦೮೩೮೧ ಇದ್ದರೆ ಮಹಿಳೆಯರ ಸಂಖ್ಯೆಯು ೧೭೮೩೨೫೮೪ ಇದೆ. ಕರ್ನಾಟಕದ ಜಿಲ್ಲಾವಾರು ಸಾಕ್ಷರತೆಯ ಪ್ರಮಾಣವನ್ನು ಗಮನಿಸಲಾಗಿ ೨೦೦೧ ಹಾಗೂ ೨೦೧೧ರಲ್ಲಾದ ಶೇಕಡವಾರು ಬೆಳವಣಿಗೆಯು ಈ ಕೆಳಗಿನಂತಿದೆ. ೨೦೦೧ ಹಾಗೂ ೨೦೧೧ರ ಮಧ್ಯದಲ್ಲಿರುವ ಜಿಲ್ಲಾವಾರು ಸಾಕ್ಷರತೆಯ ಪ್ರಮಾಣವನ್ನು ಗಮನಿಸಿದರೆ ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿಯೂ ಸಾಕ್ಷರತೆಯ ಪ್ರಮಾಣವು ವೃದ್ಧಿಗೊಂಡಿರುವ ಅಂಶ ಕಂಡುಬರುತ್ತದೆ. ಬೆಳಗಾವಿಯ ಸಾಕ್ಷರತೆಯ ಪ್ರಮಾಣವನ್ನು ಗಮನಿಸಿದರೆ ೨೦೦೧ ಹಾಗೂ ೨೦೧೧ರ ಮಧ್ಯದಲ್ಲಿ ಶೇ ೯.೭೩ರಷ್ಟು ಸಾಕ್ಷರತೆಯ ಪ್ರಮಾಣವು ವೃದ್ಧಿಯಾಗಿದೆ. ಅದೇ ರೀತಿ ಬಾಗಲಕೋಟೆಯ ಸಾಕ್ಷರತಾ ಪ್ರಮಾಣ ಶೇ ೧೨.೦೯ರಷ್ಟು ಬೆಳವಣಿಗೆಯಾಗಿದೆ. ಬಿಜಾಪುರದ ಸಾಕ್ಷರತಾ ಪ್ರಮಾಣವು ಶೇ

೧೦.೧೯ ಅಭಿವೃದ್ಧಿಗೊಂಡಿದೆ. ಬೀದರಿನ ಸಾಕ್ಷರತಾ ಪ್ರಮಾಣ ಶೇ ೧೦.೭೬ ವೃದ್ಧಿಗೊಂಡಿದೆ. ರಾಯಚೂರಿನ ಸಾಕ್ಷರತಾ ಪ್ರಮಾಣ ೨೦೦೧ರಲ್ಲಿ ಶೇ ೧೧.೬೫ರಷ್ಟು ಅಭಿವೃದ್ಧಿಗೊಂಡಿದೆ. ಕೊಪ್ಪಳದ ಸಾಕ್ಷರತಾ ಪ್ರಮಾಣ ಶೇ ೧೩.೧೮ರಷ್ಟು ಬೆಳವಣಿಗೆಗೊಂಡಿದೆ. ಗದಗದ ಸಾಕ್ಷರತಾ ಪ್ರಮಾಣ ಶೇ ೯.೦೭ ರಷ್ಟಿದೆ. ಧಾರವಾಡದ ಸಾಕ್ಷರತಾ ಪ್ರಮಾಣ ಶೇ ೮.೬೯ ವೃದ್ಧಿಗೊಂಡಿದೆ. ಉತ್ತರ ಕನ್ನಡದ ಸಾಕ್ಷರತಾ ಪ್ರಮಾಣ ಶೇ ೭.೪೩ ಬೆಳವಣಿಗೆಯಾಗಿದೆ. ಹಾವೇರಿಯಲ್ಲಿ ಇದು ಶೇ ೯.೮೧ ರಷ್ಟು ಅಭಿವೃದ್ಧಿಗೊಂಡಿದೆ. ಬಳ್ಳಾರಿಯ ಸಾಕ್ಷರತಾ ಪ್ರಮಾಣ ಶೇ ೧೦.೪೫ರಷ್ಟು ವೃದ್ಧಿಗೊಂಡಿದೆ. ಚಿತ್ರದುರ್ಗದ ಸಾಕ್ಷರತಾ ಪ್ರಮಾಣ ಶೇ ೯.೩೭ರಷ್ಟು ಅಭಿವೃದ್ಧಿಗೊಂಡಿದೆ. ದಾವಣಗೆರೆಯ ಸಾಕ್ಷರತಾ ಪ್ರಮಾಣ ಶೇ ೮.೬೭ರಷ್ಟು ವೃದ್ಧಿಗೊಂಡಿದೆ. ಶಿವಮೊಗ್ಗದ ಸಾಕ್ಷರತಾ ಪ್ರಮಾಣ ಶೇ ೫.೯೮ರಷ್ಟಿದೆ. ಉಡುಪಿಯ ಸಾಕ್ಷರತಾ ಪ್ರಮಾಣ ಶೇ ೫.೦೪ರಷ್ಟು ಬೆಳವಣಿಗೆಯಾಗಿದೆ. ಚಿಕ್ಕಮಗಳೂರಿನ ಸಾಕ್ಷರತಾ ಪ್ರಮಾಣ ಶೇ ೭.೦೪ ಬೆಳವಣಿಯಾಗಿದೆ. ತುಮಕೂರಿನ ಸಾಕ್ಷರತಾ ಪ್ರಮಾಣ ಶೇ ೭.೩೧ರಷ್ಟು ಅಭಿವೃದ್ಧಿಯಾಗಿದೆ. ಬೆಂಗಳೂರು ನಗರದ ಸಾಕ್ಷರತಾ ಪ್ರಮಾಣ ಶೇ ೫.೫೨ ರಷ್ಟು ವೃದ್ಧಿಯಾಗಿದೆ. ಮಂಡ್ಯದ ಸಾಕ್ಷರತಾ ಪ್ರಮಾಣ ಶೇ ೭.೦೯ ರಷ್ಟು ಬೆಳವಣಿಗೆಯಾಗಿದೆ. ಹಾಸನದ ಸಾಕ್ಷರತಾ ಪ್ರಮಾಣ ೨೦೦೧ರಲ್ಲಿ ಶೇ ೭.೨೬ರಷ್ಟು ಅಭಿವೃದ್ಧಿಗೊಂಡಿದೆ. ದಕ್ಷಿಣ ಕನ್ನಡದ ಸಾಕ್ಷರತಾ ಪ್ರಮಾಣ ೨೦೦೧ರಲ್ಲಿ ಶೇ ೫.೨೭ರಷ್ಟು ವೃದ್ಧಿಗೊಂಡಿದೆ. ಕೊಡಗಿನ ಸಾಕ್ಷರತಾ ಪ್ರಮಾಣ ಶೇ ೪.೫೩ರಷ್ಟು ವೃದ್ಧಿಸಿದೆ. ಮೈಸೂರಿನ ಸಾಕ್ಷರತಾ ಪ್ರವಾಣ ಶೇ ೯.೦೮ ರಷ್ಟು ಅಭಿವೃದ್ಧಿಗೊಂಡಿದೆ. ಚಾಮರಾಜನಗರದ ಸಾಕ್ಷರತಾ ಪ್ರಮಾಣ ಶೇ ೧೦.೨೫ರಷ್ಟು ಬೆಳವಣಿಗೆ ಕಂಡಿದೆ. ಗುಲ್ಬರ್ಗಾದ ಸಾಕ್ಷರತಾ ಪ್ರಮಾಣ ಶೇ ೧೧.೩೧ ರಷ್ಟು ವೃದ್ಧಿಯಾಗಿದೆ. ಯಾದಗಿರಿಯ ಸಾಕ್ಷರತಾ ಪ್ರಮಾಣ ಶೇ ೧೨.೪೬ ರಷ್ಟು ಬೆಳವಣಿಗೆಯಾಗಿದೆ. ಕೋಲಾರದ ಸಾಕ್ಷರತಾ ಪ್ರಮಾಣ ಶೇ ೮.೪೯ ವೃದ್ಧಿಯಾಗಿದೆ. ಚಿಕ್ಕಬಳ್ಳಾಪುರದ ಸಾಕ್ಷರತಾ ಪ್ರಮಾಣ ಶೇ ೧೦.೮೪ ವೃದ್ಧಿಯಾಗಿದೆ. ಬೆಂಗಳೂರು ಗ್ರಾಮಾಂತರದ ಸಾಕ್ಷರತಾ ಪ್ರಮಾಣ ಶೇ ೮.೭೦ ವೃದ್ಧಿಯಾಗಿದೆ. ರಾಮನಗರದ ಸಾಕ್ಷರತಾ ಪ್ರಮಾಣ ಶೇ ೧೪.೮೯ರಷ್ಟು ವೃದ್ಧಿಗೊಂಡಿದೆ. ಕರ್ನಾಟಕದ ಸಾಕ್ಷರತಾ ಪ್ರಮಾಣ ೨೦೦೧ರಲ್ಲಿ ಶೇ ೬೬.೬೪ ಇದ್ದರೆ ೨೦೧೧ರಲ್ಲಿ ಶೇ ೭೫.೬೦ ಇದೆ. ಅಂದರೆ ಕರ್ನಾಟಕದ ಸಾಕ್ಷರತೆಯ ಒಟ್ಟು ವೃದ್ಧಿಯು ಒಂದು ದಶಕದಲ್ಲಿ ಶೇ ೮.೯೬ರಷ್ಟಿದೆ. ೨೦೦೧ರಲ್ಲಿ ಸಾಕ್ಷರತೆಯಲ್ಲಿ ಮುಂಚೂಣಿಯಲ್ಲಿದ್ದ ಜಿಲ್ಲೆಯು ದಕ್ಷಿಣ ಕನ್ನಡ(ಶೇ. ೮೩.೩೫)ವಾಗಿದೆ. ಸಾಕ್ಷರತೆಯಲ್ಲಿ ಹಿಂದುಳಿದಿದ್ದ ಜಿಲ್ಲೆಯು ಯಾದಗಿರಿ(ಶೇ ೩೯.೯೦) ಆಗಿದೆ. ೨೦೧೧ರಲ್ಲಿ ಸಾಕ್ಷರತೆಯಲ್ಲಿ ಮುಂಚೂಣಿಯಲ್ಲಿರುವ ಜಿಲ್ಲೆ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿರುವುದು ದಕ್ಷಿಣ ಕನ್ನಡ(ಶೇ. ೮೮.೬೨)ವಾಗಿದೆ. ಯಾದಗಿರಿಯು ಹಿಂದುಳಿದ ಜಿಲ್ಲೆ (ಶೇ ೫೨.೩೬) ಆಗಿದೆ. ಆದರೆ ೨೦೦೧ಕ್ಕೂ ಹಾಗೂ ೨೦೧೧ಕ್ಕೂ ಯಾದಗಿರಿಯ ಸಾಕ್ಷರತೆಯಲ್ಲಿರುವ ಅಂತರವು ಶೇ೧೨.೪೬ರಷ್ಟಿದೆ. ದಕ್ಷಿಣ ಕನ್ನಡ ಜಿಲ್ಲೆಯ ಸಾಕ್ಷರತೆಯ ಅಂತರವು ೨೦೦೧ಕ್ಕಿಂತ ೨೦೧೧ಕ್ಕೆ ೫.೨೭ರಷ್ಟಿದೆ.

| ಕೋಷ್ಟಕ ೬.೧೩ ಕರ್ನಾಟಕದ ವಿಭಾಗವಾರು ಸಾಕ್ಷರತಾ ಪ್ರಮಾಣ ೨೦೦೧-೨೦೧೧ (ಶೇಕಡವಾರುಗಳಲ್ಲಿ) | | | | | | |
|---|---|---|---|---|---|---|
| ವಿಭಾಗ | ಪುರುಷರ | *ಸಾ.ಪ್ರ | ಮಹಿಳೆ | *ಸಾ.ಪ್ರ | ಒಟ್ಟು | *ಸಾ.ಪ್ರ |
| | ೨೦೦೧ | ೨೦೧೧ | ೨೦೦೧ | ೨೦೧೧ | ೨೦೦೧ | ೨೦೧೧ |
| ಬೆಂಗಳೂರು | ೮೦.೩೦ | ೮೭.೦೪ | ೬೩.೯೮ | ೭೩.೮೫ | ೭೨..೩೭ | ೮೦.೨೧ |
| ಮೈಸೂರು | ೭೬.೬೨ | ೮೨.೬೯ | ೬೧.೩೧ | ೭೦.೩೯ | ೬೮.೯೨ | ೭೬.೫೦ |
| ದ.ಕನ್ನಡ | ೭೯.೦೩ | ೮೫.೧೪ | ೬೩.೦೨ | ೭೨.೬೯ | ೭೧.೧೫ | ೭೮.೯೯ |
| ಬೆಳಗಾವಿ | ೭೬.೩೭ | ೮೩.೨೨ | ೫೩.೪೮ | ೬೫.೯೨ | ೬೫.೧೪ | ೭೪.೬೯ |
| ಗುಲ್ಬರ್ಗಾ | ೬೫.೮೭ | ೭೪.೮೯ | ೪೧.೦೭ | ೫೪.೭೬ | ೫೩.೬೪ | ೬೪.೯೩ |
| ಉ.ಕನ್ನಡ | ೭೨.೦೧ | ೭೯.೬೫ | ೪೮.೩೦ | ೬೧.೧೨ | ೬೦.೩೫ | ೭೦.೫೧ |
| ಕರ್ನಾಟಕ | ೭೬.೦೧ | ೮೨.೮೬ | ೫೬.೮೭ | ೬೭.೮೭ | ೬೬.೬೪ | ೭೫.೪೬ |

*ಸಾ.ಪ್ರ: ಸಾಕ್ಷರತಾ ಪ್ರಮಾಣ

ಲಂಬ ಚಿತ್ರ ೬.೧೩ ಕರ್ನಾಟಕದ ವಿಭಾಗವಾರು ಸಾಕ್ಷರತಾ ಪ್ರಮಾಣ ೨೦೦೧-೨೦೧೧
(ಶೇಕಡವಾರುಗಳಲ್ಲಿ)




ಕರ್ನಾಟಕದ ಒಟ್ಟು ಸಾಕ್ಷರತೆಯ ೨೦೦೧ ಹಾಗೂ ೨೦೧೧ರ ಶೈಕ್ಷಣಿಕ ಅಂತರವು ೮.೯೬ ಇದೆ ಈ ಅಂತರವು ವಿಭಾಗವಾರು ಬೆಂಗಳೂರು ವಿಭಾಗದಲ್ಲಿ ೭.೮೪, ಮೈಸೂರು ವಿಭಾಗದಲ್ಲಿ ೭.೫೮, ದಕ್ಷಿಣ ಕನ್ನಡ ವಿಭಾಗದಲ್ಲಿ ೭.೮೪, ಬೆಳಗಾವಿ ವಿಭಾಗದಲ್ಲಿ ೯.೫೫, ಗುಲ್ಬರ್ಗಾ ವಿಭಾಗದಲ್ಲಿ ೧೧.೨೯, ಉತ್ತರ ಕನ್ನಡ ವಿಭಾಗದಲ್ಲಿ ೧೦.೧೬ರಷ್ಟಿದೆ

| ಕೋಷ್ಟಕ ೬.೧೪ ೨೦೧೧ ಜನಸಂಖ್ಯಾ ವರದಿ ಪ್ರಕಾರ ಸಾಕ್ಷರತೆಯ ಮಾಹಿತಿ (ಶೇಕಡವಾರುಗಳಲ್ಲಿ) | | | | |
|---|---|---|---|---|
| ಕ್ರಸಂ | ವಿವರ | ಪುರುಷ | ಮಹಿಳೆ | ಒಟ್ಟು |
| ೧ | ರಾಜ್ಯದ ಸಾಕ್ಷರತೆ ಪ್ರಮಾಣ | ೮೨.೪೭ | ೬೮.೦೮ | ೭೫.೩೬ |
| ೨ | ಪ.ಪಂ ಸಾಕ್ಷರತೆ ಪ್ರಮಾಣ | ೬.೮೯ | ೭.೦೨ | ೬.೯೫ |

ಆಧಾರ: ಜನಗಣತಿ ವರದಿ, ೨೦೧೧, ಕರ್ನಾಟಕ ಸರ್ಕಾರ

ಲಂಬ ಚಿತ್ರ ೬.೧೪. ೨೦೧೧ ಜನಸಂಖ್ಯಾ ವರದಿ ಪ್ರಕಾರ ಸಾಕ್ಷರತೆಯ ಮಾಹಿತಿ (ಶೇಕಡವಾರುಗಳಲ್ಲಿ)





೨೦೦೧ರ ಸಾಕ್ಷರತೆಯ ಮಾಹಿತಿಯ ಪ್ರಕಾರ ರಾಜ್ಯದ ಒಟ್ಟು ಸಾಕ್ಷರತೆಯ ಪ್ರಮಾಣವು ಶೇ ೬೭.೦೪ರಷ್ಟಿದೆ. ಇದರಲ್ಲಿ ಪುರುಷರ ಪ್ರಮಾಣವು ಶೇ ೭೬.೨೯ ಇದ್ದರೆ ಮಹಿಳೆಯರ ಪ್ರಮಾಣವು ಶೇ ೫೭.೪೫ರಷ್ಟಿದೆ. ೨೦೧೧ರ ಜನಗಣತಿ ವರದಿಯ ಪ್ರಕಾರ ರಾಜ್ಯದ ಒಟ್ಟು ಸಾಕ್ಷರತೆಯ ಪ್ರಮಾಣವು ೭೫.೩೬ ಇದೆ. ಇದರಲ್ಲಿ ಪುರುಷರು ೮೨.೪೭ ಹಾಗೂ ಮಹಿಳೆಯರು ೬೮.೦೮ರಷ್ಟಿರುವರು. ಪರಿಶಿಷ್ಟ ಪಂಗಡದ ರಾಜ್ಯದ ಒಟ್ಟು ಸಾಕ್ಷರತೆಯ ಪ್ರಮಾಣವು ಒಟ್ಟು ಶೇಕಡ ೬.೯೫ ಇದೆ. ಇದರಲ್ಲಿ ಪುರುಷರು ೬.೮೯ ಹಾಗೂ ಮಹಿಳೆಯರು ೭.೦೨ರಷ್ಟಿರುವರು. ರಾಜ್ಯದ ಒಟ್ಟು ಸಾಕ್ಷರತೆಗೆ ಹೋಲಿಸಿದರೆ ಪರಿಶಿಷ್ಟ ಪಂಗಡದ ಸಾಕ್ಷರತೆಯ ಪ್ರಮಾಣ ಅತ್ಯಂತ ಕಡಿಮೆಯಿದೆ. ಆದರೆ ಆಶ್ಚರ್ಯವೆಂದರೆ ಪರಿಶಿಷ್ಟ ಪಂಗಡದ ಪುರುಷರ ಸಾಕ್ಷರತೆಗಿಂತ ಮಹಿಳೆಯರ ಸಾಕ್ಷರತೆಯ ಪ್ರಮಾಣ ಹೆಚ್ಚಾಗಿರುವುದು ಕಂಡುಬಂದಿದೆ.

| ಕೋಷ್ಟಕ ೬.೧೫ ೨೦೧೧ರ ಬಳ್ಳಾರಿ ಜಿಲ್ಲೆಯ ಸಾಕ್ಷರತೆಯ ಮಾಹಿತಿ (ಶೇಕಡವಾರುಗಳಲ್ಲಿ) | | | | |
|---|---|---|---|---|
| ಕ್ರಸಂ | ವಿವರ | ಪುರುಷ | ಮಹಿಳೆ | ಒಟ್ಟು |
| ೦೧ | ಬಳ್ಳಾರಿ ಜಿಲ್ಲೆಯ ಸಾಕ್ಷರತೆ ಪ್ರಮಾಣ | ೭೬.೬೪ | ೫೮.೦೯ | ೬೭.೪೩ |
| ೦೨ | ಬಳ್ಳಾರಿ ಜಿಲ್ಲೆಯ ಪ.ಪಂ ಸಾಕ್ಷರತೆ ಪ್ರಮಾಣ | ೧೮.೨೩ | ೧೮.೫೯ | ೮.೪೧ |
| ೦೩ | ಅಂತರ | ೫೮.೪೧ | ೩೯.೫೦ | ೪೯.೦೨ |

ಆಧಾರ: ಬಳ್ಳಾರಿ ಜಿಲ್ಲಾ ಜನಗಣತಿ ಕೈಪಿಡಿ, ಕರ್ನಾಟಕ ಸರ್ಕಾರ


**ವೃತ್ತ ಚಿತ್ರ ೬.೧೫. ೨೦೧೧ರ ಬಳ್ಳಾರಿ ಜಿಲ್ಲೆಯ ಸಾಕ್ಷರತೆಯ ಮಾಹಿತಿ (ಶೇಕಡವಾರುಗಳಲ್ಲಿ)**




೨೦೧೧ರ ಜನಗಣತಿ ವರದಿಯ ಪ್ರಕಾರ ಬಳ್ಳಾರಿ ಜಿಲ್ಲೆಯ ಒಟ್ಟು ಸಾಕ್ಷರತೆಯ ಪ್ರಮಾಣವು ಶೇಕಡ ೬೭.೪೩ ಇದೆ. ಇದರಲ್ಲಿ ಪುರುಷರು ೭೬.೬೪ ಹಾಗೂ ಮಹಿಳೆಯರು ೫೮.೦೯ ರಷ್ಟಿರುವರು. ಅಂದರೆ ಪುರುಷರ ಪ್ರಮಾಣಕ್ಕಿಂತ ಮಹಿಳೆಯರ ಸಾಕ್ಷರತೆಯ ಪ್ರಮಾಣವು ಕಡಿಮೆ ಇದೆ. ಪರಿಶಿಷ್ಟ ಪಂಗಡದ ಜಿಲ್ಲೆಯ ಒಟ್ಟು ಸಾಕ್ಷರತೆಯ ಪ್ರಮಾಣವು ಒಟ್ಟು ಶೇಕಡ ೧೮.೪೧ ಇದೆ. ಇದರಲ್ಲಿ ಪುರುಷರು ೧೮.೨೩ ಹಾಗೂ ಮಹಿಳೆಯರು ೧೮.೫೯ ರಷ್ಟಿರುವರು. ರಾಜ್ಯದ ಒಟ್ಟು ಸಾಕ್ಷರತೆಗೆ ಹೋಲಿಸಿದರೆ ಪರಿಶಿಷ್ಟ ಪಂಗಡದ ಸಾಕ್ಷರತೆಯ ಪ್ರಮಾಣ ಕಡಿಮೆಯಿದೆ. ಆದರೆ ಆಶ್ಚರ್ಯವೆಂದರೆ ಪರಿಶಿಷ್ಟ ಪಂಗಡದ ಪುರುಷರ ಸಾಕ್ಷರತೆಗಿಂತ ಮಹಿಳೆಯರ ಸಾಕ್ಷರತೆಯ ಪ್ರಮಾಣ ಹೆಚ್ಚಾಗಿರುವುದು ಕಂಡುಬಂದಿದೆ.

| ಕೋಷ್ಟಕ ೬.೧೬ ಸಮೀಕ್ಷೆಗೆ ಒಳಪಡಿಸಿದ ಬುಡಕಟ್ಟು ಸಮುದಾಯಗಳಲ್ಲಿ ಸಾಕ್ಷರತೆಗೆ ಅರ್ಹವಾದವರ ಒಟ್ಟು ಪ್ರಮಾಣ | | | | | | | |
|---|---|---|---|---|---|---|---|
| ಕ್ರಸಂ | ವಿವರ | ಸಾಕ್ಷರತೆಗೆ ಅರ್ಹವಾದವರು | | | ಸಾಕ್ಷರತೆಗೆ ಅರ್ಹವಾಗದವರು | | |
| | ಸಮುದಾಯಗಳು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು |
| ೧ | ಬೇಡ | ೪೧೫ | ೨೦೩ | ೨೧೨ | ೯೫ | ೪೭ | ೪೮ |
| ೨ | ಮೇದ | ೪೧೮ | ೨೧೧ | ೨೦೭ | ೯೭ | ೪೯ | ೪೮ |
| ೩ | ಡುಂಗ್ರಿಗರಾಸಿಯಾ | ೪೨೨ | ೨೦೮ | ೨೧೪ | ೯೮ | ೪೮ | ೫೦ |
| ೪ | ಪಾರ್ಧಿ | ೪೧೭ | ೨೦೭ | ೨೧೦ | ೯೪ | ೪೬ | ೪೮ |
| ೫ | ಒಟ್ಟು | ೧,೬೭೨ | ೮೨೯ | ೮೪೩ | ೩೮೪ | ೧೯೦ | ೧೯೪ |

ಆಧಾರ: ಕ್ಷೇತ್ರಕಾರ್ಯ





ಬಳ್ಳಾರಿ ಜಿಲ್ಲೆಯಲ್ಲಿ ಸಮೀಕ್ಷೆಗೆ ಒಳಪಡಿಸಿದ ನಾಲ್ಕು ಬುಡಕಟ್ಟುಗಳಲ್ಲಿ ಪ್ರತಿ ಸಮುದಾಯಕ್ಕೆ ಒಂದು ನೂರರಂತೆ ಒಟ್ಟು ನಾಲ್ಕು ಸಮುದಾಯವನ್ನೊಳಗೊಂಡ ಒಟ್ಟು ಕುಟುಂಬಗಳು ೪೦೦. ಅವುಗಳ ಒಟ್ಟು ಜನಸಂಖ್ಯೆ ೨೦೫೬. ಇದರಲ್ಲಿ ಪುರುಷರು ೧೦೧೯, ಮಹಿಳೆಯರು ೧೦೩೭. ಯಾವುದೇ ಶಾಲೆಯಲ್ಲಿ ಮಗು ದಾಖಲಾಗಲು ಕನಿಷ್ಟ ೬ ವರ್ಷದ ಮಗುವಾಗಿರಬೇಕು ಎನ್ನುವ ನಿಯಮವಿದೆ. ಹೀಗಾಗಿ ೦–೬ ವಯೋಮಾನದ ಮಕ್ಕಳು ಶಾಲೆಗೆ ಹೋಗಲು ಅಸಮರ್ಥರೆಂದೇ ಪರಿಗಣಿಸಲಾಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಸಮೀಕ್ಷಿಸಿದ ಕುಟುಂಬಗಳಲ್ಲಿ ೦–೬ ವಯೋಮಾನದ ಮಕ್ಕಳು ಒಟ್ಟು ೩೮೪. ಇದರಲ್ಲಿ ಗಂಡು ೧೯೦, ಹೆಣ್ಣು ೧೯೪ ಇವೆ. ಈ ಮಕ್ಕಳನ್ನು ಸಾಕ್ಷರತೆಗೆ ಅರ್ಹರಾದವರಲ್ಲ ಎಂದು

ಪರಿಗಣಿಸಲಾಗಿದೆ. ಸಮೀಕ್ಷೆಗೆ ಒಳಪಡಿಸಿದ ಒಟ್ಟು ಕುಟುಂಬಗಳಲ್ಲಿ ೦-೬ ವಯೋಮಾನದ ಮಕ್ಕಳ ಹೊರತಾಗಿ ಇರುವ ಜನಸಂಖ್ಯೆ ಒಟ್ಟು ೧,೬೭೨. ಇದರಲ್ಲಿ ಪುರುಷರು ೮೨೯ ಹಾಗೂ ಮಹಿಳೆಯರು ೮೪೩ ಜನರಿರುವರು. ಇವರನ್ನು ಸಾಕ್ಷರತೆಗೆ ಅರ್ಹವಾದವರೆಂದು ಪರಿಗಣಿಸಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ನೆಲೆಸಿರುವ ಸಮೀಕ್ಷೆಗೊಳಪಡಿಸಿದ ಬೇಡ, ಮೇದ, ಡುಂಗ್ರಿಗರಾಸಿಯಾ, ಪಾರ್ಧಿ ಸಮುದಾಯಗಳ ಸಾಕ್ಷರತೆಯ ಪ್ರಮಾಣ ಈ ಕೆಳಗಿನಂತಿದೆ.

**ಕೋಷ್ಟಕ ೬.೧೭ ಸಮೀಕ್ಷೆಗೊಳಪಡಿಸಿದ ಬುಡಕಟ್ಟುಗಳ ಸಾಕ್ಷರತೆಯ ಪ್ರಮಾಣ**

| ಕ್ರಸಂ | ಸಮುದಾಯ | ಒಟ್ಟು | ಗಂಡು | ಹೆಣ್ಣು |
|---|---|---|---|---|
| ೧ | ಬೇಡ | ೩೮೦ | ೨೦೦ | ೧೮೦ |
| ೨ | ಮೇದ | ೩೭೮ | ೨೦೬ | ೧೭೨ |
| ೩ | ಡುಂಗ್ರಿಗರಾಸಿಯಾ | ೧೮೫ | ೧೪೦ | ೪೫ |
| ೪ | ಪಾರ್ಧಿ | ೧೬೫ | ೧೧೮ | ೪೭ |
| | **ಒಟ್ಟು** | ೧೧೦೮ | **೬೬೪** | **೪೪೪** |

**ವೃತ್ತ ಚಿತ್ರ ೬.೧೭. ಸಮೀಕ್ಷೆಗೊಳಪಡಿಸಿದ ಬುಡಕಟ್ಟುಗಳ ಸಾಕ್ಷರತೆಯ ಪ್ರಮಾಣ**





ಸಮೀಕ್ಷೆಗೆ ಒಳಪಡಿಸಿದ ಬೇಡ ಸಮುದಾಯದ ಒಟ್ಟು ಕುಟುಂಬಗಳು ೧೦೦. ಈ ಕುಟುಂಬಗಳ ಒಟ್ಟು ಜನಸಂಖ್ಯೆಯು ೫೧೦ ಇದೆ. ಇದರಲ್ಲಿ ಸಾಕ್ಷರತೆ ಹೊಂದಿದವರು ಒಟ್ಟು ೩೮೦ ಜನರಿರುವರು. ಸಾಕ್ಷರತೆಯನ್ನು ಹೊಂದಿದ ಪುರುಷರು ೨೦೦ ಹಾಗೂ ಮಹಿಳೆಯರು ೧೮೦ ಜನರಿರುವರು. ಸಾಕ್ಷರತೆಯನ್ನು ಹೊಂದದೇ ಇರುವವರು ಒಟ್ಟು ೧೩೦, ಇದರಲ್ಲಿ ೫೮ ಪುರುಷ ಹಾಗೂ ೭೨

ಮಹಿಳೆಯರಿರುವರು. ಸಮೀಕ್ಷೆಗೆ ಒಳಪಡಿಸಿದ ಮೇದ ಸಮುದಾಯದ ಒಟ್ಟು ಕುಟುಂಬಗಳು ೧೦೦. ಈ ಕುಟುಂಬಗಳ ಒಟ್ಟು ಜನಸಂಖ್ಯೆಯು ೫೧೫ ಇದೆ. ಇದರಲ್ಲಿ ಸಾಕ್ಷರತೆ ಹೊಂದಿದವರು ಒಟ್ಟು ೩೭೮ ಜನರಿರುವರು. ಸಾಕ್ಷರತೆಯನ್ನು ಹೊಂದಿದ ಪುರುಷರು ೨೦೬ ಹಾಗೂ ಮಹಿಳೆಯರು ೧೭೨ ಜನರಿರುವರು. ಸಾಕ್ಷರತೆಯನ್ನು ಹೊಂದದೇ ಇರುವವರು ಒಟ್ಟು ೧೩೭, ಇದರಲ್ಲಿ ೪೮ ಪುರುಷ ಹಾಗೂ ೮೯ ಮಹಿಳೆಯರಿರುವರು. ಸಮೀಕ್ಷೆಗೆ ಒಳಪಡಿಸಿದ ಡುಂಗ್ರಿಗರಾಸಿಯಾ ಸಮುದಾಯದ ಒಟ್ಟು ಕುಟುಂಬಗಳು ೧೦೦. ಈ ಕುಟುಂಬಗಳ ಒಟ್ಟು ಜನಸಂಖ್ಯೆಯು ೫೨೦ ಇದೆ. ಇದರಲ್ಲಿ ಸಾಕ್ಷರತೆ ಹೊಂದಿದವರು ಒಟ್ಟು ೧೮೫ ಜನರಿರುವರು. ಸಾಕ್ಷರತೆಯನ್ನು ಹೊಂದಿದ ಪುರುಷರು ೧೪೦ ಹಾಗೂ ಮಹಿಳೆಯರು ೪೫ ಜನರಿರುವರು. ಸಾಕ್ಷರತೆಯನ್ನು ಹೊಂದದೇ ಇರುವವರು ಒಟ್ಟು ೩೩೫, ಇದರಲ್ಲಿ ೧೩೫ ಪುರುಷ ಹಾಗೂ ೨೦೦ ಮಹಿಳೆಯರಿರುವರು. ಸಮೀಕ್ಷೆಗೆ ಒಳಪಡಿಸಿದ ಪಾರ್ಧಿ ಸಮುದಾಯದ ಒಟ್ಟು ಕುಟುಂಬಗಳು ೧೦೦. ಈ ಕುಟುಂಬಗಳ ಒಟ್ಟು ಜನಸಂಖ್ಯೆಯು ೫೧೧ ಇದೆ. ಇದರಲ್ಲಿ ಸಾಕ್ಷರತೆ ಹೊಂದಿದವರು ಒಟ್ಟು ೧೬೫ ಜನರಿರುವರು. ಸಾಕ್ಷರತೆಯನ್ನು ಹೊಂದಿದ ಪುರುಷರು ೧೧೮ ಹಾಗೂ ಮಹಿಳೆಯರು ೪೭ ಜನರಿರುವರು. ಸಾಕ್ಷರತೆಯನ್ನು ಹೊಂದದೇ ಇರುವವರು ಒಟ್ಟು ೩೪೬, ಇದರಲ್ಲಿ ೧೩೨ ಪುರುಷ ಹಾಗೂ ೨೧೪ ಮಹಿಳೆಯರಿರುವರು.

| ಕೋಷ್ಟಕ ೬.೧೮ ಬುಡಕಟ್ಟು ಸಮುದಾಯಗಳ ಸಾಕ್ಷರತೆಯ ಪ್ರಮಾಣ | | | | | | | |
|---|---|---|---|---|---|---|---|
| ಕ್ರಸಂ | ಸಮುದಾಯ | ಸಾಕ್ಷರತೆಗೆ ಅರ್ಹತೆ ಹೊಂದಿದವರು | | | ಸಾಕ್ಷರರು | | |
| | | ಒಟ್ಟು | ಗಂ | ಹೆಣ್ಣು | ಒಟ್ಟು | ಗಂ | ಹೆಣ್ಣು |
| ೧ | ಬೇಡ | ೪೧೫ | ೨೦೩ | ೨೧೨ | ೩೮೦ | ೨೦೦ | ೧೮೦ |
| ೨ | ಮೇದ | ೪೧೮ | ೨೧೧ | ೨೦೭ | ೩೭೮ | ೨೦೬ | ೧೭೨ |
| ೩ | ಡುಂಗ್ರಿಗರಾಸಿಯಾ | ೪೨೨ | ೨೦೮ | ೨೧೪ | ೧೮೫ | ೧೪೦ | ೪೫ |
| ೪ | ಪಾರ್ಧಿ | ೪೧೭ | ೨೦೭ | ೨೧೦ | ೧೬೫ | ೧೧೮ | ೪೭ |
| | ಒಟ್ಟು | ೧,೬೭೨ | ೮೨೯ | ೮೪೩ | ೧,೧೦೮ | ೬೬೪ | ೪೪೪ |

ಸಮೀಕ್ಷೆಗೆ ಒಳಪಡಿಸಿದ ಒಟ್ಟು ನಾಲ್ಕು ಸಮುದಾಯಗಳ ಒಟ್ಟು ಕುಟುಂಬಗಳು ೪೦೦. ಈ ಕುಟುಂಬಗಳ ಒಟ್ಟು ಸಾಕ್ಷರತೆ ಹೊಂದಿದವರು ಒಟ್ಟು ೧೧೦೮ ಜನರಿರುವರು. ಸಾಕ್ಷರತೆಗೆ ಅರ್ಹರಾದವರು ಒಟ್ಟು ೧೬೭೨, ಇದರಲ್ಲಿ ಪುರುಷರು ೮೨೯, ಮಹಿಳೆಯರು ೮೪೩ ಜನರಿರುವರು. ಆದರೆ ಸಾಕ್ಷರತೆಯನ್ನು ಹೊಂದಿದವರು ಒಟ್ಟು ೧,೧೦೮, ಇದರಲ್ಲಿ ಪುರುಷರು ೬೬೪ ಹಾಗೂ ಮಹಿಳೆಯರು ೪೪೪ ಜನರಿರುವರು. ಅಂದರೆ ಒಟ್ಟು ಸಾಕ್ಷರತೆಗೆ ಅರ್ಹರಾದವರಲ್ಲಿ ಸಾಕ್ಷರರಾದವರು ಒಟ್ಟು ಶೇಕಡ ೬೬.೨೯ ಜನರಿರುವರು. ಅದರಲ್ಲಿ ಸಾಕ್ಷರತೆಗೆ ಅರ್ಹರಾದ ಪುರುಷರಲ್ಲಿ ಸಾಕ್ಷರತೆ ಹೊಂದಿದ ಪುರುಷರು ಶೇಕಡ ೮೦.೦೯ರಷ್ಟಿರುವರು. ಆದರೆ ಸಾಕ್ಷರತೆಗೆ ಅರ್ಹರಾದ ಮಹಿಳೆಯರಲ್ಲಿ ಸಾಕ್ಷರತೆ ಹೊಂದಿದ ಮಹಿಳೆಯರು ಶೇಕಡ ೫೨.೬೬ ರಷ್ಟು ಮಾತ್ರ ಇರುವರು.


ಲಂಬ ಚಿತ್ರ ೬.೧೮ ಬುಡಕಟ್ಟು ಸಮುದಾಯಗಳ ಸಾಕ್ಷರತೆಯ ಪ್ರಮಾಣ




| ಕೋಷ್ಟಕ ೬.೧೯ ಸಮೀಕ್ಷೆಗೊಳಪಡಿಸಿದ ಬುಡಕಟ್ಟುಗಳ ೦೬-೧೪ ವಯೋಮಾನದ ಶಾಲೆಗೆ ಹೋಗುತ್ತಿರುವ ಮಕ್ಕಳ ವಿವರ | | | | | | | | | |
|---|---|---|---|---|---|---|---|---|---|
| ಸಮುದಾಯ | ಒಟ್ಟು ಮಕ್ಕಳು | | | ಶಾಲೆಗೆ ಹೋಗುತ್ತಿರುವವರು | | | ಶಾಲೆಯಿಂದ ಹೊರಗಿರುವವರು | | |
| | ಗಂ | ಹೆ | ಒ | ಗಂ | ಹೆ | ಒ | ಗಂ | ಹೆ | ಒ |
| ಬೇಡ | ೪೬ | ೪೯ | ೯೫ | ೪೩ | ೪೮ | ೮೮ | ೦೩ | ೦೧ | ೦೪ |
| ಮೇದ | ೪೯ | ೪೫ | ೯೪ | ೪೭ | ೪೪ | ೯೧ | ೦೨ | ೦೩ | ೦೫ |
| ಡುಂಗ್ರಿಗರಾಸಿಯಾ | ೪೮ | ೫೩ | ೧೦೧ | ೪೧ | ೪೫ | ೮೬ | ೦೭ | ೦೮ | ೧೫ |
| ಪಾರ್ಧಿ | ೫೦ | ೫೪ | ೧೦೪ | ೪೩ | ೪೨ | ೮೮ | ೦೭ | ೧೨ | ೧೯ |
| ಒಟ್ಟು | ೧೯೩ | ೨೦೧ | ೩೯೪ | ೧೭೪ | ೧೭೯ | ೩೫೩ | ೧೯ | ೨೪ | ೪೩ |

ಆಧಾರ: ಕ್ಷೇತ್ರಕಾರ್ಯ ಸಮೀಕ್ಷೆ

ಬಳ್ಳಾರಿ ಜಿಲ್ಲೆಯ ಸಮೀಕ್ಷೆಗೆ ಒಳಪಡಿಸಿದ ಬೇಡ, ಮೇದ, ಡುಂಗ್ರಿಗರಾಸಿಯಾ, ಪಾರ್ಧಿ ಸಮುದಾಯಗಳ ೬-೧೪ರ ವಯೋಮಾನದ ಶಾಲೆಗೆ ಹೋಗುತ್ತಿರುವ ಮಕ್ಕಳ ಸಂಖ್ಯೆಯನ್ನು ಇಲ್ಲಿ ಗಮನಿಸಲಾಗಿದೆ. ಬೇಡ ಸಮುದಾಯದ ಶಾಲೆಗೆ ಹೋಗಲು ಅರ್ಹವಾದ ಮಕ್ಕಳು ೯೫ ಇವೆ. ಇದರಲ್ಲಿ ಗಂಡು ೪೬, ಹೆಣ್ಣು ೪೩ ಇವೆ. ಆದರೆ ಶಾಲೆಗೆ ಹೋಗುತ್ತಿರುವ ಮಕ್ಕಳಲ್ಲಿ ಗಂಡು ೪೮, ಹೆಣ್ಣು ೪೮ ಇವೆ. ಶಾಲೆಗೆ ಹೋಗದಿರುವ ಮಕ್ಕಳಲ್ಲಿ ಗಂಡು ೨, ಹೆಣ್ಣು ೩ ಇವೆ. ಮೇದ ಸಮುದಾಯದ ಶಾಲೆಗೆ ಹೋಗಲು ಅರ್ಹವಾದ ಮಕ್ಕಳು ೯೪ ಇವೆ. ಇದರಲ್ಲಿ ಗಂಡು ೪೯, ಹೆಣ್ಣು ೪೫ ಇವೆ. ಆದರೆ





ಶಾಲೆಗೆ ಹೋಗುತ್ತಿರುವ ಮಕ್ಕಳಲ್ಲಿ ಗಂಡು ೪೭, ಹೆಣ್ಣು ೪೪ ಇವೆ. ಶಾಲೆಗೆ ಹೋಗದಿರುವ ಮಕ್ಕಳಲ್ಲಿ ಗಂಡು ೨, ಹೆಣ್ಣು ೩ ಇವೆ. ಡುಂಗ್ರಿಗರಾಸಿಯಾ ಸಮುದಾಯದ ಶಾಲೆಗೆ ಹೋಗಲು ಅರ್ಹವಾದ ಮಕ್ಕಳು ೧೦೧ ಇವೆ. ಇದರಲ್ಲಿ ಗಂಡು ೪೮, ಹೆಣ್ಣು ೫೩ ಇವೆ. ಆದರೆ ಶಾಲೆಗೆ ಹೋಗುತ್ತಿರುವ ಮಕ್ಕಳಲ್ಲಿ ಗಂಡು ೪೧, ಹೆಣ್ಣು ೪೫ ಇವೆ. ಶಾಲೆಗೆ ಹೋಗದಿರುವ ಮಕ್ಕಳಲ್ಲಿ ಗಂಡು ೭, ಹೆಣ್ಣು ೮ ಇವೆ. ಪಾರ್ಧಿ ಸಮುದಾಯದ ಶಾಲೆಗೆ ಹೋಗಲು ಅರ್ಹವಾದ ಮಕ್ಕಳು ೧೦೪ ಇವೆ. ಇದರಲ್ಲಿ ಗಂಡು ೫೦, ಹೆಣ್ಣು ೫೪ ಇವೆ. ಆದರೆ ಶಾಲೆಗೆ ಹೋಗುತ್ತಿರುವ ಮಕ್ಕಳಲ್ಲಿ ಗಂಡು ೪೩, ಹೆಣ್ಣು ೪೨ ಇವೆ. ಶಾಲೆಗೆ ಹೋಗದಿರುವ ಮಕ್ಕಳಲ್ಲಿ ಗಂಡು ೭, ಹೆಣ್ಣು ೧೨ ಇವೆ.

**೬-೧೪ರ ವಯೋಮಾದೊಳಗಿನ ಮಕ್ಕಳು ಶಾಲೆಗೆ ಹೋಗುತ್ತಿರುವ ಪ್ರಮಾಣ**

ಶೇಕಡವಾರುಗಳಲ್ಲಿ ಹೇಳುವುದಾದರೆ ಸಮೀಕ್ಷೆ ಮಾಡಿದ ೬-೧೪ರ ಒಳಗಿನ ವಯೋಮಾನದ ಬೇಡ ಸಮುದಾಯದ ಒಟ್ಟು ಮಕ್ಕಳಲ್ಲಿ ಶೇಕಡ ೯೨.೬೩ ರಷ್ಟು ಮಕ್ಕಳು ಶಾಲೆಗೆ ಹೋಗುತ್ತಿವೆ. ಶೇಕಡ ೭.೩೭ ಮಕ್ಕಳು ಶಾಲೆಯಿಂದ ಹೊರಗಿವೆ. ಶಾಲೆಗೆ ಹೋಗುತ್ತಿರುವ ಗಂಡುಮಕ್ಕಳು ಶೇಕಡ ೮೭.೭೫ ಹಾಗೂ ಶೇಕಡ ೯೭.೯೫ ಹೆಣ್ಣುಮಕ್ಕಳಿರುವರು. ಅಂದರೆ ಶಾಲೆಗೆ ಹೋಗುತ್ತಿರುವ ಮಕ್ಕಳ ಪ್ರಮಾಣದಲ್ಲಿ ಹೆಣ್ಣುಮಕ್ಕಳೇ ಹೆಚ್ಚಿನ ಪ್ರಮಾಣದಲ್ಲಿರುವರು. ಮೇದ ಸಮುದಾಯದ ಒಟ್ಟು ಮಕ್ಕಳಲ್ಲಿ ಶೇಕಡ ೯೬.೮೦ ರಷ್ಟು ಮಕ್ಕಳು ಶಾಲೆಗೆ ಹೋಗುತ್ತಿವೆ. ಶೇಕಡ ೩.೨೦ ಮಕ್ಕಳು ಶಾಲೆಯಿಂದ ಹೊರಗಿವೆ. ಶಾಲೆಗೆ ಹೋಗುತ್ತಿರುವ ಗಂಡುಮಕ್ಕಳು ಶೇಕಡ ೯೫.೯೧ ಹಾಗೂ ಶೇಕಡ ೯೭.೭೭ ಹೆಣ್ಣುಮಕ್ಕಳಿರುವರು. ಅಂದರೆ ಶಾಲೆಗೆ ಹೋಗುತ್ತಿರುವ ಮಕ್ಕಳ ಪ್ರಮಾಣದಲ್ಲಿ ಹೆಣ್ಣುಮಕ್ಕಳೇ ಹೆಚ್ಚಿನ ಪ್ರಮಾಣದಲ್ಲಿರುವರು. ಡುಂಗ್ರಿಗರಾಸಿಯಾ ಸಮುದಾಯದ ಒಟ್ಟು ಮಕ್ಕಳಲ್ಲಿ ಶೇಕಡ ೮೬.೧೪ ರಷ್ಟು ಮಕ್ಕಳು ಶಾಲೆಗೆ ಹೋಗುತ್ತಿವೆ. ಶೇಕಡ ೧೩.೮೬ ಮಕ್ಕಳು ಶಾಲೆಯಿಂದ ಹೊರಗಿವೆ. ಶಾಲೆಗೆ

ಹೋಗುತ್ತಿರುವ ಗಂಡುಮಕ್ಕಳು ಶೇಕಡ ೮೭.೭೫ ಹಾಗೂ ಶೇಕಡ ೮೪.೯೦ ಹೆಣ್ಣುಮಕ್ಕಳಿರುವರು. ಅಂದರೆ ಶಾಲೆಗೆ ಹೋಗುತ್ತಿರುವ ಮಕ್ಕಳ ಪ್ರಮಾಣದಲ್ಲಿ ಗಂಡುಮಕ್ಕಳ ಪ್ರಮಾಣ ಹೆಚ್ಚಿದೆ. ಪಾರ್ಧಿ ಸಮುದಾಯದ ಒಟ್ಟು ಮಕ್ಕಳಲ್ಲಿ ಶೇಕಡ ೮೪.೬೧ ರಷ್ಟು ಮಕ್ಕಳು ಶಾಲೆಗೆ ಹೋಗುತ್ತಿವೆ. ಶೇಕಡ ೧೫.೩೧ ಮಕ್ಕಳು ಶಾಲೆಯಿಂದ ಹೊರಗಿವೆ. ಶಾಲೆಗೆ ಹೋಗುತ್ತಿರುವ ಗಂಡುಮಕ್ಕಳು ಶೇಕಡ ೮೪.೦೦ ಹಾಗೂ ಶೇಕಡ ೭೭.೭೭ ಹೆಣ್ಣುಮಕ್ಕಳಿರುವರು. ಅಂದರೆ ಶಾಲೆಗೆ ಹೋಗುತ್ತಿರುವ ಮಕ್ಕಳ ಪ್ರಮಾಣದಲ್ಲಿ ಗಂಡುಮಕ್ಕಳ ಪ್ರಮಾಣ ಹೆಚ್ಚಿದೆ. ಶಾಲೆಯಿಂದ ಹೊರಗುಳಿದ ಮಕ್ಕಳ ಪಾಲಕರ ಬಡತನ, ಅಲೆಮಾರಿತನ, ನೆಲೆಸಿದ ಪರಿಸರಗಳು ಈ ಮಕ್ಕಳನ್ನು ಶಾಲೆಯಿಂದ ಹೊರಗುಳಿಯುವಂತೆ ಮಾಡಿರಬೇಕು. ಬೇಡ, ಮೇದ ಸಮುದಾಯಗಳಿಗೆ ಸ್ವಲ್ಪಮಟ್ಟಿಗೆ ಪ್ರಜ್ಞಾವಂತಿಕೆ ಮೂಡಿದೆ. ನೀರಾವರಿ ಕೃಷಿಯೇ ಮಕ್ಕಳ ವಿದ್ಯಾಭ್ಯಾಸಕ್ಕೆ ಕುತ್ತನ್ನು ತಂದಿದೆಯೆಂದರೆ ತಪ್ಪಾಗಲಾರದು. ಪ್ರಾಯಶಃ ಕೂಲಿಕಾರ್ಮಿಕರ ಸಮಸ್ಯೆ ಹಾಗೂ ಪರರನ್ನು ಕರೆದುಕೊಂಡು ಹೋದರೆ ಹೆಚ್ಚಿನ ಕೂಲಿಯನ್ನು ಸಂದಾಯ ಮಾಡಬೇಕೆಂಬ ಕಾರಣಕ್ಕಾಗಿಯೇ ಮಕ್ಕಳನ್ನು ಶಾಲೆಬಿಡಿಸಿ ತಮ್ಮ ಕೃಷಿಭೂಮಿಯ ಕೆಲಸಕ್ಕಾಗಿ ಇಲ್ಲವೆ ಹೆಚ್ಚಿನ ಕೂಲಿ ಸಿಗುತ್ತದೆ ಎಂಬ ಕಾರಣಕ್ಕಾಗಿ ಬೇರೆಯವರಲ್ಲಿ ಕೂಲಿಗೆ ಕರೆದುಕೊಂಡು ಹೋಗುವ ಮೂಲಕ ಮಕ್ಕಳನ್ನು ಶಾಲೆಯಿಂದ ಹೊರಗುಳಿಯುವಂತೆ ಮಾಡಿದೆ. ಇನ್ನುಳಿದ ತಾಲೂಕುಗಳಾದ ಕೂಡ್ಲಿಗಿ, ಹಡಗಲಿ, ಬಳ್ಳಾರಿ, ಸಂಡೂರು, ಹಗರಿಬೊಮ್ಮನಹಳ್ಳಿ ತಾಲೂಕುಗಳಲ್ಲಿ ವಲಸೆ ಸಮಸ್ಯೆ ಇದೆ. ಆದರೆ ಆಶ್ಚರ್ಯವೆಂದರೆ ಬಹುತೇಕ ಎಲ್ಲಾ ತಾಲೂಕುಗಳಲ್ಲಿಯೂ ಹೆಣ್ಣು ಮಕ್ಕಳು ಗಂಡುಮಕ್ಕಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಶಾಲೆಯೊಳಗಿರುವುದು ಕಂಡುಬರುತ್ತದೆ.

| ಕೋಷ್ಟಕ ೬.೨೦ ಸಮೀಕ್ಷೆಗೊಳಪಡಿಸಿದ ಬುಡಕಟ್ಟು ಸಮುದಾಯಗಳ ಶೈಕ್ಷಣಿಕ ವಿವರ | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| ಸಮುದಾಯ | ೮–೧೦ನೇ | | | ಪಿಯುಸಿ | | | ಸ್ನಾತಕ | | | ಸ್ನಾತಕೋತ್ತರ | | | ಇತರೆ | | |
| | ಗ | ಹೆ | ಒ | ಗ | ಹೆ | ಒ | ಗ | ಹೆ | ಒ | ಗ | ಹೆ | ಒ | ಗ | ಹೆ | ಒ |
| ಬೇಡ | ೦೮ | ೧೦ | ೧೮ | ೫ | ೪ | ೯ | ೪ | ೩ | ೭ | ೨ | ೧ | ೩ | ೨ | ೧ | ೩ |
| ಮೇದ | ೦೭ | ೦೯ | ೧೬ | ೪ | ೩ | ೭ | ೨ | ೧ | ೩ | ೧ | – | ೧ | ೨ | – | ೨ |
| ಡುಂಗ್ರಿ ಗರಾಸಿಯಾ | ೦೬ | ೦೨ | ೦೮ | ೧ | – | ೧ | ೧ | – | ೧ | – | – | – | – | – | – |
| ಪಾರ್ಧಿ | ೦೫ | ೦೨ | ೦೭ | ೧ | – | ೧ | – | – | – | – | ೧ | ೧ | – | – | – |
| ಒಟ್ಟು | ೨೬ | ೨೩ | ೪೯ | ೧೧ | ೭ | ೧೮ | ೭ | ೪ | ೧೧ | ೩ | ೨ | ೫ | ೪ | ೧ | ೫ |



**ವೃತ್ತ ಚಿತ್ರ ೬.೨೦. ಸಮೀಕ್ಷೆಗೊಳಪಡಿಸಿದ ಬುಡಕಟ್ಟು ಸಮುದಾಯಗಳ ಜಾತಿವಾರು ಶೈಕ್ಷಣಿಕ ವಿವರ**

ಸಮೀಕ್ಷೆಗೆ ಒಳಪಡಿಸಿದ ಬೇಡ ಸಮುದಾಯದಲ್ಲಿ ೮ನೇ ತರಗತಿಯಿಂದ ೧೦ನೇ ತರಗತಿವರೆಗೆ ಓದುತ್ತಿರುವ ಒಟ್ಟು ಮಕ್ಕಳು ಒಟ್ಟು ೧೮ ಇವೆ. ಇದರಲ್ಲಿ ಗಂಡುಮಕ್ಕಳು ೮ ಹಾಗೂ ಹೆಣ್ಣುಮಕ್ಕಳು ೧೦ ಇವೆ. ಹಾಗೆಯೇ ಪಿಯುಸಿ/ತತ್ಸಮಾನ ತರಗತಿಗಳಲ್ಲಿ ಒಟ್ಟು ೯ ಮಕ್ಕಳಿವೆ. ಇದರಲ್ಲಿ ಗಂಡು ೫ ಹಾಗೂ ಹೆಣ್ಣು ೪ ಇವೆ. ಸ್ನಾತಕ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವವರಲ್ಲಿ ಒಟ್ಟು ೭ ಜನರಿರುವರು. ಇದರಲ್ಲಿ ಗಂಡು ೪ ಹಾಗೂ ಹೆಣ್ಣು ೩ ಜನರಿರುವರು. ಸ್ನಾತಕೋತ್ತರ ತರಗತಿಯಲ್ಲಿ ಓದುತ್ತಿರುವವರು ಒಟ್ಟು ೩ ಜನರಿರುವರು. ಇದರಲ್ಲಿ ಗಂಡು ೨, ಹೆಣ್ಣು ೧ ಇವೆ. ಡಿಪ್ಲೊಮೊ ಇಂಜಿನೀಯರಿಂಗ್ ಇತ್ಯಾದಿ ತಾಂತ್ರಿಕ ಶಿಕ್ಷಣದಲ್ಲಿ ವ್ಯಾಸಂಗ ಮಾಡುತ್ತಿರುವವರು ಒಟ್ಟು ೩ ಜನರಿರುವರು. ಇದರಲ್ಲಿ ೨ ಗಂಡು, ೧ ಹೆಣ್ಣು ಇರುವುದು. ಸಮೀಕ್ಷೆಗೆ ಒಳಪಡಿಸಿದ ಮೇದ ಸಮುದಾಯದಲ್ಲಿ ೮ನೇ ತರಗತಿಯಿಂದ ೧೦ನೇ ತರಗತಿವರೆಗೆ ಓದುತ್ತಿರುವ ಒಟ್ಟು ಮಕ್ಕಳು ಒಟ್ಟು ೧೬ ಇವೆ. ಇದರಲ್ಲಿ ಗಂಡುಮಕ್ಕಳು ೭ ಹಾಗೂ ಹೆಣ್ಣುಮಕ್ಕಳು ೯ ಇವೆ. ಹಾಗೆಯೇ ಪಿಯುಸಿ/ತತ್ಸಮಾನ ತರಗತಿಗಳಲ್ಲಿ ಒಟ್ಟು ೭ ಮಕ್ಕಳಿವೆ. ಇದರಲ್ಲಿ ಗಂಡು ೪ ಹಾಗೂ ಹೆಣ್ಣು ೩ ಇವೆ. ಸ್ನಾತಕ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವವರಲ್ಲಿ ಒಟ್ಟು ೩ ಜನರಿರುವರು. ಇದರಲ್ಲಿ ಗಂಡು ೨ ಹಾಗೂ ಹೆಣ್ಣು ೧ ಜನರಿರುವರು. ಸ್ನಾತಕೋತ್ತರ ತರಗತಿಯಲ್ಲಿ ಓದುತ್ತಿರುವವರು ಒಟ್ಟು ಒಬ್ಬ ಗಂಡುಹುಡಗ ಮಾತ್ರ ಇರುವನು. ಡಿಪ್ಲೊಮೊ ಇಂಜಿನೀಯರಿಂಗ್ ಇತ್ಯಾದಿ ತಾಂತ್ರಿಕ ಶಿಕ್ಷಣದಲ್ಲಿ ವ್ಯಾಸಂಗ ಮಾಡುತ್ತಿರುವವರು ಒಟ್ಟು ೨ ಜನರಿದ್ದು ಎರಡೂ ಜನರು ಪುರುಷರಿರುವರು.

ಸಮೀಕ್ಷೆಗೆ ಒಳಪಡಿಸಿದ ಡುಂಗ್ರಿಗರಾಸಿಯಾ ಸಮುದಾಯದಲ್ಲಿ ೮ನೇ ತರಗತಿಯಿಂದ ೧೦ನೇ ತರಗತಿವರೆಗೆ ಓದುತ್ತಿರುವ ಒಟ್ಟು ಮಕ್ಕಳು ಒಟ್ಟು ೮ ಇವೆ. ಇದರಲ್ಲಿ ಗಂಡುಮಕ್ಕಳು ೬ ಹಾಗೂ ಹೆಣ್ಣುಮಕ್ಕಳು ೨ ಇವೆ. ಹಾಗೆಯೇ ಪಿಯುಸಿ/ತತ್ಸಮಾನ ತರಗತಿಗಳಲ್ಲಿ ಒಟ್ಟು ಒಂದು ಗಂಡು ಹುಡುಗ ಮಾತ್ರ ಇರುವನು. ಸ್ನಾತಕ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವವರಲ್ಲಿ ಒಟ್ಟು ಒಂದು ಗಂಡುಹುಡುಗ ಮಾತ್ರ ಇರುವನು. ಸ್ನಾತಕೋತ್ತರ ತರಗತಿ ಹಾಗೂ ಡಿಪ್ಲೊಮೊ ಇಂಜಿನೀಯರಿಂಗ್ ಇತ್ಯಾದಿ ತಾಂತ್ರಿಕ ಶಿಕ್ಷಣದಲ್ಲಿ ವ್ಯಾಸಂಗ ಮಾಡುತ್ತಿರುವವರು ಒಬ್ಬರೂ ಇಲ್ಲ. ಸಮೀಕ್ಷೆಗೆ ಒಳಪಡಿಸಿದ ಹಕ್ಕಿಪಿಕ್ಕಿ ಸಮುದಾಯದಲ್ಲಿ ೮ನೇ ತರಗತಿಯಿಂದ ೧೦ನೇ ತರಗತಿವರೆಗೆ ಓದುತ್ತಿರುವ ಒಟ್ಟು ಮಕ್ಕಳು ಒಟ್ಟು ೭ ಇವೆ. ಇದರಲ್ಲಿ ಗಂಡುಮಕ್ಕಳು ೫ ಹಾಗೂ ಹೆಣ್ಣುಮಕ್ಕಳು ೨ ಇವೆ. ಹಾಗೆಯೇ ಪಿಯುಸಿ/ತತ್ಸಮಾನ ತರಗತಿಗಳಲ್ಲಿ ಒಟ್ಟು ಒಬ್ಬ ಗಂಡುಹುಡುಗ ಮಾತ್ರ ಇರುವನು. ಸ್ನಾತಕ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವವರು ಒಬ್ಬರೂ ಇಲ್ಲ. ಆದರೆ ಸ್ನಾತಕೋತ್ತರ ತರಗತಿಯಲ್ಲಿ ಒಬ್ಬ ಮಹಿಳೆ ವ್ಯಾಸಂಗ ಮಾಡುತ್ತಿರುವಳು. ಡಿಪ್ಲೊಮೊ ಇಂಜಿನೀಯರಿಂಗ್ ಇತ್ಯಾದಿ ತಾಂತ್ರಿಕ ಶಿಕ್ಷಣದಲ್ಲಿ ವ್ಯಾಸಂಗ ಮಾಡುತ್ತಿರುವವರು ಒಬ್ಬರೂ ಇಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ನೆಲೆಸಿರುವ ಬೇಡ, ಮೇದ, ಡುಂಗ್ರಿಗರಾಸಿಯಾ, ಪಾರ್ಧಿ ಸಮುದಾಯಗಳನ್ನು ಸಮೀಕ್ಷಿಸಲಾಗಿ ೮ನೇ ತರಗತಿಯಿಂದ ೧೦ನೇ ತರಗತಿವರೆಗೆ ಓದುತ್ತಿರುವ ಒಟ್ಟು ಮಕ್ಕಳು ಒಟ್ಟು ೪೯ ಇವೆ. ಇದರಲ್ಲಿ ಗಂಡುಮಕ್ಕಳು ೨೬ ಹಾಗೂ ಹೆಣ್ಣುಮಕ್ಕಳು ೨೩ ಇವೆ. ಹಾಗೆಯೇ ಪಿಯುಸಿ/ತತ್ಸಮಾನ ತರಗತಿಗಳಲ್ಲಿ ಒಟ್ಟು ೧೮ ಮಕ್ಕಳಿವೆ. ಇದರಲ್ಲಿ ಗಂಡು ೧೧ ಹಾಗೂ ಹೆಣ್ಣು ೦೭ ಇವೆ. ಸ್ನಾತಕ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವವರಲ್ಲಿ ಒಟ್ಟು ೧೧ ಜನರಿರುವರು. ಇದರಲ್ಲಿ ಗಂಡು ೭ ಹಾಗೂ ಹೆಣ್ಣು ೦೪ ಜನರಿರುವರು. ಸ್ನಾತಕೋತ್ತರ ತರಗತಿಯಲ್ಲಿ ಓದುತ್ತಿರುವವರು ಒಟ್ಟು ೫ ಜನರಿರುವರು. ಇದರಲ್ಲಿ ಗಂಡು ೩ ಹೆಣ್ಣು ೨ ಇವೆ. ಡಿಪ್ಲೊಮೊ ಇಂಜಿನೀಯರಿಂಗ್‌ನಲ್ಲಿ ವ್ಯಾಸಂಗ ಮಾಡುತ್ತಿರುವವರು ಒಟ್ಟು ೫ ಜನರಿರುವರು. ಇದರಲ್ಲಿ ೪ ಗಂಡು, ೧ ಹೆಣ್ಣು ಇರುವುದು.

**ಕೋಷ್ಟಕ ೬.೨೧ ಸಮೀಕ್ಷೆಗೆ ಒಳಪಡಿಸಿದ ಒಟ್ಟು ಬುಡಕಟ್ಟು ಸಮುದಾಯಗಳ ಮಕ್ಕಳ ಪ್ರೌಢ ಹಾಗೂ ಉನ್ನತ ಶಿಕ್ಷಣದ ವಿವರ**

| ತರಗತಿ | ಗಂಡು | ಹೆಣ್ಣು | ಒಟ್ಟು |
|---|---|---|---|
| ೮-೧೦ | ೨೬ | ೨೩ | ೪೯ |
| ಪಿಯುಸಿ | ೧೧ | ೭ | ೧೮ |
| ಸ್ನಾತಕ | ೭ | ೪ | ೧೧ |
| ಸ್ನಾತಕೋತ್ತರ | ೩ | ೨ | ೫ |
| ಇತರೆ | ೪ | ೧ | ೫ |
| **ಒಟ್ಟು** | **೫೧** | **೩೭** | **೮೮** |

ಲಂಬ ಚಿತ್ರ ೬.೨೧ ಸಮೀಕ್ಷೆಗೆ ಒಳಪಡಿಸಿದ ಒಟ್ಟು ಬುಡಕಟ್ಟು ಸಮುದಾಯಗಳ ಮಕ್ಕಳ ಪ್ರೌಢ ಹಾಗೂ ಉನ್ನತ ಶಿಕ್ಷಣದ ವಿವರ




ಪ್ರೌಢ ಶಿಕ್ಷಣದಲ್ಲಿ ೮ರಿಂದ ೧೦ನೇ ತರಗತಿಯಿಂದ ತಾಂತ್ರಿಕ ಶಿಕ್ಷಣದವರೆಗೆ ವ್ಯಾಸಂಗ ಮಾಡುತ್ತಿರುವವರು ಒಟ್ಟು ೮೮ ಜನರಿರುವರು. ಇದರಲ್ಲಿ ಗಂಡು ೫೧, ಹೆಣ್ಣು ೩೭ ಜನರಿರುವರು. ಅಂದರೆ ಶೇಕಡ ೫೮ ಗಂಡು ಶೇಕಡ ೪೨ ಮಹಿಳೆಯರು ಮಕ್ಕಳು ಪ್ರೌಢ ಶಿಕ್ಷಣ ಪಡೆಯುತ್ತಿರುವರು. ಅಂದರೆ ೧೬ರಷ್ಟು ಪ್ರಮಾಣದ ಅಂತರವಿದೆ. ಇದನ್ನು ಜಾತಿವಾರುಗಳಲ್ಲಿ ನೋಡುವುದಾದರೆ ವ್ಯಾಸಂಗದಲ್ಲಿ ತೊಡಗಿರುವವರಲ್ಲಿ ಬೇಡ ಸಮುದಾಯದವರೇ ಹೆಚ್ಚಿರುವರು. ಅವರ ನಂತರದ ಸ್ಥಾನವು ಮೇದ ಸಮುದಾಯದ್ದಾಗಿದೆ. ಡುಂಗ್ರಿಗರಾಸಿಯಾ ಹಾಗೂ ಪಾರ್ಧಿ ಸಮುದಾಯಗಳು ಹೆಚ್ಚು ಕಡಿಮೆ ಒಂದೇ ಸ್ಥಾನದಲ್ಲಿವೆ. ಬೇಡ, ಮೇದದಲ್ಲಿ ಉನ್ನತ ಶಿಕ್ಷಣದಲ್ಲಿ ಕಲಿಯುವ ಮಹಿಳೆಯರ ಪ್ರಮಾಣ ಹೆಚ್ಚಿದ್ದು ಪಾರ್ಧಿ ಸಮುದಾಯದಲ್ಲಿ ಉನ್ನತ ಶಿಕ್ಷಣ ಪಡೆಯುವ ಮಹಿಳೆಯರ ಪ್ರಮಾಣ ತುಂಬಾ ಕಡಿಮೆ ಇದೆ. ಡುಂಗ್ರಿಗರಾಸಿಯಾ ಸಮುದಾಯದಲ್ಲಂತೂ ಒಬ್ಬರೂ ಕಂಡುಬರುವುದಿಲ್ಲ.

ಪ್ರಾಥಮಿಕ ಹಂತದಿಂದ ನೋಡುತ್ತಾ ಬಂದರೆ ಪ್ರಾಥಮಿಕ, ಮಾಧ್ಯಮಿಕ ತರಗತಿಗಳಲ್ಲಿ ಮಹಿಳೆಯರು ಪುರುಷರಿಗಿಂತ ಮುಂದಿರುವಂತೆ ಕಂಡುಬರುವರಾದರೂ ಮೇಲಿನ ತರಗತಿಗಳಿಗೆ ಹೋದಂತೆಲ್ಲಾ ಮಹಿಳೆಯರ ಪ್ರಮಾಣ ಕಡಿಮೆಯಾಗಿದೆ ಎಂಬುದು ಸಮಿಕ್ಷೆಯ ಮೂಲಕ ತಿಳಿದುಬಂದಿದೆ. ಭಾರತೀಯ ಸಮಾಜದಲ್ಲಿ ಲಿಂಗ ಸಮಾನತೆ ಬರಬೇಕಾದರೆ ಮುಖ್ಯವಾಗಿ ಮಹಿಳೆಯರು ಶಿಕ್ಷಣವನ್ನು ಪಡೆಯಲೇಬೇಕೆಂದು ಸರ್ಕಾರ ಹಲವು ಯೋಜನೆಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಶಾಲೆಯಿಂದ ಹೊರಗುಳಿದ ಹೆಣ್ಣುಮಕ್ಕಳಿಗಾಗಿ ಕಸ್ತೂರಿಬಾ ವಸತಿ ಶಾಲೆ ಪ್ರಾರಂಭಿಸಲಾಗಿದೆ. ಆದರೆ ಈ ಶಾಲೆಗಳಲ್ಲಿ ಬೇಡ ಸಮುದಾಯದ ಮಕ್ಕಳು ಮಾತ್ರ ಕಂಡುಬರುತ್ತಿವೆ. ಆದರೆ ಇನ್ನುಳಿದ ಬುಡಕಟ್ಟು ಹೆಣ್ಣುಮಕ್ಕಳು ಇಂತಹ ವಿಶೇಷ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವುದು ಕ್ಷೇತ್ರಕಾರ್ಯದಲ್ಲಿ ಕಂಡುಬರಲಿಲ್ಲ. ಬಾ ಬಾಲೆ ಶಾಲೆಗೆ, ಕಡ್ಡಾಯ ಶಿಕ್ಷಣ ನೀತಿ, ಮಧ್ಯಾಹ್ನದ ಬಿಸಿಯೂಟ, ಉಚಿತ ಪಠ್ಯಪುಸ್ತಕಗಳ

ವಿತರಣೆ, ವಿದ್ಯಾರ್ಥಿ ವೇತನ ಇತ್ಯಾದಿ ವಿಶೇಷ ಕಾರ್ಯಕ್ರಮಗಳನ್ನು ಸರ್ಕಾರವು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಮೀಸಲಿರಿಸಿದೆ. ಆದರೆ ಸರ್ಕಾರದ ಯೋಜನೆ, ಕಾರ್ಯಕ್ರಮಗಳು ಬುಡಕಟ್ಟು ಮಹಿಳೆಯರನ್ನು ವಿಶೇಷವಾಗಿ ಅಲೆಮಾರಿ ಬುಡಕಟ್ಟುಗಳಾದ ಡುಂಗ್ರಿಗರಾಸಿಯಾ, ಪಾರ್ಧಿ ಸಮುದಾಯಗಳನ್ನು ಶಿಕ್ಷಣದತ್ತ ಆಕರ್ಷಿಸುವಲ್ಲಿ ಸೋತಿವೆಯೆನಿಸುತ್ತದೆ. ಮುಖ್ಯವಾಗಿ ಬುಡಕಟ್ಟುಗಳು, ವಿಶೇಷವಾಗಿ ಅಲೆಮಾರಿ ಬುಡಕಟ್ಟುಗಳು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಲು ಹಿಂಜರಿಯುವುದೇಕೆ, ಅದರಲ್ಲೂ ಹೆಣ್ಣುಮಕ್ಕಳು ಮೇಲಿನ ಹಂತಕ್ಕೆ ಹೋದಂತೆಲ್ಲಾ ಶಿಕ್ಷಣದಿಂದ ದೂರವುಳಿಯುವುದೇಕೆ ಎಂಬುದನ್ನು ನೋಡಿದಾಗ ಮಕ್ಕಳು ಶಿಕ್ಷಣದಿಂದ ದೂರವುಳಿಯಲು ಆರ್ಥಿಕ ಕಾರಣಗಳಷ್ಟೇ ಮುಖ್ಯವಾಗಿ ಸಾಮಾಜಿಕ ಕಾರಣಗಳೂ ಇವೆಯೆಂಬುದು ಸ್ಪಷ್ಟವಾಗುತ್ತದೆ.

ಶಾಲೆಗೆ ಸೇರಿಸಿದರೂ ಆ ಮಕ್ಕಳು ಶಾಲೆಯನ್ನು ಪೂರೈಸಲು ಏಕೆ ಸಾಧ್ಯವಾಗುತ್ತಿಲ್ಲ ಎಂಬುದರ ಆಳಕ್ಕೆ ಇಳಿದು ನೋಡಿದರೆ ಬೇರೆ ಸತ್ಯಗಳೇ ಹೊರ ಬೀಳುತ್ತವೆ. ಭಾರತೀಯರ ಮೂಲಭೂತ ಸಮಸ್ಯೆಗಳಲ್ಲಿ ಬಡತನವೂ ಒಂದು, ಕೇವಲ ಬಡತನವೊಂದೇ ಶಿಕ್ಷಣಕ್ಕೆ ಅಡ್ಡಿ ಎಂದು ನಾವು ತಿಳಿಯಬಾರದು, ಅದರಾಚೆಗೂ ಹಲವಾರು ಸಾಮಾಜಿಕ ಕಾರಣಗಳು ಹೆಣ್ಣುಮಕ್ಕಳು ಶಾಲೆಗೆ ಹೋಗದಂತೆ ತಡೆಯುತ್ತವೆ. ದಲಿತರಲ್ಲಿಯೇ ದಲಿತರೆಂದು ಪರಿಗಣಿತವಾದ ಮಹಿಳೆಯರು ಶೈಕ್ಷಣಿಕ ಪ್ರಗತಿಯಲ್ಲಿ ಹಿಂದುಳಿದಿದ್ದಾರೆ. ಮುಖ್ಯವಾಗಿ ಮೇಲ್ವರ್ಗಗಳಲ್ಲಿ ಸಾಮಾಜಿಕ ಕಾರಣಗಳಿಗಾಗಿ ಮಹಿಳೆಯರನ್ನು ಮನೆಯಿಂದ ಹೊರಗೆ ವಿದ್ಯಾಭ್ಯಾಸಕ್ಕಾಗಿ ಕಳಿಸುವುದು ತುಂಬಾ ಅಪರೂಪವಾಗಿದೆ. ಹುಡುಗಿಯರು ಹದಿಮೂರು ವರ್ಷದಿಂದ ಹದಿನಾರು ವರ್ಷದೊಳಗೆ ಋತಿಮತಿಯಾಗುವುದು ಪ್ರಕೃತಿ ನಿಯಮ. ಮೈನೆರೆದ ಮಕ್ಕಳನ್ನು ಬೇಗ ವೈವಾಹಿಕ ಬಂಧನಕ್ಕೆ ಒಳಪಡಿಸಲಾಗುವುದು ಹೆಣ್ಣುಮಕ್ಕಳು ಶಿಕ್ಷಣ ವ್ಯವಸ್ಥೆಯಿಂದ ದೂರವುಳಿಯಲು ಕಾರಣವಾಗಿದೆ. ಜೊತೆಗೆ ಡುಂಗ್ರಿಗರಾಸಿಯಾ, ಪಾರ್ಧಿಯಂತಹ ಸಮುದಾಯಗಳ ಅಲೆಮಾರಿತನವೂ ಮಕ್ಕಳು ಶಾಲೆಯಿಂದ ದೂರವುಳಿಯಲು ಕಾರಣವಾಗಿದೆ. ಭಾರತೀಯ ಸಮಾಜದಲ್ಲಿ ಲಿಂಗ ವ್ಯವಸ್ಥೆಯಲ್ಲಿ ಸಮಾನತೆ ಬರಬೇಕಾದರೆ ಮುಖ್ಯವಾಗಿ ತಳಜಾತಿಗಳ ಮಹಿಳೆಯರು ಶಿಕ್ಷಣವನ್ನು ಪಡೆಯಲೇಬೇಕು. ಆ ಕಾರಣಕ್ಕಾಗಿಯೇ ಸಂವಿಧಾನದಲ್ಲಿ ಮಹಿಳೆಯರಿಗೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮೀಸಲಾತಿ ನೀಡಬೇಕೆಂದು ತಿಳಿಸಲಾಗಿದೆ. ಶಿಕ್ಷಣ ಮಹಿಳೆಯ ಆತ್ಮಗೌರವವನ್ನು ಹೆಚ್ಚಿಸುತ್ತದೆ ಹಾಗೂ ಹೆಣ್ಣು ಸ್ವಾಭಿಮಾನದ ಬದುಕನ್ನು ಸಾಗಿಸಲು ಶಿಕ್ಷಣವು ಆತ್ಮಸ್ಥೈರ್ಯವನ್ನು ನೀಡುತ್ತದೆ. ಹೀಗಾಗಿ ಪ್ರತಿಯೊಬ್ಬರಿಗೂ ಕಡ್ಡಾಯ ಶಿಕ್ಷಣದ ಅವಶ್ಯಕತೆಯನ್ನು ಮನಗಂಡ ಸರ್ಕಾರ ಭಾರತದ ಪ್ರತಿಯೊಬ್ಬ ಪ್ರಜೆಗೂ ಕಡ್ಡಾಯ ಶಿಕ್ಷಣ ನೀತಿಯನ್ನು ಅನುಸರಿಸುವಂತೆ ತಿಳಿಸುತ್ತದೆ. ಆದರೆ ಯಾವುದೇ ನೀತಿ ಅಥವಾ ನಿಯಮಗಳು, ಒತ್ತಡಗಳು ಮನುಷ್ಯನಿಗೆ ಆ ಮುಖವಾಗಿ ಮುನ್ನಡೆಸಲು ಸಾಧನವಾಗುವುದಿಲ್ಲ. ಶಿಕ್ಷಣದಲ್ಲಿ ಮಹಿಳೆಯರಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಲಾಗಿದೆಯಾದರೂ ಮುಂಚೂಣಿಯಲ್ಲಿರುವ ಸಮುದಾಯದ ಮಹಿಳೆಯರು ಆ ಸೌಲಭ್ಯಗಳ ಫಲಾನುಭವಿಗಳಾಗುವರು. ಆದರೆ ಬುಡಕಟ್ಟು ಸಮುದಾಯಗಳು, ಅದರಲ್ಲೂ ಅಲೆಮಾರಿ ಬುಡಕಟ್ಟು

ಮಹಿಳೆಯರ ಸಾಮಾಜಿಕ, ಆರ್ಥಿಕ ಕಾರಣಗಳು ಅವರನ್ನು ಶಿಕ್ಷಣ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗದಂತೆ ತಡೆಗೋಡೆಗಳಾಗಿವೆ.

**೬.೩ ಬುಡಕಟ್ಟು ಮಹಿಳೆಯರ ಭೌತಿಕ ಸಬಲೀಕರಣ**

ಬುಡಕಟ್ಟು ಮಹಿಳೆಯರನ್ನು ಅತಿಯಾಗಿ ಕಾಡುವುದು ವೈಯಕ್ತಿಕ ಸ್ವಚ್ಛತೆ ಮತ್ತು ಆರೋಗ್ಯದ ಕೊರತೆ. ಬಹುತೇಕವಾಗಿ ಬುಡಕಟ್ಟು ಸಮುದಾಯಗಳು ವೈಯಕ್ತಿಕ ಸ್ವಚ್ಛತೆಯ ಕಡೆಗೆ ಹೆಚ್ಚು ಗಮನ ನೀಡುವುದಿಲ್ಲ. ಆಹಾರದಲ್ಲಿಯೂ ನೈರ್ಮಲ್ಯತೆ ಇರುವುದು ಕಷ್ಟ. ತಂಗಳು ಆಹಾರದ ಬಳಕೆ, ಆಹಾರವನ್ನು ಮುಚ್ಚಿಡದೇ ಇರುವುದು, ಬಯಲು ಶೌಚ, ಬಯಲಲ್ಲಿಯೇ ಸ್ನಾನ ಇತ್ಯಾದಿಗಳು ಬುಡಕಟ್ಟುಗಳ ಆರೋಗ್ಯ ಸಮಸ್ಯೆಗೆ ಕಾರಣವಾಗುವುದು. ವಿಶೇಷವಾಗಿ ದೇವದಾಸಿ ವ್ಯವಸ್ಥೆಯಿಂದ ವೇಶ್ಯಾವಾಟಿಕೆಗಳಿಗೆ ದೂಡಲ್ಪಟ್ಟ ಮಹಿಳೆಯರು ಅಸುರಕ್ಷಿತ ಲೈಂಗಿಕತೆಯಿಂದ ಎಚ್ ಐ ವಿ ಯಂತಹ ಮಾರಕ ರೋಗಗಳಿಗೆ ಬಲಿಯಾಗುವುದನ್ನು ಕಾಣುತ್ತೇವೆ. ರಾಷ್ಟ್ರೀಯ ಜನಸಂಖ್ಯಾ ನೀತಿ ಹಾಗೂ ಅಭಿವೃದ್ಧಿ ಕಾರ್ಯಕ್ರಮ (ಯುಎನ್‌ಡಿಪಿ)ಮತ್ತು ರಾಷ್ಟ್ರೀಯ ಆರೋಗ್ಯ ನೀತಿಗಳು ಸಮಗ್ರವಾಗಿ ಕುಟುಂಬದೊಳಗೆ ಗುಣಮಟ್ಟದ ಆರೋಗ್ಯವನ್ನು ಆಪೇಕ್ಷಿಸುತ್ತದೆ. ಈ ನಿಟ್ಟಿನಲ್ಲಿ ಆರೋಗ್ಯ ಕಾರ್ಯಕ್ರಮಗಳನ್ನು ಸರ್ಕಾರವು ಹಮ್ಮಿಕೊಂಡು ಅನುಷ್ಠಾನಗೊಳಿಸುತ್ತ ಬರುತ್ತಿದೆ. ವಿಶೇಷವಾಗಿ ಮಹಿಳಾ ಸಬಲೀಕರಣದಲ್ಲಿ ಮಹಿಳೆಯರ ಆರೋಗ್ಯವು ಪ್ರಮುಖ ಪಾತ್ರ ವಹಿಸುವುದು. ಮನುಷ್ಯ ಹಣವಿಲ್ಲದೆ ಬದುಕಬಹುದು, ಆದರೆ ಆರೋಗ್ಯವಿಲ್ಲದಿದ್ದರೆ ಬದುಕುವುದು ಕಷ್ಟ. ಇದನ್ನೇ ಮಾನವಾಭಿವೃದ್ಧಿಯೂ ಹೇಳುವುದು. ಹಿಂದಿನ ಆರ್ಥಿಕ ತಜ್ಞರು ಹಣವೊಂದರಿಂದಲೇ ಮಾನವನ ಅಭ್ಯುದಯ ಎಂದು ಹೇಳುತ್ತಿದ್ದರು. ಆದರೆ ಇತ್ತೀಚಿನ ಅಮಾರ್ತ್ಯಸೇನ್‌ನಂತಹ ಆರ್ಥಿಕ ತಜ್ಞರು ಹಣವೊಂದೇ ಮುಖ್ಯವಲ್ಲ. "ಮನುಷ್ಯನ ಮೂಲಭೂತ ಅವಶ್ಯಕತೆಗಳಾದ ಆಹಾರ, ಆರೋಗ್ಯ, ಶಿಕ್ಷಣಗಳೂ ಮನುಷ್ಯನಿಗೆ ಅವಶ್ಯಕವೆಂದು ಹೇಳುತ್ತಾರೆ." (ಚಂದ್ರಶೇಖರ್ ಟಿ ಆರ್:೨೦೦೮:೧೩), ಹೀಗಾಗಿಯೇ ಬಡತನರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಆಹಾರದ ಕೊರತೆಯಾಗಬಾರದೆಂದು ಸರ್ಕಾರವು ಅತೀ ಕಡಿಮೆ ದರದಲ್ಲಿ ಆಹಾರ ಧಾನ್ಯಗಳನ್ನು ಪೂರೈಸುತ್ತಿದೆ. ಮಹಿಳಾ ಆರೋಗ್ಯವೆಂಬುದು ಕೇವಲ ದೈಹಿಕ ಮತ್ತು ಮಾನಸಿಕ ಆರೋಗ್ಯ ಮಾತ್ರವಾಗಿರದೆ ಅವಳ ಸುರಕ್ಷಿತ ಲೈಂಗಿಕತೆ ಹಾಗೂ ಸಂತಾನೋತ್ಪತ್ತಿಯ ಅವಶ್ಯಕತೆಯನ್ನು ಪರಿಗಣಿಸುವುದೂ ಆಗಿರುವುದು. ಇದು ಮಹಿಳೆ ಮತ್ತು ಮಕ್ಕಳ ಅಂತರ್ ಸಂಬಂಧವನ್ನೊಳಗೊಂಡಿರುತ್ತದೆ. ಮಹಿಳೆಯ ಮತ್ತು ಮಕ್ಕಳ ಸುರಕ್ಷತೆಯನ್ನು ಗಮನದಲ್ಲಿರಿಸಿಕೊಂಡ ಸರ್ಕಾರವು ಆ ಕಾರಣಕ್ಕಾಗಿಯೇ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕುಟುಂಬ ಕಲ್ಯಾಣ ಇಲಾಖೆ ಎಂಬ ಪ್ರತ್ಯೇಕವಾದ ಇಲಾಖೆಗಳನ್ನೇ ಪ್ರಾರಂಭಿಸಿದೆ. ಇವು ಗರ್ಭಿಣಿ ಮಹಿಳೆಯರ ಸಂತುಲಿತ ಆಹಾರದ ಕೊರತೆಯನ್ನು ನಿವಾರಿಸುವುದರೊಂದಿಗೆ ಅಂತಹ ಮಹಿಳೆಯರಿಗೆ ಕಬ್ಬಿಣ ಮತ್ತು ಫೋಲಿಕ್ ಆಸಿಡ್ ಕೊರತೆಯಾಗದಂತೆ ಅಂಗನವಾಡಿಗಳ ಮೂಲಕ ಆಹಾರ, ಆಹಾರ ಧಾನ್ಯಗಳು ಹಾಗೂ ಕಬ್ಬಿಣಾಂಶ ಮತ್ತು ಫೋಲಿಕ್ ಆಸಿಡ್ ಮಾತ್ರೆಗಳ ವಿತರಣೆ ಮಾಡುವುದು. ಅಷ್ಟೇ ಅಲ್ಲದೆ ಗರ್ಭಿಣಿ ಮಹಿಳೆಯರ ಹೆಸರನ್ನು ನೋಂದಾಯಿಸಿಕೊಂಡು ಅವರಿಗೆ ಆರೋಗ್ಯ

ಕಾರ್ಡನ್ನು ವಿತರಿಸುವ ಮೂಲಕ ಹೆರಿಗೆ ಪೂರ್ವ ಹಾಗೂ ಹೆರಿಗೆ ನಂತರ ಆರೋಗ್ಯ ಸೇವೆಗಳನ್ನು (ಉದಾಹರಣೆಗೆ ರಕ್ತ ತಪಾಸಣೆ, ಧನುರ್ವಾತ ಚುಚ್ಚುಮದ್ದು (ಟಿ ಟಿ) ಇತ್ಯಾದಿ) ನೀಡುತ್ತಿದೆ. ಮಹಿಳೆಯರ ಆರೋಗ್ಯ ಸುಧಾರಣೆಗೆ ಸಂಬಂಧಿಸಿದ ವಿಚಾರಗಳನ್ನು ೧೯೯೪ರ ಅಂತರಾಷ್ಟ್ರೀಯ ಜನಸಂಖ್ಯೆ ಮತ್ತು ಅಭಿವೃದ್ಧಿ ಸಮ್ಮೇಳನದಲ್ಲಿ ಚರ್ಚಿಸಲಾಗಿದೆ. ಭಾರತದಲ್ಲಿ ಬುಡಕಟ್ಟುಗಳು ಜನ ಸಮುದಾಯಗಳ ಮಧ್ಯದಲ್ಲಿದ್ದೂ ಕೂಡ ಇತರರಿಗಿಂತ ವಿಭಿನ್ನವಾದ ಸಂಸ್ಕೃತಿಯನ್ನು ಹೊಂದಿದ್ದು ವಿಭಿನ್ನವಾದ ಪರಿಸರದಲ್ಲಿ ಜೀವನ ನಡೆಸುವರು. ಬುಡಕಟ್ಟುಗಳ ಬಹುದೊಡ್ಡ ಸಮಸ್ಯೆಯೆಂದರೆ ಅವರು ಬೇರೆ ಬೇರೆ ಕಡೆ ತಮ್ಮ ಸಮುದಾಯದ ಪಂಗಡಗಳಲ್ಲಿ ನೆಲೆಸುವುದು. ಒಂದು ಪಂಗಡ/ ಸಮುದಾಯದಂತೆ ಮತ್ತೊಂದು ಪಂಗಡ/ಸಮುದಾಯ ಇರುವುದಿಲ್ಲ. ಇವರಲ್ಲಿ ಒಬ್ಬರ ಜೀವನ ಶೈಲಿಗಿಂತ ಮತ್ತೊಬ್ಬರ ಜೀವನ ಶೈಲಿ ಭಿನ್ನವಾಗಿರುತ್ತದೆ. ಅಷ್ಟಕ್ಕೂ ಆಧುನಿಕವಾದ ಸವಲತ್ತುಗಳ ಕುರಿತಾಗಿ ಅವರು ಅಷ್ಟು ಸುಲಭಕ್ಕೆ ನಂಬುವುದಿಲ್ಲ ಅಥವಾ ವಿಶ್ವಾಸ ತೋರಿಸುವುದಿಲ್ಲ. ಇವುಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಸಾಮಾನ್ಯ ಜನರಿಗೆ ಬಳಕೆಗೊಳ್ಳುವ ಮಾಪನಕ್ಕಿಂತ ವಿಭಿನ್ನವಾದ ಮಾಪನವನ್ನೇ ಬಳಸಬೇಕಾಗುವುದು. ಬುಡಕಟ್ಟುಗಳು ಸಾಮಾನ್ಯ ಜನರಿಗಿಂತ ಭಿನ್ನವಾದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಹಾಗೂ ಆರೋಗ್ಯ ಸ್ಥಿತಿಯನ್ನು ಹೊಂದಿರುವರು. ಭಾರತೀಯ ಪರಿಸರದಲ್ಲಿ ಬುಡಕಟ್ಟುಗಳು ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ತುಂಬಾ ಹಿಂದುಳಿದಿರುವರು. ಇವರನ್ನು ಆರ್ಥಿಕವಾಗಿ ಮೇಲೆತ್ತಬೇಕಾದ ಅವಶ್ಯಕತೆ ಇದೆ.

೨೦೦೧ರ ಜನಗಣತಿ ಪ್ರಕಾರ ಬುಡಕಟ್ಟುಗಳು ರಾಷ್ಟ್ರದಲ್ಲಿ ಶೇಕಡ ೮.೨ರಷ್ಟಿರುವರು. ಬಹುತೇಕ ಬುಡಕಟ್ಟುಗಳು ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿವೆ ಹಾಗೂ ಕೃಷಿ ಸಂಬಂಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿವೆ. ಸರ್ಕಾರ, ಸರ್ಕಾರೇತರ ಸಂಸ್ಥೆಗಳು ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಂಡು ಬುಡಕಟ್ಟುಗಳನ್ನು ಅಭಿವೃದ್ಧಿಗೆ ಪೂರಕವಾದ ಕಾರ್ಯಗಳನ್ನು ಮಾಡುತ್ತಿವೆ ಎಂದು ಹೇಳಲಾಗುತ್ತಿದೆ. ಬುಡಕಟ್ಟುಗಳ ಆರೋಗ್ಯ ಸಮಸ್ಯೆ, ನೆಲೆ, ಅನಕ್ಷರತೆ, ಬುಡಕಟ್ಟು ಪುನರ್ವಸತಿ ಇತ್ಯಾದಿಗಳ ಕುರಿತು ಹಲವಾರು ಅಧ್ಯಯನಗಳು ನಡೆದಿವೆ ಮತ್ತು ನಡೆಯುತ್ತಲೇ ಇವೆ. ಮಹಿಳೆಯರ ಸಬಲೀಕರಣವೆಂದರೆ ಮುಖ್ಯವಾಗಿ ಮಹಿಳೆಯರ ಆರೋಗ್ಯದ ಸ್ಥಿತಿ ಉತ್ತಮಗೊಳ್ಳಬೇಕು ಹಾಗೂ ಅದಕ್ಕೆ ಪೂರಕವಾದ ವಾತಾವರಣವನ್ನು ಸೃಷ್ಟಿಸಬೇಕು ಎಂಬ ಆಶಯದಿಂದ ಈ ಕೆಳಗಿನ ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಂಡಿದೆ. ಪೌಷ್ಠಿಕ ಆಹಾರವನ್ನು ಮಕ್ಕಳು, ಗರ್ಭಿಣಿ ಹಾಗೂ ಹಾಲುಣಿಸುವ ತಾಯಂದಿರು ಮತ್ತು ಹದಿಹರೆಯದ ಮಹಿಳೆಯರಿಗೆ ದೊರಕಿಸಿಕೊಡಬೇಕೆಂಬ ಆಶಯದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಆಹಾರವನ್ನು ಅಂಗನವಾಡಿ ಕೇಂದ್ರಗಳ ಮೂಲಕ ವಿತರಿಸಲಾಗುವುದು. ಅಂಗನವಾಡಿಯು ಯಾವ ವಾರ್ಡಿಗೆ ಸಂಬಂಧಿಸಿದೆಯೋ ಆ ವಾರ್ಡಿನ ೦-೬ ವಯೋಮಾನದ ಮಕ್ಕಳು, ಗರ್ಭಿಣಿ, ಹದಿವಯಸ್ಸಿನ ಹೆಣ್ಣುಮಕ್ಕಳ ಮಾಹಿತಿಯನ್ನು ಅಂಗನವಾಡಿ ಕಾರ್ಯಕರ್ತೆಯರು ದಾಖಲಿಸಿಕೊಂಡು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ತಲುಪಿಸಬೇಕು. ಅಂಗನವಾಡಿ ಕಾರ್ಯಕರ್ತೆಯರ ಮೇಲೆ ಸುಪರ್ವೈಜರ್ ಅವರ ಮೇಲುಸ್ತುವಾರಿ ಇರುವುದು. ಆದರೆ ಬಹುತೇಕವಾಗಿ


ಆಹಾರ ಸರಬರಾಜು ಮಾಡುವಲ್ಲಿ ವ್ಯತ್ಯಯಗಳಾಗುತ್ತವೆ ಎಂದು ಬುಡಕಟ್ಟು ಮಹಿಳೆಯರು ಹೇಳುವರು. ಡುಂಗ್ರಿಗರಾಸಿಯಾ ಹಾಗೂ ಹಕ್ಕಿಪಿಕ್ಕಿ ಗರ್ಭಿಣಿ ಮಹಿಳೆಯರು ಮುಂಜಾಗ್ರತಾ ಕ್ರಮವಾಗಿ ಎ.ಎನ್.ಎಂ ಕೇಂದ್ರಗಳಿಗೆ ಹೋಗಿ ಲಸಿಕೆ/ಚುಚ್ಚುಮದ್ದನ್ನು ಹಾಕಿಸಿಕೊಳ್ಳಲು ಹಿಂಜರಿಯುವರೆಂದು ಅಂಗನವಾಡಿ ಕಾರ್ಯಕರ್ತೆಯರು ದೂರುವರು. ಆದರೆ ಬೇಡ ಮತ್ತು ಮೇದ ಸಮುದಾಯದ ಗರ್ಭಿಣಿಯರು ಸರ್ಕಾರದಿಂದ ಕೊಡಮಾಡುವ ಲಸಿಕೆ/ಚುಚ್ಚುಮದ್ದನ್ನು ತಪ್ಪದೆ ಹಾಕಿಸಿಕೊಳ್ಳುವುರೆಂಬುದು ಕ್ಷೇತ್ರಕಾರ್ಯದ ಮೂಲಕ ತಿಳಿದುಬಂದಿತು. ಹಾಗೆಯೇ ಅಲೆಮಾರಿ ಬುಡಕಟ್ಟಿನ ಪಾರ್ಧಿ ಡುಂಗ್ರಿಗರಾಸಿಯಾ ಸಮುದಾಯದ ಮಹಿಳೆಯರು ಉಚಿತ ಆರೋಗ್ಯ ತಪಾಸಣೆಗೂ ಮುಂದಾಗುವುದಿಲ್ಲ. ದೇಹದಲ್ಲಿ ಅನಾರೋಗ್ಯ ಕಂಡರೆ ಬಹುತೇಕ ತಮಗೆ ತಿಳಿದ ವನಸ್ಪತಿ ಔಷಧಗಳ ಮೊರೆಹೋಗುವರು. ಆದರೆ ಸರ್ಕಾರದ ಯೋಜನೆಗಳನ್ನು ನೆಲೆಸಿಗ ಬುಡಕಟ್ಟುಗಳು ಶೇಕಡ ೯೦ರಷ್ಟು ಪಡೆಯುವರು. ಪೌಷ್ಠಿಕತೆ ಮತ್ತು ಆರೋಗ್ಯ ಶಿಕ್ಷಣದ ಕುರಿತಾಗಿ ಸಭೆಯನ್ನು ತಮ್ಮ ವ್ಯಾಪ್ತಿಯೊಳಗಿನ ಮಹಿಳೆಯರಿಗೆ ಕನಿಷ್ಠ ತಿಂಗಳಿಗೊಮ್ಮೆಯಾದರೂ ಅಂಗನವಾಡಿ ಕಾರ್ಯಕರ್ತೆಯರು ಸಭೆಯನ್ನು ನಡೆಸಬೇಕು. ಆದರೆ ಆ ಸಭೆಗಳು ಯಶಸ್ವಿಯಾಗಿ ನಡೆಯುವಲ್ಲಿ ಅಂಗನವಾಡಿ ಕಾರ್ಯಕರ್ತೆರಿಗಿರುವಷ್ಟೇ ಆಸಕ್ತಿಯು ಸಭೆಗೆ ಹಾಜರಾಗುವ ಮಹಿಳೆಯರಿಗೂ ಇರಬೇಕು.

**ಕೋಷ್ಟಕ ೬.೨೨ ಅಂಗನವಾಡಿ ಕೇಂದ್ರದ ಮಾಸಿಕ ಸಭೆಗೆ ಹಾಜರಾಗುವ ೧೬ ವರ್ಷ ಮೇಲ್ಪಟ್ಟ ಬುಡಕಟ್ಟು ಮಹಿಳೆಯರು**

| ಸಮುದಾಯ | ಒಟ್ಟು ಮಹಿಳೆಯರು | ಸಭೆಗೆ ಹಾಜರಾಗುವವರು | ಸಭೆಗೆ ಹಾಜರಾಗದವರು |
|---|---|---|---|
| ಬೇಡ | ೧೮೦ | ೭೫ | ೧೦೫ |
| ಮೇದ | ೧೭೯ | ೭೬ | ೧೦೩ |
| ಡುಂಗ್ರಿಗರಾಸಿಯಾ | ೧೮೮ | ೬೫ | ೧೨೩ |
| ಪಾರ್ಧಿ | ೧೭೨ | ೫೦ | ೧೨೨ |
| **ಒಟ್ಟು** | **೭೧೯** | **೨೬೬** | **೪೫೩** |

ಬೇಡರಲ್ಲಿ ೧೮೦ ಮಹಿಳೆಯರಿಗೆ ಅಂಗನವಾಡಿಯಲ್ಲಿ ಕರೆಯುವ ಮಾಸಿಕ ಸಭೆಗೆ ೭೫ ಮಹಿಳೆಯರು ಮಾತ್ರ ಹಾಜರಾಗುವರು. ಉಳಿದ ೧೦೫ ಮಹಿಳೆಯರು ಸಭೆಗೆ ಹಾಜರಾಗುವುದಿಲ್ಲ. ಅದೇ ರೀತಿಯಾಗಿ ಮೇದದೊಳಗೆ ೭೬ ಮಹಿಳೆಯರು ಮಾಸಿಕ ಸಭೆಗೆ ಹಾಜರಾದರೆ ಇನ್ನೂ ೧೦೩ ಮಹಿಳೆಯರು ಅಂಗನವಾಡಿ ಮಾಸಿಕ ಸಭೆಗೆ ಹಾಜರಾಗಿರುವುದಿಲ್ಲ. ಡುಂಗ್ರಿಗರಾಸಿಯಾ ಸಮುದಾಯದ ೧೮೮ ಮಹಿಳೆಯರಲ್ಲಿ ಕೇವಲ ೬೫ ಮಹಿಳೆಯರು ಮಾತ್ರ ಹಾಜರಾಗಿರುವರು. ಪಾರ್ಧಿಯ ೧೭೨ ಮಹಿಳೆಯರಲ್ಲಿ ೫೦ ಮಹಿಳೆಯರು ಸಭೆಗೆ ಹಾಜರಾಗಿರುವರು. ಅಂದರೆ ಒಟ್ಟು ನಾಲ್ಕು ಬುಡಕಟ್ಟುಗಳಿಂದ ಶೇಕಡ ೩೭ ಮಹಿಳೆಯರು ಸಭೆಗೆ ಹಾಜರಾಗಿದ್ದರೆ ಶೇಕಡ ೬೩ ಮಹಿಳೆಯರು ಮಾಸಿಕ ಸಭೆಯಿಂದ

ಲಂಬ ಚಿತ್ರ ೬.೨೨ ಅಂಗನವಾಡಿ ಕೇಂದ್ರದ ಮಾಸಿಕ ಸಭೆಗೆ ಹಾಜರಾಗುವ ೧೬ ವರ್ಷ ಮೇಲ್ಪಟ್ಟ ಬುಡಕಟ್ಟು ಮಹಿಳೆಯರು




ಹೊರಗುಳಿದಿರುವುದು ಕ್ಷೇತ್ರಕಾರ್ಯದ ಮೂಲಕ ತಿಳಿದುಬರುವುದು. ಮೇದ ಹಾಗೂ ಬೇಡ ಸಮುದಾಯದ ಬಹುಪಾಲು ಮಹಿಳೆಯರು ಕನಿಷ್ಠ ಶಿಕ್ಷಣ ಪಡೆದವರಾಗಿರುವರು. ಸ್ತ್ರೀಶಕ್ತಿ ಸಂಘಗಳ ಮೀಟಿಂಗ್ ಇತ್ಯಾದಿ ನೆವದಲ್ಲಾದರೂ ಅಂಗನವಾಡಿ ಸಂಪರ್ಕದಲ್ಲಿರುವರು. ಹೀಗಾಗಿ ಅವರಿಗೆ ಸಭೆಯ ಮಹತ್ವದ ಕುರಿತಾಗಿ ಪೂರ್ಣ ತಿಳುವಳಿಕೆ ಇರದಿದ್ದರೂ ಕೂಡ ಅಲ್ಪಮಟ್ಟಿಗಾದರೂ ತಿಳುವಳಿಕೆ ಹೊಂದಿರುವರು. ಆದರೆ ಅಲೆಮಾರಿ ಬುಡಕಟ್ಟುಗಳಾದ ಡುಂಗ್ರಿಗರಾಸಿಯಾ ಹಾಗೂ ಪಾರ್ಧಿ ಸಮುದಾಯದ ಮಹಿಳೆಯರು ತಮ್ಮ ಗುಂಪನ್ನು ಬಿಟ್ಟು ಹೊರಜಗತ್ತಿನಲ್ಲಿ ಕಾಣಿಸಿಕೊಳ್ಳಲು ಇಷ್ಟಪಡುವುದಿಲ್ಲ, ಅಷ್ಟೇ ಅಲ್ಲದೆ ಈ ಸಮುದಾಯಗಳು ಒಂದೇ ಕಡೆ ನೆಲೆ ನಿಲ್ಲುವವಲ್ಲ. ಹೀಗಾಗಿ ಅಂಗನವಾಡಿಗಳಲ್ಲಿ ನಡೆಯುವ ಮಾಸಿಕ ಸಭೆಗಳಿಂದ ಈ ಎರಡು ಬುಡಕಟ್ಟುಗಳ ಬಹುತೇಕ ಹೆಚ್ಚಿನ ಪ್ರಮಾಣದ ಮಹಿಳೆಯರು ವಂಚಿತರಾಗಿರುವರು. ಸಾಮಾನ್ಯವಾಗಿ ಅಂಗನವಾಡಿ ಕೇಂದ್ರಗಳ ಮಾಸಿಕ ಸಭೆಯಲ್ಲಿ ಹದಿಹರೆಯದ ಮಹಿಳೆಯರಿಗೆ ಮಹಿಳೆಯರ ಆರೋಗ್ಯ, ನೈರ್ಮಲ್ಯದ ಕುರಿತಾಗಿ ತಿಳುವಳಿಕೆ ನೀಡುವುದನ್ನು ಮಾಡುವುದಲ್ಲದೆ ಆ ಮಹಿಳೆಯರಿಗೆ ಅವಶ್ಯವಾದ ನ್ಯಾಪ್‌ಕಿನ್, ೧೮ ವರ್ಷದೊಳಗಿನ ಹರೆಯದ ಹುಡುಗಿಯರಿಗೆ ಆಹಾರ ನೀಡುವುದು ಇತ್ಯಾದಿ ಕರ್ತವ್ಯಗಳನ್ನೂ ಅಂಗನವಾಡಿ ಕಾರ್ಯಕರ್ತರು ಮಾಡಬೇಕು. ಉದಾಹರಣೆಗೆ ನೈಸರ್ಗಿಕ ಕ್ರಿಯೆಯಾದ ಮುಟ್ಟಿಗೆ ಸಂಬಂಧಿಸಿದಂತೆ ಮಹಿಳೆಯರಿಗೆ ತಿಳುವಳಿಕೆ ನೀಡುವುದರೊಂದಿಗೆ ನ್ಯಾಪ್‌ಕಿನ್‌ಗಳನ್ನು ಉಚಿತವಾಗಿ ನೀಡುವ ಕಾರ್ಯವನ್ನೂ ಮಾಡಬೇಕಾಗುವುದು. ಆದರೆ ಎಷ್ಟೋ ಅಂಗನವಾಡಿಗಳಲ್ಲಿ ಸರ್ಕಾರವು ಉಚಿತವಾಗಿ ನೀಡಿದ ನ್ಯಾಪ್‌ಕಿನ್‌ಗಳನ್ನು ಮಹಿಳೆಯರಿಗೆ ಹಂಚುವುದಿಲ್ಲವೆಂಬ ದೂರು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕೇಳಿಬಂದಿತು. ಇನ್ನೂ ಕೆಲವು ಕಡೆ ನ್ಯಾಪ್‌ಕಿನ್‌ಗಳನ್ನು ಸಂಬಂಧಿಸಿದ ಇಲಾಖೆಯ ಸಿಬ್ಬಂದಿ ಹಣಕ್ಕೆ ಮಾರಿಕೊಳ್ಳುತ್ತದೆ ಎಂಬ ದೂರುಗಳು ಕೇಳಿಬಂದವು. ಇಂದಿರಾಗಾಂಧಿ ಮಾತೃತ್ವ ಸಹಯೋಗ ಯೋಜನೆ ಎಂಬ ಯೋಜನೆ ಇದೆ. ಇದು ಕೇಂದ್ರ ಸರ್ಕಾರವು ಮಹಿಳೆಯರನ್ನು

ಕೇಂದ್ರೀಕರಿಸಿಕೊಂಡು ಗರ್ಭಿಣಿ, ಬಾಣಂತಿ ಹಾಗೂ ಹುಟ್ಟಿದ ಮಗುವಿನ ಆರೋಗ್ಯ, ನೈರ್ಮಲ್ಯ ಹಾಗೂ ಪೌಷ್ಠಿಕತೆಯ ಕುರಿತು ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತಿದೆ. ಮುಖ್ಯವಾಗಿ ಸುರಕ್ಷಿತ ಹೆರಿಗೆ, ಆರೈಕೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ೧೯ ವಯೋಮಾನ ದಾಟಿದ ಮಹಿಳೆಯರು ಎರಡು ಹೆರಿಗೆಗಳಿಗೆ ಮಾತ್ರ ಈ ಕಾರ್ಯಕ್ರಮದ ಪ್ರಯೋಜನವನ್ನು ಪಡೆದುಕೊಳ್ಳಬಹುದು. ಗರ್ಭವತಿಯಾದ ಮಹಿಳೆಯು ಕೂಲಿ ಕೆಲಸಕ್ಕೆ ಹೋಗುವುದು ಕಷ್ಟಸಾಧ್ಯವಾದುದರಿಂದ ಆರು ತಿಂಗಳು ಪೂರ್ಣವಾದ ಗರ್ಭಿಣಿರಿಗೆ ಹೆರಿಗೆಯಾಗಿ ಆರು ತಿಂಗಳು ಪೂರೈಸುವ ಅವಧಿಯಲ್ಲಿ ಮೂರು ಕಂತುಗಳಲ್ಲಿ ರೂ ೪೦೦೦/-ಸಹಾಯ ಧನ ನೀಡಲಾಗುವುದು. ಮಹಿಳೆ ಗರ್ಭಿಣಿಯಾದ ೪ ತಿಂಗಳೊಳಗೆ ಅಂಗನವಾಡಿ ಕೇಂದ್ರದಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಪ್ರಸವಪೂರ್ವ ಆರೈಕೆಯನ್ನು ಸ್ಥಳೀಯ ಅಂಗನವಾಡಿಯ ಮೂಲಕ ಪಡೆಯುವುದು, ಪ್ರತಿ ತಿಂಗಳಲ್ಲಿ ಒಂದು ದಿನ ಗ್ರಾಮ ಆರೋಗ್ಯ ಮತ್ತು ಪೌಷ್ಠಿಕ ದಿನವನ್ನು ಆಚರಿಸುವ ಸಂದರ್ಭದಲ್ಲಿ ಹಾಜರಿರಬೇಕು. ಹೆರಿಗೆಯನ್ನು ಕಡ್ಡಾಯವಾಗಿ ಆಸ್ಪತ್ರೆಯಲ್ಲಿಯೇ ನುರಿತ ವೈದ್ಯರಿಂದ ಮಾಡಿಸಿಕೊಳ್ಳಬೇಕು. ಮನೆಯಲ್ಲಿ ಹೆರಿಗೆ ಮಾಡಿಸಿಕೊಳ್ಳುವಂತಿಲ್ಲ. ಹೀಗಿದ್ದೂ ಬಹುತೇಕ ಬುಡಕಟ್ಟು ಮಹಿಳೆಯರು ಆಸ್ಪತ್ರೆಗೆ ಹೋಗಲು ಹಿಂಜರಿಯುವರು. ಅದರಲ್ಲೂ ಅಲೆಮಾರಿ ಬುಡಕಟ್ಟಿಗೆ ಸೇರಿದ ಡುಂಗ್ರಿಗರಾಸಿಯಾ, ಪಾರ್ಧಿ ಸಮುದಾಯದ ಮಹಿಳೆಯರು ಆಸ್ಪತ್ರೆಗೆ ಹೋಗುವುದರಿಂದ ತಮ್ಮ ದೈವಗಳಿಗೆ ಮುನಿಸಾಗುವುದು ಎಂದೇ ನಂಬಿರುವರು. ಹೀಗಾಗಿ ಇಂತಹ ಕಾರ್ಯಕ್ರಮಗಳಿಂದ ಅಲೆಮಾರಿ ಬುಡಕಟ್ಟಿಗೆ ಸೇರಿದ ಮಹಿಳೆಯರು ದೂರವಾಗುವ ಅಪಾಯಗಳೇ ಹೆಚ್ಚು.

**ಜನನಿ ಸುರಕ್ಷಾ ಯೋಜನೆ**

ಈ ಯೋಜನೆ ಕೇಂದ್ರ ಸರ್ಕಾರ ಅನುಷ್ಠಾನಗೊಳಿಸಿದ್ದು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಮೂಲದ ಕಾರ್ಯಕ್ರಮವಾಗಿದೆ. ಗ್ರಾಮೀಣ ಭಾಗದ ಮಹಿಳೆಯರು ಆಧುನಿಕ ಆರೋಗ್ಯ ಸೇವೆಗಳಿಂದ ವಂಚಿತರಾಗುವರೆಂಬುದರಿಂದ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಮುಖ್ಯವಾಗಿ ಆಶಾ ಕಾರ್ಯಕರ್ತೆಯರ ಪಾತ್ರ ಪ್ರಮುಖವಾಗಿದೆ. ಗರ್ಭಿಣಿ ಮಹಿಳೆಯರನ್ನು ಗುರುತಿಸಿ ನೋಂದಾವಣಿ ಮಾಡಿಸಲು ಆಶಾ ಕಾರ್ಯಕರ್ತೆಯರನ್ನು ನೇಮಿಸಲಾಗಿರುವುದು. ಗರ್ಭಿಣಿ ಮಹಿಳೆಯರಿಗೆ ಸಂಪೂರ್ಣ ಸುರಕ್ಷಾ ಆರೋಗ್ಯ ಸೇವೆಗಳು ಸಿಗುವಂತೆ ಮಾಡುವುದಲ್ಲದೆ ಅವರ ಹೆರಿಗೆ, ಮಗುವಿನ ಸುರಕ್ಷತೆ, ಆಸ್ಪತ್ರೆಯಲ್ಲಿಯೇ ಹೆರಿಗೆಯಾಗುವಂತೆ ಜಾಗ್ರತೆವಹಿಸುವುದು ಇತ್ಯಾದಿ ಜವಾಬ್ದಾರಿಗಳು ಆಶಾ ಕಾರ್ಯಕರ್ತೆಯರದ್ದಾಗಿರುತ್ತದೆ. ಆಶಾ ಕಾರ್ಯಕರ್ತೆಯರ ನಿರ್ವಹಣೆಯನ್ನು ಗಮನಿಸಿ ದೇಶದಲ್ಲಿರುವ ಕೆಲವು ರಾಜ್ಯಗಳನ್ನು ಉತ್ತಮ ಆರೋಗ್ಯ ನಿರ್ವಹಣೆಯ ರಾಜ್ಯಗಳು, ಸಾಮಾನ್ಯ ನಿರ್ವಹಣೆಯ ರಾಜ್ಯಗಳು, ಸಮ್ಮಿಶ್ರ ಸೇವೆಯ ರಾಜ್ಯಗಳೆಂದು ಮೂರು ವಿಭಾಗವನ್ನು ಕೇಂದ್ರ ವಿಂಗಡಿಸಿದೆ. ಸಾಮಾನ್ಯ ನಿರ್ವಹಣೆಯ ರಾಜ್ಯಗಳಿಗೆ ನಿರ್ವಹಣಾ ವೆಚ್ಚವೆಂದು ಒಂದು ಹೆರಿಗೆಗೆ ಗ್ರಾಮೀಣ ಪ್ರದೇಶದಲ್ಲಿ ರೂ ೧,೪೦೦ ಹಾಗೂ ನಗರ ಪ್ರದೇಶಗಳಿಗೆ ರೂ ೧೦೦೦/-


ಮೊತ್ತವನ್ನು ನಿರ್ವಹಣಾ ವೆಚ್ಚವಾಗಿ ಕೇಂದ್ರ ಸರ್ಕಾರವು ನೀಡುತ್ತಿದೆ. ಉತ್ತಮ ನಿರ್ವಹಣೆಯ ರಾಜ್ಯಗಳಿಗೆ ನಿರ್ವಹಣಾ ವೆಚ್ಚವೆಂದು ಒಂದು ಹೆರಿಗೆಗೆ ಗ್ರಾಮೀಣ ಪ್ರದೇಶದಲ್ಲಿ ರೂ ೭೦೦ ಹಾಗೂ ನಗರ ಪ್ರದೇಶಗಳಿಗೆ ರೂ ೬೦೦/–ಮೊತ್ತವನ್ನು ನಿರ್ವಹಣಾ ವೆಚ್ಚವಾಗಿ ಕೇಂದ್ರ ಸರ್ಕಾರವು ನೀಡುತ್ತಿದೆ. ಸಮ್ಮಿಶ್ರ ನಿರ್ವಹಣೆಯ ರಾಜ್ಯಗಳಿಗೆ ನಿರ್ವಹಣಾ ವೆಚ್ಚವೆಂದು ಒಂದು ಹೆರಿಗೆಗೆ ಗ್ರಾಮೀಣ ಪ್ರದೇಶದಲ್ಲಿ ರೂ ೧,೪೦೦ ಹಾಗೂ ನಗರ ಪ್ರದೇಶಗಳಿಗೆ ರೂ ೧೦೦೦/–ಮೊತ್ತವನ್ನು ನಿರ್ವಹಣಾ ವೆಚ್ಚವಾಗಿ ಕೇಂದ್ರ ಸರ್ಕಾರವು ನೀಡುತ್ತಿದೆ. ಈ ಯೋಜನೆ ಬಂದ ತರುವಾಯ ಬಹುತೇಕ ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ಸೇವೆಯ ಪ್ರಮಾಣ ಅಧಿಕವಾಗಿದೆ. ಮೇದ ಹಾಗೂ ಬೇಡ ಸಮುದಾಯದ ಕುಟುಂಬಗಳು ನೆಲೆನಿಂತಿರುವುದರಿಂದ ಅವರಿಗೆ ಈ ಕಾರ್ಯಕ್ರಮವು ಪೂರ್ಣವಾಗಿ ದೊರೆಯುತ್ತಿದೆ. ಆದರೆ ಡುಂಗ್ರಿಗರಾಸಿಯಾ ಮತ್ತು ಪಾರ್ಧಿ ಸಮುದಾಯಗಳು ಅಲೆಮಾರಿತನದಿಂದ ಪೂರ್ಣವಾಗಿ ಹೊರಬಾರದೇ ಇರುವುದರಿಂದ ಈ ಎರಡು ಸಮುದಾಯಗಳು ಈ ಕಾರ್ಯಕ್ರಮದ ಪ್ರಯೋಜನವನ್ನು ಕೇವಲ ಶೇಕಡ ೫೦ರಷ್ಟು ಪಡೆಯುತ್ತಿವೆಯೆಂದು ಕ್ಷೇತ್ರಕಾರ್ಯದ ಮೂಲಕ ತಿಳಿದುಬಂದಿತು.

**ಕೋಷ್ಟಕ ೬.೨೩ ಎಚ್ ಐ ವಿ ಹಾಗೂ ಇತರೆ ಮಾರಕ ರೋಗಗಳಿಂದ ಬಳಲುತ್ತಿರುವ ಬುಡಕಟ್ಟು ಮಹಿಳೆಯರು**

| ಕ್ರಸಂ | ಸಮುದಾಯ | ಒಟ್ಟು ಮಹಿಳೆಯರು | ರಕ್ತಹೀನತೆ | ಯಕೃತ್ ಖಾಯಿಲೆಗಳು ಸಂಬಂಧಿ | ಎಚ್ ಐ ವಿ | ಮೂತ್ರಪಿಂಡ ಖಾಯಿಲೆ | ಇತರೆ |
|---|---|---|---|---|---|---|---|
| ೧ | ಬೇಡ | ೨೧೨ | ೬೦ | ೦೧ | ೦೪ | – | ೧೦ |
| ೨ | ಮೇದ | ೨೦೫ | ೬೫ | ೦೧ | – | – | ೦೮ |
| ೩ | ಡುಂಗ್ರಿಗರಾಸಿಯ | ೨೦೦ | ೭೦ | ೦೨ | – | – | ೧೬ |
| ೪ | ಪಾರ್ಧಿ | ೨೧೦ | ೭೮ | ೦೩ | – | ೦೨ | ೨೦ |
| | | ೮೨೭ | ೨೭೩ | ೦೭ | ೦೪ | ೦೨ | ೫೪ |

ಮಹಿಳೆಯರನ್ನು ಮುಖ್ಯವಾಗಿ ಕಾಡುವುದು ರಕ್ತಹೀನತೆ, ಬಿಳುಪು ಹೋಗುವುದು(White Discharge) ಇತ್ಯಾದಿ ಸಮಸ್ಯೆಗಳು. ಪೌಷ್ಠಿಕ ಆಹಾರದ ಕೊರತೆ, ಮೇಲಿಂದ ಮೇಲೆ ಗರ್ಭ ಧರಿಸುವುದು, ಅಪ್ರಾಪ್ತ ವಯಸ್ಸಿನಲ್ಲಿಯೇ ವಿವಾಹವಾಗುವುದು ಇತ್ಯಾದಿ ಕಾರಣಗಳಿಗಾಗಿ ರಕ್ತಹೀನತೆ ಬರುವುದೆಂದು ವೈದ್ಯರು ತಿಳಿಸುವರು. ಬಹುತೇಕ ನಾಲ್ಕು ಬುಡಕಟ್ಟುಗಳಲ್ಲಿ ಅಪ್ರಾಪ್ತ ವಯಸ್ಸಿನಲ್ಲಿಯೇ ಮಹಿಳೆಯರಿಗೆ ವಿವಾಹವಾಗುವುದು. ಅಪ್ರಾಪ್ತ ವಯಸ್ಸಿನ ಹುಡುಗಿಯರಿಗೆ ಮದುವೆ ಮಾಡುವುದು

ಲಂಬ ಚಿತ್ರ ೬.೨೫. ಎಚ್ ಐ ವಿ ಹಾಗೂ ಇತರೆ ಮಾರಕ ರೋಗಗಳಿಂದ ಬಳಲುತ್ತಿರುವ ಬುಡಕಟ್ಟು ಮಹಿಳೆಯರು




ಕಾನೂನುಬಾಹಿರವೆಂದು ಸರ್ಕಾರದ ಕಾಯ್ದೆಗಳು ಹೇಳುವವಾದರೂ ಅದನ್ನು ಬುಡಕಟ್ಟುಗಳಲ್ಲಿ ಅಪ್ರಾಪ್ತ ವಯಸ್ಸಿನ ಗಂಡು ಹೆಣ್ಣುಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಮದುವೆಗಳು ನಡೆಯುತ್ತವೆ. ಇನ್ನು ಸುಚಿತ್ವದ ಕೊರತೆಯಿಂದ ಬಿಳುಪಿನಂತಹ ಸಮಸ್ಯೆಗಳು ಕಾಡುತ್ತವೆ. ಅನಕ್ಷರಸ್ಥ ಮಹಿಳೆಯರು ಸಾಮಾನ್ಯವಾಗಿ ದಿನಾಲೂ ಸ್ನಾನ ಮಾಡುವುದಿಲ್ಲ. ತಮ್ಮ ದೈವದ ವಾರಗಳಲ್ಲಷ್ಟೇ ಮೈತೊಳೆಯುವವರ ಪ್ರಮಾಣವೇ ಹೆಚ್ಚು. ಅಲೆಮಾರಿ ಬುಡಕಟ್ಟು ಸಮುದಾಯಗಳು ವೈಯಕ್ತಿಕ ಶುಚಿತ್ವದ ಕಡೆಗೆ ಹೆಚ್ಚು ಗಮನಹರಿಸಲಾರವು. ಹೀಗಾಗಿ ಈ ಮಹಿಳೆಯರಲ್ಲಿ ಬಿಳುಪಿನ ಸಮಸ್ಯೆ ಹೆಚ್ಚಾಗಿ ಕಾಡುವುದು. ಬೇಡ ಸಮುದಾಯದಲ್ಲಿ ೨೧೨ರಲ್ಲಿ ೬೦ರಷ್ಟು ಮಹಿಳೆಯರು ರಕ್ತಹೀನತೆ ಕೊರತೆಯಿಂದ ಬಳಲುತ್ತಿರುವರು. ಹತ್ತು ಮಹಿಳೆಯರು ತಮಗೆ ಬಿಳುಪಿನ ಸಮಸ್ಯೆ ಇದೆಯೆಂದು ತಿಳಿಸಿದರು. ಒಬ್ಬ ಮಹಿಳೆಗೆ ಯಕೃತ್ ಸಂಬಂಧಿ ಖಾಯಿಲೆ ಇದೆ. ಈ ಸಮುದಾಯದಲ್ಲಿ ದೇವದಾಸಿ ಪದ್ಧತಿಗೆ ಒಳಗಾಗುವ ಮಹಿಳೆಯರ ಪ್ರಮಾಣ ಕಡಿಮೆಯಾಗುತ್ತಿದೆಯಾದರೂ ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ದೇವದಾಸಿ ಪದ್ಧತಿ ಇನ್ನೂ ಜೀವಂತವಾಗಿದೆ. ದೇವದಾಸಿ ಪದ್ಧತಿಗೆ ಒಳಗಾದವರೆಲ್ಲಾ ವೇಶ್ಯಾವಾಟಿಕೆಗೆ ಇಳಿಯುವುದಿಲ್ಲವಾದರೂ ಕೆಲವು ಮಹಿಳೆಯರು ಬಡತನದ ಕಾರಣಕ್ಕಾಗಿ ತಮಗೆ ಇಷ್ಟವಿರದಿದ್ದರೂ ವೇಶ್ಯಾವಾಟಿಕೆಯಲ್ಲಿ ತೊಡಗಬೇಕಾದ ಅನಿವಾರ್ಯತೆಯ ಕುರಿತು ತಿಳಿಸಿದರು. ಇಂತಹ ಮಹಿಳೆಯರಲ್ಲಿ ೪ ಮಹಿಳೆಯರು ಅಸುರಕ್ಷಿತ ಲೈಂಗಿಕತೆಯ ಕಾರಣಕ್ಕಾಗಿ ಎಚ್ ಐ ವಿ ಪೀಡಿತರಾಗಿ ಬಳಲುತ್ತಿರುವರು. ಮೇದ ಸಮುದಾಯದ ೨೦೫ ಮಹಿಳೆಯರಲ್ಲಿ ೬೫ ಮಹಿಳೆಯರು ರಕ್ತಹೀನತೆ ಅನುಭವಿಸುತ್ತಿರುವರು. ಎಂಟು ಮಹಿಳೆಯರು ಬಿಳುಪಿನ ಸಮಸ್ಯೆಯಿಂದಲೂ, ಒಬ್ಬರು ಯಕೃತ್ ಸಂಬಂಧಿ ಖಾಯಿಲೆಯಿಂದ ಬಳಲುತ್ತಿರುವರು. ಡುಂಗ್ರಿಗರಾಸಿಯಾದೊಳಗಿನ ೨೦೦ ಮಹಿಳೆಯರಲ್ಲಿ ೭೦ ಮಹಿಳೆಯರು ರಕ್ತಹೀನತೆಯನ್ನು ಅನುಭವಿಸುತ್ತಿರುವರು. ೧೬ ಮಹಿಳೆಯರು ಬಿಳುಪಿನ ಸಮಸ್ಯೆಯಿಂದಲೂ, ಇಬ್ಬರು ಯಕೃತ್ ಸಂಬಂಧಿ ಖಾಯಿಲೆಯಿಂದಲೂ

ಬಳಲುತ್ತಿರುವರು. ಪಾರ್ಧಿ ಸಮುದಾಯದೊಳಗಿನ ೨೧೦ ಮಹಿಳೆಯರಲ್ಲಿ ೭೮ ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿರುವರು. ಮೂವರು ಯಕೃತ್ ಸಂಬಂಧಿ ಖಾಯಿಲೆಯಿಂದಲೂ, ಇಬ್ಬರು ಮೂತ್ರಪಿಂಡದ ಖಾಯಿಲೆಯಿಂದ ಹಾಗೂ ೨೦ ಮಹಿಳೆಯರು ಬಿಳುಪಿನ ಸಮಸ್ಯೆಯಿಂದ ಬಳಲುತ್ತಿರುವರು. ಶೇಕಡವಾರುಗಳಲ್ಲಿ ನೋಡುವುದಾದರೆ ಬೇಡ ಸಮುದಾಯದಲ್ಲಿ ರಕ್ತಹೀನತೆ ಕೊರತೆ ಇರುವವರು ಶೇಕಡ ೨೯ ಮಹಿಳೆಯರು, ಶೇಕಡ ೦.೪೭ ಮಹಿಳೆಯರು ಯಕೃತ್ ಸಂಬಂಧಿ ಖಾಯಿಲೆಯಿಂದ, ಶೇಕಡ ೧.೮೯ ಮಹಿಳೆಯರು ಎಚ್ಐವಿ ತೊಂದರೆಯಿಂದಲೂ, ಶೇಕಡ ೪.೭೧ ಮಹಿಳೆಯರು ಬಿಳುಪಿನ ಸಮಸ್ಯೆಯಿಂದ ಬಳಲುತ್ತಿರುವರು. ಮೇದ ಸಮುದಾಯದಲ್ಲಿ ರಕ್ತಹೀನತೆ ಕೊರತೆ ಇರುವವರು ಶೇಕಡ ೩೧.೭೦ ಮಹಿಳೆಯರು, ಶೇಕಡ ೦.೪೮ ಮಹಿಳೆಯರು ಯಕೃತ್ ಸಂಬಂಧಿ ಖಾಯಿಲೆಯಿಂದ, ಶೇಕಡ ೩.೯೦ ಮಹಿಳೆಯರು ಬಿಳುಪಿನ ಸಮಸ್ಯೆಯಿಂದ ಬಳಲುತ್ತಿರುವರು. ಡುಂಗ್ರಿ ಗರಾಸಿಯಾ ಸಮುದಾಯದಲ್ಲಿ ರಕ್ತಹೀನತೆ ಕೊರತೆ ಇರುವವರು ಶೇಕಡ ೩೯ ಮಹಿಳೆಯರು, ಶೇಕಡ ೦.೫೦ ಮಹಿಳೆಯರು ಯಕೃತ್ ಸಂಬಂಧಿ ಖಾಯಿಲೆಯಿಂದ, ಶೇಕಡ ೮ ಮಹಿಳೆಯರು ಬಿಳುಪಿನ ಸಮಸ್ಯೆಯಿಂದ ಬಳಲುತ್ತಿರುವರು ಪಾರ್ಧಿ ಸಮುದಾಯದಲ್ಲಿ ರಕ್ತಹೀನತೆ ಕೊರತೆ ಇರುವವರು ಶೇಕಡ ೩೭೧೫ ಮಹಿಳೆಯರು, ಶೇಕಡ ೧.೪೨ ಮಹಿಳೆಯರು ಯಕೃತ್ ಸಂಬಂಧಿ ಖಾಯಿಲೆಯಿಂದ, ಶೇಕಡ ೦.೯೫ ಮಹಿಳೆಯರು ಮೂತ್ರಕೋಶದ ತೊಂದರೆಯಿಂದ, ಶೇಕಡ ೯.೫೨ ಮಹಿಳೆಯರು ಬಿಳುಪಿನ ಸಮಸ್ಯೆಯಿಂದ ಬಳಲುತ್ತಿರುವರು.

ಒಟ್ಟಾರೆಯಾಗಿ ನೋಡುವುದಾದರೆ ರಕ್ತಹೀನತೆ ಕೊರತೆ ಇರುವವರು ಶೇಕಡ ೩೩.೦೨ ಮಹಿಳೆಯರು, ಶೇಕಡ ೦.೮೪ ಮಹಿಳೆಯರು ಯಕೃತ್ ಸಂಬಂಧಿ ಖಾಯಿಲೆಯಿಂದ, ಶೇಕಡ ೦.೪೮ ಮಹಿಳೆಯರು ಎಚ್ಐವಿ ತೊಂದರೆಯಿಂದಲೂ, ಶೇಕಡ ೦.೨೪ ಮೂತ್ರಕೋಶದ ತೊಂದೆಯಿಂದ, ಶೇಕಡ ೬.೫೨ ಮಹಿಳೆಯರು ಬಿಳುಪಿನ ಸಮಸ್ಯೆಯಿಂದ ಬಳಲುತ್ತಿರುವರು. ಎಲ್ಲಾ ಆರೋಗ್ಯ ತೊಂದರೆಯಿಂದ ಬಳಲುತ್ತಿರುವ ಮಹಿಳೆಯರು ೩೪೨ ಜನರಿರುವರು. ಅಂದರೆ ಒಟ್ಟಾರೆಯಾಗಿ ವಿವಿಧ ಕಾರಣಗಳಿಗಾಗಿ ಅನಾರೋಗ್ಯ ಅನುಭವಿಸುವ ಮಹಿಳೆಯರು ಶೇಕಡ ೪೧.೩೫ರಷ್ಟಿರುವರು. ಮೇಲಿನ ಅಂಕಿಅಂಶಗಳನ್ನು ಗಮನಿಸಿದಾಗ ಇತರೆ ಸಮುದಾಯಗಳು ಪಡೆಯುವಷ್ಟು ಪ್ರಮಾಣದಲ್ಲಿ ಆರೋಗ್ಯ ಸೇವೆಗಳನ್ನು ಬುಡಕಟ್ಟು ಮಹಿಳೆಯರು ಪಡೆಯಲು ಸಾಧ್ಯವಾಗುತ್ತಿಲ್ಲ ಎಂಬುದು ಮೇಲ್ನೋಟಕ್ಕೆ ಗೋಚರಿಸುತ್ತಿದೆ. ಆರೋಗ್ಯ ಸೇವೆಯನ್ನು ಪೂರ್ಣ ಪ್ರಮಾಣದಲ್ಲಿ ಪಡೆಯದೆ ಮಹಿಳೆಯರ ಆರೋಗ್ಯ ಸಬಲೀಕರಣ ಅಸಾಧ್ಯವೆಂಬುದು ನಿಜ. ಆಧುನಿಕ ಆರೋಗ್ಯ ಸೇವೆಯನ್ನು ಬುಡಕಟ್ಟು ಮಹಿಳೆಯರು ಹಿಂಜರಿಯುವಿಕೆಯೇ ಅವರ ಆರೋಗ್ಯ ಸಬಲೀಕರಣ ಯಶಸ್ವಿಯಾಗಲು ಅಡ್ಡಿಯಾಗಿರುವುದು. ಮೊದಲನೇದಾಗಿ ಆರೋಗ್ಯ ಕಾರ್ಯಗಳ ಫಲಾನುಭವಿಗಳಾಗಲು ಹಿಂಜರಿಯುವ ಮಹಿಳೆಯರು ಅನಕ್ಷರಸ್ಥರಾಗಿರುವರು. ಆಧುನಿಕ ಆರೋಗ್ಯ ಸೇವೆಗಳಲ್ಲಿ ಶಸ್ತ್ರಚಿಕಿತ್ಸೆ, ಆಲೋಪತಿ ಔಷಧಗಳು, ಚುಚ್ಚುಮದ್ದುಗಳಿಗೆ ಬುಡಕಟ್ಟು ಮಹಿಳೆಯರಲ್ಲಿ ಬಹುತೇಕರು ಹೆದರುವರು. ಡುಂಗ್ರಿಗರಾಸಿಯಾ

ಹಾಗೂ ಪಾರ್ಧಿ ಸಮುದಾಯದವ ಮಹಿಳೆಯರಲ್ಲಿ ಇಂದಿಗೂ ಆಲೋಪತಿ ಔಷಧವನ್ನು ಬಳಸದಿರುವವರು, ಚುಚ್ಚುಮದ್ದನ್ನು ಪಡೆಯದಿರುವವರನ್ನು ಕಾಣುತ್ತೇವೆ. ಪ್ರಾಯಶಃ ಆಧುನಿಕವಾದ ಆಲೋಪತಿಯ ಆರೋಗ್ಯ ಸೇವೆಗಳಿಗಿಂತ ಭಿನ್ನವಾದ ತಮ್ಮ ಸಮುದಾಯದೊಳಗೇ ಇರುವ ನಾಟಿಪದ್ಧತಿಯ ಔಷಧಗಳಿಗೆ ಅವರು ಹೊಂದಿಕೊಂಡಿರುವರು. ಹಾಗೆಯೇ ಅಲೆಮಾರಿ ಬುಡಕಟ್ಟುಗಳು ಇಂದಿಗೂ ತಮ್ಮ ಸಮುದಾಯದ ಜೀವನ ವಿಧಿವಿಧಾನಗಳಿಂದ ದೂರವಾಗಲು ಇಷ್ಟಪಡಲಾರರು. ಹೀಗಾಗಿ ಹೆರಿಗೆ ಇತ್ಯಾದಿ ಆರೋಗ್ಯ ಸೇವೆಗಳಲ್ಲಿ ತಮ್ಮ ದೇಶೀ ಪದ್ಧತಿಯನ್ನು ಅನುಸರಿಸಲು ಮುಂದಾಗುವರೇ ಹೊರತು ಆಧುನಿಕ ಆರೋಗ್ಯ ಸೇವೆಯ ಕಡೆ ಹೆಚ್ಚು ಒಲವು ತೋರಲಾರರು. ಹೀಗಾಗಿ ಬುಡಕಟ್ಟು ಮಹಿಳೆಯರು ಆರೋಗ್ಯ ಸಬಲೀಕರಣಗೊಳ್ಳಲು ಇನ್ನೂ ಸಾಧ್ಯವಾಗದಿರುವುದು ಗೋಚರಿಸುತ್ತಿದೆ.

### ೬.೪ ಬುಡಕಟ್ಟು ಮಹಿಳೆಯರ ಆರ್ಥಿಕ ಸಬಲೀಕರಣ

ಕರ್ನಾಟಕದ ಬುಡಕಟ್ಟುಗಳಲ್ಲಿ ಪ್ರಧಾನವಾಗಿ ಎರಡು ವಿಧದ ಬುಡಕಟ್ಟು ಸಮುದಾಯಗಳನ್ನು ಕಾಣುತ್ತೇವೆ. ಅವುಗಳನ್ನು ಮುಖ್ಯವಾಗಿ ಅರಣ್ಯವಾಸಿ ಬುಡಕಟ್ಟುಗಳು ಮತ್ತು ಬಯಲುವಾಸಿ ಬುಡಕಟ್ಟುಗಳೆಂದು ವಿಭಾಗಿಸಬಹುದು. ಮುಖ್ಯವಾಗಿ ಪಶ್ಚಿಮ ಘಟ್ಟಗಳ ಕಾಡು, ಕೊಡಗು, ಬಿಳಿಗಿರಿ ರಂಗನಬೆಟ್ಟ, ಮಲೆ ಮಹಾದೇಶ್ವರ ಬೆಟ್ಟ ಮುಂತಾದ ಕಡೆ ನೆಲೆಗೊಂಡಿರುವ ಬುಡಕಟ್ಟುಗಳು ಜೇನು ಸಂಗ್ರಹಣೆ, ಮರದ ಮೇಲಿನ ಪಾಚಿ ಸಂಗ್ರಹಣೆ, ಕೃಷಿ, ವನಸ್ಪತಿಗಳ ಸಂಗ್ರಹಣೆಯನ್ನೇ ಮುಖ್ಯ ಕಸುಬಾಗಿಸಿಕೊಂಡು ಅರಣ್ಯ ಇಲಾಖೆಯ ಕಿರುಕುಳ ಸಹಿಸಿಕೊಂಡು ಅದು ಹೇಗೋ ಕಾಡಿನಲ್ಲಿಯೇ ವಾಸಿಸುತ್ತಿವೆ. ಬಯಲುವಾಸಿ ಬುಡಕಟ್ಟುಗಳು ಜನಸಮುದಾಯಗಳ ಮಧ್ಯದಲ್ಲಿದ್ದೂ ತಮ್ಮ ಅನನ್ಯತೆಯನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿವೆ. ಬಹುತೇಕ ಬಯಲುವಾಸಿಯಾಗಿದ್ದರೂ ತಮ್ಮ ಮತ್ತು ಕಾಡಿನ ಸಂಬಂಧಗಳನ್ನು ಪೂರ್ಣವಾಗಿ ಕಳಚಿಕೊಂಡಿಲ್ಲ. ಇದಕ್ಕೆ ಉತ್ತಮ ಉದಾಹರಣೆ ಮೇದಾ ಸಮುದಾಯವನ್ನೇ ನೋಡಬಹುದು. ಮೇದರು ಇಂದು ಹೋಬಳಿ ಪ್ರದೇಶ ಅಥವಾ ಪಟ್ಟಣಗಳನ್ನು ನೆಲೆಯಾಗಿಸಿಕೊಂಡಿರುವರಾದರೂ ಬಿದರಿನ ಪರಿಕರಗಳ ತಯಾರಿಕೆಯ ತಮ್ಮ ಮೂಲ ವೃತ್ತಿಯಿಂದ ದೂರ ಸರಿಯಲು ಸಾಧ್ಯವಾಗಿಲ್ಲ. ಹಾಗೆಯೇ ಪಾರ್ಧಿ ಸಮುದಾಯದವರು ಒಂದು ಕಾಲದಲ್ಲಿ ಜೀವನಾಧಾರಕ್ಕೆ ಶಿಕಾರಿಯನ್ನೇ ಅವಲಂಭಿಸಿದ ಸಮುದಾಯವಾಗಿತ್ತು. ಇಂದು ಅರಣ್ಯ ನೀತಿಯ ಕಾರಣಕ್ಕೆ ಶಿಕಾರಿಯಿಂದ ದೂರ ಸರಿದಿರುವರಾದರೂ ರುದ್ರಾಕ್ಷಿ ಸರ, ವನಸ್ಪತಿ ಔಷಧಿಗಳಿಂದ ಜೀವನ ಸಾಗಿಸುತ್ತಿರುವರು. ಈ ಎರಡೂ ವೃತ್ತಿಗಳು ಸಾಧ್ಯವಾಗದೆ ಅತಂತ್ರವಾದ ಪಾರ್ಧಿ ಕುಟುಂಬಗಳು ಜೀವಾನಾಧಾರಿತ ಕೂಲಿಯನ್ನು ಹುಡುಕಿಕೊಂಡು ದೂರ ದೂರದ ಪ್ರದೇಶಕ್ಕೆ ವಲಸೆಹೋಗುತ್ತಿರುವರು. ಡುಂಗ್ರಿಗರಾಸಿಯಾ ಸಮುದಾಯವು ಮೀನುಗಾರಿಕೆ, ಪ್ಲಾಸ್ಟಿಕ್ ಬಕೇಟ್, ಕೊಡ ಇತ್ಯಾದಿಗಳ ರಿಪೇರಿ, ಗುಜರಿ ಆರಿಸುವುದು ಇತ್ಯಾದಿ ವೃತ್ತಿಗಳಲ್ಲಿ ತೊಡಗಿದೆ. ಬೇಡ ಸಮುದಾಯವು ಪಶುಪಾಲನೆ, ಬೇಸಾಯ, ಕೂಲಿ ಇತ್ಯಾದಿ ವೃತ್ತಿಯನ್ನವಲಂಭಿಸಿ ಜೀವನ ನಿರ್ವಹಣೆ ಮಾಡುತ್ತಿರುವುದನ್ನು ಕಾಣುತ್ತೇವೆ.

ಈ ನಾಲ್ಕು ಬುಡಕಟ್ಟುಗಳಲ್ಲಿ ಪುರುಷನಷ್ಟೇ ಶ್ರಮವಹಿಸಿ ಮಹಿಳೆಯರೂ ಕಾಯಕದಲ್ಲಿ ತೊಡಗಿರುವರು. ಆದರೆ ಆರ್ಥಿಕ ಹಿಡಿತ ಮಾತ್ರ ಪುರುಷಪ್ರಧಾನ ವ್ಯವಸ್ಥೆಯ ಹಿಡಿತದಲ್ಲಿರುವುದೇ ಹೊರತು ಆರ್ಥಿಕ ಸ್ವಾತಂತ್ರ್ಯವು ಮಹಿಳೆಯ ಹಿಡಿತದಲ್ಲಿಲ್ಲ ಎಂಬುದು ಮೇಲ್ನೋಟಕ್ಕೆ ತಿಳಿಯುವುದು.

**ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ**

ಈ ಯೋಜನೆಯು ಜವಹಾರ್ ರೋಜಗಾರ್ ಯೋಜನೆಯ ವಿಸ್ತೃತ ರೂಪವೆನ್ನಬಹುದು. ಈ ಯೋಜನೆಯ ಮುಖ್ಯ ಉದ್ದೇಶವೂ ಸಹ ಜವಹಾರ್ ರೋಜಗಾರ್ ಯೋಜನೆಯ ಉದ್ದೇಶವೇ ಆಗಿದ್ದೂ ಜವಹಾರ್ ರೋಜಗಾರ್ ಯೋಜನೆಯಲ್ಲಿ ಕಂಡು ಬಂದಿದ್ದ ಲೋಪದೋಷಗಳನ್ನು ತಿದ್ದಿ ಹೆಚ್ಚು ಜನಮುಖಿಯಾಗಿ ಈ ಯೋಜನೆಯನ್ನು ರೂಪಿಸಲಾಗಿದೆ. ಮುಖ್ಯವಾಗಿ ಬಿಪಿಎಲ್ ಕಾರ್ಡ್‌ದಾರರಿಗೆ ಈ ಯೋಜನೆ ಲಾಭ ದೊರೆಯುವಂತೆ ರೂಪಿಸಲಾಗಿದೆ. ಇದರಲ್ಲಿ ಮಹಿಳೆಯರು ಮತ್ತು ಪುರುಷರಿಗೆ ಸಮಾನ ವೇತನ ಜಾರಿ ಬರುವಂತೆ ಮಾಡಲಾಗಿದೆ. ಪ್ರತಿಯೊಬ್ಬ ಕೆಲಸಗಾರರಿಗೂ ಕನಿಷ್ಟ ಕೂಲಿ ಒಂದು ನೂರು ರೂಪಾಯಿ ದೊರೆಯುವಂತೆ ರೂಪಿಸಲಾಗಿದೆ. ಈ ಯೋಜನೆಯ ಫಲಾನುಭವಿ ಕೂಲಿಕಾರರಿಗೆ ನೇರವಾಗಿ ಬ್ಯಾಂಕ್ ಮೂಲಕ ಕೂಲಿ ಸಲ್ಲುವಂತೆ ಯೋಜನೆ ರೂಪಿಸಲಾಗಿದೆ. ಮುಖ್ಯವಾಗಿ ಬಳ್ಳಾರಿಯಲ್ಲಿಯ ಡುಂಗ್ರಿ ಗರಾಸಿಯಾ, ಮತ್ತು ಪಾರ್ಧಿ, ಮೇಧಾ ಸಮುದಾಯಗಳು ಭೂ ಹಿಡುವಳಿಯಿಂದ ದೂರವೇ ಉಳಿದಿವೆ. ಈ ಸಮುದಾಯಗಳೆಲ್ಲಾ ತಮ್ಮ ಕೈ ಕಸುಬನ್ನೇ ನಂಬಿ ಜೀವನ ನಡೆಸುತ್ತಿವೆ. ಆದರೆ ಬೇಡ ಸಮುದಾಯ ಮಾತ್ರ ಅಲ್ಪ ಸ್ವಲ್ಪ ಕೃಷಿ ಭೂಮಿಯನ್ನು ಅವಲಂಭಿಸಿ ಜೀವನ ನಿರ್ವಹಣೆ ಮಾಡುತ್ತಿದೆ. ಅದರಾಚೆಗೆ ಕೆಲವು ಜನ ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಕರ್ನಾಟಕದ ಒಟ್ಟು ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡರೆ, ಅದರಲ್ಲಿ ಪರಿಶಿಷ್ಟ ಪಂಗಡದ ಕೆಲಸಗಾರರನ್ನು ವಿಂಗಡಿಸಿದರೆ ದೊರೆಯುವ ಅಂಕಿ ಅಂಶಗಳನ್ನು ಶೇಕಡವಾರುಗಳಲ್ಲಿ ನೀಡಲಾಗಿದೆ. ಪರಿಶಿಷ್ಟ ಪಂಗಡದ ಒಟ್ಟು ಕೆಲಸಗಾರರ ಪ್ರಮಾಣವು ಶೇಕಡ ೪೯.೪೦ ಇದ್ದು ಇದರಲ್ಲಿ ಪುರುಷರು ಶೇಕಡ ೫೮.೩ ಮಹಿಳೆಯರು ಶೇಕಡ ೭೧.೭ ರಷ್ಟಿದ್ದಾರೆ. ಒಟ್ಟು ಪರಿಶಿಷ್ಟ ಪಂಗಡದ ಜನಸಂಖ್ಯೆಯಲ್ಲಿ ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದಲ್ಲಿಯೇ ಹೆಚ್ಚಿನ ಪ್ರಮಾಣದಲ್ಲಿ ಕೆಲಸಗಾರರನ್ನು ಕಾಣಬಹುದು. ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡದ ಒಟ್ಟು ಕೆಲಸಗಾರರ ಪ್ರಮಾಣ ಶೇಕಡ ೫೧.೫೦ ಇದ್ದು ಇದರಲ್ಲಿ ಪುರುಷರು ಶೇಕಡ ೫೭.೬೦ ಹಾಗೂ ಮಹಿಳೆಯರು ಶೇಕಡ ೪೫.೩೦ರಷ್ಟಿದ್ದಾರೆ. ಹಾಗೇ ನಗರ ಪ್ರದೇಶದಲ್ಲಿ ಪರಿಶಿಷ್ಟ ಪಂಗಡದ ಒಟ್ಟು ಕೆಲಸಗಾರರ ಪ್ರಮಾಣ ಶೇಕಡ ೩೭.೬೦ ಇದ್ದು ಇದರಲ್ಲಿ ಪುರುಷರು ಶೇಕಡ ೫೨.೬೦ ಹಾಗೂ ಮಹಿಳೆಯರು ಶೇಕಡ ೨೧.೯೦ರಷ್ಟಿದ್ದಾರೆ.'೦' ವಯೋಮಾನದಿಂದ ೧೮ ವರ್ಷದವರೆಗಿನ ಮತ್ತು ೬೦ ವರ್ಷಕ್ಕೆ ಮೇಲ್ಪಟ್ಟವರನ್ನು ಕೆಲಸಗಾರರೆಂದು ಪರಿಗಣಿಸಿರುವುದಿಲ್ಲ. ಹೀಗಾಗಿ ಇಂತಹ ಕೆಲಸಗಾರರಲ್ಲದವರ ಒಟ್ಟು ಪ್ರಮಾಣ ಶೇಕಡ ೫೦.೬ರಷ್ಟಿದೆ. ಮುಖ್ಯ ಕೆಲಸಗಾರರೆಂದು ಪರಿಗಣಿತವಾದವರ ಒಟ್ಟು ಪ್ರಮಾಣವು ಶೇಕಡ ೭೭.೯೦ರಷ್ಟಿದೆ. ಇದರಲ್ಲಿ ಗ್ರಾಮೀಣ ಪ್ರದೇಶದ

ಒಟ್ಟು ಮುಖ್ಯಕೆಲಸಗಾರರು ಶೇಕಡ ೭೬.೪೦ರಷ್ಟಿದ್ದರೆ ನಗರ ಪ್ರದೇಶದಲ್ಲಿ ಇವರ ಪ್ರಮಾಣವು ಶೇಕಡ ೮೯.೧೦ರಷ್ಟಿದೆ. ಖಾಯಂ ಆಗಿ ವರ್ಷಪೂರ್ತಿ ಕೆಲಸವಿಲ್ಲದೆ ಅರೆಕಾಲಿಕ ಕೆಲಸಗಾರರಾಗಿ ದುಡಿಯುವವರ ಪ್ರಮಾಣವು ಒಟ್ಟು ಶೇಕಡ ೨೨.೧ ಇದ್ದು ಇದು ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇಕಡ ೨೩.೬೦ ರಷ್ಟಿದ್ದರೆ ನಗರ ಪ್ರದೇಶದಲ್ಲಿ ಇವರ ಪ್ರಮಾಣವು ಶೇಕಡ ೧೦.೯೦ರಷ್ಟಿದೆ.

**ಭೂ ಹಿಡುವಳಿ**

"ಪರಿಶಿಷ್ಟ ಪಂಗಡಗಳು ಹೊಂದಿರುವ ಭೂಮಿಗಳು ಸಣ್ಣ ಹಿಡುವಳಿಯ ತುಂಡು ಭೂಮಿಗಳಾಗಿವೆ. ಅದರಲ್ಲೂ ಇವರ ಕೃಷಿ ಭೂಮಿಗಳು ಕೆಳಮಟ್ಟದ ಉತ್ಪಾದನೆಯನ್ನು ನೀಡುವ ಭೂಮಿಗಳೇ ಹೆಚ್ಚಾಗಿವೆ. ಇವರು ಹೆಚ್ಚಿನ ಆದಾಯ ತರುವ ಉನ್ನತ ಹುದ್ದೆಯಲ್ಲಿ ಇರದೇ ಇರುವುದಕ್ಕೆ ಕಾರಣ ಇವರ ಕೆಳಮಟ್ಟದ ಸಾಕ್ಷರತೆ, ವೃತ್ತಿ ಕೌಶಲ್ಯಗಳ ಕೊರತೆಗಳೇ ಕಾರಣವಾಗಿವೆ. ಅವರ ತಲಾವಾರು ಮಾಸಿಕ ವೆಚ್ಚಕ್ಕಿಂತ ಕಡಿಮೆ ಕೂಲಿ ಪಡೆಯುತ್ತಿರುವುದನ್ನು ಪ್ರತಿನಿಧಿಸುತ್ತದೆ".(ಕೃಷಿಗಣತಿ ವರದಿ:೨೦೦೧:೫೨), ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡದವರಿಗೆ ಹೋಲಿಸಿದರೆ ನಗರ ಪ್ರದೇಶಗಳಲ್ಲಿರುವ ಪರಿಶಿಷ್ಟ ಪಂಗಡದವರು ಸ್ವಲ್ಪ ಉತ್ತಮ ಸ್ಥಿತಿಯಲ್ಲಿದ್ದಾರೆ. ೨೦೦೧ ರ ಜನಗಣತಿ ಪ್ರಕಾರ ಪರಿಶಿಷ್ಟ ಪಂಗಡದವರಲ್ಲಿ ಶೇಕಡ ೭.೬ ರಷ್ಟು ಸಾಗುವಳಿದಾರರಿದ್ದಾರೆ. ಶೇಕಡ ೧೧.೮೬ ರಷ್ಟು ಕೃಷಿ ಕಾರ್ಮಿಕರಿದ್ದರೆ ಶೇಕಡ ೪.೭೦ ರಷ್ಟು ಗೃಹಸಂಬಂಧಿ ಕೈಗಾರಿಕೆಗಳಲ್ಲಿ ತೊಡಗಿದ್ದಾರೆ. ಪರಿಶಿಷ್ಟ ಪಂಗಡದ ಮಹಿಳೆಯರಲ್ಲಿ ಅಧಿಕ ಮಹಿಳೆಯರು, ಅಂದರೆ ಶೇಕಡ ೫೮.೮೦ರಷ್ಟು ಮಹಿಳೆಯರು ಗೃಹಸಂಬಂಧಿ ಕೈಗಾರಿಕೆಗಳಲ್ಲಿ ತೊಡಗಿದ್ದಾರೆ. ಕೇವಲ ಶೇಕಡ ೫೯.೮೯ ರಷ್ಟು ಮಹಿಳೆಯರು ಮಾತ್ರ ಸಾಗುವಳಿದಾರರಾಗಿದ್ದಾರೆ. "ಮಾದರಿ ಸಮೀಕ್ಷೆಯು ತಿಳಿಸುವಂತೆ ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡದ ಶೇಕಡ ೫೭.೩೯ ರಷ್ಟು ಕುಟುಂಬಗಳು ಭೂ ಒಡೆತನ ಹೊಂದಿವೆ. ಅದರಲ್ಲಿ ಶೇಕಡ ೭೪.೩೫ ರಷ್ಟು ಒಣಭೂಮಿಯಾಗಿದೆ. ರಾಜ್ಯದಲ್ಲಿ ಬಿತ್ತನೆಗೊಳ್ಳುವ ನೀರಾವರಿ ಕೃಷಿ ಭೂಮಿಯು ಶೇಕಡ ೨೧ ರಷ್ಟು ಮಾತ್ರವಾಗಿದೆ".(ಮಾನವಾಭಿವೃದ್ಧಿ ವರದಿ:೨೦೦೫:೨೬೧). ೨೦೧೧ ರ ಕರ್ನಾಟಕ ಕೃಷಿ ಗಣತಿಯ ಪ್ರಕಾರ ಪರಿಶಿಷ್ಟ ಪಂಗಡದವರಲ್ಲಿ ಶೇಕಡ ೩೦.೯ ರಷ್ಟು ಅತಿ ಸಣ್ಣ ಹಿಡುವಳಿದಾರರು ಮತ್ತು ಶೇಕಡ ೧೯.೪ ರಷ್ಟು ಅರೆ ಮಧ್ಯಮ ಗಾತ್ರದ ಹಿಡುವಳಿದಾರರಿದ್ದಾರೆ ಈ ವಿಷಯದಲ್ಲಿ ಪರಿಶಿಷ್ಟ ಪಂಗಡದವರಿಗೆ ಮತ್ತು ಇತರರಿಗೆ ಅಷ್ಟೇನೂ ವ್ಯತ್ಯಾಸವಿಲ್ಲ.

**ಪರಿಶಿಷ್ಟ ಪಂಗಡದವರ ಗಾತ್ರವಾರು ಭೂ ಹಿಡುವಳಿ ಹೊಂದಿರುವವರ ಶೇಕಡವಾರು ವಿವರ**

ಪರಿಶಿಷ್ಟ ಪಂಗಡದಲ್ಲಿ ಮಧ್ಯಮ (ಶೇಕಡ ೭.೯) ಮತ್ತು ದೊಡ್ಡ ಹಿಡುವಳಿಗಳ (ಶೇಕಡ ೧.೦) ಪ್ರಮಾಣ ಕಡಿಮೆ ಇದೆ. ಇಲ್ಲಿ ಗಮನಿಸಬೇಕಾದ ಅತಿ ಮುಖ್ಯವಾದ ಅಂಶವೆಂದರೆ ಬಹುಪಾಲು ಪರಿಶಿಷ್ಟ ಪಂಗಡಗಳು ಕಡಿಮೆ ಉತ್ಪಾದಕತೆಯ ಸಣ್ಣ ಘಟಕಗಳನ್ನು ಹೊಂದಿವೆ. ಅವು ಆರ್ಥಿಕವಾಗಿಯೂ ಲಾಭಕರವಲ್ಲ. ಆದ್ದರಿಂದಲೇ ಬಹುತೇಕ ಸಣ್ಣ ಹಿಡುವಳಿದಾರರು ಜೀವನ ನಿರ್ವಹಣೆಗಾಗಿ ಕೂಲಿ ಕಾರ್ಮಿಕ ವೃತ್ತಿಗೆ ತಳ್ಳಲ್ಪಟ್ಟಿದ್ದಾರೆ. ವರಮಾನದ ವಿಚಾರವಾಗಿ ತಿಳಿಸಬಹುದೇನೆಂದರೆ ೨೦೦೧–

೦೨ ಅಂಕಿ ಅಂಶಗಳ ಪ್ರಕಾರ ಬಹುಪಾಲು ಗ್ರಾಮೀಣ ಪರಿಶಿಷ್ಟ ಪಂಗಡದ ಕುಟುಂಬಗಳ ವರಮಾನದ ಮೂಲವೆಂದರೆ ಕೃಷಿ ಕಾರ್ಮಿಕರಾಗಿ ಕೆಲಸಮಾಡುವುದು. (ಶೇಕಡ ೯.೭) ಸಾಗುವಳಿ (ಶೇಕಡ ೭.೭) ಮೀನುಗಾರಿಕೆ ಹಾಗೂ ಇತರ ಸಣ್ಣ ಪುಟ್ಟ ಉದ್ದಿಮೆಗಳು (ಶೇಕಡ ೧೧.೪) ಅವರ ವರಮಾನದ ಮೂಲಗಳಾಗಿವೆ. "ನಗರ ಪ್ರದೇಶದಲ್ಲಿಯ ಪರಿಶಿಷ್ಟ ಪಂಗಡದವರ ವಾರ್ಷಿಕ ತಲಾವಾರು ವರಮಾನ ರೂ ೧೦.೯೮೭ ರಷ್ಟಾಗಿದ್ದರೆ ಗ್ರಾಮೀಣ ಪ್ರದೇಶದಲ್ಲಿಯ ಪರಿಶಿಷ್ಟ ಪಂಗಡದವರ ವಾರ್ಷಿಕ ತಲಾವಾರು ವರಮಾನ ಕೇವಲ ರೂ ೪.೭೬೮ ಆಗಿದೆ. ಇಲ್ಲಿ ಗಮನಿಸಬೇಕಾದ ಮುಖ್ಯ ವಿಚಾರವೆಂದರೆ ಗ್ರಾಮೀಣ ಪ್ರದೇಶದಲ್ಲಿರುವ ಪರಿಶಿಷ್ಟ ಪಂಗಡದ ಕುಟುಂಬಗಳ ಪೈಕಿ ಶೇಕಡ ೪೦ ರಷ್ಟು ಕುಟುಂಬಗಳು ಬಡತನ ರೇಖೆಯ ಕೆಳಗಿನ ಕುಟುಂಬಗಳಾಗಿವೆ. ಇದೇ ನಗರ ಪ್ರದೇಶದ ಪರಿಶಿಷ್ಟ ಪಂಗಡದ ಕುಟುಂಬಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಪ್ರಮಾಣ ಶೇಕಡ ೨೫ ರಷ್ಟಾಗಿದೆ".(ಮಾನವಾಭಿವೃದ್ಧಿ ವರದಿ:೨೦೦೫:೨೬೧), ಗ್ರಾಮೀಣ ಪ್ರದೇಶದಲ್ಲಿರುವ ಪರಿಶಿಷ್ಟ ಪಂಗಡಗಳ ಜನರ ತಲಾವಾರು ಮಾಸಿಕ ವೆಚ್ಚವು ಅತ್ಯಂತ ಕಡಿಮೆ ಇದೆ. ಪರಿಶಿಷ್ಟ ಪಂಗಡಗಳ ತಲವಾರು ಮಾಸಿಕ ವೆಚ್ಚ ರೂ ೪೧೯ ಆಗಿದ್ದರೆ ಇತರರ ತಲಾವಾರು ವೆಚ್ಚ ರೂ ೫೦೦ ಆಗಿದೆ. ಇತರರ ಮಾಸಿಕ ತಲವಾರು ವೆಚ್ಚಕ್ಕೆ ಹೋಲಿಸಿದರೆ ಪರಿಶಿಷ್ಟ ಪಂಗಡದವರ ತಲವಾರು ವೆಚ್ಚವು ಅತ್ಯಂತ ಕಡಿಮೆಯೆಂದೇ ಹೇಳಬಹುದು. ನಗರವಾಸಿ ಪರಿಶಿಷ್ಟ ಪಂಗಡಗಳ ತಲವಾರು ಮಾಸಿಕ ವೆಚ್ಚವು ರೂ ೬೩೪ ಆಗಿದ್ದು ನಗರವಾಸಿ ಇತರರಿಗೆ ಹೋಲಿಸಿದರೆ ಅವರ ತಲವಾರು ವೆಚ್ಚದ ಪ್ರಮಾಣ ಅತ್ಯಂತ ಕಡಿಮೆಯೆನಿಸುತ್ತದೆ. ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡಗಳು ತಮ್ಮ ಜೀವನ ನಿರ್ವಹಣೆಗಾಗಿ ಕೃಷಿ ಕೂಲಿ ಮತ್ತು ಕೃಷಿಯನ್ನೇ ಆಧರಿಸಿರುವುದರಿಂದ ಅವರ ಮಾಸಿಕ ತಲಾವಾರು ವೆಚ್ಚವು ಕಡಿಮೆಯಾಗಿರುವುದು ಸಹಜವಾಗಿದೆ. ಸಾಮಾನ್ಯವಾಗಿ ಮಳೆಯಾಶ್ರಿತ ಕೃಷಿ ಚಟುವಟಿಕೆಗಳು ವರ್ಷದಲ್ಲಿ ಕೇವಲ ಆರು ತಿಂಗಳು ಮಾತ್ರ ಚುರುಕಾಗಿರುತ್ತದೆ. ಇನ್ನುಳಿದ ಆರು ತಿಂಗಳು ಕೃಷಿಕರಿಗೆ ಬೇರೆ ಯಾವುದೇ ಕೆಲಸವಿರುವುದಿಲ್ಲ. ಅದೂ ಮಳೆ ಬಂದರೆ ಮಾತ್ರ ಕೃಷಿ ಚಟುವಟಿಕೆಗಳು ನಡೆಯುತ್ತವೆ. ಮಳೆ ಸರಿಯಾಗಿ ಬಾರದೇ ಇದ್ದರೆ ಆ ಆರು ತಿಂಗಳು ಸಹ ಅಂತಹ ಹೇಳಿಕೊಳ್ಳುವಂತಹ ಕೆಲಸಗಳು ಇರುವುದಿಲ್ಲ. ಹೀಗಾಗಿ ಅನಿಶ್ಚಿತವಾದ ದುಡಿಮೆಯನ್ನೇ ಪರಿಶಿಷ್ಟ ಪಂಗಡದವರು ನೆಚ್ಚಿಕೊಂಡಿರಬೇಕಾಗುತ್ತದೆ. ಸಾಮಾನ್ಯವಾಗಿ ಬಳ್ಳಾರಿ ಜಿಲ್ಲೆಯಂತಹ ಬಿರುಬಿಸಿಲ ನಾಡಲ್ಲಿ ಕೃಷಿ ಚಟುವಟಿಕೆ ಪೂರ್ಣಗೊಂಡ ತರುವಾಯ ಸಣ್ಣ ಹಿಡುವಳಿದಾರ ಕೃಷಿಕರು ಮತ್ತು ಕೃಷಿ ಕಾರ್ಮಿಕರು ಜೀವನೋಪಾಯಕ್ಕಾಗಿ ಚಿಕ್ಕಮಗಳೂರು ಮುಂತಾದ ಕಡೆಯ ಕಾಫಿ ಎಸ್ಟೇಟ್‌ಗಳಲ್ಲಿ ಇಲ್ಲವೇ ಬೆಂಗಳೂರು, ಗೋವಾ, ಹೈದರಾಬಾದು ಮುಂತಾದ ಕಡೆ ಕೂಲಿ ಕೆಲಸವನ್ನು ಹುಡುಕಿಕೊಂಡು ವಲಸೆ ಹೋಗುತ್ತಾರೆ.


ಬಳ್ಳಾರಿ ಜಿಲ್ಲೆಯಲ್ಲಿ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ ತಾಲೂಕಿನ ತುಂಗಾಭದ್ರಾ ಆಣೆಕಟ್ಟಿನಿಂದ ಮೇಲ್ಭಾಗಕ್ಕೆ, ಒಣಬೇಸಾಯವನ್ನು ಅವಲಂಬಿಸಿದ ಗ್ರಾಮೀಣ ಪರಿಶಿಷ್ಟ ಪಂಗಡದವರು

ಗೋವಾ, ಚಿಕ್ಕಮಗಳೂರು ಮುಂತಾದ ಕಡೆ ಕೂಲಿಯನ್ನು ಹುಡುಕಿಕೊಂಡು ವಲಸೆ ಹೋಗುವುದು ಸಹಜ. ಈ ರೀತಿ ವಲಸೆ ಹೋದವರು ಮರಳಿ ತಮ್ಮ ಗ್ರಾಮಗಳಿಗೆ ಮರಳುವುದು ಮಳೆಗಾಲಕ್ಕೆ ಪ್ರಸ್ತುತ ಬಳ್ಳಾರಿ ಜಿಲ್ಲೆಯಲ್ಲಿ ನೆಲೆಸಿರುವ ಬುಡಕಟ್ಟು ಸಮುದಾಯಗಳ ಕುಟುಂಬಗಳ ಆರ್ಥಿಕ ಸ್ಥಿತಿ-ಗತಿಗಳನ್ನು ಇಲ್ಲಿ ಗಮನಿಸಲಾಗಿದೆ. ಮುಖ್ಯವಾಗಿ ಬುಡಕಟ್ಟು ಸಮುದಾಯಗಳ ಬಹುತೇಕ ಮಹಿಳಾ ಸದಸ್ಯರ ಹೆಸರಿನಲ್ಲಿ ಯಾವುದೇ ಭೂ ಹಿಡುವಳಿ ಇಲ್ಲದಿರುವುದು ಕಂಡು ಬರುತ್ತದೆ. ಅದರಲ್ಲಿ ಬೇಡ ಸಮುದಾಯದ ಬೆರಳೆಣಿಕೆಯಷ್ಟು ಮಹಿಳೆಯರ ಹೆಸರಿನಲ್ಲಿ ತುಂಡು ಭೂಮಿಗಳಿವೆ. ಆದರೆ ಈ ಭೂ ಒಡೆತನ ಹೆಸರಿಗೆ ಮಾತ್ರ ಮಹಿಳೆಯರದಾಗಿದ್ದು ಅದರ ಪೂರ್ಣ ಪ್ರಮಾಣದ ನಿರ್ವಹಣೆ ಮತ್ತು ಹಣಕಾಸು ವಹಿವಾಟು ಪುರುಷ ಕೇಂದ್ರಿತವಾಗಿರುವುದು ಕ್ಷೇತ್ರಕಾರ್ಯದ ಮೂಲಕ ಕಂಡುಬಂದಿತು.

**ಕೋಷ್ಟಕ ೬.೨೪ ಭೂ ಹಿಡುವಳಿ ಹೊಂದಿದ ಬುಡಕಟ್ಟು ಕುಟುಂಬಗಳ ವಿವರ**

| ಸಮುದಾಯ | ಭೂ ಹಿಡುವಳಿ ಹೊಂದಿದ ಕುಟುಂಬಗಳು | ಭೂ ಹಿಡುವಳಿ ಇರದ ಕುಟುಂಬಗಳು |
|---|---|---|
| ಬೇಡ | ೪೫ | ೫೫ |
| ಮೇದ | ೨೫ | ೭೫ |
| ಡುಂಗ್ರಿಗರಾಸಿಯಾ | ೦೧ | ೯೯ |
| ಪಾರ್ಧಿ | ೦೧ | ೯೯ |

ಲಂಬ ಚಿತ್ರ ೬.೨೪ ಭೂ ಹಿಡುವಳಿ ಹೊಂದಿದ ಬುಡಕಟ್ಟು ಕುಟುಂಬಗಳ ವಿವರ




ಸಮೀಕ್ಷೆಗೆ ಒಳಪಡಿಸಿದ ಬುಡಕಟ್ಟು ಸಮುದಾಯಗಳಲ್ಲಿ ಬೇಡ ಸಮುದಾಯದ ೪೫ ಕುಟುಂಬಗಳು ಸಣ್ಣಹಿಡುವಳಿಯ (೫ ಎಕರೆ ಒಳಗೆ) ಭೂಮಿಯನ್ನು ಹೊಂದಿರುವರು. ಇನ್ನುಳಿದ ೫೫ ಕುಟುಂಬಗಳು ಕೃಷಿಕೂಲಿ ಹಾಗೂ ಇತರ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವರು. ಮೇದ ಸಮುದಾಯದವರು ತಮ್ಮ ಬಿದಿರು ಕೆಲಸವನ್ನು ನೆಚ್ಚಿಕೊಂಡು ಜೀವನ ನಡೆಸುವರು. ಇತ್ತೀಚೆಗೆ ನಗರ ಪ್ರದೇಶಗಳಲ್ಲಿ ಆಂಧ್ರದಿಂದ ಕರೆಬಂಡಿ (ಚಪ್ಪಡಿ), ಪಾಲಿಷ್ ಬಂಡೆಗಳನ್ನು ತಂದು ಹೆಚ್ಚಿನ ಲಾಭಕ್ಕೆ ಮಾರಿ ಜೀವನ ನಡೆಸುವರು. ಈ ರೀತಿ ವ್ಯಾಪಾರದಲ್ಲಿ ತೊಡಗಿದವರ ಪ್ರಮಾಣವೂ ಕಡಿಮೆಯೆ. ಆರ್ಥಿಕವಾಗಿ ಸ್ವಲ್ಪ ಅನುಕೂಲವಿದ್ದವರು ಮಾತ್ರ ಈ ರೀತಿಯ ವ್ಯಾಪಾರಗಳಲ್ಲಿ ತೊಡಗಿರುವರು. ತಮ್ಮ ವ್ಯಾಪಾರದಿಂದ ಗಳಿಸಿದ ಲಾಭಾಂಶಗಳಿಂದ ಅಲ್ಪಸ್ವಲ್ಪ ಭೂಮಿ ಕೊಂಡ ಕುಟುಂಬಗಳು ಕ್ಷೇತ್ರಕಾರ್ಯದಲ್ಲಿ ಕಂಡುಬಂದವು. ಮೇದ ಸಮುದಾಯದಲ್ಲಿ ದೊಡ್ಡಹಿಡುವಳಿದಾರರು ಇಲ್ಲ. ಸಣ್ಣ ಹಿಡವಳಿದಾರ ಕುಟುಂಬಗಳು ೨೫ ಇವೆ. ಇನ್ನೂ ೭೫ ಕುಟುಂಬಗಳು ಕೃಷಿ ಭೂಮಿ ಹೊಂದಿರದೆ ತಮ್ಮ ಕೈಕಸುಬು ಹಾಗೂ ವ್ಯಾಪಾರವನ್ನು ನೆಚ್ಚಿಕೊಂಡು ಜೀವನ ನಡೆಸುತ್ತಿವೆ. ಡುಂಗ್ರಿಗರಾಸಿಯಾದ ಸಮೀಕ್ಷೆಗೆ ಒಳಪಡಿಸಿದ ಒಂದು ನೂರು ಕುಟುಂಬಗಳಲ್ಲಿ ಕೇವಲ ಒಂದು ಕುಟುಂಬ (ಬುಕ್ಕಸಾಗರ) ಮಾತ್ರ ಎರಡು ಎಕರೆ ಜಮೀನು ಹೊಂದಿದೆ. ಕೇವಲ ಮೀನುಗಾರಿಕೆ, ಪ್ಲಾಸ್ಟಿಕ್ ಬಕೇಟು ರಿಪೇರಿ, ಹಲ್ಲು ಕಟ್ಟುವುದು, ಗುಜರಿ ಆಯುವುದು ಕಾಯಕವಾಗಿಸಿಕೊಂಡ ಕುಟುಂಬಗಳು ೯೯ ಇವೆ. ಪಾರ್ಧಿ ಸಮೀಕ್ಷೆಗೆ ಒಳಪಡಿಸಿದ ಒಂದು ನೂರು ಕುಟುಂಬಗಳಲ್ಲಿ ಕೇವಲ ಒಂದು ಕುಟುಂಬ (ಕಂಪ್ಲಿ) ಮಾತ್ರ ಎರಡು ಎಕರೆ ಜಮೀನು ಹೊಂದಿದೆ. ಭಟ್ಟಿ ಸರಾಯಿ ತಯಾರಿಕೆ, ಕೃಷಿ ಕೂಲಿ, ಭಿಕ್ಷಾಟನೆ, ಗುಜರಿ ಆಯುವುದು ಇತ್ಯಾದಿ ಕಾಯಕವಾಗಿಸಿಕೊಂಡ ಕುಟುಂಬಗಳು ೯೯ ಇವೆ.

**ಕೋಷ್ಟಕ ೬.೨೫ ಭೂ ಹಿಡುವಳಿ ಹೊಂದಿದ ಕುಟುಂಬಗಳಲ್ಲಿ ಭೂಮಾಲಿಕತ್ವ ಹೊಂದಿದ ಪುರುಷ ಹಾಗೂ ಮಹಿಳೆಯರ ವಿವರ**

| ಸಮುದಾಯ | ಭೂ ಹಿಡುವಳಿ ಹೊಂದಿದ ಒಟ್ಟು ಕುಟುಂಬಗಳು | ಭೂ ಮಾಲಿಕತ್ವದ ವಿವರ | | |
|---|---|---|---|---|
| | | ಗಂಡು | ಹೆಣ್ಣು | ಒಟ್ಟು |
| ಬೇಡ | ೪೫ | ೪೦ | ೦೫ | ೪೫ |
| ಮೇದ | ೨೫ | ೨೨ | ೦೩ | ೨೫ |
| ಡುಂಗ್ರಿಗರಾಸಿಯಾ | ೦೧ | ೦೧ | – | ೦೧ |
| ಪಾರ್ಧಿ | ೦೧ | ೦೧ | – | ೦೧ |
| **ಒಟ್ಟು** | **೭೨** | **೬೪** | **೦೮** | **೭೨** |

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ನಾಲ್ಕು ಬುಡಕಟ್ಟು ಸಮುದಾಯಗಳಲಿ ಬೇಡ ಸಮುದಾಯದ ಒಂದು ನೂರು ಕುಟುಂಬಗಳಲ್ಲಿ ಭೂ ಹಿಡುವಳಿ ಹೊಂದಿದ ಕುಟುಂಬಗಳು ೪೫ ಮಾತ್ರ ಇವೆ. ಈ

ಲಂಬ ಚಿತ್ರ ೬.೨೫ ಭೂ ಹಿಡುವಳಿ ಹೊಂದಿದ ಕುಟುಂಬಗಳಲ್ಲಿ ಭೂಮಾಲಿಕತ್ವ ಹೊಂದಿದ ಪುರುಷ ಹಾಗೂ ಮಹಿಳೆಯರ ವಿವರ





೪೫ ಕುಟುಂಬಗಳಲ್ಲಿ ೪೦ ಪುರುಷರು ಭೂಮಾಲಿಕತ್ವ ಹೊಂದಿರುವರು. ಕೇವಲ ಐದು ಮಹಿಳೆಯರು ಮಾತ್ರ (ಇದರಲ್ಲಿ ಮೂವರು ವಿಧವೆಯರು, ಇಬ್ಬರು ದೇವದಾಸಿಯರು) ಭೂಹಿಡುವಳಿ ಹೊಂದಿರುವರು. ಅದೇ ರೀತಿಯಾಗಿ ಮೇದ ಸಮುದಾಯದಲ್ಲಿ ೧೦೦ ಕುಟುಂಬಗಳಿಗೆ ಕೇವಲ ೨೫ ಕುಟುಂಬಗಳಿಗೆ ಮಾತ್ರ ಸಣ್ಣ ಭೂಹಿಡುವಳಿ ಇದೆ. ಈ ಸಮುದಾಯದಲ್ಲಿಯೂ ೨೨ ಪುರುಷರ ಹೆಸರಿನಲ್ಲಿ ಭೂಮಿ ಇದೆ. ಇನ್ನೂ ೩ ಜನ ಹಿರಿಯ ಮಹಿಳೆಯರ ಹೆಸರಿನಲ್ಲಿ ಭೂಮಿ ಇದೆಯಾದರೂ ಅದು ಕೇವಲ ಹೆಸರಿಗೆ ಮಾತ್ರ. ಭೂಮಿಯ ಎಲ್ಲಾ ವಹಿವಾಟನ್ನು ಅವರ ಮಕ್ಕಳೇ ನೋಡಿಕೊಳ್ಳುತ್ತಿರುವರು. ಡುಂಗ್ರಿಗರಾಸಿಯಾ ಕುಟುಂಬಗಳಿಗೆ ಇರಲು ಮನೆಯೇ ಇಲ್ಲ, ಇನ್ನು ಭೂಮಿಯ ಒಡೆತನ ದೂರವುಳಿಯಿತು ಎನ್ನುವ ಉತ್ತರ ಈ ಸಮುದಾಯದ ಜನರಿಂದ ಕೇಳಿಬರುವುದು. ಆದರೆ ಬುಕ್ಕಸಾಗರದ ಡುಂಗ್ರಿಗರಾಸಿಯಾ ಸಮುದಾಯದ ಹಿರಿಯ ಮುಖಂಡರಾದ ಮಾಧವರಾವ್ ಹೆಸರಿನಲ್ಲಿ ಎರಡು ಎಕರೆ ಜಮೀನಿದೆ. ಇದರ ಸಾಗುವಳಿಯನ್ನು ಮಾಧವರಾವ್ ಅವರೆ ಮಾಡುತ್ತಿರುವರು. ಭೂಮಿಗೆ ಕೊಳವೆಬಾವಿ ನೀರಿನ ಸೌಲಭ್ಯವನ್ನು ಕಲ್ಪಿಸಿಕೊಂಡಿರುವರು. ಪಾರ್ಧಿ ಸಮುದಾಯದಲ್ಲಿ ಕಂಪ್ಲಿ ಪಟ್ಟಣದ ಹೆಚ್ ಪಿ ಶ್ರೀಕಾಂತ್ ಅವರಿಗೆ ಎರಡು ಎಕರೆ ಭೂಮಿಯು ಸಣಾಪುರ ಮಟ್ಟಿ ಪ್ರದೇಶದಲ್ಲಿದೆ. ಇದಕ್ಕೆ ನೀರಿನ ಸೌಲಭ್ಯ ಇರುವುದಿಲ್ಲ. ಮಳೆಯಾಶ್ರಿತ ಭೂಮಿ ಇದಾಗಿದೆ. ಬ್ರಿಟೀಷ್ ಇಂಡಿಯಾ ಸರ್ಕಾರವು ೧೯೦೮ರಲ್ಲಿ ಸುಗ್ಗೇನಹಳ್ಳಿ ಗ್ರಾಮದೊಳಗಿನ ೧೨೦ ಎಕರೆ ಜಮೀನನ್ನು ಪಾರ್ಧಿ ಸಮುದಾಯದ ಏಳು ಕುಟುಂಬಗಳಿಗೆ ಇನಾಮಾಗಿ ಕೊಟ್ಟಿರುವರಂತೆ. ಅದಕ್ಕೆ ಸಂಬಂಧಿಸಿದ ದಾಖಲೆಗಳೂ ಸಂಬಂಧಿಸಿದ ಕುಟುಂಬದವರ ಬಳಿ ಇವೆ. ಸರ್ಕಾರಕ್ಕೆ ಜಮೀನಿಗೆ ಸಂಬಂಧಿಸಿದ ಕುಟುಂಬದವರು ತಮ್ಮ ಭೂಮಿಯನ್ನು ತಮಗೆ ಬಿಡಿಸಿಕೊಡಲು ಕೇಳಿಕೊಂಡು ಅರ್ಜಿ ಸಲ್ಲಿಸಿದರೂ ಇಂದಿನವರೆಗೂ ಯಾವೊಬ್ಬ ಅಧಿಕಾರಿಯೂ ಸ್ಪಂಧಿಸಿಲ್ಲ ಎಂಬ ಅಳಲನ್ನು ಕಂಪ್ಲಿಯ ಪಾರ್ಧಿ ಸಮುದಾಯದವರು ವ್ಯಕ್ತಪಡಿಸಿದರು.

**ಬುಡಕಟ್ಟು ಸಮುದಾಯಗಳ ವಸತಿ ವಿವರ**

ಕರ್ನಾಟಕದಲ್ಲಿ ಒಟ್ಟು ೫೦ ಅನುಸೂಚಿತ ಪರಿಶಿಷ್ಟ ಪಂಗಡಗಳಿವೆ. ಆದರೆ ಅನುಸೂಚಿತವಲ್ಲದ ಎಷ್ಟೋ ಪರಿಶಿಷ್ಟ ಪಂಗಡಗಳು ಕಂಡುಬರುತ್ತವೆ. ಪ್ರಸ್ತುತ ಇಲ್ಲಿ ಅನುಸೂಚಿತ ಪರಿಶಿಷ್ಟ ಪಂಗಡಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡಿದ್ದು ಕರ್ನಾಟಕದ ಒಟ್ಟಾರೆ ಪರಿಶಿಷ್ಟ ಪಂಗಡಗಳ ವಸತಿ ರೂಪು ರೇಷೆಗಳನ್ನು ಈ ರೀತಿ ವರ್ಗೀಕರಿಸಲಾಗಿದೆ.

| ಕೋಷ್ಟಕ ೬.೨೬ ಕರ್ನಾಟಕದ ಪರಿಶಿಷ್ಟ ಪಂಗಡದವರ ವಸತಿ ವಿವರ (ಶೇಕಡವಾರುಗಳಲ್ಲಿ) | | |
|---|---|---|
| ಶಾಶ್ವತ | ಅರೆ ಶಾಶ್ವತ | ತಾತ್ಕಾಲಿಕ |
| ೬೬.೯ | ೨೩.೧ | ೧೦.೦ |

**೬.೨೬ ಕರ್ನಾಟಕದ ಪರಿಶಿಷ್ಟ ಪಂಗಡದವರ ವಸತಿ ವಿವರ (ಶೇಕಡವಾರುಗಳಲ್ಲಿ)**




ಕರ್ನಾಟಕದ ಒಟ್ಟು ಪರಿಶಿಷ್ಟ ಪಂಗಡಗಳಲ್ಲಿ ಈ ಹಿಂದೆ ಶಾಶ್ವತ ಮನೆಗಳು ಕಂಡು ಬರುವುದು ಅತ್ಯಲ್ಪವಾಗಿತ್ತು. ಕೇವಲ ಹುಲ್ಲಿನ ಗುಡಿಸಲು, ತಾಳೆಗರಿ ಗುಡಿಸಲುಗಳ ಪ್ರಮಾಣವೇ ಶೇಕಡ ತೊಂಭತ್ತ ರಷ್ಟಿದ್ದಿತು. ಆದರೆ ಇತ್ತೀಚಿನ ಎರಡು ದಶಕಗಳೀಚೆಗೆ ಸರ್ಕಾರ ಕೊಡಮಾಡುವ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಮುಂತಾದ ವಸತಿ ಯೋಜನೆಗಳ ಲಾಭ ಪಡೆದ ಪರಿಶಿಷ್ಟ ಪಂಗಡಗಳು ತಮ್ಮ ಹುಲ್ಲು ಮನೆಯ ಬದಲಾಗಿ ಶಾಶ್ವತವಾದ ಮನೆಗಳನ್ನು ಕಾಣುವಂತಾಗಿದೆ. "ಆರ್ಥಿಕವಾಗಿ ಸ್ವಲ್ಪ ಮಟ್ಟಿಗೆ ಸಬಲರಾದವರು ಸರ್ಕಾರದ ಯೋಜನೆಗಳ ಗೊಡವೆಗೆ ಹೋಗದೆ ಸ್ವತಂತ್ರವಾಗಿ ಮನೆಗಳನ್ನು ನಿರ್ಮಿಸಿಕೊಂಡ ಉದಾಹರಣೆಗಳು ಉಂಟು. ಒಟ್ಟಾರೆಯಾಗಿ ಪಕ್ಕಾ (ಶಾಶ್ವತ) ಮನೆಗಳನ್ನು ಹೊಂದಿದ ಪರಿಶಿಷ್ಟ ಪಂಗಡಗಳ ಪ್ರಮಾಣ ಶೇಕಡ ೬೬.೯ರಷ್ಟಿದೆ. ಅರೆ ಶಾಶ್ವತ ಅಂದರೆ ಕೆಳ ಭಾಗವೆಲ್ಲಾ ಕಲ್ಲು ಅಥವಾ ಇಟ್ಟಿಗೆ ಗೋಡೆಗಳನ್ನು ನಿರ್ಮಿಸಿಕೊಂಡಿದ್ದು ಮೇಲ್ಭಾಗದಲ್ಲಿ ಹುಲ್ಲು ಮುಂತಾದ ತಾತ್ಕಾಲಿವಾದ



ಮೇಲು ಹೊದಿಕೆ ಹೊಂದಿದ ಮನೆಗಳ ಪ್ರಮಾಣ ಶೇಕಡ ೧೧.೮ ರಷ್ಟಿದೆ. ಇನ್ನೂ ತಾತ್ಕಾಲಿಕವಾದ ಗುಡಿಸಲು ರಚಿಸಿಕೊಂಡು ಜೀವಿಸುವ ಪರಿಶಿಷ್ಟ ಪಂಗಡಗಳಿದ್ದು ಬಹುತೇಕ ಅವು ಕಾಡಿನಲ್ಲಿ ವಾಸಿಸುವ ಬುಡಕಟ್ಟುಗಳಾಗಿವೆ. ಇಂತಹ ಸಮುದಾಯಗಳ ಮನೆಗಳು ಶೇಕಡ ೧೦.೦ರಷ್ಟಿವೆ." (ಮಾನವಾಭಿವೃದ್ಧಿ ವರದಿ:೨೦೦೫:೨)೫). ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಪಂಗಡಗಳನ್ನು ಗಮನಿಸಿದರೆ, ಡುಂಗ್ರಿ ಗರಾಸಿಯ ಮತ್ತು ಪಾರ್ಧಿಗಳು ಇನ್ನೂ ತಾತ್ಕಾಲಿಕವಾದ ಕಚ್ಚಾ ಮನೆಗಳಲ್ಲಿ ಹಾಗೂ ತಾತ್ಕಾಲಿಕವಾದ ಗುಡಸಲಿನಲ್ಲಿ ವಾಸಿಸುತ್ತಿವೆ. ಇವುಗಳ ಹೊರತಾಗಿ ಮೇಧಾ ಹಾಗೂ ಬೇಡ ಸಮುದಾಯದವರು ಸ್ವಂತ ಮನೆಗಳನ್ನು ಹೊಂದಿದ್ದು ಸರ್ಕಾರದ ವಸತಿ ಯೋಜನೆಗಳ ಲಾಭ ಪಡೆದು ಇದ್ದುದರಲ್ಲಿಯೇ ಸಂಪೂರ್ಣವಾಗಿ ಇಲ್ಲದಿದ್ದರೂ ವಾಸಕ್ಕೆ ಯೋಗ್ಯವಾದ ಮನೆಗಳನ್ನು ನಿರ್ಮಿಸಿಕೊಳ್ಳಲು ಯಶಸ್ವಿಯಾಗಿವೆ. ಇತ್ತೀಚೆಗೆ ವಸತಿ ಯೋಜನೆಯಡಿ ಮನೆಗಳನ್ನು ನಿರ್ಮಿಸಬೇಕೆಂದರೆ ಆ ಮನೆಯ ಮಹಿಳೆಯರ ಹೆಸರಿನಲ್ಲಿ ನಿವೇಶನಗಳು ಇರಬೇಕೆಂಬ ನಿಯಮ ಇರುವುದರಿಂದ ಬಹುತೇಕ ವಸತಿ ಯೋಜನೆಯ ಫಲಾನುಭವಿಗಳ ಹೆಸರು ಮಹಿಳೆಯರ ಹೆಸರಿನಲ್ಲಿಯೇ ಇವೆ. ಆದರೆ ನಿವೇಶನರಹಿತರಿಗೆ ಮನೆ ನೀಡಲಾಗದು ಎಂಬ ನಿಯಮವಿದೆ. ಡುಂಗ್ರಿಗರಾಸಿಯಾ ಸಮುದಾಯದ ಕೆಲವು ಕುಟುಂಬಗಳು ಮೀನುಗಾರಿಕೆಯನ್ನು ವೃತ್ತಿಯಾಗಿಸಿಕೊಂಡಿರುವುದರಿಂದ ಮೀನುಗಾರರ ಮಹಾಮಂಡಳಿಯವರು ಮನೆಗಳನ್ನು ನಿರ್ಮಿಸಿಕೊಟ್ಟಿರುವರು. ಅದೇ ರೀತಿ ಗುಡಾರನಗರದೊಳಗೆ ಅಲೆಮಾರಿಗಳಿಗಾಗಿಯೇ ಮನೆಗಳನ್ನು ನಿರ್ಮಿಸಿಕೊಟ್ಟಿದ್ದರಲ್ಲಿ ಸುಮಾರು ೫೦ ಡುಂಗ್ರಿಗರಾಸಿಯಾ ಸಮುದಾಯದವರು ವಸತಿ ಫಲಾನುಭವಿಗಳಾಗಿರುವರು. ಅದರಾಚೆಗೆ ಹೊಸಪೇಟೆಯ ಡುಂಗ್ರಿ ಗರಾಸಿಯಾ ಕುಟುಂಬಗಳಿಗೆ ಯಾವುದೇ ವಸತಿ ನಿಲಯದ ಸೌಲಭ್ಯವಿರದೆ ಚೆಕ್‌ಪೋಸ್ಟ್ ಬಳಿ ಗುಡಾರಗಳನ್ನು ನಿರ್ಮಿಸಿಕೊಂಡಿರುವರು. ಹಾಗೆಯೇ ಕಮಲಾಪುರದೊಳಗಿರುವ ಡುಂಗ್ರಿಗರಾಸಿಯಾ ಕುಟುಂಬಗಳಿಗೂ ವಸತಿ ಸೌಲಭ್ಯ ಇರುವುದಿಲ್ಲ. ಪಾರ್ಧಿ ಸಮುದಾಯ ನೆಲೆಸಲೆಂದು ಕಂಪ್ಲಿಯ ಹೊರವಲಯದೊಳಗೆ ೧.೬ ಎಕರೆ ಜಮೀನನ್ನು ಪುರಸಭೆಯು ಮಂಜೂರು ಮಾಡಿದ್ದುದಾಗಿ ವಕ್ತೃಗಳು ಹೇಳುವರು. ನಿವೇಶನಕ್ಕೆಂದು ನೀಡಿದ ಭೂಮಿಯು ಕೃಷಿಯೇತರ ಭೂಮಿಯೆಂದು ದಾಖಲೆ ಸೃಷ್ಟಿಸದೆ ಕೊಡಲಾಗಿತ್ತು. ತರುವಾಯ ಎನ್ ಎ ಮಾಡಿರುವರಾದರೂ ಪಾರ್ಧಿಗಳಿಗಾಗಿ ಕಾಯ್ದಿರಿಸಿದ ಭೂಮಿಯು ಪ್ರಸ್ತುತ ಊರ ಮಧ್ಯಭಾಗವಾಗಿ ಮಾರ್ಪಟ್ಟಿದೆ. ಹೀಗಾಗಿ ಪಾರ್ಧಿ ಸಮುದಾಯದವರನ್ನು ಸ್ಥಳಾಂತರಿಸುವ ಉದ್ದೇಶದಿಂದ ಆ ಕುಟುಂಬಗಳಿಗೆ ನಿವೇಶನಗಳನ್ನು ಹಂಚಿರಲಿಲ್ಲ. ನಿವೇಶನಗಳು ಫಲಾನುಭವಿಗಳಾಗುವವರ ಹೆಸರಿನಲ್ಲಿರದೆ ಹೋದರೆ ಅಂಥವರಿಗೆ ವಸತಿ ಯೋಜನೆಯ ಲಾಭ ಪಡೆಯಲು ಸಾಧ್ಯವಾಗುವುದಿಲ್ಲವೆಂದು ಹೇಳಲಾಗುತ್ತಿದೆ. ಇದೇ ಕಾರಣಕ್ಕೆ ಕಂಪ್ಲಿಯೊಳಗಿನ ಪಾರ್ಧಿ ಸಮುದಾಯದ ಒಂದು ಕುಟುಂಬದ ಹೊರತಾಗಿ ಇನ್ನುಳಿದ ೮೫ ಕುಟುಂಬಗಳಿಗೆ ವಸತಿ ಯೋಜನೆಯ ಲಾಭ ಪಡೆಯಲು ಸಾಧ್ಯವಾಗಿಲ್ಲ. ಇಂದಿಗೂ ಮುರುಕು ಗುಡಿಸಲು, ಗುಡಾರಗಳಲ್ಲಿಯೇ ಪಾರ್ಧಿ ಕುಟುಂಬಗಳು (ಕಂಪ್ಲಿ) ಬದುಕುತ್ತಿವೆ. ಹೊಸಪೇಟೆಯ ಊರಮ್ಮನ ಬಯಲಿನಲ್ಲಿರುವ ಪಾರ್ಧಿ ಕುಟುಂಬಗಳ ಸ್ಥಿತಿಯು ಬೇರಾಗಿಲ್ಲ. ಗುಡಾರನಗರದೊಳಗೆ ೧೬ ಕುಟುಂಬಗಳಿಗೆ ವಸತಿ

ಕಲ್ಪಿಸಿದೆಯಾದರೂ ಅಲೆಮಾರಿಗಳಾಗಿರುವ ಪಾರ್ಧಿ ಕುಟುಂಬಗಳು ವರ್ಷದ ಒಂದೆರಡು ದಿನಗಳು ಅಲ್ಲಿ ತಂಗಿದ್ದು ಮರಳಿ ದೇಶಾಂತರ ಸಂಚಾರಕ್ಕೆ ಹೋಗಿಬಿಡುವರು. ಹೀಗಾಗಿ ಈ ಸಮುದಾಯದ ವಸತಿ ಸಮಸ್ಯೆಯೂ ಪೂರ್ಣವಾಗಿ ಈಡೇರಿದಂತಾಗಿಲ್ಲ.

**ಕರ್ನಾಟಕದ ಪರಿಶಿಷ್ಟ ಪಂಗಡದ ಕುಟುಂಬಗಳು ಶೌಚಾಲಯ ಸೌಲಭ್ಯ ಪಡೆದ ವಿವರ**

ಕರ್ನಾಟಕದ ೫೦ ಅನುಸೂಚಿತ ಪರಿಶಿಷ್ಟ ಪಂಗಡಗಳಲ್ಲಿ ಶೇಕಡ ೪೦ ರಷ್ಟು ಸಮುದಾಯಗಳು ಗುಂಪುಗಳಾಗಿ ಪ್ರತ್ಯೇಕವಾಗಿ ಕಾಡಿನ ಮಧ್ಯಕ್ಕೋ ಅಥವಾ ಜನ ಸಮುದಾಯದಿಂದ ದೂರವಾಗಿಯೋ ಜೀವಿಸುತ್ತಿವೆ. ಇನ್ನುಳಿದ ಶೇಕಡ ೧೦ ರಷ್ಟು ಸಮುದಾಯಗಳು ಮಾತ್ರ ಜನ ಸಮುದಾಯದೊಂದಿಗೆ ಬೆರೆತು ಜೀವನ ಸಾಗಿಸುತ್ತಿವೆ. ಕರ್ನಾಟಕದ ಪರಿಶಿಷ್ಟ ಪಂಗಡಗಳು ಯಾವ ಸ್ವರೂಪದ ಶೌಚಾಲಯಗಳನ್ನು ಎಷ್ಟರಮಟ್ಟಿಗೆ ಬಳಸುತ್ತಿವೆ ಎಂಬುದನ್ನು ಇಲ್ಲಿ ಗಮನಿಸಲಾಗಿದೆ.

**ಪರಿಶಿಷ್ಟ ಪಂಗಡಗಳ ಶೌಚಾಲಯ ಸ್ವರೂಪದ ವಿವರ**

ಬಹುತೇಕ ನಗರ ಪ್ರದೇಶದಲ್ಲಿ ವಾಸಿಸುವ ಬೇಡ ಹಾಗೂ ಮೇದ ಸಮುದಾಯದ ಮಹಿಳೆಯರು ಶೇಕಡ ೪೫ರಷ್ಟು ತಮ್ಮ ಮನೆಯ ಆವರಣದೊಳಗೆ ಇರುವ ಶೌಚಾಲಯಗಳನ್ನು ಬಳಕೆ ಮಾಡಿಕೊಳ್ಳುವರು. ಉಳಿದ ಶೇಕಡ ೫೫ರಷ್ಟು ಮಹಿಳೆಯರು ಸಾರ್ವಜನಿಕ ಸಮುದಾಯ ಶೌಚಾಲಯಗಳನ್ನು ಬಳಕೆಮಾಡಿಕೊಳ್ಳುವರು. ಆದರೆ ಡುಂಗ್ರಿಗರಾಸಿಯಾ ಮತ್ತು ಪಾರ್ಧಿ ಸಮುದಾಯಗಳ ಮಹಿಳೆಯರಿಗೆ ಶೌಚಾಲಯವಿರಲಿ, ಕನಿಷ್ಠ ಮೈತೊಳೆದುಕೊಳ್ಳಲು ಸ್ನಾನಗೃಹವೂ ಇಲ್ಲ. ಬಯಲಿಗೆ ಸೀರೆಯೋ, ಗೋಣಿತಟ್ಟನ್ನೋ ಕಟ್ಟಿಕೊಂಡು ಅದರ ಮರೆಯೊಳಗೆ ಮೈತೊಳೆದುಕೊಳ್ಳಬೇಕಾದ ಸ್ಥಿತಿ ಇದೆ. ಈ ಎರಡೂ ಸಮುದಾಯದ ಮಹಿಳೆಯರು ನೂರರಷ್ಟು ಬಯಲು ಶೌಚಾಲಯಗಳನ್ನೇ ಅವಲಂಭಿಸಿರುವರು. ಒಟ್ಟಾರೆಯಾಗಿ ಹೇಳುವುದಾದರೆ ಮಹಿಳಾ ಆರ್ಥಿಕತೆಯ ಕೊರತೆ ಬುಡಕಟ್ಟು ಮಹಿಳೆಯರಲ್ಲಿಯೂ ಹೇರಳವಾಗಿ ಕಾಣುವುದು. ಪುರುಷನಷ್ಟೇ ಸಮಾನವಾಗಿ ದುಡಿಯುವ ಮಹಿಳೆಗೆ ಆರ್ಥಿಕ ಸ್ವಾತಂತ್ರ್ಯವಿಲ್ಲವಾಗಿದೆ. ಮೂಲತಃ ಮಾತೃಪ್ರಧಾನ ಕುಟುಂಬಗಳಲ್ಲಿ ಕುಟುಂಬದೊಳಗಿನ ಎಲ್ಲಾ ಕ್ರಿಯೆಗಳನ್ನು ನಿರ್ಧರಿಸಿ ನಿರ್ಣಯ ತೆಗೆದುಕೊಳ್ಳುವ ಹಕ್ಕು ಮಹಿಳೆಯರಿಗಿದೆ. ಆದರೆ ಇತ್ತೀಚೆಗೆ ಇತರ ಸಮುದಾಯಗಳ ಪ್ರಭಾವಕ್ಕೆ ಒಳಗಾದ ಬುಡಕಟ್ಟು ಪುರುಷರು ಮಹಿಳೆಯರ ಆರ್ಥಿಕ ಸ್ವಾವಲಂಭಿತನವನ್ನು ಕಸಿದುಕೊಳ್ಳುವಲ್ಲಿ ಮುಂಚೂಣಿಯಲ್ಲಿರುವನೇನೊ ಎಂಬ ಅನುಮಾನ ಕಾಡುತ್ತದೆ.

**೬.೫ ಬುಡಕಟ್ಟು ಮಹಿಳೆಯರ ರಾಜಕೀಯ ಸಬಲೀಕರಣ**

ಯಾವುದೇ ಪ್ರಾಣಿಯಾದರೂ ಸರಿ, ಅವುಗಳ ದೈಹಿಕ ಲಕ್ಷಣಗಳಿಂದ ಗಂಡು- ಹೆಣ್ಣು ಎಂದು ವಿಂಗಡಣೆ ಮಾಡಲಾಗುವುದು. ಇದಕ್ಕೆ ಮನುಷ್ಯನೇನೂ ಹೊರತಲ್ಲ. ಮನುಷ್ಯನೊಳಗಿನ ಭಾವನೆಗಳಿಗೆ ಹೆಣ್ಣು ಗಂಡೆಂಬ ಭೇದಗಳಿಲ್ಲ. ಭಾವನೆಗಳೆಲ್ಲವೂ ಒಂದೆ. ಪ್ರತಿಯೊಬ್ಬ ಮನುಷ್ಯನಿಗೂ ತಾನು ಉನ್ನತ ಹುದ್ದೆಗೆ ಹೋಗಬೇಕೆಂಬ ಆಸೆ ಇದ್ದೇ ಇರುತ್ತದೆ. ಆದರೆ ಅವಕಾಶಗಳು ಕೂಡಿ ಬರಬೇಕಷ್ಟೆ.

ಅದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುತೇಕವಾಗಿ ಅಧಿಕಾರವನ್ನು ಹೊಂದುವವರು ಬಂಡವಾಳಶಾಹಿಗಳಾಗಿ ಇರುತ್ತಾರೆ. ಅಷ್ಟೇ ಅಲ್ಲ, ಅಧಿಕಾರದ ಚುಕ್ಕಾಣಿ ಹಿಡಿಯುವವರೂ ಪುರುಷರಾಗಿರುತ್ತಾರೆ. ಪ್ರಜಾಪ್ರಭುತ್ವದ ದೊಡ್ಡ ಲೋಪ ದೋಷವೆಂದರೆ ಇದೇ ಆಗಿದೆ. ಭಾರತದಂತಹ ಜಾತಿ ವ್ಯವಸ್ಥೆಯಿಂದ ಕೂಡಿದ ದೇಶದಲ್ಲಿ ಬಂಡವಾಳಶಾಹಿಗಳಷ್ಟೇ ಪ್ರಬಲವಾದುದು ಜಾತಿ ಹಾಗೂ ಲಿಂಗವಾಗಿವೆ. ಜಾತಿ, ಹಣ ಮತ್ತು ಲಿಂಗ ಈ ಮೂರೇ ಕೊನೆಗೆ ಅಧಿಕಾರ ಪಾಲುಗಾರಿಕೆಯ ನಿರ್ಣಾಯಕ ಶಕ್ತಿಗಳಾಗುತ್ತವೆ. ಹೀಗಾಗಿ ಈ ದೇಶದಲ್ಲಿ ಬಂಡವಾಳ ಶಾಹಿಗಳು, ಪುರುಷರು ಮತ್ತು ಮೇಲ್ಜಾತಿಯವರು ತಮ್ಮನ್ನು ಮೀರಿಸುವವರು ಯಾರೂ ಇಲ್ಲವೆಂದೇ ಮೆರೆದಾಡುತ್ತಾರೆ. ಪ್ರಾಯಶಃ ಸಂವಿಧಾನದಲ್ಲಿ ಮಹಿಳೆಯರು ಹಾಗೂ ತಳವರ್ಗಗಳಿಗಾಗಿ ಮೀಸಲಾತಿ ಕಲ್ಪಿಸದೇ ಹೋಗಿದ್ದಲ್ಲಿ ಅವುಗಳಿಗೆ ಇಂದಿಗೂ ಅಧಿಕಾರವೆಂಬುದು ಕೇವಲ ಮರೀಚಿಕೆಯಾಗಿ ಉಳಿದುಬಿಡುವ ಸಾಧ್ಯತೆಯೇ ಹೆಚ್ಚಾಗಿತ್ತು. ಲೋಹಿಯಾರಂಥವರು ಈ ಕಾರಣಕ್ಕಾಗಿಯೇ ಅಲ್ಪಸಂಖ್ಯಾತ ಜಾತಿ ಹಾಗೂ ನಿರ್ಲಕ್ಷಿತ ಮಹಿಳೆಯರಿಗೆ ರಾಜಕೀಯ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ಅವಕಾಶ ಕಲ್ಪಿಸಬೇಕೆಂದು ತಿಳಿಸುತ್ತಾರೆ. (ಲೋಹಿಯಾ: ಜಾತಿವಿನಾಶ:೧೯೮೮:೨೪) ತಳ ಸಮುದಾಯಗಳಿಗೆ ಅಧಿಕಾರದ ಗದ್ದುಗೆ ಹಿಡಿಯಲು ಮತ್ತು ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಮೀಸಲಾತಿ ಪರಿಣಾಮಕಾರಿ ವ್ಯವಸ್ಥೆಯಾಗಿದೆ. ರಾಜಕೀಯವಾಗಿ ಬಲಾಢ್ಯರಾದ ವ್ಯಕ್ತಿಗಳು ಆರ್ಥಿಕವಾಗಿಯೂ ಬಲಾಢ್ಯರಾಗಿರುತ್ತಾರೆ. ಗಣಿ ಲೂಟಿಯ ತರುವಾಯ ಕರ್ನಾಟಕದ ರಾಜಕೀಯ ಕೇಂದ್ರಸ್ಥಾನ ಬಳ್ಳಾರಿಯೇ ಪ್ರಮುಖವಾದುದು ಎಂಬಂತೆ ಬಿಂಬಿತವಾಗುತ್ತಿತ್ತು. ಗಣಿ ಕಂಪನಿಗಳ ಗಣಿ ವ್ಯವಹಾರಕ್ಕೂ ಮತ್ತು ಕರ್ನಾಟಕ ರಾಜಕೀಯಕ್ಕೆ ನೇರ ಸಂಬಂಧವಿತ್ತು ಎಂಬುದು ರಾಜಕೀಯ ವಿಶ್ಲೇಷಕರ ವಾದವಾಗಿದೆ. ಬಳ್ಳಾರಿ, ಕಂಪ್ಲಿ, ಕೂಡ್ಲಿಗಿ, ಸಂಡೂರು, ಸಿರುಗುಪ್ಪ ವಿಧಾನಸಭಾ ಕ್ಷೇತ್ರಗಳು ಪರಿಶಿಷ್ಟ ಪಂಗಡ ಮೀಸಲಾತಿ ಕ್ಷೇತ್ರಗಳಾಗಿವೆ. ಆದರೆ ಮಹಿಳೆಯರಿಗೆಂದೇ ಮೀಸಲಾದ ಒಂದೇ ಒಂದು ಕ್ಷೇತ್ರವೂ ಬಳ್ಳಾರಿಯಲ್ಲಿಲ್ಲ. ಇಂತಹ ವ್ಯವಸ್ಥೆಯಲ್ಲಿ ಬುಡಕಟ್ಟು ಸಮುದಾಯದ ಮಹಿಳೆಯರಿಗೆ ವಿಧಾನಸಭಾ ಮೀಸಲಾತಿ ಕ್ಷೇತ್ರ ದೊರೆಯುವ ಮಾತು ದೂರವೇ ಉಳಿಯಿತು. ಅದರಲ್ಲೂ ಬೇಡರ ಹೊರತಾದ ಅಲ್ಪಸಂಖ್ಯಾತ ಬುಡಕಟ್ಟುಗಳಿಗಂತೂ ಅದು ಕನಸಿನ ಮಾತೇ ಸರಿ. ಮುಖ್ಯವಾಗಿ ಕರ್ನಾಟಕದಲ್ಲಿ ಹೆಚ್ಚಿನ ಪ್ರಮಾಣದ ಪರಿಶಿಷ್ಟ ಪಂಗಡದ ಎಮ್.ಎಲ್.ಎ ಗಳನ್ನು ನೀಡಿದ ಮೊದಲ ಜಿಲ್ಲೆ ಬಳ್ಳಾರಿ ಎಂದರೆ ತಪ್ಪಾಗಲಾರದು. ಕಳೆದ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರದಿಂದ ಲೋಕಸಭಾ ಸದಸ್ಯೆಯಾಗಿ ಶಾಂತ ಆಯ್ಕೆಯಾಗಿದ್ದರು. ಆದರೆ ಅದೇನೂ ಪರಿಶಿಷ್ಟ ಪಂಗಡದ ಮಹಿಳೆರಿಗೆ ಮೀಸಲಾಗಿದ್ದ ಕ್ಷೇತ್ರವಾಗಿರಲಿಲ್ಲ ಎಂಬುದನ್ನು ಮರೆಯಬಾರದು. ಶಾಂತಾರವರು ಲೋಕಸಭಾ ಸದಸ್ಯೆಯೇನೋ ಆದರು. ಆದರೆ ಆಡಳಿತದ ಪೂರ್ಣ ಫಲಾನುಭವಿಗಳು ಅವರ ಸೋದರರು ಎಂದು ಹೇಳಲಾಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಬೇಡ ಸಮುದಾಯದ ಹೊರತಾಗಿ ಪಾರ್ಧಿ, ಮೇಧ, ಡುಂಗ್ರಿಗರಾಸಿಯ ಬುಡಕಟ್ಟು ಸಮುದಾಯಗಳು ಇವೆ. ಆದರೆ ಅವುಗಳು ತೀರಾ ಅಲ್ಪ ಸಂಖ್ಯಾತ ಪರಿಶಿಷ್ಟ ಪಂಗಡ ಸಮುದಾಯಗಳಾಗಿವೆ. ಹೀಗಾಗಿ ಈ ಸಮುದಾಯಗಳು ಇಂದಿಗೂ

ರಾಜಕೀಯ ಪ್ರವೇಶ ಮಾಡಲು ಸಾಧ್ಯವಾಗಿಲ್ಲ. ಬಹುತೇಕ ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ, ಮತ್ತು ಜಿಲ್ಲಾ ಪಂಚಾಯಿತಿ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರಿಗಾಗಿ ಕಾಯ್ದಿರಿಸಿದ ಯಾವೊಂದೂ ಸ್ಥಾನವನ್ನು ನಾಯಕ ಸಮುದಾಯದ ಹೊರತಾಗಿರುವ ಇನ್ನುಳಿದ ಮೇದ, ಡುಂಗ್ರಿಗರಾಸಿಯಾ, ಪಾರ್ಧಿ ಸಮುದಾಯಗಳು ಪಡೆಯಲು ಸಾಧ್ಯವಾಗಿಲ್ಲ. ತಾವೂ ಸಹಿತ ಪರಿಶಿಷ್ಟ ಪಂಗಡದ ಮೀಸಲಾತಿ ಪಡೆಯುವವರು, ತಾವೂ ರಾಜಕೀಯ ಸ್ಥಾನ ಪಡೆಯಬಹುದು ಎಂಬುದು ತಿಳಿಯದಷ್ಟು ಮುಗ್ದತೆ ಹೊಂದಿದ ಬುಡಕಟ್ಟುಗಳು ಇವಾಗಿವೆ. ಪ್ರಾಯಶಃ ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಗಳ ಮೂಲಭೂತ ಸಮಸ್ಯೆಯೂ ಅದೇ ಆಗಿದೆ. ಕರ್ನಾಟಕದ ಅನುಸೂಚಿತ ಪಟ್ಟಿಯಲ್ಲಿರುವ ಒಟ್ಟು ೫೦ ಪರಿಶಿಷ್ಟ ಪಂಗಡಗಳಲ್ಲಿ ಇನ್ನೂ ೪೯ ಪರಿಶಿಷ್ಟ ಪಂಗಡ ಸಮುದಾಯಗಳು ತೀರಾ ಅಲ್ಪ ಸಂಖ್ಯಾತ ಸಮುದಾಯಗಳಾಗಿವೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂವಿಧಾನ ಬದ್ಧವಾಗಿ ಯಾವ ಯಾವ ಸವಲತ್ತುಗಳನ್ನು ಸರ್ಕಾರ ನೀಡುತ್ತದೆ ಎಂಬುದರ ಕುರಿತಾಗಿ ಅರಿಯಲಾರದಷ್ಟು ಮುಗ್ಧ ಸಮುದಾಯಗಳು ಅವಾಗಿವೆ. ಇಲ್ಲಿ ಚುನಾವಣೆಗೆ ನಿಲ್ಲುವ ವ್ಯಕ್ತಿ ತನ್ನ ಕೋಮಿಗೆ ಸೇರಿದವರ ಜನಸಂಖ್ಯೆ ಆ ಕ್ಷೇತ್ರದಲ್ಲಿ ಎಷ್ಟು ಎಂದು ಸ್ಪಷ್ಟವಾಗಿ ಸೂಚಿಸಬೇಕು. ಆ ವ್ಯಕ್ತಿಗೆ ಚುನಾವಣೆಗೆ ಅಭ್ಯರ್ಥಿಯಾಗಿಸಲು ಆ ಒಂದು ಅಂಶವನ್ನು ಪ್ರತಿಯೊಂದು ಪಕ್ಷಗಳು ಪರಿಗಣಿಸುತ್ತವೆ.

**ಒಬ್ಬ ವ್ಯಕ್ತಿ ಚುನಾವಣೆಗೆ ನಿಲ್ಲಲು ಗಮನಿಸುವ ಅತೀ ಮುಖ್ಯ ಅಂಶಗಳು ಈ ಕೆಳಗಿನಂತಿವೆ**

೧. ಅಭ್ಯರ್ಥಿ ಯಾವ ಜಾತಿ/ಕೋಮಿಗೆ ಸೇರಿದ್ದಾನೆ. ಮತ್ತು ಅವನು ನಿಲ್ಲುವ ಕ್ಷೇತ್ರದಲ್ಲಿ ಮತ ನೀಡುವವರಲ್ಲಿ ಅಭ್ಯರ್ಥಿಯ ಜಾತಿ/ಕೋಮಿಗೆ ಸೇರಿದ ಒಟ್ಟು ಜನಸಂಖ್ಯೆ ಎಷ್ಟಿದೆ.

೨. ಚುನಾವಣೆಗೆ ಅಭ್ಯರ್ಥಿಯಾಗಿ ನಿಲ್ಲುವವನು/ಳು ಆರ್ಥಿಕವಾಗಿ ಎಷ್ಟು ಸಬಲತೆಯನ್ನು ಹೊಂದಿದ್ದಾರೆ, ಚುನಾವಣೆಯಲ್ಲಿ ಆತ/ಕೆ ಹಣ ಎಷ್ಟು ವೆಚ್ಚ ಮಾಡಬಲ್ಲರು ಎಂಬುದನ್ನು ಗಮನಿಸಲಾಗುತ್ತದೆ ಮತ್ತು ಆ ವ್ಯಕ್ತಿ ಎಷ್ಟು ಪಾರ್ಟಿಫಂಡ್ ನೀಡಬಲ್ಲರು ಎಂಬುದನ್ನು ಗಮನಿಸಲಾಗುತ್ತದೆ.

ಆದರೆ ಚುನಾವಣೆಗೆ ಸೀಟು ಹಂಚಿಕೆ ಮಾಡುವ ಮುಖಂಡರು ಚುನಾವಣೆಗೆ ಸ್ಪರ್ಧಿಸುವ ವ್ಯಕ್ತಿಗಳು ಆ ಚುನಾವಣೆಗೆ ಸ್ಪರ್ಧಿಸಲು ನೈತಿಕವಾಗಿ ಎಷ್ಟು ಯೋಗ್ಯರಾಗಿರುವರು ಎಂಬುದನ್ನು ಗಮನಿಸುವುದಿಲ್ಲ. ಇಂದು ಚುನಾವಣಾ ಸ್ವರೂಪವೇ ಬದಲಾಗುತ್ತಿದೆ. ಜಾತಿ ನೋಡಿ, ಚುನಾವಣೆಗೆ ನಿಂತ ಅಭ್ಯರ್ಥಿಯ ಸಾಮರ್ಥ್ಯ ನೋಡಿ ಮತದಾರ ಮತ ಹಾಕುವುದನ್ನು ಮರತೇ ಬಿಟ್ಟಿದ್ದಾನೆ ಎನ್ನುವಷ್ಟು ಅಧ್ವಾನದ ಫಲಿತಾಂಶಗಳು ಚುನಾವಣಾ ವಿಚಾರದಲ್ಲಿ ಹೊರಬೀಳುತ್ತವೆ. ಬಹುತೇಕವಾಗಿ ಈ ದೇಶದಲ್ಲಿ ನಡೆಯುವ ಎಲ್ಲಾ ಸ್ವರೂಪದ ಚುನಾವಣೆಗಳು ಚುನಾವಣಾ ನೀತಿಯನ್ನು ಮುರಿದೇ ಚುನಾವಣೆ ನಡೆಸುತ್ತವೆ ಎಂಬುದನ್ನು ಗಮನಿಸಬಹುದಾಗಿದೆ. ಹಣ, ಹೆಂಡ, ಸೀರೆ, ಇತ್ಯಾದಿ ಚಿಕ್ಕ ಪುಟ್ಟ ಆಸೆಗಳನ್ನು ಮತದಾರನಲ್ಲಿ ತುಂಬಿ ಚುನಾವಣೆಯಲ್ಲಿ ಗೆಲ್ಲುವವರ ಪ್ರಮಾಣವೇ ಹೆಚ್ಚು. ಇಡೀ


ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತಿಗೆ ೪೦ ಸ್ಥಾನಗಳಿವೆ. ಇದರಲ್ಲಿ ಶೇಕಡ ೩೩ರಷ್ಟು ಮಹಿಳೆಯರಿಗೆಂದು ಮೀಸಲಿರಿಸಲಾಗಿದೆ. ಅಂದರೆ ಒಟ್ಟು ಮೂರು ಸ್ಥಾನಗಳು ಪರಿಶಿಷ್ಟ ಪಂಗಡದ ಮಹಿಳೆಯರಿಗೆಂದು ಮೀಸಲಿರಿಸಲಾಗಿದೆ. ಆದರೆ ಸ್ಪರ್ಧಿಸಿ ಚುನಾವಣೆ ಗೆದ್ದು ಅಧಿಕಾರದ ಗದ್ದುಗೆ ಹಿಡಿಯುವ ಮಹಿಳೆಯರು ನೆಪಮಾತ್ರದ ಸದಸ್ಯರಾಗಿರುತ್ತಾರೆ. ಅವರ ಆಡಳಿತದ ಚುಕ್ಕಾಣಿಯೆಲ್ಲಾ ಅವರ ಕುಟುಂಬದ ಪುರುಷರ ಕೈಯೊಳಗೆ ಇರುತ್ತದೆಂಬುದನ್ನು ಸ್ವತಃ ಚುನಾಯಿತ ಪ್ರತಿನಿಧಿಗಳೇ ಪರೋಕ್ಷವಾಗಿ ತಿಳಿಸಿದರು. ಇದೇ ಮಾದರಿಯನ್ನು ತಾಲೂಕು ಪಂಚಾಯತಿ ಹಾಗೂ ಗ್ರಾಮಪಂಚಾಯತಿ ಚುನಾವಣೆಗಳಲ್ಲಿಯೂ ಕಾಣಬಹುದು. ಕಳೆದ ೧೦ ವರ್ಷಗಳಲ್ಲಿ ಅಧ್ಯಯನಕ್ಕೆ ಒಳಗಾದ ಬೇಡ, ಮೇದ, ಡುಂಗ್ರಿಗರಾಸಿಯಾ, ಪಾರ್ಧಿ ಸಮುದಾಯಗಳಲ್ಲಿ ಚುನಾವಣೆಗೆ ನಿಂತು ವಿಜೇತರಾದವರ ಮಹಿಳೆಯರ ವಿವರ ಈ ಕೆಳಗಿನಂತಿದೆ.

**ಕೋಷ್ಟಕ ೬.೨೭ ತಾಲೂಕು ಪಂಚಾಯತಿ ಚುನಾವಣಾ ಕ್ಷೇತ್ರದಲ್ಲಿ ಪರಿಶಿಷ್ಟ ಪಂಗಡ ಹಾಗೂ ಇತರ ಮಹಿಳೆಯರ ಪ್ರಾತಿನಿಧ್ಯದ ವಿವರ**

| ತಾಲೂಕು | ಕ್ಷೇತ್ರಗಳು | ಪ.ಪಂ | ಸಾಮಾನ್ಯ/ಪಜಾ/ಇತರೆ |
|---|---|---|---|
| ಬಳ್ಳಾರಿ | ೩೨ | ೪ | ೧೧ |
| ಹಡಗಲಿ | ೧೭ | ೧ | ೭ |
| ಹಬೊ | ೧೬ | ೧ | ೭ |
| ಹೊಸಪೇಟೆ | ೧೮ | ೨ | ೭ |
| ಕೂಡ್ಲಿಗಿ | ೨೬ | ೪ | ೧೦ |
| ಸಂಡೂರು | ೨೧ | ೨ | ೭ |
| ಸಿರುಗುಪ್ಪ | ೨೦ | ೨ | ೮ |
| **ಒಟ್ಟು** | **೧೫೦** | **೧೬** | **೫೭** |

ಬಳ್ಳಾರಿ ಜಿಲ್ಲೆಯ ತಾಲೂಕುವಾರು ತಾಲೂಕು ಪಂಚಾಯತಿಯ ಒಟ್ಟು ಕ್ಷೇತ್ರಗಳು ೧೫೦ ಇವೆ. ಇದರಲ್ಲಿ ಪರಿಶಿಷ್ಟ ಜಾತಿ, ಪಂಗಡ, ಪ್ರವರ್ಗ ೧, ಅಲ್ಪಸಂಖ್ಯಾತ, ಸಾಮಾನ್ಯ ಮಹಿಳೆಯರು ಸೇರಿ ಒಟ್ಟು ೫೭ ಮಹಿಳೆಯರಿರುವರು. ಇದರಲ್ಲಿ ಪರಿಶಿಷ್ಟ ಪಂಗಡದ ಮಹಿಳೆಯರು ೧೬ ಇರುವರು. ಒಟ್ಟು ೭೩ ಸ್ಥಾನಗಳನ್ನು ಮಹಿಳೆಯರವಾಗಿದ್ದರೆ, ಇನ್ನುಳಿದ ೭೭ ಸ್ಥಾನಗಳನ್ನು ಪುರುಷರು ಅಲಂಕರಿಸಿರುವರು.


ಲಂಬ ಚಿತ್ರ ೬.೨೭ ತಾಲೂಕು ಪಂಚಾಯತಿ ಚುನಾವಣಾ ಕ್ಷೇತ್ರದಲ್ಲಿ ಪರಿಶಿಷ್ಟ ಪಂಗಡ ಹಾಗೂ ಇತರ ಮಹಿಳೆಯರ ಪ್ರಾತಿನಿಧ್ಯದ ವಿವರ




| ಕೋಷ್ಟಕ ೬.೨೮ ಲೋಕಸಭೆ, ವಿಧಾನಸಭಾ, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಗ್ರಾಮ ಪಂಚಾಯತ್, ಪ.ಪಂ/ಪುಸ/ನಗರಸಭೆಯನ್ನು ಪ್ರತಿನಿಧಿಸಿದ ಜಾತಿವಾರು ಬುಡಕಟ್ಟು ಮಹಿಳೆಯರ ವಿವರ | | | | | | |
|---|---|---|---|---|---|---|
| ಸಮುದಾಯ | ಲೋಕಸಭೆ | ವಿಧಾನಸಭೆ | ಜಿಲ್ಲಾ ಪಂಚಾಯತ್ | ತಾಲೂಕು ಪಂಚಾಯತ್ | ಗ್ರಾಮಪಂಚಾಯತ್ | ಪಪಂ/ ಪುಸ/ ನಗರಸಭೆ |
| ಬೇಡ | ೦೧ | – | ೦೧ | ೧೬ | ೨೪೩ | ೧೬ |
| ಮೇದ | – | – | – | – | – | – |
| ಡುಂಗ್ರಿ ಗರಾಸಿಯಾ | – | – | – | – | – | – |
| ಪಾರ್ಧಿ | – | – | – | – | – | – |

ಬಳ್ಳಾರಿ ಜಿಲ್ಲೆಯಲ್ಲಿ ಕಳೆದ ಎರಡು ಚುನಾವಣೆಗಳನ್ನು ನೋಡಲಾಗಿ ಹಿಂದಿನ ಲೋಕಸಭೆಯನ್ನು ಶಾಂತಾ ಅವರು ಪ್ರತಿನಿಧಿಸಿದ್ದರು. ಶಾಂತ ಅವರು ಬೇಡ ಸಮುದಾಯದವರು. ಬಳ್ಳಾರಿ ಜಿಲ್ಲೆಯಲ್ಲಿ ವಿಧಾನ ಸಭಾ ಕ್ಷೇತ್ರಕ್ಕೆ ಪರಿಶಿಷ್ಟ ಪಂಗಡದ ಐದು ಮೀಸಲಾತಿ ಕ್ಷೇತ್ರಗಳಿವೆ. ಆದರೆ ಮಹಿಳೆಯರಿಗಾಗಿ ಒಂದು ಸ್ಥಾನವನ್ನೂ ಮೀಸಲಿರಿಸಿರುವುದಿಲ್ಲ. ಜಿಲ್ಲಾ ಪಂಚಾಯತಿ ೪೦ ಸ್ಥಾನಗಳಲ್ಲಿ ಪರಿಶಿಷ್ಟ ಪಂಗಡದ ಮಹಿಳೆಗೆ ಒಂದು ಸ್ಥಾನವನ್ನು ಮಾತ್ರ ಕಾಯ್ದಿರಿಸಲಾಗಿದೆ. ಏಳು ತಾಲೂಕು ಪಂಚಾಯತಿಯ ಒಟ್ಟು ಕ್ಷೇತ್ರಗಳಲ್ಲಿ ೧೬ ಸ್ಥಾನಗಳಿಗೆ ಪರಿಶಿಷ್ಟ ಪಂಗಡದ ಮಹಿಳೆಯರು ಪ್ರತಿನಿಧಿಸಿರುವರು. ಗ್ರಾಮಪಂಚಾಯತಿಯ ೨೬೫ ಹಾಗೂ ಪಟ್ಟಣ ಪಂಚಾಯತಿ/ಪುರಸಭೆ/ನಗರಸಭೆಗಳಲ್ಲಿ ಒಟ್ಟು ೧೬ ಸ್ಥಾನಗಳನ್ನು ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರು ಪ್ರತಿನಿಧಿಸಿರುವರು. ಲೋಕ ಸಭೆಯಿಂದ

**ವೃತ್ತ ಚಿತ್ರ ೬.೨೮ ಲೋಕಸಭೆ, ವಿಧಾನಸಭಾ, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಗ್ರಾಮ ಪಂಚಾಯತ್, ಪ.ಪಂ/ಪುಸ/ನಗರಸಭೆಯನ್ನು ಪ್ರತಿನಿಧಿಸಿದ ಜಾತಿವಾರು ಬುಡಕಟ್ಟು ಮಹಿಳೆಯರ ವಿವರ**




ಹಿಡಿದು ಕನಿಷ್ಠವಾದ ಗ್ರಾಮ ಪಂಚಾಯತಿಯವರೆಗೂ ಪರಿಶಿಷ್ಟ ಪಂಗಡದ ಮಹಿಳಾ ಸ್ಥಾನಗಳನ್ನು ಕೇವಲ ಬೇಡ ಸಮುದಾಯದವರೇ ಪ್ರತಿನಿಧಿಸಿರುವರು. ಬಳ್ಳಾರಿ ಜಿಲ್ಲೆಯಲ್ಲಿರುವ ಒಟ್ಟು ನಾಲ್ಕು ಬುಡಕಟ್ಟುಗಳಲ್ಲಿ ರಾಜಕೀಯ ಪ್ರಾತಿನಿಧಿಕರಣವು ಕೇವಲ ಬೇಡ ಮಹಿಳೆಯರು ಮಾತ್ರ ಪ್ರತಿನಿಧಿಸಿರುವರು. ಅಂದರೆ ಇನ್ನುಳಿದ ಮೂರು ಬುಡಕಟ್ಟುಗಳಲ್ಲಿ ಮೂರು ಬುಡಕಟ್ಟುಗಳೂ ರಾಜಕೀಯದಿಂದ ದೂರವುಳಿದಿರುವರು. ಮೊದಲನೇದಾಗಿ ಸಂಖ್ಯಾಬಲದ ಕೊರತೆ ಮೇದ ಸಮುದಾಯಕ್ಕಿಲ್ಲವಾದುದರಿಂದ ಅವರು ರಾಜಕೀಯ ಕ್ಷೇತ್ರವನ್ನು ಪ್ರವೇಶಿಸುವುದು ಕಷ್ಟಸಾಧ್ಯದ ಕೆಲಸ. ಇನ್ನು ಡುಂಗ್ರಿಗರಾಸಿಯಾ, ಪಾರ್ಧಿ ಸಮುದಾಯಗಳು ತಮ್ಮ ಜಾತಿ ಸರ್ಟಿಫಿಕೇಟ್ ತೆಗೆದುಕೊಳ್ಳುವುದೇ ಕಷ್ಟವಾಗಿರುವಾಗ ಇನ್ನು ರಾಜಕೀಯ ಸ್ಥಾನಗಳಿಗೆ ಸ್ಪರ್ಧಿಯಾಗಿ ನಿಂತು ಜಯಿಸುವುದು ದೂರದ ಮಾತು.

### ೫.೬ ಮಹಿಳೆಯರ ನಿರ್ಧಾರ ತೆಗೆದುಕೊಳ್ಳುವಿಕೆಯಲ್ಲಿನ ಸಶಕ್ತೀಕರಣದ ಪ್ರಕ್ರಿಯೆ

ಪ್ರತಿಯೊಂದು ಕುಟುಂಬವೂ ನಂಬಿಕೆಯ ಮೇಲೆಯೇ ನಡೆಯುವುದು. ಸಂಸಾರದ ನೊಗವನ್ನು ಪ್ರತಿಯೊಬ್ಬರೂ ಹೊರಬೇಕು. ಆದರೆ ಹೆಚ್ಚಿನ ಭಾರ ಗಂಡ ಹೆಂಡತಿಯರದೇ ಆಗಿರುತ್ತದೆ. ಗಂಡ ಹೆಂಡತಿ ಎಂಬುದು ಜೋಡೆತ್ತು ಇದ್ದಂತೆ. ಅವು ಸಮಾನವಾಗಿ ಎಳೆದಾಗ ಮಾತ್ರ ಸಂಸಾರ ಸರಾಗವಾಗಿ ಸಾಗುವುದು. ಇಲ್ಲದಿದ್ದರೆ ಸಂಸಾರ ಎಂಬುದು ಎಡಬಿಡಂಗಿಯಾಗುವುದು. ಈ ಸಂಸಾರದ ನೊಗ ಹೊತ್ತು ಹೊರಡುವ ಜೋಡಿಗಳು ಯಾವ ನಿಟ್ಟಿನಲ್ಲಿ ಸಾಗಿದರೆ ಒಳಿತು ಎಂಬುದನ್ನು ನಿರ್ಧರಿಸುವ ಹಾಗೂ ನಿರ್ಣಯಿಸುವ ಹೊಣೆ ಕುಟುಂಬದಲ್ಲಿ ಯಾರು ಹೋರುವರು ಎಂಬುದೇ ಮುಖ್ಯವಾದ ಪ್ರಶ್ನೆ. ಕುಟುಂಬದ ಹೊಣೆಗಾರಿಕೆಯ ಕುರಿತು ಯಾರೇ ನಿರ್ಣಯ ಕೈಗೊಳ್ಳಲಿ, ಅದು ಸರಿದಿಕ್ಕಿನಲ್ಲಿರಬೇಕಷ್ಟೆ.




ಸಮೀಕ್ಷೆಗೆ ಒಳಪಟ್ಟ ಬೇಡ, ಮೇದ, ಡುಂಗ್ರಿಗರಾಸಿಯಾ, ಪಾರ್ಧಿ ಸಮುದಾಯದ ಮಹಿಳೆಯರನ್ನು ನಿಮ್ಮ ಕುಟುಂಬಗಳಲ್ಲಿ ನಿರ್ಧಾರ ಅಥವಾ ನಿರ್ಣಯಗಳನ್ನು ತೆಗೆದುಕೊಳ್ಳುವವರು ಯಾರು ಎಂದು ಪ್ರಶ್ನಿಸಿದಾಗ ಆ ಸಮುದಾಯದ ಮಹಿಳೆಯರಿಂದ ಬಂದ ಪ್ರತಿಕ್ರಿಯೆ ಈ ಕೆಳಗಿನಂತಿದೆ.

**ಕೋಷ್ಟಕ ೬.೨೯ ಸಮೀಕ್ಷೆಗೊಳಪಟ್ಟ ಮಹಿಳೆಯರು ಕುಟುಂಬದಲ್ಲಿ ತೆಗೆದುಕೊಳ್ಳುವ ನಿರ್ಧಾರ ಹಾಗೂ ನಿರ್ಣಯಗಳ ಕುರಿತಾದ ಅಭಿಪ್ರಾಯಗಳು**

| ಕ್ರಸಂ | ಅಭಿಪ್ರಾಯ | ಬೇಡ | ಮೇದ | ಡುಂಗ್ರಿ ಗರಾಸಿಯಾ | ಪಾರ್ಧಿ | ಒಟ್ಟು |
|---|---|---|---|---|---|---|
| ೧ | ಸ್ವತಃ | ೧೧ | ೦೫ | ೧೦ | ೧೨ | ೩೮ |
| ೨ | ಗಂಡ | ೬೮ | ೭೨ | ೩೫ | ೪೬ | ೨೨೧ |
| ೩ | ಇಬ್ಬರೂ ಒಟ್ಟಿಗೆ | ೫೮ | ೩೮ | ೫೪ | ೬೩ | ೨೧೩ |
| ೪ | ಮಾವ | ೩೨ | ೫೩ | ೦೮ | ೦೯ | ೧೦೨ |
| ೫ | ಅತ್ತೆ | ೨೦ | ೧೩ | ೦೭ | ೦೬ | ೪೬ |
| ೬ | ಕುಟುಂಬದ ಸದಸ್ಯರು ಒಟ್ಟಾಗಿ | ೦೮ | ೦೮ | ೭೦ | ೬೮ | ೧೫೪ |
| ೭ | ಗಂಡು ಮಕ್ಕಳು | ೧೫ | ೧೬ | ೧೬ | ೦೬ | ೫೩ |
| | ಒಟ್ಟು | ೨೧೨ | ೨೦೫ | ೨೦೦ | ೨೧೦ | ೮೨೭ |

**ಲಂಬ ಚಿತ್ರ ೬.೨೯. ಸಮೀಕ್ಷೆಗೊಳಪಟ್ಟ ಮಹಿಳೆಯರು ಕುಟುಂಬದಲ್ಲಿ ತೆಗೆದುಕೊಳ್ಳುವ ನಿರ್ಧಾರ ಹಾಗೂ ನಿರ್ಣಯಗಳ ಕುರಿತಾದ ಅಭಿಪ್ರಾಯಗಳು**



ಬೇಡ ಸಮುದಾಯದಲ್ಲಿ ಸ್ವತಃ ತಾವೇ ನಿರ್ಧಾರ ತೆಗೆದುಕೊಳ್ಳುವುದಾಗಿ ೧೧ ಮಹಿಳೆಯರು ತಿಳಿಸಿದರು. ಗಂಡನ ನಿರ್ಣಯವನ್ನು ಅನುಸರಿಸಿ ಕುಟುಂಬ ನಡೆಯುವುದಾಗಿ ೬೮ ಮಹಿಳೆಯರು, ಗಂಡ ಹೆಂಡತಿ ಒಟ್ಟಿಗೆ ನಿರ್ಣಯ ತೆಗೆದುಕೊಳ್ಳುವುದಾಗಿ ೫೮ ಮಹಿಳೆಯರು, ಮನೆಯ ಯಜಮಾನನಾಗಿ ಮಾವನು ನಿರ್ಣಯ ತೆಗೆದುಕೊಳ್ಳುವನೆಂದು ೩೨ ಮಹಿಳೆಯರು, ಅತ್ತೆಯ ಮನೆ ಯಜಮಾನಿಯಾಗಿದ್ದು ಅತ್ತೆಯ ನಿರ್ಣಯದಂತೆ ಕುಟುಂಬ ಜರುಗುವುದಾಗಿ ೨೦ ಮಹಿಳೆಯರು, ಕುಟುಂಬದ ಸದಸ್ಯರು ಒಟ್ಟಾಗಿ ನಿರ್ಧರಿಸಿ ನಿರ್ಣಯ ಕೈಗೊಳ್ಳುವುದಾಗಿ ೮ ಮಹಿಳೆಯರು, ಮನೆಯ ಯಜಮಾನಿಕೆಯನ್ನು ಮಗ ನೋಡಿಕೊಳ್ಳುತ್ತಿದ್ದು ಅವನೇ ನಿರ್ಣಯ ತೆಗೆದುಕೊಳ್ಳುವನೆಂದು ೧೫ ಮಹಿಳೆಯರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಮೇದ ಸಮುದಾಯದಲ್ಲಿ ಸ್ವತಃ ತಾವೇ ನಿರ್ಧಾರ ತೆಗೆದುಕೊಳ್ಳುವುದಾಗಿ ೦೫ ಮಹಿಳೆಯರು, ಗಂಡನ ನಿರ್ಣಯವನ್ನು ಅನುಸರಿಸಿ ಕುಟುಂಬ ನಡೆಯುವುದಾಗಿ ೭೨ ಮಹಿಳೆಯರು, ಗಂಡ ಹೆಂಡತಿ ಒಟ್ಟಿಗೆ ನಿರ್ಣಯ ತೆಗೆದುಕೊಳ್ಳುವುದಾಗಿ ೩೮ ಮಹಿಳೆಯರು, ಮನೆಯ ಯಜಮಾನನಾಗಿ ಮಾವನು ನಿರ್ಣಯ ತೆಗೆದುಕೊಳ್ಳುವನೆಂದು ೫೩ ಮಹಿಳೆಯರು, ಅತ್ತೆಯೆ ಮನೆ ಯಜಮಾನಿಯಾಗಿದ್ದು ಅತ್ತೆಯ ನಿರ್ಣಯದಂತೆ ಕುಟುಂಬ ಜರಗುವುದಾಗಿ ೧೩ ಮಹಿಳೆಯರು, ಕುಟುಂಬದ ಸದಸ್ಯರು ಒಟ್ಟಾಗಿ ನಿರ್ಧರಿಸಿ ನಿರ್ಣಯ ಕೈಗೊಳ್ಳುವುದಾಗಿ ೮ ಮಹಿಳೆಯರು, ಮನೆಯ ಯಜಮಾನಿಕೆಯನ್ನು ಮಗ ನೋಡಿಕೊಳ್ಳುತ್ತಿದ್ದು ಅವನೇ ನಿರ್ಣಯ ತೆಗೆದುಕೊಳ್ಳುವನೆಂದು ೧೬ ಮಹಿಳೆಯರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಡುಂಗ್ರಿ ಗರಾಸಿಯಾ ಸಮುದಾಯದಲ್ಲಿ ಸ್ವತಃ ತಾವೇ ನಿರ್ಧಾರ ತೆಗೆದುಕೊಳ್ಳುವುದಾಗಿ ೧೦ ಮಹಿಳೆಯರು, ಗಂಡನ ನಿರ್ಣಯವನ್ನು ಅನುಸರಿಸಿ ಕುಟುಂಬ ನಡೆಯುವುದಾಗಿ ೩೫ ಮಹಿಳೆಯರು, ಗಂಡ ಹೆಂಡತಿ ಒಟ್ಟಿಗೆ ನಿರ್ಣಯ ತೆಗೆದುಕೊಳ್ಳುವುದಾಗಿ ೫೪ ಮಹಿಳೆಯರು, ಮನೆಯ ಯಜಮಾನನಾಗಿ ಮಾವನು ನಿರ್ಣಯ ತೆಗೆದುಕೊಳ್ಳುವನೆಂದು ೮ ಮಹಿಳೆಯರು, ಅತ್ತೆಯೆ ಮನೆ ಯಜಮಾನಿಯಾಗಿದ್ದು ಅತ್ತೆಯ ನಿರ್ಣಯದಂತೆ ಕುಟುಂಬ ಜರಗುವುದಾಗಿ ೭ ಮಹಿಳೆಯರು, ಕುಟುಂಬದ ಸದಸ್ಯರು ಒಟ್ಟಾಗಿ ನಿರ್ಧರಿಸಿ ನಿರ್ಣಯ ಕೈಗೊಳ್ಳುವುದಾಗಿ ೭೦ ಮಹಿಳೆಯರು, ಮನೆಯ ಯಜಮಾನಿಕೆಯನ್ನು ಮಗ ನೋಡಿಕೊಳ್ಳುತ್ತಿದ್ದು ಅವನೇ ನಿರ್ಣಯ ತೆಗೆದುಕೊಳ್ಳುವನೆಂದು ೧೬ ಮಹಿಳೆಯರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಪಾರ್ಧಿ ಸಮುದಾಯದಲ್ಲಿ ಸ್ವತಃ ತಾವೇ ನಿರ್ಧಾರ ತೆಗೆದುಕೊಳ್ಳುವುದಾಗಿ ೧೨ ಮಹಿಳೆಯರು, ಗಂಡನ ನಿರ್ಣಯವನ್ನು ಅನುಸರಿಸಿ ಕುಟುಂಬ ನಡೆಯುವುದಾಗಿ ೪೬ ಮಹಿಳೆಯರು, ಗಂಡ ಹೆಂಡತಿ ಒಟ್ಟಿಗೆ ನಿರ್ಣಯ ತೆಗೆದುಕೊಳ್ಳುವುದಾಗಿ ೬೩ ಮಹಿಳೆಯರು, ಮನೆಯ ಯಜಮಾನನಾಗಿ ಮಾವನು ನಿರ್ಣಯ ತೆಗೆದುಕೊಳ್ಳುವನೆಂದು ೯ ಮಹಿಳೆಯರು, ಅತ್ತೆಯೆ ಮನೆ ಯಜಮಾನಿಯಾಗಿದ್ದು ಅತ್ತೆಯ ನಿರ್ಣಯದಂತೆ ಕುಟುಂಬ ಜರಗುವುದಾಗಿ ೬ ಮಹಿಳೆಯರು, ಕುಟುಂಬದ ಸದಸ್ಯರು ಒಟ್ಟಾಗಿ ನಿರ್ಧರಿಸಿ ನಿರ್ಣಯ ಕೈಗೊಳ್ಳುವುದಾಗಿ ೬೮ ಮಹಿಳೆಯರು, ಮನೆಯ ಯಜಮಾನಿಕೆಯನ್ನು ಮಗ ನೋಡಿಕೊಳ್ಳುತ್ತಿದ್ದು ಅವನೇ ನಿರ್ಣಯ ತೆಗೆದುಕೊಳ್ಳುವನೆಂದು ೬ ಮಹಿಳೆಯರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು.


ಸಮೀಕ್ಷೆಗೆ ಒಳಪಡಿಸಿದ ನಾಲ್ಕು ಸಮುದಾಯಗಳಲ್ಲಿ ಸ್ವತಃ ತಾವೇ ನಿರ್ಧಾರ ತೆಗೆದುಕೊಳ್ಳುವುದಾಗಿ ಒಟ್ಟು ೩೮ ಮಹಿಳೆಯರು, ಗಂಡನ ನಿರ್ಣಯವನ್ನು ಅನುಸರಿಸಿ ಕುಟುಂಬ ನಡೆಯುವುದಾಗಿ ೨೨೧ ಮಹಿಳೆಯರು, ಗಂಡ ಹೆಂಡತಿ ಒಟ್ಟಿಗೆ ನಿರ್ಣಯ ತೆಗೆದುಕೊಳ್ಳುವುದಾಗಿ ೨೧೩ ಮಹಿಳೆಯರು, ಮನೆಯ ಯಜಮಾನನಾಗಿ ಮಾವನು ನಿರ್ಣಯ ತೆಗೆದುಕೊಳ್ಳುವನೆಂದು ೧೦೨ ಮಹಿಳೆಯರು, ಅತ್ತೆಯೆ ಮನೆ ಯಜಮಾನಿಯಾಗಿದ್ದು ಅತ್ತೆಯ ನಿರ್ಣಯದಂತೆ ಕುಟುಂಬ ಜರಗುವುದಾಗಿ ೪೬ ಮಹಿಳೆಯರು, ಕುಟುಂಬದ ಸದಸ್ಯರು ಒಟ್ಟಾಗಿ ನಿರ್ಧರಿಸಿ ನಿರ್ಣಯ ಕೈಗೊಳ್ಳುವುದಾಗಿ ೧೫೪ ಮಹಿಳೆಯರು, ಮನೆಯ ಯಜಮಾನಿಕೆಯನ್ನು ಮಗ ನೋಡಿಕೊಳ್ಳುತ್ತಿದ್ದು ಅವನೇ ನಿರ್ಣಯ ತೆಗೆದುಕೊಳ್ಳುವನೆಂದು ೫೩ ಮಹಿಳೆಯರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಶೇಕಡವಾರುಗಳಲ್ಲಿ ಹೇಳುವುದಾದರೆ ಸ್ವತಃ ನಿರ್ಣಯ ಕೈಗೊಳ್ಳುವವರು ಶೇಕಡ ೪.೫೯, ಗಂಡ ನಿರ್ಣಯ ತೆಗೆದುಕೊಳ್ಳುವನು ಎನ್ನುವವರು ಶೇಕಡ ೨೬.೭೨, ಇಬ್ಬರೂ ಒಟ್ಟಾಗಿ ನಿರ್ಣಯ ತೆಗೆದುಕೊಳ್ಳುತ್ತೇವೆ ಎನ್ನುವವರು ಶೇಕಡ ೨೫.೭೫, ಮಾವ ನಿರ್ಣಯ ತೆಗೆದುಕೊಳ್ಳುವನು ಎನ್ನುವವರು ಶೇಕಡ ೧೨.೩೪, ಅತ್ತೆ ನಿರ್ಣಯ ತೆಗೆದುಕೊಳ್ಳುವರು ಎನ್ನುವವರು ಶೇಕಡ ೫.೫೬, ಕುಟುಂಬದ ಸದಸ್ಯರು ಒಟ್ಟಾಗಿ ನಿರ್ಣಯ ತೆಗೆದುಕೊಳ್ಳುತ್ತೇವೆ ಎನ್ನುವವರು ಶೇಕಡ ೧೮.೬೨, ಗಂಡುಮಕ್ಕಳು ನಿರ್ಣಯ ತೆಗೆದುಕೊಳ್ಳುವನು ಎನ್ನುವವರು ಶೇಕಡ ೬.೪೦ ಮಹಿಳೆಯರು ಅಭಿಪ್ರಾಯ ವ್ಯಕ್ತಪಡಿಸಿದರು.

**ಕೋಷ್ಟಕ ೬.೩೦ ಸಮೀಕ್ಷೆಗೊಳಪಟ್ಟ ಮಹಿಳೆಯರು ಕುಟುಂಬದಲ್ಲಿ ಸ್ವ- ಉದ್ಯೋಗದಲ್ಲಿ ನಿರ್ಧಾರ ತೆಗೆದುಕೊಳ್ಳುವುದರ ಕುರಿತು ಅಭಿಪ್ರಾಯಗಳು**

| ಕ್ರಸಂ | ಅಭಿಪ್ರಾಯ | ಬೇಡ | ಮೇದ | ಡುಂಗ್ರಿ ಗರಾಸಿಯಾ | ಪಾರ್ಧಿ | ಒಟ್ಟು |
|---|---|---|---|---|---|---|
| ೧ | ಸ್ವತಃ | ೩೨ | ೦೯ | ೦೯ | ೧೬ | ೬೬ |
| ೨ | ಗಂಡ | ೫೬ | ೭೮ | ೪೮ | ೪೮ | ೨೩೦ |
| ೩ | ಇಬ್ಬರೂ ಒಟ್ಟಿಗೆ | ೭೨ | ೮೦ | ೯೭ | ೧೦೨ | ೩೫೧ |
| ೪ | ಇತರರು | – | ೧೮ | ೩೬ | ೪೪ | ೯೮ |
| ೫ | ಅನ್ವಯಿಸುವುದಿಲ್ಲ | ೫೨ | ೨೦ | ೧೦ | – | ೮೨ |
| | ಒಟ್ಟು | ೨೧೨ | ೨೦೫ | ೨೦೦ | ೨೧೦ | ೮೨೭ |

ಬೇಡ ಸಮುದಾಯದಲ್ಲಿ ಸ್ವ-ಉದ್ಯೋಗಕ್ಕೆ ಸಂಬಂಧಿಸಿದಂತೆ ಸ್ವತಃ ತಾವೇ ನಿರ್ಧಾರ ತೆಗೆದುಕೊಳ್ಳುವುದಾಗಿ ೩೨ ಮಹಿಳೆಯರು, ಗಂಡನ ನಿರ್ಣಯದಂತೆ ಸ್ವ-ಉದ್ಯೋಗ ಕೈಗೊಳ್ಳುವುದಾಗಿ ೫೬, ಇಬ್ಬರೂ ಒಟ್ಟಿಗೆ ನಿರ್ಣಯ ಕೈಗೊಳ್ಳುವುದಾಗಿ ೭೨, ತಮಗೆ ಅನ್ವಯಿಸುವುದಿಲ್ಲ ಎಂದು ಹೇಳಿದವರು ೫೨ ಮಹಿಳೆಯರಿರುವರು. ಮೇದ ಸಮುದಾಯದಲ್ಲಿ ಸ್ವ-ಉದ್ಯೋಗಕ್ಕೆ ಸಂಬಂಧಿಸಿದಂತೆ ಸ್ವತಃ ತಾವೇ ನಿರ್ಧಾರ ತೆಗೆದುಕೊಳ್ಳುವುದಾಗಿ ೦೯ ಮಹಿಳೆಯರು, ಗಂಡನ ನಿರ್ಣಯದಂತೆ ಸ್ವ-


**ಲಂಬ ಚಿತ್ರ ೬.೩೦ ಸಮೀಕ್ಷೆಗೊಳಪಟ್ಟ ಮಹಿಳೆಯರು ಕುಟುಂಬದಲ್ಲಿ ಸ್ವ- ಉದ್ಯೋಗದಲ್ಲಿ ನಿರ್ಧಾರ ತೆಗೆದುಕೊಳ್ಳುವುದರ ಕುರಿತು ಅಭಿಪ್ರಾಯಗಳು**




ಉದ್ಯೋಗ ಕೈಗೊಳ್ಳುವುದಾಗಿ ೭೮, ಇಬ್ಬರೂ ಒಟ್ಟಿಗೆ ನಿರ್ಣಯ ಕೈಗೊಳ್ಳುವುದಾಗಿ ೮೦, ಕುಟುಂಬದ ಇತರರ ನಿರ್ಣಯಗಳನ್ನು ಅನುಸರಿಸುವುದಾಗಿ ೧೮, ತಮಗೆ ಅನ್ವಯಿಸುವುದಿಲ್ಲ ಎಂದು ಹೇಳಿದವರು ೨೦ ಮಹಿಳೆಯರಿರುವರು. ಡುಂಗ್ರಿ ಗರಾಸಿಯಾ ಸಮುದಾಯದಲ್ಲಿ ಸ್ವ–ಉದ್ಯೋಗಕ್ಕೆ ಸಂಬಂಧಿಸಿದಂತೆ ಸ್ವತಃ ತಾವೇ ನಿರ್ಧಾರ ತೆಗೆದುಕೊಳ್ಳುವುದಾಗಿ ೦೯ ಮಹಿಳೆಯರು, ಗಂಡನ ನಿರ್ಣಯದಂತೆ ಸ್ವ–ಉದ್ಯೋಗ ಕೈಗೊಳ್ಳುವುದಾಗಿ ೪೮, ಇಬ್ಬರೂ ಒಟ್ಟಿಗೆ ನಿರ್ಣಯ ಕೈಗೊಳ್ಳುವುದಾಗಿ ೯೭, ಕುಟುಂಬದ ಇತರರ ನಿರ್ಣಯಗಳನ್ನು ಅನುಸರಿಸುವುದಾಗಿ ೩೬, ತಮಗೆ ಅನ್ವಯಿಸುವುದಿಲ್ಲ ಎಂದು ಹೇಳಿದವರು ೧೦ ಮಹಿಳೆಯರಿರುವರು. ಪಾರ್ಧಿ ಸಮುದಾಯದಲ್ಲಿ ಸ್ವ–ಉದ್ಯೋಗಕ್ಕೆ ಸಂಬಂಧಿಸಿದಂತೆ ಸ್ವತಃ ತಾವೇ ನಿರ್ಧಾರ ತೆಗೆದುಕೊಳ್ಳುವುದಾಗಿ ೧೬ ಮಹಿಳೆಯರು, ಗಂಡನ ನಿರ್ಣಯದಂತೆ ಸ್ವ–ಉದ್ಯೋಗ ಕೈಗೊಳ್ಳುವುದಾಗಿ ೪೮, ಇಬ್ಬರೂ ಒಟ್ಟಿಗೆ ನಿರ್ಣಯ ಕೈಗೊಳ್ಳುವುದಾಗಿ ೧೦೨, ಕುಟುಂಬದ ಇತರರ ನಿರ್ಣಯಗಳನ್ನು ಅನುಸರಿಸುವುದಾಗಿ ೪೪ ಮಹಿಳೆಯರಿರುವರು. ಸಮೀಕ್ಷೆಗೆ ಒಳಪಡಿಸಿದ ಸಮುದಾಯಗಳಲ್ಲಿ ಎಲ್ಲಾ ಸಮುದಾಯಗಳನ್ನು ನೋಡಿದಾಗ ಸ್ವ–ಉದ್ಯೋಗಕ್ಕೆ ಸಂಬಂಧಿಸಿದಂತೆ ಸ್ವತಃ ತಾವೇ ನಿರ್ಧಾರ ತೆಗೆದುಕೊಳ್ಳುವುದಾಗಿ ಒಟ್ಟು ೬೬ ಮಹಿಳೆಯರು, ಗಂಡನ ನಿರ್ಣಯದಂತೆ ಸ್ವ–ಉದ್ಯೋಗ ಕೈಗೊಳ್ಳುವುದಾಗಿ ೨೩೦, ಇಬ್ಬರೂ ಒಟ್ಟಿಗೆ ನಿರ್ಣಯ ಕೈಗೊಳ್ಳುವುದಾಗಿ ೩೫೧, ಕುಟುಂಬದ ಇತರರ ನಿರ್ಣಯಗಳನ್ನು ಅನುಸರಿಸುವುದಾಗಿ ೯೮, ಅನ್ವಯಿಸುವುದಿಲ್ಲ ಎಂದವರು ೮೨ ಮಹಿಳೆಯರಿರುವರು. ಶೇಕಡವಾರುಗಳಲ್ಲಿ ಹೇಳುವುದಾದರೆ ಸ್ವ ಉದ್ಯೋಗದ ಕುರಿತು ಸ್ವತಃ ನಿರ್ಣಯ ಕೈಗೊಳ್ಳುವನೆನ್ನುವವರು ಶೇಕಡ ೭.೯೮, ಗಂಡನ ನಿರ್ಣಯದಂತೆ ಸ್ವ–ಉದ್ಯೋಗ ಕೈಗೊಳ್ಳುವುದಾಗಿ ಹೇಳಿದವರು ಶೇಕಡ ೨೭.೮೧, ಇಬ್ಬರೂ ಒಟ್ಟಿಗೆ ನಿರ್ಣಯ ಕೈಗೊಳ್ಳುವುದಾಗಿ ಶೇಕಡ ೪೨.೪೫, ಇತರರ ನಿರ್ಣಯಗಳನ್ನು ಅನುಸರಿಸುವುದಾಗಿ ಶೇಕಡ ೧೧.೮೫, ಅನ್ವಯಿಸುವುದಿಲ್ಲ ಎನ್ನುವವರು ಶೇಕಡ ೯.೯೧ ಮಹಿಳೆಯರಿರುವರು.

## ಕೋಷ್ಟಕ ೬.೩೧ ಸಮೀಕ್ಷೆಗೊಳಪಟ್ಟ ಮಹಿಳೆಯರು ಕುಟುಂಬದಲ್ಲಿ ಉಳಿತಾಯದ ಕುರಿತು

ಲಂಬ ಚಿತ್ರ ೬.೩೧ ಸಮೀಕ್ಷೆಗೊಳಪಟ್ಟ ಮಹಿಳೆಯರು ಕುಟುಂಬದಲ್ಲಿ ಉಳಿತಾಯದ ಕುರಿತು ನಿರ್ಧಾರ ತೆಗೆದುಕೊಳ್ಳುವವರ ಕುರಿತು ಮಹಿಳೆಯರ ಅಭಿಪ್ರಾಯ




| ನಿರ್ಧಾರ ತೆಗೆದುಕೊಳ್ಳುವವರ ಕುರಿತು ಮಹಿಳೆಯರ ಅಭಿಪ್ರಾಯ | | | | | | |
|---|---|---|---|---|---|---|
| ಕ್ರಸಂ | ಅಭಿಪ್ರಾಯ | ಬೇಡ | ಮೇದ | ಡುಂಗ್ರಿ ಗರಾಸಿಯಾ | ಪಾರ್ಧಿ | ಒಟ್ಟು |
| ೧ | ಸ್ವತಃ | ೮೭ | ೭೩ | ೯೯ | ೧೧೨ | ೩೭೧ |
| ೨ | ಗಂಡ | ೩೬ | ೪೭ | ೩೨ | ೨೬ | ೧೪೧ |
| ೩ | ಇಬ್ಬರೂ ಒಟ್ಟಿಗೆ | ೪೨ | ೫೬ | ೪೮ | ೪೩ | ೧೮೯ |
| ೪ | ಗಂಡುಮಕ್ಕಳು | ೧೦ | ೦೪ | ೦೫ | ೦೪ | ೨೩ |
| ೫ | ಹೆಣ್ಣುಮಕ್ಕಳು | ೦೫ | ೦೫ | ೦೩ | ೦೩ | ೧೬ |
| ೬ | ಮನೆಯ ಇತರರು | ೩೨ | ೨೦ | ೧೩ | ೨೨ | ೮೭ |
| | ಒಟ್ಟು | ೨೧೨ | ೨೦೫ | ೨೦೦ | ೨೧೦ | ೮೨೭ |

ಬೇಡ ಸಮುದಾಯದಲ್ಲಿ ಉಳಿತಾಯಕ್ಕೆ ಸಂಬಂಧಿಸಿದಂತೆ ಸ್ವತಃ ತಾವೇ ನಿರ್ಧಾರ ತೆಗೆದುಕೊಳ್ಳುವುದಾಗಿ ೮೭ ಮಹಿಳೆಯರು, ಗಂಡನ ನಿರ್ಣಯದಂತೆ ನಿರ್ಣಯ ಕೈಗೊಳ್ಳುವುದಾಗಿ ೩೬, ಇಬ್ಬರೂ ಒಟ್ಟಿಗೆ ನಿರ್ಣಯ ಕೈಗೊಳ್ಳುವುದಾಗಿ ೪೨, ಕುಟುಂಬದಲ್ಲಿ ಗಂಡುಮಕ್ಕಳ ನಿರ್ಣಯದಂತೆ ಉಳಿತಾಯ ಮಾಡುವುದಾಗಿ ೧೦, ಹೆಣ್ಣುಮಕ್ಕಳ ನಿರ್ಣಯದಂತೆ ಎಂಬುವವರು ೫, ಮನೆಯಲ್ಲಿ ಅತ್ತೆ, ಮಾವ ಹಾಗೂ ಇತರ ಕುಟುಂಬದೊಳಗಿನ ಸದಸ್ಯರ ನಿರ್ಧಾರದಂತೆ ಉಳಿತಾಯ ಮಾಡುವುದಾಗಿ ಹೇಳಿದವರು ೩೨ ಮಹಿಳೆಯರಿರುವರು. ಮೇದ ಸಮುದಾಯದಲ್ಲಿ ಉಳಿತಾಯಕ್ಕೆ ಸಂಬಂಧಿಸಿದಂತೆ ಸ್ವತಃ ತಾವೇ ನಿರ್ಧಾರ ತೆಗೆದುಕೊಳ್ಳುವುದಾಗಿ ೭೩ ಮಹಿಳೆಯರು, ಗಂಡನ ನಿರ್ಣಯದಂತೆ ನಿರ್ಣಯ

ಕೈಗೊಳ್ಳುವುದಾಗಿ ೪೭, ಇಬ್ಬರೂ ಒಟ್ಟಿಗೆ ನಿರ್ಣಯ ಕೈಗೊಳ್ಳುವುದಾಗಿ ೫೬, ಕುಟುಂಬದಲ್ಲಿ ಗಂಡುಮಕ್ಕಳ ನಿರ್ಣಯದಂತೆ ಉಳಿತಾಯ ಮಾಡುವುದಾಗಿ ೪, ಹೆಣ್ಣುಮಕ್ಕಳ ನಿರ್ಣಯದಂತೆ ಎಂಬುವವರು ೫, ಮನೆಯಲ್ಲಿ ಅತ್ತೆ, ಮಾವ ಹಾಗೂ ಇತರ ಕುಟುಂಬದೊಳಗಿನ ಸದಸ್ಯರ ನಿರ್ಧಾರದಂತೆ ಉಳಿತಾಯ ಮಾಡುವುದಾಗಿ ಹೇಳಿದವರು ೨೦ ಮಹಿಳೆಯರಿರುವರು. ಡುಂಗ್ರಿ ಗರಾಸಿಯಾ ಸಮುದಾಯದಲ್ಲಿ ಉಳಿತಾಯಕ್ಕೆ ಸಂಬಂಧಿಸಿದಂತೆ ಸ್ವತಃ ತಾವೇ ನಿರ್ಧಾರ ತೆಗೆದುಕೊಳ್ಳುವುದಾಗಿ ೯೯ ಮಹಿಳೆಯರು, ಗಂಡನ ನಿರ್ಣಯದಂತೆ ನಿರ್ಣಯ ಕೈಗೊಳ್ಳುವುದಾಗಿ ೩೨, ಇಬ್ಬರೂ ಒಟ್ಟಿಗೆ ನಿರ್ಣಯ ಕೈಗೊಳ್ಳುವುದಾಗಿ ೪೮, ಕುಟುಂಬದಲ್ಲಿ ಗಂಡುಮಕ್ಕಳ ನಿರ್ಣಯದಂತೆ ಉಳಿತಾಯ ಮಾಡುವುದಾಗಿ ೫, ಹೆಣ್ಣುಮಕ್ಕಳ ನಿರ್ಣಯದಂತೆ ಎಂಬುವವರು ೩, ಮನೆಯಲ್ಲಿ ಅತ್ತೆ, ಮಾವ ಹಾಗೂ ಇತರ ಕುಟುಂಬದೊಳಗಿನ ಸದಸ್ಯರ ನಿರ್ಧಾರದಂತೆ ಉಳಿತಾಯ ಮಾಡುವುದಾಗಿ ಹೇಳಿದವರು ೧೩ ಮಹಿಳೆಯರಿರುವರು. ಪಾರ್ಧಿ ಡುಂಗ್ರಿಗರಾಸಿಯಾ ಸಮುದಾಯದಲ್ಲಿ ಉಳಿತಾಯಕ್ಕೆ ಸಂಬಂಧಿಸಿದಂತೆ ಸ್ವತಃ ತಾವೇ ನಿರ್ಧಾರ ತೆಗೆದುಕೊಳ್ಳುವುದಾಗಿ ೧೧೨ ಮಹಿಳೆಯರು, ಗಂಡನ ನಿರ್ಣಯದಂತೆ ನಿರ್ಣಯ ಕೈಗೊಳ್ಳುವುದಾಗಿ ೨೬, ಇಬ್ಬರೂ ಒಟ್ಟಿಗೆ ನಿರ್ಣಯ ಕೈಗೊಳ್ಳುವುದಾಗಿ ೪೩, ಕುಟುಂಬದಲ್ಲಿ ಗಂಡುಮಕ್ಕಳ ನಿರ್ಣಯದಂತೆ ಉಳಿತಾಯ ಮಾಡುವುದಾಗಿ ೪, ಹೆಣ್ಣುಮಕ್ಕಳ ನಿರ್ಣಯದಂತೆ ಎಂಬುವವರು ೩, ಮನೆಯಲ್ಲಿ ಅತ್ತೆ, ಮಾವ ಹಾಗೂ ಇತರ ಕುಟುಂಬದೊಳಗಿನ ಸದಸ್ಯರ ನಿರ್ಧಾರದಂತೆ ಉಳಿತಾಯ ಮಾಡುವುದಾಗಿ ಹೇಳಿದವರು ೨೨ ಮಹಿಳೆಯರಿರುವರು. ಸಮೀಕ್ಷೆಗೆ ಒಳಪಡಿಸಿದ ಸಮುದಾಯಗಳಲ್ಲಿ ಎಲ್ಲಾ ಸಮುದಾಯಗಳನ್ನು ನೋಡಿದಾಗ ಉಳಿತಾಯಕ್ಕೆ ಸಂಬಂಧಿಸಿದಂತೆ ಸ್ವತಃ ತಾವೇ ನಿರ್ಧಾರ ತೆಗೆದುಕೊಳ್ಳುವುದಾಗಿ ಒಟ್ಟು ೩೭೧ ಮಹಿಳೆಯರು, ಗಂಡನ ನಿರ್ಣಯದಂತೆ ಉಳಿತಾಯ ಕೈಗೊಳ್ಳುವುದಾಗಿ ೧೪೧, ಇಬ್ಬರೂ ಒಟ್ಟಿಗೆ ನಿರ್ಣಯ ಕೈಗೊಳ್ಳುವುದಾಗಿ ೧೮೯, ಗಂಡುಮಕ್ಕಳ ಹೇಳಿಕೆಯಂತೆ ಉಳಿತಾಯ ಕೈಗೊಳ್ಳುವವರು ೨೩, ಹೆಣ್ಣುಮಕ್ಕಳ ನಿರ್ಣಯ ಅನುಸರಿಸುವವರು ೧೬, ಮನೆಯ ಇತರರ ಅಭಿಪ್ರಾಯದಂತೆ ನಡೆದುಕೊಳ್ಳುವವರು ೮೭ ಜನ ಇರುವರು. ಸಮೀಕ್ಷೆಗೆ ಒಳಪಡಿಸಿದ ಸಮುದಾಯಗಳಲ್ಲಿ ಎಲ್ಲಾ ಸಮುದಾಯಗಳನ್ನು ನೋಡಿದಾಗ ಉಳಿತಾಯಕ್ಕೆ ಸಂಬಂಧಿಸಿದಂತೆ ಸ್ವತಃ ತಾವೇ ನಿರ್ಧಾರ ತೆಗೆದುಕೊಳ್ಳುವುದಾಗಿ ಹೇಳಿದವರು ಶೇಕಡ ೪೪.೮೬, ಗಂಡನ ನಿರ್ಣಯದಂತೆ ಉಳಿತಾಯ ಕೈಗೊಳ್ಳುವುದಾಗಿ ಶೇಕಡ ೧೭೦೪, ಇಬ್ಬರೂ ಒಟ್ಟಿಗೆ ನಿರ್ಣಯ ಕೈಗೊಳ್ಳುವುದಾಗಿ ಶೇಕಡ ೨೨.೮೫, ಗಂಡುಮಕ್ಕಳ ಹೇಳಿಕೆಯಂತೆ ಉಳಿತಾಯ ಕೈಗೊಳ್ಳುವವರು ೨.೭೮, ಹೆಣ್ಣುಮಕ್ಕಳ ನಿರ್ಣಯ ಅನುಸರಿಸುವವರು ಶೇಕಡ ೧.೯೩, ಮನೆಯ ಇತರರ ಅಭಿಪ್ರಾಯದಂತೆ ನಡೆದುಕೊಳ್ಳುವವರು ಶೇಕಡ ೧೦.೫೧ ಜನ ಇರುವರು. ಒಟ್ಟಾರೆಯಾಗಿ ನೋಡಿದಾಗ ಪುರುಷರಿಗೆ ಸಮಾನವಾಗಿದ್ದರೂ ಎಲ್ಲಾ ವಲಯಗಳಲ್ಲಿಯೂ ಮಹಿಳೆ ಪುರುಷನಿಗಿಂತ ಹಿಂದಿರುವುದು ತಿಳಿಯುವುದು. ಅದಕ್ಕೆಂದೇ ಪ್ರಸ್ತುತ ಹತ್ತು ಹಲವು ಯೋಜನೆಗಳನ್ನು ಕೇಂದ್ರ ಹಾಗೂ ರಾಜ್ಯಸರ್ಕಾರಗಳು ಹಮ್ಮಿಕೊಂಡು ಅನುಷ್ಠಾನಗೊಳಿಸಿವೆ. ಮಹಿಳಾ

ಸಬಲೀಕರಣಕ್ಕಾಗಿಯೇ ಪಂಚವಾರ್ಷಿಕ ಯೋಜನೆಗಳಲ್ಲಿಯೂ ಹಣ ಕಾಯ್ದಿರಿಸಲಾಗಿದೆ. ಆದರೂ ಮಹಿಳೆಯರನ್ನು ಹಿಂದೆ ತಳ್ಳುವುದರಲ್ಲಿ ಪುರುಷಶಾಹಿ ಹಿಂದೇನೂ ಬಿದ್ದಿಲ್ಲ ಎಂಬುದು ತಿಳಿದುಬರುವುದು.

**ಆಧಾರಗಳು**


ಕೊತ್ಲಮ್ಮ, ೨೦೧೨, ಬಳ್ಳಾರಿ ಜಿಲ್ಲೆಯ ದೇವದಾಸಿಯರು, (ಅಪ್ರಕಟಿತ ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೩೪

ಕೃಷಿ ಗಣತಿ ವರದಿ, ೨೦೦೧, ೫೨

ಚಂದ್ರಶೇಖರ ದಾಮ್ಲೆ, ೨೦೧೬, ಕರ್ನಾಟಕದ ಶೈಕ್ಷಣಿಕ ಸ್ಥಿತಿಗತಿ, ಮನೋಹರ ಗ್ರಂಥಮಾಲೆ, ಧಾರವಾಡ ೧೩೨

ಅದೇ, ೨೦೧೬, ೧೪೪

ದೇವದಾಸಿ ಯೋಜನೆಗಳು, ೨೦೧೭, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕೈಪಿಡಿ, ೮೮

ಅದೇ, ೨೦೧೭, ೯೧

ಪ್ರಶಾಂತ್ ಎಚ್ ಡಿ, ೨೦೦೧, ಈಶಾನ್ಯ ಕರ್ನಾಟಕದ ಪ್ರಾಥಮಿಕ ಶಿಕ್ಷಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೬೭

ಬಳ್ಳಾರಿ ಜಿಲ್ಲಾ ಜನಗಣತಿ ಕೈಪಿಡಿ, ೨೦೧೧, ಕರ್ನಾಟಕ ಸರ್ಕಾರ, ಬೆಂಗಳೂರು

ಮಹಿಳಾ ಆಯೋಗ, ೨೦೧೨, ೯೪

ಮಾನವಾಭಿವೃದ್ಧಿ ವರದಿ, ೨೦೦೫, ೨೦೫

ಅದೇ, ೨೦೧೫, ೨೬೦

ಅದೇ, ೨೦೧೫, ೨೬೧

ಹಿಂದುಳಿದ ವರ್ಗಗಳ ಆಯೋಗ, ೧೯೮೫, ೧೩೮

ಸೆನ್ಸಸ್ ಆಫ್ ಇಂಡಿಯಾ ೨೦೧೧, ತಾತ್ಪೂರ್ತಿಕ ಜನಸಂಖ್ಯಾ ಮೊತ್ತ, ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಷನ್, ಕರ್ನಾಟಕ, ಭಾರತ ಸರ್ಕಾರ, ಪು. ೨೮.

# ಅಧ್ಯಾಯ: ಏಳು
# ಆಯ್ದ ಬುಡಕಟ್ಟು ಮಹಿಳೆಯರ ಬದುಕಿನ ಚಿತ್ರಣ

# ಅಧ್ಯಾಯ : ಏಳು

# ಆಯ್ದ ಬುಡಕಟ್ಟು ಮಹಿಳೆಯರ ಬದುಕಿನ ಅಧ್ಯಯನ

ಈ ಅಧ್ಯಯನ ಪೂರ್ಣತೆಯನ್ನು ಪಡೆಯಬೇಕಾದರೆ ಕೆಲವಾದರೂ, ಸಂಕ್ಷಿಪ್ತವಾಗಿಯಾದರೂ ಬುಡಕಟ್ಟು ಮಹಿಳೆಯರು ಎಷ್ಟರಮಟ್ಟಿಗೆ ಸಬಲೀಕರಣಗೊಂಡಿರುವರು. ಕುಟುಂಬದಲ್ಲಿ ಅವರಿಗೆ ಇರುವ ಸ್ವಾತಂತ್ರ್ಯವೇನು, ಕುಟುಂಬದಲ್ಲಿ ನಿರ್ಧಾರ ತೆಗೆದುಕೊಳ್ಳುವಲ್ಲಿ ಅವರ ಪಾತ್ರವೇನು, ಒಟ್ಟಾರೆಯಾಗಿ ಮಹಿಳೆಯರ ಸಬಲೀಕರಣಕ್ಕಾಗಿ ಸರ್ಕಾರ ಮಾಡುತ್ತಿರುವ ಪ್ರಯತ್ನಗಳ ಲಾಭಗಳು ಅವರಿಗೆ ಎಷ್ಟರ ಮಟ್ಟಿಗೆ ತಲುಪಿವೆ ಎಂಬುದನ್ನು ಅರಿಯಬೇಕಾದರೆ ಕೆಲವೇ ಕೆಲವಾದರೂ ಮಹಿಳೆಯರನ್ನು ವೈಯಕ್ತಿಕವಾಗಿ ಸಂದರ್ಶಿಸಿ ಮಾಹಿತಿ ಪಡೆಯುವುದು ಒಳಿತು ಎಂಬ ಕಾರಣಕ್ಕಾಗಿ ಅಧ್ಯಯನಕ್ಕೆ ಆಯ್ದುಕೊಂಡ ಕುಟುಂಬಗಳಲ್ಲಿಯೇ ಆಯ್ದ ಮಹಿಳೆಯರನ್ನು ವ್ಯಕ್ತಿ ಅಧ್ಯಯನಕ್ಕೆ ಒಳಪಡಿಸಲಾಯಿತು. ಅವರ ಅಭಿಪ್ರಾಯಗಳನ್ನೇ ಸ್ಥೂಲವಾಗಿ ಇಲ್ಲಿ ನೀಡಲಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬೇಡ, ಮೇದ, ಡುಂಗ್ರಿ ಗರಾಸಿಯಾ, ಪಾರ್ಧಿ ಬುಡಕಟ್ಟುಗಳಲ್ಲಿ ತಲಾ ಇಬ್ಬರಂತೆ ಒಟ್ಟು ಎಂಟು ಮಹಿಳೆಯರನ್ನು ವ್ಯಕ್ತಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಇಲ್ಲಿ ಅವರ ನಿರ್ಧಾರಗಳು ಕುಟುಂಬದಲ್ಲಿ ಅವರ ಸ್ಥಾನ ಮಾನ ಮತ್ತು ನಿರ್ಧಾರಗಳು ತೆಗೆದುಕೊಳ್ಳುವಲ್ಲಿ ಅವರ ಪಾತ್ರ ಮತ್ತು ಸಾಮಾಜಿಕವಾಗಿ ಅವರಿಗಿರುವ ಸ್ಥಾನಮಾನ ಅವರ ಜೀವನದ ಆಗು ಹೋಗುಗಳು ಅನೇಕ ವಿಚಾರಗಳ ಕುರಿತಾದ ವಿವರಗಳು ಈ ಕೆಳಗೆ ನೀಡಲಾಗಿದೆ.

**ಗೀತಾಬಾಯಿ, (ವಯಸ್ಸು ೩೭) ಸಮುದಾಯ: ಡುಂಗ್ರಿ ಗರಾಸಿಯಾ, ಬುಕ್ಕಸಾಗರ, ಹೊಸಪೇಟೆ ತಾಲೂಕು**

ಮಹಿಳೆ ಹೆಸರು ಗೀತಾಬಾಯಿ, ತಂದೆ ಹೆಸರು ಮಾಧವರಾವ್, ತಾಯಿ ಹೆಸರು ಸುಶೀಲಾಬಾಯಿ, ನಾವು ಡುಂಗ್ರಿಗರಾಸಿಯಾ ಜಾತಿಗೆ ಸೇರಿದವರು. ಅಲೆಮಾರಿಗಳು. ನಾವು ಸಣ್ಣೋರಿದ್ದಾಗ ಮರಿಯಮ್ಮನಹಳ್ಳಿಯ ಗಂದೇಣ್ಣೆಯೋರ ಕೇರಿಯಾಗಿದ್ವಿ, ಗಂದೇಣ್ಣೆರು ಅಂತ ನಮ್ಮೋರಿಗೆ ಕರೆಯೋದು. ಸಣ್ಣದೊಂದು ಗುಡಿಸಲು. ಆಗೆಲ್ಲಾ ಏಳಲಾರದಷ್ಟು ಕಷ್ಟಗುಳು ಉಣ್ಣಾಕು ಮನಿಯ್ಯಾಗ ಕಷ್ಟಿತ್ತು ನಮ್ಮವ್ವ ಅಪ್ಪುನ್ನ ಕೂಡಿ ನಾವೂ ಕೆಲಸುಕ್ಕ ಹೋಗುತಿದ್ವಿ ಆದ್ರ ನಮ್ಮನಿಯ್ಯಾಗ ಅದು ಸಾಲ್ತಿರಲಿಲ್ರಿ. ಯಾಕಂದ್ರ ನಾವು ಒಟ್ಟು ಐದು ಜನ ಅಕ್ಕ ತಂಗೇರು. ಇಬ್ಬರು ತಮ್ಮನೋರಿದ್ದಾರೆ. ನಾವು

ಮರಿಯಮ್ಮನಹಳ್ಳಿಯಾಗಿದ್ದಾಗ ನಮಗ್ಯಾರಿಗೂ ಮದುವೆಯಾಗಿದ್ದಿಲ್ಲ. ಉಣ್ಣಾಕ ಕಷ್ಟೈತಿ ಇನ್ನ ಮದ್ವಿ ಎಲ್ಲಿ ಬರ್ತದ ಅದ್ರಗ ನಮದು ಒಂದು ಊರಲ್ಲ, ಒಂದು ನೆಲೆಯಲ್ಲ. ನಮಿಗೆಲ್ಲಿ ಅನುಕೂಲಿರ್ತದ ಅಲ್ಲಿ ಬೀಡುಬಿಡ್ತಿದ್ವಿ ನಾವೆಲ್ ಇರ್‌ತೆವೊ ಅದ ನಮುಗ ಊರನ್‌ಕಂತಿದ್ವಿ ಅದರ್ ಜೊತಿಯಾಗ ಎಲ್ಲಿ ಭಿಕ್ಷೆ ಸಿಗುತೈತೆ, ಎಲ್ಲಿ ಕೂಲಿ ಸಿಗುತೈತೆ ಅಲ್ಲಿ ಹುಡುಕಿಕೊಂಡು ಹೋಗೋ ಜನ ಮಂದಿ ನಾವು. ನಮ್ಮಪ್ಪ ವೆಂಕಟಾಪುರ, ವರದಾಪುರ ಹೊಳೆಯಾಗೆ (ಹೊಳಿಯ್ಯಾಗ) ಮೀನು ಹಿಡಿಯಾಕ ಹೋಕುದ್ದ. ಆಮೇಲೆ ಐನಳ್ಳಿ ಕೆರೆ, ಡಣಾಯಕನ ಕೆರಿ ಕೆರೆಯೊಳಗೆ ಮೀನು ಹಿಡಿದು ಹೊತ್ತು ತಿರಿಗಿ ಮಾರಿ ಬಂದ ರೊಕ್ಕದಾಗೆ ನಮ್ದು ಜೀವನ. ಅಪ್ಪ ಮೀನು ಹಿಡಿದರೆ ಒಮ್ಮೊಮ್ಮೆಗ ರಗುಡ್ ಇರ್ತುದ್ವು ಅವಗ ಅಮ್ಮ ಅವನ್ನ ಮಾರಿಕೊಂಡು ಬರೋಕಿ. ಅಪ್ಪ ಭಾಳಾ ಹೆಂಡ ಕುಡಿತಿದ್ದ (ಹೊಡಿತಿದ್ದ), ಕುಡುದ್ ಬಂದಾಗ ಅವ್ವುಗ ಬಾಯಿಗೆ ಬಂದಂಗ ಮಾತಾಡ್ತುದ್ದ ಸಿಟ್ಟು ಬಂದ್ರ ಅವ್ವುನ್ನ ಎಲ್ಲಂದ್ರ ಅಲ್ಲ ಹಿಡಕೊಂಡು ಅವ್ವುಗ ಬಾರುಸ್ತುದ್ದ ಎಲ್ಲಿಬೇಕು ಅಲ್ಲಿ ಹೊಡೆಯೋನು. ಇವಾಗ ಅಪ್ಪುಗ ಮಯ್ಯಾಗ ಶಗ್ತಿ ಇಲ್ಲ ಅಪ್ಪ ಮುದುಕ ಆಗ್ಯಾನ ಮದ್ಲಂಗ ಇಲ್ಲ ಸಿಟ್ಟು ಕಮ್ಮಿ ಆಗ್ಯಾದ ಕಡಿಮೆ ಆಗೇತಿ. ನಾವು ಮರಿಯಮ್ಮನಹಳ್ಳಿ ಬಿಟ್ಟುಬರಕ ಕಾರಣ ಐತಿ ಯಾಕಂದ್ರ ಮರಿಯಮ್ಮನಳ್ಳ್ಯಾಗ ನಮ್ಮ್ ಮಂದಿಕೂಡಿ ಜಗಳ ಮಾಡಿ ಬುಕ್ಕಾಸ್ಗುರ್‍ಕ ಬಂದ್ವಿ ಬುಕ್ಕಸಾಗರದಾಗೂ ನಮ್ಮದು ಅಂತ ಏನೂ ಇರಲಿಲ್ಲ ಯಾಕಂದ್ರ ನಾವು ತಿನ್ನಕ ದಾರಿ ಹುಡಿಕೆಂಡು ಇಲ್ಲಿಗ್ ಬಂದಮಂದಿ ಅದಿವಿನಾವು. ಬುಕ್ಕಸಾಗರದ ಕಂಪ್ಲಿ ದಾರಿಯಾಗೆ ಸ್ವಾತಿಕುಂಟೆ ಅಂತ ಒಂದು ಸಣ್ಣ ಕುಂಟೆ ಐತೆ. ಅಲ್ಲಿ ಬಂದು ಗುಡಸಲಿ ಹಾಕ್ಕೊಂಡ್ವಿ ಮೊದಲು ಊರೋರು ಮದ್ಲು ಮದ್ಲಗ ಊರ್‍ಯ್ಯಾಗಿರ ಮಂದಿ ನಮಿಗ್‌ನೋಡಿ ಕಳ್ರು ಅನ್ಕಂಡಿದ್ರು ಏನೋ ಗೊತ್ತಿಲ್ಲ ನಮ್ಮ ಕುಟುಂಬನ ನೋಡಿ ಅನುಮಾನಿಸಿದರು. ಅದುಕ ಅಪ್ಪ ಆ ಊರು ಯಜಮಾನ್ರಿಗೆ ಕಂಡು ಈ ಕುಂಟೆಯಾಗೆ ಮೀನು ಹಿಡಕೊಂಡು ಜೀವನ ಮಾಡ್ತೀವಿ, ನಿಮ್ಮುರಿಗಾಗ್ಲಿ ನಿಮ್ ಮಂದಿಗಾಗ್ಲಿ ತೊಂದ್ರಿಮಾಡಂಗಿಲ್ರಿ ಅಂತ ಕೇಳಿಕೆಂಡಾಗ ನಮಿಗಲ್ಲಿರಕ ಊರುಮಂದಿ ದಾರಿ ಮಾಡಿಕೊಟ್ರು. ಆಮ್ಯಾಗ ಇರಾಕೆನೊ ಜಾಗಾತು ಆದ್ರ ಬದುಕಾದೆಂಗಾ ಅಂತ ಅಪ್ಪ ಜೀವನ ನಡೆಸಾಕಂತ ಯೋಚಿನಿ ಮಾಡಕತ್ತಿದ ಅವಗ ಈ ಕುಂಟ್ಯಾಗ ಮೀನು ಸಾಕಾಕಂತ ಚಿಂತಿ ಮಾಡಿದ. ಆಗ ಟಿ ಬಿ ಡ್ಯಾಂನೊಳಗ ಮೀನುಮರಿ ಮಾಡಿ ಮಾರ್‌ತುದ್ರು. ಅಪ್ಪ ಅಲ್ಲಿಗೋಗಿ ಮೀನುಮರಿ ಖರೀದಿ ಮಾಡಿ ಕುಂಟೆಕೆರಿಯ್ಯಾಗ ಬಿಟ್ಟ. ಆದ್ರ ಅವು ದೊಡ್ಡಮರಿ ಆಗಕ ಮೂರುನಾಲ್ಕು ತಿಂಗಳಾದ್ರು ಬೇಕು ಅದುಕ ಅಲ್ಲಿವರಿಗೆ ಅಪ್ಪ ಬುಕ್ಕಸಾಗರ,ರಾಮಸಾಗರದ ಕೆರಿಯಾಗ ಮೀನು ಹಿಡುದು ಮಾರಿ ರೊಕ್ಕ ತರ್ತುದ್ದ ಅದ್ರಗ ನಾವು ಜೀವನ ಮಾಡ್ತಿದ್ವಿ. ಹಿಂಗ ಮೂರುನಾಕು ತಿಂಗಳು ಕಳುದಿಂದೆ ಇಲ್ಲೆ ಕುಂಟ್ಯಾಗ ಮೀನು ದೊಡ್ಡುವಾಗಿದ್ವು ಅವಾಗ್ಲಿಂದ ಇಲ್ಲೇ ಮೀನಿಡಿದು ಮಾರಿ ಜೀವನ ಸಾಗುಸ್‌ತಿದ್ವಿ. ಹಿಂಗಾ ಮಾಡಿ ಮುಂದ ಸಾಗವೊತ್ತ್ಯಾಗ ಅಪ್ಪುಗ ಇನ್ನೊಂದು ಯೋಚ್‌ನಿ ಬಂತು ಏನಂದ್ರ ಕುಂಟೆ ಪಕ್ಕದಾಗಿರ ಕಾಲುವಿಗೆ ಸೇರಿದ್ ಒಂದಿಷ್ಟು ತುಂಡು ಭೂಮಿ ಇತ್ತು. ಅದುನ್ನ ಯಾರೂ ಬಿತ್ತಿರ್‌ಲಿಲ್ಲ. ಹಂಗಾಗಿ ಅಪ್ಪ ಜನುಕ್ಕ ಅದುನ್ನ ವಾಣಮಾಡಿ ನಾನೆನರ ಭೂಮಿಗಾಕ್‌ನಿ ಅಂದ ಜನಕೂಡ ಅಪ್ರಿಗೇನು ಇಲ್ಲ ಮಾಡಿಕೆಂಡ್ರ ಮಾಡ್‌ಕೆಂಣ್ಲೆ ಅಂದ್ರು. ಅವಗ ಅಪ್ಪ ಅದ್ರಗ ಒಂದಷ್ಟು

ನೆಲ್ಲಾಕಿದ ಅದು ಬೆಳ್‌ದಿಂದ ಉಣ್ಣಾಕ ಅಕ್ಕಿ ಸಿಕ್ತು ನಮಿಗು ಬಾಳ ಖುಷಿ ಆತು ಯಾಕಂದ್ರ ಅನ್ನ ಸಿಗದ ಪಜೀತಿತ್ತು ಅಂತವೊತ್ನ್ಯಾಗ ನೆಲ್ಲು ಬೇಳುದುದು ಬಾರಿ ಭೇಷ್‌ಆತು. ನಮ್ಮನಿಯಾಗ ಏನೇ ನಡಿಬಕಂದ್ರು ಅಪ್ಪುನ್ನ ಕೇಳುಬಾಕಿತ್ತು. ಅಪ್ಪ ಹೇಳಿದ್ದ ನಡಿಬಾಕಿತ್ತು ಎಲ್ಲ ಮನಿ ನಿರ್ಧಾರ ಅಪ್ಪಂದೇ ಅಗಿರ್‌ತಿತ್ತು. ನಮ್ಮವ್ವಂತೂ ನಮ್ಮಪ್ಪುಗ ಕಂಡ್ರ ಹೆದ್ರಿಸಾಯಕಿ. ಇವಾಗ್ಲೂನೂ ಅಪ್ಪ ಹೇಳಿದ್ದ ನಮ್ಮನಿಯಾಗ ನಡಿಯಾದು ಇವಾಗ್ಲೂ ನಾವು ಏನಾರ ಹೇಳಿದ್ರ ನಮ್ಮದೇನು ನಡಿಯಲ್ಲ ಅಪ್ಪನೇ ಎಲ್ಲ ನಿರ್ಧರುಸ್ತಾನ. ಅವಗ ನಾವು ಸ್ವಲ್ಪ ದೊಡ್ಡೋರಾದ್ವಿ ನವ್ ಜನ ಇಲ್ಲೆ ಸತ್ತವುುತ್ನಾಗ ಅಂದ್ರ ಹೊಸಪೇಟೆ,ಮರಿಯಮ್ಮನಹಳ್ಳಿ, ಮುನಿರಾಬಾದ್, ಸುತ್ತಾಮುತ್ತಾಗ ಅದರ ಎಲ್ಲರೂ ಭಿಕ್ಷುಕರೆ ಅದಾರ ಅವ್ರಿಗೆ ನಮ್ಮುನ್ನ ಮದುವಿಮಾಡಿ ಕೊಡಾಕ ಅಪ್ಪುಗ ಇಷ್ಟ ಇರ್‌ಲಿಲ್ಲ. ಅದು ಬಿಟ್ರ ನಮ್ ಜನ ಹಳದಿಪುರ, ರಾಯಭಾಗ, ಸಿರ್ಸಿಕಡೆಗೂ ಅದಾರ, ಆ ಊರುಗುಳಗ ಹಳದಿಪುರ ಅನ್ನ ಊರಾಗಿರೊ ಒಬ್ಬ ವ್ಯಕ್ತಿಗೆ ಮದುವಿ ಮಾಡಿಕೊಟ್ರು, ಗಂಡ ರಘು ಅಂತ. ಆತ ಸಮುದ್ರ, ಹೊಳೆಯಾಗೆ ಮೀನು ಹಿಡಿದು ಜೀವನ ಮಾಡೋನು. ನೋಡಾಕೆ ಚೆಂದ ಇದ್ದ. ಮದುವೆಯೇನೋ ಆಯಿತು. ಒಂದು ಕೂಸಾಗೋವರೆಗೆ ಚೆಂದ ಇದ್ದ. ಕೂಸಾದಮ್ಯಾಲೆ ಕುಡಿತ ಹೆಚ್ಚಾಯಿತು. ಮನೆಗೆ ಏನೂ ದಿನಸಿ ತರುತ್ತಿದ್ದಿಲ್ಲ. ನಾನು ಮೀನು ಮಾರಿದ ರೊಕ್ಕಾನ ಸ್ವಲ್ಪ ಮುಚ್ಚಿಟ್ಟು ಮನೆಗೆ ಬೇಕಾದ ಸಾಮಾನು ತಂದು ಜೀವನ ನಡುಸ್‌ಬಕಾಗಿತ್ತು. ಅಂತ ಸ್ಥಿತಿ ಆಯಿತು. ಎರಡನೇದಕ್ಕೆ ಮತ್ತೆ ಬಸಿರಾದೆ. ಜೀವನ ಮಾಡಾದು ಕಷ್ಟ ಆತು. ಯಾರೂ ನೋಡೋರಿಲ್ಲ. ಇದ್ದಬಿದ್ದ ಚಿಲ್ಲರೆ ಕಾಸು ತಗೊಂಡು ನಮ್ಮಪ್ಪರತಾಗೆ ಬಂದೆ. ಹೆರಿಗೆ ಆಗೋವರೆಗೂ ಗಂಡನೂ ಬರಲಿಲ್ಲ. ಯಾರೂ ಬರಲಿಲ್ಲ. ಕೂಸು ಹುಟ್ಟಿದ ಮೇಲೆ ಅಪ್ಪನೇ ಹೋಗಿ ನನ್ನ ಗಂಡಗ ಬೈದು ಬುಕ್ಕಸಾಗರಕ್ಕ ಕರಕೊಂಡುಬಂದ. ಬಂದು ಎರಡ್ಮೂರು ತಿಂಗಳಿದ್ದು ಮತ್ತೆ ಹಳದಿಪುರಕ್ಕೆ ಹೋಗಿಬಿಟ್ಟ. ನಾನು ಗಂಡನಮನೆಗೆ ಹೋದೆ. ಹುಡುಗರನ್ನು ಕಟ್ಟಿಕೊಂಡು ಜೀವನ ಮಾಡೋದು ತ್ರಾಸಾತು ಆದರೂ ದೊಡ್ಡವುಗ ೫-೬ ವರ್ಷದೋನಾಗೋವರೆಗೂ ಇದ್ದೆ. ಮತ್ತೆ ಒಳ್ಳಿಮರಳಿ ತವರುಮನೆಗೆ ಬಂದೆ. ಮಗನ್ನ ಬುಕ್ಕಸಾಗರ ಸಾಲಿಗೆ ಹಾಕಿದೆ. ಅಪ್ಪನೋರ ಜೊತೆಗೆ ಮೀನು ಹಿಡೀತಿದ್ದೆ. ಮೀನು ಹಿಡುದ್ರೆ ಕೆಜಿ ಗೆ ಇಷ್ಟಂತ ಅಪ್ಪ ಕೂಲಿ ಕೊಡತಿದ್ದ. ಅದರಾಗೆ ಜೀವನ. ಅಪ್ಪರ ಮನೆ ಮಗ್ಗುಲೇ ಒಂದು ಗುಡಿಸಲು ಹಾಕಿಕೊಂಡೆ. ಅಷ್ಟರಾಗೆ ಕಾಲುವೇರು ನಾವು ಗುಡಿಸಿಲಿ ಹಾಕಿದ್ದ ಜಾಗ ಕಾಲುವೆಗೆ ಸೇರಿದ್ದು ಬಿಡ್ರಿ ಅಂತ ಗಲಾಟೆ ಮಾಡಿದ್ರು. ಆಮೇಲೆ ನಮ್ಮ ಎಲ್ಲಾ ಕುಟುಂಬ ಈರಣ್ಣನ ಗುಡಿತಾಗ ಸರ್ಕಾರಿ ಭೂಮಿಯಾಗೆ ಗುಡಿಸಲು ಹಾಕಿಕೊಂಡ್ವಿ, ಇವತ್ತಿಗೂ ಮೀನು ಹಿಡಿಯಲು (ಹಿಡಿಯಾಕ) ಹೋಗುತೀನಿ. ಗಂಡ ಯಾವಾಗೋ ತಿಳಿದಾಗ ಬರುತಾನ, ಇಲ್ಲದಿದ್ರೆ ಇಲ್ಲ. ಮಕ್ಕಳು ಓದ್ಯಾರೆ. ದೊಡ್ಡ ಮಗ ಶಿವಮೊಗ್ಗದೊಳಗೆ ಅದೆಂತದೋ ಕೆಲಸ ಮಾಡುತಾನ. ಅವನು ರೊಕ್ಕ ಕಳಿಸ್ತಾನೆ. ಸಣ್ಣಮಗ ಪಿಯುಸಿ ಓದುತದಾನ, ಮೀನು ಹಿಡಿಯೋದು ಇಲ್ಲದಾಗ ಲಂಗ ಚೋಲಿ ಮಾರೋಕೆ ಹೋಗ್ತೀನಿ. ಬಟ್ಟೆ ಅಂಗಡಿಯೋರತಾಗೆ ಉದ್ರಿ ತಂದು ಮಾರುತೀನಿ. ಮಾರಿಬಂದ ರೊಕ್ಕಾನ ಅಂಗಡಿಯಾರಿಗೆ ಕಟ್ಟಿ ಲಾಭದಾಗ ಬದುಕುತೀನಿ. ಇವತ್ತಿಗೂ ಸರ್ಕಾರದಿಂದ ಏನೂ ಸಿಕ್ಕಿಲ್ಲ. ಮೊನ್ನೆ ಮೊನ್ನೆವರೆಗೂ

ಆಧಾರ, ರೇಷನ್ ಕಾರ್ಡ್ ಇರಲಿಲ್ಲ. ಓಟಿಂಗ್ ಕಾರ್ಡ್ ಇರಲಿಲ್ಲ. ಇತ್ತೀಚೆಗೆ ಮಾಡಿಸೀವಿ. ನನ್ನ ಬಾಳೇವು ಹಿಂಗಾದ್ರೆ ನಮ್ಮ ತಂಗಿ ಬಾಳೇವು ನನಗಿಂತ ಅಧ್ವಾನ. ಅವಳಿಗೆ ಚಿತ್ರದುರ್ಗಕ್ಕೆ ಕೊಟ್ರು. ಗಂಡ ಕುಡುದು ಕುಡುದೂ ಸತ್ತೋದ. ಅವಳು ರದ್ದಿ ಆರಿಸಿ ಜೀವನ ಮಾಡತಾಳೆ.(ಮಾಡಾಕತ್ತಾಳ) ಆಕಿ ಭಾಳ ಹಟಮಾರಿ, ಅಪ್ಪ ಕರದ್ರೂ ಬುಕ್ಕಸಾಗರಕ್ಕೆ ಬರಲೊಲ್ಲಳು. ಆಕಿ ಒಬ್ಬ ಮಗನ್ನ ನಾನೇ ಇಟಗೊಂಡು ಓದಿಸ್ತದೀನಿ. ನಾವೇನೂ ಓದಿಲ್ಲ. ಯಾವ ಯೋಜನೆ ಸರಕಾರಿ ನಮಿಗಂತ ಏನೆನೊ ಮಾಡ್ಯಾದಂತ ಆದ್ರ ನಮಿಗೇನು ಗೊತ್ತಿಲ್ಲ ಅದೆಂತದೊ ಯೋಜಿನಿ ಅಂತ ಅವೇನೊ ನಮಿಗ ತಿಳಿಯಂಗಿಲ್ಲ. ಅದರಿಂದ ನಮಗೆ ಬರುತೈತೆ ಗೊತ್ತಿಲ್ಲ. ಬ್ಯಾಂಕ್ ಸಾಲ ತಗೋಬೇಕಂದ್ರೆ ನಮ್ಮ ಸ್ಥಿತಿ ನೋಡಿ ಬ್ಯಾಂಕಿನೋರು ಸಾಲ ಕೊಡೋದಿಲ್ಲ. ಹೆಂಗೋ ಅಪ್ಪನ ಆಸರೆಯಾಗ ಜೀವನ ಸಾಗಿಸೀವಿ. ಮಕ್ಕಳು ದುಡಿಯುವಂತಾದ್ರೆ (ದುಡಿಯಂಗಾದ್ರ) ಸಾಕು. ಕಷ್ಟ ತೀರೀತು ಅನಕೊಂಡೀನಿ. ನನ್ನ ಮಕ್ಳು ಅವರಪ್ಪನಂಗೆ ಆಗದಿದ್ರೆ ಸಾಕು. ನಾವಿಷ್ಟು ಮಾಡಿದ್ರು ಏನು ನಡಿಯಂಗಿಲ್ಲ. ನನ್ ಗಂಡ ಬರತಾನ ಅವನು ರೊಕ್ಕ ಕೇಳತಾನ. ಇಲ್ಲಿ ನೋಡಿದ್ರ ನಮ್ಮಪ್ಪರ ಮಾತ ದಾಟಂಗಿಲ್ಲ. ಈಗುನು ನಾ ನಮ್ಮಪ್ಪ ಹೇಳಿದಂಗ ಕೇಳಿಕೊಂಡದಿನಿ. ಇಲ್ಲಂದ್ರ ಜೀವನ ಸಾಗದು ಕಷ್ಟೈತಿ.

**ಸುಶೀಲಾಬಾಯಿ, (ವಯಸ್ಸು ೨೮) ಸಮುದಾಯ: ಡುಂಗ್ರಿ ಗರಾಸಿಯಾ, ಗುಡಾರನಗರ, ಬಳ್ಳಾರಿ ತಾಲೂಕು**

ಮಹಿಳೆ ಹೆಸರು ಸುಶೀಲಾ, ತಂದೆ ಹೆಸರು ರತನ್, ತಾಯಿ ಹೆಸರು ರುಕ್ಕೂಬಾಯಿ, ನಾವು ಡುಂಗ್ರಿಗರಾಸಿಯಾ ಜಾತಿಗೆ ಸೇರಿದವರು. ಅಲೆಮಾರಿಗಳು. ನಾವು ಮೊದ್ಲು ಬಳ್ಳಾರಿಯ ಹರಿಶ್ಚಂದ್ರ ಕಾಲೋನಿಯೊಳಗೆ ಇದ್ವಿ, ಕೊಳಚೆ  ಪ್ರದೇಶ ಅದು. ಈಗ ಎಂಟು ಹತ್ತು ವರ್ಷಗಳ ಹಿಂದೆ ಡಿ.ಸಿ, ಯಾರ್‍ಯಾರೋ ಸೇರಿ ಗುಡಾರನಗರ ಮಾಡಿ ಇಲ್ಲಿ ಎಲ್ಲಾ ನಮ್ಮಂಗ ತಿರಿಗ್ಯಾಡರಿಗೆ ( ಅಲೆಮಾರಿಗಳಿಗೆ) ಮನೆ ಕೊಟ್ಟವ್ರೆ. ನಮ್ಮ ಜಾತಿಯೋರುವೇ ಒಂದು ೭೦ ಮನೆ ಇಲ್ಲಿವೆ. ನನ್ನ ಗಂಡನ ಊರು ಹುಲಿಗಿತಾಗೆ ಹೊಸಳ್ಳಿ ಅಂತ, ರೋಡ್ ಮಗ್ಗುಲೇ ಗುಡಿಸಿಲಿ ಹಾಕಿಕೊಂಡಿದ್ರು. ನನ್ನ ಗಂಡ ಹಳೆ ಪ್ಲಾಸ್ಟಿಕ್ ಕೊಡ ಬಕೇಟು ರಿಪೇರಿ ಮಾಡೋನು. ನನಗೆ ೧೬ ವರ್ಷುಕ್ಕ ಮದುವೆ ಮಾಡಿದ್ರು, ಆ ಸಣ್ಣ ಗುಡಾರದೊಳಗೆ ನಮ್ಮ ಸಂಸಾರ ನಡೀತು.  ಗಂಡ ಕೆಲವೊಮ್ಮೆ ಮೀನು ಹಿಡಿಯಾಕೆ ಹೋಗೋನು, ಇನ್ನೂ ಕೆಲವು ಸಲ ಪ್ಲಾಸ್ಟಿಕ್ ರಿಪೇರಿ, ಎರಡೂ ಇಲ್ಲದಾಗ ಗಂಡ ಹೆಂಡತಿ ರದ್ದಿ ಆಯೋದ್ಕೆ ಹೋಗುತಿದ್ವಿ, ನಾನು ಮುಂಜಾನೆ, ಸಂಜೆ ಊರಾಗ ಭಿಕ್ಷೆಕ್ಕೆ ಹೋಗುತಿದ್ದೆ. ಭಿಕ್ಷೆದಾಗ ಬಂದ ಅನ್ನ, ರೊಟ್ಟಿ ತಿಂದು ಕಾಲ ಕಳಿತಿದ್ವಿ, ನನ್ನ ಗಂಡನ ದುಡುಮೆ ಗಂಡನ ಕುಡಿತಕ್ಕೇ ಸರಿಹೋಗುತ್ತಿತ್ತು. ಗಳಿಕೆಯಂತೂ ಸೊನ್ನೆ ಅವ್ನು ಗಳಿಸಿದ್ದುಕ್ಕಿಂತ ಸಾಲ್‌ಸಿದ್ದೆ ಹೆಚ್ಚಾತು. ಹಿಂಗಾದ್ರೆ ಸರಿಹೊಂದಕಿಲ್ಲ ಅಂತ ನನ್ನ ಗಂಡಗ ಒಪ್ಪಿಸಿ ಬಳ್ಳಾರಿಗೆ ಕರಕೊಂಡು ಬಂದೆ. ಇಲ್ಲಿ ಮೀನು ಹಿಡಿಯಾಕೆ ಹೋಗುತಿದ್ದಿಲ್ಲ. ಬರೀ ರದ್ದಿ ಆಯೋದು, ಪ್ಲಾಸ್ಟಿಕ್ ರಿಪೇರಿ ಮಾಡುತಿದ್ವಿ, ನಮ್ಮಪ್ಪನೋರ ಗುಡಾರದ ಮಗ್ಗುಲೇ ನಾವೊಂದು ಗುಡಾರ ಹೊಡಕೊಂಡಿದ್ವಿ, ಎರಡು ಮಕ್ಕಳಾದ್ವು, ಅಷ್ಟರಾಗೆ ಗುಡಾರನಗರಕ್ಕೆ (ನಾವು

ಸ್ಥಳಾಂತರಗೊಂಡೆವು) ಬಂದು ಟೆಂಟ್ ಹಾಕಿದ್ವಿ, ಗಂಡ ಪ್ಲಾಸ್ಟಿಕ್ ರಿಪೇರಿ ಮಾಡಾಕ ಸುತ್ತಮುತ್ತಲ ಹಳ್ಳಿಗೆ ಹೋಗುತ್ತಾನೆ. ದಿನಕ್ಕೆ ನೂರೋ, ಇನ್ನೂರೋ ದುಡಿಯುತ್ತಾನೆ. ಅದರಲ್ಲಿ ಆತನ ಊಟ, ಬಸ್ ಛಾರ್ಜು, ಟಿಫಿನ್, ಬೀಡಿ ಖರ್ಚು ಕಳೆಯಬೇಕು. ಕುಡೀತಾ ಇದ್ದ. ಈಗ ನಾಲ್ಕು ತಿಂಗಳಿಂದ ಬಿಟ್ಟಾನ. ನಾನೂ ಪ್ಲಾಸ್ಟಿಕ್ ಅನೇಕ ಪೇಪರ್‌ಚೀಲ ಗುಜಿರಿ ರದ್ದಿ ಆಯ್ಕೆಂಡ್‌ಬರ್‌ತ್ನಿ. ಮಕ್ಕಳನ್ನು ಇಲ್ಲಿಯೇ ಗುಡಾರನಗರದ ಶಾಲೆಗೆ ಹಾಕ್ಕೇವಿ. ಸರ್ಕಾರ ಕೊಟ್ಟ ಮನೆಯೊಳಗೆ ಜೀವನ ಸಾಗಿಸುತ್ತಿದ್ದೇವೆ. ಮನೆಯ ನಡುಸಾಕ ಗಂಡನಿಂದ ರೊಕ್ಕ ಇಸ್ಕೊಳ್ತೀನಿ. ಈಗೀಗ ಹಳ್ಳಿಗಳಿಗೆ ಹೋಗಿ ಲಂಗ, ಬನೀನು, ಚಡ್ಡಿ, ಸಣ್ಣಮಕ್ಕಳ ಬಟ್ಟೆ ವ್ಯಾಪಾರವನ್ನು ಮಾಡ್‌ಲಿಕ್ಕತ್ತಿನಿ. ನಮ್ಮ ಕಾಲೋನಿಯ ಬುಡ್ಗಜಂಗಮರ ಹೆಣ್ಣುಮಕ್ಕಳೊಂದಿಗೆ ಹೋಗಿ ವ್ಯಾಪಾರ ಮಾಡ್‌ತಿವ್‌ನಿ. ಹಬ್ಬಹರಿದಿನಗಳಲ್ಲಿ ವ್ಯಾಪಾರ ಹೆಚ್ಚಾಗುತ್ತದೆ. ಆದರೆ ಎಲ್ಲಾ ದಿನಗಳಲ್ಲಿ ವ್ಯಾಪಾರ ಆಗುವುದು ಕಷ್ಟ. ನಾನಾಗಲೀ, ನನ ಗಂಡನಾಗಲಿ ಬ್ಯಾಂಕಿನಾಗ ಸಾಲ ತಗೊಂಡಿಲ್ಲ. ಸಾಲ ಕೇಳಾಕಂತೊದ್ರ ಬ್ಯಾಂಕಿನವರು ನೂರು ನಮೂನೆಯ ಪ್ರಶ್ನೆ ಕೇಳುತ್ತಾರೆ. ನಮ್ಮಂಥ ಅಲೆಮಾರಿಗಳು ಅವರ ಪ್ರಶ್ನೆಗೆ ಉತ್ತರಿಸುವುದು ಕಷ್ಟ. ಹಿಂಗಾಗಿ ಬ್ಯಾಂಕ್ ಕಡೆ ಮುಖಾನೂ ಮಾಡಿಲ್ಲ. ಈಗ ನಾಲ್ಕು ವರ್ಷದ ಹಿಂದೆ ಕೊರಚರ ವೆಂಕಬಿತಾಗ ಸಾಲ ತಗೊಳ್ತಿದ್ವಿ, ನಾಕು ವರ್ಷದ ಹಿಂದೆ ವೆಂಕೋಬಿ ಸತ್ತ, ಈಗ ಜಂಬಣ್ಣ, ಕಂಪ್ಲಿ ಅಣ್ಣಂತಾಗೆ ಸಾಲ ತಗೋಳ್ತೀವಿ. ವ್ಯಾಪಾರ ಮಾಡಿ ಬಂದ ದುಡ್ಡಿನಾಗ ಎಲ್ಲಾ ತೀರಿಸ್ತೀವಿ. ಹಿಂಗೆ ಜೀವನ ಸಾಗಿಸೀವಿ. ಮೊದಲು ಗಂಡ ಕುಡಿತಾನೆ ಅಂತ ಚಿಂತೆ ಮಾಡುತ್ತಿದ್ದೆ. ಈಗ ಆ ಚಿಂತೆ ಇಲ್ಲ. ಮಕ್ಕಳನ್ನು ಭೇಸು ಓದಿಸಬೇಕೆಂಬೋ ಆಸೆ ಐತೆ. ಸರ್ಕಾರದಿಂದ ಮನೆ ಬಿಟ್ಟರೆ ಯಾವ ಯೋಜನೆಯ ಲಾಭಾನೂ ನಮಗಾಗಿಲ್ಲ. ನಾವು ಓದಿಲ್ಲ. ಹಿಂದೆ ಗುಡಾರದೊಳಗಿದ್ವಿ, ಈಗ ಮನೆಯಂತಾದ್ರೂ ಒಂದಾಗ್ಯಾದ. ನಮ್ಮ ಕಷ್ಟಾಂತೂ ತೀರಲಿಲ್ಲ, ಮಕ್ಕಳಾದ್ರೂ ಸುಖವಾಗಿರಲಿ ಅಂತ ಆಸೆ. ಆದ್ರ ನಮ್ ಮಕ್ಕಳಿಗೆ ಸಾಲಿ ಕಲುಸಕಂದ್ರ ಮನಿಯಾಗ ಸ್ವಲ್ಪ ಕಷ್ಟೈತಿ. ನನ್ ಗಂಡ ನಾನು ಇಬ್ರುಕೂಡಿ ಕೂಲಿನಾಲಿ ಮಾಡಿ ಜೀವನ ಅರಿಯಕತ್ತಿವಿ. ಯಾವಗಾದ್ರು ಒಂದು ಸರಿ ಅನ್ನುಸ್ತದ ಯಾಕಾರು ಈ ಜಾತ್ಯಾಗುಟ್ಟಿವೇನೊ ಅಂತ. ಅದ್ರಗು ಹೆಣ್ಮಕ್ಕಳಾಗಿ ಹುಟ್ಟುಬಾರ್ದು ಅನ್ನುಸ್ತದ. ಸಣ್ಣ್‌ವಯಸ್ನಾಗ ಮದುವಿ ಮಾಡ್ತಾರ ಆಮ್ಯಾಗ ಮಕ್ಕುಳು ಮರಿ ನಾವು ಬದುಕದ ಕಷ್ಟ ಅನ್ನುಸ್ತದ ಅದ್ರಗ ಅವುಕ್ಕು ಕಷ್ಟ್ಯಾಕನ್ನುಸ್ತದ. ನಮುಗು ಯಾರುನಾರ ನೋಡುದ್ರ ಅವ್‌ರಂಗ ಇರ್‌ಬಕು ಅನ್ನುಸ್ತದ. ಆದ್ರ ದೈವ ನಮ್ಮಣಿಯಾಗ ಅದುನ್ನ ಬರ್‌ದುಲ್ಲ. ನಾವು ಏನಾರ ಕೆಲ್ಸ ಮಾಡಿ ಬಾಳರಿಯನಂದ್ರ ನಮಿಗ್ಯಾರು ಕೆಲ್ಸ ಕೊಡಂಗಿಲ್ಲ. ಹಿಂಗ ಬಂಡೆ ಬಿದ್ರು ಮಾರಿ ಜೀವನ ಅರಿಬಕು. ಅಯ್ಯೋ ಹಿಂದ್ಲುದು ನೆನುದ್ರ ಕಣ್ಣಾಗ ನೀರು ಬರ್ತದ. ಒಂದೊತ್ತಿನ್ ಕೂಳಿಗು ಬಡುದಾಡ ಪರಿಸ್ಥಿತಿ ಇತ್ತು. ಒಂತಾಗಲ್ಲ ನಾವು ಟೆಂಟ್ ಹೊಡುದುದ್ದು ಹೇಳಿದ್ರ ತೀರಂಗಿಲ್ಲ. ನಮ್ಮಂತ ಬಂಡಾಟದ ಬಾಳು ಯಾರಿಗು ಬರದುಬ್ಯಾಡ ಅಂತಿನಿ. ಹೆಂಗೆಂಗೊ ಮಾಡಿ ಗಡ್ಡಿಗೇರಿ ಬಂದಿವಿ. ಅದ್ರಗ ಗುಡಾರ್‌ನಗರುಕ್ಕ ಬಂದಾಗ್ಲಿಂದ ಒಂದ್‌ಮಟ್ಟಿಗೆ ಪರುವಿಲ್ಲ. ನಮಿಗಿನ್ನೇನಿಲ್ಲ ಈ ಮಕ್ಳು ಒಂದೀಟು ಒತಂಗೊದಿದ್ರ ಸಾಕು. ನಾವಾದಂಗಾಗಬಾರ್ದು ನಮ್ಮ ಮಕ್ಕಳು. ಅವ್ರಿಗೆ ಯಾ ಕಷ್ಟ ಇಲ್ಲದಂಗ ನೋಡಿಕೆಬಕು ಅನ್ನದೊಂದಾಸೆ ಐತಿ ಅಷ್ಟ.

**ಶೀಲಾ, (ವಯಸ್ಸು ೩೯) ಸಮುದಾಯ: ಪಾರ್ಧಿ, ಕಂಪ್ಲಿ**

ಮಹಿಳೆ ಹೆಸರು ಶೀಲಾ, ಗಂಡನ ಹೆಸರು ರಾಮು, ನಾವು ಅಕ್ಕಪಕ್ಕದ ಮನೆಯವ್ರು, ನಾನು ಶಾಲೆಗೆ ಹೋಗಿಲ್ಲ. ನನ್ನ ಗಂಡನಿಗೆ ಸಣ್ಣಾತಿದ್ದಾಗಲೇ ಒಂದು ಮದುವೆ ಆಗಿತ್ತು. ನಮ್ಮಲ್ಲಿ ಸಣ್ಣೋರಿದ್ದಾಗಲೇ ಮದುವೆಯಾಗೋದು ಹೆಚ್ಚೈತಿ. ಎಷ್ಟೋಸಾರಿ ಕೂಸು ಹೊಟ್ಟೇಲಿದ್ದಾಗಲೇ ಹೆಣ್ಣು ಹುಟ್ಟಿದ್ರೆ ನಮ್ಮನಿಗೆ ಕೊಡಬೇಕು, ಗಂಡು ಹುಟ್ಟಿದ್ರೆ ನಮ್ಮ ಹುಡುಗೀನ ಕೊಡುತೀವಿ ಅಂತ ಮಾತುಕತೆಯಾಗಿರುತ್ತೈತಿ. ಅಕಸ್ಮಾತ್ ಮಾತಿಗೆ ತಪ್ಪಿದ್ರೆ ಪಂಚಾತಿ ಸೇರ್ಸಿ ಶಿಕ್ಷೆ ಕೊಡೋದು, ದಂಡ ಹಾಕೋದು ಮಾಮೂಲು. ಹುಡುಗಿ, ಹುಡುಗರ ಇಷ್ಟಿಷ್ಟಗಳು ನಮ್ಮ ಹಿರೇರು ನೋಡಂಗಿಲ್ಲ. ಅಂತ ಜಾತಿ ನಮ್ದು. ನಾವು ಈಗಿರೋ ಜಾಗ ಊರ ಕೊನೆಯಂತೆ. ಜನರು ಬರುವುದಕೆ ಹೆದ್ರುತಿದ್ರಂತೆ. ಯಾಕಂದ್ರ ಅದು ಊರು ಕೊನಿಗಾಕತಿ ಜಾಗ ಒಳ್ಳೇದಿಲ್ಲ ಗಾಳಿ ಶೆಡುಕೈತಿ ಅಂತುದ್ರು ಆದ್ರ ಈಗ ಊರೊಳಗೆ ಆಗೈತಿ. ಸುತ್ತುಮುತ್ತು ಮನಿಗುಳು ಅಂಗಡಿಗುಳು ಆಗ್ಯಾವು ನಮ್ಮ ಜಾತಿಯೋರು ಮೊದ್ಲು ಚಂದ್ರಕಲಾ ಟಾಕೀಸು ಐತಲ್ಲ. ಅದ್ರತಾಗ ದೊಡ್ಡ ತೆಗ್ಗು ಇತ್ತು. ಆ ತೆಗ್ಗಿನಾಗ ಗುಡಾರ ಹಾಕ್ಕೊಂಡು ಇರುತಿದ್ರಂತೆ. ಆ ಮೇಲೆ ಮುನಿಸಿಪಾಲಿಟಿ ಕಡೆಯಿಂದ ಒಂದುವರೆ ಎಕ್ರೆ ಜಾಗ ನಮ್ಮೋರಿಗಾಗಿ ಬಿಟ್ಟುಕೊಟ್ರಂತೆ. ಜಾಗ ಬಿಟ್ಟುಕೊಟ್ರು, ನಮ್ಮೋರು ಗುಡಾರ ಹೊಡಕೊಂಡ್ರು, ಮನೆ ಕಟ್ಟಿಕೊಳ್ಳಬೇಕು ಅಂತ ಇವ್ರಿಗೆ ಅನಿಸಲಿಲ್ಲ. ಜಾಗ ಕೊಟ್ಟವ್ರ್ಯಾಲೆ ಸೈಟುವಾಡಿ ನವ್ಮೋರಿಗೆ ಹಂಚಬೇಕು ಅಂತ ಮುನಿಸಿಪಾಲಿಟಿಯೋರಿಗೂ ಅನಿಸಲಿಲ್ಲ. ಈ ಜಾಗದಾಗ ಮನೆ, ಗುಡಿಸಲು, ಗುಡಾರ ವಾಡಿಕೊಂಡದೀವಿ. ಇವತ್ತಿಗೂ ಈ ಜಾಗದಾಗ ಮನೆ ಸೈಟು ಹಂಚಬೇಕು ಅಂತ ಮುನಿಸಿಪಾಲಿಟಿಯೋರಿಗೆ ಅನಿಸಿಲ್ಲ. ಈಗೀಗ ನಮಗೆ ಈ ಜಾಗ ಬಿಟ್ಟು ಸಣಾಪುರ ಮಟ್ಟಿಗೆ ಹೋಗ್ರಿ, ಸೈಟ್ ಕೊಡ್ತೀವಿ ಅಂತಾರೆ. ಈ ಜಾಗಕ್ಕೆ ಕಂಪ್ಲಿಯಾಗೆ ಬಂಗಾರದ ಬೆಲೆ ಐತಿ ಗೇಣು ಜಾಗುಕ್ಕ ಲಕ್ಷ ಲಕ್ಷ ರೊಕ್ಕ ಐತಿ. ಅದೆಂತದೊ ಬಿಲ್ಡಿಂಗ್‌ಗಿಲ್ಡಿಂಗ್ ಅಂತರಲ್ಲ ಅದುಕ್ಕೊ ಯದುಕ್ಕೊ ಗೊತ್ತಿಲ್ಲ. ಬಾರಿ ಬೇಡಿಕಿ ಐತಿ. ನಮ್ಮ ಕಾಲೋನಿ ಊರ ಮಧ್ಯಕ್ಕಾಗಿದೆ.

ಇನ್ನು ನಮ್ಮ ಜೀವನದ ಕಥಿ ಕೇಳ್ರಿ, ನಾನು ಮದುವಿ ಆಗಿರದು ನನ ಗಂಡುಗ ಎರಡನೇ ಹೆಂಡ್ತಿಯಾಗಿ ಈ ಮನಿಗೆ ಕಾಲಿಟ್ಟೆ. ನಮ್ಮಕ್ಕ ಈ ಮನಿ ಎದುರು ಮನಿಯಾಗೆ ಇರೋದು. ಅಂದ್ರ ನನ್ ಗಂಡನ ಮದ್ಲಿನ ಹೆಂಡ್ತಿ. ಯಾಕೊ ಅವರಿಬ್ರು ಮಾತಾಡಂಗಿಲ್ಲ. ಆದ್ರ ನನ್ನು ಮಾತಾಡುಸ್ತಳ ನನ್ನ ಮಕ್ಕಳನ್ನ ಎತ್ತಿಕೊಳ್ತಾಳೆ, ಆದ್ರೆ ನನ ಗಂಡನ ಜೊತೆ ಸಂಪರ್ಕ ಇಲ್ಲ. ನಾವು ಯಾವತ್ತೂ ಜಗಳ ಆಡಿಲ್ಲ. ನನ್ನ ಗಂಡ ಏನೇನೋ ಕೆಲಸ ಮಾಡಿ ನಮಗೆ ಸಾಕುತಾನೆ. ಒಂದು ಕಲಾ ತಂಡ ಕಟ್ಟಿಕೊಂಡಾನ, ಯಾವುದಾದ್ರೂ ಪ್ರೋಗ್ರಾಂ ಶುಭಕಾರ್ಯಗುಳೂ ಸಿಕ್ಕರೆ ಅದರಾಗೆ ತನ್ನದೊಂದು ಪಾಲು ತಗೊಂಡು ಕುಣಿಯೊದು ನಗುಸದು ಆಡುಕಟ್ಟದು, ಭಜನಿ ಹಾಡದು ಮಾಡಿ ನಮಗೆ ಸಾಕುತಾನೆ. ನಾನು ದೇಸಿ ಸರಾಯಿ ಮಾಡ್ತೀನಿ. ಅದೂಕೂಡ ಮಾಡದು ಕಷ್ಟ. ಪೋಲಿಸ್ರುಗ ಹೆದ್ರಿ ಕದ್ದುಮುಚ್ಚಿ ಮಾಡಕಾಗೆತಿ. ನಾವು ಅದು ಮಾಡದು ತಪ್ಪಂತಾರ. ನಾವೇನು ಆ ಮಂದಿಗೆ ಬಲುವಂತದಾಗೆ ಕರುದು ಕೊಡ್ತಿವೇನು. ಇಷ್ಟಿದ್ದರು ಬಂದು ಕುಡಿತಾರ ಆದ್ರ ಪೋಲಿಸ್ರು ಅದುಕ್ಕ ಕಳ್ಳಭಟ್ಟಿ ಸರಾಯಿ ಅಂತಾರೆ, ಜನರು ಭಟ್ಟಿ

ಸರಾಯಿ ಅಂತಾರೆ. ನಾವು ದೇವ್ರಿಗೆ ಏರಿಸೋದೆ ಈ ಭಟ್ಟಿ ಸರಾಯಿ. ಭಟ್ಟಿ ಸರಾಯಿ ಇಲ್ದೆ ಯಾವ ದೇವ್ರು ಕಾರ್ಯವೂ ನಮ್ಮಲ್ಲಿ ನಡೆಯೋದಿಲ್ಲ. ನಾವು ದೇವ್ರಿಗೆ ನೈವೇದ್ಯ ಮಾಡೊದು ಇದುನ್ನ. ಆದ್ರ ಪೋಲಿಸಪ್ಪರು ನಮಿಗೆ ಸೇರಂಗಿಲ್ಲ. ಸಾರಾಯಿ ಮಾಡಕಂದ್ರ ಪೋಲಿಸರ ಕಿರುಕುಳ ಭಾಳೈತೆ. ಇಲ್ಲಿಯ ಬ್ರಾಂಡಿ ಷಾಪಿನವರು ಅಬಕಾರಿ ಇಲಾಖೆಯೋರಿಗೆ ರೊಕ್ಕ ಕೊಟ್ಟು ನಮ್ಮ ಮ್ಯಾಲೆ ರೈಡ್ ಮಾಡೋಕೆ ಕಳಿಸ್ತಾರೆ, ನಾವು ಈ ಸಾರಾಯಿ ಮಾಡಿ ಮಾರುದ್ರ ಬ್ರಾಂಡಿ ಅಂಗ್ಡ್ಯಾರಿಗೆ ರೊಕ್ಕ ಆಗಂಗಿಲ್ಲಂತ ಪೋಲಿಸರನ್ನೂ ಕಳಿಸ್ತಾರೆ. ನಾವು ದುಡಿಯದು ತಿಂಬಕಾಗಿ ಬಟ್ಟೆಗಾಗಿ ಆ ಬ್ರಾಂಡಿ ಅಂಗಡೆರು ಅದುಕ್ಕ ಮಾಡ್ತರ ಆದ್ರ ಅವ್ರಿಗೆ ಕೇಳಲ್ಲ ನಮಿಗೆ ಕೇಳ್ತಾರ ನಮಗೆ ನೋಡುದ್ರ ಅದು ಬಿಟ್ಟು ಬ್ಯಾರೆ ಗೊತ್ತಿಲ್ಲ. ಮೊದಲು ಭಿಕ್ಷಕ್ಕ ಹೋಗುತಿದ್ವಿ, ಈಗೀಗ ಭಿಕ್ಷೆ ಬೇಡೋದು ಬಿಟ್ಟೇವಿ. ದುಡುಕೊಂಡು ತಿಂಬೋಕು ಈ ಅಧಿಕಾರಿಗಳು ಬಿಡುವಲ್ರು, ನಮಗೆ ದುಡುಮೆಗೆ ಬ್ಯಾರೆ ದಾರಿ ತೋರಿಸಿರಿ ಅಂದ್ರೆ ಅದಕ್ಕೂ ತಯಾರಿಲ್ಲ. ನಮ್ಮಂತೋರಿಗಾಗಿ ಸರ್ಕಾರ ನೂರೆಂಟು ಯೋಜನೆ ಮಾಡ್ಯಾವಂತ, ಅದರ ಲಾಭ ತಗೋಳ್ರಿ ಅಂತ ಕಾಲೋನಿಗೆ ಬಂದು ಭಾಷಣ ಮಾಡೋ ಅಧಿಕಾರಿಗಳೇ ಹೆಚ್ಚು. ಆದರೆ ಯಾವ ಯೋಜನೆಗಳೂ ನಮ್ಮತಾಗೆ ಬಂದಿಲ್ಲ. ಅವುಗಳ ಮುಖಾನೂ ನಾವು ನೋಡಿಲ್ಲ. ಅವೇನದವೊ ಅವೆಂಗೆಂಗ ತಗಬಕೊ ಗೊತ್ತಿಲ್ಲ. ನಮಿಗೆ ಪತ್ರ ಬರಿಯದು ಗೊತ್ತಿಲ್ಲ. ಅದುನ್ನೆಲ್ಲಿ ಕೊಡ್ತರಂತಲೂ ಗೊತ್ತಿಲ್ಲ. ನಮಿಗ್ಯಾರಾದ್ರು ಬಂದು ಏನಾದ್ರು ಹೇಳಿದ್ರು ತಿಳಿಯಂಗಿಲ್ಲ. ಯೋಜನಿಗುಳು ಏನದವೊ ಅವೆಂಗ ತಗಬಕೊ ಯಾರ್ನಾರ ಕೇಳ್ಬಕು. ಇದು ನಂದೊಂದೆ ಕಥೆಯಲ್ಲ. ನಮ್ಮ ಕಾಲೋನಿ ಕಥೆ ಇದು.

ಇನ್ನು ಕುಟುಂಬಕ್ಕೆ ಸಂಬಂಧಿಸಿ ಗಂಡ ಹೆಂಡ್ತಿ ಇಬ್ರೂ ದುಡೀತೀವಿ. ಹೊರಗೆ ನಿರ್ಣಯ ತಗಳಾದು ನನ್ನ ಗಂಡ. ಮನೆಯೊಳಗೆ ನಾನೆ ನಿರ್ಣಯ ತಗಳಾದು. ಇಬ್ರು ಕುಂತು ಮಾತಾಡಿಯೇ ಎಲ್ಲಾ ಕೆಲಸ ಮಾಡುತೀವಿ. ಆದ್ರ ಹೊರಗಿಂದೇನು ನಾ ತಲೆ ಹಚ್ಚಂಗಿಲ್ರಿ, ಏನೇ ಬಂದ್ರು ನನ ಗಂಡಾನ ವಿಚಾರ್ ಮಾಡ್ತಾನ್ರಿ. ನನಿಗಂತು ಬಾಳ ಚಿಂತೈತ್ರಿ ನಮಿಗೊಂದು ಸ್ವಂತ್‌ಮನಿ ಇಲ್ಲ. ಅಧಿಕಾರಿಗುಳು ದೊಡ್ಡ ಮನಿಷ್ರುಗೆ ಕೇಳುದ್ರ ಕೊಡ್ತೀವಿ ನಿಮುಗಲ್ದ ಯಾರಿಗ ಕೊಡಾನಂತಾರ. ಹೆಸರಿಗೆ ಹೇಳ್ತಾರ ನಮಗೆ ಸರ್ಕಾರದಿಂದ ಮನೆ ಕೊಡ್ತೀವಿ ಅಂತ ಹೇಳ್ತಾರೆ. ಮನೆ ಕೊಡ್ರಿ ಅಂದ್ರೆ ನಿಮ್ಮ ಜಾಗ ಅದು ಅಂಬೋದಕ್ಕೆ ಸಾಕ್ಷಿ ಏನೈತೆ, ಪಟ್ಟಾ ತಗಂಡುಬರ್ರಿ ಅಂತಾರೆ. ನಮ್ಮ ಕಾಲೋನಿಯೊಳಗೆ ಒಂದೆಲ್ಡು ಮನಿ ಹೊರತಾಗಿ ಯಾರಿಗೂ ಪಟ್ಟ ಇಲ್ಲ. ಪಟ್ಟ ಇಲ್ದಿದ್ಕೆ ಮನಿಯೂ ಸಿಕ್ಕಿಲ್ಲ. ಹಂದಿಗೂಡಿನಂತ ಮನಿಯೊಳಗೆ ಎರಡೆರಡು ಸಂಸಾರ ಮಾಡ್ತೀವಿ. ನಮ್ಮ ಬದುಕು ಯಾವಾಗ ಸರಿಹೋಗ್ತದೋ ಏನೊ. ಇರಾಕ ಜಾಗಿದ್ರು ಸ್ವಂತದಂತ ಕಣ್ತುಂಬ ನಿದ್ದಿ ಮಾಡಂಗಿಲ್ಲ. ಯಾವಗ ಯಾರು ಬಂದು ಏನಂತಾರೊ ಅನ್ನಂಗಾಕತಿ. ನಮ್‌ದು ಅಂತಾದ್ರ ನೆಮ್‌ದಾಗಿರಬೋದು. ಆ ದೇವ್ರು ಇನ ಯಾವಗ ಕಣ್ತೆರಿತದೊ ನೋಡ್ಬಕು. ಇದೆಲ್ಲ ನೋಡಿ ಇಲ್ಲಿಗ ಜೀವನ ಸಾಕನ್ಸೈತಿ.

**ಪಾರ್ವತಮ್ಮ, (ವಯಸ್ಸು ೮೨) ಸಮುದಾಯ: ಪಾರ್ಧಿ, ಯಡ್ರಾಮನಹಳ್ಳಿ, ಹಗರಿಬೊಮ್ಮನಹಳ್ಳಿ**

ಮಹಿಳೆ ಹೆಸರು ಪಾರವ್ವ ಅಂತ, ಜನ್ರು ಪಾರ್ತೆಮ್ಮ, ಪಾರ್ವತಮ್ಮ ಅಂತ ಕರೀತಾರೆ. ನನ್ನ ಗಂಡನ ಹೆಸರು ಪಾತಪ್ಪ, ನಮ್ದು ಮೇಲ್ ಶಿಕಾರಿ ಜಾತಿ, ನಮ್ಮ ಭಾಷಾದೊಳಗೆ ಪಾರ್ಧಿ ಅಂತಾರೆ. ನಂಗೆ ನಾಕು ಮಕ್ಳು, ಎಲ್ಡು ಹೆಣ್ಣು, ಎಲ್ಡು ಗಂಡು. ಎರಡು ಹುಡಿಗೇರನ ಮದುವಿ ಮಾಡಿಕೊಟ್ಟೇನಿ. ನಮಗೆ ಒಂದು ಮನಿ ಇಲ್ಲ, ಒಂದು ಹೊಲ ಇಲ್ಲ. ಅಡುವ್ಯಾಗ ಅಲದಾಡ್ತಾ ಬದುಕೀವಿ. ನಮಗೊಂದು ಊರಂತ ಇಲ್ಲ. ನಮ್ಮ ಅಣ್ಣನ ಕುಟುಂಬ ಮುಂಡ್ರಿಗಿ ಕಡೀಗೆ ಐತಿ. ನನಗೆ ವಯಸ್ಸಾತು, ಕಣ್ಣು ಕಾಣುವಲ್ದು, ಊರಾಗ ಭಿಕ್ಷೆ ಬೇಡಿ ಜೀವನ ಮಾಡ್ತೀನಿ. ನನಗೆ ಮದುವಿ ಆದಾಗ ಎಂಟು ವರ್ಷ ಇತ್ತು. ಗಂಡ ಚೊಲೋ ಬೇಟೆ ಆಡೋನು. ಗಿಡದ ಔಷಧಿ ಕೊಡೋನು. ಅವನತಾಗೆ ಔಷಧಿ ಪಡೆಯೋದಕೆ ಜನ್ರು ಬರುತಿದ್ರು. ಕಪ್ಪತ ಗುಡ್ಡಕ್ಕೆ ಹೋಗಿ ಗಿಡ ಬೇರು ತರುತಿದ್ವಿ, ಅದರಾಗೆ ಔಷಧಿ ಮಾಡುತಿದ್ವಿ, ಇವತ್ತಿಗೂ ಯಾರಾನ ಬಂದ್ರೆ ಔಷಧಿ ಕೊಡ್ತೀನಿ. ನನ್ನ ಒಬ್ಬ ಮಗನ ಮೇಲೆ ಪೋಲಿಸ್ರು ಕಳ್ಳತನದ ಸುಳ್ಳು ಕೇಸು ಹಾಕಿ ಜೈಲಿಗೆ ಹಾಕಿದ್ರು, ಆತನ್ನ ಬಿಡಿಸಿಕೊಂಡು ಬರಾಕ ಊರೋರ್ನೆಲ್ಲಾ ಬೇಡಿದೆ. ಯಾರೂ ಜಾಮೀನು ಕೊಡೋಕೆ ರೆಡಿ ಇರಲಿಲ್ಲ. ಮೊನ್ನೆ ಮೊನ್ನೆ ಬಿಡುಗಡೆ ಆಯಿತು. ಸಣ್ಣ ಮಗನಿಗೂ ಮಾಡಲಾರ್‌ದ್ ತಪ್ಪಿಗ ಜೈಲಿಗೆ ಆಕಿದ್ರು. ಅವನು ಓಡಿದ ಅಂದ್ರೆ ಚಿಗರಿ, ಚಿಗರಿ ಓಡಿದಂಗ ಓಡುತಿದ್ದ. ಯಾವ ಗಂಡುಮಗ ಪೋಲಿಸ್ನೂ ಅವನ ಸಮಕ್ಕೆ ಓಡಿ ಹಿಡಿಯಾಕಾಗುತಿರಲಿಲ್ಲ. ಅಷ್ಟು ಚುರುಕು. ಅವನಿಗೆ ಒಂದ್ಸಾರಿ ಸುಳ್ಳುಕೇಸು ಹಾಕಿ ಹಿಮ್ಮಡಿತಾಗೆ ನರಗಳನ್ನ ಕತ್ತರಿಸಿ ಹಾಕಿದ್ರು. ಅವತ್ತಿನಿಂದ ಓಡಾಕ ಬರಾದಿಲ್ಲ. ಓಡಾಕೇನು, ಜೋರಾಗಿ ನಡೆಯಾಕೂ ಆಗಾದಿಲ್ಲ. ನಾ ಭಿಕ್ಷೆ ಬೇಡಿ ತಂದಿದ್ನೇ ತಿಂದುಕೊಂಡು ಅದಾನ. ನಮಗೆ ಮನಿ ಇರಲಿಲ್ಲ. ನನಗಿ ಬಸರಾಜ ಅಂತ ಒಬ್ಬ ಕುರುಬರೋನು ಪರಿಚಯ. ನನ್ನ ಮಗಾ ಇದ್ದಂಗೆ. ಹೊಲಕ್ಕೆ ಹೋಗಿ ಬರುವಾಗ ನನ್ನ ಮಾತಾಡಿಸ್ತಿದ್ದ. ನಮ್ಮ ಗುಡಾರತ್ತಾಗ ಕುಡಿಯೋಕೆ ಬರೋನು. ನಮ್ಮ ಮಗ ಯಾವುದಾದ್ರೂ ಪಕ್ಷಿ ಹೊಡಕೊಂಡು ಬಂದ್ರೆ ಕುಡಿಬೇಕಾದ್ರೆ ನೆಂಜಿಕೊಳ್ಳಾಕ ಕೊಡುತ್ತಿದ್ದೆ. ಅದರ ಆಸೆಗೆ ಬರೋನು. ಆತ ಪಂಚಾತಿ ಮೆಂಬ್ರು ಆದ ಮ್ಯಾಗೆ ನನಗೆ ಒಂದು ಜನತಾಮನೆ ಕೊಡಿಸಿದ. ಊರಮಗ್ಗಲು ಬೇರೆಯೋರ ಪ್ಲಾಟುಗಳುತಾಗೆ ಪ್ಲಾಟು ಕೊಡಿಸಿದ್ದ. ಊರೋರೆಲ್ಲಾ ಅವನಿಗೆ ಎದುರಾದ್ರು. ಊರನ ಕಳ್ಳರ ಕೇರಿ ಮಾಡಬೇಕಂತೀರೇನು ಅಂತ ಜಗಳ ಮಾಡಿದ್ರು. ಆತ ಬೇರೆ ದಾರಿ ಕಾಣದೆ ಸುಮ್ಮನಾದ. ಕೊನಿಗೆ ಊರಿಂದ ಎರಡು ಫರ್ಲಾಂಗು ದೂರಾದಾಗಿರೋ ತಮ್ಮ ತಿಪ್ಪಿ ಜಾಗದಾಗೆ ನನಗೆ ಮನೆ ಕಟ್ಟಿಸಾಕೆ ದಾರಿ ಮಾಡಿಕೊಟ್ಟ, ಇವತ್ತಿಗೂ ಈ ಮನಿಗೆ ಕರೆಂಟಿಲ್ಲ. ಮನೆ ಸುತ್ತ ತಿಪ್ಪಿಗಳು, ಹಾವು ಚೇಳು ಏನು ಬರುತಾವೋ ದೇವ್ರಿಗೇ ಗೊತ್ತು. ನನಗೆ ಕಾಲು ಮುರುದಾಗ ನನ್ನ ಮಕ್ಳು ಎಲ್ಲಾ ಜೈಲಾಗ ಇದ್ರು. ನನಗೆ ದಿನಾ ಮನಿಯಿಂದ ಬುತ್ತಿ ತಂದು ಉಣ್ಣಿಸಿ ಆರೈಕೆ ಮಾಡಿದ. ಕಾಲು ಕಟ್ಟೋರ್ನ ಕರೆಸಿ ಕಾಲು ಕಟ್ಟಿಸಿದ. ಮೂರು ತಿಂಗಳ ಮ್ಯಾಲೆ ಎದ್ದು ಓಡಾಡಂಗಾದೆ. ಆತ ಮೆಂಬ್ರು ಆಗಿದ್ದಾಗ ನನಗೆ ಮುದೇರು ಸಂಬಳ ಮಾಡಿಸಿದ. ಆ ಎರಡು ಆಶ್ರಯಾನೂ ಮರೆಂಗಿಲ್ಲ. ದಿಕ್ಕಿಲ್ಲದೋರಿಗೆ ದೇವ್ರು ಗತಿ ಅಂತಾರೆ. ನನ್ನ ಪಾಲಿಗೆ ಬಸವರಾಜನೇ ದೇವ್ರು. ಈಗ ಆತ ಈ ಊರಾಗಿಲ್ಲ. ಅಡವಿ

ಕ್ಯಾದಿಗಳ್ಳಿಯಾಗ ಅದಾನ. ಯಾವಾಗಾದ್ರೂ ವಾರಕ್ಕೊ, ತಿಂಗಳಿಗೋ ಒಮ್ಮೆ ಬರುತಾನೆ. ಬಂದಾಗ ಮಾತಾಡಿಸಿ ಹೋಗ್ತಾನೆ. ಸರ್ಕಾರದವ್ರು, ಪೋಲಿಸರು ನಮಗೆ ಏನೂ ಸಹಾಯ ಮಾಡಾದು ಬ್ಯಾಡ. ನಮ್ಮನ್ನ ಮನುಷ್ಯರಂಗೆ ನೋಡಿದ್ರೆ ಸಾಕು. ನನ್ನ ಮಕ್ಕಿಗಂತೂ ಆ ಪೋಲಿಸಪ್ಪನೋರು ಸುಮ್‌ಸುಮ್‌ನೆ ಕಳುವ್ ಓರಿಸಿ ಮಗ್ಗುಲು ಮುರುದ್ರು ಏನು ಒಜಿಕೆಲ್ಸ ಆಗಂಗಿಲ್ಲ. ನಾವೇನೂ ತಪ್‌ಮಾಡಿಲ್ಲಂದ್ರೂ ಯಾರೂ ಕೇಳಂಗಿಲ್ರಿ . ನನ್ನ ಮುದಿ ವಯಸ್ನಾಗೆ ಯಾರೋ ಸರ್ಕಾರದ ಜನ ನಮ್ಮ ಜಾತಿಮ್ಯಾಗ ಸಿನೆಮಾ ಮಾಡ್ತೀನಿ ಅಂತ ಬಂದ್ರು. ನಮ್ಮನ್ನೆಲ್ಲಾ ಹಕ್ಕೊಂಡು ಒಂದೆಲ್ಡು ದಿನ ಸಿನೆಮಾ ತಗದ್ರು. ಆಗ ಒಂದು ಮೂರು ಸಾವಿರ ಕೊಟ್ಟಿದ್ರು. ಮಗ ಕುಡೇದ್ಕೆ ಎಲ್ಲಾ ಖರ್ಚು ಮಾಡಿಬಿಟ್ಟ. ಮತ್ತೊಂದು ಸಲ ನನಗೆ ಏನೋ ಸರ್ಕಾರದೋರು ಪ್ರಶಸ್ತಿ ಕೊಡ್ತೀವಿ ಅಂತ ಪತ್ರ ಹಾಕಿದ್ರು. ಬಸವರಾಜನತಾಗೆ ಪತ್ರ ಓದಿಸಿದೆ. ಬಸವರಾಜನೇ ನನಗೆ ಬೆಂಗಳೂರಿಗೆ ಕರಕೊಂಡೋದ. ಅವಾಗ ಕಂಚಿಂದು ಒಂದು ಪತ್ರ, ಐದು ಸಾವಿರ ಕೊಟ್ರು. ಅವಾಗೊಂದರೆಡು ದಿನ ಪೇಪರಿನೋರು ಬಂದು ಸುದ್ದಿ ಬರೆದ್ರು. ಪೇಪರನ ತಂದು ಬಸವರಾಜಾನೆ ಓದಿ ಹೇಳುತಿದ್ದ. ಆಮೇಲೆ ನಾನು ಸತ್ತೀನ, ಬದಿಕೀನ ಅಂತ ಯಾವ ಅಧಿಕಾರಿಗಳೂ ಕೇಳಲಿಲ್ಲ. ನನ್ನ ಮನಿ ಮ್ಯಾಲೆ ಸಿಮೆಂಟು ಸೀಟು ಹಾಕ್ಯಾರೆ. ರಜದಾಗ ಆಡೋಕೆ ಬರೋ ಹುಡುಗರು ಸಿಮೆಂಟು ಸೀಟಿಗೆ ಕಲ್ಲು ಹೊಗೆದು ತೂತು ಬಿದ್ದೋಗ್ಯಾವೆ. ಮಳೆ ಬಂದ್ರೆ ಮನೆಯಲ್ಲಾ ನೀರು. ಈ ಮುದಿ ವಯಸ್ಸಿನಾಗ ನಾನು ಏನು ಮಾಡ್ಲಿ. ನಮ್ಮನಿ ಸೀಟು ಬದಲಿಸಿಕೊಡ್ರಿ ಅಂತ ಪಂಚಾತಿಯೋರಿಗೆ ಕೇಳ್ದೆ. ಯಾರೂ ಮೈಗಚ್ಚಿಕೊಳ್ಳೋದಿಲ್ಲ. ಬಸವರಾಜ ಇದ್ರೆ ಏನಾದ್ರೂ ಮಾಡತಿದ್ನೇನೋ, ಆತನೂ ಊರಾಗಿಲ್ಲ. ಕಣ್ಣು ಕಾಣಾದಿಲ್ಲ, ಭಿಕ್ಷಕ್ಕ ಹೋಗೋದು ಕಷ್ಟ ಆಗ್ಯೆತಿ. ಕಣ್ಣು ತೋರಿಸಾಣಾಂದ್ರೆ ರೊಕ್ಕ ಇಲ್ಲ. ಜೊತಗೆ ಚಾಕರಿ ಮಾಡೋರೂ ಇಲ್ಲ. ದೇವ್ರಿಟ್ಟಂಗಾಗ್ಲಿ ಅಂತ ಸುಮ್ಮಗಾಗಿಬಿಟ್ಟೀನಿ. ನೀವು ಕೇಳಿದ್ರಿ ಅಂತ ಇಷ್ಟೆಲ್ಲಾ ಹೇಳಬೇಕಾತು. ಈಗೀಗ ಮರುವೂ ಹೆಚ್ಚಾಗ್ಯೆತೆ. ಎಲ್ಲ ಇಂಗ ಬಂದು ಕೇಳಿಕೆಂಡ್ ಹೋಗಮಂದಿ ಅದಾರ ಅಷ್ಟ. ನಮಿಗೇನೂ ಯಾರು ಕೈಲಾದ್‌ದು. ಮಾಡಂಗಿಲ್ಲ ನೋಡ್ರಿ ಯಾ ಸಹಾಯ ನೀಡಂಗಿಲ್ಲ ಯಾರಿಗೇನಂದ್ರು ಪ್ರಯೋಜ್‌ನಿಲ್ಲ.

**ಬಸಮ್ಮ, (ವಯಸ್ಸು ೪೦) ಮೇದ, ಕಂಪ್ಲಿ**

ಮಹಿಳೆ ಹೆಸರು ಬಸಮ್ಮ. ನನ್ನ ಗಂಡನ ಹೆಸರು ವೆಂಕಟೇಶಪ್ಪ. ನಮ್ ಜಾತಿ ಬಂದು ಮೇದ. ಮ್ಯಾದಾರು ಅಂತ ಇಲ್ಲಿ ಕರೀತಾರೆ. ನಾನು ಮದುವೆಯಾದಾಗ ಹನ್ನೆರಡು ವರ್ಷದ ಹುಡುಗಿ. ನಮ್ಮಾತನಿಗೆ ೧೬-೧೭ ವರ್ಷ ಇದ್ದಿತೇನೊ. ನನ್ನ ತವರುಮನೆ ಹಗರಿಬೊಮ್ಮನಹಳ್ಳಿ. ನಾವು ಬಡವರು. ಆ ಕಾಲಕ್ಕೆ ಕೆರಸೆ, ಮೊರ, ಪುಟ್ಟಿ ಹೆಣಿತಿದ್ವಿ. ನಮ್ಮೂರಾಗ ಸಂತೆಗೆ ಬರೋರು ಹೆಚ್ಚಾಗಿ ಕೊರವರ ಈಚಲು ಪುಟ್ಟಿ, ಲೆಕ್ಕೆ ಬೆತ್ತದ ಪುಟ್ಟಿ ಹೆಚ್ಚು ಇಷ್ಟ ಪಡೋರು. ದನಕರಗಳ ಶೆಗಣಿಕಸ ತುಂಬೋಕೆ, ತೆನೆ ಹೋರಾದಕೆ ಆ ಪುಟ್ಟಿ ಬಳಸೋದೆ ಹೆಚ್ಚು. ನಮ್ಮ ಪುಟ್ಟಿಗಿಂತ ಹೆಚ್ಚು ಬಾಳಿಕೆ ಬರ್ತಾವು ಮತ್ತೆ ಕಡಿಮೆ ರೇಟು ಅವಕ್ಕೆ. ನಮ್ಮು ಪುಟ್ಟಿ ಸಿಬ್ಲಿಗಳು ಅಡುಗೆ ಮಾಡೋದಕೆ ಹೆಚ್ಚು ಬಳಕೆ ಆಗೋವು. ನಮ್ಮ ತವರುಮನಿ ಕಡೆ ರೊಟ್ಟಿ ಮಾಡೋದು ಹೆಚ್ಚು. ಸುಟ್ಟು ರೊಟ್ಟೀನ ಬಿದರ

ಪುಟ್ಯಾಗ ಹಾಕಿ ಇಡೋರು. ಕೆರ್ಸಿ ಏನಿದ್ರೂ ಮನೆಗೆ ಮೇಲುಮುದ್ದೆ ಹಾಕೋದ್ಕೆ ಬಳಸೋರು, ಇಲ್ಲ ನೆರಕಿ ಕಟ್ಟೋರು. ಮೊರ, ಮುಕ್ಲಿ ಪುಟ್ಟಿ ಮದುವೆ ಟೈಮಿಗೆ ಹೆಚ್ಚು ಖರ್ಚಾಗುತಿದ್ವು. ಇನ್ನುಳಿದಂಗ ನಿಚ್ಚಣಿಕೆ ಮಾಡುತಿದ್ವಿ. ನಮ್ಮಪ್ಪ ಶಿವಮೊಗ್ಗ ಕಡೆಯಿಂದ ಬಿದುರು ತರಿಸ್ತಿದ್ದ. ನಮಿಗಂತು ಕೆಲ್ಸ ಮಾಡಿ ರೋಸಿಗಿ ಅನ್ನದು. ಬುಟ್ಟಿಎಣೆಯದು ಬ್ಯಾಡ ಚಿಬ್ಲಿ ಮಾಡದು ಬ್ಯಾಡನ್ನದು. ಅವಗ ಜನ ಅವುಗುಳ್ನ ಹಂಗ ತಗಂಡೊಗರು. ಆದ್ರ ಈಗೀಗ ಬಿದಿರು ಸಿಗೋದು ಕಷ್ಟ ಆಗೇತಿ, ಎಲ್ಲಾ ದುಬಾರಿ ಆಗ್ಯಾವ. ಈಗ ಮಕ್ಕಳು ದೊಡ್ಡೋವಾಗ್ಯಾವ. ಮಗ ಪಿಯುಸಿ ಮುಗಿಸಿ ವ್ಯಾಪಾರ ಮಾಡುತಾನ. ಮೊದ್ಲು ಕೆರೆ ದಂಡೆಮ್ಯಾಲೆ ಜಾಗ ಇಡಕಂಡು ಮನೆಕಟ್ಟಿಕೊಂಡಿದ್ವಿ, ಮನೆ ಮುಂದೇನೆ ಅಂಗಡಿ ಮಾಡಿಕೊಂಡಿದ್ವಿ. ಮುನಿಸಿಪಾಲಿಟಿಯೋರು ಜಾಗ ಬಿಡಿಸಿಬಿಟ್ರು. ಬ್ಯಾರೆ ಜಾಗ ಬಾಡಿಗೆಗೆ ತಗಂಡು ಅಂಗಡಿ ಹಾಕೀವಿ. ಊರಾಗ ಮನಿ ಐತೆ. ನನ್ನ ಮಗ ಕೈಗೆ ಬಂದಮ್ಯಾಗ ಕರೆಬಂಡೆ, ಸಾಪ್(ನೈಸ್) ಇರಬಂಡೆ ವ್ಯಾಪಾರ ಮಾಡಕತ್ತೀವಿ. ಅಪ್ಪ ಮಗ ಯಾರಾದ್ರಿ ಒಬ್ರು ಆಂಧ್ರದ ಬೇತಮಚೆರ್ಲಕ್ಕೆ ಹೋಗಿ ಬಂಡೆ ತರುತಾರೆ. ಆ ಊರು ನಾ ನೋಡಿಲ್ಲ. ಅಲ್ಲಿ ಬಂಡೇನೋ ಸೋವಿ ಸಿಗುತಾವ ಅಂತ ನನ ಮಗ ಮತ್ತೆ ಗಂಡ ಹೇಳ್ತಾರ. ಆದ್ರೆ ಲಾರಿ ಬಾಡಿಗೆ, ಟೋಲು, ಪೋಲಿಸ್ ಮಾಮೂಲು ಅಂತ ಭಾಳ ರೊಕ್ಕ ಹೋಗುತೈತಂತೆ. ಬಂಡೆ ತಂದು ತಿಂಗಳುಗಟ್ಲೆ ಇಟಗೊಂಡು ವ್ಯಾಪಾರ ಮಾಡಬೇಕು. ಈಗೀಗ ಎಂಟು ಹತ್ತು ಅಂಗಡಿ ನಮ್ಮೋರವೇ ಐದಾವ. ಎಲ್ಲ ಪೈಪೋಟಿ ಮಾಡ್‌ತಾರ (ಕಾಂಪಿಟೇಶನ್ ಜಾಸ್ತಿ). ಅದರಾಗೆ ವ್ಯಾಪಾರ ಮಾಡಬೇಕು. ಮಳೆಗಾಲದಾಗ ವ್ಯಾಪಾರ ಕಡಿಮಿ. ಮಳೆಗಾಲ ಮುಗುದುಮ್ಯಾಗೆ ವ್ಯಾಪಾರ. ನಾವು ಹೆಣಮಕ್ಳು ಮನ್ಯಾಗ ಸುಮಗ ಕೂಡಾದಿಲ್ಲ. ಮನ್ಯಾಗ ಸೊಸೆ ಅಡುಗೆ ಕಸಮುಸ್ರೆ ಮಾಡುತಾಳ. ನಾನು ಸೀದ ಅಂಗಡಿಗೆ ಬರುತೀನಿ. ನಿಚ್ಚಣಿಕೆ, ಚಾಪೆ, ಬೀಸಣಿಕೆ, ಪುಟ್ಟಿ, ಮೊರ ಮಾಡುತೀನಿ. ಬಲೀಸು, ಬಿದ್ರು ಮಾರುತೀನಿ. ಮನೆ ಕೆಲಸ ಆದಮ್ಯಾಲೆ ಸೊಸೆನೂ ಕೈಗಲಿತಾಳ. ಈಗೀಗ ಮೊರ ಪುಟ್ಟಿ ಹೋಗಾದು ಅಪರೂಪ. ಎಲ್ಲಾ ಪ್ಲಾಸ್ಟಿಕಿನವು ಬಂದಾವ. ನಮ್ಮ ಮೊರಪುಟ್ಟಿಗಿಂತ ಸೋವೀಗೆ ಸಿಗತಾವ, ಇನ್ನ ಚಾಪೆ ಹಿಂದಕ್ಕ ಮನೆ ಮೇಲುಮುದ್ದಿ ಹಾಕುವಾಗ ಕೆಳಗ ಹಾಸಾಕ, ನೆಲ್ಲು ತುಂಬೋ ಕೆರಿಸೀಗೆ ಒಯ್ಯೋರು. ಮನೆ ಕಟ್ಟಿಸೋರೆಲ್ಲ ಆರ್ ಸಿ ಸಿ ಹಾಕಿಸ್ತಾರ, ಬಡವ್ರು ಬಗ್ರು ಸಿಮೆಂಟ್ ಸೀಟೋ, ಜಿಂಕ್ ಸೀಟೋ ಮಾಳೆಗ್ಗೆ (ಛಾವಣಿ) ಹಾಕಿಸ್ತಾರೆ. ಇನ್ನ ನಮ್ಮ ಚಾಪೆ ಯಾರು ಕೇಳಬೇಕು. ಹಿಂಗಾಗಿ ಚಾಪೆ ಮಾಡೋದು ಕಡಿಮಿ ಮಾಡೀವಿ. ಬೀಸಣಿಕೆಯೂ ಅಷ್ಟಕ್ಕಷ್ಟೆ ಖರ್ಚಾಗೋದು. ಕೈಕಸಬು ಸುಮ್ಮಗ ಕುಂದ್ರುಬಾರದು ಅಂತ ಕೆಲಸ ಮಾಡುತದೀವಿ. ಬಂಡೆ, ತೀರು ಒಂದೆ ಇಟಗೊಂಡ್ರೆ ಜನರು ಬರೋದಿಲ್ಲ. ಅದಕಾಗೆ ಜೊತೆಗೆ ಬಿದ್ರು ಕೆಲಸ ಮಾಡ್ತೀವಿ. ನನ್ನ ದುಡುಮ್ಯಾಗ ಬಂದ ರೊಕ್ಕಾನ ಗಂಡಗ ಕೊಟ್ಟುಬಿಡ್ತೀನಿ. ನಾ ಇಟಗೊಂಡಾದ್ರೂ ಏನು ಮಾಡ್ಲಿ. ಮನೆಯೊಳಗೆ ಚಂದಾಗಿ ನೋಡಿಕೊಳ್ತಾರ. ಇನ್ನೇನು ಬೇಕು. ನಮಗೆ ಎಸ್ ಟಿ ಅಂತ ಏನೇನೋ ಸೌಲತ್ತು ಐತಂತ ಹೇಳ್ತಾರೆ. ಆದ್ರೆ ಇವತ್ತಿಗೂ ಯಾವ ಸವಲತ್ನೂ ನಾವಂತು ಪಡಕೊಂಡಿಲ್ಲ. ಕರಬಂಡೆ ತರಬೇಕಾದ್ರೆ ಅಪ್ಪ ಮಗ ಒಂದೊದ್ಸಲ ನನ್ನ ಬಂಗಾರ ಸ್ವಾಮಾನು ಒತ್ತಿಟ್ಟು ರೊಕ್ಕ ಹೊಂದಿಸ್ತಾರೆ. ಯಾವ ಸರ್ಕಾರ ಬಂದ್ರೂ ಅಷ್ಟೆ, ಏನು

ಯೋಜನೆ ಬಂದ್ರೂ ಅಷ್ಟೆ, ಸಾಲ ಮಾಡೋದೂ ತಪ್ಪೋದಿಲ್ಲ, ಕೆಲಸ ಮಾಡೋದೂ ತಪ್ಪೋದಿಲ್ಲ. ದುಡ್ಯಾಕ ಬಂದು ಜೀವ ದುಡುದು ಸಾಯಿಬೇಕಷ್ಟೆ. ನಮ್ಮನಿಯಾಗ ತರೋದ್ ಬರೋದ್ ಹೊರಗಿಂದ್ ಎಲ್ಲ ನಮ್ ಮನಿಯರ್, ಮಗ ನೋಡ್ತಾರ ನಾವೇನ್ ಬ್ಯಾರಿ ವಿಚಾರುಕ್ಕ ತಲಿ ಹಾಕಂಗಿಲ್ಲ. ಎಲ್ಲ ನನ್ ಗಂಡ ಹೆಂಗೇಳ್ತನೊ ಹಂಗ ಮನಿಯಾಗ ನಡಿತದ.

**ಶಿವಮ್ಮ, (ವಯಸ್ಸು ೩೮) ಮೇದ, ಮರಿಯಮ್ಮನಹಳ್ಳಿ**

ಮಹಿಳೆ ಹೆಸರು ಶಿವಮ್ಮ. ನನ್ನ ಗಂಡನ ಹೆಸರು ಬಸರಾಜಪ್ಪ. ನಾಮ್ ಜಾತಿ ಮೇದ. ನನ್ನ ತವರುಮನಿ ಯಶವಂತನಗರ. ನಾನು ಸಾಲಿ ಏನು ಕಲಿತಿಲ್ಲ. ನಾನಿನ ಸಣ್ಣಾಕಿದ್ದೆ ಅವಾಗೆ ನನ್ ಮದ್ವಿ ಆಗಿತ್ತು ಅವಗ ನನಿಗೆ ಹದಿನಾರು ವರ್ಷ ಇತ್ತನ್ನುಸ್ತದ, ನಮ್ಮ ತವರು ಮನ್ಯಾಗೂ ಅಪ್ಪ ಅಮ್ಮಾರು ಇದೇ ಮ್ಯಾದಾರ ಕೆಲಸನೇ ಮಾಡಾದು, ಇಲ್ಲಿ ಗಂಡನ ಮನ್ಯಾಗೂ ಇದೇ ಕೆಲಸ. ಕೆರಸೆ, ಮೊರ, ಪುಟ್ಟಿ ಹೆಣಿತಿವಿ. ನಮ್ಮೂರ ಸುತ್ತ ಹಳ್ಳಿಗಳು ಜಾಸ್ತಿ ಸುತ್ತ ಹತ್ತು ಹಳ್ಯಾರೂ ಮರಿಯಮ್ಮನಹಳ್ಳಿ ಸಂತ್ಯಾಕೇ ಬರಬೇಕು. ಸೋಮಾರ ಸಂತೆ. ಸಂತೆ ದಿನ ವ್ಯಾಪಾರ ಸ್ವಲ್ಪ ಹೆಚ್ಚಾಗುತ್ತೈತೆ. ಸಂತ್ಯಾಗ ಮೊರಪುಟ್ಟಿ ಮಾರುತೀನಿ. ಸಂತೆಗೆ ಬರೋರು ಹೆಚ್ಚಾಗಿ ಕೊರವರ ಈಚಲು ಪುಟ್ಟಿ, ಲೆಕ್ಕೆ ಬೆತ್ತದ ಪುಟ್ಟಿ ಒಯ್ತಾರೆ. ಈಗೀಗ ಅವ್ರಿಗೂ ವ್ಯಾಪಾರ ಆಗೋದು ಅಷ್ಟಕ್ಕಷ್ಟೆ. ಯಾಕಂದ್ರೆ ಅದೆಲ್ಲಿಂದಾನೋ ಟಾಟಾ ಏಸಿಯೊಳಗೆ ಪ್ಲಾಸ್ಟಿಕ್ ಪುಟ್ಟಿ, ಮೊರ, ಕೊಡ ತಂದು ಮಾರುತಾರ. ಅವು ನಮ್ಮ ಮೊರಪುಟ್ಟಿಗಿಂತ ಅರ್ಧ ರೇಟು ಕಡಿಮೆ. ಬಾಳಿಕೇನೂ ಬರುತಾವು. ಹಂಗಾಗಿ ಅವು ಖರ್ಚಾಗೋದೇ ಹೆಚ್ಚು. ನಮ್ಮ ಮೊರಪುಟ್ಟಿ ಯಾರು ವೈತಾರ. ನಮಿಗೆ ಜೀವನ ಬಾಳ್ ತ್ರಾಸ್ಐತೆ ಅದು ಬಿಟ್ರ ನಮಿಗೆ ಬ್ಯಾರೇನು ಗೊತ್ತಿಲ್ಲ. ಅಂತಾ ಒತ್ನ್ಯಾಗ ನಮ್ಮಪ್ಪುಗ ಯಾರೋ ಪುಣ್ಯಾತ್ಮ ಬಂಡೆ ಮಾರ ಯಾಪಾರ ಚಂದ್ಯೆತಂತ ತೋರಿಸಿಕೊಟ್ಟಾರ ಅವಾಗಿಂದ ಕರೆಬಂಡೆ, ಬಲೀಸು ವ್ಯಾಪಾರ ಮಾಡಾದ್ರಿಂದ ನಮ್ಮ ಮಾನ ಚಂದಾಗೈತೆ. ಗಂಡನ ಜೊತೆಗೆ ಅಂಗಡ್ಯಾಗ ಕುಂತು ವ್ಯಾಪಾರ ಮಾಡ್ತೀನಿ. ನಾನು ವ್ಯಾಪಾರ ಮಾಡೀನಂತ ನಾನು ರೊಕ್ಕ ಕೈಯಾಗ ಇಟಗೊಳ್ಳಾದಿಲ್ಲ. ದುಡುದು ರೊಕ್ಕ ಗಂಡಗ ಕೊಟ್ಟಬುಡ್ತೀನಿ. ರೊಕ್ಕದ್ದು ವಿಚಾರ ಬಂದ್ರ ಏನಾರ ಬೇಕಂದ್ರ ನಾ ಆತನ್ನ ಕೇಳೆ ತಗಳಾಕಿ ಅದಿನಿ. ಆತ ಏನೇಳ್ತಾನ ಅದ ಕೇಳಾಕಿ ನಾ ಅದಿನಿ. ಯಾಕಂದ್ರ ಅವ್ರಿದ್ರ ನಾವಲ್ಲ. ಮತ್ತ ನನ ಗಂಡ ಸ್ವಲ್ಪ ಸಿಟ್ಟ್ನಾತ ಐದಾನ ಯಾಕಂತ ಅವನೇಳಿದಂಗ ಕೇಳ್ತಿನಿ ಹಂಗಿದ್ರ ಆತನು ಭೇಷಿರ್ತನ. ನಮ್ಮ ವ್ಯಾಪಾರಾನೂ ಕೂಡಾ ಎದುರದವು ಯಾಕಂದ್ರ ನಮ್ ಮಂದಿನೆ ಒಬ್ರಿಗೊಬ್ರು ನೋಡಿ ಇದಾ ಕೆಲ್ಸ ಮಾಡಕತ್ತಾರ. ಕಾಂಪಿಟೇಶನ್ ಹೆಚ್ಚು. ನಮಗೆ ಈ ವ್ಯಾಪಾರ ಬುಟ್ಟು ಬ್ಯಾರೆ ಗೊತ್ತಿಲ್ಲ, ಇದ್ನೇ ಮಾಡುತೀವಿ. ನಮಗೆ ಎಸ್ ಟಿ ಅಂತ ಏನೇನೋ ಸೌಲತ್ತು ಸಿಕ್ಕಿಲ್ಲ, ಮಕ್ಳಿಗೆ ಜಾತಿ ಸರ್ಟಿಫಿಕೇಟೊಂದು ಸಿಗುತಾವು ನೋಡ್ರಿ, . ಅದ್ರಾಚಗೆ ಏನೂ ಸೌಲತ್ತು ಸಿಕ್ಕಿಲ್ಲ. ಎಂತದು ನಾಕಾಣೆ ಕಾಣ್ವೆ ನಾವು. ಏನಾರ ಮಾಡಿ ಜೀವನ ನಡುಸಾನಂದ್ರ ರೊಕ್ಕುದ್ದು ಕಷ್ಟ ಐತಿ. ನಾವು ಬಡ್ಡಿ ಕೊಡ್ತೀವಂದ್ರು ಯಾರು ಸಾಲ ಕೊಡಂಗಿಲ್ಲ. ಯಾಕಂದ್ರ ಬಡ್ಡಿ ಕೊಡಾರು ಕೂಡ ಹೊಲದ ಪತ್ರ, ಮನಿಪತ್ರ, ಬಂಗಾರ, ಒಡಿವಿ, ಏನಾರಿದ್ರ ಇಟ್ಟು

ರೊಕ್ಕ ತಗಳ್ರಿ ಅಂತಾರ. ನಮಿಗೆ ಹೊಟ್ಟೆ ತುಂಬಿದ್ರ, ಉಡಾಕ ಬಟ್ಟೆ ಆದ್ರ ಸಾಕಂತಿವಿ. ಎಲ್ಲದು ನಮ್ಮಣಿಬರ ಏನೈತೊ ಅದಾಕ್ತದ.

**ತಿಮ್ಮವ್ವ ವಯಸ್ಸು ೪೬, ಬೇಡ ಸಮುದಾಯ, ಅಯ್ಯನಹಳ್ಳಿ**

ಮಹಿಳೆ ಹೆಸರು ತಿಮ್ಮವ್ವ, ಹೊಸಪೇಟೆಯ ತಾಲೂಕಿನ ಅಯ್ಯನಹಳ್ಳಿ ಗ್ರಾಮದವರು. ಹುಟ್ಟಿದ್ದೂ ಇಲ್ಲೆ, ಜೀವನ ಸಾಗಿಸ್ತಿರೋದು ಇಲ್ಲೆ. ನನಗೆ ಹದಿನಾರು ವರ್ಷದಾಕಿ ಇದ್ದಾಗಲೇ ನಮ್ಮಪ್ಪ ತೀರಿಕೊಂಡರು. ನಮ್ಮ ಅಪ್ಪಗೆ ೦೬ ಮಂದಿ ಹೆಣ್ಮಕ್ಕಳು. ನಮ್ಮ ಅಪ್ಪ ತೀರಿದ ಮ್ಯಾಲೆ ಮನೆಯಲ್ಲಿ ಗಂಡು ದಿಕ್ಕು ಇಲ್ಲದಂತಾಯಿತು. ಎಂದು ನಮ್ಮ ಚಿಕ್ಕಪ್ಪ(ಹನುಮಂತಪ್ಪ) ನಮ್ಮ ತಾಯಿ ಮನೆಯಲ್ಲಿ ಬಿಡಲು ನಿರ್ಧರಿಸಿದ್ರು. ನಮ್ ಬಂದುಬಳಗ ಅನ್ನಿಸಿಗೆಂಡರು ಯಾರು ನಮಿಗೆ ನೋಡ್ಲಿಲ್ಲ. ನಮ್ಮಪ್ಪ ಹೋದಮ್ಯಾಗ ನಮಿಗ್ಯಾರು ಕ್ಯಾರೆ ಅನ್ನರಿರ್ಲಿಲ್ಲ. ನಮ್ಮಕ್ಕ ತಂಗೇರಿಗೆಲ್ಲ ಹಂಗ ಸಾಧಾರಣ ಇರಾರಿಗೆ ಕೊಟ್ಟು ಮದುವಿ ಮಾಡ್ಯಾರ. ನಮ್ಮಪ್ಪ ಇದ್ದಾಗ ನನಿಗಿಂತ ದೊಡ್ಡಾರಿಗೆ ಮೂರು ಜನುಕ್ಕ ನಮ್ಮಪ್ಪಿದ್ದಾಗ ಮದಿವಿ ಮಾಡಿದ್ರು. ನಾನು ನಾಲ್ಕನೆಕಿ ನನಿಗ ದೇವ್ರಿಗೆ ಬಿಟ್ಟಾರ ಇನ ಉಳುದುದ್ದು ಇಬ್ರು ನಮಪ್ಪ ಹೋದಿಂದ ಗದ್ದಿಮಾಡಿ ದುಡುದು ಅದ್ರಾಗ ಬಂದುದ್ದು ದುಡಿಮಿ ಕೂಡಿಟ್ಟು ನನಿಗು ಬರ ರೊಕ್ಕ ಹಿಂದುಕಿಟ್ಟು ತಂಗಿಯಾರು ಇಬ್ರುಗು ಚೊಲೊ ಸಂಬಂದ ನೋಡಿ ನಾನು ಅವ್ವ ಇಬ್ರು ಅವ್ರಿಬ್ರಿಗೆ ಇದ್ದುದ್ರಗ ಮದುವಿ ಮಾಡಿಕೊಟ್ವಿ ಅವರೆಲ್ಲರು ಅವುರ ಗಂಡ ಮಕ್ಕಳು ಕೂಡಿ ಚೊಲೊ ಅದಾರ. ಅವ್ರಿಗೆಲ್ಲ ಕರಿಯೋದು ಕಳುಸೋದು ಬಟ್ಟಿಬರೆ ಎಲ್ಲ ನಾನ ನೋಡದು. ಹಬ್ಬ ಹರಿದಿನ ಬಂದ್ರ ಮನೆತುಂಬಿರ್ತದ. ಎಲ್ಲರು ಚನಾಗದಿವಿ ನಾನದ್ರು ನಮವ್ವಾದ್ರು ಯಾರಿಗು ಏನು ಕೇಳಾದಿಲ್ಲ. ಗದ್ದಿ ನಾನ ಮುಂದೆ ನಿಂತು ಮಾಡುಸ್ತೀನಿ. ನಮ್ಮನಿಯಾತು ನಾವಾತು ಅನ್ನಂಗ ಅದೀವಿ ಯಾರ್ತಗೇನು ಬೇಡಲ್ಲ. ಅವಾಗಿದ್ದಂತ ಕಷ್ಟ ಇವಾಗೇನಿಲ್ಲ ಎಲ್ಲರಂತ ನಾವೂ ಚನಾಗದಿವಿ. ಇವಗೆಲ್ಲರು ಚನಾಗದಿವಿ ಆದ್ರ ಮುಂಚಿನ ಕಥೆ ನೆನಿಸಿಗೆಂಡ್ರಂತೂ ಊಟ ಹೋಗಂಗಿಲ್ಲ. ಅವಾಗೆಂಗಂದ್ರ ನನಿಗೇನು ತಿಳಿಯಂಗಿರ್ಲುಲ್ಲ ಅವಗ ನಾನಿನ್ನು ಸಣ್ಣಾಕಿ ಮನೆಗ ಅವ್ವ ಹೆಂಗ ಹೇಳ್ತಾಳ ಹಂಗ ಕೇಳ್ತಿದ್ದೆ ನಾನು. ಹಿಂಗ ಸಣ್ಣಳಿದ್ದುದ್ಕ ಏನು ಅರಿತಿದ್ದಿಲ್ಲ. ಎಲ್ಲರು ಹುಲಿಗಿಗೋಗನಂತ ಮನಿಯಾಗ ಹೊಂಟ್ರು. ನನಿಗು ಬಿರ್ನ ರೆಡಿಯಾಗಕೇಳಿದ್ರು. ನಾನು ಏನು ತಿಳಿತಿರಲಿಲ್ಲ ಎಲ್ಲರು ಹೋಕಾರಂತ ಖುಷಿಲಿ ನಾನು ಹೊಂಟೆ. ಹುಲಿಗಿಗೆ ಕರಕೊಂಡೋಗಿ ಅಲ್ಲಿ ಬಾಳ ಮಂದಿ ದೇವುದಾಸೆರಿದ್ರು. ಅವುರ್ನ ಕರಿಸಿ ನನಿಗೆ ಹಸಿರು ಬಳಿ ಹಾಕಿ ಕುಂಕುಮ ಇಟ್ಟು ಜೋಳಿಗೆ ಕೊಟ್ರು. ಮತ್ತ ದೇವಿ ಸುತ್ತಲು ಪ್ರದರ್ಶನ ಮಾಡಿಸಿದ್ರು. ಅಲ್ಲಿದ್ದರು ಕೆಲುವುರು ಗಂಡು ದಿಕ್ಕಿಲ್ಲುದ ಮನಿಗ ನೀನೆ ಗಂಡು ಅಂದ್ರು. ಆದ್ರ ನನಿಗೇನು ತಿಳಿಲಿಲ್ಲ. ಆ ಹುಲಿಗ್ಯಾಗ ನನಿಗವತ್ತು ದೇವ್ರಿಗೆ ಬಿಟ್ಟ ಮ್ಯಾಗ ಎಲ್ಲರಿಗು ಊಟ ಹಾಕಿಸಿ ಅಲ್ಲಿದ್ದ ಬ್ಯಾರೆ ದೇವದಾಸಿಯರಿಗೂ ಹೊಸ ಬಟ್ಟೆ ತಂದು ಬಳಿ ಮತ್ತ ಹುಡಿಯಕ್ಕಿ ನೀಡಿ ಅವರೆಲ್ಲರ ಕೈಲಿಂದ ಮುತ್ತು ಕಟ್ಟಿಸಿಕೊಂಡುಬಂದ್ರು. ಕೆಲುವ್ರಂತೂ ಬಸಿವಿಗೆ ಬಟ್ಟಾರಿಕಿನ ಅಂತುದ್ರು ನನಿಗೇನು ತಿಳಿತುದ್ದುಲ್ಲ. ನಮ್ಮಪ್ಪಗ ನಾಕನೇ ಮಗಳು. ನಮ್ಮಪ್ಪ ರೈತ. ಶಾಲೆಗೆ ಕಳಿಸಲಿಲ್ಲ. ಬಾಳ ಮಂದಿ

ಹೆಣ್ಮಕ್ಕಳಾಗಿದುದ್ರಿಂದ ಹೊಲುಕ್ಕ ಸಣ್ಣಪುಟ್ಟ ಕೆಲುಸುಕ್ಕ ಕರಕಂಡೊಕ್ತಿದ್ದ. ಡಣಾಯಕನಕೆರೆ ಮಾಗಾಣಿಯಾಗೆ ನಮ್ದು ಅರ್ದ ಎಕೆರೆ ಗದ್ದೆ ಐತೆ. ಇನ್ನ ಅಯ್ಯನಹಳ್ಳಿಯಾಗೆ ಕೆರೆ ನೀರು ಹರಿಯೋ ಒಂದು ಎಕರೆ ಗದ್ದೆ ಇದೆ. ಆ ಗದ್ದಿ ಬುಟ್ರ ನಮಿಗ ಬ್ಯಾರ ಯಾದು ದುಡುಕಂಡು ತಿನ್ನಕ ಆಧಾರ ಇಲ್ಲ. ಅಂತ ಹೇಳ್ತಿದ್ಲು ಜೊತಿಗ ನಿನಿಗ ಮದ್ವಿ ಮಾಡಲ್ಲ ನಾವು ನಿ ಸಾಯಾವರುಗು ಇಲ್ಲ ದುಡುದು ನಮ್ಮುನ್ನು ಸಾಕಬಕು ಅಂತ ಹೇಳ್ತಿದ್ಲು . ಅವಾಗ್ಲಿಂದ ನಾನು ಗದ್ದಿ ಕೆಲಸ ಕಲಿಯಕತ್ತಿದೆ. ಗದ್ದೆಗ ಏನಾರು ಹಾಕಿದಾಗ ಹೊಲ ಕಾಯಿಕೆಂತ ಹೊತ್ತು ಮುಣುಗವರಿಗು ನಾ ಗದ್ದೆತಾವೆ ಇರುತಿದ್ದೆ. ಹಿಂಗ ದಿನ ಕಳುದ್ವು ನನಿಗು ಜನ ದೇವರಿಗೆ ಬಿಟ್ಟಾರಿಕಿನ ದೇವದಾಸಿ ಇಕಿ ಅನ್ನಕತ್ತಿದ್ರು, ನನಿಗು ಅವಾಗ ಒಂದಿಷ್ಟು ಅರ್ತಆಗಕತ್ತಿತು. ಅದುಕ ಅಮ್ಮುಗ ಕೇಳಿದೆ ಯಾಕ ನನಿಗೆ ಜನ ಹಿಂಗ ಕರಿತರ ಅಂತ ಅದುಕ ಅವ್ವ ನಾನು ಸಣ್ಣಾಕಿದ್ದಾಗ ನಡುದುದ್ದೆಲ್ಲ ಹೇಳಿದ್ಲು. ನಾನು ನನ್ ಬಾಳು ಈಟ ಅನ್ಕಂಡು ಸುಮ್‌ನಾದೆ. ನಾನು ವಯಸ್ಸಿಗೆ ಬಂದೆ. ನಾನು ಹುಡುಗಿ ಇದ್ದಾಗ ಚಂದ ಇದ್ದೆ. ಹುನಗುಂದದ ಶೇಕರಪ್ಪ ಅಂತ, ನನಿಗೆ ನೋಡಿ ಒಂದ್‌ಬಾರಿ ಹಂಗ ಗದ್ದಿಕಡೆ ಹೋಗುವಾಗ ದಾರ್‍ಯಾಗ ಮಾತಾಡುಸ್ತುದ್ದ. ವೃತ್ತಿಯಲ್ಲಿ ಲಾರಿ ಡ್ರೈವರ್ ದೊಡ್ಡ ಮನೆತನಸ್ಥ, ಹಂಗ ಮಾತಾಡ್ತ ಮಾತಾಡ್ತ ಮನಿಗ್ ಬರಕತ್ತಿದ ಚೆನಾಗಿ ದುಡಿತುದ್ದ, ಕೈತುಂಬ ಸಂಬಳ, ಬರ್ತುದ್ದ ಇಲ್ಲೆ ಇರತುದ್ದ. ನನಿಗೆ ರೊಕ್ಕಾನು ಕೊಡ್ತುದ್ದ. ಆತ ನನ್ನ ಹೆಣ್ಣು ಮಾಡಿ ಹೋದ. ನಾನು ಬಸುರಾದೆ ಇವಾಗ ಆತ ಬರ್ತಇಲ್ಲ ಆಮ್ಯಾಲೆ ಎರಡು ಮಕ್ಕಳು ಹುಟ್ಟಿದ್ವು, ಮನೆಯಲ್ಲಿ ನಮ್ಮವ್ವ, ನನ್ನ ಎಲ್ಡು ಮಕ್ಳು, ನಾನು ಒಟ್ಟು ನಾಲ್ಕು ಜನ ಇದ್ವಿ, ಚೊಲೊ ಸಂಬಂದೊಂದು ಬಂತು ಹಂಗಾಗಿ ನನ್ನಕ್ಕ ತಂಗೆರು ಕೂಡಿ ವಿಚಾರ ಮಾಡಿಂದ ನನ್ನ ಮಗಳಿಗೆ ಲಗ್ನ ಮಾಡಿಕೊಟ್ಟೀನಿ. ಹಿಂಗಾಗಿ ಸಧ್ಯಕ್ಕೆ ಮೂರುಜನ ಮನ್ಯಾಗದೀವಿ. ಯಾರ್ದು ಸಹವಾಸ ಬ್ಯಾಡಂತ ನಮ್ ಪಾಡಿಗೆ ನಾನು ನನ್ನ ಮಗ ನಮ್ಮವ್ವ ಅದೀವಿ. ಮಗ ಶಾಲೆಗೆ ಹೋಗ್ತಾನ, ಅವ್ವಗ ವಯಸ್ಸಾಗ್ಯಾತಿ, ಆಕಿಗೂ ಕೈಲಾಗಲ್ಲ ಹಿಂಗಾಗಿ ಮನೆಯ ಎಲ್ಲಾ ಜವಬ್ದಾರಿಗಳನ್ನು ನಾನೇ ನಿಭಾಯಿಸಿಕೊಂಡು ಹೋಗುತೀನಿ. ಮನೆಯಲ್ಲಿ ನನ್ನ ಬಿಟ್ರೆ ಬ್ಯಾರೆ ದುಡಿಯೋರು ಯಾರೂ ಇಲ್ಲ. ನಾನೇ ಕೂಲಿ ಕೆಲಸಕ್ಕೆ ಹೋಗಿ ಬಂದ ಹಣದಿಂದ ಜೀವನ ನಡೆಸುತೀವಿ. ಊರಿನಲ್ಲಿ ಊರಿನ ಯಾವುದೇ ಕಾರ್ಯಕ್ರಮಗಳು ನಡೆದರೆ ನನ್ನನ್ನು ಕರೆಯುತ್ತಾರೆ. ನನಗೆ ಎರಡು ಮನೆ ಅದಾವ. ನಮ್ಮಪ್ಪ ಬಿಟ್ಟು ಹೋದ ಮನೆ ಒಂದು. ಸರ್ಕಾರ ನೀಡಿದ ಜನತಾ ಮನೆ ಇನ್ನೊಂದು. ಹೊಲವನ್ನು ಬಿತ್ತುವ ಉಳುವ ಕೆಲಸವನ್ನು ಬೇರೆಯವರಿಗೆ ಕೂಲಿಕೊಟ್ಟು ಮಾಡಿಸಬೇಕು. ನಮ್ಮನಿಯಾಗ ಯಾರು ಮಾಡರಿಲ್ಲ. ನನ್ನೊಬ್ಬಾಕಿ ಕೈಯ್ಯಾಗ ಮಾಡಕಾಗಂಗಿಲ್ಲ. ಹಂಗಾಗಿ ಬ್ಯಾರಿಯಾರಿಗೆ ಕೊಟ್ಟು ಬಾಡಿಗಿ ಇಟ್ಟು ಮಾಡುಸ್ತದಿನಿ. ನನಿಗೆ ದೇವದಾಸಿ ಅಂತ. ಸರಕಾರದಿಂದ ದೇವದಾಸಿಯರಿಗೆ ಕೊಡುವ ಮಾಸಾಸನ ಬರುತ್ತೈತಿ ಮೊದಮೊದ್ಲಿಗೆ ಅದು ತಿಂಗಳಾಗುತಿದ್ದಂಗ ಬರುತ್ತುತ್ತು, ಆದ್ರ ಇವಾಗ. ಅದೂ ಸರಿಯಾಗಿ ಬರಾದಿಲ್ಲ. ಎರಡು ಮೂರು ತಿಂಗಳಿಗೊಮ್ಮೆ ಬರುತ್ತೈತಿ. ಹಿಂಗಾಗಿ ಜೀವನ ನಡೆಸುವುದು ತುಂಬಾ ಕಷ್ಟವಾಗಿದೆ. ಆದ್ರು ಮನೆಯಾಗೆ ನಡಿಬಕಲ್ಲ. ಕೂಲಿಗೀಲಿ ಹೋಕಿನಿ ಬಂದುದ್ರಗ ಜೀವನ, ಜೊತಿಗೆ ನಮವ್ವಗ ವಯಸ್ಸಾಗ್ಯಾದಲ್ಲ ಅದು ಆಕಿಗೂ ಸಂಬಳ ಬರ್ತದಲ್ಲ ಸರಿಹೋಕದ.

ಅದ್ರು ಜೊತಿಗೆ ನನ್ ಮಗುಂದು ಪೆನ್ನು ಬುಕ್ಕ ಅಂತ, ರೊಕ್ಕ ಕೊಡಬೇಕಲ್ಲ ಅವ್ನು ಒಂದೀಟು ದೊಡ್ಡನಾದ್ರ ಎಲ್ಲ ಸರಿಹೋಗ್ಬಹುದು ಅನ್ನುಸ್ತದ. ಮಗಾ ಇನ್ನೂ ಸಣ್ಣಾನದಾನ. ಶಾಲೆಗೆ ಹೋಗುತಾನ. ಅವನು ಕೈಗೆ ಬಂದು ದುಡಿಯಂಗಾದ್ರೆ ನನ್ನ ಕಷ್ಟ ಸ್ವಲ್ಪ ತೀರಬೋದೇನೊ. ಆದ್ರ ಮದ್ಲು ಇದ್ದಾಟ್ ಕಷ್ಟಾಏನಿಲ್ಲ ಇವಾಗೊಂದೀಟು ಮನಿಯಾಗ ಚನಾಗದಿವಿ. ಅಕ್ಕ ತಂಗ್ಯಾರು ಎಲ್ಲರು ಬರ್ತಾರ ಎಲ್ಲರು ಖುಷಿಲಿಂದದಿವಿ. ನಮ್ಮನಿಯಾಗೇನೇ ನಡಿಬಕಂದ್ರು ನಾನ ಅದುನೆಲ್ಲ ನಿಭಾಯಿಸ್ತೀನಿ. ನಮ್ಮಕ್ಕ ತಂಗ್ಯಾರಿಗೇನಿದ್ರು ತರದುಬರದು ಏನಿದ್ರು ನಮಪ್ಪನ ಸ್ತಾನದಾಗ ನಿಂತು ನಾನ ನೋಡ್ತಿನಿ. ನನಿಗು ಖುಷಿ ಅನ್ನುಸ್ತದ ಯಾಕಂದ್ರ ನಮ್‌ಜೀವನ ಇಷ್ಟ ಅನ್‌ಕಂಡಿದ್ದೆ ನಾವು ಚನಗಿರ್ತಿವೊ ಇಲ್ಲೊ ಅನ್‌ಕಂಡಿದ್ದೆ ಆದ್ರ ಈಗೆಲ್ಲ ಸ್ವಲ್ಪ ಕಷ್ಟ ತೀರೆವ. ನನ್ ಮಗ ಇನ್ನ ಸಣ್ಣಾನದಾನ ಶಾಲಿಗೊಕಾನ ಅವ್ನು ದೊಡ್ಡನಾದ್ರ ನಮ್ ಕಷ್ಟ ತೀರ್‌ಬೋದು ಅನ್ನುಸ್ತದ. ನಾವಾದ್ರು ಓದಿಲ್ಲ ನನ್ ಮಗನಾದ್ರು ಓದ್ಸನಂತದಿನಿ. ಅವುನು ಓದ್ತನ ಅವನು ಕೆಲುಸುಕ್ಕ ಸೇರಂಗ ಓದಿದ್ರ ಸಾಕು.

**ತಾಯಮ್ಮ, ವಯಸ್ಸು-೪೯ ಬೇಡ ಸಮುದಾಯ ಹೊಸಪೇಟೆ**

ಮಹಿಳೆ ಹೆಸರು ತಾಯಮ್ಮ. ನಮ್ಮ ತವರುಮನೆ ಕುಡಿತಿನಿ. ನಮ್ಮಪ್ಪ ನಮವ್ವಗ ಮಕ್ಳು ಇರ್‌ದುದ್ಕ ತಾಯಮ್ಮಗೆ ನಡಕೊಂಡಿದ್ರಿಂದ ನಾನು ಹುಟ್ಟಿದೆನಂತೆ, ಅದಕೆ ತಾಯಮ್ಮ ಅಂತ ಹೆಸರು ಇಟ್ರಂತೆ. ನಮ್ಮ ಮನ್ಯಾಗ ನಾನೇ ದೊಡ್ಡವಳು. ನಾನು ಎಸ್ ಎಸ್ ಎಲ್ ಸಿವರೆಗೆ ಓದಿದ್ದೇನೆ. ಮುಂದೆ ಓದಕ ಅನುಕೂಲ ಆಗದಾಕ ಮುಂದುಕ ಹೋಗ್ಲಿಲ್ಲ. ನನಗೂ ನನ್ನ ಸಣ್ಣ ತಂಗೀಗೂ ಮದುವೆ ಮಾಡಿಕೊಟ್ಟಾರ. ತಂಗಿ ಗಂಡ ಜಿಂದಾಲಿನಾಗ ಕಂಟ್ರಾಕ್ಟ್ ಕೆಲಸ ಮಾಡಿಸ್ತಾನೆ. ಅವರು ಸುಖವಾಗಿ ಅದಾರ. ಇನ್ನೊಬ್ಬ ತಂಗಿಗೆ ಮನೆಯಾಗೆ ಬಿಟ್ಟುಕೊಂಡಾರ. ನಮಗೆ ಇಪ್ಪಿತ್ತೇರಿ ಮಾಗಾಣಿಯಾಗೆ ನಾಕೆಕರೆ ಭೂಮಿ ಇದೆ. ಅದರಾಗೆ ನೆಲ್ಲು, ಬಾಳೆ, ಕಬ್ಬು ಹಾಕಿಕೊಳ್ತೀವಿ. ನನ ಗಂಡಾನೆ ಕುಟುಂಬದ ಎಲ್ಲಾ ಜವಾಬ್ದಾರಿ ಹೊತಗೊಂಡು ನೋಡಿಕೊಂಡುಹೋಗ್ತಾನೆ. ಹಂಗಂದ್ರೆ ನಮಗೇನೂ ಕೆಲಸ ಇಲ್ಲಾಂತಲ್ಲ. ಮುಂಜಾನೆಯಿಂದ ರಾತ್ರಿ ಮಲಗಾವರೆಗೂ ಕತ್ತೆ ದುಡುದಂಗ ದುಡೀತೀನಿ. ಮನಿ ಕೆಲಸ ಮುಗಿಸಿಕೊಂಡು ಮಾರ್ಕೆಟಿಗೆ ಹೋಗ್ಬಕು ಅಷ್ಟೊತ್ತಿಗೆ ನನ ಗಂಡ ತರಕಾರಿ ತಂದು ಇಳಿಸಿರ್ತಾನ ನಾನು ಮನಿಯಾಗ ಕೆಲಸ ಮಾಡಿ ಹೋಗವರಿಗು ನನ್ನ ನಾದಿನಿ ಅಲ್ಲಿ ಎಲ್ಲ ನೋಡಿಕೆಂತಳ ಮನಿಯಾಗಿನ ಕೆಲಸ ಮುಗುದಿಂದ ಮಾರ್ಕೆಟ್ಟಿನಾಗ ತರಕಾರಿ ಮಾರಾಕ ಹೋಗ್ತೀನಿ. ಅಲ್ಲಿ ತರಕಾರಿ ಸಂಜೆವರಿಗು ಮಾರಿ ಮತ್ತೆ ಎಲ್ಲ ಗಂಟು ಕಟ್ಬಬಕು ಆಮ್ಯಾಗ ನನ ಗಂಡ ಮನಿಗ ಕರಕಂಡು ಬರ್ತಾನ. ಮತ್ತೆ ಅಲ್ಲೆ ಸಾಕಾಗಿರ್ತದ ಬಂದು ಮನಿಯಾಗಿನ ಚಾಕರಿನು ಮಾಡ್ಬಕು ಕಸ, ಮುಸುರಿ, ಕೂಳು ಅಂತ ಮೈಮುರಿಯ ಅಷ್ಟು ಕೆಲಸ ಇರ್ತದ ಇಷ್ಟು ಕೆಲಸ ಮಾಡ್ತೀನಿ. ನಮ್ಮ ನಾದನಿ ಒಬ್ಬಾಕಿ ಅದಾಳ, ಆಕಿಗೂ ಎರಡು ಮಕ್ಳು ಅದಾವ. ಸಾಲಿಗೆ (ಶಾಲೆ)ಹೋಗ್ತಾವೆ. ನಮ್ಮ ನಾದಿನಿ ಗಂಡ ಸತ್ತಿದ್ರಿಂದ ತವರ ಮನ್ಯಾಗ ಅದಾಳ. ನಾನು ಹೋಗೋವರೆಗೂ ಮಾರ್ಕೆಟ್ಟಿನಾಗ ತರಕಾರಿ ವ್ಯಾಪಾರ ಮಾಡ್ತಾಳೆ. ನಾನು ಹೋದಮ್ಯಾಲೆ ಆಕಿ ಮನೆಗೋಗಿ ಉಂಡುಬರುತಾಳೆ. ನಮ್ಮ ಮನೆ ಒಳಗೆ ಯಜಮಾನಿಕೆ ನಡೆಯೋದು

ಆಕಿದೆ. ಆಕಿ ಹೇಳಿದಂಗೆ ಕೇಳಬೇಕು. ಕೇಳಲಿಲ್ಲಾಂದ್ರೆ, ನನ್ನ ಅತ್ತೆ, ನನ್ನ ನಡುವೆ ಜಗಳ ತಂದುಬುಡ್ತಾಳೆ, ಇಲ್ಲಾ ಅವರಣ್ಣಗ ಹೇಳಿ ಒದಸುತ್ತಾಳೆ. ಹಿಂಗಾಗಿ ಆಕಿ ಹೇಳಿದಂಗೆ ಕೇಳಿಕೊಂಡು ಜೀವನ ಸಾಗಿಸ್ತೀನಿ. ಎಲ್ಲ ಆಕಿದ ನಡಿತದ ಮನಿಯಾಗ ಏನಾರ ಮಾಡಿದ್ರ ಆಕಿ ಮಕ್ಳಿಗೆ ಮದುಲಾಗಬೇಕು. ನನ್ನ ಬಾಯಿಗೆ ಬಂದಂಗ ಬೈತಾಳ ದುಡುದುದ್ದೆಲ್ಲ ರುಪಾಯಿ ನಂತಾವಿಟ್‌ಗಣ್‌ದಂಗ ಎಲ್ಲ ಆಕಿಗೆ ನಮ್ಮತ್ತಿಗ ಕೊಡಬಕು. ವರ್ಷುಕ್ಕ ಎರಡುಜತಿ ಬಟ್ಟೆತರಂಗಿಲ್ಲ ಆಕಿ ಹಾಕಿ ಬುಟ್ಟುರವ್ನ ನಾ ತೊಗೊಳಾಕಿ. ವರ್ಷುಕ್ಕೊ ಆರು ತಿಂಗಳಿಗೊ ನಮ್ ತವುರು ಮನಿಯಾಗ ಬಟ್ಟಿ ತರ್ತ್ರ ಅದುನ್ನಾಕೆಂಡ್ ಬಂದ್ರು ಸಹಿಸಂಗಿಲ್ಲ. ಅದು ಚೊಲೊ ಇತ್ತಂದ್ರ ಅದುನು ಆಕಿಗ ಕೊಡಬಕು. ಈ ಕಷ್ಟೆಲ್ಲ ನಮ್ಮವ್ವ ಅಪ್ಪುಂತಾವೆಳಿದ್ರ ಏನು ಮಾಡಕವ ಎಲ್ಲರಿಗು ಕಷ್ಟ ಅದಾವ ಅಂತಾರ. ನನ ಗಂಡಾನು ನನಿಗೊಂದೀಟು ಮನಿಯಾಗಿರೊ ನಾಯಿಗೆ ಕೊಟ್ಟಷ್ಟು ಬೆಲಿ ಕೊಡಲ್ಲ. ನಾ ಮನಿಯಾಗ ಚೊಲೊ ಕೆಲಸ ಮಾಡಿದ್ರು ಅದು ಸರಿಇಲ್ಲ ಇದುಸರಿಇಲ್ಲ ಅಂತ ಬೈದುದ್ದೇ ಬೈದುದ್ದು. ನನಿಗೆ ಎರಡು ಮಕ್ಕಳು ಒಂದು ಹೆಣ್ಣು ಇನ್ನೊಂದು ಗಂಡು ಮೊದಲನೆದು ಹೆಣ್ಣಾದಗಂತೂ ದಿನಾ ಬೈಯೋರು ನಾನವಗ ತವರು ಮಿಯಾಗಿದ್ದೆ ಸಾಕಾಗಿತ್ತು ಆಮೆಲೆ ಎರಡನೆದು ಗಂಡಾಯಿತು ಅವಗ ಒಂದೀಟು ಬಂದು ನೋಡಿದ್ರು ಆದ್ರ ಮಗುಗಾಗ್ಲಿ ನನಿಗಾಗ್ಲಿ ಏನೂ ತಂದಿರ್‌ಲಿಲ್ಲ. ಮದುವ್ಯಾಗ ನಾವೇನು ಮಾತಾಡಿದ್ವೊ ಅದುನ್ನೆಲ್ಲ ನಮ್ಮಪ್ಪ ಕೊಟ್ಟಾನ ಆದ್ರು ನಿ ಏನ್ ತಂದಿ ನಿನಿಗೇನ್ ಕೊಟ್ಟರ್ ನಿಮ್ಮಪ್ಪರು ಅಂತಾನ. ಅವಾಗ್ಲೂ ಏನು ಕೊಟ್ಟಿಲ್ಲ ಇದು ಗಂಡಾಗಿದೆ ಇದುಕ್ಕಾದ್ರು ಏನಾದ್ರು ತಾ ಅನ್ನು ನಿಮಪ್ಪುಗ ಅಂದ್ರು ಅದುಕ ಅಪ್ಪ ತೊಟ್ಲುಮಾಡಿ ಕಡುಗ ಎಲ್ಲ ತಂದು ಕೂದಲ ತೆಗಿಸಿ ಎಲ್ಲ ಖರ್ಚು ನೋಡಿ ಕಳುಸಿದ್ರು. ಆದ್ರುಕೂಡ ನಿಮಪ್ಪ ಅವ್ವ ಏನ್ ಮಾಡ್ಯಾರ ನಿನಿಗ ಅಂತ ಕೇಳ್ತಾರ. ನಮತ್ತಿ ಕೂಡ ಒಬ್ಬ ಅತ್ತಿ ಆಗಾಕಿನ ಮುಂದಾಗ ಒಬ್ಬ ಅತ್ತಿಮನಿ ಸೊಸಿಯಾಗಿದ್ಲು ಅನ್ನದು ಮರ್ತಾಳ. ಒಂದೀಟು ಬೆಲಿ ಇಲ್ಲದಂಗ ಮಾತಾಡ್ತಾಳ. ಅಡುಗಿ ಮಾಡಿದಾಗ ಕಾಲಿಯಾತು ನನಿಗಿಲ್ಲ ಅಂದಾಗ ಮತ್ತೆ ಮಡಂಗಿಲ್ಲ. ಏನ್ ಒಂದೊತ್ತು ಊಟ ಮಾಡಲಾರದಂಗಿದ್ರ ಸಾಯ್ತಿಏನ್ ಅಂತಾರ. ಎಷ್ಟೋಸರಿ ಹೊಟ್ಟಿಗಿಲ್‌ದಂಗ ಉಪವಾಸ ಅದಿನಿ. ಒಂದಿನುಕ್ಕೂ ಎಲ್ಲಿಗು ಹೊರಗ ಕರುದೊಯ್ದುಲ್ಲ. ನನಿಗ ಮದಿವಾತು ಆತು ಇದಾ ಬುಟ್ರ ಬ್ಯಾರೇನು ಗೊತ್ತುಲ್ಲ. ಬಿಟ್ರ ತವರು ಮನಿ ಅದು ವರ್ಷುಕ್ಕೋ ಆರು ತಿಂಗಳಿಗೊ ಒಂದು ಸರಿ ಅದು ಇಲ್ಲಂದ್ರ ಇದ ಗತಿ. ನಾನಂತು ಇದುವರಿಗು ಎಂತದು ಖುಷಿನೋಡ್ಲಿಲ್ಲ. ನನಿಗಿಗೋಗ್ಲಿ ನನ್ ಮಕ್ಳುಗು ಏನು ಖುಷಿ ಇಲ್ಲ. ಒಂದಾಟ ಸ್ವಾಮಾನಿಲ್ಲ ಬಟ್ಟಿಬರಿ ಇಲ್ಲ ಹಂಗೂ ಉಡುಗುರಿಗೆ ನಮಪ್ಪರೇನಾದ್ರು ತಂದ್ರ ಅದು ನಾದಿನಿ ಮಕ್ಕಳಿಗೆ ಕೊಡಬಕು. ನಾನೆ ನನ್ ಮಕ್ಕಳಿಗೆ ಹೊಡಕೊಂಡು ಸುಮ್ಮನಾಗ್ತೀನಿ. ನನ್ನ ಮಕ್ಕಳಿಗೆ ನೀವೇನೂ ಕೇಳಬ್ಯಾಡ್ರಿ ನೀವು ಓದಿ ದೊಡ್ಡರಾದ್ರ ನಿಮಿಗೆಲ್ಲ ಕೊಡುಸ್ತಿನಿ ಅಂತ ಹೇಳಿ ಸಮಾಧಾನ ಮಾಡ್ತೀನಿ. ನಾದಿನಿ ಮಕ್ಕಳು ಕಾನ್ವೆಂಟ್‌ಗೆ ಹೋಗ್ತಾರ ಆದ್ರ ನನ್ ಮಕ್ಕಳಿಗೆ ಸರಕಾರಿ ಶಾಲಿಗ ಕಳುಸ್ತಾರ. ಅವು ಕೇಳ್ತಾವ ನಮಿಗು ಅದ ಶಾಲಿಗ ಕಳಿಸಮ್ಮ ನಮಿಗು ಅವೇ ಬಟ್ಟೆ ಕೊಡಿಸಮ್ಮಾ ಅಂತ ಆದ್ರ ಮನಿಯಾಗ ನಂದೇನು ನಡೀತದೆ. ಮನೆಯಾಗ ಏನೇ ಕೆಲಸ ಕಾರ್ಯ ಹೋಗೋದು ಬರೋದು ಏನೇ ಇರಲಿ ನಮತ್ತೆ, ನಾದಿನಿ, ನನ ಗಂಡನೆ ನಿರ್ಣಯ ತೊಗೊಳ್ತಾರೆ.

ಅವುರು ನನ್ನ ಕೇಳದಿರಲಿ ಮಾತಿಗಾದ್ರು ಹಿಂಗ ಮಾಡಬೇಕು ಅನಕೊಂಡೀವಿ ಅಂತಾದ್ರು ಹೇಳಲ್ಲ. ಹಂಗೂ ನಾ ಏನಾದ್ರು ಕೇಳಿದ್ರೆ ನನಿಗವತ್ತು ಪೂಜೆ ಅಂತನೆ ಅರ್ಥ. ನನ ನಾದಿನಿ ಅಂತೂ ಅತ್ತಿಗೆ ತರ ಯಾವತ್ತೂ ನೋಡಿಲ್ಲ ಕೆಲಸದಾಕಿನ ನೋಡಿದಂಗ ನೋಡ್ತಾಳ. ಇವತ್ತಿಗು ಹಾಗೆ ನಮ್ಮನೆಯಲ್ಲಿ ನಡೀತಿದೆ. ನಾನು ಏನು ಗೊತ್ತಿಲ್ದಿರೊ ತಿಳಿದಿರೊ ಮಗು ತರ ಇದ್ದುಬಿಡ್ತೀನಿ. ಮದುವ್ಯಾಗಿ ಹೊಸದರಾಗ ಒಂದೆರಡು ತಿಂಗಳು ಮಾತ್ರ ಎಲ್ಲರು ಚನ್ನಾಗಿದ್ರು, ಆಮ್ಯಾಲೆ ಅವರ ಬಣ್ಣಗುಳು ಗೊತ್ತಾದ್ವು ನಂತರ ಮದುವೆ ಅತ್ತೆ ನಾದಿನಿ ಎಲ್ಲನೂ ಬೇಜಾರು ಅನ್ನುಸ್ತಿತ್ತು. ಈಗೀಗ ಹೊಂದಿಕೊಂಡುಬಿಟ್ಟೀವಿ. ನನ್ನ ಮಕ್ಕಳೊಂದು ಓದಿ ಸ್ಯಾಣೇರಾಗಿ ಒಳ್ಳೆ ಕೆಲಸ ತಗಂಡ್ರೆ ಸಾಕು. ಅದಕ್ಕಿಂತ ಏನೂ ಬೇಕಾಗಿಲ್ಲ. ನಮಿಗೆ ಪಾಲಿಗೆ ಬಂದುದ್ದದೆ ಅಂತನ್ಕೊಂತಿನಿ. ನಾನಾದಂಗ ನನ್ನ ಮಕ್ಕಳಾಗಬಾರದು. ನಾದಿನಿ ಮಕ್ಕಳು ಅಲ್ಲೇ ಓದಲಿ ಆದ್ರ ಇದಾ ಶಾಲೆಗಾದ್ರು ನಾನು ನನ್ನ ಮಕ್ಕಳಿಗೆ ಇಲ್ಲೇ ಆದ್ರು ಚನಾಗಿ ಓದುಸ್ತೀನಿ. ಅವ್ರಿಗೆ ಕೆಲಸ ಬರೊಮಟ ಓದುಸ್ತೀನಿ.

**ಮಾಹಿತಿದಾರರು**

ಗೀತಾಬಾಯಿ (ಮಾ) ವಯಸ್ಸು ೩೭, ಡುಂಗ್ರಿಗರಾಸಿಯಾ, ವೃತ್ತಿ : ಗೃಹಿಣಿ, ಬುಕ್ಕಸಾಗರ ಗ್ರಾಮ, ಹೊಸಪೇಟೆ ತಾಲೂಕು

ತಾಯಮ್ಮ (ಮಾ) ವಯಸ್ಸು ೩೯, ಬೇಡ, ವೃತ್ತಿ : ಗೃಹಿಣಿ, ಹೊಸಪೇಟೆ ತಾಲೂಕು

ತಿಮ್ಮವ್ವ (ಮಾ) ವಯಸ್ಸು ೪೬, ಬೇಡ, ವೃತ್ತಿ : ಕೂಲಿ, ಅಯ್ಯನಹಳ್ಳಿ ಗ್ರಾಮ, ಹೊಸಪೇಟೆ ತಾಲೂಕು

ಪಾರ್ವತಮ್ಮ (ಮಾ) ವಯಸ್ಸು ೮೨, ಪಾರ್ದಿ, ವೃತ್ತಿ : ಗೃಹಿಣಿ, ಯಡ್ರಾಮನಹಳ್ಳಿ ಗ್ರಾಮ, ಹಗರಿಬೊಮ್ಮನಹಳ್ಳಿ ತಾಲೂಕು

ಬಸಮ್ಮ (ಮಾ) ವಯಸ್ಸು ೪೦, ಮೇದ, ವೃತ್ತಿ : ಬುಟ್ಟಿತಯಾರಿಕೆ, ಕಂಪ್ಲಿ ತಾಲೂಕು

ಶೀಲಾ, (ಮಾ) ವಯಸ್ಸು ೩೯, ಪಾರ್ಧಿ, ವೃತ್ತಿ : ಗೃಹಿಣಿ, ಕಂಪ್ಲಿ ತಾಲೂಕು

ಶಿವಮ್ಮ (ಮಾ) ವಯಸ್ಸು ೩೮, ಮೇದ, ವೃತ್ತಿ : ಬುಟ್ಟಿತಯಾರಿಕೆ, ಮರಿಯಮ್ಮನಹಳ್ಳಿ ಹೋಬಳಿ, ಹೊಸಪೇಟೆ ತಾಲೂಕು

ಸುಶೀಲಾಬಾಯಿ (ಮಾ) ವಯಸ್ಸು ೨೮, ಡುಂಗ್ರಿಗರಾಸಿಯಾ, ವೃತ್ತಿ : ಗೃಹಿಣಿ, ಗುಡಾರನಗರ ಗ್ರಾಮ, ಬಳ್ಳಾರಿ ತಾಲೂಕು

# ಅಧ್ಯಾಯ: ಎಂಟು
# ಸಮಾರೋಪ

ಅಧ್ಯಯನದ ಫಲಿತಗಳು

ಅಧ್ಯಯನಕ್ಕೆ ಸಂಬಂಧಿಸಿದ ಸಲಹೆಗಳು ಮತ್ತು ಪರಿಹಾರಗಳು

ಮುಂದಿನ ಅಧ್ಯಯನದ ಸಾಧ್ಯತೆಗಳು

* ಕೋಷ್ಠಕಗಳು
* ಪರಮಾರ್ಶನ ಗ್ರಂಥಗಳು
* ವಕ್ತೃಗಳ ವಿವರ
* ಪ್ರಶ್ನಾವಳಿ ಮಾದರಿ
* ಪತ್ರಿಕಾ ವರದಿ
* ನಕ್ಷೆ
* ಛಾಯಾ ಚಿತ್ರಗಳು

# ಅಧ್ಯಾಯ : ಎಂಟು

## ಸಮಾರೋಪ

ಭಾರತದಲ್ಲಿ ಮಹಿಳೆಯನ್ನು ಎರಡನೇ ದರ್ಜೆಯ ಪ್ರಜೆ ಎಂದೇ ನೋಡಲಾಗುತ್ತಿದೆ. ಪುರುಷಶಾಹಿಯ ನಿರಂತರ ದಬ್ಬಾಳಿಕೆಗೆ ಮಹಿಳೆ ಒಳಗಾಗುತ್ತಲೇ ಬರುತ್ತಿದ್ದಾಳೆ. ನಾಲ್ಕುಗೋಡೆಯ ಮಧ್ಯದಲ್ಲಿರುವ ಮಹಿಳೆಯು ಕುಟುಂಬದೊಳಗಿನ ದೌರ್ಜನ್ಯಗಳಿಗೆ ಒಳಗಾದರೆ ನಾಲ್ಕುಗೋಡೆಗಳಿಂದ ಆಚೆ ಬಂದು ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸುವ ಮಹಿಳೆಯೂ ಸಾರ್ವತ್ರಿಕವಾಗಿ ಪುರುಷ ವ್ಯವಸ್ಥೆಯಿಂದ ಶೋಷಣೆ ಅನುಭವಿಸುವುದನ್ನು ನಿತ್ಯವೂ ಕೇಳುತ್ತಿದ್ದೇವೆ. ಮಾನವ ಜನ್ಮ ಒಂದೆ, ಅದಕ್ಕೆ ಗಂಡು, ಹೆಣ್ಣು ಎಂಬ ಭೇದವೇಕೆ ಎಂದು ವಚನಕಾರು ಪ್ರಶ್ನಿಸುತ್ತಾರೆ. ಆದರೆ ಸಾಮಾಜಿಕ ಪರಿಸ್ಥಿತಿ ಭಿನ್ನವಾಗಿಯೇ ಇದೆ. ಈ ಕಾರಣಕ್ಕಾಗಿಯೇ ಮಹಿಳಾ ಸಬಲೀಕರಣ ಎಂಬ ವಾದದ ಜನ್ಮವಾಯಿತು. ಸಬಲೀಕರಣದ ಹಿನ್ನೆಯಲ್ಲಿ ಮಹಿಳೆಯನ್ನು ಹಾಗೂ ಈ ಸಾಮಾಜಿಕ ವ್ಯವಸ್ಥೆಯನ್ನು ವಿವಿಧ ಆಯಾಮಗಳಲ್ಲಿ ಅಧ್ಯಯನ ಮಾಡಿದಾಗ ಒಂದು ಸಂಗತಿ ಸ್ಪಷ್ಟವಾಯಿತು. ಹೆಣ್ಣನ್ನು ದೇವತೆ ಎಂದು ಪೂಜಿಸುವ ಭಾರತದಂತಹ ರಾಷ್ಟ್ರವೊಂದರಲ್ಲಿ ಮಹಿಳೆಯಂತಹ ದೊಡ್ಡ ಸಮುದಾಯವೊಂದಕ್ಕೆ ಮಾನವ ಹಕ್ಕುಗಳು ತಮ್ಮ ಪಾಲಿಗಿವೆ ಎನ್ನುವ ಪೂರ್ಣ ಅರಿವಿಲ್ಲ. ಅರಿವಿದ್ದರೂ ಅದನ್ನು ಹಕ್ಕಾಗಿ ಪಡೆಯದ ಅಸಾಹಾಯಕ ಸ್ಥಿತಿಯಲ್ಲಿ ಮಹಿಳೆಯರಿರುವರು. ಒಟ್ಟಾರೆಯಾಗಿ ಮೇಲ್ಜಾತಿ ಕೆಳಜಾತಿಗಳೆನ್ನದೆ ಎಲ್ಲಾ ಮಹಿಳೆಯರೂ ಒಂದಲ್ಲಾ ಒಂದು ರೀತಿಯಲ್ಲಿ ಪುರುಷಶಾಹಿಯಿಂದ ಶೋಷಣೆಗೆ ಒಳಗಾಗುತ್ತಲೇ ಬಂದಿರುವುದು ಮಾತ್ರ ಸತ್ಯ. ಜಾಗತಿಕವಾಗಿ ಮಾನವ ಹಕ್ಕುಗಳ ಘೋಷಣೆಯಾಗಿ ಹಲವು ದಶಕಗಳೇ ಕಳೆದಿವೆ. ಆದರೂ ಎಲ್ಲಾ ವ್ಯಕ್ತಿಗಳೂ ಮಾನವ ಹಕ್ಕುಗಳನ್ನು ಸಂಪೂರ್ಣವಾಗಿ ಹೊಂದಲು ಸಾಧ್ಯವಾಗುತ್ತಿಲ್ಲ. ಲೈಂಗಿಕ ದೌರ್ಜನ್ಯಗಳು, ವರದಕ್ಷಿಣೆ ಕಿರುಕುಳ, ಹೆಣ್ಣು ಭ್ರೂಣಹತ್ಯೆ ಇತ್ಯಾದಿಗಳನ್ನು ನೋಡಿದಾಗ ನೆಪಮಾತ್ರಕ್ಕೆ ಮಾನವ ಹಕ್ಕುಗಳು ಇವೆಯೇನೋ ಎನಿಸುತ್ತದೆ. ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ ಅರ್ಧಪಾಲಿನಷ್ಟು ಮಹಿಳೆಯರಿರುವರು. ತೊಟ್ಟಿಲು ತೂಗುವ ಕೈ ಜಗತ್ತನ್ನೇ ತೂಗುವುದು, ಪ್ರತಿಯೊಬ್ಬ ಪುರುಷನ ಹಿಂದೆ ಮಹಿಳೆ ಇದ್ದಾಳೆ ಎಂದು ಹೇಳುತ್ತಲೇ ಬಂದಿರುವೆವು. ಮಾತೆಯೇ ದೇವರು ಎನ್ನುತ್ತೇವೆ. ಹೀಗೆ ಹೆಣ್ಣನ್ನು ಮೇಲ್ನೋಟಕ್ಕೆ ವರ್ಣಿಸುತ್ತಲೇ ಅವಳನ್ನು ಶೋಷಣೆಯ ಕೂಪಕ್ಕೆ ದೂಡಲಾಗುತ್ತಿದೆ. "ಮಾನವ ಹಕ್ಕುಗಳಿಗೆ ಸಂಬಂಧಿಸಿದ ಅನೇಕ ಒಡಂಬಡಿಕೆ ಹಾಗೂ ಸನ್ನದುಗಳು

ಲಿಂಗಾಧಾರದ ಮೇಲೆ ಮಾನವರಲ್ಲಿ ಯಾವುದೇ ರೀತಿಯ ತಾರತಮ್ಯವಿರಬಾರದು ಎಂದು ಹೇಳುತ್ತವೆ". ಮಹಿಳೆಗೆ ಒತ್ತಾಯಪೂರ್ವಕವಾಗಿ ಲೈಂಗಿಕ ಸಂಪರ್ಕಗೊಳಿಸುವುದು, ಆಕೆಯ ಇಚ್ಛೆಗೆ ವಿರುದ್ಧವಾಗಿ ಗರ್ಭಪಾತ ಮಾಡಿಸುವುದು, ಸಾರ್ವಜನಿಕವಾಗಿ ಲೈಂಗಿಕ ಕಿರುಕುಳವು ಸಹ ಮಾನವ ಹಕ್ಕು ಉಲ್ಲಂಘನೆಯೆಂದು ಪರಿಗಣಿಸಲಾಗುತ್ತದೆ. ಮಾನವ ಹಕ್ಕುಗಳ ಜಾಗತಿಕ ಘೋಷಣೆಯು ಪುರುಷ ಹಾಗೂ ಮಹಿಳೆಯರ ನಡುವೆ ಸಮಾನ ಹಕ್ಕುಗಳನ್ನು ಮಾನ್ಯ ಮಾಡಿದೆ. ಮಾನವ ಹಕ್ಕು ಘೋಷಣೆಯ ವಿಧಿ ೧, ವಿಧಿ ೨ರ ಪ್ರಕಾರ ಮಾನವನಿಗೆ ಸಲ್ಲಬೇಕಾದ ಎಲ್ಲಾ ರೀತಿಯ ಹಕ್ಕು ಹಾಗೂ ಸೌಲಭ್ಯಗಳನ್ನು ಹೊಂದಲು ಹೆಣ್ಣು ಗಂಡು ಎಂಬ ಭೇದವಿಲ್ಲದೆ ಎಲ್ಲರಿಗೂ ಸಮಾನವಾದ ಹಕ್ಕಿದೆ ಎಂದು ತಿಳಿಸುತ್ತದೆ. ಅಂತರಾಷ್ಟ್ರೀಯ ನಾಗರೀಕ, ಹಕ್ಕುಗಳ ಒಪ್ಪಂದ ಹಾಗೂ ಅಂತರಾಷ್ಟ್ರೀಯ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ರಾಜಕೀಯ ಹಕ್ಕುಗಳ ಒಪ್ಪಂದವು ಲಿಂಗ ತಾರತಮ್ಯವನ್ನು ನಿಷೇಧಿಸುತ್ತದೆ. "೧೯೫೨ರ ಮಹಿಳಾ ರಾಜಕೀಯ ಹಕ್ಕುಗಳ ಒಪ್ಪಂದವು ೧೯೫೪ರ ಜೂಲೈ ಏಳರಂದು ಜಾರಿಗೆ ಬಂದಿತು. ಈ ಒಪ್ಪಂದದ ಪ್ರಕಾರ ಮಹಿಳೆಯರು ಪುರುಷರಿಗೆ ಸರಿಸಮಾನವಾಗಿ ಹಕ್ಕುಗಳನ್ನು ಪಡೆದಿರುವರು ಎಂದು ತಿಳಿಸುತ್ತಾ ಅದರ ವಿವರವನ್ನು ಈ ಕೆಳಗಿನಂತೆ ತಿಳಿಸುತ್ತದೆ.

೧ ಚುನಾವಣೆಯಲ್ಲಿ ಪುರುಷರಂತೆ ಮಹಿಳೆಯರೂ ಮತದಾನ ಮಾಡುವ ಹಕ್ಕು

೨ ಚುನಾವಣೆಯಲ್ಲಿ ಪುರುಷರಂತೆ ಮಹಿಳೆಯರೂ ಸ್ಪರ್ಧಿಸುವ ಹಕ್ಕು

೩ ಸಾರ್ವಜನಿಕ ಹುದ್ದೆಗಳನ್ನು ಪುರುಷರಂತೆ ಮಹಿಳೆಯರೂ ಅಲಂಕರಿಸುವ ಹಕ್ಕು

ಮಹಿಳಾ ಸಮಸ್ಯೆಯನ್ನು ಕುರಿತಂತೆ ನಡೆದ ಅನೇಕ ಅಂತರಾಷ್ಟ್ರೀಯ ಸಮಾವೇಶಗಳು ಪರಿಹಾರ ಹುಡುಕಲು ಪ್ರಯತ್ನಿಸಿವೆ. ಮಹಿಳೆಯನ್ನೇ ಕೇಂದ್ರವಾಗಿಸಿಕೊಂಡು ನಾಲ್ಕು ವಿಶ್ವ ಸಮಾವೇಶಗಳು ನಡೆದಿವೆ. ಈ ನಾಲ್ಕು ಸಮಾವೇಶಗಳು (ಮೆಕ್ಸಿಕೊ ನಗರ (೧೯೭೫), ಕೂಪನ್ ಹೇಗನ್ (೧೯೮೦), ನೈರೋಬಿ (೧೯೮೫), ಬೀಜಿಂಗ್ (೧೯೯೫) ನಡೆದಿವೆ. ಮಾನವ ಹಕ್ಕುಗಳ ಹಿನ್ನೆಲೆಯಲ್ಲಿ ಮಹಿಳೆಗೆ ಅವಶ್ಯವಾಗಿ ಮೊದಲು ಅಗತ್ಯವಾಗಿರುವುದು ಮಹಿಳೆಯರ ಸಾಮಾಜಿಕ ಸಬಲೀಕರಣ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಸಬಲೀಕರಣವಾಗಿವೆ. ಭಾರತ ಹಳ್ಳಿಗಳಿಂದ ಕೂಡಿದ ದೇಶ. ಹಳ್ಳಿಯಲ್ಲಿರುವ ಮಹಿಳೆಯರು ಬಹುತೇಕ ನಿರಕ್ಷರಿಗಳು. ಅವರಿಗೆ ಮಾನವ ಹಕ್ಕುಗಳ ಅರಿವು ಅಷ್ಟಾಗಿ ಇಲ್ಲವೆಂದೇ ಹೇಳಬಹುದು. ಸಂವಿಧಾನದ ಪ್ರಕಾರ ಪುರುಷ ಮಹಿಳೆಯಂಬದೇ ಕಾನೂನು ಎಂಬುದು ಎಲ್ಲರಿಗೂ ಸಮಾನ ಎಂದು ಹೇಳುವುದು. ಆದರೆ ಪುರುಷ ಹಾಗೂ ಮಹಿಳೆಯರ ಮಧ್ಯದ ಅಸಮತೋಲನವನ್ನು ತೊಲಗಿಸುವ ಇಚ್ಛಾಶಕ್ತಿಯು ಆಡಳಿತದ ಸೂತ್ರ ಹಿಡಿದ ಪುರುಷಶಾಹಿ ವ್ಯವಸ್ಥೆಗೆ ಇಲ್ಲವೆಂದೇ ತೋರುತ್ತದೆ.

ಲಿಂಗತಾರತಮ್ಯ ನಿವಾರಣೆ ಹಾಗೂ ಮಹಿಳಾ ಸಬಲೀಕರಣಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಬೇಕು. ಆ ಕಾರಣಕ್ಕಾಗಿಯೇ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಮಹಿಳಾ ಆಯೋಗಗಳನ್ನು ರಚಿಸಲಾಗಿದೆ. ಇಂಗ್ಲೀಷಿನ ಎಂಪವರ್‌ಮೆಂಟ್ ಎಂಬುದನ್ನು ಸಶಕ್ತೀಕರಣ, ಸಬಲೀಕರಣ, ಸ್ತ್ರೀ ಸಂವರ್ಧನೆ ಎಂಬ

ಅರ್ಥಗಳಲ್ಲಿ ಬಳಸಲಾಗುತ್ತದೆ. ಇಂಗ್ಲೀಷಿನ ಸ್ಟಾಂಡರ್ಡ್ ಶಬ್ದಕೋಶದಲ್ಲಿ ಎಂಪವರ್‌ಮೆಂಟ್ ಎಂಬುದಕ್ಕೆ ಶಕ್ತಿಕೊಡು, ಅಧಿಕಾರವಹಿಸು, ಕಾನೂನು ಹಕ್ಕುಗಳನ್ನು ನೀಡು, ಸಮರ್ಥಳನ್ನಾಗಿ ಮಾಡು, ಅರ್ಹತೆ ನೀಡು, ಆಸ್ತಿಕೊಡು ಇತ್ಯಾದಿ ಅರ್ಥಗಳನ್ನು ನೀಡಲಾಗಿದೆ. ಮಹಿಳೆಯನ್ನು ಪುರುಷನಷ್ಟೇ ಸಶಕ್ತಗೊಳಿಸುವುದೇ ಸಬಲೀಕರಣವೆನ್ನಬಹುದು. ಮಹಿಳಾ ಸಬಲೀಕರಣ ಎಂಬ ಪರಿಕಲ್ಪನೆಯು ಮಹಿಳೆಯ ಸಾಮಾಜಿಕ ನ್ಯಾಯ ಹಾಗೂ ಸಮಾನತೆಯನ್ನು ಸಾಧಿಸಬೇಕು ಎಂಬರ್ಥದಲ್ಲಿ ಬಳಕೆಗೊಳ್ಳುತ್ತಿದೆ. ಮಹಿಳಾ ಸಬಲೀಕರಣವು ಇಂದು ವಿಶ್ವವ್ಯಾಪಿ ವಿಷಯವಾಗಿದೆ. ಇದು ವಿವಿಧ ಆಯಾಮಗಳಿಂದ ಕೂಡಿದೆ. ಸಬಲೀಕರಣ ಹೊಂದಿದ ಮಹಿಳೆಯು ಸಮಾಜದ ಅಗತ್ಯಗಳನ್ನು ಪೂರೈಸಲು ಸಶಕ್ತಳಾಗುವಳು. ಶತಶತಮಾನಗಳಿಂದ ಶೋಷಣೆಗೆ ಒಳಗಾದ ಮಹಿಳೆಗೆ ಸಬಲೀಕರಣದ ಮೂಲಕ ನ್ಯಾಯ ದೊರಕಿಸಿ ಸಮಾಜದಲ್ಲಿ ಗೌರವದ ಸ್ಥಾನವನ್ನು ಕಲ್ಪಿಸಿ ಅವಳೂ ಗೌರವಯುತವಾಗಿ ಸಮಾಜದಲ್ಲಿ ತಲೆಯೆತ್ತಿ ನಿಲ್ಲುವಂತೆ ಕಲ್ಪಿಸುವುದೇ ಸಬಲೀಕರಣದ ಉದ್ದೇಶವಾಗಿದೆ. ರಾಷ್ಟ್ರವು ಪ್ರಗತಿ ಸಾಧಿಸಬೇಕಾದರೆ ಪುರುಷರಿಗೆ ಸಮಾನವಾಗಿರುವ ಮಹಿಳೆಯರ ಸರ್ವತೋಮುಖ ಪ್ರಗತಿ ಆಗಬೇಕು ಎಂಬುದನ್ನು ಮಹಿಳಾಪರವಾದಿಗಳೆಲ್ಲರೂ ಅನುಮೋದಿಸುವರು. ಮಹಿಳಾ ಆಯೋಗವು ೧೯೯೦ಕ್ಕೆ ಮಂಡನೆಯಾಗಿ ೧೯೯೨ರಿಂದ ಜಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಮಹಿಳಾ ಆಯೋಗಕ್ಕೆ ಸಿವಿಲ್ ಕೋರ್ಟಿನ ಅಧಿಕಾರವನ್ನು ನೀಡಲಾಗಿದೆ. ಮಹಿಳಾ ಆಯೋಗವು ಮಹಿಳಾಪರವಾಗಿ ಕಾರ್ಯನಿರ್ವಹಿಸುವುದಲ್ಲದೆ ಮಹಿಳಾ ಸಬಲೀಕರಣದ ಬಗ್ಗೆ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವ ಕಾರ್ಯವನ್ನೂ ಮಾಡಬೇಕಾಗಿದೆ. ಆ ನಿಟ್ಟಿನಲ್ಲಿ ಪೂರ್ಣವಾಗಿಯಲ್ಲದಿದ್ದರೂ ತನ್ನ ಗಮನಕ್ಕೆ ಬಂದ ಮಹಿಳೆಯರಿಗೆ ಸಂಬಂಧಿಸಿದ ತೊಡಕುಗಳನ್ನು ಆಯೋಗವು ಪರಿಹರಿಸುವ ಕಾರ್ಯವನ್ನು ನಿರಂತರವಾಗಿ ಮಾಡುತ್ತಲೇ ಬರುತ್ತಿದೆ. ಬಂಡವಾಳಶಾಹಿ ವ್ಯವಸ್ಥೆಯು ಸೃಷ್ಟಿಸಿದ ಹೃದಯಹೀನವಾದ ನಡವಳಿಕೆ, ನಗರೀಕರಣದಿಂದ ಉಂಟಾಗುತ್ತಿರುವ ದುರಂತಗಳು, ಮುಖ್ಯವಾಗಿ ಪುರುಷಶಾಹಿ ಹುಟ್ಟುಹಾಕಿರುವ ಹಿತಾಸಕ್ತಿಯ ತೊಡಕುಗಳನ್ನು ಪರಿಹರಿಸಿಕೊಳ್ಳುವುದು ಹೇಗೆ ಎಂಬುದೇ ಸವಾಲಾಗಿದೆ.

ಭಾರತೀಯ ಸಂವಿಧಾನವು ಇತರ ರಾಷ್ಟ್ರಗಳ ಸಂವಿಧಾನಕ್ಕಿಂತ ಭಿನ್ನವಾಗಿದೆ. ಇತರ ರಾಷ್ಟ್ರಗಳಲ್ಲಿರದಷ್ಟು ಜಾತಿ, ಬುಡಕಟ್ಟುಗಳು ಭಾರತದಲ್ಲಿವೆ. ಇದನ್ನರಿತ ಭಾರತದ ಸಂವಿಧಾನ ಶಿಲ್ಪಿಗಳು ಭಾರತೀಯ ಜಾತಿಗನುಗುಣವಾಗಿ ಮೀಸಲಾತಿ ಕಾಯ್ದೆಯನ್ನು ಸಂವಿಧಾನದಲ್ಲಿ ಸೂಚಿಸಿತು. ಇದರ ಪರಿಣಾಮವಾಗಿ ಭಾರತದ ಎಷ್ಟೋ ತಳಸಮುದಾಯಗಳು, ಬುಡಕಟ್ಟುಗಳು ಮೀಸಲಾತಿ ಸೌಲಭ್ಯವನ್ನು ಪಡೆಯುವಂತಾಯಿತು. ಭಾರತದ ಸಂವಿಧಾನದ ವಿಧಿಗಳಾದ ೧೭,೧೮,೨೨ರಿಂದ ೨೫,೨೯,೩೮,೪೬, ೧೬೪,೨೨೪, ೨೪೩, ೨೭೫, ೩೩೨, ೩೩೪ ರಿಂದ ೩೩೯ ಹಾಗೂ ೩೪೧,೩೪೨ ಇತ್ಯಾದಿ ವಿಧಿಗಳು ದಲಿತ, ಹಿಂದುಳಿದ, ಬುಡಕಟ್ಟುಗಳ ಹಕ್ಕುಗಳನ್ನು ಎತ್ತಿಹಿಡಿಯುವಲ್ಲಿ ಸಹಕಾರಿಯಾಗಿವೆ ಎಂಬುದನ್ನು ನೆನಪಿಸಿಕೊಳ್ಳಬೇಕು. ದಲಿತರಲ್ಲಿಯೇ ದಲಿತಳೆಂದು ಪರಿಗಣಿಸಲ್ಪಟ್ಟ ಮಹಿಳೆಯರ ಹಕ್ಕುಗಳನ್ನು ಅದರಲ್ಲಿಯೂ ಬುಡಕಟ್ಟು ಮಹಿಳೆಯರನ್ನು ಸಬಲೀಕರಿಸುವಲ್ಲಿ ಎಷ್ಟು ಪೂರಕವಾಗಿವೆ ಹಾಗೂ ಮಹಿಳಾ ಸಬಲೀಕರಣದಡಿ ಬುಡಕಟ್ಟು ಮಹಿಳೆಯರು ಏನೆಲ್ಲಾ ಸೌಲಭ್ಯಗಳನ್ನು ಪಡೆಯುತ್ತಿರುವರು ಎಂಬುದನ್ನು ನೋಡುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

**ಮೊದಲ ಅಧ್ಯಾಯವು** ಪ್ರಸ್ತಾವನೆಯಾಗಿದ್ದು ಇದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ಅಧ್ಯಯನ ವಿಧಾನ, ಅಧ್ಯಾಯಗಳ ವಿನ್ಯಾಸ ಹಾಗೂ ಇಲ್ಲಿಯವರೆಗೂ ನಡೆದ ಅಧ್ಯಯನಗಳ ಸಮೀಕ್ಷೆಯನ್ನು ಮಾಡಲಾಗಿದೆ.

***ಎರಡನೇ ಅಧ್ಯಾಯ**ದಲ್ಲಿ ಅಧ್ಯಯನದ ವ್ಯಾಪ್ತಿಯನ್ನು ಹೊಂದಿದ ಬಳ್ಳಾರಿ ಜಿಲ್ಲೆಯ ಸಂಕ್ಷಿಪ್ತ ಪರಿಚಯ ಮಾಡಿಕೊಡಲಾಗಿದೆ. ಇದರಲ್ಲಿ ಜಿಲ್ಲೆಯ ಭೌಗೋಳಿಕತೆ, ಜನಸಂಖ್ಯೆ, ಲಿಂಗಾನುಪಾತ, ಸಾಕ್ಷರತೆ, ಜಿಲ್ಲೆಯ ಕಾರ್ಮಿಕರು, ಸಂಪನ್ಮೂಲ ಇತ್ಯಾದಿ ವಿವರಗಳನ್ನು ನೋಡಲಾಗಿದೆ.*

***ಅಧ್ಯಾಯ ಮೂರ**ರಲ್ಲಿ ಬುಡಕಟ್ಟು ಮಹಿಳಾ ಸಬಲೀಕರಣ ಹಾಗೂ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದಂತೆ ಕೇಂದ್ರದ ಯೋಜನೆಗಳು ಯಾವ್ಯಾವಿವೆ ಎಂಬುದರ ಕುರಿತು ಗಮನಿಸಲಾಗಿದೆ.*

**ಅಧ್ಯಾಯ ನಾಲ್ಕ**ರಲ್ಲಿ ಕರ್ನಾಟಕ ಸರ್ಕಾರವು ಬುಡಕಟ್ಟು ಮಹಿಳಾ ಸಬಲೀಕರಣಕ್ಕಾಗಿ ಹಮ್ಮಿಕೊಂಡ ಯೋಜನೆಗಳ ಪರಿಶೀಲನೆ ಇದೆ.

**ಅಧ್ಯಾಯ ಐದ**ರಲ್ಲಿ ಅಧ್ಯಯನಕ್ಕೆ ಆಯ್ದುಕೊಂಡ, ಬಳ್ಳಾರಿ ಜಿಲ್ಲೆಯಲ್ಲಿ ಪ್ರಮುಖವಾಗಿ ಕಂಡುಬರುವ ನಾಯಕ, ಮೇದ, ಡುಂಗ್ರಿಗರಾಸಿಯಾ, ಪಾರ್ಧಿ ಬುಡಕಟ್ಟುಗಳ ಸಂಕ್ಷಿಪ್ತ ಪರಿಚಯವಿದೆ.

**ಅಧ್ಯಾಯ ಆರ**ರಲ್ಲಿ ಬುಡಕಟ್ಟು ಮಹಿಳೆಯರ ಸಬಲೀಕರಣದ ವಿವಿಧ ಆಯಾಮಗಳನ್ನು ನೋಡಲಾಗಿದ್ದು ಇದರಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯ, ರಾಜಕೀಯ ಸಬಲೀಕರಣಗಳನ್ನು ಬುಡಕಟ್ಟು ಮಹಿಳೆಯರ ಸಬಲೀಕರಣದ ಹಿನ್ನೆಲೆಯಲ್ಲಿ ನೋಡಲಾಗಿದೆ.

**ಅಧ್ಯಾಯ ಏಳ**ರಲ್ಲಿ ಆಯ್ದ ಬುಡಕಟ್ಟು ಮಹಿಳೆಯರ ಬದುಕಿನ ಚಿತ್ರಣವನ್ನು ವಿಶ್ಲೇಷಿಸಲಾಗಿದೆ. ಕೊನೆಯಲ್ಲಿ ಸಮಾರೋಪವಿದ್ದು ಇದರಲ್ಲಿ ಅಧ್ಯಯನದ ಫಲಿತಗಳು ಹಾಗೂ ಸಲಹೆ ಸೂಚನೆಗಳನ್ನು ನೀಡಲಾಗಿದೆ. ಕೊನೆಯಲ್ಲಿ ಪರಾಮರ್ಶನ ಗ್ರಂಥಗಳನ್ನು ನೀಡಲಾಗಿದೆ. ಅನುಬಂಧದಲ್ಲಿ ಮಾಹಿತಿದಾರರ ವಿವರ, ಕೋಷ್ಟಕಗಳು, ನಕ್ಷೆಗಳು, ಹಾಗೂ ಬಳ್ಳಾರಿ ಜಿಲ್ಲೆಯ ಬುಡಕಟ್ಟು ಮಹಿಳೆಯರ ಅಧ್ಯಯನ ಕ್ಷೇತ್ರ ಕಾರ್ಯದ ಛಾಯಾಚಿತ್ರಗಳನ್ನು ತೋರಿಸಲಾಗಿದೆ.

ಬುಡಕಟ್ಟು ಮಹಿಳೆಯರ ಸಬಲೀಕರಣದ ಸ್ಥಿತಿಯನ್ನು ಅರಿಯಲು ಎಲ್ಲಾ ಬುಡಕಟ್ಟು ಮಹಿಳೆಯರನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡುವ ಅವಶ್ಯಕತೆ ಇಲ್ಲ. ಆ ವಲಯದಲ್ಲಿರುವ ಕೆಲವು ಮಹಿಳೆಯರನ್ನು ಅಧ್ಯಯನ ಮಾಡುವುದರಿಂದ ಬುಡಕಟ್ಟು ಮಹಿಳೆಯರ ಜೀವನ ಸ್ವರೂಪದ ಸಮಗ್ರ ಮಾಹಿತಿ ದೊರೆಯಬಲ್ಲದು. ಈ ಆಶಯದಿಂದಲೇ ಬಳ್ಳಾರಿ ಜಿಲ್ಲೆಯ ಬುಡಕಟ್ಟು ಮಹಿಳೆಯರ ಸಬಲೀಕರಣದ ಸ್ವರೂಪವನ್ನು ತಿಳಿಯಲು ಪ್ರಮುಖವಾಗಿ ಬೇಡ, ಮೇದ, ಡುಂಗ್ರಿ ಗರಾಸಿಯಾ ಹಾಗೂ ಪಾರ್ಧಿ ಸಮುದಾಯಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಒಟ್ಟಾರೆಯಾಗಿ ಈ ಅಧ್ಯಯನದಲ್ಲಿ ಬುಡಕಟ್ಟು ಮಹಿಳೆಯರ ಸಾಮಾಜಿಕ ಸಬಲೀಕರಣದೊಂದಿಗೆ, ಆರ್ಥಿಕ, ಶೈಕ್ಷಣಿಕ, ಆರೋಗ್ಯ ಹಾಗೂ ರಾಜಕೀಯ ಸಬಲೀಕರಣದ ಸ್ಥಿತಿಗತಿಗಳನ್ನು ಅರಿಯಲು ಸಾಧ್ಯವಾಗಿದೆ. ಸ್ವಾತಂತ್ರ್ಯಾನಂತರ

ಭಾರತದಲ್ಲಿ ಕಂಡುಬಂದ ಉದಾರೀಕರಣ, ನಗರೀಕರಣ, ಜಾಗತೀಕರಣದಂತಹ ಚಿಂತನೆಗಳಿಂದ ಭಾರತೀಯರ ಸಾಮಾಜಿಕ ಬದುಕಿನಲ್ಲಿ ಹಲವಾರು ಬದಲಾವಣೆಗಳಾಗಿವೆಯೆಂಬುದೇನೋ ಸರಿ, ಆದರೆ ಬುಡಕಟ್ಟು ಮಹಿಳೆಯರ ಬದುಕನ್ನು ಇವು ಬದಲಿಸುವ ಬದಲಾಗಿ ಅವರನ್ನು ಮತ್ತಷ್ಟು ತಳಕ್ಕೆ ನೂಕಿವೆ. ಹೀಗಾಗಿ ಇಂದು ಭಾರತದ ಬಹುತೇಕ ಬುಡಕಟ್ಟು ಮತ್ತು ಕುಶಲಕರ್ಮಿ ಸಮುದಾಯದ ಮಹಿಳೆಯರು ಹೆಚ್ಚು ಶೋಷಣೆಗೆ ಒಳಗಾಗುತ್ತಿರುವರು. ಮೇಲ್ನೋಟಕ್ಕೆ ಸಂವಿಧಾನಿಕವಾಗಿ ಮಹಿಳೆಯರಿಗೆ ಪುರುಷರಷ್ಟೇ ಸಮಾನ ಹಕ್ಕುಗಳನ್ನು ನೀಡಲಾಗಿದೆಯಾದರೂ ಅದು ಕೇವಲ ತೋರುಗಾಣಿಕೆಯಾಗಿ ಮಾತ್ರವೆಂದು ತೋರುತ್ತದೆ. ಆಧುನಿಕ ಶಿಕ್ಷಣ, ಆರ್ಥಿಕತೆ, ಆರೋಗ್ಯ, ರಾಜಕೀಯ ಸೌಲತ್ತುಗಳನ್ನು ಪಡೆದು ಆ ಮುಖಾಂತರ ಸಬಲಳಾಗಿ ಆತ್ಮಸ್ಥೈರ್ಯವನ್ನು ಪಡೆಯಬೇಕಾಗಿದ್ದ ಬುಡಕಟ್ಟು ಮಹಿಳೆ ಅಧೀರತೆಗೆ, ಶೋಷಣೆಗೆ ಒಳಗಾಗುತ್ತಿದ್ದಾಳೆ. ಬಂಡವಾಳಶಾಹಿ ಮತ್ತು ಮೇಲ್ಜಾತಿ, ಪುರುಷಶಾಹಿ ಹಿಡಿತದಲ್ಲಿರುವ ಈ ವ್ಯವಸ್ಥೆಯಲ್ಲಿ ಬುಡಕಟ್ಟು ಮಹಿಳೆಗೆ ಅಸ್ತಿತ್ವ ಇಲ್ಲವಾಗಿದೆ. ಸಾಮಾಜಿಕ ವಲಯದಲ್ಲಿ ಅತ್ಯಂತ ದುರ್ಬಲಳಾದ ಬುಡಕಟ್ಟು ಮಹಿಳೆಯು ತನ್ನ ಅಧಿಕಾರ ಮಿತಿಯಲ್ಲಿ ಯಾವುದೇ ಕಾರ್ಯವನ್ನು ನಿರ್ವಹಿಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆಯೆಂಬುದನ್ನು ಈ ಅಧ್ಯಾಯದ ಪ್ರತಿ ಅಧ್ಯಾಯಗಳ ಮೂಲಕ ಗುರುತಿಸಲಾಗಿದೆ. ಒಟ್ಟಾರೆಯಾಗಿ ಈ ಅಧ್ಯಯನದಿಂದ ಕಂಡುಬಂದ ಫಲಿತಗಳು ಈ ಕೆಳಗಿನಂತಿವೆ.

**ಅಧ್ಯಯನದ ಫಲಿತಗಳು**

- ಬುಡಕಟ್ಟು ಮಹಿಳೆಯು ಇಂದಿಗೂ ತನ್ನ ಸ್ಥಾನಮಾನದ ಕುರಿತು ಯಾವುದೇ ಪರಿವೆ ಹೊಂದಿಲ್ಲವೆಂಬುದು, ಅದರಲ್ಲಿಯೂ ಬುಡಕಟ್ಟುಗಳಲ್ಲಿಯೇ ಅಲೆಮಾರಿತನವನ್ನು ಇನ್ನೂ ಜೀವಂತ ಉಳಿಸಿಕೊಂಡಿರುವ ಡುಂಗ್ರಿ ಗರಾಸಿಯಾ ಹಾಗೂ ಪಾರ್ಧಿ ಬುಡಕಟ್ಟು ಮಹಿಳೆಯರ ಸ್ಥಿತಿ ಇತರ ಬುಡಕಟ್ಟು ಮಹಿಳೆಯರಿಗಿಂತ ಶೋಚನೀಯವಾಗಿರುವುದು
- ಈ ದೇಶದ ಸಂವಿಧಾನದಡಿ ಲಿಂಗಭೇದ, ಜಾತಿಭೇದಗಳಿಲ್ಲದೆ ಎಲ್ಲರಿಗೂ ಸಮಾನ ಹಕ್ಕುಗಳಿವೆ ಎಂದಿದ್ದರೂ ಬುಡಕಟ್ಟು ಮಹಿಳೆ ಇನ್ನೂ ಸಬಲೀಕರಣಗೊಳ್ಳದೆ ಮೂಲ ಅಬಲೆತನವನ್ನೇ ಅನುಭವಿಸುತ್ತಿರುವಳು.
- ಮಹಿಳಾ ಹಕ್ಕುಬಾಧ್ಯತೆಗಳ ಅರಿವಿರದ ಬುಡಕಟ್ಟು ಮಹಿಳೆಯು ತನ್ನ ಶೋಷಣೆಯ ಬಗ್ಗೆ ಇರುವ ಪರಿವೆಯನ್ನು ತನ್ನ ಧರ್ಮವೆಂದು ಪರಿಗಣಿಸಿ ಸಹಜವೆಂಬಂತೆ ನಡೆದುಕೊಳ್ಳುತ್ತಿರುವಳು ಹಾಗೂ ಅದರಿಂದ ತನ್ನರಿವಿಗೆ ಬಾರದಂತೆ ನೋವನ್ನು ಅನುಭವಿಸುತ್ತಿರುವಳು.
- ಬುಡಕಟ್ಟು ಮಹಿಳೆ ಇಂದಿಗೂ ಸಾಮಾಜಿಕ ಕಟ್ಟುಪಾಡುಗಳು ತನ್ನನ್ನು ಶೋಷಿಸುತ್ತಿವೆ ಎಂಬ ಪ್ರಜ್ಞೆ ಇಲ್ಲದೆ ಅವುಗಳನ್ನೇ ಅನುಸರಿಸುತ್ತಾ ಸಾಗುತ್ತಿರುವಳು. ಸಾಮಾಜಿಕ ಕಟ್ಟುಪಾಡುಗಳಾಚೆ ಬಂದು ತನ್ನ ಬದುಕನ್ನು ತಾನು ಸ್ವತಂತ್ರವಾಗಿ ಕಟ್ಟಿಕೊಳ್ಳುವಲ್ಲಿ ಬುಡಕಟ್ಟು ಮಹಿಳೆ ಸೋತಿರುವಳು.
- ಪುರುಷನಿಗೆ ಸಮಾನವಾಗಿ ದುಡಿಮೆ ನಡೆಸಿದರೂ ಬುಡಕಟ್ಟು ಮಹಿಳೆಯ ಆರ್ಥಿಕತೆಯು ಪುರುಷ ಯಜಮಾನ್ಯತೆಯಲ್ಲಿಯೇ ನಡೆಯುವುದು

• ಶೈಕ್ಷಣಿಕವಾಗಿ ಬುಡಕಟ್ಟು ಮಹಿಳೆ ತನ್ನ ಮೌಖಿಕ ಪರಂಪರೆಯಲ್ಲಿ ಸುಶಿಕ್ಷಿತಳಂತೆ ಕಂಡರೂ ಇಂದಿನ ಆಧುನಿಕ ಜಗತ್ತು ಬಯಸುವ ಆಧುನಿಕ ಶಿಕ್ಷಣ ಪಡೆಯುವಲ್ಲಿ ವಂಚಿತಳಾಗಿರುವಳು.

• ಬುಡಕಟ್ಟು ಮಹಿಳೆಯರು ತಮ್ಮ ಸುತ್ತಲ ವಾತವರಣ, ಶುಚಿತ್ವದ ಕಾರಣಕ್ಕಾಗಿ ಅನಾರೋಗ್ಯದಿಂದ ಹೆಚ್ಚು ಬಳಲುತ್ತಿರುವರು.

• ರಾಜಕೀಯವಾಗಿ ಬುಡಕಟ್ಟು ಮಹಿಳೆ ಕೇವಲ ದಾಳವಾಗಿ ಬಳಕೆಗೊಳ್ಳುತ್ತಿರುವಳು. ರಾಜಕೀಯ ಸ್ಥಾನ ಪಡೆಯುವಲ್ಲಿ ಬೇಡ ಸಮುದಾಯದ ಮಹಿಳೆಯರ ಹೊರತಾಗಿ ಬೇರೆ ಬುಡಕಟ್ಟು ಸಮುದಾಯದ ಮಹಿಳೆಯರಿಗೆ ಇಂದಿಗೂ ಸಾಧ್ಯವಾಗದೇ ಇರುವುದು ಕಂಡುಬರುವುದು.

• ಬೇಡ, ಮೇದ ಮಹಿಳೆಯರು ಚುನಾವಣೆಗಳಲ್ಲಿ ಮತವನ್ನು ಚಲಾವಣೆ ಮಾಡುವಷ್ಟು ಸಬಲರಾಗಿರುವರು. ಆದರೆ ಅಲೆಮಾರಿ ಡುಂಗ್ರಿಗರಾಸಿಯಾ ಹಾಗೂ ಪಾರ್ಧಿಯ ಬಹುತೇಕ ಮಹಿಳೆಯರು ಇಂದಿಗೂ ಚುನಾವಣೆಗಳಲ್ಲಿ ಮತಗಳನ್ನು ಚಲಾಯಿಸದೇ ಹೋಗಿರುವರು. ಪ್ರಾಯಶಃ ಇವರ ಅಲೆಮಾರಿತನದಿಂದಾಗಿ ಚುನಾವಣಾ ಗುರುತಿನ ಚೀಟಿ ಹೊಂದದೇ ಇರುವುದೇ ಇವರು ಚುನಾವಣೆಯಲ್ಲಿ ಮತ ಚಲಾವಣೆಯಿಂದ ಹೊರಗುಳಿಯಲು ಕಾರಣವಾಗಿದೆ.

• ಹೆಚ್ಚಿನ ಮಹಿಳೆಯರು ಕುಟುಂಬದ ಇತರರೊಂದಿಗೆ ಸೇರಿ ಮನೆಯ ಮುಖ್ಯ ಚಟುವಟಿಕೆಗಳಲ್ಲಿ ನಿರ್ಧಾರ ತೆಗೆದುಕೊಳ್ಳುತ್ತಾರಾದರೂ ಜೊತೆಯಲ್ಲಿ ನಿರ್ಧಾರ ತೆಗೆದುಕೊಳ್ಳಲು ಪುರುಷರನ್ನು ಸಹ ಅವಲಂಭಿಸಿದ್ದಾರೆ.

• ಹೆಚ್ಚಿನ ಮಹಿಳೆಯರು ಸಾಮಾಜಿಕ ಚಟುವಟಿಕೆಗಳಲ್ಲಿ ಸ್ವತಂತ್ರರಾಗಿದ್ದು ಮಹಿಳೆಯರ ಸ್ವ ಇಚ್ಛೆಗೆ ಪುರುಷರು ಗೌರವಿಸುತ್ತಾರೆ.

• ಭಾರತದಲ್ಲಿ ಅನೇಕ ನೀತಿ ಕಾರ್ಯಕ್ರಮಗಳು ಬುಡಕಟ್ಟು ಕಲ್ಯಾಣಕ್ಕಾಗಿ ಮತ್ತು ಮಹಿಳಾಪರ ಕಾಳಜಿಗಳು ಬೆಳೆದಿದ್ದರೂ ಮಹಿಳೆಯರ ಸ್ಥಾನವನ್ನು ಸೂಚಿಸುವ ಅಂಕಿ ಅಂಶಗಳನ್ನು ಗಮನಿಸಿದರೆ ಅವರಿನ್ನು ಸಂಪೂರ್ಣವಾಗಿ ಸಶಕ್ತಗೊಂಡಿಲ್ಲ.

• ಅಭಿವೃದ್ಧಿ ಹೊಂದಿದ ಶ್ರೀಮಂತ ಬುಡಕಟ್ಟು, ಮಧ್ಯಮ ವರ್ಗದ ಬುಡಕಟ್ಟು ಹಾಗೂ ಕೆಳವರ್ಗದ ಬಡತನದ ಮೂಲ ಬುಡಕಟ್ಟು ಎಂಬ ಮೂರು ಹಂತದ ಬುಡಕಟ್ಟುಗಳನ್ನು ಕಾಣಬಹುದಾಗಿದೆ.

• ಬುಡಕಟ್ಟು ಉಪಯೋಜನೆಗಳು ಪಂಚವಾರ್ಷಿಕ ಯೋಜನೆಗಳಿಂದ ಹತ್ತು ಹಲವು ಕಾರ್ಯಕ್ರಮ, ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದರೂ, ಸ್ಥಳೀಯ ಪ್ರಬಲರ ಶ್ರೀಮಂತರ, ಬಂಡವಾಳಶಾಹಿ, ಹಾಗೂ ರಾಜಕೀಯ ವ್ಯಕ್ತಿಗಳ ಕಪಿಮುಷ್ಠಿಯಿಂದ ಬುಡಕಟ್ಟುಗಳು ಸಂಪೂರ್ಣ ಮುಕ್ತವಾಗಿಲ್ಲ.

• ಆಧುನೀಕರಣದ ಪ್ರಭಾವ ಬುಡಕಟ್ಟು ಸಾಂಸ್ಕೃತಿಕ ಬದುಕಿನ ಮೇಲೆ ಪ್ರಭಾವ ಬೀರಿದ್ದು, ಯುವಕರು, ನಗರ-ಪಟ್ಟಣಗಳ ಸಂಪರ್ಕದತ್ತ ಧಾವಿಸುತ್ತಿದ್ದಾರೆ. ಇದು ಕೇವಲ ಜೀವನ ಶೈಲಿಗೆ ಮಾತ್ರ

ಸೀಮೀತವಾಗಿದೆ. ಮೂಲ ಆರ್ಥಿಕ, ರಾಜಕೀಯ, ಸಾಮಾಜಿಕ ಪರಿವರ್ತನೆಗಳು ಇನ್ನೂ ಸ್ಥಿತ್ಯಂತರ ಹಂತದಲ್ಲಿದೆ.

**ಸಲಹೆಗಳು ಮತ್ತು ಪರಿಹಾರಗಳು**

- ಮಹಿಳೆಯರ ವಿಕಸನದ ದೃಷ್ಟಿಯಿಂದ ಮಹಿಳಾ ಶಿಕ್ಷಣಕ್ಕೆ ಹೆಚ್ಚೆಚ್ಚು ಪ್ರೋತ್ಸಾಹಿಸಬೇಕು. ಹೆಣ್ಣು ಮಕ್ಕಳ ಶಾಲೆ ಬಿಡುವಿಕೆಯನ್ನು ನಿಯಂತ್ರಿಸಬೇಕು.
- ಬುಡಕಟ್ಟು ಸಮುದಾಯಗಳಲ್ಲಿ ಅಲೆಮಾರಿಯಾಗಿರುವ ಡುಂಗ್ರಿಗರಾಸಿಯಾ ಮತ್ತು ಪಾರ್ಧಿ ಸಮುದಾಯಗಳಲ್ಲಿನ ಮಹಿಳೆಯರಿಗೆ ಸ್ವಂತ ವ್ಯಾಪಾರ ಚಟುವಟಿಕೆಗಳನ್ನು ಕೈಗೊಳ್ಳಲು ಸರಕಾರ ಉತ್ತೇಜನ ನೀಡಬೇಕು
- ಮೇಧಾದಂತಹ ಕುಶಲಕರ್ಮಿ ಸಮುದಾಯದ ಮಹಿಳೆಯರಿಗೆ ಸ್ವಾವಲಂಭನೆಗಾಗಿ ಸಾಲ ಸೌಲಭ್ಯಗಳನ್ನು ನೀಡುವುದು.
- ಬೇಡರಲ್ಲಿರುವ ದೇವದಾಸಿ ಪದ್ಧತಿಯನ್ನು ಸಂಪೂರ್ಣವಾಗಿ ತೊಲಗಿಸುವುದು ಮತ್ತು ಅವರಿಗೆ ಕೌಶಲ್ಯಾಧರಿತ ವೃತ್ತಿ ತರಬೇತಿಯನ್ನು ನೀಡಬೇಕು.
- ಹಾಗೆಯೇ ಇತರ ಬುಡಕಟ್ಟು ಸಮುದಾಯಗಳಿಗೆ ಮೀಸಲು ಕ್ಷೇತ್ರಗಳನ್ನು ನಿಗದಿಪಡಿಸಿರುವಂತೆ ಅಲೆಮಾರಿ ಸಮುದಾಯಗಳಿಗೂ ಮೀಸಲು ಮಹಿಳಾ ಕ್ಷೇತ್ರಗಳನ್ನು ನಿಗದಿಗೊಳಿಸುವುದು,
- ಅಬಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳಾ ವಿಷಯಗಳು ಲಿಂಗಕಾಳಜಿಗಳು ಸಮಗ್ರಗೊಳ್ಳಬೇಕಾದರೆ ಮತ್ತು ಮಹಿಳೆಯರು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಸಶಕ್ತರಾಗಬೇಕಾದರೆ ಔಪಚಾರಿಕ ರಾಜಕೀಯ ಪ್ರಕ್ರಿಯೆಯಲ್ಲಿ ಅವರ ಭಾಗವಹಿಸುವಿಕೆ ಪ್ರಮಾಣ ಹೆಚ್ಚಾಗಬೇಕು.
- ಮತದಾರರಾಗಿ, ಚುನಾವಣಾ ಅಭ್ಯರ್ಥಿಯಾಗಿ ಬುಡಕಟ್ಟು ಮಹಿಳೆಯರ ಸಂಖ್ಯೆ ಹೆಚ್ಚಾಗಬೇಕು.
- ಯಾವುದೇ ಪ್ರಮುಖ ನಿರ್ಧಾರ ಕೈಗೊಳ್ಳುವ ಸ್ಥಾನಗಳಲ್ಲಿ ಬುಡಕಟ್ಟು ಮಹಿಳೆಯರಿಗೆ ಸೂಕ್ತ ಪ್ರಾತಿನಿದ್ಯ ಸಿಗಬೇಕು.
- ಬುಡಕಟ್ಟು ಮಹಿಳೆಯರ ಅಭಿವೃದ್ಧಿಗೆ ರೂಪಿಸುವ ಯೋಜನೆಗಳು ಅವರ ಸಂಸ್ಕೃತಿ, ಪರಿಸರ ಹಾಗೂ ಅಭಿರುಚಿಗೆ ಅನುಗುಣವಾಗಿರಬೇಕು ಅಂದರೆ ಸಮುದಾಯದವರ ನಿರ್ಧಾರಕ್ಕೆ ಬಿಡಬೇಕು.
- ಬುಡಕಟ್ಟು ಮಹಿಳೆಯರ ಸಬಲೀಕರಣಕ್ಕಾಗಿ ಇರುವ ಯೋಜನೆಗಳನ್ನು ಕಾರ್ಯಗತಗೊಳಿಸಲು ಗ್ರಾಮೀಣ, ಹೋಬಳಿ ಹಾಗೂ ಬುಡಕಟ್ಟು ಪ್ರದೇಶಗಳಲ್ಲಿ ಸ್ವಯಂ ಸೇವಕರನ್ನು ನೇಮಕಮಾಡಿಕೊಳ್ಳಬೇಕು.
- ಬುಡಕಟ್ಟು ಮಹಿಳೆಯರ ಮಕ್ಕಳು ಶಿಕ್ಷಣದಿಂದ ವಂಚಿತವಾಗದಂತೆ ನೋಡಿಕೊಳ್ಳುವುದು ಮತ್ತು ಶಾಲೆಬಿಟ್ಟ ಮಕ್ಕಳನ್ನು ಗುರುತಿಸಲು ಸ್ವಯಂ ಸೇವಕರನ್ನು ನೇಮಿಸಿಕೊಳ್ಳಬೇಕು.

- ಬುಡಕಟ್ಟು ಮಹಿಳೆಯರ ಸಮಸ್ಯೆಗಳನ್ನು ಆಲಿಸಲು ಮತ್ತು ಯೋಜನೆಗಳನ್ನು ಕಾರ್ಯಗತಗೊಳಿಸಲು ಪ್ರತ್ಯೇಕ ಟ್ರೈಬಲ್ ಅಡ್‌ವೈಸರ್ ಕೌನ್ಸಿಲ್‌ನ್ನು ಪ್ರತ್ಯೇಕವಾಗಿ ತೆರೆಯಬೇಕು.

**ಅಧ್ಯಯನದ ಮುಂದಿನ ಸಾಧ್ಯತೆಗಳು**

- ಅಧ್ಯಯನದ ಮಿತಿ ಹಾಗೂ ಕಾಲಾವಧಿಯ ಮಿತಿಯಿಂದಾಗಿ ಜಿಲ್ಲೆಯ ಎಲ್ಲಾ ಮಹಿಳೆಯರನ್ನು ಸಬಲೀಕರಣದ ಆಯಾಮಗಳಲ್ಲಿ ಅಮೂಲಾಗ್ರವಾಗಿ ನೋಡಲು ಸಾಧ್ಯವಾಗಿಲ್ಲ. ಕೇವಲ ಬುಡಕಟ್ಟು ಮಹಿಳೆಯರನ್ನೇ ದೃಷ್ಟಿಯಲ್ಲಿರಿಸಿಕೊಂಡು ಇಲ್ಲಿ ಅಧ್ಯಯನ ಮಾಡಲಾಗಿದೆ. ಹೀಗಾಗಿ ಈ ಅಧ್ಯಯನವು ಅಷ್ಟಕ್ಕೆ ಮಾತ್ರ ಸೀಮಿತವಾಗಿಸಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಮಹಿಳಾ ಸಬಲೀಕರಣದ ಕುರಿತು ಅಮೂಲಾಗ್ರವಾಗಿ ಅಧ್ಯಯನ ಮಾಡಲು ಪ್ರಯತ್ನಿಸಲಾಗುವುದು.

- ಬುಡಕಟ್ಟು ಮಹಿಳೆಯರ ಸಬಲೀಕರಣ ಕುರಿತು ಸಮಾಜಶಾಸ್ತ್ರೀಯ ನೆಲೆಗಟ್ಟಿನ ಆಯಾಮದಲ್ಲಿ ಮಾತ್ರ ಅಧ್ಯಯನ ಮಾಡಲು ಸಾಧ್ಯವಾಗಿದೆ. ಬುಡಕಟ್ಟು ಮಹಿಳೆಯರ ಆರ್ಥಿಕ, ಸಾಮಾಜಿಕ, ಮಾನಸಶಾಸ್ತ್ರೀಯ, ಶೈಕ್ಷಣಿಕ, ಸಾಂಸ್ಕೃತಿಕ, ಮಾನವಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬಹುದಾಗಿದೆ.

- ಸಾಮಾಜಿಕ ಸಹಭಾಗಿತ್ವದಲ್ಲಿ ಬುಡಕಟ್ಟು ಮಹಿಳೆಯ ಸ್ಥಿತಿ ಕೇವಲ ಗಾಣದೆತ್ತಿನ ಸ್ಥಿತಿಯಾಗಿದೆ. ಅವಳನ್ನು ಸಮಾಜಶಾಸ್ತ್ರೀಯ ಅಧ್ಯಯನದ ಹೊರತಾದ ಬೇರೆ ಬೇರೆ ಅಧ್ಯಯನ ಶಿಸ್ತುಗಳ ಅಡಿ ಮಹಿಳೆಯರ ಸಬಲೀಕರಣ ಕುರಿತು ಅಧ್ಯಯನ ಮಾಡಬಹುದಾಗಿದೆ.

ಪ್ರಸ್ತುತ ಅಧ್ಯಯನ ವ್ಯಾಪ್ತಿಯು ಬಳ್ಳಾರಿ ಜಿಲ್ಲೆಗೆ ಸೀಮಿತಗೊಂಡಿದೆ. ಇಲ್ಲಿಯ ಬುಡಕಟ್ಟು ಮಹಿಳೆಯರ ಸಬಲೀಕರಣದ ಸ್ಥಿತಿಗತಿಗೂ ಇನ್ನುಳಿದ ಪ್ರದೇಶಗಳ ಬುಡಕಟ್ಟು ಮಹಿಳೆಯರ ಸಬಲೀಕರಣದ ಸ್ಥಿತಿಗತಿಗಳ ಕುರಿತು ತೌಲನಿಕವಾಗಿ ಅಧ್ಯಯನ ಮಾಡಬಹುದಾಗಿದೆ.

ಒಟ್ಟಾರೆಯಾಗಿ ಬಳ್ಳಾರಿ ಜಿಲ್ಲೆಯ ಬುಡಕಟ್ಟು ಮಹಿಳೆಯರ ಸಬಲೀಕರಣದ ಕುರಿತು ಅಧ್ಯಯನ ಮಾಡಲಾಗಿ ಕಂಡು ಬಂದ ಫಲಿತಗಳು ಮತ್ತು ಮುಂದೆ ಅಧ್ಯಯನ ನಡೆಸಲು ಇರಬಹುದಾದ ಸಾಧ್ಯತೆಗಳ ಕುರಿತು ಇಲ್ಲಿ ವಿವರಿಸಲಾಗಿದೆ. ಅಧ್ಯಯನ ಮಿತಿ ಹಾಗೂ ಕಾಲಮಿತಿಗಳಿಂದಾಗಿ ಪ್ರಸ್ತುತ ಅಧ್ಯಯನವನ್ನು ಬಳ್ಳಾರಿ ಜಿಲ್ಲೆಯ ನಾಲ್ಕು ಬುಡಕಟ್ಟು ಸಮುದಾಯಗಳಿಗೆ ಮಾತ್ರ ಸೀಮಿತಗೊಳಿಸಲಾಯಿತು. ಈ ಅಧ್ಯಯನವು ಬುಡಕಟ್ಟು ಮಹಿಳೆಯರ ಸಬಲೀಕರಣದ ವಿವಿಧ ಆಯಾಮಗಳನ್ನು ಅರಿಯುವ ಒಂದು ಪ್ರಯತ್ನವಾಗಿದೆ. ಈ ಅಧ್ಯಯನವು ಮುಂದೆ ಮಹಿಳೆಯರ ಸಬಲೀಕರಣದ ಕುರಿತು ಅಧ್ಯಯನ ಮಾಡುವವರಿಗೆ ಒಂದು ಕೈದೀವಿಗೆಯಾದೀತೆಂದು ಭಾವಿಸಲಾಗಿದೆ.

# ಅನುಬಂಧ

# ಪರಮಾರ್ಶನ ಗ್ರಂಥ

# ಪರಾಮಾರ್ಶನ ಗ್ರಂಥಗಳು


ಅಜ್ಜಯ್ಯ ಸಿ, ೨೦೦೭, ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಸಮಾಜೋ ಆರ್ಥಿಕ ವ್ಯವಸ್ಥೆ, (ಅಪ್ರಕಟಿತ ಪಿಎಚ್ ಡಿ ಪ್ರಬಂಧ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ

ಅಬ್ದುಲ್ ಅಜೀಜ್, ೨೦೦೫, ಕರ್ನಾಟಕ ಮಾನವಾಭಿವೃದ್ಧಿ ವರದಿ, ಕರ್ನಾಟಕ ಸರ್ಕಾರ, ಬೆಂಗಳೂರು

ಅನಸೂಯ ಕದಂ, ೨೦೦೫, ಮಹಿಳಾ ಶೋಷಣೆಯ ನೆಲೆಗಳು, (ಅಪ್ರಕಟಿತ ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಈರಪ್ಪ ಅಂಬ್ಲಯ್ಯ, ೨೦೧೫ ಜಾಗತೀಕರಣ ಸಂದರ್ಭದಲ್ಲಿ ಬುಡಕಟ್ಟುಗಳ ಸಮೊಜೋ–ಆರ್ಥಿಕ ಸ್ಥಿತಿಗತಿಗಳು, (ಅಪ್ರಕಟಿತ ಎಂ ಫಿಲ್ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಒಡೆಯರ್ ಡಿ. ಹೆಗ್ಗಡೆ, ಅನ್ನಪೂರ್ಣೆಶ್ವರಿ ಎನ್, ೨೦೦೩ ಮಹಿಳಾ ಅಧ್ಯಯನಗಳು ಆರ್ಥಿಕ ನೆಲೆಗಳು ಮತ್ತು ಆಯಾಮಗಳು, ಸುಚಿತ್ರ ಪ್ರಕಾಶನ, ಮೈಸೂರು

ಕಲಬುರ್ಗಿ ಎಂ ಎಂ (ಸಂ), ೧೯೯೮, ವಚನ ಸಂಪುಟ ೧, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕುಮಾರ್ ಆರ್ ಬಿ, ೨೦೦೫, ಮುದ್ದೆಕಂಬಾರರು, ಸಾರಾ ಪಬ್ಲಿಕೇಶನ್ಸ್, ಬೆಂಗಳೂರು

ಕುಮುದಾ ಬಿ ಸುಶೀಲಪ್ಪ, ೨೦೦೮, ಹಕ್ಕಿಪಿಕ್ಕಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಕೃಷ್ಣಮೂರ್ತಿ.ಎನ್, ೨೦೧೫, ಒಡಿಗ ಬುಡಕಟ್ಟು ಸಮುದಾಯ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು

ಕೃಷ್ಣಮೂರ್ತಿ ಹನೂರು, ೨೦೦೬, ಮ್ಯಾಸಬೇಡರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಕೃಷಿ ಗಣತಿ ವರದಿ, ೨೦೦೧, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು

ಕೊಟ್ರೇಶ ಪಿ, ೨೦೦೩, ಸಾಮಾಜಿಕ ಬದಲಾವಣೆಯ ಹಾದಿಯಲ್ಲಿ ಬೇಡರು, (ಅಪ್ರಕಟಿತ ಎಂ ಫಿಲ್ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕಡ್ಲಬಾಳ್ ಪನ್ನಂಗಧರ, ೨೦೧೨, ಮೇಧ ಸಮುದಾಯದ ವಾಣಿಜ್ಯ ವ್ಯವಹಾರಗಳು, (ಅಪ್ರಕಟಿತ ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕೊಟ್ಲಮ್ಮ, ೨೦೧೨, ಬಳ್ಳಾರಿ ಜಿಲ್ಲೆಯ ದೇವದಾಸಿಯರು, (ಅಪ್ರಕಟಿತ ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಗುರುಪ್ರಸಾದ್ ಹೆಚ್ ಎಸ್, ೨೦೧೦, ವಲಸಿಗರ ನೆಲೆ ಮರಿಯಮ್ಮನಹಳ್ಳಿ ಸಂಕಥನ, ಮರಿಯಮ್ಮನಹಳ್ಳಿ

ಗುರುಲಿಂಗಯ್ಯ ಎಂ, ೨೦೦೪, ಬುಡಕಟ್ಟುಗಳು ಮತ್ತು ಅಭಿವೃದ್ಧಿ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ,

ಗೆಜಿಟೆಡ್ ಆಫ್ ಇಂಡಿಯಾ; ಮೈಸೂರು ಸ್ಟೇಟ್; ಬಳ್ಳಾರಿ ಜಿಲ್ಲೆ; ಸರ್ಕಾರಿ ಮುದ್ರಣಾಲಯ; ಬೆಂಗಳೂರು, ೧೯೭೨

ಚಂದ್ರಶೇಖರ್ ಟಿ ಆರ್, ೨೦೦೪, ಅಮಾರ್ತ್ಯಸೇನ್, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಂದ್ರಶೇಖರ್ ಟಿ ಆರ್, ೨೦೧೬, ಕರ್ನಾಟಕದಲ್ಲಿ ಸ್ತ್ರೀಯರ ಸ್ಥಿತಿಗತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಂದ್ರಶೇಖರ ದಾಮ್ಲೆ, ೨೦೧೬, ಕರ್ನಾಟಕದ ಶೈಕ್ಷಣಿಕ ಸ್ಥಿತಿಗತಿ, ಮನೋಹರ ಗ್ರಂಥಮಾಲೆ, ಧಾರವಾಡ

ಚೆನ್ನಮ್ಮ ಕೆ.ಸಿ, ೨೦೧೦, ಮಹಿಳೆಯ ದುಡಿಮೆ ಏಕರೂಪತೆಯ ಪ್ರಶ್ನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಗದೀಶ ಕೆ ಕೆ, ೨೦೦೮, ಡುಂಗ್ರಿ ಗರಾಸಿಯಾ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಜನಗಣತಿ ವರದಿ:೨೦೧೨, ಕರ್ನಾಟಕ ಸರ್ಕಾರ, ಬೆಂಗಳೂರು

ತಾರಿಹಳ್ಳಿ ಹನುಮಂತಪ್ಪ (ಸಂ), ೨೦೧೦, ಕರ್ನಾಟಕದ ಬುಡಕಟ್ಟು ಸಮುದಾಯಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ತಿಮ್ಮಾರೆಡ್ಡಿ ಎಸ್.ವೈ, ೨೦೧೨, ಕುಲಕಸುಬುಗಳು ಮತ್ತು ಆಧುನಿಕತೆ, (ಅಪ್ರಕಟಿತ ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ದೊಡ್ಡಬಸಮ್ಮ, ೨೦೦೮, ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಬುಡಕಟ್ಟುಗಳ ರಾಜಕೀಯ ಸ್ಥಿತಿಗತಿಗಳು, (ಅಪ್ರಕಟಿತ ಎಂ ಫಿಲ್ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ನಾಗರಾಜ ಎಂ (ಸಂ), ೨೦೧೩, ಮಹಿಳಾ ವಿಮರ್ಶೆ, ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

ನಾಗರಾಜು ಎಸ್, ರಾಚಪ್ಪಾಜಿ ಎಂ, (ಸಂ), ೨೦೧೦, ಮಹಿಳಾ ಸಬಲೀಕರಣದ ವಿವಿಧ ಹೆಜ್ಜೆಗಳು, ಸಂದೀಪ್ ಪ್ರಕಾಶನ, ಚಾಮರಾಜ ನಗರ

ನಾಗೇಶ್ ಎಂ, ೨೦೦೭, ಹಕ್ಕಿ-ಪಿಕ್ಕಿಯರ ಸಾಮಾಜಿಕ ಬದಲಾವಣೆ, (ಅಪ್ರಕಟಿತ ಎಂ ಫಿಲ್ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ನಿಂಗಮಾರಯ್ಯ, ೨೦೧೮, ಬುಡಕಟ್ಟು, ಅವಿರತ ಪುಸ್ತಕ, ಬೆಂಗಳೂರು

ಪಾರ್ವತಮ್ಮ ಸಿ, ೨೦೦೭, ಆದಿವಾಸಿ ಸಮುದಾಯಗಳ ಅಭಿವೃದ್ಧಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪುಟ್ಟಣ್ಣ ಎಂ ಎಸ್, ೧೯೩೭, ಚಿತ್ರದುರ್ಗ ಜಿಲ್ಲೆಯ ಪಾಳೆಯಗಾರರು, ಮೈಸೂರು ರಾಜ್ಯ, ಬೆಂಗಳೂರು

ಪ್ರಭಾಕರ ಎ ಎಸ್, ೧೯೯೯, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ

ಪ್ರಭಾಕರ ಎ ಎಸ್, (ಸಂ), ೨೦೦೮, ಆದಿವಾಸಿ ಆಖ್ಯಾನ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ

ಪ್ರಶಾಂತ್ ಎಚ್ ಡಿ, ೨೦೦೧, ಈಶಾನ್ಯ ಕರ್ನಾಟಕದ ಪ್ರಾಥಮಿಕ ಶಿಕ್ಷಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಶಾಂತ್ ಎಚ್ ಡಿ, (ಸಂ), ೨೦೧೭, ಮಹಿಳಾ ಸಬಲೀಕರಣವೆಂಬುದೆ ರಾಜಕಾರಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪೃಥ್ವಿರಾಜ್ ಲಕ್ಕಿ, ಶಿಕಾರಿರಾಮು, ೨೦೦೮, ಪಾರ್ಧಿ ಸಮುದಾಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಬಳ್ಳಾರಿ ಜಿಲ್ಲಾ ಗೆಜೆಟಿಯರ್, ೧೯೦೪, ಮದ್ರಾಸ್ ಪ್ರಸಿಡೆನ್ಸಿ, ಮದ್ರಾಸ್

ಭವ್ಯ ಹೆಚ್ ಪಿ, ೨೦೧೩, ಮಹಿಳಾ ಸ್ವ-ಸಹಾಯ ಸಂಘಗಳು ಮತ್ತು ಆರ್ಥಿಕ ಸಬಲೀಕರಣ, ತಾರಾ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು

ಭಾರತಿ ಎಂ, ೨೦೦೮, ಭಾರತದಲ್ಲಿ ಮಹಿಳೆ, ವಿದ್ಯಾನಿಧಿ ಪ್ರಕಾಶನ, ಗದಗ

ಮಂಜುನಾಥ ಬೇವಿನಕಟ್ಟಿ, ೨೦೦೭, ಆದಿವಾಸಿ, ಸಾಹಿತ್ಯ ನಂದನ ಪ್ರಕಾಶನ, ಬೆಂಗಳೂರು

ಮಂಜುನಾಥ ಬೇವಿನಕಟ್ಟಿ, ೨೦೧೬, ತಳಾದಿ, ಅರುಣ್ ಪ್ರಕಾಶನ, ಬೆಂಗಳೂರು

ಮಂಜುನಾಥ ಬೇವಿನಕಟ್ಟಿ, (ಸಂ), ೨೦೦೯, ವಾಲ್ಮೀಕಿ ಸಮುದಾಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಧುಮಾಲಾ ಕೆ, ೨೦೧೬, ದಕ್ಷಿಣ ಕನ್ನಡದ ಬುಡಕಟ್ಟು ಮಹಿಳೆಯರ ಸಾಮಾಜಿಕ-ಆರ್ಥಿಕ ಸ್ಥಿತಿ ಮತ್ತು ಸಶಕ್ತೀಕರಣ ಪ್ರಕ್ರಿಯೆ, (ಅಪ್ರಕಟಿತ ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಹಿಳಾ ಆಯೋಗ ವರದಿ, ೨೦೧೨:೧೪

ಮಲ್ಲಿಕಾರ್ಜುನ ಕೆ, ೨೦೧೧, ಪಂಚಾಯತ್ ರಾಜ್ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು, (ಅಪ್ರಕಟಿತ ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಹೇಶ್ ಸಿ.ಕೆ, ೨೦೦೦, ಅಂಬೇಡ್ಕರ್ ಮತ್ತು ಮೀಸಲಾತಿ ವರ್ಗೀಕರಣ, ಅಂಬೇಡ್ಕರ್ ಅಧ್ಯಯನ ಸಂಸ್ಥೆ, ಬೆಂಗಳೂರು

ಮೀನಾಕ್ಷಿ ಬಿ, ೨೦೦೯, ಸ್ಥಳೀಯ ಸಂಸ್ಥೆಗಳು ಮತ್ತು ಮಹಿಳೆಯರು, (ಅಪ್ರಕಟಿತ ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮೇತ್ರಿ ಕೆ ಎಂ, ೨೦೦೭, ಬುಡಕಟ್ಟು ಕುಲಕಸುಬುಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮೇತ್ರಿ ಕೆ ಎಂ, ೨೦೧೭, ಸೂಕ್ಷ್ಮ ಆದಿವಾಸಿಗಳು, ಕರ್ನಾಟಕ ರಕ್ಷಣಾ ಆದಿವಾಸಿ ಪರಿಷತ್(ರಿ), ಬೆಂಗಳೂರು

ಮೋಹನ್ ಕುಮಾರ್, ೨೦೦೯, ಬುಡಕಟ್ಟು ಸಮುದಾಯಗಳ ಸಂಘಟನೆ ಹಾಗೂ ಸಹಬಾಳ್ವೆ (ಅಪ್ರಕಟಿತ ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಯಶವಂತ ಕುಮಾರ್, ೨೦೧೭, ಬುಡಕಟ್ಟು ವೃತ್ತಿ ಮತ್ತು ಪಾರಂಪರಿಕ ಜ್ಞಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ರಾಚಪ್ಪಾಜಿ ಎಂ, ೨೦೧೧, ಮಹಿಳಾ ಸಬಲೀಕರಣ ಮತ್ತು ರಾಜಕೀಯ ಪ್ರಾತಿನಿಧಿತ್ವ, ವಾಣಿ ಪ್ರಕಾಶನ, ಮೈಸೂರು

ರಾಜಪ್ಪ ದಳವಾಯಿ, ೧೯೯೩, ಹಕ್ಕಿಪಿಕ್ಕಿ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ರಾಜಶೇಖರ ಹತಗುಂದಿ, (ಸಂ) "ಸಂಸ್ಕೃತಿ ಮಹಿಳಾ ಮಾಲಿಕೆ, ಬಸವೇಶ್ವರ ಪ್ರಕಾಶನ, ಕಲಬುರ್ಗಿ

ರಾಮಮೂರ್ತಿ, ೨೦೦೫, ಸೋಲಂಕಿ, ವಾಲ್ಮೀಕಿ ಮತ್ತು ರಾಮಾಯಣ, ಪತ್ರಿಕೆ ಪ್ರಕಾಶನ, ಮೈಸೂರು

ರಾಮಸ್ವಾಮಿ ಅಯ್ಯಂಗಾರ್, ಗೊರೂರು, ೧೯೯೮, ಗಾಂಧಿ ಚಿಂತನೆಗಳು, ಗಾಂಧಿ ಪ್ರತಿಷ್ಠಾನ, ಬೆಂಗಳೂರು

ರುಮಾಲೆ ಮೃತ್ಯಂಜಯ; ೧೯೯೯, ಅಲ್ಲಂ ಸುಮಂಗಳಮ್ಮ, ವಿದ್ಯಾವರ್ಧಕ ಸಂಘ, ಬಳ್ಳಾರಿ

ಲಕ್ಕಪ್ಪಗೌಡ ಎಚ್ ಜೆ, ೨೦೦೦, ಕರ್ನಾಟಕ ಬುಡಕಟ್ಟುಗಳು: ಸಂಪು:೨, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು,

ಲೇಖಾ ಅಡವಿ, ೨೦೧೨, ನಮ್ಮ ಮಾನಸ, ಮಾನಸ ಪ್ರಕಾಶನ, ಬೆಂಗಳೂರು,

ವಾಸುದೇವ ಬಡಿಗೇರ, ೨೦೦೭, ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿರುಪಾಕ್ಷಿ ಪೂಜಾರಹಳ್ಳಿ, (ಸಂ) ೨೦೦೭, ಪೆರಿಯಾರರ ವಿಚಾರಧಾರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿರುಪಾಕ್ಷಿ ಪೂಜಾರಹಳ್ಳಿ, ೨೦೦೯, ಬಳ್ಳಾರಿ ಜಿಲ್ಲೆಯಲ್ಲಿನ ಕಲೆಕ್ಟರ್‌ಗಳ ಆಳ್ವಿಕೆ, (ಅಪ್ರಕಟಿತ, ಕ.ವಿ.ವಿ. ಯೋಜನೆ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿರುಪಾಕ್ಷಿ ಪೂಜಾರಹಳ್ಳಿ, ೨೦೦೮, ಬೇಡನಾಯಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವೆಂಕಟಗಿರಿ ದಳವಾಯಿ(ಸಂ), ೨೦೦೮, ಸಂಸ್ಕೃತಿ ಮಹಿಳಾ ಮಾಲಿಕೆ, ಧಾರವಾಡ

ಶಿವಚಿತ್ತಪ್ಪ ಕೆ, ೨೦೧೦, ಮಹಿಳಾ ಸಬಲೀಕರಣ, (ಅಪ್ರಕಟಿತ, ಪಿಎಚ್ ಡಿ ಪ್ರಬಂಧ) ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಶ್ರೀನಿವಾಸ ಎನ್, ೨೦೦೧, ಮೇದರು ಮತ್ತು ಕೊರಚರು ವೃತ್ತಿ ಪದಕೋಶ, (ಅಪ್ರಕಟಿತ ಎಂ ಫಿಲ್ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶ್ರೀನಿವಾಸ್ ಎಲ್, ೨೦೧೧, "ಪರಿವರ್ತನೆಯ ಹಾದಿಯಲ್ಲಿ ಬುಡಕಟ್ಟು ಸಮಾಜಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶ್ರೀನಿವಾಸ ಎಂ ಸಿ, ೨೦೦೪, ಗಿರಿಜನ ಉಪಯೋಜನೆಯಡಿಯಲ್ಲಿ ಬಳ್ಳಾರಿ ಜಿಲ್ಲೆಯ ಬುಡಕಟ್ಟು ಅಭಿವೃದ್ಧಿ ಅಧ್ಯಯನ, (ಅಪ್ರಕಟಿತ, ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸರೋಜ ಕೆ, ೨೦೦೧, ಮಹಿಳೆ ಮತ್ತು ಆರೋಗ್ಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಸಾವಿತ್ರಿ, ೨೦೦೨, ಕುಮ್ಮಟ ಪರಿಸರದ ಕುಮಾರರಾಮನ ಹಬ್ಬ, ಗೆಳೆಯರ ಬಳಗ, ಕಂಪ್ಲಿ

ಸೂರ್ಯನಾಥ ಕಾಮತ್ (ಸಂ), ೧೯೯೮, ಸ್ವಾತಂತ್ರ್ಯೋದಯದ ಮೈಲಿಗಲ್ಲುಗಳು; ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಸಿದ್ಧಗಂಗಮ್ಮ, ೨೦೧೪, ಪಂಚಾಯತ್ ರಾಜ್ ಸಂಸ್ಥೆ ಮತ್ತು ಮಹಿಳಾ ಸಬಲೀಕರಣ, ಗಂಗೋತ್ರಿ ಪ್ರಕಾಶನ, ರಾಮಸಾಗರ

ಸಿದ್ಧಗಂಗಮ್ಮ, ೨೦೧೬, ಅಭಿವೃದ್ಧಿ ಸಮಾಜ ಮತ್ತು ಲಿಂಗಸಂಬಂಧಿ ವಿಚಾರಗಳು, ಗಂಗೋತ್ರಿ ಪ್ರಕಾಶನ, ರಾಮಸಾಗರ

ಹಿಂದುಳಿದ ವರ್ಗಗಳ ಆಯೋಗ ವರದಿ, ೧೯೮೫, ಕರ್ನಾಟಕ ಸರ್ಕಾರ, ಬೆಂಗಳೂರು

ಹೇಮಲತಾ ಎಚ್ ಎಂ, ೨೦೦೩, ಮಹಿಳಾ ಸಶಕ್ತೀಕರಣ, ಪ್ರಣವ ಪ್ರಕಾಶನ, ಬೆಂಗಳೂರು

ರಾಧ ಟಿ, ೨೦೧೮, ದೇವದಾಸಿಯರ ತೌಲನಿಕ ಅಧ್ಯಯನ, (ಬಳ್ಳಾರಿ ಜಿಲ್ಲೆಯ ಪರಿಶಿಷ್ಟರ ಮತ್ತು ಹಿಂದುಳಿದ ವರ್ಗಗಳ ದೇವದಾಸಿಯರನ್ನು ಅನುಲಕ್ಷಿಸಿ) ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್ ಡಿ ಅಪ್ರಕಟಿತ ಮಹಾಪ್ರಬಂಧ

https://kn.m.wikipedia.org>wiki

DISTRICT CENSUS HANDBOOK BELLARY,2011, DIRECTORATE OF CENSUS OPERATIONS KARNATAKA, PART XII-B

Agrawal Meenu, Women Empowerment: Today's Vision for Tomorrow's Mission, 2007:184

Choudhary D Paul, 1962, Social Welfare Administration through Volunatery Agecies, Athmaram & Sons, New Delhi

Edger Thurston,1909, Caste and Tribes in Southern India, Oxford University Press, London

Fernandis, Walter (Ed) 1985, Social Activists and People's Movement, Indian Social Institute, New Delhi

Geetha Menon,1984, Tribal Women Victim of Development Process, Saga Publication , New Delhi

Kabra, Govinda Das, 1984, Development of Weaker Sections: Organisational Alternatives, Inter India Publications, New Delhi

Luies, 1963, Tribes in Mysore State, Oxford University Press, Bombay

Nanjundachar and Ananthakrishna Iyar, 1945, Caste and Tribes in Mysore State, Madras University Press, Madras

Singh K S, 1995, The Sheduled Tribes: People of India, Oxford University Press, New Delhi

**ಕೈಪಿಡಿಗಳು**

ಪರಿಶಿಷ್ಟ ಪಂಗಡ ಸಮುದಾಯಗಳ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರದ ಯೋಜನೆಗಳು/ಕಾರ್ಯಕ್ರಮಗಳ ಕೈಪಿಡಿ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು, ೨೦೧೮–೧೯

ಆರೋಗ್ಯ ಇಲಾಖೆಯ ಕೈಪಿಡಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು

ಕೇಂದ್ರ ಸರ್ಕಾರದ ಸಬಲೀಕರಣ ಯೋಜನೆಗಳ ಕೈಪಿಡಿ, ಮಿನಿಸ್ಟ್ರೀ ಪೌರ್ ವುಮೆನ್ ಅಂಡ್ ಚಿಲ್ಡ್ರನ್ ಡೆವೆಲಪ್‌ಮೆಂಟ್, ಭಾರತ ಸರ್ಕಾರ, ನವದೆಹಲಿ

ದೇವದಾಸಿ ಯೋಜನೆಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕೈಪಿಡಿ, ೨೦೧೭

ಮಹಿಳಾ ಮತ್ತು ಮಕ್ಕಳ ಇಲಾಖೆಯ ಕೈಪಿಡಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು

**ಪತ್ರಿಕೆಗಳು**

ಜಯರಾಂ ಕೆ, (ಸಂ), ೨೦೧೫, ಜೆನಿಗೆ, ತ್ರೈಮಾಸಿಕ ಪತ್ರಿಕೆ, ಗಣೆಪ್ರಕಾಶನ, ಜೂನ್–ಆಗಸ್ಟ್, ಬೆಂಗಳೂರು

ಉಮೇಶ ಎಚ್ ಎಸ್, (ಸಂ), ೨೦೧೪, 'ಅರುಹು ಕುರುಹು' ಕನ್ನಡ ತ್ರೈಮಾಸಿಕ ಪತ್ರಿಕೆ, ಮೌನ ಪ್ರಕಾಶನ, ಏಪ್ರೀಲ್–ಜೂನ್, ಮೈಸೂರು

ಯರಿಸ್ವಾಮಿ ಈ (ಸಂ) ೨೦೧೫ 'ಅಚಲ' ತ್ರೈಮಾಸಿಕ ಪತ್ರಿಕೆ, ಮಹಿಳಾ ಅಧ್ಯಯನ ಮಂಡಲ, ಮೈಸೂರು

ದೀಪಿಕಾ ಕಚ್ಚಲ್ (ಸಂ), ೨೦೧೬, ಯೋಜನಾ ಮಾಸಪತ್ರಿಕೆ, ಯೋಜನಾ-ಕನ್ನಡ ಪ್ರಕಾಶನ ವಿಭಾಗ, ಸೆಪ್ಟೆಂಬರ್, ಬೆಂಗಳೂರು

Priya Bharth Karmakar (ed) Global Research Journal,Bombay 13 EPW, Mumbay

**ದಿನಪತ್ರಿಕೆಗಳು**

ಪ್ರಜಾವಾಣಿ, ಕಂಪ್ಲಿ, ದಿನಾಂಕ-೧೩.೮.೨೦೧೮ ಪು.ಸಂ.೩೨

ವಿಜಯ ಕರ್ನಾಟಕ, ಬೆಂಗಳೂರು, ದಿನಾಂಕ-೨೧.೨.೨೦೧೯ ಪು.ಸಂ.೭

ಪ್ರಜಾವಾಣಿ, ಸಂಡೂರು, ದಿನಾಂಕ-೧೧.೫.೨೦೧೯ ಪು.ಸಂ.೩

ಅಂತರ್ಜಾಲ

# ವಕ್ತೃಗಳ ವಿವರ

# ವಕ್ತೃಗಳ ವಿವರ

| ಕ್ರಸ | ಹೆಸರು | ವಯಸ್ಸು | ವೃತ್ತಿ | ವಿಳಾಸ | ಸಮುದಾಯ |
|---|---|---|---|---|---|
| ೧ | ಅಂಕ್ಲಮ್ಮ | ೪೨ | ಕೂಲಿ | ಹಗರಿಬೊಮ್ಮನಹಳ್ಳಿ | ಬೇಡ |
| ೨ | ಅಂಕಾಳಮ್ಮ | ೩೮ | ದೇವದಾಸಿ | ಕೂಡ್ಲಿಗಿ | ಬೇಡ |
| ೩ | ಅಂಜನಮ್ಮ | ೨೫ | ಕಲಾವಿದೆ | ಕೂಡ್ಲಿಗಿ | ಬೇಡ |
| ೪ | ಅಂಜನಾಕ್ಷಿ | ೨೪ | ಕಲಾವಿದೆ | ಶಿವಪುರ | ಬೇಡ |
| ೫ | ಅಂಜಲಿ | ೩೦ | ಕಲಾವಿದೆ | ಮರಿಯಮ್ಮನಹಳ್ಳಿ | ಬೇಡ |
| ೬ | ಅಂಬಮ್ಮ ಎನ್ | ೪೫ | ಕೂಲಿ | ಮರಿಯಮ್ಮನಹಳ್ಳಿ | ಬೇಡ |
| ೭ | ಅಂಬ್ರಮ್ಮ | ೪೮ | ಗೃಹಿಣಿ | ಹಗರಿಬೊಮ್ಮನಹಳ್ಳಿ | ಬೇಡ |
| ೮ | ಅಂದಾನಮ್ಮ | ೨೬ | ಕೂಲಿ | ಹೊಸಪೇಟೆ | ಬೇಡ |
| ೯ | ಅನ್ನಮ್ಮ | ೨೪ | ಕೂಲಿ | ಕಂಪ್ಲಿ | ಬೇಡ |
| ೧೦ | ಅನ್ನಪೂರ್ಣ | ೨೯ | ಕೂಲಿ | ಮರಿಯಮ್ಮನಹಳ್ಳಿ | ಬೇಡ |
| ೧೧ | ಅನ್ನಪೂರ್ಣಮ್ಮ | ೩೦ | ಕೂಲಿ | ಕಂಪ್ಲಿ | ಬೇಡ |
| ೧೨ | ಅನುಸೂಯಮ್ಮ | ೩೩ | ಗೃಹಿಣಿ | ಹಗರಿಬೊಮ್ಮನಹಳ್ಳಿ | ಬೇಡ |
| ೧೩ | ಅಯ್ಯಮ್ಮ | ೩೨ | ದೇವದಾಸಿ | ಹೊಸಪೇಟೆ | ಬೇಡ |
| ೧೪ | ಈರಮ್ಮ | ೨೫ | ದೇವದಾಸಿ | ಕಮಲಾಪುರ | ಬೇಡ |
| ೧೫ | ಈಶಮ್ಮ | ೨೦ | ಗೃಹಿಣಿ | ಕಂಪ್ಲಿ | ಬೇಡ |
| ೧೬ | ಈಶ್ವರಮ್ಮ | ೪೪ | ಕೂಲಿ | ಕಮಲಾಪುರ | ಬೇಡ |
| ೧೭ | ಈಶ್ವರಿ | ೧೮ | ಗೃಹಿಣಿ | ಹೊಸಪೇಟೆ | ಬೇಡ |
| ೧೮ | ಉಚ್ಚಂಗಮ್ಮ | ೩೨ | ಗೃಹಿಣಿ | ಹೊಸಪೇಟೆ | ಬೇಡ |
| ೧೯ | ಉಪಳಮ್ಮ | ೩೭ | ಕೂಲಿ | ಹೊಸಪೇಟೆ | ಬೇಡ |
| ೨೦ | ಉಲವತ್ತೆಮ್ಮ | ೨೨ | ಕೂಲಿ | ಹೊಸಪೇಟೆ | ಬೇಡ |

| | | | | | |
|---|---|---|---|---|---|
| ೨೧ | ಉಲ್ತೆಮ್ಮ | ೨೪ | ಕೂಲಿ | ಶ್ರೀಧರಗಡ್ಡೆ | ಬೇಡ |
| ೨೨ | ಓಬಮ್ಮ | ೨೨ | ಕೂಲಿ | ಕಮಲಾಪುರ | ಬೇಡ |
| ೨೩ | ಓಬಕ್ಕ | ೩೪ | ಕೂಲಿ | ಕಮಲಾಪುರ | ಬೇಡ |
| ೨೪ | ಕಾಳವ್ವ | ೨೪ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೨೫ | ಕೊಟ್ರಮ್ಮ | ೩೫ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೨೬ | ಗಂಗಮ್ಮ | ೩೦ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೨೭ | ಗುರುಬಸಮ್ಮ | ೩೧ | ಕೂಲಿ | ಕಮಲಾಪುರ | ಬೇಡ |
| ೨೮ | ಗುಣವಂತಿಬಾಯಿ | ೨೩ | ಕೂಲಿ | ಕಮಲಾಪುರ | ಬೇಡ |
| ೨೯ | ಚಂದ್ರೇಶ್ವರಿ | ೩೨ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೩೦ | ಚಾಪಮ್ಮ | ೬೪ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೩೧ | ಚಾರುಲತಾ | ೨೩ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೩೨ | ಜಂಬಮ್ಮ | ೪೩ | ಕೂಲಿ | ಕಮಲಾಪುರ | ಬೇಡ |
| ೩೩ | ಜಂಬಕ್ಕ | ೩೪ | ಕೂಲಿ | ಕಮಲಾಪುರ | ಬೇಡ |
| ೩೪ | ಟಾಕಮ್ಮ | ೫೬ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೩೫ | ತಾನಿ | ೨೦ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೩೬ | ತಾನ್ವಿ | ೧೯ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೩೭ | ತೇಜೇಶ್ವರಿ | ೨೩ | ಕೂಲಿ | ಕಮಲಾಪುರ | ಬೇಡ |
| ೩೮ | ದಂಡೆಮ್ಮ | ೪೫ | ಕೂಲಿ | ಕಮಲಾಪುರ | ಬೇಡ |
| ೩೯ | ನಾಗವೇಣಿ | ೨೪ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೪೦ | ನಯನ | ೨೦ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೪೧ | ನಯನತಾರ | ೧೯ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೪೨ | ನಿಂಬಮ್ಮ | ೩೧ | ಕೂಲಿ | ಕಮಲಾಪುರ | ಬೇಡ |
| ೪೩ | ನಿರಂತಾ | ೨೧ | ಕೂಲಿ | ಕಮಲಾಪುರ | ಬೇಡ |
| ೪೪ | ಪಂಕಜ | ೨೯ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೪೫ | ಪದ್ದಮ್ಮ | ೨೩ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೪೬ | ಪದ್ಮಮ್ಮ | ೬೧ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೪೭ | ಪರಿಮಳಮ್ಮ | ೨೩ | ಕೂಲಿ | ಕಮಲಾಪುರ | ಬೇಡ |

| | | | | | |
|---|---|---|---|---|---|
| ೪೮ | ಪ್ರಣೀತಾ | ೪೫ | ಕೂಲಿ | ಕಮಲಾಪುರ | ಬೇಡ |
| ೪೯ | ಬಸವೇಶ್ವರಿ | ೨೪ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೫೦ | ಬಸವರಾಜೇಶ್ವರಿ | ೨೦ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೫೧ | ಬಾಲಮ್ಮ | ೧೯ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೫೨ | ಭಾರ್ಗವಿ | ೩೧ | ಕೂಲಿ | ಕಮಲಾಪುರ | ಬೇಡ |
| ೫೩ | ಭಾರತಿ | ೨೧ | ಕೂಲಿ | ಕಮಲಾಪುರ | ಬೇಡ |
| ೫೪ | ಮಹಾಂತಮ್ಮ | ೨೯ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೫೫ | ಮಹಾಂತೇಶ್ವರಿ | ೨೩ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೫೬ | ಮರಿಯಮ್ಮ | ೬೧ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೫೭ | ಮೇಘಾ | ೨೩ | ಕೂಲಿ | ಕಮಲಾಪುರ | ಬೇಡ |
| ೫೮ | ಮೇಘನಾ | ೪೫ | ಕೂಲಿ | ಕಮಲಾಪುರ | ಬೇಡ |
| ೫೯ | ರುಕ್ಮಾಬಾಯಿ | ೨೪ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೬೦ | ರುಕ್ಮಿಣಿ | ೨೦ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೬೧ | ರುದ್ರಾಕ್ಷಮ್ಮ | ೧೯ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೬೨ | ಲಲಿತ | ೩೧ | ಕೂಲಿ | ಕಮಲಾಪುರ | ಬೇಡ |
| ೬೩ | ಲಲಿತಮ್ಮ | ೨೧ | ಕೂಲಿ | ಕಮಲಾಪುರ | ಬೇಡ |
| ೬೪ | ವನಿತಾ | ೨೯ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೬೫ | ವರದಮ್ಮ | ೨೩ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೬೬ | ವರಲಕ್ಷ್ಮಿ | ೬೧ | ವ್ಯಾಪಾರಿ | ಮರಿಯಮ್ಮನಹಳ್ಳಿ | ಬೇಡ |
| ೬೭ | ವಿಜಯಮ್ಮ | ೨೩ | ಕೂಲಿ | ಕಮಲಾಪುರ | ಬೇಡ |
| ೬೮ | ವಿಜಯಮಹಾಚಿತೇಶ್ವರಿ | ೪೫ | ಕೂಲಿ | ಕಮಲಾಪುರ | ಬೇಡ |
| ೬೯ | ಶಾರದಕ್ಕ | ೨೪ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೭೦ | ಶಾರದಮ್ಮ | ೨೦ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೭೧ | ಶೀಲಾ | ೧೯ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೭೨ | ಶೇಷಮ್ಮ | ೩೧ | ಕೂಲಿ | ಕಮಲಾಪುರ | ಬೇಡ |
| ೭೩ | ಶೋಭಮ್ಮ | ೨೧ | ಕೂಲಿ | ಕಮಲಾಪುರ | ಬೇಡ |
| ೭೪ | ಸರಸ್ವತಿ | ೨೯ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |

| | | | | | |
|---|---|---|---|---|---|
| ೭೫ | ಸರಸ್ವತಿಬಾಯಿ | ೨೩ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೭೬ | ಸಾರಮ್ಮ | ೬೧ | ಗೃಹಿಣಿ | ಮರಿಯಮ್ಮನಹಳ್ಳಿ | ಬೇಡ |
| ೭೭ | ಸೋಮಕ್ಕ | ೨೩ | ಕೂಲಿ | ಕಮಲಾಪುರ | ಬೇಡ |
| ೭೮ | ಹಾಗಲೂರಮ್ಮ | ೩೪ | ಗೃಹಿಣಿ | ಕಂಪ್ಲಿ | ಬೇಡ |
| ೭೯ | ಹೊಸೂರಮ್ಮ | ೨೪ | ಗೃಹಿಣಿ | ಬುಕ್ಕಸಾಗರ | ಬೇಡ |
| ೮೦ | ಜ್ಞಾನೇಶ್ವರಿ | ೪೦ | ಗೃಹಿಣಿ | ಕಂಪ್ಲಿ | ಬೇಡ |
| ೮೧ | ಪದ್ಮಮ್ಮ ಎನ್ | ೫೫ | ಕೂಲಿ | ಕೊಂಡನಾಯಕನಹಳ್ಳಿ | ಬೇಡ |
| ೮೨ | ರೇಣುಕಮ್ಮ | ೪೭ | ವ್ಯಾಪಾರ | ಕೊಂಡನಾಯಕನಹಳ್ಳಿ | ಬೇಡ |
| ೮೩ | ನೇತ್ರಾವತಿ ವೈ | ೩೦ | ಅಂಗನವಾಡಿ ಶಿಕ್ಷಿಕಿ | ಹೊಸೂರು | ಬೇಡ |
| ೮೪ | ರಾಜಶ್ವೇರಿ | ೪೫ | ಆಶಾಕಾರ್ಯಕರ್ತೆ | ಹೊಸೂರು | ಬೇಡ |
| ೮೫ | ಗೀತಾ ಎನ್ | ೩೭ | ಅಡುಗೆ ಸಹಾಯಕಿ | ಸಂಕ್ಲಾಪುರ | ಬೇಡ |
| ೮೬ | ಮೇಘನ ಎನ್ | ೨೯ | ಅಡುಗೆ ಸಹಾಯಕಿ | ಸಂಕ್ಲಾಪುರ | ಬೇಡ |
| ೮೭ | ಅಂಬಿಕಾ ವೈ ಎನ್ | ೨೬ | ಗೃಹಿಣಿ | ಕೊಂಡನಾಯಕನಹಳ್ಳಿ | ಬೇಡ |
| ೮೮ | ಶಾರದಮ್ಮ | ೪೬ | ಕೂಲಿ | ಮಲಪನಗುಡಿ | ಬೇಡ |
| ೮೯ | ಅನಿತಾ | ೪೨ | ಜಿಲ್ಲಾ ಪಂ ಮಾಜಿ ಅಧ್ಯಕ್ಷರು | ಮಲಪನಗುಡಿ | ಬೇಡ |
| ೯೦ | ನಾಗಮ್ಮ | ೫೦ | ತರಕಾರಿ ವ್ಯಾಪಾರ | ಹೊಸಪೇಟೆ | ಬೇಡ |
| ೯೧ | ಕವಿತಾ | ೨೭ | ತರಕಾರಿ ವ್ಯಾಪಾರ | ಹೊಸಪೇಟೆ | ಬೇಡ |
| ೯೨ | ಲಲಿತಮ್ಮ | ೪೯ | ಗೃಹಿಣಿ | ಹೊಸಪೇಟೆ | ಬೇಡ |
| ೯೩ | ಸ್ವಾತಿ ಟಿ | ೨೭ | ಗೃಹಿಣಿ | ಹೊಸಪೇಟೆ | ಬೇಡ |
| ೯೪ | ಸೋಮಕ್ಕ | ೫೫ | ವ್ಯಾಪಾರ | ಕೊಂಡನಾಯಕನಹಳ್ಳಿ | ಬೇಡ |
| ೯೫ | ಲಕ್ಷ್ಮಮ್ಮ | ೬೫ | ವ್ಯಪಾರ | ಕೊಂಡನಾಯಕನಹಳ್ಳಿ | ಬೇಡ |
| ೯೬ | ಜ್ಯೋತಿ ಯು | ೩೩ | ಶಿಕ್ಷಕಿ | ಮರಿಯಮ್ಮನಹಳ್ಳಿ | ಬೇಡ |
| ೯೭ | ರೇಖಾ ಎನ್ | ೨೫ | ವ್ಯಾಪಾರ | ಮರಿಯಮ್ಮನಹಳ್ಳಿ | ಬೇಡ |
| ೯೮ | ಸುಭದ್ರಮ್ಮ | ೫೮ | ಗೃಹಿಣಿ | ಹೊಸಪೇಟೆ | ಬೇಡ |
| ೯೯ | ತಿಮ್ಮವ್ವ | ೪೬ | ದೇವದಾಸಿ | ಅಯ್ಯನಹಳ್ಳಿ | ಬೇಡ |
| ೧೦೦ | ತಾಯಮ್ಮ | ೩೯ | ದೇವದಾಸಿ | ಹೊಸಪೇಟೆ | ಬೇಡ |

| | | | | | |
|---|---|---|---|---|---|
| ೧೦೧ | ಅಂಬಿಕಾ | ೧೯ | ಗೃಹಿಣಿ | ಗುಡಾರನಗರ | ಡುಂಗ್ರಿಗರಾಸಿಯಾ |
| ೧೦೨ | ಅಂಬಾಬಾಯಿ | ೩೨ | ಕೂಲಿ | ಹೊಸಪೇಟೆ | ಡುಂಗ್ರಿಗರಾಸಿಯಾ |
| ೧೦೩ | ಆನಂದಿಬಾಯಿ | ೩೪ | ಗೃಹಿಣಿ | ಹೊಸಪೇಟೆ | ಡುಂಗ್ರಿಗರಾಸಿಯಾ |
| ೧೦೪ | ಅರುಂಧತಿ | ೩೨ | ಗೃಹಿಣಿ | ಮರಿಯಮ್ಮನಹಳ್ಳಿ | ಡುಂಗ್ರಿಗರಾಸಿಯಾ |
| ೧೦೫ | ಅರುಂಧಾಬಾಯಿ | ೨೯ | ಗೃಹಿಣಿ | ಗುಡಾರನಗರ | ಡುಂಗ್ರಿಗರಾಸಿಯಾ |
| ೧೦೬ | ಅನುಸೂಯ | ೨೬ | ಗೃಹಿಣಿ | ಹೊಸಪೇಟೆ | ಡುಂಗ್ರಿಗರಾಸಿಯಾ |
| ೧೦೭ | ಕಲಾವತಿ | ೩೦ | ಗೃಹಿಣಿ | ಈರಣ್ಣ ಕ್ಯಾಂಪ್, ೧ ನೇವಾರ್ಡ್, ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೦೮ | ಕವಿತಮ್ಮ | ೨೨ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೦೯ | ಕಸ್ತೂರಿ | ೧೯ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೧೦ | ಕಾವ್ಯ | ೧೯ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೧೧ | ಕಾವೇರಮ್ಮ | ೨೬ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೧೨ | ಕಾವೇರಿ | ೩೬ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೧೩ | ಕಾಳಮ್ಮ | ೨೯ | ಗೃಹಿಣಿ | ಮರಿಯಮ್ಮನಹಳ್ಳಿ | ಡುಂಗ್ರಿಗರಾಸಿಯಾ |
| ೧೧೪ | ಗೀತಾಬಾಯಿ | ೩೫ | ಗೃಹಿಣಿ | ವಿನಾಯಕನಗರ, ಮಲಪನಗುಡಿ | ಡುಂಗ್ರಿಗರಾಸಿಯಾ |
| ೧೧೫ | ಗಾಯಿತ್ರಿಬಾಯಿ | ೪೫ | ಗೃಹಿಣಿ | ಗುಡಾರನಗರ | ಡುಂಗ್ರಿಗರಾಸಿಯಾ |
| ೧೧೬ | ಚಂಪಕಾವತಿ | ೩೨ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೧೭ | ಚಂದನಾ | ೧೯ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೧೮ | ಚಾಕಮ್ಮ | ೩೪ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೧೯ | ಚಂದ್ರಮ್ಮ | ೨೮ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೨೦ | ಚಂದ್ರಬಾಯಿ | ೩೦ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೨೧ | ಚಂದ್ರವ್ವ | ೩೫ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೨೨ | ಚಂದ್ರಿಕಾ | ೩೭ | ಗೃಹಿಣಿ | ಮರಿಯಮ್ಮನಹಳ್ಳಿ | ಡುಂಗ್ರಿಗರಾಸಿಯಾ |
| ೧೨೩ | ಚಿಕ್ಕತಾಯಮ್ಮ | ೩೩ | ಗೃಹಿಣಿ | ಮರಿಯಮ್ಮನಹಳ್ಳಿ | ಡುಂಗ್ರಿಗರಾಸಿಯಾ |
| ೧೨೪ | ಚಿಕ್ಕರುದ್ರಮ್ಮ | ೩೮ | ಗೃಹಿಣಿ | ಗುಡಾರನಗರ | ಡುಂಗ್ರಿಗರಾಸಿಯಾ |
| ೧೨೫ | ಜಯಂತಿಬಾಯಿ | ೨೨ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |

| | | | | | |
|---|---|---|---|---|---|
| ೧೨೬ | ಜಯ | ೬೮ | ಗೃಹಿಣಿ | ವಿನಾಯಕನಗರ, ಮಲಪನಗುಡಿ | ಡುಂಗ್ರಿಗರಾಸಿಯಾ |
| ೧೨೭ | ಜಯಲಕ್ಷ್ಮಿ | ೩೦ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೨೮ | ಜಲಜಾಕ್ಷಮ್ಮ | ೩೧ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೨೯ | ಜಲಜಾಕ್ಷಿ | ೨೯ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೩೦ | ಜ್ಯೋತಿ | ೨೨ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೩೧ | ಜ್ಯೋತಿಲಕ್ಷ್ಮಿ | ೧೯ | ಗೃಹಿಣಿ | ೬ನೇವಾರ್ಡ್, ಗುಂಡ ರೋಡ್, ಮರಿಯಮ್ಮನಹಳ್ಳಿ | ಡುಂಗ್ರಿಗರಾಸಿಯಾ |
| ೧೩೨ | ತಾರಬಾಯಿ | ೫೦ | ಗೃಹಿಣಿ | ೬ನೇವಾರ್ಡ್, ಗುಂಡ ರೋಡ್, ಮರಿಯಮ್ಮನಹಳ್ಳಿ | ಡುಂಗ್ರಿಗರಾಸಿಯಾ |
| ೧೩೩ | ತಾರಕೇಶ್ವರಿ | ೨೦ | ಗೃಹಿಣಿ | ಗುಡಾರನಗರ | ಡುಂಗ್ರಿಗರಾಸಿಯಾ |
| ೧೩೪ | ದೇವಿಬಾಯಿ | ೨೮ | ಗೃಹಿಣಿ | ಈರಣ್ಣ ಕ್ಯಾಂಪ್, ೧ ನೇವಾರ್ಡ್, ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೩೫ | ದೇವೀರಮ್ಮ | ೨೪ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೩೬ | ದೊಡ್ಡಬಸಮ್ಮ | ೩೩ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೩೭ | ದೊಡ್ಡಬಸವ್ವ | ೪೬ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೩೮ | ನಾಗಮ್ಮ | ೩೮ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೩೯ | ನಾಗಾಬಾಯಿ | ೩೭ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೪೦ | ನಾಗಲಕ್ಷ್ಮಿ | ೨೮ | ಗೃಹಿಣಿ | ಮರಿಯಮ್ಮನಹಳ್ಳಿ | ಡುಂಗ್ರಿಗರಾಸಿಯಾ |
| ೧೪೧ | ನಾರಾಯಣಮ್ಮ | ೨೮ | ಗೃಹಿಣಿ | ಮರಿಯಮ್ಮನಹಳ್ಳಿ | ಡುಂಗ್ರಿಗರಾಸಿಯಾ |
| ೧೪೨ | ನಿಂಗಮ್ಮ | ೨೯ | ಗೃಹಿಣಿ | ಗುಡಾರನಗರ | ಡುಂಗ್ರಿಗರಾಸಿಯಾ |
| ೧೪೩ | ನೀಲಮ್ಮ | ೨೭ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೪೪ | ನೀರಜಾ | ೨೯ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೪೫ | ನೂರಮ್ಮ | ೩೭ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೪೬ | ನೇಮಕಲ್ಲಮ್ಮ | ೩೮ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೪೭ | ಪಂಕಜ | ೩೩ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |

| | | | | | |
|---|---|---|---|---|---|
| ೧೪೮ | ಪಂಕಜಮ್ಮ | ೩೧ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೪೯ | ಪಂಕಜಾಕ್ಷಿ | ೨೭ | ಗೃಹಿಣಿ | ಮರಿಯಮ್ಮನಹಳ್ಳಿ | ಡುಂಗ್ರಿಗರಾಸಿಯಾ |
| ೧೫೦ | ಪದ್ಮಾಬಾಯಿ | ೫೨ | ಗೃಹಿಣಿ | ಪಿ.ಐ.ಟಿ. ಕ್ಯಾಂಪ್,<br>೧ ನೇವಾರ್ಡ್,<br>ಕಮಲಾಪುರ | ಡುಂಗ್ರಿಗರಾಸಿಯಾ |
| ೧೫೧ | ಪಾರ್ವತಮ್ಮ | ೨೦ | ಗೃಹಿಣಿ | ಗುಡಾರನಗರ | ಡುಂಗ್ರಿಗರಾಸಿಯಾ |
| ೧೫೨ | ಪುಷ್ಪಾವತಿ | ೨೦ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೫೩ | ಪೂರ್ಣಮ್ಮ | ೨೪ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೫೪ | ಪೂರ್ಣಿಮಾ | ೩೩ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೫೫ | ಪೂವಮ್ಮ | ೪೬ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೫೬ | ಬನಶಂಕರಿ | ೩೮ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೫೭ | ಬಸಕ್ಕ | ೩೭ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೫೮ | ಬಸಮ್ಮ | ೨೮ | ಗೃಹಿಣಿ | ಮರಿಯಮ್ಮನಹಳ್ಳಿ | ಡುಂಗ್ರಿಗರಾಸಿಯಾ |
| ೧೫೯ | ಭರಮವ್ವ | ೨೮ | ಗೃಹಿಣಿ | ಮರಿಯಮ್ಮನಹಳ್ಳಿ | ಡುಂಗ್ರಿಗರಾಸಿಯಾ |
| ೧೬೦ | ಭಾರ್ಗವಿ | ೨೯ | ಗೃಹಿಣಿ | ಗುಡಾರನಗರ | ಡುಂಗ್ರಿಗರಾಸಿಯಾ |
| ೧೬೧ | ಭೋಗಮ್ಮ | ೨೭ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೬೨ | ಭೋಗೇಶ್ವರಿ | ೨೯ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೬೩ | ಮಾಣಿಕಾಬಾಯಿ | ೬೨ | ಗೃಹಿಣಿ | ಪಿ.ಐ.ಟಿ. ಕ್ಯಾಂಪ್,<br>೧ ನೇವಾರ್ಡ್,<br>ಕಮಲಾಪುರ | ಡುಂಗ್ರಿಗರಾಸಿಯಾ |
| ೧೬೪ | ಮಂಜುಳಾ | ೩೮ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೬೫ | ಮಲ್ಲಿಕಾ | ೩೩ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೬೬ | ಮಾಲಾ | ೩೧ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೬೭ | ಮಹಾಲಕ್ಷ್ಮಿ | ೨೭ | ಗೃಹಿಣಿ | ಮರಿಯಮ್ಮನಹಳ್ಳಿ | ಡುಂಗ್ರಿಗರಾಸಿಯಾ |
| ೧೬೮ | ಮಾರೆಮ್ಮ | ೩೦ | ಗೃಹಿಣಿ | ಮರಿಯಮ್ಮನಹಳ್ಳಿ | ಡುಂಗ್ರಿಗರಾಸಿಯಾ |
| ೧೬೯ | ಮಾಲತಿ | ೨೦ | ಗೃಹಿಣಿ | ಗುಡಾರನಗರ | ಡುಂಗ್ರಿಗರಾಸಿಯಾ |
| ೧೭೦ | ರಮಣಮ್ಮ | ೨೦ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೭೧ | ರಕ್ಷಿತಾ | ೨೪ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |

| | | | | | |
|---|---|---|---|---|---|
| ೧೭೨ | ರಾಜಮ್ಮ | ೩೩ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೭೩ | ರಾಧಾ | ೪೬ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೭೪ | ರಾಮಕ್ಕ | ೩೮ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೭೫ | ರಾಮುಲಮ್ಮ | ೩೭ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೭೬ | ರೀತೂಬಾಯಿ | ೨೮ | ಗೃಹಿಣಿ | ಮರಿಯಮ್ಮನಹಳ್ಳಿ | ಡುಂಗ್ರಿಗರಾಸಿಯಾ |
| ೧೭೭ | ರೇಣುಕಬಾಯಿ | ೨೮ | ಗೃಹಿಣಿ | ಮರಿಯಮ್ಮನಹಳ್ಳಿ | ಡುಂಗ್ರಿಗರಾಸಿಯಾ |
| ೧೭೮ | ರೇಣುಕಮ್ಮ | ೨೯ | ಗೃಹಿಣಿ | ಗುಡಾರನಗರ | ಡುಂಗ್ರಿಗರಾಸಿಯಾ |
| ೧೭೯ | ಲೋಕಮ್ಮ | ೨೭ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೮೦ | ಲೋಕೇಶ್ವರಿ | ೨೯ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೮೧ | ಲೋಪಮ್ಮ | ೩೭ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೮೨ | ಲೋಲಾಕ್ಷಿ | ೩೮ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೮೩ | ವನಜಮ್ಮ | ೩೩ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೮೪ | ವನಜಾಕ್ಷಮ್ಮ | ೩೧ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೮೫ | ವನಜಾಕ್ಷಿ | ೨೭ | ಗೃಹಿಣಿ | ಮರಿಯಮ್ಮನಹಳ್ಳಿ | ಡುಂಗ್ರಿಗರಾಸಿಯಾ |
| ೧೮೬ | ವನಜಮ್ಮ | ೩೩ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೮೭ | ವರಮಹಾಲಕ್ಷ್ಮಿ | ೩೦ | ಗೃಹಿಣಿ | ಮರಿಯಮ್ಮನಹಳ್ಳಿ | ಡುಂಗ್ರಿಗರಾಸಿಯಾ |
| ೧೮೮ | ವಾರಿಣಿ | ೨೦ | ಗೃಹಿಣಿ | ಗುಡಾರನಗರ | ಡುಂಗ್ರಿಗರಾಸಿಯಾ |
| ೧೮೯ | ಶಕುಂತಲಾ | ೨೦ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೯೦ | ಶರಣಮ್ಮ | ೨೪ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೯೧ | ಶರಣ್ಮಾಯಿ | ೩೩ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೯೨ | ಶಾಂತಮ್ಮ | ೪೬ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೯೩ | ಶಾಂತಾಬಾಯಿ | ೩೮ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೯೪ | ಶಾಕುಂತಲಾ | ೩೭ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೯೫ | ಶಾರದ | ೨೮ | ಗೃಹಿಣಿ | ಮರಿಯಮ್ಮನಹಳ್ಳಿ | ಡುಂಗ್ರಿಗರಾಸಿಯಾ |
| ೧೯೬ | ಶಾಂತಾಬಾಯಿ | ೩೮ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೧೯೭ | ಶೀಲಾಬಾಯಿ | ೩೫ | ಗೃಹಿಣಿ | ವಿನಾಯಕನಗರ, ಮಲಪನಗುಡಿ | ಡುಂಗ್ರಿಗರಾಸಿಯಾ |

| | | | | | |
|---|---|---|---|---|---|
| ೧೯೮ | ಶಿವಮ್ಮ | ೨೯ | ಗೃಹಿಣಿ | ಗುಡಾರನಗರ | ಡುಂಗ್ರಿಗರಾಸಿಯಾ |
| ೧೯೯ | ಸರಿತಾ | ೨೭ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೨೦೦ | ಸರಿತಾಬಾಯಿ | ೨೯ | ಗೃಹಿಣಿ | ಬುಕ್ಕಸಾಗರ | ಡುಂಗ್ರಿಗರಾಸಿಯಾ |
| ೨೦೧ | ಸೀತಾಬಾಯಿ | ೩೫ | ಗೃಹಿಣಿ | ೬ನೇವಾರ್ಡ್, ಗುಂಡ ರೋಡ್, ಮರಿಯಮ್ಮನಹಳ್ಳಿ | ಡುಂಗ್ರಿಗರಾಸಿಯಾ |
| ೨೦೧ | ಆನಂದಮ್ಮ | ೫೫ | ಗೃಹಿಣಿ | ಹೊಸಪೇಟೆ | ಮೇದ |
| ೨೦೨ | ಅಂಕಿತ | ೨೦ | ಗೃಹಿಣಿ | ಹಗರಿಬೊಮ್ಮನಹಳ್ಳಿ | ಮೇದ |
| ೨೦೩ | ಅಕ್ಕಮ್ಮ | ೩೨ | ಬುಟ್ಟಿ ಮಾರುವುದು | ಹಗರಿಬೊಮ್ಮನಹಳ್ಳಿ | ಮೇದ |
| ೨೦೪ | ಅಂಜನ | ೨೧ | ಗೃಹಿಣಿ | ಹೊಸಪೇಟೆ | ಮೇದ |
| ೨೦೫ | ಅಮರಮ್ಮ | ೨೨ | ಗೃಹಿಣಿ | ಮರಿಯಮ್ಮನಹಳ್ಳಿ | ಮೇದ |
| ೨೦೬ | ಅಮುಕೇಶ್ವರಿ | ೨೧ | ಗೃಹಿಣಿ | ಮರಿಯಮ್ಮನಹಳ್ಳಿ | ಮೇದ |
| ೨೦೭ | ಅರುಣಾಕ್ಷಿ | ೩೦ | ಗೃಹಿಣಿ | ಮರಿಯಮ್ಮನಹಳ್ಳಿ | ಮೇದ |
| ೨೦೮ | ಏಕಾಂಬರೇಶ್ವರಿ | ೨೦ | ಗೃಹಿಣಿ | ಕಂಪ್ಲಿ | ಮೇದ |
| ೨೦೯ | ಏಕಾಂಬ್ರಮ್ಮ | ೧೯ | ಗೃಹಿಣಿ | ಮರಿಯಮ್ಮನಹಳ್ಳಿ | ಮೇದ |
| ೨೧೦ | ಏಕಾಂತಮ್ಮ | ೩೨ | ಗೃಹಿಣಿ | ಕಂಪ್ಲಿ | ಮೇದ |
| ೨೧೧ | ಓಂಕಾರಮ್ಮ | ೩೩ | ಗೃಹಿಣಿ | ಹಗರಿಬೊಮ್ಮನಹಳ್ಳಿ | ಮೇದ |
| ೨೧೨ | ಓಂಕಾರವ್ವ | ೪೩ | ಗೃಹಿಣಿ | ಕೂಡ್ಲಿಗಿ | ಮೇದ |
| ೨೧೩ | ಗಾಳೆಮ್ಮ | ೨೧ | ಗೃಹಿಣಿ | ಮರಿಯಮ್ಮನಹಳ್ಳಿ | ಮೇದ |
| ೨೧೪ | ಗಿರಿಜಾ | ೫೪ | ಗೃಹಿಣಿ | ಕಂಪ್ಲಿ | ಮೇದ |
| ೨೧೫ | ಗಿರಿಜಮ್ಮ | ೫೧ | ಗೃಹಿಣಿ | ಕಂಪ್ಲಿ | ಮೇದ |
| ೨೧೬ | ಗಿರಿಯಮ್ಮ | ೪೮ | ಗೃಹಿಣಿ | ಹಗರಿಬೊಮ್ಮನಹಳ್ಳಿ | ಮೇದ |
| ೨೧೭ | ಗುರಮ್ಮ | ೫೬ | ಗೃಹಿಣಿ | ಕೂಡ್ಲಿಗಿ | ಮೇದ |
| ೨೧೮ | ಚಿಕ್ಕಮ್ಮ | ೩೨ | ಗೃಹಿಣಿ | ಮರಿಯಮ್ಮನಹಳ್ಳಿ | ಮೇದ |
| ೨೧೯ | ಚಿಕ್ಕೀರಮ್ಮ | ೨೨ | ಗೃಹಿಣಿ | ಕಂಪ್ಲಿ | ಮೇದ |
| ೨೨೦ | ಚಿತ್ರಕಳಾ | ೧೯ | ಗೃಹಿಣಿ | ಕಂಪ್ಲಿ | ಮೇದ |

| | | | | | |
|---|---|---|---|---|---|
| ೨೨೧ | ಚಿಲುಕಮ್ಮ | ೪೫ | ಗೃಹಿಣಿ | ಹಗರಿಬೊಮ್ಮನಹಳ್ಳಿ | ಮೇದ |
| ೨೨೨ | ಚುಡಾಮಣಿ | ೪೪ | ಗೃಹಿಣಿ | ಕೂಡ್ಲಿಗಿ | ಮೇದ |
| ೨೨೩ | ತಾಯಮ್ಮ | ೩೬ | ಗೃಹಿಣಿ | ಮರಿಯಮ್ಮನಹಳ್ಳಿ | ಮೇದ |
| ೨೨೪ | ತಿಲಕಮ್ಮ | ೪೫ | ಗೃಹಿಣಿ | ಕಂಪ್ಲಿ | ಮೇದ |
| ೨೨೫ | ತುಳಸಿ | ೩೦ | ಗೃಹಿಣಿ | ಕಂಪ್ಲಿ | ಮೇದ |
| ೨೨೬ | ತುಳುಜಾ ಭವಾನಿ | ೨೨ | ಗೃಹಿಣಿ | ಹಗರಿಬೊಮ್ಮನಹಳ್ಳಿ | ಮೇದ |
| ೨೨೭ | ತೇಜಮ್ಮ | ೩೯ | ಗೃಹಿಣಿ | ಕೂಡ್ಲಿಗಿ | ಮೇದ |
| ೨೨೮ | ನರಸಮ್ಮ | ೨೫ | ಗೃಹಿಣಿ | ಮರಿಯಮ್ಮನಹಳ್ಳಿ | ಮೇದ |
| ೨೨೯ | ನಿಜಗುಣಮ್ಮ | ೨೬ | ಗೃಹಿಣಿ | ಕಂಪ್ಲಿ | ಮೇದ |
| ೨೩೦ | ನಿಜಗುಣಮ್ಮ | ೨೮ | ಗೃಹಿಣಿ | ಕಂಪ್ಲಿ | ಮೇದ |
| ೨೩೧ | ನಿಜಗುಣಿ | ೨೬ | ಗೃಹಿಣಿ | ಹಗರಿಬೊಮ್ಮನಹಳ್ಳಿ | ಮೇದ |
| ೨೩೨ | ನಿಂಬಕ್ಕ | ೨೭ | ಗೃಹಿಣಿ | ಕೂಡ್ಲಿಗಿ | ಮೇದ |
| ೨೩೩ | ಪದ್ಮಾವತಿ | ೩೨ | ಗೃಹಿಣಿ | ಮರಿಯಮ್ಮನಹಳ್ಳಿ | ಮೇದ |
| ೨೩೪ | ಪಾರಮ್ಮ | ೪೫ | ಗೃಹಿಣಿ | ಕಂಪ್ಲಿ | ಮೇದ |
| ೨೩೫ | ಪಾರಕ್ಕ | ೩೦ | ಗೃಹಿಣಿ | ಕಂಪ್ಲಿ | ಮೇದ |
| ೨೩೬ | ಪಾರಿಜಾತ | ೨೨ | ಗೃಹಿಣಿ | ಹಗರಿಬೊಮ್ಮನಹಳ್ಳಿ | ಮೇದ |
| ೨೩೭ | ಪರಿಮಳ | ೩೯ | ಗೃಹಿಣಿ | ಕೂಡ್ಲಿಗಿ | ಮೇದ |
| ೨೩೮ | ಭರಮಕ್ಕ | ೨೫ | ಗೃಹಿಣಿ | ಮರಿಯಮ್ಮನಹಳ್ಳಿ | ಮೇದ |
| ೨೩೯ | ಭಾಮಿನಿ | ೨೬ | ಗೃಹಿಣಿ | ಕಂಪ್ಲಿ | ಮೇದ |
| ೨೪೦ | ಭಾನು | ೨೮ | ಗೃಹಿಣಿ | ಕಂಪ್ಲಿ | ಮೇದ |
| ೨೪೧ | ಭಾನುಮತಿ | ೨೬ | ಗೃಹಿಣಿ | ಹಗರಿಬೊಮ್ಮನಹಳ್ಳಿ | ಮೇದ |
| ೨೪೨ | ಭವಾನಿ | ೨೭ | ಗೃಹಿಣಿ | ಕೂಡ್ಲಿಗಿ | ಮೇದ |
| ೨೪೩ | ಮಾರುತಮ್ಮ | ೩೨ | ಗೃಹಿಣಿ | ಮರಿಯಮ್ಮನಹಳ್ಳಿ | ಮೇದ |
| ೨೪೪ | ಮಾಳಮ್ಮ | ೪೫ | ಗೃಹಿಣಿ | ಕಂಪ್ಲಿ | ಮೇದ |
| ೨೪೫ | ಮೀನಮ್ಮ | ೩೦ | ಗೃಹಿಣಿ | ಕಂಪ್ಲಿ | ಮೇದ |
| ೨೪೬ | ಮೀನಾಕ್ಷಮ್ಮ | ೨೨ | ಗೃಹಿಣಿ | ಹಗರಿಬೊಮ್ಮನಹಳ್ಳಿ | ಮೇದ |
| ೨೪೭ | ಮುರಿಗೆಮ್ಮ | ೩೯ | ಗೃಹಿಣಿ | ಕೂಡ್ಲಿಗಿ | ಮೇದ |

| | | | | | |
|---|---|---|---|---|---|
| ೨೪೮ | ರೇಣುಕ | ೨೫ | ಗೃಹಿಣಿ | ಮರಿಯಮ್ಮನಹಳ್ಳಿ | ಮೇದ |
| ೨೪೯ | ರೋಹಿಣಿ | ೨೬ | ಗೃಹಿಣಿ | ಕಂಪ್ಲಿ | ಮೇದ |
| ೨೫೦ | ಲಕ್ಷ್ಮಮ್ಮ | ೨೮ | ಗೃಹಿಣಿ | ಕಂಪ್ಲಿ | ಮೇದ |
| ೨೫೧ | ಲಕ್ಷ್ಮಿ | ೨೬ | ಗೃಹಿಣಿ | ಹಗರಿಬೊಮ್ಮನಹಳ್ಳಿ | ಮೇದ |
| ೨೫೨ | ಲತಾ | ೨೭ | ಗೃಹಿಣಿ | ಕೂಡ್ಲಿಗಿ | ಮೇದ |
| ೨೫೩ | ವರಲಕ್ಷ್ಮಿಬಾಯಿ | ೩೨ | ಗೃಹಿಣಿ | ಮರಿಯಮ್ಮನಹಳ್ಳಿ | ಮೇದ |
| ೨೫೪ | ವಾರಿಣಿಬಾಯಿ | ೪೫ | ಗೃಹಿಣಿ | ಕಂಪ್ಲಿ | ಮೇದ |
| ೨೫೫ | ವೀರಮ್ಮ | ೩೦ | ಗೃಹಿಣಿ | ಕಂಪ್ಲಿ | ಮೇದ |
| ೨೫೬ | ವೀರಮಲ್ಲಮ್ಮ | ೨೨ | ಗೃಹಿಣಿ | ಹಗರಿಬೊಮ್ಮನಹಳ್ಳಿ | ಮೇದ |
| ೨೫೭ | ವೀರಲಿಂಗಮ್ಮ | ೩೯ | ಗೃಹಿಣಿ | ಕೂಡ್ಲಿಗಿ | ಮೇದ |
| ೨೫೮ | ಶೀಲಾವತಿ | ೨೫ | ಗೃಹಿಣಿ | ಮರಿಯಮ್ಮನಹಳ್ಳಿ | ಮೇದ |
| ೨೫೯ | ಶಿವಲಿಂಗಮ್ಮ | ೨೬ | ಗೃಹಿಣಿ | ಕಂಪ್ಲಿ | ಮೇದ |
| ೨೬೦ | ಶಿವಶರಣಮ್ಮ | ೨೮ | ಗೃಹಿಣಿ | ಕಂಪ್ಲಿ | ಮೇದ |
| ೨೬೧ | ಶುಭಾ | ೨೬ | ಗೃಹಿಣಿ | ಹಗರಿಬೊಮ್ಮನಹಳ್ಳಿ | ಮೇದ |
| ೨೬೨ | ಶುಭಾಬಾಯಿ | ೨೭ | ಗೃಹಿಣಿ | ಕೂಡ್ಲಿಗಿ | ಮೇದ |
| ೨೬೩ | ಸುಭಾಷಿಣಿ | ೩೨ | ಗೃಹಿಣಿ | ಮರಿಯಮ್ಮನಹಳ್ಳಿ | ಮೇದ |
| ೨೬೪ | ಸುಮಾಬಾಯಿ | ೪೫ | ಗೃಹಿಣಿ | ಕಂಪ್ಲಿ | ಮೇದ |
| ೨೬೫ | ಸುಲೋಚನಾ | ೩೦ | ಗೃಹಿಣಿ | ಕಂಪ್ಲಿ | ಮೇದ |
| ೨೬೬ | ಸುಶೀಲಾ | ೨೨ | ಗೃಹಿಣಿ | ಹಗರಿಬೊಮ್ಮನಹಳ್ಳಿ | ಮೇದ |
| ೨೬೭ | ಸುಶೀಲಾಬಾಯಿ | ೩೯ | ಗೃಹಿಣಿ | ಕೂಡ್ಲಿಗಿ | ಮೇದ |
| ೨೬೮ | ಸೋಮೇಶ್ವರಿ | ೩೧ | ಗೃಹಿಣಿ | ಕಂಪ್ಲಿ | ಮೇದ |
| ೨೭೦ | ರಾಜಶ್ವೇರಿ ಜಿ | ೩೫ | ಗೃಹಿಣಿ | ಹೊಸಪೇಟೆ | ಮೇದ |
| ೨೭೧ | ನಿರ್ಮಲ ಎನ್ | ೩೨ | ಗೃಹಿಣಿ | ಹೊಸಪೇಟೆ | ಮೇದ |
| ೨೭೨ | ಸುಮಲತಾ ಎ | ೩೫ | ಗೃಹಿಣಿ | ಹೊಸಪೇಟೆ | ಮೇದ |
| ೨೭೩ | ಅಂಬುಜಾ ಎಸ್ | ೨೬ | ಗೃಹಿಣಿ | ಹೊಸಪೇಟೆ | ಮೇದ |
| ೨೭೪ | ಮಂಜುಳಾ ಜಿ | ೨೯ | ಗೃಹಿಣಿ | ಮರಿಯಮ್ಮನಹಳ್ಳಿ | ಮೇದ |
| ೨೭೫ | ಕಾವೇರಿಮೇದರ ಓಣಿ | ೩೧ | ವ್ಯಾಪಾರ | ಮರಿಯಮ್ಮನಹಳ್ಳಿ | ಮೇದ |

| | | | | |
|---|---|---|---|---|
| ೨೭೬ ಗೌತಮಿ | ೩೩ | ಗೃಹಿಣಿ | ಮರಿಯಮ್ಮನಹಳ್ಳಿ | ಮೇದ |
| ೨೭೭ ಪವಿತ್ರ ಎಮ್ | ೩೫ | ಗೃಹಿಣಿ | ಮರಿಯಮ್ಮನಹಳ್ಳಿ | ಮೇದ |
| ೨೭೮ ದಿವ್ಯಾ ಟಿ | ೩೭ | ಗೃಹಿಣಿ | ಮರಿಯಮ್ಮನಹಳ್ಳಿ | ಮೇದ |
| ೨೭೯ ಶ್ವೇತಾ ಎನ್ | ೩೯ | ಗೃಹಿಣಿ | ಹೊಸಪೇಟೆ | ಮೇದ |
| ೨೮೦ ನಾಗವೇಣಿ ಕಟ್ಟಿ | ೪೧ | ಬುಟ್ಟಿ ತಯಾರಿಕೆ | ಮರಿಯಮ್ಮನಹಳ್ಳಿ | ಮೇದ |
| ೨೮೧ ಶಿವಮ್ಮ | ೩೮ | ಗೃಹಿಣಿ | ಮರಿಯಮ್ಮಹಳ್ಳಿ | ಮೇದ |
| ೨೮೨ ಬಸಮ್ಮ | ೪೦ | ಗೃಹಿಣಿ | ಕಂಪ್ಲಿ | ಮೇದ |
| ೩೦೫ ಅಂಬುಜಾ | ೩೫ | ಗೃಹಿಣಿ | ಕಾರಿಗನೂರು | ಪಾರ್ಧಿ |
| ೩೦೬ ಅಂಬುಜಾಕ್ಷಿ | ೩೧ | ಗೃಹಿಣಿ | ಕಾರಿಗನೂರು | ಪಾರ್ಧಿ |
| ೩೦೭ ಅನೂಷಾ | ೧೯ | ಗೃಹಿಣಿ | ಕಾರಿಗನೂರು | ಪಾರ್ಧಿ |
| ೩೦೮ ಅನೂಕ್ಷ | ೨೦ | ಗೃಹಿಣಿ | ಕಾರಿಗನೂರು | ಪಾರ್ಧಿ |
| ೩೦೯ ಅರುಣ | ೨೭ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೧೦ ಅರುಣಮ್ಮ | ೨೮ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೧೧ ಕನಕ | ೧೯ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೧೨ ಕಮಲಾಕ್ಷಮ್ಮ | ೨೪ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೧೩ ಕರುಣ | ೨೦ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೧೪ ಕರುಣಮ್ಮ | ೨೫ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೧೫ ಕಲಾ | ೨೩ | ಗೃಹಿಣಿ | ಕಾರಿಗನೂರು | ಪಾರ್ಧಿ |
| ೩೧೬ ಕಲಾವತಿ | ೪೦ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೧೭ ಕಾಮಾಕ್ಷಮ್ಮ | ೨೪ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೧೮ ಗೌರಮ್ಮ | ೨೪ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೧೯ ಗೌರಾಬಾಯಿ | ೨೧ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೨೦ ಗೌರಿ | ೧೮ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೨೧ ಗೋಪಮ್ಮ | ೪೫ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೨೨ ಗೋಪಕ್ಕ | ೪೭ | ಗೃಹಿಣಿ | ಕಾರಿಗನೂರು | ಪಾರ್ಧಿ |
| ೩೨೩ ಚಂಪಕ | ೫೧ | ಗೃಹಿಣಿ | ಹೊಸಪೇಟೆ | ಪಾರ್ಧಿ |

| | | | | | |
|---|---|---|---|---|---|
| ೩೨೪ | ಚಂದ್ರಕ್ಕ | ೨೯ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೨೫ | ಜನಕಮ್ಮ | ೩೬ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೨೬ | ಜಲಜಾಕ್ಷಿ | ೩೩ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೨೭ | ಜಾನಕಮ್ಮ | ೪೫ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೨೮ | ಜಾನಬಾಯಿ | ೩೧ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೨೯ | ಜಮುನ | ೨೪ | ಗೃಹಿಣಿ | ಕಾರಿಗನೂರು | ಪಾರ್ಧಿ |
| ೩೩೦ | ಜಯಂತಿ | ೨೫ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೩೧ | ಜಲಜಾಬಾಯಿ | ೩೩ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೩೨ | ದಮಯಂತಿ | ೪೦ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೩೩ | ದಾಮೋಧರಿ | ೩೧ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೩೪ | ದಾನಕ್ಕ | ೨೯ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೩೫ | ದಾನಮ್ಮ | ೩೪ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೩೬ | ದುರುಗಮ್ಮ | ೩೫ | ಗೃಹಿಣಿ | ಕಾರಿಗನೂರು | ಪಾರ್ಧಿ |
| ೩೩೭ | ದುರುಗವ್ವ | ೩೮ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೩೮ | ನಂಜಮ್ಮ | ೪೦ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೩೯ | ನಿರಂತನಾ | ೨೩ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೪೦ | ನಿರಂಜನಾ | ೧೯ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೪೧ | ನಿರಂಜನಿ | ೨೦ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೪೨ | ನೀರಜಾ | ೨೦ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೪೩ | ನೀರಜಾಕ್ಷಿ | ೨೭ | ಗೃಹಿಣಿ | ಕಾರಿಗನೂರು | ಪಾರ್ಧಿ |
| ೩೪೪ | ನಿರುಪಮಾ | ೨೪ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೪೫ | ನೇಮಕ್ಕ | ೩೫ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೪೬ | ಪಾಲಾಕ್ಷಮ್ಮ | ೪೦ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೪೭ | ಪ್ರತಿಭಾ | ೩೧ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೪೮ | ಪ್ರಿಯದರ್ಶಿನಿ | ೨೯ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೪೯ | ಪ್ರೀತಿ | ೩೪ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೫೦ | ಪ್ರಿಯಾಮಣಿ | ೩೫ | ಗೃಹಿಣಿ | ಕಾರಿಗನೂರು | ಪಾರ್ಧಿ |

| | | | | | |
|---|---|---|---|---|---|
| ೩೫೧ | ಪುಷ್ಪ | ೩೮ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೫೨ | ಬಂಗಾರಮ್ಮ | ೪೦ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೫೩ | ಭಾರತಿಬಾಯಿ | ೨೩ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೫೪ | ಭೀಮಕ್ಕ | ೧೯ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೫೫ | ಭೀಮವ್ವ | ೨೦ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೫೬ | ಭೀಮಾಬಾಯಿ | ೨೦ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೫೭ | ಭೀಮೇಶ್ವರಿ | ೨೭ | ಗೃಹಿಣಿ | ಕಾರಿಗನೂರು | ಪಾರ್ಧಿ |
| ೩೫೮ | ಭುವನೇಶ್ವರಿ | ೨೪ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೫೯ | ಮಲಕಮ್ಮ | ೩೫ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೬೦ | ಮೈನಮ್ಮ | ೪೦ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೬೧ | ಯಮುನಮ್ಮ | ೩೧ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೬೨ | ಯಲ್ಲಮ್ಮ | ೨೯ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೬೩ | ಯಶಸ್ವಿನಿ | ೩೪ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೬೪ | ಯಶೋಧ | ೩೫ | ಗೃಹಿಣಿ | ಕಾರಿಗನೂರು | ಪಾರ್ಧಿ |
| ೩೬೫ | ಯಶೋಧರಮ್ಮ | ೩೮ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೬೬ | ರಾಧಾಮಣಿ | ೪೦ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೬೭ | ಲಾಲೆಮ್ಮ | ೨೩ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೬೮ | ಲೀಲಮ್ಮ | ೧೯ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೬೯ | ಲೀಲಾ | ೨೦ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೭೦ | ಲೀಲಾವತಿ | ೨೦ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೭೧ | ಲೇಪಾಕ್ಷಮ್ಮ | ೨೭ | ಗೃಹಿಣಿ | ಕಾರಿಗನೂರು | ಪಾರ್ಧಿ |
| ೩೭೨ | ಲೇಪಾಕ್ಷಿ | ೨೪ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೭೩ | ವನಜ | ೩೫ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೭೪ | ವಿಜಯಲಕ್ಷ್ಮಿ | ೪೦ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೭೫ | ವಿನುತಾ | ೩೧ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೭೬ | ವಿರುಪಮ್ಮ | ೨೯ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೭೭ | ವೈಜಯಂತಿ | ೩೪ | ಗೃಹಿಣಿ | ಕಂಪ್ಲಿ | ಪಾರ್ಧಿ |

| | | | | | |
|---|---|---|---|---|---|
| ೩೭೮ | ವೈಜಯಂತಿಬಾಯಿ | ೩೫ | ಗೃಹಿಣಿ | ಕಾರಿಗನೂರು | ಪಾರ್ಧಿ |
| ೩೭೯ | ವೈಜಯಂತಿಮಾಲಾ | ೩೮ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೮೦ | ಶಾಂತಾ | ೪೦ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೮೧ | ಶೋಭಾ | ೨೩ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೮೨ | ಶೋಭಾಬಾಯಿ | ೧೯ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೮೩ | ಷಣ್ಮುಖಮ್ಮ | ೨೦ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೮೪ | ಷಡಕ್ಷರಮ್ಮ | ೨೦ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೮೫ | ಸರಳಮ್ಮ | ೨೭ | ಗೃಹಿಣಿ | ಕಾರಿಗನೂರು | ಪಾರ್ಧಿ |
| ೩೮೬ | ಸರಳಾ | ೨೪ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೮೭ | ಸಲಗಮ್ಮ | ೩೫ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೮೮ | ಸೋಮಲಿಂಗಮ್ಮ | ೪೦ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೮೯ | ಹಲ್ದಮ್ಮ | ೨೯ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೯೦ | ಹುಲಿಗೆಮ್ಮ | ೩೫ | ಗೃಹಿಣಿ | ಕಾರಿಗನೂರು | ಪಾರ್ಧಿ |
| ೩೯೧ | ಹುಲಿಗೆವ್ವ ಜಿ | ೩೮ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೯೨ | ಮಲ್ಲಮ್ಮ ಕೆ | ೪೨ | ಗೃಹಿಣಿ | ಕಾರಿಗನೂರು | ಪಾರ್ಧಿ |
| ೩೯೩ | ಲಲಿತಮ್ಮ ಡಿ ಟಿ | ೩೭ | ಗೃಹಿಣಿ | ಕಾರಿಗನೂರು | ಪಾರ್ಧಿ |
| ೩೯೪ | ಅರ್ಚನಾ ಎಮ್ | ೩೫ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೯೫ | ನೇತ್ರಾವತಿ ಜಿ | ೩೮ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೯೬ | ನಂದಿನಿ | ೩೫ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೯೭ | ಸುಧಾ ಆರ್ | ೩೩ | ಗೃಹಿಣಿ | ಹೊಸಪೇಟೆ | ಪಾರ್ಧಿ |
| ೩೯೮ | ರಾಧಮ್ಮ ಯು | ೩೪ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೩೯೯ | ಶೇಕಮ್ಮ ಜಿ | ೩೫ | ಗೃಹಿಣಿ | ಕಂಪ್ಲಿ | ಪಾರ್ಧಿ |
| ೪೦೦ | ರೇವತಿ ಇ | ೪೨ | ಗೃಹಿಣಿ | ಕಂಪ್ಲಿ | ಪಾರ್ಧಿ |

# ಪ್ರಶ್ನಾವಳಿ

# ಬುಡಕಟ್ಟು ಮಹಿಳಾ ಸಬಲೀಕರಣ (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)

**೧. ಸಾಮಾನ್ಯ ಮಾಹಿತಿ**

ಎ. ಸಮೀಕ್ಷೆಯ ದಿನಾಂಕ
ಬಿ. ಒಳಪಂಗಡ :
ಸಿ. ಬೆಡಗು :
ಡಿ. ಮಾತೃಭಾಷೆ
ಇ. ಮನೆದೇವರು / ದೈವ

ಇ. ಕುಲಚಿಹ್ನೆ
**ಎಫ್. ಮನೆತನದ ಹೆಸರು**
ಜಿ. ಕು.ಗ್ರಾಮ / ಗ್ರಾಮ / ನಗರ
ಎಚ್. ವಾರ್ಡ್
ಐ. ಪಂಚಾಯತಿ
ಜೆ. ತಾಲೂಕು

ಕೆ. ಜಿಲ್ಲೆ
ಎಲ್. ಭೂಹಿಡುವಳಿ (ಎಕರೆಗಳಲ್ಲಿ)
೧. ಒಣ :
೨. ನೀರಾವರಿ :

**ಒ. ಪಶುಸಂಪತ್ತು (ಸಂಖ್ಯೆಗಳಲ್ಲಿ)**
೧. ಎತ್ತು, ಹೋರಿ :
೨. ಆಕಳು, ಕರು :
೩. ಎಮ್ಮೆ, ಕೋಣ :
೪. ಕುರಿ :
೫. ಮೇಕೆ :
೬. ಕೋಳಿ :

**ಪಿ. ಮನೆ ವಿವರ**
೧. ಗುಡಿಸಲು
೨. ಟಿನ್‌ಮನೆ
೩. ದಾಬಾ ಮಾಳಿಗೆ
೪. ಆರ್.ಸಿ.ಸಿ.
೫. ಹೆಂಚಿನ ಮನೆ
೬. ಆಶ್ರಯ ಮನೆ
೭. ಬಾಡಿಗೆ ಮನೆ

**ಕ್ಯೂ. ಇತರೆ ಸೌಲಭ್ಯಗಳು**

೧. ಪಡಿತರ ಚೀಟಿ   ೨. ಗ್ಯಾಸ್   ೩. ನಲ್ಲಿ   ೪. ಶೌಚಾಲಯ   ೫. ಸ್ನಾನಗೃಹ   ೬. ಸೈಕಲ್   ೭. ರೇಡಿಯೋ   ೮. ಟೇಪ್ ರಿಕಾರ್ಡರ್
೯. ಟಿ.ವಿ.   ೧೦. ದೂರವಾಣಿ   ೧೧. ಮೋಟರ್ ಸೈಕಲ್   ೧೨. ಇತರೆ

**೧೧. ವೈಯಕ್ತಿಕ ಮಾಹಿತಿ**

| ಕ್ರ.ಸಂ. | ಕುಟುಂಬದ ಸದಸ್ಯರ ಹೆಸರುಗಳು | ಸಂಬಂಧ ಮುಖ್ಯಸ್ಥ/ಮುಖ್ಯಸ್ಥಳು | ಲಿಂಗ | ವಯಸ್ಸು | ಶಿಕ್ಷಣ | ವೈವಾಹಿಕ ಸ್ಥಾನಮಾನ | ಕಸಬು | ಸರ್ಕಾರಿ ಸೌಲಭ್ಯಗಳು ( ) | | | |
|---|---|---|---|---|---|---|---|---|---|---|---|
| | | | | | | | | ಓಟಿನಕಾರ್ಡ | ವಿಧವಾ ವೇತನ | ಅಂಗವಿಕಲ | ಶಿಷ್ಯವೇತನ |
| ೧ | | | | | | | | | | | |
| ೨ | | | | | | | | | | | |
| ೩ | | | | | | | | | | | |

ಮಾರ್ಗದರ್ಶಕರು
ಪ್ರೊ ತಾರಿಹಳ್ಳಿ ಹನುಮಂತಪ್ಪ,
ಸಹ ಪ್ರಾಧ್ಯಾಪಕರು

ಸಹ ಮಾರ್ಗದರ್ಶಕರು
ಪ್ರೊ ಕೆ ಎಂ ಮೇತ್ರಿ, ಪ್ರಾಧ್ಯಾಪಕರು

ಸಂಶೋಧಕರು
ಗುಡಿಮುಂದಲ ಗೋಣಿಬಸಪ್ಪ

ಮಾಹಿತಿ ದಾಖಲೆದಾರರ
ಸಹಿ ಮತ್ತು ವಿಳಾಸ

# ಪತ್ರಿಕಾ ವರದಿ

# ಪತ್ರಿಕಾ ವರದಿಗಳು


ಬುಡಕಟ್ಟು ಸಂಘ: ಸಂಘಟನಾ ಸಭೆ

'ಬಸವಾದಿ ಶರಣರ ಕಾಯಕ ಅನನ್ಯ'

ಪ್ರಜಾವಾಣಿ, ಕಂಪ್ಲಿ, ದಿನಾಂಕ–೧೩.೮.೨೦೧೮ ಪು.ಸಂ.೩೨


ದೇವದಾಸಿಯರ ಪುನರ್ ವಸತಿಗಾಗಿ ತಾಲೂಕು ಮಟ್ಟದ ಸಮಾವೇಶ

ಪ್ರಜಾವಾಣಿ, ಸಂಡೂರು, ದಿನಾಂಕ–೧೧.೫.೨೦೧೯ ಪು.ಸಂ.೩

ಪರಿಶಿಷ್ಟ ಜಾತಿ ಹಾಗೂ ವರ್ಗಗಳ ಕಲ್ಯಾಣಕ್ಕೆ ಮೀಸಲಿಟ್ಟಿದ್ದ ಅನುದಾನ

# ಬಳಕೆಯಾಗದ ₹1,539 ಕೋಟಿ

**ಹೊಸ ಯೋಜನೆ**

ಪ್ರಜಾವಾಣಿ, ದಿನಾಂಕ-೦೧.೬.೨೦೧೯ ಪು.ಸಂ.೩

ಶಿಶು ಮೇಲ್ವಿಚಾರಕಿಯರಿಗೆ ಬಡ್ಡಿ ರಹಿತ ಸಾಲ

# ಇಂದಿರಾ ಯೋಜನೆಗೆ ಚಾಲನೆ



**181 ಮಹಿಳಾ ಸಹಾಯವಾಣಿ**

ವಿಜಯ ಕರ್ನಾಟಕ, ಬೆಂಗಳೂರು, ದಿನಾಂಕ-೨೧.೨.೨೦೧೯ ಪು.ಸಂ.೭

# ಬಿದಿರು ಹೆಣೆಯುವವರ ಬದುಕು..





ಪ್ರಜಾವಾಣಿ, ದಿನಾಂಕ–೧೫.೮.೨೦೧೮ ಪು.ಸಂ.೩ಎ

ಪ್ರಜಾವಾಣಿ

19.03.2019 Page-2

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಸ್.ಬಿ.ಆಂದ್ರಾಳ್ ಅಭಿಮತ


# ಮಹಿಳೆಯರ ಲಿಂಗಾನುಪಾತ ಹೆಚ್ಚಲಿ




ಪ್ರಜಾವಾಣಿ, ಬಳ್ಳಾರಿ, ದಿನಾಂಕ–೧೯.೩.೨೦೧೯ ಪು.ಸಂ.೨

ನಕ್ಷೆ

# ನಕ್ಷೆ







ಬಳ್ಳಾರಿ ಜಿಲ್ಲೆ ತಾಲೂಕುಗಳ ಜನಸಂಖ್ಯೆಯ ನಕ್ಷೆ–೨೦೧೧




ಬಳ್ಳಾರಿ ಜಿಲ್ಲೆಯ ನಕ್ಷೆ

# ಛಾಯಾಚಿತ್ರಗಳು

# ಛಾಯಾ ಚಿತ್ರಗಳು



ಹೊಸಪೇಟೆಯ ಉಕ್ಕಡಕೇರಿಯ ಬೇಡ ಮಹಿಳೆಯರೊಂದಿಗೆ ಸಂಶೋದಕರು ಮಾಹಿತಿ ಕಲೆ ಹಾಕುತ್ತಿರುವುದು



ಡುಂಗ್ರಿಗರಾಸಿಯ ಮಹಿಳೆಯರೊಂದಿಗೆ ಮಾಹಿತಿ ಕಲೆಹಾಕುತ್ತಿರುವುದು



ಕಂಪ್ಲಿಯ ಹಕ್ಕಿ-ಪಿಕ್ಕಿ (ಪಾರ್ಧಿ) ಕಾಲೋನಿಯಲ್ಲಿ ಸಂಶೋಧಕರು ಮಹಿಳೆಯರೊಂದಿಗೆ ಮಾಹಿತಿ ಪಡೆಯುತ್ತಿರುವುದು



ಬಿದಿರು ಛಾಪೆಯನ್ನು ಎಣೆಯುತ್ತಿರುವ ಮರಿಯಮ್ಮನಹಳ್ಳಿಯ ಮೇದರ ಸಮುದಾಯದ ಮಹಿಳೆಯರೊಂದಿಗೆ ಸಂದರ್ಶಕರು



ಪಾರ್ಧಿ ಬುಡಕಟ್ಟು ಮಹಿಳೆಯರಿಗೆ ಸರಕಾರಿ ಅಧಿಕಾರಿಗಳು ಕಾನೂನು ಅರಿವು ಹಾಗೂ ಮೂಲಭೂತ ಸರಕಾರಿ ಸೌಲಭ್ಯಗಳ ಮಾಹಿತಿಯ ಕುರಿತು ಜಾಗೃತಿ ಮೂಡಿಸುವುದು.



ಕೂಡ್ಲಿಗಿಯ ಬೇಡ ಮಹಿಳೆಯನ್ನು ಸಂದರ್ಶಿಸುತ್ತಿರುವ ಸಂಶೋಧಕರು



ಕೂಡ್ಲಿಗಿಯ ಕೆರೆ ಕವಾಲರಹಟ್ಟಿಯ ಬೇಡ ಮಹಿಳೆಯನ್ನು ಸಂದರ್ಶಿಸುತ್ತಿರುವ ಸಂಶೋಧಕರು



ಬಳ್ಳಾರಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಡುಂಗ್ರಿಗರಾಸಿಯಾ ಮಹಿಳೆಯರಿಗೆ ನೀಡಿದ ಭೂ-ಹಕ್ಕು ಪತ್ರ



ಉಜ್ವಲ್ ಯೋಜನೆಯಡಿಯಲ್ಲಿ ಸರಕಾರವು ಬುಡಕಟ್ಟು ಮಹಿಳೆಯರಿಗೆ ನೀಡಿದ ಉಚಿತ ಗ್ಯಾಸ್ ಮತ್ತು ಸ್ಟವ್



ಕಂಪ್ಲಿ ಪಟ್ಟಣದಲ್ಲಿ ಬಿದಿರು ಪುಟ್ಟಿ ಮಾರಾಟ ಹಾಗೂ ವೃತ್ತಿಯಲ್ಲಿ ತಲ್ಲಿನರಾಗಿರುವ ಮೇದ ಬುಡಕಟ್ಟು ಮಹಿಳೆ



ಹೋಸಪೇಟೆ ತಾಲೂಕಿನ ಬುಕ್ಕಸಾಗರದ ಡುಂಗ್ರಿಗರಾಸಿಯಾ ಮುಖಂಡರೊಂದಿಗೆ ಸಂಶೋಧಕರು  ಮಾಹಿತಿ ಪಡೆಯುತ್ತಿರುವ ವಿಹಂಗಮ ನೋಟ



ಹಗರಿಬೊಮ್ಮನಹಳ್ಳಿಯ ಮಾದುರು ಗ್ರಾಮದ (ಲಕ್ಷ್ಮವ್ವ) ಬೇಡ ಮಹಿಳೆ ತರಕಾರಿ ಮಾರುತ್ತಿರುವುದು



ಹೊಸಪೇಟೆಯ ಚಿತ್ರಕೇರಿ (ನಾಗಮ್ಮ) ಬೇಡ ಮಹಿಳೆ ತರಕಾರಿ ಮಾರುತ್ತಿರುವುದು



ಬಿದಿರಿನಿಂದ ತಯಾರಿಸಿದ ಮೊರ ಪುಟ್ಟಿ ಇತ್ಯಾದಿ ವಸ್ತುಗಳ ಮಾರಾಟ ಪ್ರಕ್ರಿಯೆಯಲ್ಲಿ ಬಳ್ಳಾರಿ ಪಟ್ಟಣದ ಮೇದ ಮಹಿಳೆ



ಮಾರಾಟ ಮಾಡಲು ಸಿದ್ಧಗೊಂಡಿರುವ ಕೂಡ್ಲಿಗಿ ಮೇದರರ ಬಿದಿರಿನ ಪ್ರಮುಖ ವಸ್ತುಗಳು



ಮೇದ ಸಮುದಾಯದ ಮಹಿಳೆಯರು ವೃತ್ತಿಯಲ್ಲಿ ಮಗ್ನರಾಗಿರುವುದು



ಪಾರ್ಧಿ ಸಮುದಾಯದ ಮಹಿಳೆಯರ ನೃತ್ಯ



ಕಂಪ್ಲಿಯಿಂದ ಮೈಸೂರಿಗೆ ತೆರಳಿ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ ಪಾರ್ಧಿ ಸಮುದಾಯದ ಮಹಿಳೆಯರು



ಕಂಪ್ಲಿಯ ಹಕ್ಕಿ-ಪಿಕ್ಕಿ (ಪಾರ್ಧಿ) ಕಾಲೋನಿಯಲ್ಲಿ ಸಂಶೋದಕರು ಮಹಿಳೆಯರೊಂದಿಗೆ ಚರ್ಚಿಸುತ್ತಿರುವುದು.



ಬಳ್ಳಾರಿ ಮೇದಾರ ಬುಡಕಟ್ಟು ಮಹಿಳೆ ವಾರದ ಸಂತೆಯಲ್ಲಿ ವ್ಯಾಪಾರದಲ್ಲಿ ತೊಡಗಿರುವ ಚಿತ್ರ




ಹೊಸಪೇಟೆಯ ಮೇದ ಮಹಿಳೆಯರು ಬಿದಿರಿನಿಂದ ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡುತ್ತಿರುವುದು



ಕಂಪ್ಲಿಯ ಹಕ್ಕಿ-ಪಿಕ್ಕಿ (ಪಾರ್ಧಿ) ಕಾಲೋನಿಯಲ್ಲಿ ಸಂಶೋಧಕರು ಹಿರಿಯ ಮಹಿಳೆಯೊಂದಿಗೆ ಮಾಹಿತಿ ಪಡೆಯುತ್ತಿರುವುದು.




ಹಕ್ಕಿ–ಪಿಕ್ಕಿ (ಪಾರ್ಧಿ) ಕಾಲೋನಿಯಲ್ಲಿ ಮಹಿಳೆಯರು ಗುಂಪಾಗಿ ಪಗಡೆ ಆಟದಲ್ಲಿ ತೊಡಗಿರುವುದು.



ಯಡ್ರಾಮನಹಳ್ಳಿಯ ಪಾರ್ವತೆಮ್ಮಗೆ ಸರಕಾರ ನೀಡಿರುವ ಆಶ್ರಯ ಮನೆಯ ದುಸ್ಥಿತಿ





ಮಾನವಶಾಸ್ತ್ರ ಅಧ್ಯಯನ ವಿಭಾಗ